# ಸಮರ್ಪಣೆ

ಧರ್ಮ, ಸಾಹಿತ್ಯ, ಸಂಸ್ಕೃತಿಯ

ಅಭಿಮಾನಿಗಳಾದ

ಶ್ರೀಯುತ "ಹರಿ ಖೋಡೆ"

ಇವರಿಗೆ

ವಿಶ್ವಾಸಪೂರ್ವಕ

ಈ ಕೃತಿಯು ಸಮರ್ಪಿತ.

20-7-1989

ಆದ್ಯ ರಾಮಾಚಾರ್ಯ

# ಪ್ರಕಾಶಕರ ಮಾತು

(ತೃತೀಯ ಮುದ್ರಣ)

ಭಾರತದ ಕಥೆಯಲ್ಲಿ ವಿಶೇಷವಾಗಿ ಎದ್ದು ತೋರುವ ಕರ್ಣ ಚರಿತಾಮೃತವನ್ನು ಆದ್ಯ ರಾಮಾಚಾರ್ಯರು 'ರಾಧೇಯ' ಎಂಬ ಬೃಹತ್‌ಕೃತಿ ರಚಿಸಿದಾಗ ಅದನ್ನು ಕೈಗೆತ್ತಿಕೊಳ್ಳುವದು ನಮಗೆ ಬಹು ಸಾಹಸದ ಮಾತಾಗಿತೋರಿತು. ಇದಕ್ಕೆ ಮೂಲಕಾರಣ ದಿನಗಳೆದಂತೆಲ್ಲಾ ಗಗನಕ್ಕೇರುತ್ತಿರುವ ಕಾಗದದ ಬೆಲೆ ಹಾಗೂ ಮುದ್ರಣ ವೆಚ್ಚ ಇವೆರಡನ್ನೂ ತೂಗಿ, ಅಳೆದು ನೋಡಿದಾಗ ಈ ಕೃತಿಗೆಅನಿವಾರ್ಯವಾಗಿ ಐವತ್ತು ರೂಪಾಯಿ ಬೆಲೆಯನ್ನಿಡುವ ಪ್ರಸಂಗವು ಬಂದಿತು. ಇದಕ್ಕಾಗಿ ಕನ್ನಡ ವಾಚಕರಲ್ಲಿ ಕ್ಷಮೆ ಕೇಳುತ್ತೇವೆ.

ವಿಜಯಲಕ್ಷ್ಮಿ ಆದ್ಯ
ವಸುಧಾ ಆದ್ಯ

# ಮುನ್ನುಡಿ

ವ್ಯಾಸ ಮಹಾಭಾರತದಲ್ಲಿ ಕರ್ಣನ ಪಾತ್ರ ವಿಶಿಷ್ಟವಾದ ರೀತಿಯಲ್ಲಿ ಪ್ರಾಮುಖ್ಯತೆ ಪಡೆದಿದೆ. ಭಾರತದ ಪ್ರಾರಂಭದಿಂದ ಕೊನೆಯವರೆಗೆ, ಕರ್ಣ ಒಂದಿಲ್ಲೊಂದು ರೀತಿಯಲ್ಲಿ ಪ್ರಧಾನ ಪಾತ್ರವೇ ಆಗಿದ್ದಾನೆ. ಪಾಂಡವ ಕೌರವರಲ್ಲಿ, ಕರ್ಣ ಎಲ್ಲರಿಗಿಂತ ಮೊದಲು ಜನಿಸಿದವನು : ಅವನ ಪಾತ್ರ, ಭಾರತದ ಉದ್ದಕ್ಕೂ ಬಂದೇ ಬರುತ್ತದೆ. ನಿರ್ಣಾಯಕ ಘಟಕಗಳಲ್ಲೆಲ್ಲ ಅವನು ದುರ್ಯೋಧನನಿಗೆ ಸಹಾಯಕ, ಸಲಹೆಗಾರ, ಅವನ ಮಾತು ಕಾರ್ಯ ಗಳಿಗೆ ಪ್ರೋತ್ಸಾಹಕ. ಅನಂತರ ಕರ್ಣನ ಸಾವಿನೊಂದಿಗೆ, ಒಂದು ರೀತಿಯಲ್ಲಿ ಭಾರತ ಯುದ್ಧವೇ ಮುಕ್ತಾಯ. ಹೀಗೆ ಕರ್ಣನೇ ಭಾರತದ ನಾಯಕನೂ ದುರಂತ ನಾಯಕನೂ ಆಗಬಹುದು. ಮೊದಲಿನಿಂದ ಕೊನೆಯವರೆಗೆ, ಮಹಾ ಭಾರತವನ್ನು ಆಕ್ರಮಿಸಿರುವ ಪಾತ್ರ ಕರ್ಣನದು. "ಕರ್ಣ ರಸಾಯನಮಲ್ತೆ ಭಾರತಂ" ಕರ್ಣನು ಮಹಾಭಾರತವೆಂಬ ಸಾಗರದ ಕ್ಷೋಭೆಗೊಂಡ ಅಲೆ ಯೆಂದೂ ಒಂದು ಶ್ಲೋಕದಲ್ಲಿ ವರ್ಣಿತವಾಗಿದೆ. ವ್ಯಾಸರ ಮೂಲ ಸೃಷ್ಟಿ ಯಲ್ಲಿಯೇ, ಕರ್ಣನ ಪಾತ್ರ ರಚನೆ, ಒಂದು ಅದ್ಭುತ. ಒಂದು ತೀರ್ಮಾನಿಸ ಲಾಗದ, ತಡೆಯಲಾಗದ ದುರಂತ. ವ್ಯಾಸರ ಅನಂತರ ಬಂದ ಕವಿಗಳೆಲ್ಲ, ಕರ್ಣನ ಪಾತ್ರವನ್ನು ಹೆಚ್ಚು ಕಡಿಮೆ ವ್ಯಾಸರ ಮಾರ್ಗದಲ್ಲಿಯೇ ಚಿತ್ರಿ ಸಿದ್ದಾರೆ. ಭಾಸ, ಪಂಪ, ಕುಮಾರವ್ಯಾಸ–ಎಲ್ಲರೂ ಈ ವಿಷಯದಲ್ಲಿ ವ್ಯಾಸರ ಶಿಷ್ಯರೇ, "ನೆನೆಯುವುದಾದರೆ ಭಾರತದಲ್ಲಿ ಕರ್ಣನನ್ನು ನೆನೆ, ನನ್ನಿಯೊಳ್ ಇನಿತನಯಂ ;" ಕುಮಾರವ್ಯಾಸನೂ ಸ್ಫೂರ್ತಿಯುತವಾದ ತನ್ನ ಕಾವ್ಯದಲ್ಲಿ ಕರ್ಣನನ್ನು ಅತ್ಯಪೂರ್ವ ವೈಭವದಲ್ಲಿ ಸೃಷ್ಟಿಸಿದ್ದಾನೆ. ಭಾಸನ ಕರ್ಣಭಾರತವೂ ಸಹ ಕರ್ಣನ ಘನತೆಯನ್ನು ಎತ್ತಿ ತೋರಿಸುವ ನಾಟಕ. ಅನೇಕ ವರ್ಷಗಳ ಹಿಂದೆಯೇ, ನಮ್ಮ ಪ್ರಸಿದ್ಧ ವಿದ್ವಾಂಸರಾದ (ಡಾ.) ಶಂ.ಬಾ. ಜೋಷಿಯವರು ಕರ್ಣನನ್ನು ಕುರಿತ ಮೂವರು ಪ್ರಸಿದ್ಧ ಕವಿಗಳ ವಿಮರ್ಶೆಗಳನ್ನು ಕುರಿತ ಉಪನ್ಯಾಸವನ್ನು (ಕರ್ಣನ ಮೂರು ಚಿತ್ರಗಳು) ನಮಗೆ ನೀಡಿದ್ದಾರೆ. ತನ್ನ ಹುಟ್ಟು, ಬೆಳವಣಿಗೆ, ಸ್ವಭಾವ ಶಿಕ್ಷಣ, ಮನಸ್ಸಿನ ಪ್ರೇರಣೆಗಳು, ಅಂತಃಸ್ಫೂರ್ತಿ ಅಂತಸ್ಸತ್ವ–ಕೊನೆಗೆ ಸಾವು

ಇವುಗಳನ್ನು ಕುರಿತು ಕರ್ಣನ ಮನಸ್ಸಿನ ಸಂಶಯ ಉದ್ವೇಗ ಕಾತರಕ್ಷೋಭೆ ಅನಿಶ್ಚಿಯ ಇವು ಕಳವಳಗೊಳಿಸಿದ್ದವು.

ಪ್ರಸ್ತುತ ಗ್ರಂಥ 'ರಾಧೇಯ' ಕರ್ಣನನ್ನು ಕುರಿತ ರಣಜಿತ್' ದೇಸಾಯಿ ಅವರ ಮರಾಠಿ ಗ್ರಂಥದ ಅನುವಾದ. ಇದೊಂದು ಪೌರಾಣಿಕ ಕಾದಂಬರಿ. ಕರ್ಣನ ವ್ಯಕ್ತಿತ್ವವೇ ವಾದಗ್ರಸ್ತವೂ ಮಹತ್ತರವೂ ಆದುದರಿಂದ ಕರ್ಣನು, ಧೀರೋದಾತ್ತ ನಾಯಕತ್ವಕ್ಕೆ ಅಳವಡುತ್ತಾನೆ. ಕಾದಂಬರಿಯಾದುದರಿಂದ ನಾಯಕನ ಗುಣಮಟ್ಟವನ್ನು ಏರಿಸಲು, ಉನ್ನತೀಕರಿಸಲು ಕೆಲವು ಸ್ವಾತಂತ್ರ್ಯಗಳನ್ನು ತೆಗೆದುಕೊಳ್ಳಲು ಲೇಖಕರಿಗೆ ಅವಕಾಶವಿದೆ. ಶ್ರೀ ದೇಸಾಯಿ ವ್ಯಾಸ ಭಾರತವನ್ನೇ ಪೂರ್ಣವಾಗಿ ಅನುಸರಿಸಿದ್ದಾರೆ. ಇದರಲ್ಲಿ ಕರ್ಣನ ಮಟ್ಟಿಗೆ ಪೂರ್ಣವಾಗಿ, ಜೊತೆಗೆ ಸಂಕ್ಷೇಪವಾಗಿ ಇಡೀ ಭಾರತದ ಕಥೆಯ ಉಲ್ಲೇಖವಿದೆ. ಕಥೆಯು ನಮಗೆ ತಿಳಿದದ್ದೇ ಆದರೂ ಶೈಲಿ, ಸಂವಿಧಾನ ಪಾತ್ರರಚನೆಗಳಿಂದ ಕಥೆಯು ಆಕರ್ಷಣೀಯವಾಗಿ ಓದಿಸಿ ಕೊಳ್ಳುತ್ತದೆ. ಈ ಕಾದಂಬರಿಯ ವಸ್ತುವಿನ ಹರಹು ಕೃಷ್ಣನು ಕರ್ಣನನ್ನು ಸಂಧಾನಕ್ಕಾಗಿ ಹಸ್ತಿನಾಪುರಕ್ಕೆ ಬಂದಾಗ ಸಂಧಿಸಿ, ಅವನಿಗೆ ಅವನ ಜನ್ಮ ವೃತ್ತಾಂತವನ್ನು ಹೇಳುವುದರಿಂದ ಪ್ರಾರಂಭವಾಗಿ ಕೊನೆಗೆ ಯುದ್ಧ ಭೂಮಿ ಯಲ್ಲಿ ಕರ್ಣನ ಸಾವಿನವರೆಗೆ ಹರಡಿದೆ. ಮಧ್ಯೆ ಮಧ್ಯೆ ಹಿನ್ನೋಟದ ತಂತ್ರ ದಿಂದ ಕರ್ಣನ ಜೀವಿತದ ಮತ್ತು ಇದುವರೆಗೆ ಅಷ್ಟಾಗಿ ಪ್ರಸಿದ್ಧವಾಗದಿರುವ ಅವನ ಸಂಸಾರ ಜೀವನದ ಘಟನೆಗಳು ನಮಗೆ ಪರಿಚಯವಾಗುತ್ತವೆ. ಇದರಿಂದ ನಾವು ಕರ್ಣನನ್ನು ಹೆಚ್ಚು ಆತ್ಮೀಯವಾಗಿ, ಹೆಚ್ಚು ಮನುಷ್ಯ ನನ್ನಾಗಿ, ಸಂಸಾರಿಯಾಗಿ ಅರಿಯುತ್ತೇವೆ.

ದುರ್ಯೋಧನನು ಕರ್ಣನಿಗೆ ಕೊಟ್ಟ ಅಂಗರಾಜ್ಯಾಧಿಪತ್ಯ—ಅದೇನೂ ದುರ್ಯೋಧನನ ಸ್ವತ್ತಲ್ಲ. ಕರ್ಣನೇ ಜಯಿಸಿ, ದುರ್ಯೋಧನನ ರಾಜ್ಯಕ್ಕೆ ಸೇರಿಸಿದ್ದ ಭಾಗ. ಕರ್ಣನು ಅಜೇಯನಾದ ಜರಾಸಂಧನನ್ನೂ ಸೋಲಿಸಿ, ಅವನನ್ನು ಮಿತ್ರನನ್ನಾಗಿ ಮಾಡಿಕೊಂಡಿದ್ದ. "ನಾನು ನನ್ನ ಸ್ವಂತ ಪರಾಕ್ರಮದಿಂದ ಅದನ್ನು ಪಡೆದುಕೊಂಡ ನಂತರವೇ ಅಂಗದೇಶದ ಅಧಿಪತ್ಯ ವನ್ನು ಸ್ವೀಕರಿಸಿಕೊಂಡೆ" ಎಂದು ಕರ್ಣನು ಹೇಳುತ್ತಾನೆ. ದುಷ್ಟಚತುಷ್ಟಯ ದಲ್ಲಿ ಕರ್ಣನು ಸೇರಿದ್ದರೂ, ಕರ್ಣನಿಗೆ ದ್ರೌಪದಿಯ ಮೇಲೆ ಆಸೆ ಇದ್ದಿತೆಂದು

ವರ್ಣಿತವಾಗಿದೆ. ವಸ್ತ್ರಾಪಹರಣವನ್ನು ಕರ್ಣನು ವಿರೋಧಿಸದೆ ಇರುವುದಕ್ಕೆ ಕಾರಣ, ದ್ರೌಪದಿಯು ನಗ್ನ ದೇಹವನ್ನು ನೋಡಲು ಕರ್ಣನಿಗೆ ಆಸೆಯಿತ್ತು ಸ್ವಯಂವರದಲ್ಲಿ ಸಾಧ್ಯವಾಗದುದನ್ನು ಹೀಗೆ ಪೂರೈಸಿಕೊಳ್ಳಲು ಕರ್ಣ ಬಯಸಿದ ಎಂಬ ಫ್ರಾಯಿಡ್‌ನ ಸಿದ್ಧಾಂತದ ಛಾಯೆ ಇಲ್ಲಿದೆ.

ಕರ್ಣನ ಸಂಸಾರ ಜೀವನವನ್ನು ಶ್ರೀ ರಣಜಿತ್ ದೇಸಾಯಿ ಈ ಕಾದಂಬರಿಯಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ರಥಗಳನ್ನು ಕಟ್ಟುವುದರಲ್ಲಿ ಮತ್ತು ನಡೆಸುವುದರಲ್ಲಿ ಚತುರನಾದ ಅಧಿರಥ (ಕರ್ಣನ ಅಪ್ಪ) ಕರ್ಣನನ್ನು ತುಂಬ ಪ್ರೀತಿಯಿಂದ ಸಾಕಿ ಬೆಳೆಸಿದ. ಮಕ್ಕಳೇ ಇಲ್ಲದಿದ್ದ ಸೂತನಿಗೆ— ಕರ್ಣನು ನದಿಯಲ್ಲಿ ದೊರೆತ ಮೇಲೆ ರಾಧಾತಾಯಿಗೆ ಇತರ (ಸ್ವಂತ) ಮಕ್ಕಳೂ ಆದುದರಿಂದ, ಕರ್ಣನಲ್ಲಿ ಪ್ರೀತಿ ಇನ್ನೂ ಹೆಚ್ಚಾಯಿತು. ಸೂತರೆಲ್ಲ ಕರ್ಣನು ತಮ್ಮ ಗುಂಪಿಗೆ ಸೇರಿದವನೆಂದು ಅವನನ್ನು ಪ್ರೀತಿಸುತ್ತಿದ್ದರೂ, ಅವನಲ್ಲಿ ಯಾವುದೋ ವಿಶೇಷ ಮಹಿಮೆ ಇದ್ದುದರಿಂದ ಅವನು ಮಹಾ ಪುರುಷನೆಂದೇ ನಂಬಿದರು. ಕರ್ಣನ ಹೆಂಡತಿ ವೃಷಾಲಿ, ಕರ್ಣನ ತಮ್ಮಂದಿರು ತಂದೆ ಅಧಿರಥ ಇವರೊಂದಿಗೆ ಕರ್ಣನ ಸಂಸಾರ, ತುಂಬ ಸುಖಮಯವಾಗಿತ್ತು. ಕೃಷ್ಣನೇ ಕರ್ಣನನ್ನು "ಪಾಂಡವರ ಜೊತೆ ಬಂದು ಸೇರು" ಎಂದು ಕರೆದಾಗ ಕರ್ಣನು "ನಾನು ಇಷ್ಟು ದಿನ ಸೂತರೊಂದಿಗೆ ಬೆಳೆದು ಬಾಳಿ ಮದುವೆಯಾಗಿ ಅವರ ಒಡನಾಡಿಯಾಗಿದ್ದೇನೆ, ಅವರನ್ನೆಲ್ಲ ಬಿಟ್ಟು ಬರಲು ಸಾಧ್ಯವಿಲ್ಲ" ಎಂದು ಹೇಳಿದನೆಂದು ವ್ಯಾಸಭಾರತದಲ್ಲಿಯೇ ಹೇಳಿದೆ. ಅಧಿರಥನೂ ಕರ್ಣ ನನ್ನು ತುಂಬ ಪ್ರೀತಿಸುತ್ತಿದ್ದನು ಮತ್ತು ಗೌರವಿಸುತ್ತಿದ್ದನು. ಇವನು ಯಾವನೋ ಧೀರ ಮಹಾನುಬಾಹು ಎಂಬ ಸಂಶಯ, ಅವನನ್ನು ಪದೇ ಪದೇ ಬಾಧಿಸುತ್ತಿತ್ತು. ಕರ್ಣನು ಬಿಲ್ಲುಗಾರಿಕೆಯಲ್ಲಿ ಹೇಗೆ ಅದ್ವಿತೀಯವಾಗಿದ್ದನೋ ಹಾಗೆಯೇ ಅವನ ತಂದೆ ಅಧಿರಥನು, ರಥಗಳನ್ನು ತಯಾರಿಸುವುದರಲ್ಲಿ ಅಧ್ವಿತೀಯನಾಗಿದ್ದನು. ಅವನ ಅಭಿಪ್ರಾಯದಲ್ಲಿ ಅತ್ಯುತ್ತಮ ರಥವೆಂದರೆ ಕಡಾಣಿ ಇಲ್ಲದಿದ್ದರೂ ಎಷ್ಟು ವೇಗವಾಗಿಯಾಗಲೀ ಎಷ್ಟೇ ದೂರವಾಗಲೀ ಓಡುತ್ತಿದ್ದ ರಥ. ಅಧಿರಥನು ಅದೇ ರೀತಿ ಪ್ರತಿಯೊಂದು ರಥವನ್ನು ಸಿದ್ಧ ಮಾಡಿ, ಅದನ್ನು ತಾನೇ ನಡೆಸಿ ಪರೀಕ್ಷಿಸಿ, ಯುದ್ಧಭೂಮಿಗೆ ಅರ್ಹವೆಂದು ನಿರ್ಣಯಿಸುತ್ತಿದ್ದನು. ಹೀಗೆ ಕುರುಕ್ಷೇತ್ರ ಯುದ್ಧಕ್ಕಾಗಿ ಸಿದ್ಧಪಡಿಸಿದ

ಒಂದು ರಥವನ್ನು ಅವನು ಪರೀಕ್ಷಿಸುತ್ತಿರುವಾಗ ರಥದ ಎರಡು ಚಕ್ರಗಳು ಕಳಚಿಬಿದ್ದು ಉರುಳಿ ಹೋಗಿ ಅಧಿರಥ ಸಾವನ್ನಪ್ಪಿದ. ಕರ್ಣನು ಅರ್ಜುನ ನೊಡನೆ ಯುದ್ಧಕ್ಕೆ ನಿಲ್ಲುವ ಮೊದಲ ದಿನ, ರಾಧಾತಾಯಿ "ಕರ್ಣಾ, ನಾಳೆ ನೀನು ಯುದ್ಧಕ್ಕೆ ಹೋಗುವೆ. ನೀನು ಮರುಳಿ ಬಾರದೆ ಹೋದರೆ, ಆ ದುಃಖವನ್ನು ಸಹಿಸುವ ಶಕ್ತಿ ಈಗ ನನ್ನಲ್ಲಿ ಉಳಿದಿಲ್ಲ." ಎಂದು ಹೇಳಿ ಗಂಗಾನದಿಯ ಅಲೆಗಳಲ್ಲಿ ಮುಳುಗಿ ಪ್ರಾಣಬಿಟ್ಟಳು.

ಈ ಕಾದಂಬರಿಯಲ್ಲಿ, ರಣಜಿತ್ ದೇಸಾಯಿ ಅವರು "ದ್ರೌಪದಿ ವಸ್ತ್ರಾಪ ಹರಣ"ದ ಪ್ರಕರಣವನ್ನು ಬಹಳ ಸ್ಪೃಹಣೀಯವಾದ ಮತ್ತು ನವಿರಾದ ರೀತಿಯಲ್ಲಿ ನಿಭಾಯಿಸಿದ್ದಾರೆ. ಭೀಷ್ಮ, ದ್ರೋಣ, ಅಶ್ವತ್ಥಾಮ, ಕೃಪ, ಧೃತರಾಷ್ಟ್ರ, ಗಾಂಧಾರಿ, ವಿದುರ ಇಂಥವರೆಲ್ಲ ಇದ್ದ ಸಭೆಯಲ್ಲಿ ದ್ರೌಪದಿಯ ವಸ್ತ್ರಾಪಹರಣ ಹೇಗೆ ಸಾಧ್ಯವಾಯಿತು ? ಇದು ನಡೆದೇ ಇರಲಾರದು ಎಂಬುದು ಒಂದು ಪಕ್ಷ. ಮೊದಲನೇಬಾರಿ ದ್ಯೂತ ನಡೆದೇ ಇಲ್ಲ. ಎರಡನೆಯ ಬಾರಿಯೇ ನಡೆದುದು ಎಂಬುದು ಮತ್ತೊಂದು ಮತ. ಕೃಷ್ಣನು ದ್ರೌಪದಿಗೆ ಸೀರೆಯೊದಗಿಸಿದ ಎಂಬುದು ಪವಾಡ, ನಂಬಲರ್ಹವಲ್ಲ, ಎಂಬುದು ಒಂದು ಮತ. ಈ ಕಾದಂಬರಿಯಲ್ಲಿ ದುರ್ಯೋಧನನ ಅನ್ಯಾಯವನ್ನು ನೋಡಲಾರದೆ ಭೀಷ್ಮ, ಅವನಿಗೆ ವಿವೇಕ ಹೇಳಿ ಸಭಾತ್ಯಾಗ ಮಾಡುತ್ತಾನೆ. ದುಶ್ಯಾಸನ ಮುಂದೆ ಹೆಜ್ಜೆಯಿಟ್ಟು ದ್ರೌಪದಿಯ ಸೆರಗಿಗೆ ಕೈಯಿಕ್ಕುತ್ತಾನೆ. ಕರ್ಣ ಎರಡು ಕೈಗಳಿಂದಲೂ ಕಣ್ಣುಮುಚ್ಚಿಕೊಳ್ಳುತ್ತಾನೆ. ಆಗ ಮಹಾದ್ವಾರ ದಿಂದ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಕೃಷ್ಣನು ಒಳಕ್ಕೆ ಬರುತ್ತಾನೆ ಎಲ್ಲರೂ ಸ್ತಬ್ಧರಾಗುತ್ತಾರೆ. ದುಶ್ಯಾಸನನ ಕೈ ಹಾಗೆಯೇ ನಿಲ್ಲುತ್ತದೆ. ಸಭೆಯಲ್ಲಿ ಕಾತರ ದಿಗ್ಭ್ರಮೆ ಉಂಟಾಗುತ್ತದೆ.

ಕೃಷ್ಣನೆಂದರೆ, ಅಂದಿನ ಕಾಲದಲ್ಲಿ ಭರತ ಖಂಡದಲ್ಲಿ ಅತ್ಯಂತ ಶ್ರೇಷ್ಠ ನಾದ ವಿವೇಕಿಯಾದ ರಾಜತಂತ್ರಜ್ಞ, ತುಂಬ ಬುದ್ಧಿಶಾಲಿ ಮತ್ತು ಪರಾಕ್ರಮಿ ಸಂಘಟನಾಚತುರ. ಆತನ ಮಾತನ್ನು ಮೀರುವ ಧೈರ್ಯವಾಗಲೀ, ಆತನ ಎದುರಿಗೆ ಅನ್ಯಾಯವನ್ನು ಆಚರಿಸುವ ಶಕ್ತಿಯಾಗಲೀ ಯಾರಿಗೂ ಇರಲಿಲ್ಲ. ಆವನ ಶಕ್ತಿ ವಿವೇಕಗಳಿಂದಲೇ ಜನ, ಅವನನ್ನು ಅವತಾರ ಪುರುಷನೆಂದು ಭಾವಿಸಿದರು. ಎಲ್ಲರೂ ನಿಷ್ಕ್ರಿಯರಾಗಿದ್ದ ಆ ಸಭೆ ಕೃಷ್ಣನ ಆಗಮನ

ದಿಂದ ವಿವೇಚನೆಯು ನಿಟ್ಟುಸಿರುಬಿಟ್ಟಿತು. ಎಲ್ಲರಿಗಿಂತ ಹೆಚ್ಚಾಗಿ ದುರ್ಯೋಧನನು ದಿಗ್ಭ್ರಾಂತನೂ, ಅಧೀರನೂ–ಹೇಯವಾದ ಕೃತ್ಯದಲ್ಲಿ ತೊಡಗಿರುವಾಗ ಸಿಕ್ಕಿಕೊಂಡವನಂತೆಯೂ—ಆದನು. ಕೃಷ್ಣನು ಧುರ್ಯೋಧನನನ್ನು ಕುರಿತು ಗಂಭೀರವಾಣಿಯಲ್ಲಿ ಹೀಗೆ ಹೇಳುತ್ತಾನೆ. "ನೀವು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಹಾಗೂ ಅಹಂಕಾರಗಳಿಂದ ಲಿಪ್ತರಾಗಿದ್ದೀರಿ. ಆದುದರಿಂದಲೇ ಓರ್ವ ರಜಸ್ವಲೆಯಾದ ಹೆಣ್ಣುಮಗಳನ್ನು ರಾಜಸಭೆಗೆ ತಂದು ಅವಳ ಜೀವನದ ಮೇಲೆ ಹುಡುಗಾಟವಾಡುತ್ತಿದ್ದೀರಿ.... ಇಂಥ ನಿಮಗೆ ಯಾರು ಸಾಮ್ರಾಟರೆಂದು ಕರೆಯುತ್ತಾರೆ? ಮನುಷ್ಯತ್ವಕ್ಕೆ ಕಳಂಕವನ್ನು ತರುವ ಈ ಕೃತಿಯಿಂದ ನೀವು ರಾಜ್ಯಾಧಿಕಾರಕ್ಕೆ ಅನರ್ಹರಾಗಿದ್ದೀರಿ. ಎಂಬುದನ್ನು ಸಿದ್ಧಪಡಿಸಿ ತೋರಿಸಿದ್ದೀರಿ, ಅಯ್ಯೋ ಇದೆಂಥ ರಾಜಸಭೆ. ಒಂದು ವೇಳೆ ವಿವಸ್ತ್ರಳಾದವಳು ಕಂಡುಬಂದಲ್ಲಿ ಅವಳನ್ನು ಸವಸ್ತ್ರಳನ್ನಾಗಿಸುವುದೇ! ರಾಜಸಭೆ. ಓರ್ವ ರಜಸ್ವಲೆಯ ರಕ್ತಲಾಂಛನ ಸ್ಪರ್ಶದಿಂದ, ನಿಮ್ಮ ಈ ತೋರಣಸ್ಫಟಿಕವು ಸಾಕ್ಷಾತ್ ರೌರವ ನರಕವೆಂದು ಗುರುತಿಸುವಂತಾಗಿದೆ. ಇದೆಂಥ ರಾಜಸಭೆ! ನ್ಯಾಯವು ಯಾವ ಸ್ಥಳದಲ್ಲಿ ಕುರುಡಾಗಿದೆಯೋ, ಯಾವ ಸ್ಥಳದಲ್ಲಿ ಅಶಕ್ತರ ಮೇಲೆ ಶಕ್ತಿಪ್ರಹಾರವಾಗುತ್ತದೆಯೋ, ಅಂಥ ಸ್ಥಳದಲ್ಲಿ, ಪರಾಕ್ರಮವೂ ಅಸಹ್ಯವೆನಿಸುತ್ತದೆ. ಧರ್ಮಕ್ಕೆ ಗ್ಲಾನಿಯನ್ನುಂಟುಮಾಡುವ ಕೂಟವನ್ನು ರಾಜಸಭೆಯೆಂದೇಕೆ ಕರೆಯಬೇಕು? ಬಲಶಾಲಿಗಳಾದ ಪಾಂಡವರು ತಮಗೆ ಒದಗಿದ ಅವಮಾನವನ್ನು ಸಹಿಸುತ್ತ ಈ ಸಭೆಯಲ್ಲಿ ಕುಳಿತಿರುವುದು ನಿಮ್ಮ ವಿಜಯದ ಪ್ರತೀಕವೆಂದೇನೂ ಅಲ್ಲ. ಅದು ಅವರ ವಿವೇಕದ ಲಕ್ಷಣ. ನೀವು ನಿಮ್ಮ ಹೀನತನವನ್ನು ಪ್ರದರ್ಶಿಸಿರುವಿರಿ. ನೀವು ಖಂಡಿತ ಸಾಮ್ರಾಟರಲ್ಲ. ರಾಜತನದ ಲಕ್ಷಣಗಳೇ ನಿಮ್ಮಲ್ಲಿಲ್ಲ. ಅಷ್ಟೇ ಅಲ್ಲ, ಸಾಮಾನ್ಯ ಮಾನವರೆಂದು ಬಾಳುವ ಯೋಗ್ಯತೆಯೂ ನಿಮ್ಮಲ್ಲಿಲ್ಲ. ಈ ಪಾಪವನ್ನು ನೀವು ಹೇಗೆ ತೊಳೆದುಕೊಳ್ಳುವಿರೆಂಬುದನ್ನು ಆ ಪರಮೇಶ್ವರನೂ ಹೇಳಲಾರ.

ಮಾತನ್ನು ಮುಂದುವರಿಸಿದ ಕೃಷ್ಣನು "ಅನ್ಯಾಯಿಯಾದ ಕಂಸನನ್ನು ಕೊಂದವನೇ ನಾನು. ಬಲಾಢ್ಯನಾದ ಜರಾಸಂಧನನ್ನು ಕೊಲ್ಲಿಸಿದವನು ನಾನೇ. ಉನ್ಮತ್ತನಾಗಿ ಮಾತನಾಡಿದ. ಶಿಶುಪಾಲನನ್ನು ಎಲ್ಲರೂ ನೋಡು

ವಂತೆ ತುಂಡರಿಸಿದವನೇ ನಾನು. ನನ್ನ ಸಾಮರ್ಥ್ಯವನ್ನು ವ್ಯಕ್ತಪಡಿಸ ಬೇಕೆಂದು ನಿರ್ಧರಿಸಿದಲ್ಲಿ, ದುಶ್ಶ್ಯಾಸನನಂಥ ಅನೇಕ ವಿವೇಕ ಶೂನ್ಯರನ್ನಾಗಲಿ, ಚತುರಂಗಬಲವನ್ನಾಗಲೀ ನಾನು ಲೆಕ್ಕಿಸಲಾರೆ. ನಿಮ್ಮ ವಿವೇಕವನ್ನು ತಡೆಯಲು, ಕೃತವರ್ಮ, ಸಾತ್ಯಕೀಯವರೊಂದಿಗೆ ನನ್ನ ಚತುರಂಗಬಲವೂ ಹಸ್ತಿನಾಪುರವನ್ನು ಸುತ್ತುಗಟ್ಟಿದೆ. ಇಂದು ಈ ರಾಜಸಭೆಯಲ್ಲಿ ದ್ರೌಪದಿ, ನಿಂತಿದ್ದಾಳೆ. ಅವಳು ನನ್ನ ತಂಗಿ, ಎಲೈ ಕೌರವ ಅಂಧಪುತ್ರರೇ, ಅವಳ ಮೇಲೆ ದೃಷ್ಟಿಹಾಯಿಸಬೇಡಿ."

ಕೃಷ್ಣನ ಮಾತಿನ ಪರಿಣಾಮ, ಸಭೆಯಲ್ಲಿ ಪೂರ್ಣವಾಗಿ ಆಯಿತು. ಬೆಣ್ಣೆ ಕರಗುವುದು ಬಿಸಿಲಿಗೇಯೆ. ದುರ್ಯೋಧನನೂ ಸಹ ಅಪಮಾನದಿಂದ ಮುಖ ತಗ್ಗಿಸಿ ಕುಳಿತಿದ್ದನು. ರಾಜಸಭೆಯಿಂದ ಉಳಿದವರೆಲ್ಲರೂ ಯಾವಾ ಗಲೋ ಎದ್ದು ಹೊರಟು ಹೋಗಿದ್ದರು. ಇಲ್ಲಿ ಕೃಷ್ಣನು, ತಾನು ಕಾರ್ಯ ಸಾಧಿಸುವುದರಲ್ಲಿ ಭೀಷ್ಮ ದ್ರೋಣರಿಗಿಂತ ಅಧಿಕನೂ, ಭಾರತದ ಅತ್ಯಂತ ಹಿರಿಯ ರಾಜಕೀಯ ಪಟು, ವೀರಶ್ರೇಷ್ಠ ಎಂಬುದನ್ನು ಮೆರೆದಿದ್ದಾನೆ. ಅಂದಿನ ರಾಜಕೀಯದಲ್ಲಿ ಅವನಿಗಿದ್ದ ಸ್ಥಾನ, ಮದೋನ್ಮತ್ತರಾದ ದುಷ್ಟರ ನ್ನೆಲ್ಲ ಒಬ್ಬೊಬ್ಬರನ್ನಾಗಿ ನಾಶಮಾಡಿದುದು, ಇವೆಲ್ಲ ನಿಷ್ಕ್ರಿಯರಾದ ಭೀಷ್ಮ ದ್ರೋಣಾದಿಗಳ ಬೋಧನೆಗಿಂತ ಹೆಚ್ಚಾಗಿ ದುರ್ಯೋಧನನ ಮೇಲೆ ಪರಿಣಾಮವನ್ನುಂಟುಮಾಡಿರಬೇಕು. ಕೃಷ್ಣನು ಧೃತರಾಷ್ಟ್ರನಿಂದ ವಿಮೋಚನೆ ಹೊಂದಿದ ದ್ರೌಪದಿಯನ್ನು ಸಮೀಪಿಸಿ ಅವಳಿಗೆ ತನ್ನ ಬಲಕ್ಕೆ ಆಸರೆಯ ನ್ನಿತ್ತು ಸಭಾಗೃಹದಿಂದ ಹೊರಕ್ಕೆ ಕರೆದುಕೊಂಡು ನಡೆಯುತ್ತಾನೆ.

ಈ ಕಾದಂಬರಿಯಲ್ಲಿ, ಕರ್ಣನ ವ್ಯಕ್ತಿತ್ವವನ್ನು ಉಜ್ವಲವಾಗಿ, ಉನ್ನತ ಮೌಲ್ಯದಲ್ಲಿ ರೂಪಿಸುವುದೇ ದೇಸಾಯಿ ಅವರ ಉದ್ದೇಶ. ಈ ಉದ್ದೇಶದಲ್ಲಿ ಅವರು ಬಹಳಮಟ್ಟಿಗೆ ಸಫಲರಾಗಿದ್ದಾರೆ. ಕರ್ಣನಿಗೆ ತಾನು ಅನಾಥ ಒಂಟಿ ಎಂಬ ಭಾವನೆ ಇದ್ದರೂ, ತಾನಾರೋ, ಮಹಾನ್ ವಂಶಕ್ಕೆ ಸೇರಿದವನು ಎಂಬ ಅನಿಸಿಕೆ, ಪದೇ ಪದೇ ದೃಢವಾಗುತ್ತದೆ. ಹಸ್ತಿನಾವತಿಗೆ ಕೃಷ್ಣನು, ಸಂಧಾನಕ್ಕಾಗಿ ಬಂದಾಗ, ಕೃಷ್ಣನೇ ಕರ್ಣನ ರಥದ ಸಾರಥಿಯಾಗಲು ಬಯಸುತ್ತಾನೆ. ಕರ್ಣನ ಘನತೆ, ಪ್ರಸಿದ್ಧಿ, ಉದಾರ ಶೀಲತೆ, ಆ ಮಟ್ಟವನ್ನು ಮುಟ್ಟಿರುತ್ತದೆ.

ಕರ್ಣ ಮತ್ತು ದುರ್ಯೋಧನರ ಸ್ನೇಹ ಅತಿ ಗಾಢವಾದುದು. ಈ ಮೈತ್ರಿಯ ಅಗ್ನಿ ಪರೀಕ್ಷೆ, ಕರ್ಣನಿಗೆ ಎರಡು ಸಲ ಆಗುತ್ತದೆ. ಮೊದಲ ಸಲ ಕೃಷ್ಣನು ಬಂದು, ಕರ್ಣನ ಜನ್ಮವೃತ್ತಾಂತವನ್ನು ಹೇಳಿದಾಗ, ಕರ್ಣ ತುಂಬ ಆಘಾತಕ್ಕೊಳಗಾದ. ಜರ್ಝರಿತನಾದ. ಅವನಿಗೆ ತನ್ನಲ್ಲಿಯೇ ಅತೀವ ಕರುಣೆಯುಂಟಾಯಿತು. ನನಗೆ ಎಂಥ ಮೋಸ, ಎಂಥ ಅನ್ಯಾಯವಾಯಿತು. ಜೀವಮಾನವೆಲ್ಲ ಏನು ಕಷ್ಟಪಟ್ಟೆ. ಹೀನಕುಲದವನೆಂದು ಎಂಥೆಂಥ ಅವಮಾನ ಹೊಂದಿದೆ. ಹೆತ್ತ ತಾಯಿಯ ಲಾಲನೆ, ಪ್ರೇಮಪಾಲನ, ಆದರ ಯಾವುದನ್ನೂ ಪಡೆಯದ ನಿರ್ಭಾಗ್ಯ ನಾನು ಎಂದು ಪರಿತಪಿಸಿದ. ಯುದ್ಧ ನಿಲುಗಡೆಯನ್ನಾಗಲೀ, ಹಸ್ತಿನಾಪುರದ ಚಕ್ರಾಧಿಪತ್ಯವನ್ನಾಗಲೀ ಪಾಂಡವರು ಕೌರವರು ತನ್ನನ್ನು ಎರಡು ಕಡೆಯೂ ನಿಂತು ಸೇವಿಸುವುದನ್ನಾಗಲಿ ಕರ್ಣ ಬಯಸಲಿಲ್ಲ. ದುರ್ಯೋಧನನಲ್ಲಿ ಅವನ ನಿಷ್ಠೆ ಅಚಲವಾಗಿತ್ತು. "ದುರ್ಯೋಧನನಿಗೆ ಏನಾಗುವುದೋ ಅದು ನನಗೂ ಆಗಲಿ. ಅವನಿಗಾಗಿ ಹಗೆಗಳ ಶಿರವನ್ನು ಹರಿಯುವೆನು" ಎಂದ. ಕೃಷ್ಣನು ತನ್ನ ಜನ್ಮವೃತ್ತಾಂತವನ್ನು ಈ ಸಮಯದಲ್ಲಿ ಹೇಳಿದುದರಿಂದ—ತನ್ನ ಪಾಂಡವ ದ್ವೇಷ ಕಡಿಮೆಯಾಗಿ ಕೌರವನಿಗೆ ಕೇಡಾಯಿತಲ್ಲ ಎಂದು ಕೊರಗಿದ. ಕುಂತಿಯು, ತನ್ನಲ್ಲಿ ಬಂದಾಗ, ಕರ್ಣ ತುಂಬ ಕಳವಳಕ್ಕೆ ಈಡಾದ, ಭಾವನೆಗಳ ತುಮುಲಕ್ಕೆ ಸಿಕ್ಕಿ ಕೊಚ್ಚಿಹೋದ. ತಾಯಿಯ ಮೇಲೆ ಪ್ರೀತಿ ಕೋಪ ಎರಡೂ ಏಕಕಾಲದಲ್ಲಿ ಉಂಟಾದವು. ಹಿಂದಲ ತನ್ನ ಅವಮಾನದ ಕಥೆಯೆಲ್ಲ ನೆನಪಿಗೆ ಬಂತು.

ಶಸ್ತ್ರಪರೀಕ್ಷಾ ಕಾಲದಲ್ಲಿ ತಾನು ಹೀನಕುಲದವನೆಂದು ತನ್ನನ್ನು ಪರೀಕ್ಷೆಗೇ ಸೇರಿಸದಿದ್ದಾಗ ಯಾರಾದರೂ "ನಾನು ಹೀನಕುಲದವನಲ್ಲ. ಕುಂತಿಯ ಮಗ ಎಂದು ಯಾಕೆ ಹೇಳಲಿಲ್ಲ?" ಎಂದು ತಾಯಿಯನ್ನೇ ಈಗ ಕೇಳಿದ. "ಸ್ವಯಂವರದಲ್ಲಿ ದ್ರೌಪದಿ, ಸೂತನನ್ನು ನಾನು ವರಿಸುವುದಿಲ್ಲ ಎಂದು ಹೇಳಿ ನಾನು ಧನುರ್ಭಂಗ ಮಾಡದಂತೆ ತಡೆದಾಗ, ಯಾರಾದರೂ ಯಾಕೆ ಹಾಗೆ ಹೇಳಲಿಲ್ಲ" ಎಂದು ಕೇಳುತ್ತಾನೆ. ಕುಂತಿಯು ತನ್ನನ್ನು ತ್ಯಜಿಸಲು ಹೇಳಿದ ಕಾರಣ—ಜನಾಪವಾದ—ಅವನಿಗೆ ಅರ್ಥವಾಯಿತು. ಅವಳಲ್ಲಿಯೂ ಕನಿಕರ ಉಂಟಾಯಿತು. ಕೊನೆಯಲ್ಲಾದರೂ ಮಾತೃಪ್ರೇಮ

ದೊರಕಿತಲ್ಲ ಎಂದು ಸಂತಸಗೊಂಡ. ಕುಂತಿಯು ಕರ್ಣನಿಗೆ "ಪಾಂಡವರನ್ನು ಕೊಲ್ಲಬೇಡ" ಎಂದು ಹೇಳಿದಾಗ ಕರ್ಣನು "ನಿನ್ನ ಮಕ್ಕಳಿಗೆ ಕರ್ಣನನ್ನು ಕೊಲ್ಲಬೇಡ ಎಂದು ಯಾಕೆ ಹೇಳುವುದಿಲ್ಲ ?" ಎಂದು ಕೇಳುತ್ತಾನೆ. ಅನಂತರ ವಿನೋದದಿಂದ "ನಾನು ಪಾಂಡವರ ಅಣ್ಣನೆಂಬುದನ್ನು ಅವರಿಗೆ ಹೇಳಬೇಡ, ಹೇಳಿದರೆ ಆ ಧರ್ಮಗೊಡ್ಡು ಯುಧಿಷ್ಠಿರನು, ರಾಜ್ಯವೇ ಬೇಡವೆಂದು ಕಾಡಿಗೆ ಹೋಗಿಬಿಟ್ಟಾನು" ಎನ್ನುತ್ತಾನೆ.

ಕರ್ಣನು ಧರ್ಮಿಷ್ಟ, ತಾನು ತನಗಾಗಿ ಹಾಕಿಕೊಂಡ ನಿಯಮಗಳನ್ನು ಎಂದೂ ಮೀರದವ. ದುರ್ಯೋಧನನ ಮತ್ತು ಅವನ ಮೈತ್ರಿಯನ್ನು ಯಾರೂ ಭೇಧಿಸಲಾರರು. ಕರ್ಣನು ದುರ್ಯೋಧನನ ದುರ್ಬುದ್ಧಿಯಿಂದ ಪ್ರಭಾವಿತನಾಗಿ ಅವನ ದುಶ್ಚೇಷ್ಟೆಗಳಿಗೆ ಪ್ರೋತ್ಸಾಹ ಕೊಟ್ಟಿರಬಹುದು. ಆದರೆ ದ್ಯೂತಕ್ಕೆ ಕರ್ಣನು ಪ್ರೋತ್ಸಾಹ ಕೊಡಲಿಲ್ಲವೆಂದು ಊಹಿಸಲು ಅವಕಾಶವಿದೆ ಧರ್ಮರಾಜನನ್ನು ದ್ರೋಣನು ಸೆರೆಹಿಡಿಯಲು ವಿಫಲನಾದಾಗ, ದುರ್ಯೋಧನನು ಕರ್ಣನಿಗೆ" ನೀನು ಅವನನ್ನು ಸೆರೆ ಹಿಡಿಯಬೇಕು" ಎಂದು ಹೇಳಿಕೊಳ್ಳುತ್ತಾನೆ. ಕರ್ಣನು ಸೆರೆ ಹಿಡಿಯುವುದು ಯಾಕೆ ? ಯಾಕೆ ಕೊಲ್ಲಬಾರದು ? ಎಂದಾಗ ದುರ್ಯೋಧನನು "ಸೆರೆ ಹಿಡಿದು ಅವನೊಂದಿಗೆ ಮತ್ತೆ ಜೂಜಾಡಿ ಇನ್ನು ಹನ್ನೆರಡು ವರುಷ ಕಾಡಿಗೆ ಕಳುಹಿಸಿ ಸುಖವಾಗಿ ರಾಜ್ಯವಾಳಬಹುದು" ಎನ್ನುತ್ತಾನೆ. ಕರ್ಣನು ಜಿಗುಪ್ಸೆಯಿಂದ "ಇದುವರೆಗೆ ಅರಮನೆ ದ್ಯೂತಗೃಹವಾಗಿತ್ತು, ಇನ್ನು ಮದ್ಯಶಾಲೆಯೂ ಆಗಲಿ ಎನ್ನುತ್ತಾನೆ.

ಕರ್ಣನಿಗೆ ತನ್ನ ದಾನಶೀಲತೆಯ ವಿಷಯದಲ್ಲಿ ತುಂಬ ಶ್ರದ್ಧೆಯೂ ಛಲವೂ ಇತ್ತು. ಯಾರು ಏನನ್ನೂ ಕೇಳಿದರೂ ಕೊಡುವದು. ತಂದೆಯಾದ ಸೂರ್ಯನೇ ಬಂದು ಎಚ್ಚರಿಸಿದರೂ ಮನಸ್ಸು ಬದಲಾಯಿಸುವುದಿಲ್ಲ. ಸೂರ್ಯನು ಹೀಗೆ ಹೇಳುತ್ತಾನೆ. "ಎಲ್ಲದಕ್ಕೂ ಒಂದು ಮಿತಿಯಿದೆ. ಕಪಟದಿಂದ ಬಂದವರಿಗೆ, ಅವರು ಕೇಳಿದುದನ್ನು ಕೊಡುವುದು ದಾನಿಯ ಲಕ್ಷಣವೆಂದೆನಿಸಲಾರದು. ಅದನ್ನು ಅವಿವೇಕವೆಂದೂ ಕರೆಯುವುದುಂಟು" ಎನ್ನುತ್ತಾನೆ. ನನ್ನ ದಾತೃತ್ವ ದೇವೇಂದ್ರನನ್ನೂ ಆಕರ್ಷಿಸಿತಲ್ಲ ಎಂದು ಕರ್ಣನಿಗೆ ತೃಪ್ತಿ. ಯಾಚಕರು ಏನನ್ನಾದರೂ ಮಾಡುತ್ತಾರೆ. ವಿಷ್ಣುವು ಯಾಚನೆಗಾಗಿ

ತನ್ನನ್ನೇ ವಾಮನನನ್ನಾಗಿ ಮಾಡಿಕೊಳ್ಳಲಿಲ್ಲವೆ–ಕರ್ಣನು "ಸಾಮಾನ್ಯವಾದ ಬಾಳಿಗಿಂತ ನಾನು ಕೀರ್ತಿರೂಪವಾದ ಮರಣವನ್ನೇ ಹೆಚ್ಚು ಅಪೇಕ್ಷಿಸುತ್ತೇನೆ" ಎನ್ನುತ್ತಾನೆ.

ಸಾಹಿತ್ಯದ ಯಾವ ಮಾನದಿಂದ ಅಳೆದರೂ, ವ್ಯಾಸನ ಕರ್ಣನ ಪಾತ್ರ ಸೃಷ್ಟಿ ಅದ್ಭುತವಾದದ್ದೇ, ಅದನ್ನು ಮೀರಿಸುವುದು ತಿದ್ದುವುದು ಕಷ್ಟದ ಕೆಲಸ. ("ವ್ಯಾಸನೆಂಬ ಗರ್ವ ಎನಗಲ್ಲ") ಕರ್ಣನು ದ್ರೌಪದಿಯ ವಸ್ತ್ರಾಪಹರಣಕ್ಕೆ ಒಪ್ಪಿದ್ದು ದ್ರೌಪದಿಯು ರಾಜಸೂಯ ಯಾಗದಲ್ಲಿ ಬಡಿಸುವಾಗ ಅವನನ್ನು ತಿರಸ್ಕರಿಸಿ ಮಾತನಾಡಿದಳು ಎಂಬ ಕಾರಣದಿಂದ ಎಂದು ರಣಜಿತ್ ದೇಸಾಯಿ ಅವರ ಕಾದಂಬರಿಯಲ್ಲಿ ಸೂಚಿತವಾಗಿದೆ. ಕಾದಂಬರಿಯಾದುದರಿಂದ ಕೆಲವು ಸ್ವಾತಂತ್ರ್ಯವನ್ನು ಲೇಖಕರು ತೆಗೆದುಕೊಂಡಿರಬಹುದು. ಕಥೆಗೆ ಆಧಾರ, ಮಹಾರಾಷ್ಟ್ರದ ಜಾನಪದದಲ್ಲಿ ಎಲ್ಲಿಯಾದರೂ ಇದೆಯೋ ನನಗೆ ತಿಳಿಯದು. ನಾನು ಕೆಲವು ಕಾಲದ ಹಿಂದೆ ನೋಡಿದ "ಸೈರಂಧ್ರಿ" ಎಂಬ ಚಲನಚಿತ್ರದಲ್ಲಿ ದ್ರೌಪದಿಯು ಬಡಿಸುವುದಕ್ಕೆ ಬಂದಾಗ ಕೀಚಕನು ಅವಳ ಸೌಂದರ್ಯದಿಂದ ಪ್ರಭಾವಿತನಾದ ಎಂದು ಒಂದು ದೃಶ್ಯವಿದ್ದಂತೆ ನೆನಪು. ಈ ಕಾದಂಬರಿಯಲ್ಲಿ ಲೇಖಕರು ಉಪಯೋಗಿಸಿಕೊಂಡಿರುವ ಮತ್ತೊಂದು ಸಂಗತಿ, ಕರ್ಣನಿಗೆ ದ್ರೌಪದಿಯಲ್ಲಿ ಎಂದಿನಿಂದಲೂ ಇರುವ ಪ್ರೇಮ ಅಥವಾ ಕಾಮದ ದೃಷ್ಟಿ. ತಾನು ಕುಂತಿಯ ಮಗ ಎಂಬ ಸಂಗತಿ, ಕರ್ಣನಿಗೆ ತಿಳಿದಾಗ ಅವನಿಗೆ ಆದ ಪ್ರಥಮ ಪ್ರತಿಕ್ರಿಯೆ ನಾನು ದ್ರೌಪದಿಯ ಗಂಡನಾಗಿರಬಹುದಾಗಿತ್ತು ಎಂಬುದು. ಕೃಷ್ಣ ಬಂದು ಕರ್ಣನನ್ನು ನೋಡಿ ಅವನ ಜನ್ಮರಹಸ್ಯವನ್ನು ಅವನಿಗೆ ತಿಳಿಸಿದಾಗ, ಪಾಂಡವರ ಪಕ್ಷವನ್ನು ಕರ್ಣನು ಸೇರಿದರೆ, ಆಗ ದ್ರೌಪದಿಗೆ ಅವನು ಆರನೆಯ ಗಂಡನಾಗಬಹುದೆಂಬ ಸೂಚನೆ ಇದೆ. ಈ ಅಂಶ ಮತ್ತು ದ್ರೌಪದಿಯು ತನ್ನ ಸ್ವಯಂವರ ಸಮಯದಲ್ಲಿ ಸೂತಪುತ್ರನನ್ನು ವರಿಸುವುದಿಲ್ಲ ಎಂದು ಘೋಷಿಸಿದುದು ಈ ಸಂಗತಿಗಳಿಂದ ಕರ್ಣನು ಪಾಂಡವ ದ್ವೇಷದಲ್ಲಿ ದುರ್ಯೋಧನನಿಗೆ ಬೆಂಬಲ ಕೊಟ್ಟನು ಎಂದು ಲೇಖಕರು ಹೇಳುತ್ತಾರೆ. ದ್ರೌಪದಿ ಸ್ವಯಂವರ ಕಾಲದಲ್ಲಿ ಹಾಗೆ ಹೇಳಿದಳೆ ? ಹಾಗೆ ಹೇಳುವ ಅಧಿಕಾರ ಅಂದಿನ ಕಾಲದಲ್ಲಿ ಒಬ್ಬ ವಧುವಿಗೆ ಇತ್ತೆ ? ಈ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ.

ಆ ಸಂಗತಿ ಈಚೆಗೆ ಯಾರೋ ಭಾರತದಲ್ಲಿ ಸೇರಿಸಿದ್ದಿರಬೇಕು ಎಂದೂ ಕೆಲವು ವಿಮರ್ಶಕರು ಹೇಳುತ್ತಾರೆ.

ರಣಜಿತ್ ದೇಸಾಯಿಯವರು ಕರ್ಣನ ವೀರ ಮರಣದ ದೃಶ್ಯವನ್ನು ಬಹಳ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಅರ್ಜುನನ ಬಾಣದಿಂದ ನೊಂದು ಸಾವನ್ನು ನಿರೀಕ್ಷಿಸುತ್ತ ಮಲಗಿರುವ ಕರ್ಣನನ್ನು ಹುಡುಕುತ್ತ ದುರ್ಯೋಧನ ಬರುತ್ತಾನೆ. ಆಗ ಕರ್ಣ ದುರ್ಯೋಧನನಿಗೆ "ಶಲ್ಯನ ಬದಲು ಅಶ್ವತ್ಥಾಮನನ್ನು ಸೇನಾಪತಿಯಾಗಿ ಮಾಡಿಕೊಳ್ಳಿ ನಿಮಗೆ ಖಂಡಿತ ಜಯವಾಗುವುದು." ಎಂದು ಸಲಹೆ ಕೊಡುತ್ತಾನೆ. ದುರ್ಯೋಧನನು "ಅದು ಸಾಧ್ಯವಿಲ್ಲ, ನಾನು ಈ ಮೊದಲೇ ಶಲ್ಯರಾಜನಿಗೆ ವಾಗ್ದಾನ ಕೊಟ್ಟಿದ್ದೇನೆ. ಒಂದು ವೇಳೆ ಪರಾಜಿತನಾದರೂ ಚಿಂತೆಯಿಲ್ಲ. ಕೊಟ್ಟ ವಚನಕ್ಕೆ ಭಂಗ ತಂದುಕೊಳ್ಳಲಾರೆ. ಅಂಥ ಕಾರ್ಯ ನನ್ನಿಂದ ಎಂದೂ ಘಟಿಸದು" ಎನ್ನುತ್ತಾನೆ. ಆಗ ಕರ್ಣನು "ದುರ್ಯೋಧನಾ, ಈ ಮಾತು ನನಗೆ ಚೆನ್ನಾಗಿ ಗೊತ್ತಿದೆ. ಧರ್ಮದ ಭಾವನೆಯನ್ನು ನಾವು ಎಂದಿಗೂ ತೊರೆಯಲಿಲ್ಲ. ಆದರೆ ಶತ್ರುಗಳಾದವರು ಎಂದೂ ಆ ಧರ್ಮವನ್ನು ಪಾಲಿಸಲಿಲ್ಲ" ಎನ್ನುತ್ತಾನೆ. ಧರ್ಮದ ನೆಲೆ ವಿಚಿತ್ರ! ಕೌರವರು ಪಾಂಡವರು ಇಬ್ಬರೂ ತಾವೇ ಧರ್ಮವನ್ನು ಪಾಲಿಸಿದರೆಂದೂ ಎದುರು ಪಕ್ಷ ಪಾಲಿಸಲಿಲ್ಲನೆಂದೂ ಪರಸ್ಪರ ದೂಷಿಸುತ್ತಾರೆ.

ಕರ್ಣನ ಅಂತ್ಯಕಾಲ ಸಮೀಪಿಸಿತ್ತು. ದುರ್ಯೋಧನ ಎದುರಿಗಿದ್ದುದು ಕರ್ಣನಿಗೆ ಅತೀವ ತೃಪ್ತಿ. ಕುಂತಿಯು ಕರ್ಣನಿಂದ ಬೀಳ್ಕೊಳ್ಳುವಾ ಆವನಿಗೆ ಮಾತೃತ್ವದ ಕುರುಹಾಗಿ ಒಂದು ನೀಲಿ ಶಾಲನ್ನು ಕೊಟ್ಟುಹೋದ್ದಳು. ಯುದ್ಧದ ಅವಾಂತರದಲ್ಲಿ ಅದು ಎಲ್ಲಿಯೋ ಬಿದ್ದುಹೋಗಿತ್ತು ಅದನ್ನು ದೂರದಲ್ಲಿ ಗುರುತಿಸಿದ ಕರ್ಣನು ದುರ್ಯೋಧನನಿಗೆ "ಆ ಶಾಲನ ತೆಗೆದುಕೊಂಡು ಬಾ ಹಾಗೂ ಆದರಿಂದ ನನಗೆ ವೀರಶಯ್ಯೆಯನ್ನು ರಚಿಸ. ಎಂದು ಹೇಳಿದನು ದುರ್ಯೋಧನನು ದೂರದಲ್ಲಿ ಶಾಲನ್ನು ಗುರುತಿಸಿ ತನ ತೊಡೆಯ ಮೇಲಿದ್ದ ಕರ್ಣನ ತಲೆಯನ್ನು ಕೆಳಗಿಟ್ಟು ಶಾಲನ್ನು ತಂದ. ಅದು ನಿಜವಾಗಿ ಅತ್ಯಮೂಲ್ಯವಾದ ಬಂಗಾರದ ಕುಸುರಿ ಕೆಲಸ ಮಾ ಶಾಲು. ಅದನ್ನು ತಂದು ದುರ್ಯೋಧನನು, ಕರ್ಣನಿಗೆ ಕಾಲಿನಿಂದ ತಲೆ

ವರೆಗೆ ಹೊದಿಸಿದನು, ಕರ್ಣನಿಗೆ ತುಂಬ ಸಮಾಧಾನವಾಯಿತು. ಜೀವನದಲ್ಲಿ ವಂಚಿತನಾಗಿದ್ದ ತಾಯಿಯ ವಾತ್ಸಲ್ಯ ಆಲಿಂಗನವನ್ನು ಅನುಭವಿಸಿದನು. ದುರ್ಯೋಧನನು ತನ್ನೆಲ್ಲ ದುಃಖವನ್ನು ಬದಿಗಿಟ್ಟು, ಕರ್ಣನ ಸಮೀಪದಲ್ಲಿ ಕುಳಿತುಕೊಂಡನು. ಕರ್ಣನು "ಯುವರಾಜ ಜೀವನದಲ್ಲಿ ತಲೆಯೆತ್ತಿ ನಡೆಯುವ ಸೌಭಾಗ್ಯ ಪ್ರಾಪ್ತವಾದುದು ನಿನ್ನ ಮಿತ್ರತ್ವದಿಂದ, ಆ ನಿನ್ನ ಸ್ನೇಹಕ್ಕಾಗಿ ಕೃತಜ್ಞನಾಗಿರುವೆ, ನನ್ನ ಸಲುವಾಗಿ ಕಣ್ಣೀರು ಸುರಿಸಬೇಡ" ಎಂದು ಹೇಳಿದನು. ಕರ್ಣನು ಆಕಾಶದಲ್ಲಿ ಹೊಳೆಯುತ್ತಿರುವ ಸೂರ್ಯ ಕಿರಣಗಳನ್ನು ನೋಡಿದನು. "ಯುವರಾಜ, ತುಂಬಿದ ಮಧ್ಯಾಹ್ನದಲ್ಲಿ ನೀವು ಸೂರ್ಯಾಸ್ತವನ್ನು ನೋಡಿದ್ದೀರಾ ?" ಎಂದು ಕೇಳಿದನು. ದುರ್ಯೋಧನನು ಆಕಾಶವನ್ನು ನೋಡಿ, ಕರ್ಣನನ್ನು ದೃಷ್ಟಿಸಿದನು. ಕರ್ಣನ ಪ್ರಾಣಪಕ್ಷಿ ಹಾರಿಹೋಗಿತ್ತು. ಆದರೆ ಕಣ್ಣುಗಳು ಆಕಾಶವನ್ನೇ ನೋಡುತ್ತ ತೆರೆದಿದ್ದವು. ನಿಧಾನವಾಗಿ ಕರ್ಣನ ಮುಚ್ಚಿದ ಕೈ ಅರಳಿತು. ದುರ್ಯೋಧನನ ಕಣ್ಣೀರು ಧಾರಾಕಾರವಾಗಿ ಅಂಗೈ ಮೇಲೆ ಸುರಿಯುತ್ತಿದ್ದವು.

ಶ್ರೀಮಾನ್ ರಣಜಿತ್ ದೇಸಾಯಿ. ಈ ಕಾದಂಬರಿಯನ್ನು ಆಕರ್ಷಣೀಯವಾಗಿ ಬರೆದಿದ್ದಾರೆ. ಹಳೆಯ ಕಥೆಯೇ ಆಗಿ ನಮಗೆ ಗೊತ್ತಿದ್ದರೂ ಸಹ ಮುಂದೇನು ? ಮುಂದೇನು ? ಎಂದು ಕುತೂಹಲದಿಂದ ನಾವು ಗ್ರಂಥನನ್ನು ಓದುತ್ತೇವೆ. ಅನುವಾದಕರಾದ ಶ್ರೀ ಆದ್ಯ ರಾಮಾಚಾರ್ಯರು ಕನ್ನಡಿಗರಿಗೆ ಈಗಾಗಲೇ ತಮ್ಮ ಗ್ರಂಥಗಳಿಂದ ಪರಿಚಿತರಾಗಿರುವ ಲೇಖಕರು. ಇವರು ಕಾದಂಬರಿಕಾರರು ಮತ್ತು ವಿಮರ್ಶಕರು ಸಹ. ಇವರು ಅನೇಕ ಭಾಷೆಗಳಲ್ಲಿ ಪರಿಶ್ರಮ, ಪಾಂಡಿತ್ಯವುಳ್ಳವರು, "ರಾಧೇಯ ಬರಿ ಭಾಷಾಂತರ ಮಾತ್ರವಲ್ಲ– ಇದರಲ್ಲಿ ಅವರ ಸ್ವಂತಿಕೆಯೂ ಇದೆ." ಮೂಲ ಲೇಖಕರಿಗೆ ಲಭ್ಯವಾಗದ ಪಂಪ, ರನ್ನ, ನಾರಾಣಪ್ಪನ ಅದ್ವಿತೀಯ ಪಾತ್ರ ರಚನೆ— ಇವರ ಅನುವಾದ ಸೃಷ್ಟಿಗೆ ಒಂದು ಹೊಸ ದೃಷ್ಟಿಯನ್ನು ಕೊಟ್ಟಿದೆ. ಈ ಎಲ್ಲ ಕಾರಣಗಳಿಂದ, ಕನ್ನಡ ವಾಚಕರು ಈ ಕಾದಂಬರಿಯನ್ನು ಆದರದಿಂದ ಸ್ವೀಕರಿಸುವುದರಲ್ಲಿ ಸಂದೇಹವಿಲ್ಲ. ಇವರ ಸಾಹಿತ್ಯ ಕೃಷಿಗೆ ಇನ್ನೂ ಹೆಚ್ಚಾದ ಯಶಸ್ಸನ್ನು ಕೋರುತ್ತೇನೆ.

—ಗೊರೂರು ರಾಮಸ್ವಾಮಿ ಐಯಂಗಾರ್

# ಲೇಖಕರ ಮಾತು

ಮಾನವ ಜೀವನದ ಪ್ರಯತ್ನಗಳೆಲ್ಲ ನಿಷ್ಫಲ ಎಂದು ತೋರಿಸಿಕೊಡುವದಕ್ಕಾಗಿಯೇ ಮಹಾಮಹಿಮರಾದ ವೇದವ್ಯಾಸರು ಭಾರತದ ಪಾತ್ರಗಳನ್ನು ರಚಿಸಿರಬಹುದೇ ? ಎಂದು ಯೋಚಿಸುವಷ್ಟು ಪ್ರತಿಯೊಂದು ಪಾತ್ರಗಳೂ ವಾಚಕರ ಮನವನ್ನು ಆಕರ್ಷಿಸುತ್ತವೆ. ಕಥಾಭಾಗದಲ್ಲಿ ಕಾಣಬರುವ ಪ್ರತಿಯೊಂದು ಪಾತ್ರವೂ, ವ್ಯಕ್ತಿಯೂ ಅಸಹಾಯಕರಂತೆ ಯಾವದೋ ಒಂದು ವಿಶೇಷ ಗುರಿಯತ್ತ ಸೆಳೆದೊಯ್ಯುತ್ತಿರುವಂತೆ ಭಾಸವಾಗುತ್ತದೆ. ಆ ಪಾತ್ರಗಳ ಸುಖ–ದುಃಖಗಳಲ್ಲಿ ವಾಚಕರ ಮನವೂ ಒಂದಾಗಿ ಹೋಗುತ್ತದೆ. ವಿಶ್ವದ ಯಾವ ಸಾಹಿತ್ಯದಲ್ಲಿಯೂ ಇಂಥ ಅದ್ಭುತವಾದ ಮಿಲನ ಶಕ್ತಿಯನ್ನೊಳಗೊಂಡ ಸಾಹಿತ್ಯವು ನಮಗೆ ಕಾಣಸಿಗುವುದು ದುರ್ಲಭ ಎಂದೆನಿಸುತ್ತದೆ. ಹೀಗಾಗಿ ಭಾರತೀಯ ಸಾಹಿತ್ಯ ಲೋಕಕ್ಕೆ ವ್ಯಾಸರಿಂದಾದ ಉಪಕಾರವನ್ನು ಸ್ಮರಿಸುವುದರಲ್ಲಿಯೇ ನಾವು ಧನ್ಯರಾಗುತ್ತೇವೆ.

ಜೀವನದುದ್ದಕ್ಕೂ, ನಡೆದುಹೋಗುವ ಘಟನೆಗಳನ್ನು ಕುರಿತು ತದೇಕಚಿತ್ತದಿಂದ ಏಕಾಂತದಲ್ಲಿ ಕುಳಿತು ಯೋಚಿಸಲಾರಂಭಿಸಿದಲ್ಲಿ "ಈ ಜೀವನವೆಂಬುದು ಗಾಳಿಯಿಂದ ಅತ್ತಿತ್ತ ಹೊಯ್ದಾಡುವ ತರಗೆಲೆಯಂತಿದ್ದು ಯಾವದೋ ಮಹಾಶಕ್ತಿ ನಮ್ಮನ್ನು ಆಡಿಸುತ್ತಲಿದೆ" ಎಂಬ ಭಾವವು ಮೂಡಿಬರುತ್ತದೆ. ನಾನು ಬಹು ಚಿಕ್ಕವಯಸ್ಸಿನಲ್ಲಿ ಕೆಲವು ತಿಂಗಳುಗಳ ಕಾಲ ತಂದೆಯವರೊಂದಿಗೆ ಹರಪನಹಳ್ಳಿಯಲ್ಲಿರುತ್ತಿದ್ದೆ. ಆಗ ಆ ಸ್ಥಳಕ್ಕೆ ಭಾರತ ಬಿಂದೂರಾಯರ ಆಗಮನವಾಯಿತು. ಅವರು ಪ್ರತಿದಿನ ಕುಮಾರವ್ಯಾಸ ಭಾರತದ ವಾಚನವನ್ನು ನಡೆಸುತ್ತಿದ್ದರು. ರಸಭರಿತವಾದ ಅವರ ವಾಚನವನ್ನು ಕೇಳಲು ಹೋಗುತ್ತಲಿದ್ದೆ. ಕವಿಯ ಭಾವನೆಗಳಿಗೆ ಸರಿಹೋಗುವಂತೆ ರಾಯರು ವೇದೋಪನಿಷತ್ತುಗಳ ಭಾಗಗಳನ್ನಾಯ್ದುಕೊಂಡು ಅನುವಾದ ಮಾಡುತ್ತಿದ್ದರು. ನನ್ನ ತೀರ್ಥರೂಪರಾದ ಪಂ. ಆದ್ಯ ಸೇತೂರಾಮಾಚಾರ್ಯರು ಬೆಳಗಿನ ಜಾವದಲ್ಲಿ ಶ್ರೀಮದ್ಭಾಗವತ ಶ್ರವಣ ಮಾಡಿ

ಸುತ್ತಿದ್ದರು. ಬಿಡುವಿನ ವೇಳೆಯಲ್ಲಿ ಬಿಂದೂರಾಯರು ಹಾಗೂ ನಮ್ಮ ತಂದೆಯವರ ಮಿಲನವಾಗುತ್ತಿತ್ತು. ಆಗ ಕೆಲವು ರಸಿಕರ ಆಗಮನವಾಗುತ್ತಿತ್ತು. ರಾಯರು ಹಿಂದಿನ ದಿನ ಹೇಳಿದ ಕುಮಾರವ್ಯಾಸನ ಪದ್ಯಗಳಿಗೆಲ್ಲ ತಂದೆಯವರು ಶ್ರೀ ಮದ್ಭಾಗವತ ಹಾಗೂ ತಾತ್ಪರ್ಯ ನಿರ್ಣಯ ಗ್ರಂಥಗಳ ಆಧಾರವನ್ನೊದಗಿಸುತ್ತಿದ್ದರು. ಈ ಸಾಹಿತ್ಯದ ರಸದೌತಣ ನನ್ನ ಮನದ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತು. ಕಾಲಾಂತರದಲ್ಲಿ ಗದಗಿನಲ್ಲಿ ಶ್ರೀ ಬಿಂದೂರಾಯರಿಂದ ನಡೆದ ಕುಮಾರವ್ಯಾಸ ಭಾರತದ ಅನುವಾದವನ್ನು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯೂ ಪ್ರತಿದಿನವೂ ಪ್ರಕಟಿಸಲಾರಂಭಿಸಿತು. ಮುಂದೆ ಲೋಕ ಶಿಕ್ಷಣ ಟ್ರಸ್ಟಿನವರು 'ಭಾರತ ಸಾರೋದ್ಧಾರ' ಎಂಬ ಹೆಸರಿನಿಂದ ಬಿಂದೂರಾಯರ ಸಮಗ್ರ ಅನುವಾದವನ್ನು ಗ್ರಂಥಸ್ಥ ರೂಪದಲ್ಲಿ ವಾಚಕರ ಕೈ ಸೇರುವಂತೆ ಮಾಡಿದರು. ಬೇಸರವಾದಾಗ ನಾನು ಭಾರತಸಾರೋದ್ಧಾರವನ್ನೋದುವ ಪರಿಪಾಠವನ್ನಿಟ್ಟುಕೊಂಡು ಬಂದಿರುವೆ. ದಿನಗಳೆದಂತೆಲ್ಲ ರನ್ನನ ಗದಾಯುದ್ಧ ಹಾಗೂ ಕುಮಾರವ್ಯಾಸನ ಭಾರತ ಇವುಗಳನ್ನು ಕುರಿತು ತುಲನಾತ್ಮಕ ಅಭ್ಯಾಸವನ್ನಾರಂಭಿಸಿದೆ. ಈ ಕಾವ್ಯಗಳಲ್ಲಿ ಕಾಣಬರುವ ಕರ್ಣನು ನನ್ನ ಮನವನ್ನಾಕರ್ಷಿಸಿದನು. ಹಲವು ಹತ್ತು ಬಗೆಯಾಗಿ ಆತನ ಜೀವನವು ನನ್ನ ಮನೋಮಂಡಲದಲ್ಲಿ ಸುಳಿಯಲಾರಂಭಿಸಿತು.

ಪೌರಾಣಿಕ ವ್ಯಕ್ತಿಯಾಗಿ ಚಿತ್ರಿಸಲ್ಪಟ್ಟ ಕರ್ಣನ ಜೀವನವನ್ನು ಕುರಿತು ಯೋಚಿಸುತ್ತಿರುವಾಗ ನೆರೆ ನಾಡಿನ ಶ್ರೇಷ್ಠ ಸಾಹಿತಿಗಳೆನಿಸಿದ ವಿ. ಸ. ಖಾಂಡೇಕರರ ಕ್ರೌಂಚ ವಧ, ಯಯಾತಿ ಮೊದಲಾದ ಕೃತಿಗಳನ್ನೋದುವಂತೆ ಕೆಲವು ಮಿತ್ರರು ಸೂಚನೆಯಿತ್ತರು. ಇದೇ ಕಾಲಕ್ಕೆ ಶ್ರೀ ದೇವುಡು ನರಸಿಂಹಶಾಸ್ತ್ರಿಗಳಿಂದ ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾಶೂದ್ರ ಎಂಬ ಕೃತಿಗಳು ಹೊರಬರುವಂತಾಗಿದ್ದವು. ಈ ಮಹನೀಯರಿಂದ ರಚಿತವಾದ ಕೃತಿಗಳನ್ನೋದಿದಾಗ ನನ್ನ ಮನದಲ್ಲಿಡಗಿದ್ದ ಕರ್ಣನಿಗೆ ಒಂದು ಮೂರ್ತ ಸ್ವರೂಪವು ಕಾಣಬರುವಂತಾಯಿತು. ದಿನಗಳೆದಂತೆಲ್ಲ ಕರ್ಣನ ವಿವಿಧ ರೂಪಗಳು ಗೋಚರಿಸಲಾರಂಭಿಸಿದವು. ಈ ಸಂಧಿಕಾಲದಲ್ಲಿಯೇ ಮಹಾರಾಷ್ಟ್ರದ ಖ್ಯಾತ ಸಾಹಿತಿಗಳಾದ ಶ್ರೀ ರಣಜಿತ್ ದೇಸಾಯಿ

ಯವರ 'ರಾಧೇಯ' ಹಾಗೂ ಶಿವಾಜಿ ಸಾವಂತರ 'ಮೃತ್ಯುಂಜಯ' ಹಾಗೂ ವಿಜಯದೇಶಮುಖ ಇವರಿಂದ ರಚಿತವಾದ ಸೂರ್ಯಪುತ್ರ ಎಂಬ ಗ್ರಂಥಗಳು ಹೊರಬರುವಂತಾಗಿದ್ದವು ಈ ಕೃತಿಗಳನ್ನೋದಿದಾಗ ನನ್ನ ಮನದಲ್ಲಿ ಮೂಡಿದ ಕರ್ಣನ ಚಿತ್ರಕ್ಕೆ 'ರಾಧೇಯ' ತುಂಬ ಹೊಂದಿಕೊಂಡಂತೆ ತೋರಿತು. ನಂತರ ಈ ವಿಚಾರವನ್ನು ಕುರಿತು ನಾನು ಶ್ರೀಮಾನ್ ದೇಸಾಯಿ ಯವರಲ್ಲಿ ಚರ್ಚೆ ಮಾಡಿದೆ. ಕವಿ ಕುಮಾರವ್ಯಾಸನ ಕರ್ಣನನ್ನೂ ಹಾಗೂ ರನ್ನನ ಗದಾಯುದ್ಧದ ವಿಷಯವನ್ನೂ ಸವಿಸ್ತಾರವಾಗಿ ತಿಳಿಸಿ ಹೇಳಿದೆ. ಆಗ ಅವರು ಈ ಎಲ್ಲ ಸಂದರ್ಭಗಳನ್ನೂ ಬಳಸಿಕೊಂಡು ಪ್ರತ್ಯೇಕವಾಗಿ ಕರ್ಣಚರಿತೆಯನ್ನು ಬರೆಯುವಂತೆ ಪ್ರೋತ್ಸಾಹಿಸಿದರು. ಭಾವೈಕ್ಯದ ದೃಷ್ಟಿಯಿಂದ ದೇಸಾಯಿಯವರಿಂದ ರಚಿತವಾದ 'ರಾಧೇಯ' ಗ್ರಂಥವನ್ನು ಆಧರಿಸಿ ಕೃತಿ ರಚಿಸುವುದು ವಿಹಿತವೆಂದು ಅವರಿಂದ ಅಪ್ಪಣೆಯನ್ನು ಪಡೆದು ಕೊಂಡೆ. ಹೀಗೆ ಬಹುದಿನಗಳಿಂದ ನನ್ನ ಮನದಲ್ಲಿ ಹುದುಗಿಕೊಂಡಿದ್ದ ಸೂರ್ಯಪುತ್ರ ಕರ್ಣನು ಇಂದು ಎಲ್ಲರಿಗೂ ಕಾಣುವಂತೆ ಹೊರಬರುವಂತಾ ದುದು ನನ್ನ ಸುದೈವವೆಂದು ಭಾವಿಸಿರುವೆ.

ಮಹಾಭಾರತದಲ್ಲಿ ಕಾಣಬರುವ ಕುಂತಿಯಪಾತ್ರವಂತೂ ಮಾನವನ ಬಾಳಿಗೆ ಹಲವು ಬಗೆಯ ಬೋಧನೆಯನ್ನೀಯುವಂತಹದು. ಆ ಮಹಾ ತಾಯಿಯ ಬಾಳಿನಲ್ಲಿ ನಡೆದುಹೋದ ಸುಖದಗಳಿಗೆ ಎಷ್ಟು? ಹಾಗೂ ದುಃಖದ ಭಾಗವೆಷ್ಟು? ಎಂಬುದನ್ನು ಕುರಿತು ಯೋಚಿಸಿದಂತೆಲ್ಲ ನಮ್ಮ ಕಣ್ಮುಂದೆ ಬಂದು ನಿಲ್ಲುವವನು ಕರ್ಣನೆ. ಕೌಮಾರಾವಸ್ಥೆಯಲ್ಲಿ ಜನಿಸಿದ ಆ ಮಗನಿಗಾಗಿ ತಾಯಿ ಇನ್ನೆಷ್ಟು ಪರಿತಪಿಸಿರಲಿಕ್ಕಿಲ್ಲ ಎಂಬ ಭಾಗವನ್ನು ಕುರಿತು ಯೋಚಿಸಿದಾಗ ಕುಂತಿಯ ಬಾಳು ಅನ್ಯಾದೃಶವಾಗಿ ತೋರುವುದು.

ಕವಿ ಕುಮಾರವ್ಯಾಸನು ತನ್ನ ಕಾವ್ಯವನ್ನಾರಂಭಿಸುವಾಗ 'ತಿಳಿಯ ಹೇಳುವೆ ಕೃಷ್ಣ ಕಥೆಯನು' ಎಂದೇ ಆರಂಭಿಸುತ್ತಾನೆ. ಮಹಾಭಾರತದ ಕಥೆಗೆ ಕೃಷ್ಣನೇ ಸೂತ್ರಧಾರ. ಈಮಾತನ್ನು ರನ್ನ ಕವಿಯೂ ಒಪ್ಪುತ್ತಾನೆ. ಕಥೆಮುಂದುವರೆದಂತೆಲ್ಲ ಶ್ರೀ ಕೃಷ್ಣನ ರೂಪವು ನಮಗೆ ಆಶ್ಚರ್ಯವನ್ನು ಉಂಟುಮಾಡುತ್ತದೆ. ಪಾಂಡವರ ಮೇಲಿದ್ದ ಕೃಷ್ಣನ ಅಂತಃಕರಣ ಇಷ್ಟು ಎಂದು ಹೇಳುವಂತಿಲ್ಲ. ಆತನಿಗೆ ಕರ್ಣನಾರು? ಎಂಬ ವಿಷಯ ಮೊದಲೇ

ತಿಳಿದ ವಿಷಯುವಾಗಿತ್ತು. "ಮಮ ಪ್ರಾಣಾಹಿ ಪಾಂಡವಾಃ" ಎಂದು ಪ್ರತಿಜ್ಞೆಗೈದ ಶ್ರೀ ಕೃಷ್ಣನೇ ಕರ್ಣನನ್ನು ಸಂಹರಿಸುವಂತೆ ಅರ್ಜುನನಿಗೆ ಉಪದೇಶ ಮಾಡಿದ. ರನ್ನ ಕವಿಯ ಅಭಿಪ್ರಾಯದಂತೆ ಕರ್ಣನ ಜೀವನ ದುರಂತಮಯ. ಆದುದರಿಂದಲೇ ಕವಿಯು ಕರ್ಣನನ್ನು ಸ್ಮರಿಸು ಎಂದು ಹೇಳಿರುವದುಂಟು. ಮಾನವತ್ವದಿಂದ ದೇವತ್ವವನ್ನು ಮುಟ್ಟಲು ಹಂಬಲಿಸುವುದೇ ಕರ್ಣನ ಗುರಿಯಾದುದರಿಂದ ಆತನ ಕೀರ್ತಿ ಅಜರಾಮರವಾಯಿತೆಂದು ರನ್ನನು ಅಭಿಪ್ರಾಯ ಪಡುತ್ತಾನೆ.

ಶ್ರೀ ಕೃಷ್ಣನಂತೆ ಕರ್ಣನೂ ಇನ್ನೊಬ್ಬರ ಆಶ್ರಯದಲ್ಲಿಯೇ ಬೆಳೆದವನು. ತಾನು ಬದುಕಬೇಕೆಂದೇ ಜಾಹ್ನವಿಯು ಕರ್ಣನನ್ನು ಬದುಕಿಸಿದಳು. ಎಂದು ರನ್ನನು ಅಭಿಪ್ರಾಯಪಡುತ್ತಾನೆ. ಈ ಮಾತು ಕರ್ಣನ ಜೀವನಕ್ಕೆ, ಬಾಳಿಗೆ ಅಮೃತಧಾರೆಯಾಗಿ ಪರಿವರ್ತನೆಗೊಳ್ಳುವುದುಂಟು. ಜೀವನದುದ್ದಕ್ಕೂ ಕೊಟ್ಟು, ಕೊಟ್ಟು, ಕೊಡುವುದನ್ನೇ ಅಭ್ಯಾಸ ಮಾಡಿಕೊಂಡಿದ್ದ ಕರ್ಣನು, ಕೊನೆಗೊಂದು ದಿನ ಆ ದಾನದಲ್ಲಿಯೇ ತನ್ನನ್ನು ತಾನೇ ಕಳೆದುಕೊಳ್ಳುವಂತಾದುದನ್ನು ಕವಿ 'ಪರಾರ್ಥೈಕದೃಷ್ಟಿ' ಎಂದು ವರ್ಣಿಸಿದ್ದಾನೆ.

ಶ್ರೀಕೃಷ್ಣನು ಪಾಂಡವರು ನನ್ನ ಪಂಚಪ್ರಾಣ ಎಂದು ಹೇಳಿಕೊಂಡರೆ, ಕರ್ಣನು ದುರ್ಯೋಧನನನ್ನು ತನ್ನ ಬಹಿಪ್ರಾಣವೆಂದು ಸಾರುತ್ತಾನೆ. ಆ ಮಿತ್ರತ್ವದ ರಕ್ಷಣೆಗಾಗಿಯೇ ನನ್ನ ಹೋರಾಟ ಎಂದೂ ಹೇಳಿಕೊಳ್ಳುತ್ತಾನೆ. ಪಾಂಡವರು ತನಗೊಲಿದವರು ಎಂದು ಹೇಳಿದ ಕೃಷ್ಣನು ತಾನು ಅಂತರಂಗದಲ್ಲಿ ಮೆಚ್ಚಿದುದು ಕರ್ಣನನ್ನೇ ಎಂದು ಹೇಳಿದ ಮಾತನ್ನು ಕರ್ಣಜೀವನದ ಕೊನೆಯ ಭಾಗವು ಎತ್ತಿ ತೋರಿಸುತ್ತದೆ. ಈ ಕಾರಣದಿಂದಲೇ ಶ್ರೀಕೃಷ್ಣ ಕರ್ಣಗೆ ಆಲಿಂಗನ ಸುಖವನ್ನೀಯುತ್ತಾನೆ. ಹೀಗಿದ್ದರೂ ಅರ್ಜುನನಿಗೆ ಗೀತೋಪದೇಶವನ್ನಿತ್ತ ಕೃಷ್ಣನಿಂದಲೇ ಕರ್ಣನಿಗೆ ಭಯೋಪದೇಶವಾಗುವದನ್ನು ಓದಿದಾಗ ಎಂಥವನ ಮನಸ್ಸೂ ವಿಹ್ವಲಗೊಳ್ಳುತ್ತದೆ.

ಅಖಂಡ ಭೂಮಂಡಲಾಧಿಪತಿ ಎಂದು ಕರೆಸಿಕೊಳ್ಳಬೇಕಾಗಿದ್ದ ಕರ್ಣನಿಗೆ, ನಿಜ ಜೀವನದಲ್ಲಿ ಅಂಗೈ ಅಗಲದ ಅಂಗದೇಶವು ದೊರೆತುದರಿಂದ ಅಂಗದೇಶಾಧಿಪತಿ ಎಂದು ಕರೆಸಿಕೊಳ್ಳುವದೊಂದು ಉಪಾಧಿಯಾಗಿ ತೋರುತ್ತದೆ. ಏಕನಿಷ್ಠೆಯಿಂದ ಬಾಳಿದ ಕರ್ಣನಿಗೆ ತನ್ನ ಕೊನೆಗಾಲದಲ್ಲಿ ಆ ನಿಷ್ಠೆಯಿಂದ

ದೂರವಾಗುವಂತಾದುದೂ ಸಹ ದೈವೀಲೀಲೆಯಾಗಿ ತೋರಿಬರುತ್ತದೆ. ಸತ್ಕುಲದಲ್ಲಿ ಜನಿಸಿ ದೈವಾಧೀನವೆನಿಸಿಕೊಂಡರೂ ಕರ್ಣನು ಮಾತ್ರ ತೋಳು ಬಲ ಹಾಗೂ ದಾತೃತ್ವದಿಂದಾಗಿ ಅನಿತರ ಅಸಾಧಾರಣ ಜೀವನವನ್ನೇ ನಡೆಸಿದವನಾಗಿ ತೋರುಬರುತ್ತಾನೆ. ಆತನು ಸ್ವಾಮಿಧರ್ಮವನ್ನು ಪಾಲಿಸುವಂತೆ ಸೋದರ ಧರ್ಮವನ್ನೂ ರಕ್ಷಿಸಿಕೊಂಡು ಬಂದಿರುವ ವಿಷಯ ಚಿತ್ತಾಕರ್ಷಕವಾಗಿ ತೋರುತ್ತದೆ.

ಈ ಎಲ್ಲ ವಿಷಯುಗಳನ್ನು ಕುರಿತು ಯೋಚಿಸುವ ಮುನ್ನವೇ ವಾಚಕರಿಗೆ ಕರ್ಣನ ಇತಿವೃತ್ತಗಳು ತಿಳಿಯದೇ ಹೋಗಿದ್ದಲ್ಲಿ ಅವನೊಬ್ಬ ಮಹಾನುಭಾವನಾಗಿ ಎಲ್ಲರ ಮನೋಮಂಡಲದಲ್ಲಿ ಬೆಳಗುತ್ತಿದ್ದನೇನೋ ಎಂಬ ಸಂಶಯುವೂ ಮೂಡಿಬರುತ್ತದೆ. ಈ ಎಲ್ಲ ಸಂಶಯುಗಳಿಗೆ ಪರಿಹಾರವನ್ನೊದಗಿಸಿದವರೆಂದರೆ ಪಿತಾಮಹರಾದ ಭೀಷ್ಮರು, ಕೊನೆಗಾಲದಲ್ಲಿ ಕರ್ಣನ ವ್ಯಕ್ತಿತ್ವಕ್ಕೆ "ಪೂರ್ಣರಥಿ ಎಂದು ನುಡಿದು ಚೇತನವನ್ನು ತುಂಬಿದವರೂ ಆ ಭೀಷ್ಮರೇ. ಈ ಮಾತನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಪ್ರತಿಯೊಬ್ಬರ ಮನದಲ್ಲಿಯೂ ಪಟ್ಟಭದ್ರ ಕರ್ಣನಿದ್ದೇ ಇರುತ್ತಾನೆ. ಜೀವನದ ಏರಿಳಿತಗಳಲ್ಲಿ ಆತನ ಪಾತ್ರವು ಇದ್ದೇ ಇರುತ್ತದೆ. ಹೀಗೆ ಬಹುಕಾಲ ನನ್ನ ಮನದಲ್ಲಡಗಿದ ಕರ್ಣನು ಇಂದು ಸಾಹಿತ್ಯ ರೂಪದಲ್ಲಿ ಕಾಣುವಂತಾಗಿದ್ದಾನೆ. ಈ ಮಾತಿನ ಸತ್ಯಾಸತ್ಯತೆಯು ಅರಿವಾಗಬೇಕಾಗಿದ್ದಲ್ಲಿ ಮಹಾಭಾರತ ಗ್ರಂಥವನ್ನು ತಿರುವಿಹಾಕಬೇಕೆಂದೇನೂ ಇಲ್ಲ. ವಾಚಕರು ತದೇಕಚಿತ್ತದಿಂದ ತಮ್ಮ ಹೃದಯದ ನಾಲ್ಕು ಪುಟಗಳನ್ನು ತಿರುವಿಹಾಕಿದರೂ ಸಾಕು. ಅವರಿಗೆ ಕರ್ಣನ ದರ್ಶನವಾಗುವುದು ಖಂಡಿತ. ನನ್ನ ಜೀವನ ವಿಷಮಾವಸ್ಥೆಯಲ್ಲಿ ಸಿಲುಕಿಕೊಂಡಾಗ ಮನಸ್ಸು ಈ ಕರ್ಣಚರಿತೆಯಲ್ಲಿ ತಲ್ಲೀನವಾಗುವಂತಾದುದು ಪೂರ್ವಸುಕೃತವೆಂದೆನಿಸಿತು. ಮಹಾನುಭಾವರಾದ ವೇದವ್ಯಾಸರ ಪರಮಾನುಗ್ರಹದಿಂದ, ಗ್ರಂಥಾವಲೋಕನದಿಂದ ನನ್ನ ಮನಸ್ಸಿಗೆ ಶಾಂತಿ ತೃಪ್ತಿಗಳು ಲಭಿಸುವಂತಾದವು. ಕಥಾಭಾಗದ ಮಧ್ಯದಲ್ಲಿ ಆಗಾಗ ನನ್ನ ಪೂಜ್ಯ ತಾಯಿ ಕಾಶಿಬಾಯಿ ಹಾಗೂ ನನ್ನ ಧರ್ಮಪತ್ನಿ ಸೀತಾಬಾಯಿ ಇವರು ತಮ್ಮ ಮಕ್ಕಳು ಮೊಮ್ಮಕ್ಕಳಾದ ಚಿ|| ಪರಿಮಳ, ವಿಜಯಲಕ್ಷ್ಮಿ, ಹಾಗೂ ವರದರಾಜರನ್ನು ಮುಂದೆ ಮಾಡಿಕೊಂಡು ನನಗೆ

ಅನೇಕ ಪ್ರಶ್ನೆಗಳನ್ನು ಹಾಕುತ್ತಿದ್ದರು. ಕುಂತಿಯ ಪಾತ್ರವನ್ನು ಕುರಿತಾದ ಅವರ ಚಿಂತೆ ಹೇಳತೀರದು. ಆಗಾಗ ನನ್ನ ಪೂಜ್ಯ ತಂದೆಯವರಾದ ಪಂ॥ ಸೀತಾರಾಮಾಚಾರ್ಯರೂ ಸಹ ನನ್ನ ಕಾರ್ಯದಲ್ಲಿ ನೆರವನ್ನೀಯ ತೊಡಗಿದರು. ಹೀಗೆ ಇವರೆಲ್ಲರ ಒಡನಾಡಿಯಾಗಿಯೇ ನನ್ನ ರಾಧೇಯನು ಬೆಳೆಯಲಾರಂಭಿಸಿದನು. ಆತನು ನಾಲ್ಕು ಜನರ ಕೈಗೆಸಿಗುವ ಸಂಧಿಕಾಲ ದಲ್ಲಿಯೇ ನಾನು ಮೊಮ್ಮಗಳನ್ನು ಕಾಣುವ ಭಾಗ್ಯವೂ ಲಭಿಸಿತು. ಈ ಸ್ಮರಣೆ ಯಾವಾಗಲೂ ಉಳಿಯಲೆಂದು ಆ ಮಗುವಿಗೆ ಜಾಹ್ನವಿ, ಶೃತಿ ಎಂಬ ಹೆಸರಿನಿಂದ ಕರೆಯುವಂತೆ ನೋಡಿಕೊಂಡೆ.

ಈ ಗ್ರಂಥಕ್ಕೆ ಮುನ್ನುಡಿಯನ್ನಿತ್ತು ಅನುಗ್ರಹಿಸಿದವರು ನಾಡಿನ ಖ್ಯಾತ ಸಾಹಿತಿಗಳಾದ ಶ್ರೀಮಾನ್ ಗೊರೂರು ರಾಮಸ್ವಾಮಿ ಅಯ್ಯಂಗಾರರು ಅವರಿಗೆ ದಿ॥ ವಿ. ಸ. ಖಾಂಡೇಕರರ 'ಕ್ರೌಂಚವಧ' ಎಂಬ ಮರಾಠಿ ಗ್ರಂಥವನ್ನು ಕನ್ನಡಕ್ಕೆ ತಂದ ಕೀರ್ತಿ ಸಲ್ಲುವದು. ಆ ಹಿರಿಯರ ಆಶೀರ್ವಾದ ಬಲದಿಂದ ನನ್ನ ಸಾಹಿತ್ಯ ಸೇವೆ ಬೆಳೆಯುವುದೆಂಬ ಮಾತಿನಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ಪೂಜ್ಯರಿಗೆ ನಾನು ಹೃತ್ಪೂರ್ವಕವಾಗಿ ವಂದಿಸುತ್ತೇನೆ.

ಈ ಗ್ರಂಥಕ್ಕೆ ಮುಖ ಚಿತ್ರವನ್ನು ಬರೆದುಕೊಟ್ಟವರು ನನ್ನ ಪರಮ ಮಿತ್ರರಾದ ಪ. ಸ ಕುಮಾರ್ ಇವರ ನೆರವನ್ನು ಮನಸಾ ಸ್ಮರಿಸಿಕೊಳ್ಳುವೆ.

ಈ ಕೃತಿಯನ್ನು ಮುದ್ರಿಸಿದ ಶ್ರೀ ವಿನಾಯಕ ಪ್ರಿಂಟರ್ಸ್‌ರವರನ್ನು ನಾನು ವಂದಿಸುತ್ತೇನೆ.

ತಮ್ಮ

20-7-1989
ಬೆಂಗಳೂರು

—ಅಶ್ವ ರಾಮಾಚಾರ್ಯ—

# ಹೃತ್ಪೂರ್ವಕ

**ರಾಧೇಯ :** ವೇದಕಾಲಗಳ ಪರಂಪರೆಯನ್ನು ಕುರಿತ ವಿಶ್ಲೇಷಣೆ ಬರುಬರುತ್ತಾ ಆಕರ್ಷಕ ಪ್ರತಿಮೆಯಾಗಿ ಅರಳುತ್ತಾ, ಕಡೆಗೆ ಇಡೀ ಕಾದಂಬರಿಯೇ ಮಹಾಕಾವ್ಯದಷ್ಟು ಸಮೃದ್ಧವಾಗಿ ಬೆಳೆದು ನಿಂತುಬಿಡುತ್ತದೆ. ಈ ಕಾದಂಬರಿಯೊಳಗಿನ ಕರ್ಣಪರ್ವದ ಬಹಿರ್ಮುಖ ಕ್ರಿಯೆಗಳು ಓದುಗರ ಮನಸ್ಸಿನಲ್ಲಿ ಅಂತರ್ಮುಖ ತಪಸ್ಸಾಗಿ ಪರಿವರ್ತನೆಗೊಳ್ಳುವಲ್ಲಿ ಈ ಕೃತಿಯ ಸಾರ್ಥಕತೆ ಅಡಗಿದೆ. ಕರ್ಣನ ಬದುಕಿನ ಹಲವಾರು ಮಜಲುಗಳನ್ನು ತಲಸ್ಪರ್ಶಿಯಾಗಿ, ಕಲಾತ್ಮಕವಾಗಿ ಕಡೆದಿಟ್ಟಿರುವ ಈ ರಸಘಟ್ಟ ಕನ್ನಡ **ಕುಲಭೂಷಣ ಆದ್ಯ ರಾಮಾಚಾರ್ಯರ** ಸಾಹಿತ್ಯಕ ಸಾಧನೆಯ ಹಾದಿಯಲ್ಲಿ ಅತ್ಯಂತ ಪ್ರಮುಖ ಮೈಲಿಗಲ್ಲು.

ಮೂಲವನ್ನು ಕೇವಲ ತಮ್ಮ ಸ್ಫೂರ್ತಿಗಾಗಿ ಉಳಿಸಿಕೊಂಡಿರುವಂತೆ ಕಾಣುವಷ್ಟು ಕಣ್ಣಿಗೆ ಕಟ್ಟುವ ಕನ್ನಡತನದ ಭಾಷೆ, ಹಾಗೂ ಭಾವನೆಗಳನ್ನು ಸಹಜ ಹದದಲ್ಲಿ ಸಹಸ್ಪಂದನ ಮಾಡಿರುವ ರಾಮಾಚಾರ್ಯರು, ಮರಾಠಿ ಕೃತಿಯ ಅಮೂರ್ತ ಆಕಾರಕ್ಕೆ, ತಮ್ಮ ವೈಯುಕ್ತಿಕವಾದ ಸ್ವರೂಪ ಹಾಗೂ ಜೀವ ಕೊಡುವುದರ ಮೂಲಕ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗುತ್ತಾರೆ.

ಸದಾ ಕಳವಳ, ತಳಮಳಗಳ ಕಿರೀಟಧಾರಿ ಕರ್ಣ, ಅತ್ಯಂತ ಸೂಕ್ಷ್ಮ ಮನಸ್ಸಿನ ಕಲಾಹೃದಯದ ಒಬ್ಬ ಧೀಮಂತ ರಾಜರ್ಷಿಯೂ ಸಹ, ಬದುಕಿನುದ್ದಕ್ಕೂ ಅತೀವ ವೇದನೆಯ ಕಾವಿನಲ್ಲೇ ಉಳಿದ ರಾಧೇಯ ದ್ವಂದ್ವ ವ್ಯಕ್ತಿತ್ವದ ಹತ್ತಿರ ಬಂದಾಗಲೂ ಪ್ರಾಮಾಣಿಕತೆಯ ಕೋಟೆ ಬಿಟ್ಟು ಕೆಳಗಿಳಿಯದ ಸ್ಥಿತಪ್ರಜ್ಞ. ಈ ಭಾರತ ವ್ಯಕ್ತಿಯ ಹಾಗೂ ಉಳಿದ ಭಾರತದ ಭಾರತದ ಪಾತ್ರಗಳ, ನಡುವಿನ ಹಲವು ಸ್ತರಗಳ, ಸಂಬಂಧಗಳ, ಪ್ರಬುದ್ಧ ಚಿಂತನೆಯ ಈ ಕಾದಂಬರಿ ಕನ್ನಡದ ಪ್ರಜ್ಞೆಯ ಉರಿಗಳಲ್ಲಿ ನಿಜಕ್ಕೂ ಪ್ರಮುಖವಾದುದಾಗಬಲ್ಲುದು.

ಅತ್ಯಂತ ದಟ್ಟ ಹಾಗೂ ಆಂತರಿಕವಾದ ಇಂದ್ರಿಯ ಗಮ್ಯ ವಿವರಣೆಗಳಿಂದ ಮೊದಲು ಮಾಡಿ, ಅತ್ಯಂತ ಉದಾತ್ತವಾದ ಆಧ್ಯಾತ್ಮಿಕ ತತ್ವದಂಚಿಗೂ ಮೈ ಚಾಚಿಕೊಂಡಿರುವ ಆದ್ಯ ರಾಮಾಚಾರ್ಯರ ಈ ಕೃತಿ ಸಕಲ ಲಕ್ಷಣಗಳೊಡನೆ ಸರ್ವಾಂಗ ಸುಂದರ ಶಿಲ್ಪ ಮೂರ್ತಿಗೊಂಡಿದೆ–ಇಲ್ಲಿಯ ಕರ್ಣನಂತೆ.

ಒಟ್ಟಿನಲ್ಲಿ ಈ ಕೃತಿಗೆ ತೇಜಸ್ವಿಯ ಗಾಂಭೀರ್ಯವಿದೆ, ಕಲಾವಿದನ ಸೂಕ್ಷ್ಮತೆಯಿದೆ, ವಿದ್ವಾಂಸನ ವಿಶಿಷ್ಟ ದರ್ಪವಿದೆ–ಲೇಖಕರ ವಿಶಿಷ್ಟ ವ್ಯಕ್ತಿತ್ವವಿದೆ. 'ರಂಭಾ' ದಂತಹ ಸೊಬಗಿನ, ಕಲಾಶ್ರೀಮಂತಿಕೆಯ, ಹಳೇಬೀಡಿನ ಕುಸುರಿ ಕೆಲಸದಂತಹ ಕಾದಂಬರಿಯನ್ನಿತ್ತ ಆದ್ಯ ರಾಮಾಚಾರ್ಯರು ಶ್ರವಣಬೆಳಗೊಳದ ಔನ್ನತ್ಯದ, ಹಂಪೆಯ ಭವ್ಯತೆಯಂತಹ ರಾಜಸಕಾದಂಬರಿ 'ರಾಧೇಯ'ವನ್ನು ಅಷ್ಟೇ ಧೀಮಂತಿಕೆಯಿಂದ ಕನ್ನಡ ಸಹೃದಯರಿಗೆ ಅರ್ಪಿಸಿದ್ದಾರೆ. ಮಹಾಭಾರತದ ಮುಕ್ತದ್ವಾರದಲ್ಲಿ ಪ್ರವೇಶಿಸಿರುವ ರಣಜಿತ್ ದೇಸಾಯಿ ಹಾಗೂ ರಾಮಾಚಾರ್ಯರ ಕಣ್ಣಿಗೆ ಕಂಡ ದೃಶ್ಯಗಳು ಹಲವಾರು. ಅವುಗಳನ್ನು ನೋಡಿ. ಅಭಿವ್ಯಕ್ತಿಸಿರುವ ದೃಷ್ಟಿಗಳೂ ಅಷ್ಟೆ.

ನಿಜಕ್ಕೂ ಹೇಳಬೇಕೆಂದರೆ, ಭೈರಪ್ಪನವರ 'ಪರ್ವ'ದ ನಂತರ ಕನ್ನಡದಲ್ಲಿ ಬಂದ ಅತ್ಯುತ್ತಮ ಪೌರಾಣಿಕ ಕಾದಂಬರಿಗಳಲ್ಲಿ 'ರಾಧೇಯ' ಅತ್ಯಂತ ಮಹತ್ವದ್ದಾಗುತ್ತದೆ.

—ಅರಳುಮಲ್ಲಿಗೆ ಪಾರ್ಥಸಾರಥಿ

# ಶ್ರೀಕೃಷ್ಣ ದ್ವಾರಕ

ಪುಟ : 50 ಬೆಲೆ : ರೂ. 5.00

ರಾಧೇಯ, ಧನಂಜೆಯ ಎಂಬ ಕೃತಿಗಳನ್ನು ರಚಿಸಿ ಮುದ್ರಣಗೊಂಡ ಮೇಲೆ ನಾನು ಭೀಮಸೇನನ ಜೀವನವನ್ನು ಕುರಿತು ಮಹಾಭಾರತದ ಅಭ್ಯಾಸವನ್ನಾರಂಭಿಸಿದೆ. ನನ್ನ ಮನೆತನದ ಪೂರ್ವಜರಿಂದ ರಚಿತವಾದ ವರದರಾಜೀಯ ಎಂಬ ತಾತ್ಪರ್ಯ ಗ್ರಂಥವನ್ನೋದಿ ಮುಗಿಸಿದೆ. ದಿನಗಳೆದಂತೆಲ್ಲ ಸಂಕಲ್ಪ ಮಾಡಿಕೊಂಡಿದ್ದ ಭೀಮಸೇನನ ಹತ್ತಾರು ರೂಪಗಳು ಕಾಣತೊಡಗಿದವು. ಆತನ ಬಾಳಿಗೆ ಆಸರೆಯಾಗಿ ನಿಂತ ಶ್ರೀಕೃಷ್ಣನ ವ್ಯಕ್ತಿತ್ವವು ನನ್ನನ್ನು ಮುಗ್ಧನನ್ನಾಗಿ ಮಾಡಿತು. "ಮಮ ಪ್ರಾಣವಾಹಿ ಪಾಂಡವಾಃ" ಎಂದು ಪ್ರತಿಜ್ಞೆಗೈದ ಆ ಮಹಾನುಭಾವನ ಲೀಲಾ ವಿನೋದಗಳೆಲ್ಲ ನನ್ನ ಕಣ್ಮುಂದೆ ಹಾದುಹೋಗತೊಡಗಿದವು.

ಶ್ರೀಕೃಷ್ಣನ ಜನ್ಮಸ್ಥಳವಾದ ಮಥುರಾ, ವೃಂದಾವನ, ದ್ವಾರಕಾ ದೇಹೋತ್ಸರ್ಗ, ನಾಥದ್ವಾರ, ಮೊದಲಾದ ಸ್ಥಳಗಳನ್ನೆಲ್ಲ ಸುತ್ತಾಡಿಕೊಂಡು ಬಂದು ಈ ಲೇಖನವನ್ನು ಸಿದ್ಧಪಡಿಸಿದೆ. ಮೊದಲು ಇದು ಸಂಸ್ಕೃತಿ ಸಂಭ್ರಮ ಎಂಬ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಯಿತು. ಸಪ್ತಗಿರಿ, ಹಾಗೂ ತತ್ವವಾದದಲ್ಲಿಯೂ ಕೆಲವು ಭಾಗಗಳು ಮುದ್ರಣಗೊಂಡವು. ನಂತರ ಆ ಎಲ್ಲ ಭಾಗಗಳನ್ನಾಯ್ದುಕೊಂಡು ಒಂದು ಚಿಕ್ಕ ಹೊತ್ತಿಗೆಯ ರೂಪದಲ್ಲಿ ಹೊರತರಲು ಶ್ರೀ ವರದರಾಜ ಪ್ರಕಾಶನದವರು ಮುಂದೆ ಬಂದರು.

ಈ ಲೇಖನವನ್ನೋದಿ ಮೆಚ್ಚಿಗೆಯ ರೂಪದಲ್ಲಿ ಪತ್ರಗಳನ್ನು ಬರೆದ ನನ್ನ ಅಭಿಮಾನಿ ವಾಚಕರಿಗೆಲ್ಲ ನಾನು ಕೃತಜ್ಞತೆಯನ್ನು ವ್ಯಕ್ತಪಡಿಸುವೆ.

ಕನ್ನಡ ನಾಡಿನ ಕೃಷ್ಣ ಭಕ್ತರು ನನ್ನ ಈ ಅಳಿಲು ಸೇವೆಯನ್ನು ಮೆಚ್ಚುವರೆಂದು ನಂಬಿದ್ದೇನೆ.

ಆದ್ಯ ರಾಮಾಚಾರ್ಯ

# ಅಂತರಂಗ

ವಿಶಾಲವಾದ ವಿಸ್ತೀರ್ಣತೆಯಿಂದ ಕೂಡಿದ ಕುರುಕ್ಷೇತ್ರದ ನೆಲವು ಇಂದು ರುದ್ರಭೀಕರವಾದ ಉದಾಸೀನತೆಯಿಂದ ಬಿಕೋ ಎಂದೆನ್ನುವಂತಾಗಿತ್ತು. ಸೂರ್ಯದೇವನು ಮಧ್ಯಬಿಂದುವನ್ನು ಸಮೀಪಿಸುತ್ತಲಿದ್ದನು.

ಘನಘೋರವಾದ ಯುದ್ಧವು ನಡೆದ ನೆಲದಲ್ಲಿ ಮಡಿದು ಬಿದ್ದಿರುವ, ವೀರಾಧಿವೀರರ ಪಾರ್ಥಿವ ಶರೀರಗಳನ್ನು ಹುಡುಕಿ ತೆಗೆದು ಅವುಗಳನ್ನು ಗುರುತಿಸಿ, ಅಂಥವರಿಗೆ ಸಲ್ಲಬೇಕಾಗಿದ್ದ ಅಂತಿಮ ಸಂಸ್ಕಾರ ಮಾಡುವ ಕಾರ್ಯವು ಈಗ ಆರಂಭವಾಗಿತ್ತು. ಜೀವನ್ಮರಣಗಳ ಪರಿವೆಯನ್ನು ಲೆಕ್ಕಿಸದೆ ಯಾವ ವೀರರು ಮರಣವನ್ನಪ್ಪಿದರೋ, ಅಂಥ ವೀರರ ದೇಹಗಳನ್ನು ವಿಜಯಿಗಳಾದವರು ಹುಡುಕಿ ತೆಗೆಯುತ್ತಲಿದ್ದರು. ಜಯಾಪಜಯಗಳ ಅಧ್ಯಾಯವಂತೂ ಈಗ ಮುಗಿದು ಹೋದ ಮಾತಾಗಿತ್ತು.

ಸಮಯಸಂದರ್ಭಗಳ ಗೊತ್ತುಗುರಿಯಿಲ್ಲದೆ ಸೇನಾದಳಗಳನ್ನೆಲ್ಲ ಹೊತ್ತು ಸಂಚರಿಸಿದ ರಥ, ತುರುಗಾದಿಗಳ ಕಾಲತುಳಿತಕ್ಕೆ ಸಿಕ್ಕು ಜರ್ಜರಿತವಾಗಿ

ಹೋಗಿದ್ದ ಕುರುಕ್ಷೇತ್ರದ ಆ ನೆಲವು ಇಂದು ದೂರದಿಂದ ಸುದಾಮನ ದೇಹದಂತೆ ಕಾಣಬರುತ್ತಿತ್ತು. ದೃಷ್ಟಿ ಹಾಯಿಸಿದಂತೆಲ್ಲ ಭಗ್ನವಾದ ರಥಗಳು ಅಸ್ತವ್ಯಸ್ತ ರೀತಿಯಲ್ಲಿ ಪರ್ವತಪ್ರಾಯವಾಗಿ ಬಿದ್ದಿದ್ದವು. ಬಾಣಗಳ ಮಳೆಯಂತೂ ಈಗ ನಿಂತುಹೋಗಿತ್ತು. ತಮ್ಮ ಸುದೀರ್ಘವಾದ ನಾದಗಳಿಂದ ಆತ್ಮಧೈರ್ಯವನ್ನು ಪ್ರತಿಬಿಂಬಿಸುತ್ತಿದ್ದ ಸುವರ್ಣಕವಚಯುಕ್ತವಾದ ಶಂಖಗಳು ನಿರ್ಗತಿಕಾವಸ್ಥೆಯಲ್ಲಿ ಇನ್ನುಳಿದ ಶಸ್ತ್ರಾಸ್ತ್ರಗಳೊಂದಿಗೆ ಭೂಮಿಯಲ್ಲಿ ಬಿದ್ದು ಇಂದು ಹೊರಳಾಡುತ್ತಿದ್ದವು.

ಪಂಚಪಾಂಡವರು ಹಾಗೂ ಧೌಮ್ಯಾಚಾರ್ಯರು, ವಿದುರ, ಸಂಜಯ, ಯುಯುತ್ಸು ಇವರೇ ಮೊದಲಾದವರು ತಮ್ಮ ತಮ್ಮ ಸೇವಕರ ನೆರವಿನಿಂದ ಮೃತರ ಶರೀರಗಳನ್ನೆಲ್ಲ ಹೊರತೆಗೆದು ಅವುಗಳಿಗೆಲ್ಲ ಅಂತಿಮ ಸಂಸ್ಕಾರಗೈಯುವುದರಲ್ಲಿ ನಿರತರಾಗಿದ್ದರು.

ಈ ವಸುಂಧರೆಯು ಸಕಲ ಸನ್ಮಂಗಳವನ್ನೀಯಲಿ ಎಂದು ಭಾವಿಸಿ ಒಂದು ಕಾಲದಲ್ಲಿ ಬಂಗಾರದ ನೇಗಿಲನ್ನು ಮಾಡಿ, ಧರಿತ್ರಿಯನ್ನು ಪೂಜಿಸಿ ಯಾವ ನೆಲವನ್ನು ಆ ನೇಗಿಲಿನಿಂದ ಉತ್ತಿದ್ದರೋ ಅದೇ ನೆಲದಲ್ಲಿ ಇಂದು ಲೆಕ್ಕವಿಲ್ಲದಷ್ಟು ಪ್ರೇತ ರಾಶಿಗಳನ್ನು ಅವರು ಕಾಣುತ್ತಲಿದ್ದರು.

ಬಂಧುಬಾಂಧವರನ್ನೆಲ್ಲ ಹುಡುಕಿ ತೆಗೆದು ಅವರಿಗೆಲ್ಲ ಅಗ್ನಿ ಸಂಸ್ಕಾರ ಮಾಡಿ ಮುಗಿಸಿದ ನಂತರ ಪಾಂಡವರು ಗಂಗಾನದಿಯತ್ತ ಸಾಗಿದ್ದರು. ಸೂರ್ಯದೇವನೂ ಸಹ ಅವರ ಹಿನ್ನೆಲೆಯಾಗಿ ಬರುತ್ತಲಿದ್ದ. ಪ್ರಖರವಾದ ಆತನ ಕಿರಣಗಳು ಗಂಗಾ ಪ್ರವಾಹದಲ್ಲಿ ನೂರು ಬಗೆಯಾಗಿ ಮಿಂಚುತ್ತಲಿದ್ದವು. ನೊಂದು ಬೆಂದು ಹೋಗಿದ್ದ ಜೀವರಿಗೆ ಪ್ರವಾಹದ ಸಾಮಿಪ್ಯವು ಹಿತವೆನಿಸತೊಡಗಿತು. ಜಯಾಪಜಯಗಳ ಅರ್ಥವಂತೂ ಆ ರಣರಂಗದಲ್ಲಿಯೇ ಧೂಳಿಪಾಲಾಗಿ ಹೋಗಿದ್ದವು. ಕಳೆದ ಜೀವರನ್ನು ಸ್ಮರಿಸಿಕೊಂಡು ಉಳಿದವರು ಪರಿತಪಿಸುತ್ತಿದ್ದರು.

ಗಂಗೆಯ ದಡದಲ್ಲಿರುವ ಮರಳು ಹಾಸಿಗೆಯ ಮೇಲೆ ತಾತ್ಕಾಲಿಕವಾದ ಒಂದು ಶಿಬಿರವನ್ನು ಏರ್ಪಡಿಸಿದ್ದರು. ಅತಿ ಖಿನ್ನಮನಸ್ಕರಾಗಿ ಮಂದವಾದ ನಡಿಗೆಯಲ್ಲಿ ಬರುತ್ತಲಿರುವವರನ್ನು ಕಂಡು ಆ ಶಿಬಿರದಲ್ಲಿದ್ದವರೆಲ್ಲ ಎದ್ದು ನಿಂತರು. ಅನಂತರ ಅವರನ್ನನುಸರಿಸಿಕೊಂಡು ಎಲ್ಲರೂ ಪ್ರವಾಹದತ್ತ ಸಾಗಿದರು.

ಧರ್ಮರಾಜನು ನಡು ನೀರಿನಲ್ಲಿ ನಿಂತುಕೊಂಡಿದ್ದನು. ಆತನ ಹಿಂಭಾಗದಲ್ಲಿ ಹಾಸಿದ ಮರಳಿನ ಮೇಲೆ ಒಂದೆಡೆಯಲ್ಲಿ ಕುಂತಿ ಹಾಗೂ ದ್ರೌಪದಿಯರು ಕುಳಿತುಕೊಂಡಿದ್ದರು. ಅವರಿಂದ ಸ್ವಲ್ಪ ದೂರದಲ್ಲಿ ಪಾಂಡವ ಸೋದರರೆಲ್ಲ ಅಧೋವದನರಾಗಿ ಕುಳಿತುಕೊಂಡಿದ್ದರು.

ಇಂದು ಅವರಾರಿಗೂ ತಮ್ಮ ಪರಾಕ್ರಮದ ಅಹಂಕಾರವಾಗಲೀ, ಪ್ರತಿಜ್ಞೆಗಳ ಸ್ಮರಣೆಗಳಾಗಲಿ, ಇಲ್ಲವೇ ವಿಜಯದ ಆನಂದವಾಗಲಿ ಸ್ವಲ್ಪವೂ ಇರಲಿಲ್ಲ. ಆ ಹಿಂದಿನ ಕೆಚ್ಚೆಲ್ಲ ಹೇಳ ಹೆಸರಿಲ್ಲದಂತೆ ಇಂದು ಮಾಯವಾಗಿ ಹೋಗಿತ್ತು. ವಿಜಯೋತ್ಸಾಹದ ಭರದಲ್ಲಿ ಮಡಿದು ಹೋದ ವೀರಾಧಿವೀರರ ಸ್ಮರಣೆ ಮಾತ್ರ ಇಂದು ಮರುಕಳಿಸಿ ಬರುತ್ತಿತ್ತು.

ಧರ್ಮರಾಜನು ದಾಯಾದಿಗಳ ಒಂದೊಂದೇ ಹೆಸರನ್ನು ಸ್ಮರಿಸಿಕೊಂಡು ಅವರಿಗೆ ತಿಲಾಂಜಲಿಯನ್ನೀಯುತ್ತಲಿದ್ದನು. ಆ ಹೆಸರಿನ ಉಚ್ಚಾರವಾದೊಡನೆ ಆ ವ್ಯಕ್ತಿಯ ಜೀವನ ಚಿತ್ರವು ಎಲ್ಲರ ಕಣ್ಮುಂದೆ ಬಂದು ನಿತ್ತಂತಾಗುತ್ತಿತ್ತು. ಬಹು ಹೊತ್ತಿನ ನಂತರ ಧರ್ಮರಾಜನು ಹಿಂದಿರುಗಿ ನೋಡಿ,

"ಎಲ್ಲರಿಗೂ ತರ್ಪಣವನ್ನಿತ್ತಂತಾಯಿತಲ್ಲವೆ ? ಯಾರೂ ಉಳಿಯಲಿಲ್ಲ ವಷ್ಟೆ ?" ಎಂದು ಕೇಳಿದನು.

ಧರ್ಮರಾಜನ ಈ ಪ್ರಶ್ನೆಯಿಂದ ಕುಂತಿಯ ಹೃದಯವು ತಲ್ಲಣಿಸಿ ಹೋಯಿತು. ಭಾವಪರವಶಳಾಗಿದ್ದ ಅವಳ ದೇಹ ಕಂಪಿಸತೊಡಗಿತು. ತುಟಿಗಳು ಬತ್ತಿ ಹೋದವು. ಆರ್ತಳಾಗಿ ಒಂದು ಸಲ ಅವಳು ಕೃಷ್ಣನನ್ನು ನೋಡಿದಳು. ಆ ಮಹಾನುಭಾವನು ಹರಿವ ಗಂಗೆಯನ್ನೇ ತದೇಕಚಿತ್ತದಿಂದ ನೋಡುತ್ತ ನಿಂತುಕೊಂಡಿದ್ದನು. ಆತನ ನೇತ್ರಗಳು ತುಂಬಿಬಂದಿದ್ದವು. ಅಳಿದುಳಿದ ತನ್ನ ಶಕ್ತಿಯನ್ನೆಲ್ಲ ಒಂದುಗೂಡಿಸಿಕೊಂಡ ಕುಂತಿಯು "ಕೃಷ್ಣಾ" ಎಂದು ಕೂಗಿಕೊಂಡಳು.

ಕುಂತಿಯ ಆ ಕೂಗು ಕೃಷ್ಣನ ಸ್ಥಿತಪ್ರಜ್ಞತ್ವವನ್ನು ಅಲ್ಲಾಡಿಸಿತು. ಒಂದು ಸಲ ಆತ ಕುಂತಿಯನ್ನು ನೋಡಿದನು. ಅವಳು ಅತ್ಯಂತ ದೈನ್ಯದಿಂದ "ನೀನಾದರೂ--" ಮುಂದೆ ಅವಳ ಬಾಯಿಂದ ಮಾತುಗಳೇ ಹೊರಡಲಿಲ್ಲ. ತಾಯಿಯ ಈ ಅವಸ್ಥೆಯನ್ನು ಕಂಡು ಎಲ್ಲರೂ ಗಾಬರಿಯಾದರು. ಒಂದು

ಸಲ ತಮ್ಮ ತಾಯಿಯನ್ನೂ ಇನ್ನೊಂದು ಸಲ ಕೃಷ್ಣನನ್ನೂ ಅವರು ನೋಡ ಲಾರಂಭಿಸಿದರು. ಆಗ ದೀರ್ಘಶ್ವಾಸವನ್ನೆಳೆದುಕೊಂಡ ಕೃಷ್ಣನು,

"ನಿಲ್ಲು ; ಧರ್ಮರಾಜಾ : ನಿಲ್ಲು ; ಹಿಂದಕ್ಕೆ ಬರಬೇಡ" ಎಂದು ಕೂಗಿಕೊಂಡು ಒಂದೇ ಹಾರಿಕೆಯಲ್ಲಿ ಆತನನ್ನು ಸಮೀಪಿಸಿದನು.

"ಎಲ್ಲರಿಗೂ ತಿಲಾಂಜಲಿ ಕೊಟ್ಟಾಯಿತಲ್ಲವೇ ?" ಧರ್ಮರಾಜನು ಪುನಃ ಕೇಳಿದ.

"ಇಲ್ಲ. ಓರ್ವ ಮಹಾನುಭಾವ ಇನ್ನೂ ಉಳಿದುಕೊಂಡಿದ್ದಾನೆ."

"ಹಾಗಾಗಲು ಸಾಧ್ಯವೇ ಇಲ್ಲ. ತಮ್ಮ ಸೋಲಿನಿಂದಾಗಿ ಸೋತವರಿಗೆ ವಿಸ್ಮರಣೆಯಾಗುವುದು ಸಹಜ. ಆದರೆ ಗೆದ್ದವರು, ವಿಜಯಿಗಳಾದವರು ವೀರರನ್ನು ಎಂದೂ ಮರೆಯಲಾರರು. ಒಂದು ವೇಳೆ ಹಾಗೆ ಮರೆತು ಹೋದಲ್ಲಿ ಅವರು ಸಂಪಾದಿಸಿಕೊಂಡಿರುವ ವಿಜಯವೂ ಸಹ ವ್ಯರ್ಥವೆಂದೆನಿಸು ವುದು. ತಿಲಾಂಜಲಿಯನ್ನೀಯುವ ಈ ಪ್ರಸಂಗದಲ್ಲಿಯೂ ನನಗೆ ನನ್ನ ಧರ್ಮದ ಸಂಪೂರ್ಣ ಅರಿವಿರುವುದು. ಆದುದರಿಂದ ಕೃಷ್ಣಾ, ನನ್ನ ದುಃಖ ವನ್ನು ಮತ್ತಷ್ಟು ಹೆಚ್ಚಿಸುವಂತೆ ಮಾಡಬೇಡ. ನನ್ನ ನೆನಪಿನಿಂದ ದೂರಾ ಗಿರುವ ಆ ವೀರಪುರುಷನಾರು ? ಮೊದಲು ಆತನ ಹೆಸರನ್ನು ತಿಳಿಸು."

"ನಿಮ್ಮ ಈ ಕಾರ್ಯಕ್ರಮದಲ್ಲಿ ನೀವು ಯಾರಿಗೆ ಮೊದಲು ಸ್ಥಾನವನ್ನು ಸಲ್ಲಿಸಬೇಕಾಗಿತ್ತೋ, ನಿಮ್ಮ ವಿಜಯಕ್ಕಾಗಿ ಸ್ವಸಂತೋಷದಿಂದ ಯಾರು ಮರಣವನ್ನಪ್ಪಿದರೋ, ಯಾರನ್ನು ನೀವು ಪರಮ ಶತ್ರು ಎಂದು ಭಾವಿಸಿ ಕೊಂಡು ಬಂದಿರುತ್ತೀರೋ, ಯಾವ ಮಹಾಪುರುಷನಿಗೆ ನಿಮ್ಮ ಋಣಾನು ಬಂಧದ ಅರಿವು ಸಂಪೂರ್ಣವಾಗಿ ತಿಳಿದಿದ್ದರೂ ನೀವು ಆ ಮಹಾಪುರುಷನಿಗೆ ತಿಲಾಂಜಲಿಯನ್ನೀಯಲಿಲ್ಲವೋ ? ಅಂಥ ಮಹಾಪುರುಷನೊಬ್ಬನು ಉಳಿದು ಹೋಗಿದ್ದಾನೆ."

ಕೃಷ್ಣನ ಈ ಮಾತುಗಳಿಂದ ಧರ್ಮರಾಜನ ಮನಸ್ಸು ವ್ಯಾಕುಲ ಗೊಂಡಿತು.

"ಕೃಷ್ಣಾ, ಪಿತಾಮಹ ಭೀಷ್ಮರನ್ನು ಕುರಿತು ನೀನು ಈ ಮಾತನ್ನು ಹೇಳುತ್ತಿರುವೆಯಾ ? ಅವರು ಇಚ್ಛಾಮರಣಿಗಳಲ್ಲವೆ ? ಉತ್ತರಾಯಣದ

ಪುಣ್ಯಕಾಲವನ್ನು ಅವರು ನಿರೀಕ್ಷಿಸುತ್ತಿಲ್ಲವೆ? ಅಥವಾ ಅವರಿಗೂ ಅಪ ಮೃತುವಿನ ಬಾಧೆಯೆ ?"

"ಇಲ್ಲ ಧರ್ಮರಾಜಾ, ಭೀಷ್ಮರ ಬಗ್ಗೆ ನೀನು ಚಿಂತಿಸುವ ಕಾರಣವಿಲ್ಲ, ನಾನು ಸೂಚಿಸುತ್ತಿರುವುದು ಮಹಾರಥಿಯಾದ ಕರ್ಣನ ಹೆಸರನ್ನು."

ಧರ್ಮರಾಜನ ಹೃದಯಾಂತರಾಳದಲ್ಲಿ ಹುದುಗಿಕೊಂಡಿದ್ದ ಸಿಟ್ಟೆಲ್ಲ 'ಕರ್ಣ ! ದಾಸೀಪುತ್ರ' ಎಂಬ ಶಬ್ದಗಳಿಂದ ಹೊರಹೊಮ್ಮಿ ಬಂದಿತು.

"ಕೃಷ್ಣಾ, ನನ್ನ ಶಾಂತಸ್ವಭಾವಕ್ಕೂ ಒಂದು ಮಿತಿ ಇದೆ. ನನ್ನ ನೀತಿ ನಿಯಮಗಳಿಗೂ ಒಂದು ಬಂಧನವಿದೆ. ನಾನು ಪರಮಶತ್ರು ಎಂದು ಭಾವಿಸಿ ಕೊಂಡವನಿಗೆ ತರ್ಪಣಾದಿಗಳನ್ನೀಯುವುದೇ ? ಇಲ್ಲ, ಎಂದಿಗೂಸಾಧ್ಯವಿಲ್ಲ."

"ಅತ ನಿನ್ನ ಬಂಧುವಾಗಿದ್ದರೂ ?...."

"ಒಂದು ವೇಳೆ ನಾನು ಕೌರವರಿಗೆ ತಿಲಾಂಜಲಿಯನ್ನೀಯಬಹುದು. ಆದರೆ ಕರ್ಣನಿಗೆ ಮಾತ್ರ ಎಂದೂ ಸಾಧ್ಯವಿಲ್ಲ."

"ಧರ್ಮರಾಜಾ, ಶಾಂತನಾಗು. ಕರ್ಣ ಬೇರೆ ಯಾರೂ ಅಲ್ಲ, ಆತ ನಿಮ್ಮೆಲ್ಲರ ಹಿರಿಯ ಸೋದರ. ಕಾಲನ ಮುಂದೆ ಯಾರ ಆಟವೂ ಸಾಗ ಲಾರದು. ನಿನ್ನ ತಾಯಿಯಾದ ಕುಂತಿ ಇನ್ನೂ ಕೌಮಾರಾವಸ್ಥೆಯಲ್ಲಿರು ವಾಗಲೇ ಸೂರ್ಯದೇವನ ಅನುಗ್ರಹದಿಂದ ಈ ಕರ್ಣನನ್ನು ಪಡೆದುಕೊಂಡಿ ದ್ದಳು. ಆದುದರಿಂದಲೇ ಆತ ನಿಮ್ಮೆಲ್ಲರಿಗಿಂತ ಹಿರಿಯನಾದವನು. ಅವನು ದಾಸೀಪುತ್ರನಲ್ಲ. ಶ್ರೇಷ್ಠ ಕೌಂತೇಯನಾಗಿದ್ದಾನೆ. ಆದುದರಿಂದಲೇ ನಾನು ನಿಮಗೆ ಹೇಳುತ್ತಿರುವೆ. ಮಹಾರಥಿಯಾದ ಕರ್ಣನು ಕೌಂತೇಯನೆಂಬ ಆದರ ಭಾವದಿಂದಲೂ, ಮಹಾದಾನಿಯಾದುದರಿಂದ ಕೃತಜ್ಞತಾಭಾವ ದಿಂದಲೂ, ಜೇಷ್ಠನಾದುದರಿಂದ ಆತ್ಮೀಯ ಭಾವದಿಂದಲೂ ಮಹಾಪುರುಷ ನೆನಿಸಿದ್ದಾನೆ. ಆದ್ದರಿಂದ ನೀನು ಆತನಿಗೆ ತಿಲಾಂಜಲಿಯನ್ನೀಯಲೇ ಬೇಕಾಗುವುದು. ಅದು ನಿನ್ನ ಧರ್ಮವೆಂದೆನಿಸಿಕೊಳ್ಳುವುದು."

ಕೃಷ್ಣನ ಈ ಮಾತುಗಳಿಂದ ಧರ್ಮರಾಜನ ಬಲವೆಲ್ಲ ಉಡುಗಿ ಹೋಯಿತು. ಆತನು ಬಹು ಪ್ರಯಾಸದಿಂದ ತನ್ನ ಬೊಗಸೆಯಲ್ಲಿ ಗಂಗಾ ಜಲವನ್ನೆತ್ತಿಕೊಂಡು, "ವಿಜಯದ ಅಹಂಕಾರದಿಂದ, ಅಜ್ಞಾನದ ಮೋಹ ದಿಂದ, ಯಾವಾಗಲೂ ನಿನ್ನ ಮರಣವನ್ನೇ ಚಿಂತಿಸುತ್ತಿದ್ದ ಈ ಧರ್ಮರಾಜನು

ಇಂದು ಈ ಗಂಗಾಮಾತೆಯ ಸಾಕ್ಷಿಯಾಗಿ ನಮಗೆಲ್ಲರಿಗೂ ಜ್ಯೇಷ್ಠನೂ ಶ್ರೇಷ್ಠನೂ ಆಗಿದ್ದ ನಿನಗೆ ಇಗೋ ಈ ಸೋದರನು........"

ಮುಂದೆ ಆತನಿಂದ ಮಾತುಗಳೇ ಹೊರಡದಂತಾದವು. ಆತನ ಸರ್ವಾಂಗವು ಕಂಪಿಸುತ್ತಿತ್ತು. ನಡುಗುವ ಕೈಗಳಲ್ಲಿ ಹಿಡಿದುಕೊಂಡಿದ್ದ ಗಂಗಾಜಲವು ಯಾವಾಗಲೋ ಸೋರಿಹೋಗಿತ್ತು. ಅದನ್ನು ತುಂಬುವುದ ಕ್ಕಾಗಿಯೇ ಆತನ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿದ್ದವು.

ಪಾಂಡವರ ಅಂತಃಕರಣಕ್ಕೆ ಅಂದು ಬಹು ದೊಡ್ಡ ಸಿಡಿಲು ಬಡಿದಂತಾ ಗಿತ್ತು. ಸುಡುತ್ತಲಿರುವ ಮರಳಿನ ರಾಶಿಯ ಮೇಲೆ ಕುಳಿತುಕೊಂಡಿದ್ದ ಅರ್ಜುನನು ತನ್ನ ಬೊಗಸೆ ಕೈಗಳಲ್ಲಿ ಮರಳನ್ನೆತ್ತಿ ಹಾಕುತ್ತಲಿದ್ದನು. ಕಣ್ಣು ಹನಿಗೂಡಿದ್ದವು. 'ಕರ್ಣ ದಾಸೀಪುತ್ರನಲ್ಲ ; ನಮ್ಮೆಲ್ಲರ ಹಿರಿಯ ಸೋದರ' ಕೃಷ್ಣನ ಈ ಮಾತುಗಳು ಆತನ ಹೃದಯಾಂತರಾಳದ ಅಂತಃ ಕರಣಕ್ಕೆ ನಗಾರಿಯ ಪೆಟ್ಟಿನಂತೆ ಬಂದು ಅಪ್ಪಳಿಸುತ್ತಲಿದ್ದವು.

ರಣಭೂಮಿಯಲ್ಲಿ ಆತನೊಂದಿಗೆ ಯುದ್ಧ ನಿರತನಾದಾಗ ನಾನು ಅದೆಷ್ಟು ಸಲ ದಾಸೀಪುತ್ರ ಎಂದು ಅವಹೇಳನ ಮಾಡಲಿಲ್ಲ ! ಸ್ವಯಂವರ ದಲ್ಲಿ ಮತ್ಸ್ಯಯಂತ್ರಭೇದನ ಮಾಡಲು ಆವನು ಮುಂದಾದಾಗ ಆತನ ಪರಾಕ್ರಮವನ್ನಾಗಲೀ ಅಥವಾ ಕೀರ್ತಿಯನ್ನಾಗಲೀ ಗಣನೆಗೆ ತಾರದೆ ಎಲ್ಲರೂ ಅವನನ್ನು ತುಳಿದು ಬಿಟ್ಟರಲ್ಲ ; ನಿರಪರಾಧಿಯಾದ ಈತನ ಮೇಲೆ ದ್ರೌಪ ದಿಯ ವಸ್ತ್ರಾಪಹರಣದ ಆರೋಪವನ್ನು ಹೊರಿಸಲಾಯಿತಲ್ಲ ; ಹೇ ಮಹಾ ಬಾಹೋ, ಅಭಿಮನ್ಯುವಿನ ಸಂಹಾರಕಾರ್ಯದಲ್ಲಿ ನಿನ್ನ ಕೈವಾಡವೇನೂ ಇದ್ದಿಲ್ಲವೆಂಬ ಮಾತನ್ನು ನಾನು ಅನಂತರ ತಿಳಿದುಕೊಂಡೆ. ಆದರೂ ಸೇಡಿ ನಿಂದ ನಿನ್ನ ಮಗನನ್ನು ನಾನು ಸಂಹರಿಸಿದೆನಲ್ಲ : ಆಗಲೂ ನೀನು ಚಕಾರ ಶಬ್ದವನ್ನೆತ್ತದೆ ಸುಮ್ಮನಿದ್ದೆಯಲ್ಲ, ಅದಕ್ಕೆಲ್ಲ ಕಾರಣವೇನು ? ಎಂಬುದು ಈಗ ನನಗೆ ಅರ್ಥವಾಗುತ್ತಲಿದೆ. ಆದರೆ ಅದರಿಂದೇನು ಪ್ರಯೋಜನ ? ಅರ್ಜುನ ಅಂತರ್ಮುಖಿಯಾಗಿ ಹೀಗೆ ಯೋಚಿಸುತ್ತಲಿದ್ದ. ಆತನ ಸಮೀ ಪಕ್ಕೆ ಯಾರೋ ಬರುತ್ತಿರುವಂತೆನಿಸಿತು. ಆದರೂ ಆತ ಕಣ್ಣೆತ್ತಿಯೂ ಅತ್ತ ನೋಡಲಿಲ್ಲ. ಆತನು ಸರಿದಂತೆಲ್ಲ ಆ ಕಪ್ಪು ನೆರಳೂ ಸಹ ಆತನನ್ನನು

ಸರಿಸಿ ಬರುತ್ತಲಿತ್ತು. ಸಾವರಿಸಿಕೊಂಡು ಮೇಲೆದ್ದ ಅರ್ಜುನನು ಅತ್ಯಂತ ತಿರಸ್ಕಾರದಿಂದ ಕೂಗಿಕೊಂಡ

"ಕೃಷ್ಣಾ, ನಿಲ್ಲು, ಮುಂದೆ ಒಂದು ಹೆಜ್ಜೆಯನ್ನೂ ಇಡಬೇಡ. ನಿನ್ನ ಪಾಪದ ಕೈಗಳಿಂದ ನನ್ನನ್ನು ಮುಟ್ಟಬೇಡ. ನಾವು ಇಂಥ ಕಲಂಕಿತವಾದ ಸಾಮ್ರಾಜ್ಯವನ್ನು ಅಪೇಕ್ಷಿಸಿದ್ದೇವೆಯೋ? ನಾವು ಕಾಡಿನಲ್ಲಿ ಜನ್ಮ ತಾಳಿದವರು. ನಮ್ಮ ಜೀವನವೆಲ್ಲ ಕಾಡಿನಲ್ಲಿಯೇ ಕಳೆಯುವಂತಾಗಿದ್ದರೆ? ಬಹು ಸುಖದಿಂದ ಜೀವಿಸುತ್ತಿದ್ದೆವು. ಅಗ್ನಿದೇವನ ವರಪ್ರಸಾದದಿಂದ ಪಡೆದು ಕೊಂಡ ಈ ನನ್ನ ಗಾಂಡೀವಧನುಸ್ಸು ಕೇವಲ ನನ್ನ ಹಿರಿಯಣ್ಣನ ಸಂಹಾರಕ್ಕಾಗಿಯೇ ಎಂದಂತಾಯಿತಲ್ಲವೇ? ನಮ್ಮ ಈ ಸಂಬಂಧವನ್ನು ನೀನು ಚೆನ್ನಾಗಿ ಅರಿತವನಾಗಿದ್ದೆ, ಆದರೂ ಅಕ್ಷಮ್ಯ ಅಪರಾಧಕ್ಕೆ ನಾವು ಬಲಿಯಾಗುವಂತೆ ನೀನು ಮಾಡಿದೆ. ನಾವೆಲ್ಲ ನಿನ್ನ ಮೇಲಿಟ್ಟಿರುವ ವಿಶ್ವಾಸಕ್ಕೆ ಇದೇ ಪ್ರತಿಫಲವೇ? ನೀನೇ ನಮ್ಮೆಲ್ಲರ ಅಧೋಗತಿಗೆ ಕಾರಣ ನಾಗುವಿ ಎಂಬ ಮಾತನ್ನು ಕನಸಿನಲ್ಲಿಯೂ ನಾನು ಚಿಂತಿಸಿರಲಿಲ್ಲ."

ಅರ್ಜುನನ ಮನಸ್ಸು ದುಃಖದಿಂದ ತುಂಬಿಹೋಗಿತ್ತು. ಆತನು ಕೃಷ್ಣ ನತ್ತ ಹೊರಳಿಯೂ ಸಹ ನೋಡದೆ ಹೊರಟು ಹೋದನು. ಆಗ ಉಳಿದೆಲ್ಲ ಸೋದರರೂ ಆತನನ್ನೇ ಅನುಸರಿಸಿಕೊಂಡು ಹೋದರು.

ಕೃಷ್ಣನ ಗಮನವು ಆಗ ಕುಂತಿಯತ್ತ ಹೊರಳಿತು. ಅವಳ ಪಕ್ಕದಲ್ಲಿ ದ್ರೌಪದಿ ಬಹಳ ವಿಸ್ಮಿತಳಾಗಿ ನಿಂತುಕೊಂಡಿದ್ದಳು. ಅವಳ ತುಟಿಗಳು ನಡುಗುತ್ತಿದ್ದವು. ಆಗಾಗ ಅವಳು ತನ್ನ ಅಂಗೈಯನ್ನು ನೋಡಿಕೊಳ್ಳು ತ್ತಿದ್ದಳು. ಇದ್ದಕ್ಕಿದ್ದಂತೆ ಅವಳ ಬಲಗೈ ಹಣೆಯ ಮೇಲಿರುವ ಕುಂಕುಮ ದತ್ತ ಹೋಯಿತು. ಅದನ್ನು ಕಂಡ ಕೃಷ್ಣನು ಧಾವಿಸಿ ಬಂದು ಅವಳ ಕೈಯನ್ನು ತಡೆ ಹಿಡಿದು ನಿಲ್ಲಿಸಿದನು. ಕೃಷ್ಣನ ಹಸ್ತ ಸ್ಪರ್ಶವಾದಾಗಲೇ ಅವಳಿಗೆ ಬಾಹ್ಯಪ್ರಜ್ಞೆ ಬಂದಂತಾಯಿತು. ಅವಳು ತನ್ನಂತೆಯೇ ಅಂತರಂಗ ದಲ್ಲಿ ದುಃಖಿಸುತ್ತಿದ್ದ ಕೃಷ್ಣನ ಮುಖವನ್ನು ನೋಡಿದಳು.

"ಕೃಷ್ಣಾ, ಅಪೇಕ್ಷಿಸಿದುದನ್ನೆಲ್ಲ ಕಳೆದುಕೊಳ್ಳುವುದೇ ನನ್ನ ಹಣೆಯಲ್ಲಿ ಬರೆದಿದೆಯೋ?"

ಕುಂತೀಮಾತೆಯು ಬಹು ಪರಶ್ರಮದಿಂದ ಮೇಲೆದ್ದಳು. ವಿರಹ ವೇದನೆಯು ಅವಳ ಸರ್ವಾಂಗವನ್ನೆಲ್ಲ ವ್ಯಾಪಿಸಿತ್ತು. ಕುಂತಿಯೊಂದಿಗೆ ದ್ರೌಪದಿಯೂ ಹೊರಟು ಹೋದಳು.

ಶಾಂತವಾಗಿ ಹರಿಯುತ್ತಿದ್ದ ಆ ಗಂಗಾ ಪ್ರವಾಹದ ದಂಡೆಯಲ್ಲಿ ಈಗ ಕೃಷ್ಣನೊಬ್ಬನೇ ನಿಂತುಕೊಂಡಿದ್ದನು. ಅಸ್ತಂಗತನಾಗಲಿರುವ ಸೂರ್ಯದೇವ ನನ್ನೇ ಆತನು ತದೇಕಚಿತ್ತದಿಂದ ನೋಡುತ್ತಲಿದ್ದನು.

# ರಾಧೇಯ

ಸೂರ್ಯದೇವನು ನಿತ್ಯದ ತನ್ನ ಪಯಣನ್ನಾರಂಭಿಸಿದ್ದ. ಆತ ಪಯಣದ ಮಧ್ಯಬಿಂದುವನ್ನು ತಲುಪುತ್ತಲಿದ್ದ. ಆದುದರಿಂದ ಬಿಸಿಲಿನ ತಾಪವು ನಿಮಿಷ ನಿಮಿಷಕ್ಕೂ ಹೆಚ್ಚುತ್ತಲಿತ್ತು. ಆದರಿಂದ ಭೂಮಿಯು ಹುರುಪಳಿಸಿ ಹೋದಂತೆ ಭಾಸವಾಗುತ್ತಿತ್ತು. ಇದಾವುದನ್ನೂ ಲೆಕ್ಕಿಸದೆ ಕರ್ಣ ತನ್ನ ದಿನನಿತ್ಯದ ಸೂರ್ಯೋಪಾಸನೆಯಲ್ಲಿ ನಿರತನಾಗಿದ್ದ. ಬೊಗಸೆ ತುಂಬಿದ ಗಂಗಾಜಲವನ್ನೆತ್ತಿಕೊಂಡು ಸೂರ್ಯದೇವನಿಗೆ ಅರ್ಘ್ಯವನ್ನೀಯುತ್ತಲಿದ್ದ. ಆತನು ಈ ಕಾರ್ಯವನ್ನಾರಂಭಿಸಿದಾಗ ಬಂಗಾರದ ಹೊಂಬಣ್ಣಗಳಿಂದ ಕೂಡಿದ ಸೂರ್ಯಕಿರಣಗಳು ಆತನ ಮುಖದ ಮೇಲೆ ಲಾಸ್ಯವಾಡುತ್ತಿದ್ದವು. ಸಮಯ ಸರಿದಂತೆಲ್ಲ ಮೇಲಕ್ಕೇರುತ್ತ ಹೋಗಿ ಈಗ ಆತನ ಹಿಂಬದಿಗೆ ಸರಿಯುತ್ತಲಿದ್ದವು. ಮಹಾ ತೇಜಸ್ವಿಯಾದ ಗೌರವರ್ಣದಿಂದ ಕೂಡಿದ, ರೂಪಸಂಪನ್ನನಾದ ಕರ್ಣನು ಆ ಗಂಗಾಜಲದಲ್ಲಿ ಸಾಕ್ಷಾತ್ ಸೂರ್ಯನಾರಾಯಣನ ಪ್ರತಿರೂಪವಾಗಿ ಕಾಣಬರುತ್ತಿದ್ದ. ನಿತ್ಯದ ಪೂಜಾ ವಿಧಾನವನ್ನು ಮುಗಿಸಿದ ನಂತರ ತನ್ನ ಎರಡೂ ಕೈಗಳಿಂದ ಗಂಗಾಜಲವನ್ನು ತುಂಬಿಕೊಂಡು ಆ

ಸೂರ್ಯದೇವನಲ್ಲಿಯೇ ದೃಷ್ಟಿಯನ್ನಿಟ್ಟು, "ಯಾರಾದರೂ ಯಾಚಕರು ಇದ್ದಾರೆಯೇ ?" ಗಂಭೀರವಾಣಿಯಿಂದ ಪ್ರಶ್ನೆ ಮಾಡಿದ.

ಕರ್ಣನು ಹೀಗೆ ಮೂರು ಸಲ ಯಾಚಕರಿಗಾಗಿ ಪ್ರಯತ್ನಿಸಿದ. ಯಾವ ಧ್ವನಿಯೂ ಕಿವಿಗೆ ಬೀಳದಿದ್ದಾಗ ಬೊಗಸೆ ತುಂಬಿದ ಗಂಗಾಜಲವನ್ನು ಪ್ರವಾಹದಲ್ಲಿಯೇ ಹರಿಬಿಟ್ಟು ಭಕ್ತಿಯಿಂದ ಆ ಜಲವನ್ನು ಕಣ್ಣಿಗೆ ಅಂಟಿಸಿ ಕೊಂಡು, ಅನಂತರ ಆ ಪ್ರವಾಹದಿಂದ ಹೊರಬರಲು ಸಿದ್ಧನಾದ. ನದಿಯ ದಂಡೆಯಲ್ಲಿದ್ದ ವಸ್ತ್ರಗಳನ್ನುಟ್ಟು, ಪಾದತ್ರಾಣಗಳನ್ನು ಹಾಕಿಕೊಂಡು, ಉಟ್ಟ ವಸ್ತ್ರಗಳನ್ನು ಸರಿಮಾಡಿಕೊಂಡು ಮುನ್ನಡೆದ. ಆತ ಇನ್ನೂ ನಾಲ್ಕು ಹೆಜ್ಜೆ ಮುಂದೆ ಸಾಗಿರಲಿಲ್ಲ. ಅವಸಿಗರಿವಿಲ್ಲದಂತೆ ಆತನ ನಡಿಗೆ ನಿಂತು ಹೋಯಿತು. ನಡುಮಧ್ಯಾಹ್ನದಲ್ಲಿ ಸುವರ್ಣರಥವು ಗಂಗಾತೀರದಲ್ಲಿದ್ದು ದನ್ನು ಕಂಡು ಆತನು ಚಕಿತನಾಗಿ ಹೋದ.

ಪ್ರತಿದಿನವೂ ಸೂರ್ಯೋಪಾಸನೆಗೆಂದು ಬರುವಾಗ ಕರ್ಣನು ತನ್ನ ರಥ ಹಾಗೂ ಸಾರಥಿಯನ್ನು ನದಿಯ ಪಾತ್ರದಿಂದ ಬಹುದೂರದಲ್ಲಿರುವ ಮರದ ನೆರಳಿನಲ್ಲಿ ಬಿಟ್ಟು ಬರುವುದು ನಿತ್ಯದ ಪದ್ಧತಿಯಾಗಿತ್ತು. ದಾನ ಕೇಳಲು ಬರುವ ಯಾಚಕರಿಗೆ ಯಾವುದೇ ತರಹದ ಸಂಕೋಚವಾಗಬಾರದೆಂದು ಆತನು ಹೀಗೆ ಮುಂಜಾಗರೂಕತೆ ವಹಿಸುತ್ತಿದ್ದ. ತಾನು ದಾನ ಕೊಡುವಾಗಲೂ ತನ್ನಿಂದ ದಾನ ಸ್ವೀಕರಿಸುವ ವ್ಯಕ್ತಿಯ ಮುಖ ಕಾಣಿಸದಂತೆ ನೋಡಿಕೊಳ್ಳು ತ್ತಿದ್ದ. ಯಾಚಕರು ಕೇಳುವುದೇ ತಡ ಕರ್ಣನು ಆತನ ಬೇಡಿಕೆಯನ್ನು ಧಾರಾ ಪೂರ್ವಕವಾಗಿ ಕೊಡುವುದು ಅವನ ಒಂದು ಸಂಕಲ್ಪವಾಗಿತ್ತು. ಯಾಚಕನ ಮುಖ ನೋಡಿದಾಗ ದಾನಿಯಾದ ತನ್ನ ಮನಸ್ಸು ವಿಚಲಿತವಾಗಬಾರದೆಂದು ಇಂಥ ವ್ಯವಸ್ಥೆಯನ್ನು ರೂಢಿಸಿಕೊಂಡು ಬಂದಿದ್ದ. ಇಂದು ಆ ಗಂಗಾ ತೀರದಲ್ಲಿ ಸುವರ್ಣರಥವನ್ನು ಕಂಡಾಗ ಅತನಿಗೆ ತುಂಬ ಆಶ್ಚರ್ಯವಾಯಿತು. ಯಾರು ಬಂದಿರಬಹುದು ? ಎಂದು ಯೋಚಿಸುತ್ತ ಮುಂದೆ ಸಾಗಿದ. ದುರ್ಯೋಧನನ ನೆನಪಿನಿಂದ ಮನಸ್ಸು ಅರಳಿತು. ಯುವರಾಜನ ಭೇಟಿ ಯಾಗದೆ ತುಂಬ ದಿನಗಳಾಗಿ ಹೋಗಿದ್ದವು.

ಕರ್ಣನ ದೃಷ್ಟಿ ಆ ರಥದತ್ತ ಕೇಂದ್ರೀಕೃತವಾಗಿತ್ತು. ರಥದ ಮಧ್ಯ ದಲ್ಲಿ ಸುಂದರವಾದ ವ್ಯಾಘ್ರಾಸನವು ಕಾಣಬರುತ್ತಿತ್ತು. ರಥದ ಮೇಲಿರುವ

ಧ್ವಜವನ್ನು ನೋಡಿದಾಗ ಹಾರುತ್ತಿದ್ದ ಪತಾಕೆಯಲ್ಲಿ ಗರುಡನ ಚಿಹ್ನೆಯಿರುವುದು ಕಾಣಬಂದಿತು. ಯುವರಾಜನಾದ ದುರ್ಯೋಧನನ ರಥದ ಮೇಲಿರುವ ಧ್ವಜದಲ್ಲಿ ರತ್ನಯುಕ್ತ ಆನೆಯು ಗುರುತಿರುವುದು ಪದ್ಧತಿ. ಆದರೆ ಈ ರಥದ ಮೇಲೆ ಗರುಡ ಧ್ವಜವಿದೆ. ಹಾಗಾದರೆ ಈ ರಥ! ಕರ್ಣನ ಮನಸ್ಸು ತುಂಬ ಉತ್ಸಾಹ ಗೊಂಡಿತು. ಕರ್ಣನು ರಥದ ಸಮೀಪಕ್ಕೆ ಬಂದೊಡನೆ ಕಂಡ ಸೇವಕನು ಆತನ ಸಮ್ಮುಖಕ್ಕೆ ಬಂದು ವಂದನೆಗಳನ್ನು ಸಲ್ಲಿಸಿ "ದ್ವಾರಕಾಧೀಶರಾದ ಶ್ರೀ ಕೃಷ್ಣ ಮಹಾರಾಜರು ತಮ್ಮ ನಿರೀಕ್ಷೆಯಲ್ಲಿದ್ದಾರೆ." ಎಂದು ಹೇಳಿದನು.

ಕೃಷ್ಣನ ವಿಚಾರವನ್ನು ಕುರಿತು ಕರ್ಣನು ಸಾಕಷ್ಟು ತಿಳಿದುಕೊಂಡಿದ್ದ. ಸಾಮ್ರಾಟ ಕಂಸನನ್ನು ಸಂಹಾರ ಮಾಡಿದ, ರುಕ್ಮಿಣಿಯನ್ನು ಅಪಹರಿಸಿದ, ಸುಂದರವಾದ ದ್ವಾರಕಾ ನಗರವನ್ನು ನಿರ್ಮಿಸಿದ ಆ ಮಹಾನುಭಾವನು ಇಂದು ತಾನಾಗಿಯೇ ನನ್ನನ್ನು ಹುಡುಕಿಕೊಂಡು ಬಂದಿದ್ದಾನೆ. ಈ ಮಾತನ್ನು ನೆನೆದಾಗ ಕರ್ಣನಿಗೆ ವಿಶ್ವಾಸವಾಗಲಿಲ್ಲ. ಕೃಷ್ಣನ ಸಾತ್ವಿಕ ರೂಪ, ಆತನ ಪರಾಕ್ರಮ, ಪರಿಸರವನ್ನಾವರಿಸುವ ಆತನ ದೈವೀ ಸಂಪನ್ನತೆಯ ಗುಣ ಇವುಗಳನ್ನು ಕುರಿತು ಅನೇಕರಿಂದ ಆತ ಕೇಳಿ ತಿಳಿದುಕೊಂಡಿದ್ದ. ಕೃಷ್ಣದರ್ಶನವಾಗುವುದೆಂಬ ಭಾವನೆ ಆತನ ಹೃದಯವನ್ನು ಪವಿತ್ರಗೊಳಿಸಿತು. ಏನು ಮಾಡಬೇಕು? ಕೃಷ್ಣನ ಸಮ್ಮುಖದಲ್ಲಿ ಹೇಗೆ ಹೋಗಬೇಕು ಎಂಬುದೇ ತೋಚದಂತಾಯಿತು. ನಿಂತ ಸ್ಥಳದಲ್ಲಿಯೇ ಆತನ ಕಾಲುಗಳು ಕುಸಿಯಲಾರಂಭಿಸಿದವು. ಅಧೀರ ನೇತ್ರಗಳಿಂದ ಆತ ಕೃಷ್ಣನ ನೆರಳನ್ನು ಹುಡುಕಲಾರಂಭಿಸಿದನು.

ಕರ್ಣನಿಗೆ ಹೆಚ್ಚು ಹೊತ್ತು ಕಾಯಬೇಕಾಗಲಿಲ್ಲ. ಕೃಷ್ಣನು ರಥದಿಂದಿಳಿದು ಬಂದ. ರತ್ನ ಖಚಿತವಾದ ಕಿರೀಟವು ಆತನ ತಲೆಯ ಮೇಲೆ ಶೋಭಿಸುತ್ತಿತ್ತು. ಪೀತಾಂಬರಧಾರಿಯಾದ ಆತನ ಹೆಗಲ ಮೇಲೆ ಹಸಿರು ರೇಷ್ಮೆಯ ಉತ್ತರೀಯವಿತ್ತು. ಆ ಕಪ್ಪು ರೂಪದಲ್ಲಿ ವಿಲಕ್ಷಣವಾದ ಮೋಹಕತೆಯು ಅಡಗಿದಂತೆ ತೋರುತ್ತಿತ್ತು. ಮುಖ ಕಮಲದಲ್ಲಿ ಎದ್ದು ತೋರುವ ಮಂದಹಾಸವು ಅಪರಿಚಿತರಿಗೂ ವಿಶ್ವಾಸವನ್ನುಂಟು ಮಾಡುತ್ತಿತ್ತು. ಕರ್ಣನು ಆ ಕೃಷ್ಣ ರೂಪವನ್ನೇ ನೋಡುತ್ತಲಿದ್ದ. ಮಾನವ ವೇಷಧಾರಿಯಾಗಿ

ಸಾಕ್ಷಾತ್ ಜಗದೀಶ್ವರನೇ ಈ ಪೃಥ್ವಿಯ ಮೇಲೆ ಅವತರಿಸಿರುವನೆಂಬ ಭಾವನೆ ಕರ್ಣನ ಮನದಲ್ಲಿ ಉಂಟಾಯಿತು.

ಕರ್ಣನನ್ನೇ ನೋಡುತ್ತಿದ್ದ ಕೃಷ್ಣನು ಆತನನ್ನು ಸಮೀಪಿಸಿದನು. ಕರ್ಣನು ತಾಲವೃಕ್ಷದಂತೆ ಎತ್ತರವಾಗಿದ್ದ. ಆತನ ದೇಹವು ಬಲಶಾಲಿಯಾದ ಸಿಂಹದ ಶರೀರದಂತಿತ್ತು. ಕೃಷ್ಣನ ದೃಷ್ಟಿಯು ಸಹಜವಾಗಿ ಆತನ ಕವಚ ಕುಂಡಲದತ್ತ ಸ್ಥಿರಗೊಂಡಿತು. ಬೆವರೊಡೆದು ಹೊದ್ದ ಉತ್ತರೀಯವು ಮೈಗೆ ಗಂಟಿಕೊಂಡಿದ್ದರೂ ಕರ್ಣನ ಆ ಕವಚದ ಅಸ್ತಿತ್ವವನ್ನು ಮಾತ್ರ ಆ ಉತ್ತರೀಯವು ಮುಚ್ಚಿಡಲು ಸಾಧ್ಯವಾಗಿರಲಿಲ್ಲ. ಸುವರ್ಣ ಪ್ರಕಾಶದಂತೆ ಕವಚ ಧರಿಸಿದ ಕರ್ಣನ ರೂಪವು ಕರ್ಣಕುಂಡಲಗಳಿಂದ ಮತ್ತಷ್ಟು ಅವನನ್ನು ಶೋಭಿಸುವಂತೆ ಮಾಡಿದ್ದವು. ಕೃಷ್ಣನು ಸಮೀಪಿಸುತ್ತಿದ್ದಂತೆ ನಮ್ರತೆಯಿಂದ ಕರ್ಣನು ನಮಸ್ಕರಿಸಿದನು. ತನ್ನ ಬಾಹುಗಳಿಂದ ಕೃಷ್ಣನು ಆತನನ್ನು ಆಲಿಂಗಿಸಿಕೊಂಡನು.

"ಅಂಗರಾಜ, ಒಂದು ವೇಳೆ ವಯಸ್ಸಿನಲ್ಲಿ ನೀವೇ ನನಗಿಂತ ಹಿರಿಯರಾಗಿರಬಹುದು. ಸಮವಯಸ್ಸಿನವರೊಂದಿಗೆ ಮಿತ್ರತ್ವವನ್ನು ಬೆಳೆಸಬೇಕು. ಆದರಲ್ಲಿ ಔಪಚಾರಿಕತೆ ಇರಬಾರದು. ನೀವು ನನ್ನನ್ನು ವಂದಿಸುವ ಅವಶ್ಯಕತೆ ಸ್ವಲ್ಪವೂ ಇರಲಿಲ್ಲ."

ಶ್ರೀಕೃಷ್ಣನ ಈ ಮಾತುಗಳಿಂದ ಕರ್ಣನ ಅಳಿದುಳಿದ ಲಕ್ಷ್ಯವೂ ಕಳೆದು ಹೋದಂತಾಯಿತು.

ಈ ಕೃಷ್ಣನಿಗಾಗಿಯೇ ಗೋಪಿಕೆಯರೆಲ್ಲ ತಮ್ಮನ್ನು ತಾವು ಮರೆತು ಹೋದುದರಲ್ಲಿ ಆಶ್ಚರ್ಯವೇನಿರಬಹುದು ?

ಕೊಳಲಿನ ಮಾಧುರ್ಯಕ್ಕಿಂತಲೂ ಈ ಮಹಾನುಭಾವನ ಶಬ್ದ ಮಾಧುರ್ಯವು ಇಂಪಾಗಿದೆ.

ಆಲಿಂಗನದಿಂದ ಬಿಡುಗಡೆ ಹೊಂದುತ್ತ ಕರ್ಣನು ಹೇಳಿದ.

"ತಮ್ಮ ದರ್ಶನದಿಂದ ನಾನು ಧನ್ಯನಾದೆ. ಒಂದು ವೇಳೆ ವಯಸ್ಸಿನಿಂದ ನಾನು ದೊಡ್ಡವನಿರಬಹುದು. ಬಾಲ್ಯದಲ್ಲಿಯೇ ನೀವು ಕಾಳಿಂಗ ಮರ್ದನ ಮಾಡಿ ಪರಾಕ್ರಮವನ್ನು ಗಳಿಸಿದಿರಿ. ಮಾನವನ ಹಿರಿಮೆ ವಯಸ್ಸಿನಿಂದ ಸಿದ್ಧವಾಗುವುದಿಲ್ಲ. ಅದು ಆತನ ಕರ್ತೃತ್ವ ಶಕ್ತಿ ಹಾಗೂ ಪರಾಕ್ರಮ

ದಿಂದ ಸಿದ್ಧಗೊಳ್ಳುವುದು. ತಮ್ಮ ಯಶಸ್ಸು, ಕೀರ್ತಿ ಹಾಗೂ ಸಾಮರ್ಥ್ಯ ಮೊದಲಾದ ಗುಣಗಳನ್ನು ಕುರಿತು ನಾನು ರಾಜಾಧಿರಾಜರಿಂದ, ಸಾಧುಸಂತ ರಿಂದ ಕೇಳಿ ತಿಳಿದುಕೊಂಡಿದ್ದೇನೆ. ದ್ವಾರಕಾಧೀಶರ ಸಮ್ಮುಖದಲ್ಲಿ ನತ ಮಸ್ತಕನಾಗಲು ನನಗೆ ಧನ್ಯತೆ ಎನಿಸುತ್ತದೆ." ಎಂದು ಹೇಳಿ ಬಹು ಸಂಕೋಚ ದಿಂದ "ನನ್ನ ಭೇಟಿಗಾಗಿ ತಾವು ಇಲ್ಲಿಯವರೆಗೆ ಬಂದಿರಿ, ಇದು ನನ್ನ ಮಹಾ ಭಾಗ್ಯವೆಂದು ತಿಳಿಯುತ್ತೇನೆ. ಈ ಭೇಟಿಗಾಗಿ ಬಿಸಿಲಿನ ಈ ತಾಪವನ್ನು ತಾವು ಸಹಿಸಬೇಕಾಯಿತು. ಅದಕ್ಕಾಗಿ ನನಗೆ ಕೆಡಕೆನಿಸುತ್ತಿದೆ. ತಾವು ಹೇಳಿ ಕಳಿಸಿದ್ದರೆ........?"

"ಕೆಡಕೆನಿಸಿಕೊಳ್ಳುವ ಅಗತ್ಯವೇನಿಲ್ಲ. ಅಂಗರಾಜ, ಮೊದಲು ನಾವು ನಿಮ್ಮ ಪ್ರಸಾದಕ್ಕೆ ಹೋಗಿದೆವು. ಅಲ್ಲಿ ನಮಗೆ ಯಥೋಚಿತವಾದ ಸತ್ಕಾರವು ದೊರೆಯಿತು. ಸೂರ್ಯೋಪಾಸನೆಗಾಗಿ ನೀವು ಗಂಗಾತೀರಕ್ಕೆ ಹೋದುದು ಅಲ್ಲಿಯೇ ತಿಳಿದು ಬಂದಿತು. ಆಗ ನಿಮ್ಮನ್ನು ನೋಡುವ ಬಯಕೆ ಹೆಚ್ಚಿತು. ನಿಮ್ಮ ರೂಪವನ್ನು ನೋಡಿ ಆನಂದಿಸಲು ಇಲ್ಲಿಯವರೆಗೆ ಬಂದಿರುವೆವು."

"ನನ್ನ ರೂಪ...."

"ಅಹುದು. ನಿಮ್ಮ ರೂಪದ ವರ್ಣನೆಯನ್ನು ನಾನು ತುಂಬ ಕೇಳಿ ದ್ದೇನೆ. ಅದಕ್ಕೂ ಹೆಚ್ಚಾಗಿ ಜನ್ಮಜಾತವಾದ ಈ ಕವಚಕುಂಡಲದ ವಿಷಯ ವನ್ನು ಕೇಳಿತಿಳಿದಿದ್ದೇನೆ. ಅವುಗಳನ್ನು ನೋಡಬೇಕೆಂಬ ಅಭಿಲಾಷೆಯುಳ್ಳವ ನಾಗಿದ್ದೇನೆ. ನಿಮ್ಮ ಈ ಕರ್ಣಕುಂಡಲಗಳನ್ನು ಯಾವಾಗ ಬೇಕಾದರೂ ನೋಡಬಹುದು. ಆದರೆ ಕವಚಧಾರಿಯಾದ ನಿಮ್ಮ ಈ ರೂಪವನ್ನು ಕಂಡು ಆನಂದಿಸಲು ಇದೇ ಸರಿಯಾದ ಸಮಯವೆಂದೆನಿಸಿತು. ಅಭೇದ್ಯವಾದ ಈ ಕವಚದ ಸ್ಪರ್ಶ ಸುಖವನ್ನೂ ಸಹ ನಿಮ್ಮ ಆಲಿಂಗನದಿಂದ ಅನುಭವಿಸಿದಂತಾಯಿತು. ಅದರಿಂದಾದ ಸುಖಾನುಭವವನ್ನು ನಾನೆಂದಿಗೂ ಮರೆಯಲಾರೆ."

ಕರ್ಣನ ಮುಖದಲ್ಲಿ ವ್ಯಥೆಯ ಒಂದು ರೇಖಾ ಮಿಂಚು ಹೊಳೆದು ಮಾಯವಾದಂತೆನಿಸಿತು. ಬಹು ಖಿನ್ನಮನಸ್ಕನಾಗಿ

"ಕವಚಕುಂಡಲಗಳು ! ಜನ್ಮಜಾತವಾದ ಈ ಕವಚ ಕುಂಡಲಗಳು ! ಜನ್ಮದೊಂದಿಗೆ ಅಂಟಿಕೊಂಡು ಬಂದ ಈ ಆಭರಣಗಳೇ ಆ ಅಜ್ಞಾತ ಮಾತೆಗೆ

ಅಸಹನೆಯನ್ನುಂಟು ಮಾಡಿರಬಹುದು. ಇಲ್ಲವಾದರೆ ಯಾವ ತಾಯಿ ಯಾದರೂ ಪ್ರವಾಹಕ್ಕೆ ಮಗುವನ್ನು ತೇಲಿಬಿಡಲು ಸಾಧ್ಯವೇ? ಹೀಗೆ ಮಾಡಿದವರಾರು? ಅಥವಾ ಹೀಗೆ ನಡೆದು ಕೊಳ್ಳಲು ಕಾರಣವೇನು? ಈ ವಿಷಯಗಳನ್ನು ತಿಳಿದುಕೊಳ್ಳುದಕ್ಕಾಗಿಯೇ ನನ್ನ ಅಂತರಾತ್ಮವು ಯಾವಾಗಲೂ ಪ್ರಯತ್ನಿಸುತ್ತಲಿದೆ. ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡಿಕೊಳ್ಳುವಾಗ, ಈ ಕವಚ ಕುಂಡಲಗಳ ಮೇಲೆ ನನ್ನ ದೃಷ್ಟಿಯು ಹರಿದಾಗ, ಅದಾವುದೋ ಒಂದು ಆಕೃತಿ ಕಾಣಿಸಿದಂತಾಗುತ್ತದೆ. ಹೀಗಿದ್ದರೂ ರೂಪಸಂಪನ್ನಳೂ ಮಹಾತೇಜಸ್ವಿನಿಯೂ ಆದ ಅವಳ ರೂಪವು ಮಾತ್ರ ನನಗೆ ಕಾಣದಂತಾಗುತ್ತದೆ. ಅದೇಕೋ ಅವಳ ಮುಖವು ಸೆರಗಿನಿಂದ ಮುಚ್ಚಿದಂತಿರುತ್ತದೆ ಹೆತ್ತೊಡನೆ ನೀರಿನಲ್ಲಿ ಚೆಲ್ಲಿದ ಆ ತಾಯಿಗೆ ಈ ಕವಚ ಕುಂಡಲಗಳ ಬಗ್ಗೆ ಒಲವು ಅಭಿಮಾನ ಹೇಗೆ ಪ್ರಾಪ್ತವಾದೀತು? ಕೃಷ್ಣ, ನನ್ನ ಶಾಪಿತ ಜೀವನ ಪ್ರವಾಹದೊಂದಿಗೆ ಈ ಕವಚ ಕುಂಡಲಗಳೂ ತೇಲಿಕೊಂಡು ಬಂದಿವೆ. ವಿಧಿ ನನ್ನ ಹಣೆಯಲ್ಲಿ ಒರೆದ ಜೀವನವೇ ಇದಾಗಿರಬಹುದು."

ಕೃಷ್ಣನು ತನ್ನ ಬಲಗೈಯನ್ನೆತ್ತಿ ಕರ್ಣನ ಹೆಗಲ ಮೇಲಿಟ್ಟ. ಮಹಾನುಭಾವನ ನೇತ್ರಗಳು ಅಂತಃಕರಣದ ಆಹ್ವಾನವನ್ನೀಯುವಂತೆ, ಕಾರುಣ್ಯಪೂರಿತವಾಗಿದ್ದವು.

"ಕರ್ಣ, ಆ ದುಃಖವನ್ನು ನಾನೂ ಅನುಭವಿಸಿದ್ದೇನೆ. ಆ ವ್ಯಥೆಯ ಅನುಭವ ನನಗೂ ಇದೆ. ಕೆಲವರನ್ನು ಹರಿವ ಪ್ರವಾಹದಲ್ಲಿ ಬಿಟ್ಟರೆ, ಮತ್ತೆ ಕೆಲವರನ್ನು ಆ ಪ್ರವಾಹದಿಂದ ದಾಟಿಸಿ ದಂಡೆಗೆ ತಂದು ಮುಟ್ಟಿಸಿರಬಹುದು. ಇನ್ನು ಕೆಲವರು ದನಗಾಹಿಗಳ ಗುಂಪಿನಲ್ಲಿ ನಂದಗೋಪನ ಮಗನಾಗಿ ಬೆಳೆದರೆ ಮತ್ತೆ ಕೆಲವರು ಸೂತ ಕುಲಾಶ್ರಯದಲ್ಲಿ ಬೆಳೆದಿರಬಹುದು. ಮಾತೃವಿಯೋಗದ ಅನುಭವವು ಮಾತ್ರ ಇಬ್ಬರ ಹಣೆಯಲ್ಲಿಯೂ ಸಮನಾಗಿಯೇ ಬರೆದಂತೆ ತೋರುತ್ತಿದೆ. ಹೇಗಿದ್ದರೂ ತಲುಪಿದ ದಡವನ್ನೇ ನಂಬಿಕೊಂಡು ಜೀವನ ಪ್ರವಾಹವನ್ನಾರಂಭಿಸುವುದು ಸಾಧ್ಯವಿಲ್ಲ."

"ಕೃಷ್ಣ ನೀನು ಜೀವನದಲ್ಲಿ ಒಂದು ಕನಸನ್ನು ಕಂಡಿದ್ದಿ. ಹೇಗೆ ಅದನ್ನು ಕಂಡೆಯೋ ಹಾಗೆ ಅದು ಮಾಯವಾಯಿತು. ಆ ನಿನ್ನ ಜನ್ಮ ವೃತ್ತಾಂತವು ಎಂದಿಗೂ ರಹಸ್ಯವಾಗಿ ಉಳಿಯಲಿಲ್ಲ. ಆದರೆ ನನ್ನ ಸ್ಥಿತಿಯು

ಮಾತ್ರ ಹಾಗಿಲ್ಲ. ನಾನಾರು ? ನನ್ನನ್ನು ಹೀಗೇಕೆ ಬಿಸಾಡಿದರು ? ನನ್ನ ಮನದಲ್ಲಿ ಯಾವಾಗಲು ಹೊಯ್ದಾಡುತ್ತಿರುವ ಈ ವಿಚಾರಗಳು ಇಂದಿಗೂ ನನ್ನಿಂದ ದೂರಾಗಿಲ್ಲ. ನಾನು ತಬ್ಬಲಿ ಎಂಬ ವ್ಯಥೆ ಯಾವಾಗಲೂ ನನ್ನನ್ನು ಕಾಡುತ್ತಿದೆ."

ಕೃಷ್ಣ ಏನನ್ನೂ ಹೇಳದೆ ಸೂರ್ಯದೇವನನ್ನು ನೋಡುತ್ತ ಹೊತ್ತ ಉತ್ತರೀಯವನ್ನೆತ್ತಿ ಬೆವರನ್ನೊರೆಸಿಕೊಂಡು.

"ಅಂಗರಾಜ, ಈ ಸೂರ್ಯದಾಹವನ್ನು ಸಹಿಸಿಕೊಳ್ಳುವ ಸಾಧನೆಯನ್ನು ನೀವು ಮೈಗೂಡಿಸಿಕೊಂಡಿರುವಿರಿ. ಒಂದು ರೀತಿಯಲ್ಲಿ ಅದು ನಿಮ್ಮ ತಪಶ್ಚರ್ಯವೂ ಆಹುದು. ಆದರೆ ನನ್ನ ಜೀವನ ಹಾಗಲ್ಲ. ಗೋವುಗಳ ಹಿಂಡನ್ನು ಅಟ್ಟಿಸಿಕೊಂಡು ಕಾಡುಮೇಡುಗಳಲ್ಲಿ ಸಂಚರಿಸಿದರೂ ವೃಕ್ಷದ ನೆರಳಿನಲ್ಲಿಯೇ ಬೆಳೆದಿದ್ದೇನೆ. ನಾವಿಬ್ಬರೂ ಇನ್ನು ರಾಜಭವನದತ್ತ ಸಾಗುವುದು ಯೋಗ್ಯವೆನಿಸುವುದಿಲ್ಲವೇ ?"

"ಕ್ಷಮಿಸಬೇಕು" ಎಂದು ಗಾಬರಿಗೊಂಡು ನುಡಿದ ಕರ್ಣನು "ನನ್ನ ಮನಸ್ಸಿಗೆ ಈ ಮಾತು ಹೊಳೆಯಲೇ ಇಲ್ಲ ನಡೆಯಿರಿ."

ಕೃಷ್ಣ ಹಾಗೂ ಕರ್ಣ ಇಬ್ಬರೂ ಕೂಡಿಕೊಂಡು ರಥದತ್ತ ಸಮೀಪಿಸಿದರು. ಆಗ ಕರ್ಣನು "ತಾವು ಮುನ್ನಡೆಯಿರಿ. ನನ್ನ ರಥ ಮರದ ನೆರಳಡಿಯಲ್ಲಿದೆ. ಅದನ್ನು ತೆಗೆದುಕೊಂಡು ನಿಮ್ಮನ್ನು ಹಿಂಬಾಲಿಸಿ ಬರುವೆ."

"ದಾರುಕನು ನಿಮ್ಮ ರಥವನ್ನು ತರುತ್ತಾನೆ. ಆದುದರಿಂದ ನಾವಿಬ್ಬರೂ ಕೂಡಿಯೇ ಹೊರಡೋಣ."

ಕೃಷ್ಣನು ಕರ್ಣನ ರಥವನ್ನು ತರುವಂತೆ ದಾರುಕನಿಗೆ ಆಜ್ಞೆ ಮಾಡಿದನು. ಕರ್ಣನಿಗೆ ರಥದಲ್ಲಿ ಕೂಡುವಂತೆ ಸೂಚನೆಯನ್ನಿತ್ತನು. ಅದನ್ನರಿತ ಕರ್ಣನು ನಕ್ಕು ನುಡಿದ.

"ತಾವು ಸಾರಥ್ಯ ಕರ್ಮವನ್ನು ಮಾಡುವುದು, ಅಂಥ ರಥದಲ್ಲಿ ನಾನು ಕೂಡುವುದು, ಎಂದಿಗೂ ಸಾಧ್ಯವಾಗದ ಮಾತು. ಅಂಥ ಸುಯೋಗವು ಯಾರ ಹಣೆಯಲ್ಲಿ ಬರೆದಿದೆಯೋ, ಅಂಥವರು ಧನ್ಯರೆಂದೇ ಹೇಳಬೇಕಾಗಬಹುದು. ತಮ್ಮ ಅನುಗ್ರಹ ನನ್ನ ಮೇಲೆ ಇರುವುದಾದರೆ, ಸಾರಥ್ಯ ಕಾರ್ಯದ ಅವಕಾಶವನ್ನು ದಯಮಾಡಿ ನನಗೆ ಅನುಗ್ರಹಿಸಬೇಕು."

ನಗುಮುಖದ ಕರ್ಣನು ರಥದ ಮುಂಭಾಗದಲ್ಲಿರುವ ಆಸನದಲ್ಲಿ ಮಂಡಿತನಾಗಿ ಕಡಿವಾಣಗಳನ್ನು ಕೈಗೆತ್ತಿಕೊಂಡ. ನಿಧಾನವಾಗಿ ರಥವು ಮುನ್ನಡೆಯ ತೊಡಗಿತು. ಸ್ವಲ್ಪ ಸಮಯದ ನಂತರ ಅದು ತನ್ನ ಗತಿಯನ್ನು ಕೂಡಿಕೊಂಡಿತು. ರಥದ ಗಾಲಿಗೆ ಅಂಟಿಸಿದ ಗೆಜ್ಜೆಗಳ ನಾದದೊಂದಿಗೆ ಕುದುರೆಯ ಓಟವೂ ಸಮ್ಮಿಳಿತವಾಯಿತು. ಶ್ರೀಕೃಷ್ಣನ ರಥಕ್ಕೆ ಹೂಡಿದ ಜಾತಿವಂತ ಕುದುರೆಗಳು ಒಂದೇ ಗತಿಯಲ್ಲಿ ಧಾವಿಸುತ್ತಿದ್ದವು. ಚಂಪಾನಗರಿಯನ್ನು ಪ್ರವೇಶಿಸುತ್ತಿದ್ದಂತೆ ಕೃಷ್ಣನ ದೃಷ್ಟಿಯು ಆ ನಗರದ ಸೌಂದರ್ಯವನ್ನು ವೀಕ್ಷಿಸುವುದರಲ್ಲಿ ತಲ್ಲೀನಗೊಂಡಿತು. ಭವ್ಯವಾದ ತಟಾಕಗಳಿಂದಲೂ, ವಿಸ್ತೀರ್ಣವಾದ ಕಂದಕಗಳಿಂದಲೂ ಆ ನಗರವು ಸುರಕ್ಷಿತವಾಗಿತ್ತು. ಭವ್ಯ ಗೋಪುರಗಳಿಂದ ಶೋಭಿಸುತ್ತಿರುವ ಅನೇಕ ಸೌಧಗಳು ಕಣ್ಣಂಚಿನಿಂದ ಸರಿಯುತ್ತಲಿದ್ದವು. ವಿಶಾಲವಾದ ರಾಜಬೀದಿಯ ಮಧ್ಯದಲ್ಲಿ ಧಾವಿಸುತ್ತಿದ್ದ ರಥವನ್ನು ಕಂಡೊಡನೆ ಚಂಪಾನಗರದ ನಿವಾಸಿಗಳು ನಮ್ರತೆ ಹಾಗೂ ಪೂಜ್ಯ ಭಾವದಿಂದ ಕರ್ಣನಿಗೆ ವಂದನೆ ಸಲ್ಲಿಸುತ್ತಿದ್ದರು.

ವಿಸ್ತೀರ್ಣವಾದ ಆವರಣದಲ್ಲಿ ಎರಡೂ ರಥಗಳು ಪ್ರವೇಶ ಮಾಡಿದವು. ಕರ್ಣನ ಪ್ರಸಾದದಲ್ಲಿ ಸೇವಕರ ಓಡಾಟವು ಆರಂಭವಾಯಿತು. ಅರಮನೆಯ ಅಂಗಳದಲ್ಲಿ ರಥವು ಪ್ರವೇಶಿಸಿದೊಡನೆ ಧಾವಿಸಿ ಬಂದ ಸೇವಕರು ರಥದ ಕುದುರೆಗಳನ್ನು ಹಿಡಿದು ನಿಲ್ಲಿಸಿದರು. ಕೃಷ್ಣನೊಂದಿಗೆ ಕರ್ಣನೂ ರಥದಿಂದ ಇಳಿದು ಬಂದನು. ನಂತರ ಆಶ್ಚರ್ಯದಿಂದ ಕೃಷ್ಣನು ಹೇಳಿದ :

"ಈ ಉಪಚಾರಗಳ ಅಗತ್ಯವಿರಲಿಲ್ಲ."

ನಗುಮುಖದ ವೃಷಾಲಿಯು

"ತಾವು ಆಕಸ್ಮಿಕವಾಗಿ ಬಂದುದರಿಂದ ತಮ್ಮನ್ನು ಮನಃಪೂರ್ವಕವಾಗಿ ಸ್ವಾಗತಿಸುವುದಾಗಲಿಲ್ಲ. ಎಂದು ವ್ಯಥೆಯಾಗುತ್ತಿದೆ."

"ಪರಕೀಯ ಎಂಬ ಭಾವನೆ ಮನಸ್ಸಿನಲ್ಲಿದ್ದರೆ ಪೂರ್ವ ಪರಿಚಯವಿಲ್ಲದಿದ್ದರೂ ಸಹ ಆಮಂತ್ರಿತನಾಗದೆ ನಾನು ನಿಮ್ಮಲ್ಲಿಗೆ ಬರುತ್ತಿರಲಿಲ್ಲ."

ಕರ್ಣನೊಂದಿಗೆ ಕೃಷ್ಣನೂ ಮೆಟ್ಟಿಲುಗಳನ್ನೇರುವಾಗ ನಗುಮುಖದ ನಾಲ್ಕುವರ್ಷದ ಮಗು ಧಾವಿಸುತ್ತ ಬಂದು ಕರ್ಣನನ್ನಪ್ಪಿಕೊಂಡಿತು. ಆ ಮಗುವನ್ನೆತ್ತಿಕೊಳ್ಳುತ್ತ ಕರ್ಣನು ಹೇಳಿದ.

"ವಸೂ, ಮಹಾರಾಜರಿಗೆ ವಂದನೆಗಳನ್ನು ಸಲ್ಲಿಸು."

ಮಗು ವೃಷಸೇನ ಒಂದು ಸಲ ಕೃಷ್ಣನನ್ನು ನೋಡಿ ಇಳಿದು ಒಂದು ತನ್ನ ಮಸ್ತಕವನ್ನು ಕೃಷ್ಣನ ಚರಣಾರವಿಂದದಲ್ಲಿಟ್ಟ. ಬಹು ಆತ್ಮೀಯತೆ ಯಿಂದ ಆ ಮಗುವನ್ನೆತ್ತಿಕೊಳ್ಳುತ್ತ ಕೃಷ್ಣನು ಕೇಳಿದ.

"ಅಂಗರಾಜ, ತಮ್ಮ ಪ್ರತಿಬಿಂಬದಂತಿದೆ, ಈ ಮಗು. ಹೆಸರೇನು ?"

"ವೃಷಸೇನ"

ಎತ್ತಿಕೊಂಡ ಆ ಮಗುವನ್ನು ಕೌತುಕದಿಂದ ನೋಡುತ್ತ ಕೃಷ್ಣನೆಂದ.

"ಅಂಗರಾಜ, ಈ ಬಾಲಕನು ನಿಮ್ಮ ಮಾರ್ಗವನ್ನೇ ಅನುಸರಿಸುವ ನೆಂಬ ನಂಬಿಕೆಯೇನೋ ಇದೆ. ಆದರೆ ನಿಮ್ಮಂತೆ ಈತನಿಗೆ ಕರ್ಣಕುಂಡಲಗಳು ಮಾತ್ರ ಕಾಣಬರುವುದಿಲ್ಲ."

ಕರ್ಣ ನಗುತ್ತ ಹೇಳಿದ.

"ಯಾರಿಗೆ ತಾಯಿತಂದೆಗಳ ರಕ್ಷಣೆ ಇಲ್ಲವೋ ಅಂಥವರಿಗೆ ಮಾತ್ರ ಈ ಕವಚ ಕುಂಡಲಗಳ ಆಶ್ರಯವು ಲಭಿಸುತ್ತದೆ."

"ನಿಜ, ನಿಮ್ಮಂತಹ ಮಹಾ ಪರಾಕ್ರಮಿಗಳ ಮಗನಾಗಿ ಜನಿಸಿದ ಈತ ಕವಚ ಕುಂಡಲಗಳನ್ನೇಕೆ ಬಯಸುತ್ತಾನೆ ?"—

"ಅಂಗರಾಜ ನಿಮಗೆ ಪುತ್ರ ಸಂತಾನ"

"ಇಬ್ಬರು. ಹಸ್ತಿನಾಪುರದಲ್ಲಿರುತ್ತಾರೆ."

"ಹಸ್ತಿನಾಪುರ ?"

"ಯಾರು ನನ್ನನ್ನು ಸಾಕಿ, ಸಲುಹಿ ದೊಡ್ಡವನನ್ನಾಗಿ ಮಾಡಿದ್ದಾರೆಯೋ, ಆ ಅಧಿರಥ ಹಾಗೂ ರಾಧಾಮಾತೆ ಹಸ್ತಿನಾಪುರದಲ್ಲಿಯೇ ಇರುತ್ತಾರೆ. ಅವರು ನಿಪುತ್ರಕರಾಗಿದ್ದಾಗ ನಾನು ಗಂಗೆಯ ಪ್ರವಾಹದಲ್ಲಿ ತೇಲುತ್ತ ಬಂದು ಅವರ ಕೈಗೆ ಸಿಲುಕಿದೆ. ನನ್ನನ್ನು ಸಾಕಿದ ನಂತರ ರಾಧಾತಾಯಿಗೆ ಪುತ್ರೋತ್ಪತ್ತಿಯಾಯಿತು. ಅಧಿರಥ ಧೃತರಾಷ್ಟ್ರ ಮಹಾರಾಜರಿಗೆ ತುಂಬ ನಂಬಿಗೆಯವರು. ಹಸ್ತಿನಾಪುರದ ರಥಶಾಲೆಯ ಜವಾಬ್ದಾರಿಯನ್ನೆಲ್ಲ ಅವರೇ ನೋಡಿಕೊಳ್ಳುತ್ತಿರುವರು."

"ನೀವು ನಿಮ್ಮ ಮಕ್ಕಳ ಬಗ್ಗೆ ಹೇಳುತ್ತಿದ್ದಿರಿ."

"ಆ ವಿಷಯವನ್ನೇ ಹೇಳುತ್ತಿರುವೆ. ನನ್ನ ಮೊದಲ ಪತ್ನಿ ಊರ್ಮಿಳೆಯಲ್ಲಿ ಶತ್ರುಂಜಯನೂ ವೃಷಕೇತು ಎಂಬ ಇಬ್ಬರು ಮಕ್ಕಳು. ವೃಷಕೇತುವಿನ ಬಾಲ್ಯದಲ್ಲಿಯೇ ಊರ್ಮಿಳೆ ನಮ್ಮನ್ನಗಲಿದಳು. ನಂತರ ವೃಷಾಲಿಯೊಂದಿಗೆ ನನ್ನ ವಿವಾಹವಾಯಿತು. ಈ ಚಂಪಾನಗರದ ರಕ್ಷಣೆಗಾಗಿ ನಾನು ಇಲ್ಲಿಯೇ ವಾಸಮಾಡಲಾರಂಭಿಸಿದೆ. ನನ್ನ ನೆನಪಿಗಾಗಿ ರಾಧಾಮಾತೆ ವೃಷಕೇತುವನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಂಡಿದ್ದಾಳೆ."

"ಹಾಗಾದರೆ ಶತ್ರುಂಜಯ ?"

"ಆತ ಯುವರಾಜ ದುರ್ಯೋಧನರ ಮಗನೊಂದಿಗೆ ಬೆಳೆಯುತ್ತಲಿದ್ದಾನೆ."

ಕರ್ಣನೊಂದಿಗೆ ಮಾತನಾಡುತ್ತ ಕೃಷ್ಣನು ಅರಮನೆಯನ್ನು ಪ್ರವೇಶ ಮಾಡಿದ. ಅನೇಕ ದಾಸದಾಸಿಯರಿಂದ ರಾಜಗೃಹವು ತುಂಬಿ ಹೋಗಿತ್ತು. ಆ ರಾಜಗೃಹವನ್ನು ನಾನಾ ರೀತಿಯಲ್ಲಿ ಅಲಂಕರಿಸಲಾಗಿತ್ತು. ಕರ್ಣನ ಸಹವಾಸದಿಂದ ಕೃಷ್ಣನು ಪ್ರಸನ್ನನಾಗಿದ್ದ. ಉಭಯ ಕುಶಲೋಪರಿಗಳಾದ ನಂತರ ಕರ್ಣನು ಪ್ರಶ್ನೆ ಮಾಡಿದ.

"ಕೇವಲ ನನ್ನ ಸಲುವಾಗಿ ದ್ವಾರಕಾನಗರದಿಂದ ತಾವು ಬಹು ದೂರದ ಈ ಪ್ರವಾಸವನ್ನು............"

"ಇಲ್ಲ. ಅಂಗರಾಜ, ಹಾಗೇನೂ ಇಲ್ಲ. ತಪಶ್ಚರ್ಯದ ನಿಮಿತ್ತವಾಗಿ ನಾನು ಕಾಮರೂಪ ದೇಶಕ್ಕೆ ಹೋಗಿದ್ದೆ. ಈ ಭಾಗವೆಲ್ಲ ಮೊದಲು ಆ ಪ್ರದೇಶಕ್ಕೆ ಸೇರಿಕೊಂಡಿತ್ತು. ಈ ಮೊದಲು ಅದನ್ನು "ಕಾಮಾಶ್ರಯ" ಎಂದು ಕರೆಯುತ್ತಿದ್ದರು. ಮಹಾಶಿವನ ಕ್ರೋಧಾಗ್ನಿಗೆ ಸಿಲುಕಿ ಭಸ್ಮವಾಗಿ ಹೋಗುವೆ ಎಂಬಭೀತಿಯಿಂದ ಓಡುತ್ತ ಬಂದ ಕಾಮದೇವನು ಈ ಪ್ರದೇಶದಲ್ಲಿಯೇ ತನ್ನ ಕೊನೆಯ ಉಸಿರನ್ನೆಳೆದನು. ಆದುದರಿಂದಲೇ ಇದನ್ನು ಅಂಗದೇಶವೆಂದು ಗುರುತಿಸಲಾರಂಭಿಸಿದರು. ಹದಿನಾರು ಮಹಾಜನದಲ್ಲಿ ಈ ಅಂಗವು ಸಹ ಒಂದು. ಇದು ಮಹಾ ಜನಪದವೆಂದು ಕರೆಸಿಕೊಳ್ಳುವುದು. ಉಪೇಕ್ಷಿಸಲ್ಪಟ್ಟಿದ್ದರೂ ಸಹ ಇದು ಮಹಾಪುಣ್ಯಭೂಮಿ. ನಿನ್ನ ಪರಿಶ್ರಮದಿಂದಾಗಿ ಈ ನೆಲ ಇಂದು ಸಮೃದ್ಧಿಯನ್ನು ಹೊಂದುವಂತಾಗಿದೆ."

"ದ್ವಾರಕಾನಗರವನ್ನು ನೋಡಿಲ್ಲ. ಅದರ ಕೀರ್ತಿಯನ್ನು ತುಂಬಾ ಕೇಳಿದ್ದೇನೆ. ಆ ಮಹಾನಗರದ ಮುಂದೆ ಈ ಚಂಪಾನಗರವು ಏನೂ ಅಲ್ಲ."

"ಕರ್ಣ ! ನಗರಗಳಿಗೆ ಕೇವಲ ವೈಭವಗಳಿಂದ ಶೋಭೆ ಉಂಟಾಗುವುದಿಲ್ಲ ಗುಣಸಂಪನ್ನರಾದ ಜನರ ವಾಸ್ತವ್ಯದಿಂದಾಗ ಭೂಮಿಯು ಪುನೀತವಾಗುತ್ತದೆ. ಈ ಭೂಮಿಯ ಪರಿಸರದಲ್ಲೆಲ್ಲಾ ನಿನ್ನ ಕೀರ್ತಿಯು ವ್ಯಾಪಿಸಿದೆ. ಯಾವ ನೆಲದಲ್ಲಿ ಯಾಚಕರನ್ನು ಕಾಣುವುದು ದುರ್ಲಭ ಎಂದೆನಿಸುವುದೋ ಆ ನೆಲವನ್ನೇ ಸಮೃದ್ಧದೇಶ ಎಂದು ಕರೆಯುತ್ತಾರೆ. ನಿನ್ನಿಂದಾಗಿ ವೈದ್ಯನಾಥದಿಂದ ಭುವನೇಶ್ವರಿಯವರೆಗೆ ಹಬ್ಬಿರುವ ಈ ಅಂಗದೇಶವು ಯಾತ್ರಾರ್ಥಿಗಳ ಪುಣ್ಯ ಸ್ಥಳವಾಗಿ ಪರಿಣಮಿಸಿದೆ."

ಕರ್ಣನ ಮುಖದಲ್ಲಿ ಹಾಸ್ಯ ಕಾಣಿಸಿತು. ಆತನು ಪ್ರಶ್ನೆ ಮಾಡಿದ.

"ಸೂತ ಕುಲದಲ್ಲಿ ಬೆಳೆದ ನನ್ನಂಥವರು ಪುಣ್ಯಸಂಚಯಕ್ಕಾಗಿ ತಪಸ್ಸಿಗೆ ಯಬೇಕಾಗುತ್ತದೆ. ಆದರೆ ತಾವು ಜನ್ಮತಃ ದೈವಗುಣ ಸಂಪನ್ನರು. ಹೀಗಿದ್ದರೂ ತಾವು ತಪಸ್ಸನ್ನಾಚರಿಸುವ ಕಾರಣವಾದರೂ ಏನು ?"

"ರಾಧೇಯಾ, ಈ ತಪಶ್ಚರ್ಯವು ಯಾರನ್ನು ಬಿಟ್ಟಿದೆ? ಈ ಪೃಥ್ವಿಯ ಮೇಲೆ ಜನ್ಮತಾಳಿ ಬಂದ ಪ್ರಾಣಿಮಾತ್ರನ ಉದ್ಧಾರವಾಗಬೇಕಾದಲ್ಲಿ ಅದು ಕೇವಲ ತಪಶ್ಚರ್ಯದಿಂದ ಮಾತ್ರ ಸಾಧ್ಯ. ಧನುರ್ವಿದ್ಯೆ ಕಲಿಯಬೇಕಾದಲ್ಲಿ ಅದು ದ್ರೋಣಾಚಾರ್ಯರಲ್ಲಿಯೇ ಸಾಧ್ಯ. ರಥವನ್ನು ಸಿದ್ಧಗೊಳಿಸಬೇಕಾದಲ್ಲಿ ಅದನ್ನು ಅಧಿರಥನಿಂದಲೇ ಕಲಿಯಬೇಕು. ಮಲ್ಲ ವಿದ್ಯೆಯಲ್ಲಿ ನೈಪುಣ್ಯವನ್ನು ಹೊಂದಬೇಕಾದಲ್ಲಿ ಜರಾಸಂಧನಲ್ಲಿಯೇ ಹೋಗಬೇಕು. ಈ ಕೀರ್ತಿ ಯಾವುದರಿಂದ ಪ್ರಾಪ್ತವಾಯಿತು ? ತಪಶ್ಚರ್ಯವೆಂದರೇನು ? ಅಖಂಡವಾಗಿ ವಿದ್ಯೆಯನ್ನು ಸಂಪಾದಿಸಲು ಪರಿಶ್ರಮ ವಹಿಸುವುದು ಎಂದಲ್ಲವೆ ? ಕೀರ್ತಿ, ಪರಾಕ್ರಮ, ಯಶಸ್ಸು ಇವುಗಳ ಬಲವೆಲ್ಲ ತಪಶ್ಚರ್ಯದಲ್ಲಿಯೇ ಅಡಕವಾಗಿದೆ. ಪರಾಕ್ರಮಿಯಾದ ರಾವಣನ ಬಲವು ಆತನ ತಪಸ್ಸಿನಲ್ಲಿ ಅಡಕವಾಗಿತ್ತು. ಸೂರ್ಯದೇವನು ಚಂದ್ರನೊಂದಿಗೆ ಅಂತರಿಕ್ಷದ ಗ್ರಹಗಳನ್ನೆಲ್ಲ ತನ್ನ ಅಧೀನದಲ್ಲಿಟ್ಟುಕೊಂಡಿದ್ದರೂ ಒಂದು ದಿನವೂ ಆತನಿಗೆ ನಿತ್ಯೋಪಾಸನೆಯ ತಪಸ್ಸು ತಪ್ಪಿದುದ್ದಲ್ಲ."

"ಗ್ರಹಗಳು ನಮ್ಮ ಸ್ವಾಧೀನವಾದಾಗ ನಿತ್ಯೋಪಾಸನೆಯ ಅಗತ್ಯವಿದೆಯೇ ?"

"ಈ ಮಾತನ್ನು ಓರ್ವ ಋಷಿಪುತ್ರ ಹಿಂದೆ ರಾವಣನಿಗೂ ಪ್ರಶ್ನೆ ಮಾಡಿದ್ದನು. ಒಂದು ಸಾಯಂಕಾಲ ಆತ ರಾವಣನ ಭೇಟಿಗೆಂದು ಬಂದಾಗ ಅಸ್ತಾಚಲದಲ್ಲಿರುವ ಸೂರ್ಯದೇವನಿಗೆ ರಾವಣನು ವಂದನೆ ಸಲ್ಲಿಸುವುದರಲ್ಲಿ ನಿರತನಾಗಿದ್ದ. ಅದನ್ನು ಕಂಡ ಮುನಿಕುಮಾರ ಅಚ್ಚರಿಗೊಂಡು ಇಂದು ನೀನು ನನಗೆ ಪ್ರಶ್ನೆ ಮಾಡಿದಂತೆಯೇ ಅಂದು ಆ ಮುನಿಕುಮಾರನೂ ಸಹ ರಾವಣನಿಗೆ ಇದೇ ಪ್ರಶ್ನೆಯನ್ನು ಮಾಡಿದ್ದ.

ಮಹಾಮುನಿಗಳೇ ನನ್ನ ಈ ನಿತ್ಯೋಪಾಸನೆಯಲ್ಲಿ ಕೊರತೆಯಾದಾಗ ನನ್ನ ಆಯುಷ್ಯವೂ ಆ ಕೊರತೆಯಲ್ಲಿಯೇ ಲೀನವಾಗಿ ಹೋಗುತ್ತದೆ. ನನ್ನ ಪ್ರಾರಂಭಿಕ ನಿತ್ಯೋಪಾಸನೆಯು ಬೆಳೆದಂತೆಲ್ಲ ನಿಧಾನವಾಗಿ ತ್ರಿಭುವನಗಳಲ್ಲಿ ಅದರ ಕೀರ್ತಿಯು ಬೆಳಗಲಾರಂಭಿಸಿತು. ನನ್ನ ಲಂಕೆ ಸುವರ್ಣಮಯವಾಯಿತು. ಪ್ರಜೆಗಳು ಸಂತುಷ್ಟರಾದರು. ಹೀಗಿದ್ದರೂ ನನ್ನ ನಿತ್ಯೋಪಾಸನೆ, ತಪಸ್ಸು ಮಾತ್ರ ಅಖಂಡತೆಯಿಂದಲೇ ಸಾಗಿತ್ತು. ಒಂದು ಸಲ ನಾನು ಪಾತಾಳ ಲೋಕದ ಮೇಲೆ ಯುದ್ಧ ಕೈಗೊಂಡು ಜಯಶೀಲನಾದೆ. ನನ್ನ ವಿಜಯದ ವಾರ್ತೆ ಸ್ವರ್ಗಲೋಕವನ್ನು ತಲುಪಿತು. ಸ್ವರ್ಗದ ದೇವತೆಗಳು ರಾವಣನು ಮಹಾತಪಸ್ವಿಯಾಗಿದ್ದಾನೆ. ಪಾತಾಳಲೋಕದಲ್ಲಿ ತನ್ನ ರಾಜ್ಯ ಸ್ಥಾಪಿಸುವುದು ಆತನು ಪಡೆದುಕೊಂಡ ಹಕ್ಕಾಗಿದೆ. ಅಷ್ಟೆ ಅಲ್ಲ, ಆತನ ರಾಜ್ಯಭಾರದಲ್ಲಿ ಪಾತಾಳ ಲೋಕವು ಸುರಕ್ಷಿತ.

ಯಥಾರೀತಿಯಾಗಿ ನನ್ನ ತಪಶ್ಚರ್ಯವು ಸಾಗಿತ್ತು. ಕೆಲವು ವರ್ಷಗಳ ನಂತರ ನಾನು ಭೂಲೋಕವನ್ನು ಗೆದ್ದುಕೊಂಡೆ. ಆ ಸಮಯದಲ್ಲಿಯೂ ಸಹ ಸ್ವರ್ಗದ ದೇವತೆಗಳು ನನ್ನ ಯಶವನ್ನು ಕೊಂಡಾಡಿದರು.

ನನ್ನ ಮನಸ್ಸು ತಪಸ್ಸಿನಿಂದ ಎಂದೂ ವಿಚಲಿತವಾಗಿರಲಿಲ್ಲ. ಹೀಗಿರುವಾಗ ಯಾವ ಕಾರಣವೂ ಇಲ್ಲದೆ ಸ್ವರ್ಗದ ದೇವತೆಗಳು ಭಯಭೀತರಾಗತೊಡಗಿದರು. ಸ್ವರ್ಗಲೋಕದ ಮೇಲೆ ದಾಳಿ ಮಾಡುವೆ ಎಂಬ ವಾರ್ತೆಯೇ ಈ ಗೊಂದಲಕ್ಕೆ ಕಾರಣವಾಗಿತ್ತು. ಅಮೃತಪಾನದಲ್ಲಿ ಸದಾ ತಲ್ಲೀನರಾಗಿರುತ್ತಿದ್ದ ದೇವತೆಗಳು ಎಚ್ಚೆತ್ತುಕೊಂಡು ಯುದ್ಧದ ಸಿದ್ಧತೆಯನ್ನು ಮಾಡಿಕೊಳ್ಳ

ತೊಡಗಿದರು. ಆದರೂ ಅವರ ಮೇಲೆ ನಾನು ಯುದ್ಧ ಸಾರಲಿಲ್ಲ. ದೇವತೆಗಳು ನಿರಾತಂಕವ ಉಸಿರೆಳೆದರು. ಹೀಗೆ ಒಂದೆರಡು ಸಲ ನಡೆದುಹೋಯಿತು. ನಡೆದುದನ್ನೆಲ್ಲ ಸರಿಯಾಗಿ ಅಭ್ಯಾಸ ಮಾಡಿದ ನಾನು ಯಾರಿಗೂ ಸುಳಿವು ಕೊಡದೆ ಕೈಗೆ ಸಿಕ್ಕಷ್ಟು ಸೈನಿಕರನ್ನು ಕೂಡಿಸಿಕೊಂಡು ಒಂದು ದಿನ ಸ್ವರ್ಗ ಲೋಕವನ್ನು ಮುತ್ತಿದೆ. ದೇವತೆಗಳು ತತ್ತರಿಸಿ ಹೋದರು. ಯುದ್ಧ ಮಾಡುವ ಪ್ರಸಂಗವೇ ಪ್ರಾಪ್ತವಾಗಲಿಲ್ಲ. ಕಾಣಿಸಿಕೊಳ್ಳದೆ ಮರೆಯಾಗಿಕುಳಿತಿದ್ದ ಆ ದೇವತೆಗಳನ್ನೆಲ್ಲ ಹುಡುಕಿ ಹೊರತೆಗೆಯುವ ಕಾರ್ಯವನ್ನು ಮಾತ್ರ ನಾನು ಮಾಡಬೇಕಾಯಿತು."

ರಾವಣನ ಈ ಕಥೆ ಕೇಳುತ್ತಿದ್ದ ಋಷಿಕುಮಾರನ ಮನದಲ್ಲಿ ಶಂಕೆ ಮೂಡಿತು. ಅದನ್ನು ಪರಿಹರಿಸಿಕೊಳ್ಳಲು ಆತನು ಪುನಃ ರಾವಣನಿಗೆ ಪ್ರಶ್ನೆಯನ್ನು ಮಾಡಿದ.

"ವೀರನಾದ ಲಂಕಾಧಿಪತಿಯೇ ನೀನು ಹೇಳಿದ ಕಥೆಯನ್ನೆಲ್ಲ ಕೇಳಿದಾಗ ಸೋಲು ಅಥವಾ ಪರಾಜಯ ಎಂಬುದು ನಿನಗಿಲ್ಲವೇ ಇಲ್ಲ ಎಂದೆನಿಸುತ್ತದೆ."

ಮುನಿಕುಮಾರನ ಪ್ರಶ್ನೆ ಕೇಳಿ ರಾವಣನು ಚಕಿತನಾದ. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ನಂತರ ಉತ್ತರವನ್ನಿತ್ತ.

"ಮಹಾಮುನಿಯೇ,ಈ ಭೂಮಿಯ ಮೇಲೆ ಜನಿಸಿದ ಪ್ರತಿಯೊಬ್ಬರೂ ಒಂದಿಲ್ಲೊಂದುದಿನ ನಾಶಹೋದುವದಂತೂ ಖಂಡಿತ. ಅವರ ಪರಾಜಯವೂ ಖಚಿತ. ಹೀಗಿರುವುದರಿಂದ ನನ್ನ ಪರಾಜಯವೂ ನಿಶ್ಚಿತವಾದುದೇ. ಆದರೆ ಅದು ದೇವತೆಗಳ ಕೈಯ್ಯಲ್ಲಿಲ್ಲ. ಯಾರು ಧೈರ್ಯವನ್ನು ಕಳೆದುಕೊಂಡಿರುತ್ತಾರೋ ಅಂಥವರು ಎದ್ದು ನಿಲ್ಲುವ ಪ್ರಯತ್ನವನ್ನು ಹೇಗೆ ಪಡೆಯುತ್ತಾರೆ? ಈ ದೇವತೆಗಳಂತೂ ನನ್ನನ್ನು ಪರಾಜಯಗೊಳಿಸಲಾರರು. ಎಂದೋ ಒಂದು ದಿನ ಸಾಮಾನ್ಯ ಮನುಷ್ಯನಿಗೂ ನನ್ನ ಅಭ್ಯುದಯವನ್ನು ಸಹಿಸಲು ಸಾಧ್ಯವಾಗುವುದಿಲ್ಲ. ಆಗ ಆತನು ತನ್ನ ಸ್ವಂತ ಬಲದಿಂದ, ಸ್ವಸಾಮರ್ಥ್ಯದಿಂದ ನನ್ನನ್ನು ಕೆಣಕುತ್ತಾನೆ. ಸಾಮಾನ್ಯವೆನಿಸಬಹುದಾದ ಮಂಗಗಳ ಸಹಾಯದಿಂದ ಹೆಚ್ಚಿನ ಪರಿಶ್ರಮವಿಲ್ಲದೆ ಈ ಬಲಾಢ್ಯ ರಾವಣನನ್ನು ಆತನು ಸೋಲಿಸಬಹುದು."

ಕೃಷ್ಣ, ಈ ರಾವಣನ ಕಥೆಯನ್ನು ಮುಗಿಸುವ ನೆಪದಲ್ಲಿ ಮತ್ತೆ ಹೇಳಿದ

"ನಡೆದದ್ದೂ ಹಾಗೆಯೇ. ಕ್ಷುದ್ರ ಮೋಹಪಾಶಕ್ಕೊಳಗಾಗಿ ತಪಸ್ವಿಯಾದ ರಾವಣನು ತನ್ನ ತೂಕವನ್ನು ಕಳೆದುಕೊಂಡ. ಈ ಕಾರ್ಯದಿಂದಲೇ ಆತನ ಸಂಹಾರವಾಯಿತು ಆದರೆ ಅದು ದೇವತೆಗಳಿಂದಲ್ಲ. ಈ ಕಾರಣಕ್ಕಾಗಿ ದೇವನಿಗೂ ಸಾಮಾನ್ಯ ಮನುಷ್ಯನ ರೂಪಧಾರಣ ಮಾಡುವ ಪ್ರಸಂಗವು ಬಂದಿತು. ನಡೆಯಲಾರದ್ದೆಲ್ಲ ವಾನರರ ಬೆಂಬಲದಿಂದ ನಡೆದುಹೋಯಿತು. ತಪಶ್ಚರ್ಯದ ಪ್ರಭಾವವು ತುಂಬ ಹಿರಿದಾದುದು."

ಕೃಷ್ಣನ ಮಾತುಗಳು ಕೇಳುವವರಿಗೆ ಮಂತ್ರಮುಗ್ಧರನ್ನಾಗಿ ಮಾಡುವಂತಹವು. ಆದುದರಿಂದ ವೇಳೆ ಹೇಗೆ ಗತಿಸಿತು, ಎಂಬುದೇ ತಿಳಿಯುವಂತಿರಲಿಲ್ಲ. ಈ ಕೃಷ್ಣನ ಸಹವಾಸವು ಪರಮೇಶ್ವರನಿಂದ ಪ್ರಾಪ್ತವಾದ ಪುಣ್ಯದ ಗಳಿಗೆ ಎಂದೆನಿಸುತ್ತಿತ್ತು. ಕೃಷ್ಣಾಗಮನದಿಂದ ಚಂಪಾನಗರವು ನವಚೈತನ್ಯದ ಕಾಂತಿಯನ್ನು ಪಡೆದಂತಾಗಿತ್ತು. ಕೃಷ್ಣನೊಂದಿಗೆ ಬಂದಿರುವ ರಕ್ಷಕದಳದ ಯೋಗಕ್ಷೇಮವನ್ನು ವಿಚಾರಿಸುವುದರಲ್ಲಿ ಚಂಪಾನಗರದ ನಾಗರೀಕರು ತಲ್ಲೀನರಾಗಿದ್ದರು. ಭೋಜನಕ್ಕಾಗಿ ನಾನಾತರಹದ ಮೃಗಗಳನ್ನು ರಾಜಗೃಹಕ್ಕೆ ತಂದೊಪ್ಪಿಸುತ್ತಿದ್ದರು. ನೃತ್ಯಗಾಯನಗಳಿಂದ ಕೃಷ್ಣನಿಗೆ ಮನರಂಜನೆಗೊಳಿಸುವ ಏರ್ಪಾಟುಗಳು ನಡೆದಿದ್ದವು. ವೃಷಸೇನನಂತೂ ಕೃಷ್ಣನಿಗೆ ನೆರಳಾಗಿ ಆತನೊಂದಿಗೆ ಇರುತ್ತಿದ್ದನು.

ನಸುಕಿನಲ್ಲಿ ಕರ್ಣನಿಗೆ ಎಚ್ಚರಿಕೆಯಾಯಿತು. ಮಂತ್ರಮುಗ್ಧಗೊಳಿಸುವಂತಹ ಮಾಧುರ್ಯವು ಪರಿಸರವನ್ನೆಲ್ಲ ಆವರಿಸಿದಂತೆನಿಸಿತು. ತದೇಕಚಿತ್ತದಿಂದ ಆ ನಾದ ಮಾಧುರ್ಯವನ್ನು ಕರ್ಣನು ಆಲಿಸತೊಡಗಿದ. ಮನವು ಆನಂದ ಸಾಗರದಲ್ಲಿ ತೇಲಿದಂತಹ ಅನುಭವನಾಗತೊಡಗಿತು. ಶಾಂತಚಿತ್ತದಿಂದ ವೃಷಾಲಿಯು ಆತನ ಪಕ್ಕದಲ್ಲಿ ಮಲಗಿಕೊಂಡಿದ್ದಳು. ಮೃದುವಾಗಿ ಆವಳ ಕಪೋಲಗಳನ್ನು ಸ್ಪರ್ಶ ಮಾಡಿದಾಗ ಅವಳಿಗೆ ಎಚ್ಚರನಾಯಿತು. ಮಂದಸ್ಮಿತಳಾದ ಅವಳು ಕರ್ಣನ ಎರಡೂ ಕೈಗಳನ್ನು ಹಿಡಿದುಕೊಂಡು ತನ್ನ ಕಪೋಲಗಳ ಮೇಲಾಡಿಸುವಂತೆ ಮಾಡಿಕೊಂಡು, ತೃಪ್ತಿಯಿಂದ ಕಣ್ಣು ಮುಚ್ಚಿದಳು. ಕರ್ಣ ಬಹು ಮೆತ್ತಗೆ ಹೇಳಿದ.

"ವಸೂ"

"ಹುಂ!"

"ಎಚ್ಚರವಾಗು ವಸೂ, ದೈವವೇ ನಮ್ಮ ಬಾಗಿಲವರೆಗೂ ಬಂದಿರುವಾಗ ಮಾನವರಾದ ನಾವು ಅಂಥ ಸಮಯದಲ್ಲಿ ಮಲಗಬಾರದು."

ಆ ಮಾತುಗಳಿಂದ ಗಾಬರಿಯಾದ ವೃಷಾಲಿಯು ಎದ್ದು ಕುಳಿತು ಕೊಂಡಳು.

"ಎಂಥ ದೈವ ?"

"ಕೇಳು. ಮನವಿಟ್ಟು ಕೇಳು."

ದಂಪತಿಗಳಿಬ್ಬರೂ ಆ ನಾದಮಾಧುರ್ಯವನ್ನು ಕೇಳುವುದರಲ್ಲಿ ತಲ್ಲೀನ ರಾದರು. ಅವರಿಬ್ಬರ ಮನಸ್ಸು ಆನಂದದಿಂದ ತುಂಬಿ ಬಂದಿತು. ಮುಂಜಾವಿನ ಹರವು ಮುಂದೋಡಿ ಬರುತ್ತಿತ್ತು. ರಾಜಗೃಹದ ನಂದಾದೀಪಗಳೆಲ್ಲ ಮಂದವಾಗಿ ಕಾಣತೊಡಗಿದ್ದವು. ವೃಷಾಲಿ ಕೇಳಿದಳು.

"ವೃಷಸೇನನೆಲ್ಲಿ ?"

ವೃಷಸೇನನ ಸ್ಥಳವು ಬರಿದಾಗಿತ್ತು.

ಕರ್ಣನು ನಕ್ಕು ಉತ್ತರೀಯವನ್ನೆತ್ತಿಕೊಳ್ಳುತ್ತ ಹೇಳಿದ.

"ನಡೆ"

ಕರ್ಣನನ್ನನುಸರಿಸಿ ವೃಷಾಲಿಯೂ ಹೊರಟಳು. ಕೃಷ್ಣನ ಬಿಡಾರವು ಸಮೀಪಿಸುತ್ತಿದ್ದಂತೆ ಆ ಮಧುರ ಧ್ವನಿಯ ಆಲಾಪವು ಮತ್ತಷ್ಟು ಸ್ಪಷ್ಟವಾಗ ತೊಡಗಿತು. ಕೃಷ್ಣನ ಬಿಡಾರದಲ್ಲಿದ್ದ ಸೇವಕರು ಕರ್ಣನಿಗೆ ಆತ್ಮೀಯ ವಂದನೆಗಳನ್ನು ಸಲ್ಲಿಸಿ ದೂರ ಸರಿದು ನಿಂತರು. ಕರ್ಣ ಹಾಗೂ ವೃಷಾಲಿಯ ಕಾಲುಗಳು ಬಾಗಿಲಿನಿಂದಾಚೆ ಚಲಿಸದಂತಾದವು. ರಾಜಶಯ್ಯೆಯಲ್ಲಿ ಕುಳಿತು ಕೊಂಡಿದ್ದ ಕೃಷ್ಣನು ಕಣ್ಣು ಮುಚ್ಚಿಕೊಂಡು ಕೊಳಲೂದುತ್ತಿದ್ದನು. ವೃಷಸೇನನು ಏಕಾಗ್ರಚಿತ್ತದಿಂದ ಆ ನಾದ ಮಾಧುರ್ಯವನ್ನು ಸವಿಯುತ್ತಲಿದ್ದನು. ಅಮೃತದ ಪ್ರವಾಹದಂತೆ ನಿಧಾನವಾಗಿ ಆ ನಾದವು ಅಲೆ ಅಲೆಯಾಗಿ ತೇಲಿ ಬರುತ್ತಿತ್ತು. ಕೊಳಲಿನ ಧ್ವನಿ ನಿಂತಾಗಲೇ ಕರ್ಣನಿಗೆ ಎಚ್ಚರವಾದದ್ದು. ಕೃಷ್ಣನ ಮಾತುಗಳು ಕಿವಿಗೆ ಬಿದ್ದುವು.

"ಅಂಗರಾಜ, ಬಾಗಿಲಲ್ಲಿಯೇ ನಿಂತಿರುವಿರಲ್ಲ ? ಬನ್ನಿ ಒಳಕ್ಕೆ ಬನ್ನಿರಿ. ನನ್ನ ಈ ಕೊಳಲು ನಿಮ್ಮನ್ನು ಎಚ್ಚರಗೊಳಿಸಿದಂತೆ ತೋರುತ್ತದೆ."

"ನಾದಮುಗ್ಧರಾಗಿದ್ದೇವೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಎಚ್ಚರರಾಗಿದ್ದೇವೆಯೋ ಇಲ್ಲವೋ ಎಂಬುದು ನಮಗೂ ತಿಳಿಯದಾಗಿದೆ."

ಕೃಷ್ಣ ವೃಷಸೇನನನ್ನು ಮತ್ತಷ್ಟು ಸಮೀಪಕ್ಕೆ ಕರೆದುಕೊಂಡು ಆತನ ತಲೆಯನ್ನು ಸವರುತ್ತ

"ಈ ಮಗು ವೃಷಸೇನ ತುಂಬ ಒಳ್ಳೆಯವನು. ಇಂದು ನಾನು ಈ ಕೊಳಲನ್ನು ಬಾರಿಸಿದ್ದು ಈ ಮಗುವಿಗಾಗಿ. ನಿನ್ನೆಯ ದಿನ ಸೇವಕರು ವಸ್ತ್ರಗಳನ್ನು ತೆಗೆದಿಡುವಾಗ ಆ ಪೆಟ್ಟಿಗೆಯಲ್ಲಿದ್ದ ಕೊಳಲು ಈತನಿಗೆ ಕಾಣಿಸಿತು. ಅದನ್ನು ಬಾರಿಸುವಂತೆ ಆಗ್ರಹಪಡಿಸಿದ. ಯಾರೂ ಎಚ್ಚರಿರದ ಸಮಯವನ್ನು ನೋಡಿ ಬಾರಿಸುತ್ತೇನೆ ಎಂದು ಅವನಿಗೆ ವಚನವನ್ನಿತ್ತಿದ್ದೆ. ಈ ಮಗುವಿನ ಸ್ಮರಣ ಶಕ್ತಿಯೂ ಸಹ ಅಗಾಧವಾದುದು. ನಸುಕಿನಲ್ಲಿಯೇ ಬಂದು ನನ್ನನ್ನು ಎಚ್ಚರಿಸಿದ."

"ತಮಗೆ ತೊಂದರೆ ಕೊಟ್ಟನಲ್ಲವೆ?" ಎಂದು ವೃಷಾಲಿಯು ಕೇಳಿದಳು.

"ತೊಂದರೆಯೇನಿಲ್ಲ, ಪ್ರತಿಯಾಗಿ ನನಗೆ ಮಹದಾನಂದವೆನಿಸಿತು. ನಾನು ಸಣ್ಣವನಿರುವಾಗ ಹಸುಗಳನ್ನು ಕಟ್ಟಿಕೊಂಡು ಕಾಡಿನಲ್ಲಿ ಸಂಚರಿಸುತ್ತಿದ್ದೆ. ಆಗ ಮೇಯಲು ಹೋದ ಹಸುಗಳನ್ನು ಒಂದುಗೂಡಿಸಲು ಈ ಕೊಳಲನ್ನು ಕೈಗೆತ್ತಿಕೊಳ್ಳುತ್ತಿದ್ದೆ. ಇದರಿಂದ ಹೊರಬರುವ ನಾದಮಾಧುರ್ಯವು ಮನಸ್ಸಿಗೆ ನೆಮ್ಮದಿಯನ್ನು ಉಂಟುಮಾಡುತ್ತಿತ್ತು. ಮುಂದೆ ಅನೇಕ ಸಲ ಈ ಕೊಳಲನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸಿದರೂ ಬಿಡುವು ದೊರೆಯದಂತಾಗಿದೆ.ಒಂದು ವೇಳೆ ಕೊಳಲನ್ನು ನುಡಿಸಿದರೂ ಈ ವೃಷಸೇನನಂತಹ ಏಕಾಗ್ರ ಮನೋಭಾವದ ಶ್ರೋತೃಗಳು ಲಭಿಸಬೇಕಲ್ಲ."

"ಮನಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳುವಂತಹ ಶಕ್ತಿ ನಿಮ್ಮ ಕೊಳಲಿನಲ್ಲಿ ಅಡಕವಾಗಿದೆ."

ಕೃಷ್ಣನು ಕೊಳಲನ್ನು ಕೆಳಗಿಡುತ್ತ "ಅಂಗರಾಜ ಈ ಕೊಳಲಿನಲ್ಲಿ ಏನಿದೆ ಇದೊಂದು ಸಾಮಾನ್ಯ ಬಿದಿರಿನ ಕೊಳಲು. ಅನೇಕ ರಂಧ್ರಗಳೂ ಇದಕ್ಕಿವೆ. ನಿಧಾನವಾಗಿ ಯಾರಾದರೂ ಊದುತ್ತಾ ಮೇಲೆ ಕಾಣುವ ರಂಧ್ರಗಳ ಮೇಲೆ ಸ್ವರಕ್ಕೆ ಸರಿಯಾಗಿ ತಮ್ಮ ಬೆರಳನ್ನು ಇಡುತ್ತ ಹೋದಲ್ಲಿ ಆಗ ಮಾತ್ರ ಅಂತರಾಳದಲ್ಲಿಯ ಧ್ವನಿಯು ನಾದ ರೂಪದಿಂದ ಹೊರಹೊಮ್ಮುತ್ತದೆ ಅದಿಲ್ಲದೆ ಹೋದರೆ ಇದು ಕೇವಲ ಬಿದಿರು ಕೋಲು ಎಂದು ಕರೆಸಿಕೊಳ್ಳುತ್ತದೆ."

ಕೃಷ್ಣನ ಮುಖದಲ್ಲಿ ಯಾವುದೋ ಒಂದು ಸ್ವಪ್ನವು ಗೋಚರಿಸುತ್ತಿತ್ತು. "ಕರ್ಣ, ಈ ಮಾನವ ಜೀವನದಲ್ಲಾದರೂ ಏನಿದೆ? ಈ ದೇಹವೆಂಬ ಕೊಳಲಿನ ಮೇಲೆ ಮನಸ್ಸೆಂಬ ನಾಜೂಕಿನ ಬೆರಳನ್ನು ಆಡಿಸುತ್ತ ಹೋದರೆ ಆಗ ಹೃದಯಾಂತರಾಳದಲ್ಲಿ ಹುದುಗಿದ್ದ ವ್ಯಥೆಯೂ ಸಹ ನಾದಮಯವಾಗಬಹುದು."

ವೃಷಸೇನ ಕೃಷ್ಣನ ಹತ್ತಿರ ಇದ್ದುದರಿಂದ ಕೃಷ್ಣನ ದೃಷ್ಟಿ ತಾನಾಗಿಯೇ ಆತನತ್ತ ಹರಿಯಿತು. ಅದನ್ನು ಕಂಡ ವೃಷಸೇನನು,

"ಮಹಾರಾಜ, ನಾನು ಈ ಕೊಳಲನ್ನು ಬಾರಿಸಲು ಸಾಧ್ಯವೆ ?"

ಕೃಷ್ಣ ತಕ್ಷಣವೇ ಆ ಬಾಲಕನನ್ನು ಬರಸೆಳೆದು ಅಪ್ಪಿ ಅಂತಃಕರಣದಿಂದ ಆತನ ಮೈಮೇಲೆ ಕೈಯಾಡಿಸುತ್ತ ಹೇಳಿದ.

"ಬೇಡ ವೃಷಸೇನಾ. ಈ ಕೊಳಲಿನ ಹಠ ಹಿಡಿಯಬೇಡ ಮಗೂ, ಇದನ್ನೂದುವಾಗ ಒಂದೊಂದು ಸಲ ಉಸಿರು ಕಟ್ಟಿದಂತಾಗುತ್ತದೆ. ಆಗ ನಾವು ಬೇರೊಂದು ವ್ಯಥೆಯನ್ನೇ ಅನುಭವಿಸಬೇಕಾಗುತ್ತದೆ."

ಕೃಷ್ಣನ ಈ ಭಾವನೆ ಎಲ್ಲರನ್ನೂ ಚಕಿತಗೊಳಿಸಿತು. ಈ ಮಹಾನುಭಾವನ ಗಮನವು ರಾಜಗೃಹವನ್ನು ಪ್ರವೇಶಿಸುತ್ತಿದ್ದ ಸೂರ್ಯಕಿರಣಗಳನ್ನು ವೀಕ್ಷಿಸುವುದರಲ್ಲಿ ತಲ್ಲೀನಗೊಂಡಿತು. ವೃಷಸೇನನನ್ನು ದೂರ ಸರಿಸುತ್ತ ಕೃಷ್ಣ ಹೇಳಿದ.

"ಸೂರ್ಯದೇವನಿಗೆ ಪ್ರಣಾಮಗಳನ್ನು ಸಲ್ಲಿಸುವುದು ಉಳಿದುಹೋಗಿದೆ" ಎಂದು ಹೇಳಿ ಆತ ಮೇಲುಪ್ಪರಿಗೆಯತ್ತ ಹೊರಟುಬಿಟ್ಟ.

* * *

ಎರಡು ಪ್ರಹರ ನಸುಕಿರುವಾಗಲೇ ಕೃಷ್ಣನಿಗೆ ಎಚ್ಚರವಾಯಿತು. ದಾಸಿಯು ತಂದಿಟ್ಟ ನೀರಿನಿಂದ ಮುಖ ತೊಳೆದುಕೊಂಡು ಮರಳುತ್ತಿರುವಾಗ ಉದ್ಯಾನವನದಲ್ಲಿ ಯಾರೋ ನಗುತ್ತಿರುವುದು ಕೇಳಬಂದಿತು. ಆ ಧ್ವನಿಯನ್ನಾಲಿಸಿ ಮುನ್ನಡೆದ. ಉದ್ಯಾನದ ಒಂದು ಬದಿಯಲ್ಲಿ ಆತನ ದೃಷ್ಟಿ ಕೇಂದ್ರೀಕೃತವಾದಾಗ ವೃಷಸೇನನು ತನ್ನ ಪುಟ್ಟ ಧನುರ್ಬಾಣಗಳನ್ನು ಹಿಡಿದು ದೂರದಲ್ಲಿ ನಿಂತಿದ್ದು ಗುರಿಸಾಧನೆಯ ಪ್ರಯತ್ನದಲ್ಲಿ ಆತ ನಿರತನಾಗಿದ್ದ. ಆ ಮಗು

ವಿನ ಹಿಂದೆ ಮಹಾಬಾಹು ಕರ್ಣನು ನಿಂತಿರುವುದು ಕಾಣಸಿತು. ವೃಷಸೇನ ನಿಂದ ಬಿಡಲ್ಪಟ್ಟ ಬಾಣವು ಸರಿಯಾದ ಗುರಿಯನ್ನು ತಲುಪಿತು. ಆತನ ಮುಖದಲ್ಲಿ ವಿಶ್ವಾಸದ ಆನಂದವು ಎದ್ದು ಕಾಣಿಸಿತು. ಹೆಮ್ಮೆಯಿಂದ ತಂದೆಯ ಕಡೆಗೆ ನೋಡಿದ. ಆ ವೇಳೆಗೆ ಸರಿಯಾಗಿ ಕೃಷ್ಣನ ಧ್ವನಿಯು ಕೇಳಬಂದಿತು.

"ಧನ್ಯ ಧನ್ಯ"

ತಂದೆ ಮಕ್ಕಳಿಬ್ಬರೂ ಆ ಧ್ವನಿಯ ಮೂಲವನ್ನು ನೋಡಲು ಮೇಲೆ ತಲೆ ಎತ್ತಿದರು. ಕೃಷ್ಣನು ನಿಂತಿರುವುದು ಕಾಣಿಸಿತು. ಆಗ ಕರ್ಣನು ಉಪ್ಪರಿಗೆಯತ್ತ ಹೊರಡಲುದ್ಯುಕ್ತನಾದ. ಅದನ್ನು ಗಮನಿಸಿದ ಕೃಷ್ಣನು

"ಅಂಗರಾಜ ನಿಲ್ಲಿ ! ನಾನೇ ಕೆಳಗೆ ಬರುತ್ತೇನೆ."

ಕೃಷ್ಣ ಉದ್ಯಾನವನವನ್ನು ಪ್ರವೇಶ ಮಾಡಿದಾಗ ಕರ್ಣನು ಮುಂದೆ ಬಂದು ಆತನಿಗೆ ಸ್ವಾಗತ ನೀಡಿದ.

"ಕ್ಷಮಿಸಬೇಕು. ತಮ್ಮ ನಿದ್ರೆ ಮುಗಿದಿರಬಹುದೆಂಬ ಕಲ್ಪನೆ ನಮ್ಮ ಗಮನಕ್ಕೆ ಬಂದಿರಲಿಲ್ಲ."

"ಕ್ಷಮೆಯ ಅವಶ್ಯಕತೆಯೇ ಇಲ್ಲ. ವೃಷಸೇನನಿಗೆ ತಾವು ಕೊಡುತ್ತಿರುವ ಶಿಕ್ಷಣವನ್ನು ಕಂಡು ತುಂಬ ಸಂತೋಷವಾಗಿದೆ. ಈ ಬಾಲಕನು ಮುಂದೆ ದೊಡ್ಡವನಾಗಿ ಆಶ್ರಮಕ್ಕೆ ಹೋದಾಗ ಅಲ್ಲಿ ಈತನಿಗೆ ಕಲಿಯ ಬೇಕಾದ ಪಾಠಗಳೇನೂ ಇರಲಾರವು."

"ವೃಷಸೇನನಿಗೆ ತನ್ನ ವಿದ್ಯೆಯನ್ನು ತಾನೇ ಸಂಪಾದಿಸಿಕೊಳ್ಳಬೇಕಾಗ ಬಹುದು. ಏಕೆಂದರೆ ಆತನಿಗೆ ಯಾವ ವಿದ್ಯೆ ಬೇಕೆನಿಸುವುದೋ ಅದನ್ನೆಂದಿಗೂ ಕೊಡಿಸಲು ಸಾಧ್ಯವಾಗಲಾರದು" ಕರ್ಣ ತುಂಡು ಮಾತಿನಲ್ಲಿಯೇ ಉತ್ತರಿಸಿದ.

"ಯಾಕೆ ? ದ್ರೋಣಾಚಾರ್ಯರ ಹಿರಿತನದಲ್ಲಿ ನೀವು ಧನುರ್ವಿದ್ಯೆಯನ್ನು ಸಂಪಾದಿಸಲಿಲ್ಲವೇ ? ಹಾಗೇ ಈ ಬಾಲಕನಾದರೂ ಸಹ ಯಾರಾದರೂ ಶ್ರೇಷ್ಠ ಗುರುಗಳಲ್ಲಿ ವಿದ್ಯಾಭ್ಯಾಸವನ್ನು ಪಡೆಯಬಹುದು."

"ನಾನು ಅದನ್ನು ಅನುಭವಿಸಿದ್ದೇನೆ. ಅಧಿರಥ, ಧೃತರಾಷ್ಟ್ರ ಮಹಾ ರಾಜರ ಸ್ನೇಹ ಹಾಗೂ ಅವರ ಕೃಪೆಯಿಂದ ರಾಜಪುತ್ರರೊಂದಿಗೆ ಆಶ್ರಮ

ದಲ್ಲಿರುವ ಭಾಗ್ಯವನ್ನು ಹೊಂದಿದ್ದೇನೆ. ಒಂದು ಸಲ ಗಿಳಿಯನ್ನೇ ಗುರಿಯಾಗಿ ಮಾಡಿದ್ದರು. ಒಂದೇ ಸಾಲಿನಲ್ಲಿ ನಿಂತ ನಮ್ಮೆಲ್ಲರ ಮೇಲೆ ಗುರುಗಳು ತಮ್ಮ ದೃಷ್ಟಿಯನ್ನು ಹರಿಸಿದರು. ನಾನು ಧನುಸ್ಸಿಗೆ ಹೆದೆಯೇರಿಸಿ ಸಿದ್ಧನಾಗಿ ನಿಂತಿದ್ದೆ. ಆಗ ಗುರುಗಳು ನನ್ನನ್ನು ಹಿಂದಕ್ಕೆ ಸರಿಸುತ್ತ ಹೇಳಿದರು.

"ರಾಧೇಯಾ, ಹಿಂದಕ್ಕೆ ನಿಲ್ಲು ! ಸೂತಪುತ್ರರಿಗೆ ಏಕಾಗ್ರತೆಯು ಎಂದಿಗೂ ಲಭಿಸದು. ಆದುದರಿಂದ ನೀನು ಯುವರಾಜನ ಗುರಿಯನ್ನು ಚೆನ್ನಾಗಿ ಲಕ್ಷ್ಯಕೊಟ್ಟು ನೋಡುತ್ತಿರು, ಅದರಲ್ಲಿಯೇ ನಿನ್ನ ಕಲ್ಯಾಣವಿದೆ"

ಹಿಂದಿನ ಆ ಘಟನೆಗಳ ಭಾವವೆಲ್ಲ ಕರ್ಣನ ಮುಖದ ಮೇಲೆ ಸ್ಪಷ್ಟವಾಗಿ ಕಾಣತೊಡಗಿತು. ಆತ ತನ್ನ ಧನುಸ್ಸನ್ನು ಕೈಗೆತ್ತಿಕೊಂಡು ಮುಂಭಾಗದಲ್ಲಿರುವ ಪಕ್ಷಿಗೆ ಗುರಿಯಿಟ್ಟು ಹೇಳಿದ.

"ಆ ಪಕ್ಷಿಯ ಕಣ್ಣುಗಳನ್ನು ನೋಡಿರಿ."

ಕರ್ಣನ ಬಾಣವು ಧನುಸ್ಸಿನಿಂದ 'ಸಪ್' ಎಂಬ ಸಪ್ಪಳದೊಂದಿಗೆ ಮುಂದೆ ಚಿಮ್ಮಿತು. ಗುರಿಯು ಪಕ್ಷಿಯ ಕಣ್ಣಿಗೆ ಸರಿಯಾಗಿ ತಲುಪಿತು. ಕರ್ಣ ಆ ಹಕ್ಕಿಯನ್ನೇ ನೋಡುತ್ತಲಿದ್ದ. ಕೃಷ್ಣನ ಕುತೂಹಲ ಕೆರಳಿತು. ಇಬ್ಬರೂ ಆ ಹಕ್ಕಿಯತ್ತ ಸಮೀಪಿಸಿದರು. ಹಕ್ಕಿಯ ಕಣ್ಣನ್ನು ತೋರಿಸುತ್ತ ಕರ್ಣನು ಹೇಳಿದ.

"ಈ ಕಣ್ಣು ನನಗೆ ಬಹಳಷ್ಟು ಕಲಿಸಿಕೊಟ್ಟಿದೆ. ವಿಶ್ವದಲ್ಲಿ ಕೇವಲ ತಪಶ್ಚರ್ಯದಿಂದ ಜ್ಞಾನವು ಪ್ರಾಪ್ತವಾಗುವುದು. ನಮಗೆ ಗುರುಕೃಪೆ ಲಭಿಸಲಾರದು. ರಾಜಪುತ್ರರಾದವರಿಗೆ ಮಾತ್ರ ಗುರುಗಳ ಉಪದೇಶವು ಲಭಿಸುವುದು. ನೀವೇ ರಾವಣನ ಕಥೆಯನ್ನು ಹೇಳಲಿಲ್ಲವೇ. ಅದು ಸತ್ಯ ಕಥೆ. ಸೂತಪುತ್ರನಾದವನು ತನ್ನ ತಪಶ್ಚರ್ಯ ಬಲದಿಂದಲೆ ಆ ಜ್ಞಾನದ ಹೊದಿಕೆಯನ್ನು ತೆಗೆಯಬಲ್ಲ, ದ್ರೋಣಾಚಾರ್ಯರು ಬ್ರಹ್ಮಾಸ್ತ್ರ ವಿದ್ಯೆ ಕಲಿಸಲು ಹಿಂಜರಿದರು. ಆಗ ನಾನು ಮಹಾಗುರುಗಳಾದ ಪರಶುರಾಮರನ್ನು ಹುಡುಕಿಕೊಂಡು ಹೊರಟೆ ಜ್ಞಾನಪ್ರಾಪ್ತಿಗಾಗಿ ಅಸತ್ಯದ ಆಸರೆಯನ್ನು ಪಡೆಯಬೇಕಾಯಿತು. ಅವರು ನನ್ನನ್ನು ಭೃಗುಕುಲೋತ್ಪನ್ನ ಬ್ರಾಹ್ಮಣ ಪುತ್ರನೆಂದು ಸ್ವೀಕಾರ ಮಾಡಿದರು. ಬ್ರಹ್ಮಾಸ್ತ್ರ ವಿದ್ಯೆಯನ್ನು ಪಡೆದುಕೊಂಡೆ.

ಅದರೊಂದಿಗೆ ಗುರುಸೇವೆಗೆ ಮೀಸಲಾಗಿಸಿದ್ದ ಸಂಯಮದಿಂದ ಎರಡು ಭಯಂಕರವಾದ ಶಾಪಗಳನ್ನೂ ಸಹ ಉಡಿಯಲ್ಲಿ ಕಟ್ಟಿಕೊಂಡೆ. ಏಕಲವ್ಯನಿಗೆ ಗುರುಗಳಿಂದ ವಿದ್ಯೆ ದೊರೆಯಲೇ ಇಲ್ಲ. ಅಂಗೀಕರಿಸಿದ ಗುರುಗಳಿಗಾಗಿ ಆತ ತನ್ನ ಹೆಬ್ಬೆರಳನ್ನು ಕಳೆದುಕೊಳ್ಳಬೇಕಾಯಿತು. ಇಲ್ಲ ಪ್ರಭೂ, ಅದಾವುದೂ ಸಾಧ್ಯವಿಲ್ಲ. ಈ ವೃಷಸೇನನಿಗೆ ವಿದ್ಯೆ ಲಭಿಸಬೇಕಾದಲ್ಲಿ ಸ್ವಂತ ಬಾಹುಬಲ ದಿಂದಲೇ ಆತ ಅದನ್ನು ಗಳಿಸಿಕೊಳ್ಳಬೇಕು."

ಸ್ವಲ್ಪ ತಡೆದು ತನ್ನ ಮಾತುಗಳಿಂದ ಚಕಿತನಾದಂತೆ ತೋರುತ್ತಿರುವ ಕೃಷ್ಣನನ್ನು ನೋಡುತ್ತ ಕರ್ಣನು ಮತ್ತೆ ಹೇಳಿದ.

"ಬಾವಿಯಲ್ಲಿ ಬಿದ್ದ ರಾಜಪುತ್ರನನ್ನು ಬಾಣಗಳ ಸಹಾಯದಿಂದ ಹೊರ ತೆಗೆದುಕೊಟ್ಟ ದ್ರೋಣಾಚಾರ್ಯರು ಕೌರವ ಸಭೆಯಲ್ಲಿ ಸನ್ಮಾನಿತ ರಾಗಿರಬಹುದು. ಆದರೆ ಅಂತರಂಗದ ಬಾವಿಯಲ್ಲಿ ನೂಕಿದವರನ್ನು ಮೇಲಕ್ಕೆತ್ತುವಂತಹ ಗುರುಗಳು ಕಾಣಸಿಗುವುದು ಈ ಧರಿತ್ರಿಯಲ್ಲಿಯೇ ತುಂಬ ಅಪರೂಪ."

"ಅಂಗರಾಜ, ದ್ರೋಣಾಚಾರ್ಯರು ಸರಿಯಾದ ಶಿಕ್ಷಣವನ್ನೀಯ ದಿದ್ದರೂ ನೀವು ಮಾತ್ರ ನಿಮ್ಮ ಸ್ವಂತ ಜ್ಞಾನಾರ್ಜನೆಯಲ್ಲಿ ಯಾವುದನ್ನೂ ಕಡಿಮೆ ಮಾಡಿಲ್ಲ. ನಿಮಗೆ ಗುರುಗಳ ಅಂತರಂಗ ದೊರೆಯದಿರಬಹುದು. ಆದರೆ ನೀವು ಅವರ್ಣನೀಯವಾದ ಮಿತ್ರಪ್ರೇಮವನ್ನು ಸಂಪಾದಿಸಿರುವಿ ರಲ್ಲವೆ ? ಈ ಅಂಗರಾಜ್ಯವನ್ನು ಆ ಮಿತ್ರಪ್ರೇಮದ ಪ್ರತೀಕವಾಗಿಯೇ ನೀವು ಅನುಭವಿಸುತ್ತಿರುವಿರಲ್ಲವೆ ? ಇದಕ್ಕೆಲ್ಲ ನಿಮ್ಮ ಆ ಸೂತಕುಲ ಮಧ್ಯೆ ಪ್ರವೇಶ ಮಾಡಿಲ್ಲವಲ್ಲ ?"

ಕೃಷ್ಣನ ಮಾತುಗಳಿಂದ ಕರ್ಣನ ಅಹಂಕಾರವೆಲ್ಲ ಜಾಗೃತಗೊಂಡಿತು. ಕೃಷ್ಣನಲ್ಲಿಯೇ ನೆಟ್ಟ ದೃಷ್ಟಿಯನ್ನಿಟ್ಟ ಆತನು.

"ದುರ್ಯೋಧನನ ಮಿತ್ರತ್ವವು ನನಗೆ ಅಭಿಮಾನವನ್ನುಂಟು ಮಾಡಿದೆ. ಹಾಗೆನಿಸಬಾರದಾದರೂ ಏಕೆ ? ಶಸ್ತ್ರವಿದ್ಯಾ ಸ್ಪರ್ಧೆಯ ಕಾಲದಲ್ಲಿ ಎಲ್ಲ ಯುವರಾಜರೂ ಭಾಗವಹಿಸುತ್ತಿದ್ದರು. ಅವರ ಅಭ್ಯಾಸದ ಸಿದ್ಧಿಯನ್ನು ಕುರಿತು ಹೊಗಳಿಕೆಯನ್ನು ವ್ಯಕ್ತಪಡಿಸಲಾಗುತ್ತಿತ್ತು. ಅವುಗಳನ್ನೆಲ್ಲ ಕೇಳುತ್ತ ನೋಡುತ್ತ ನಾನು ಹಿಂಬದಿಯಲ್ಲಿ ನಿಲ್ಲಬೇಕಾಗುತ್ತಿತ್ತು.

ಕೌರವರಲ್ಲಿ ಕೊರತೆ ಎಂಬುದೇ ಇರಲಿಲ್ಲ. ವೀರರ ಗುಂಪಿನ ಇನ್ನೊಂದು ಹೆಸರೇ ಅದು. ಆದುದರಿಂದಲೇ ನಾನು ಅರ್ಜುನನಿಗೆ ಆಹ್ವಾನ ವನ್ನಿತ್ತಿದ್ದೆ. ಅಸ್ತ್ರಾಶ್ರುಗಳಾದ ಕೃಪಾಚಾರ್ಯರು ಆ ಅರ್ಜುನನ ಸಹಾಯಕ್ಕಾಗಿ ಮುಂದೆ ಬಂದರು. ಎಲ್ಲರಿಗೂ ಕೇಳಿಸುವಂತೆ ಕುಲಗೋತ್ರ ಉಚ್ಚಾರ ಮಾಡಲು ನನಗೆ ಆಜ್ಞಾಪಿಸಿದರು. ಕುಲದ ಬಗ್ಗೆ ಯಾವಾ ಗಲೂ ನನಗೆ ಅವಮಾನವೆನಿಸುತ್ತಿರಲಿಲ್ಲ. ಆದರೆ ಕೃಪಾಚಾರ್ಯರ ನಡತೆ ಯಿಂದಾಗಿ ನಾನು ಅಸಂತೃಪ್ತನಾದೆ. ಯಾವ ಅಧಿರಥನ ಕುಲದಲ್ಲಿ ನಾನು ಬೆಳೆಯುತ್ತಿದ್ದೆನೋ ಆ ವಂಶದ ಪರಿಚಯವನ್ನು ಹಸ್ತಿನಾಪುರದ ನಿವಾಸಿ ಗಳೆಲ್ಲ ಬಲ್ಲವರಾಗಿದ್ದರು. ಆಶ್ರಮ ಪ್ರವೇಶ ಮಾಡಿದವರೆಲ್ಲರೂ ತಮ್ಮ ಕುಲಗೋತ್ರಗಳನ್ನೆಲ್ಲ ಉಚ್ಚರಿಸಬೇಕಾದುದು ಅವಶ್ಯವೆನಿಸಿದರೂ ಓರ್ವ ಯುವರಾಜನ ಗೌರವವನ್ನು ಹೆಚ್ಚಿಸುವ ನೆಪದಲ್ಲಿ ಇನ್ನೊಬ್ಬ ಶಿಷ್ಯನ ಅವ ಮಾನ ಮಾಡುವಂಥವರನ್ನು ಗುರುಗಳೆಂದು ಏಕೆ ಕರೆಯಬೇಕು? ಯಾವ ಸಮಯದಲ್ಲಿ ನನ್ನ ತೇಜೋವಧೆಯನ್ನು ನೋಡಿ ಎಲ್ಲರೂ ಆನಂದಿಸು ತ್ತಿದ್ದರೋ ಆ ಸಮಯದಲ್ಲಿಯೇ ದುರ್ಯೋಧನನು ಮುಂದೆ ಬಂದು ಅಂಗದೇಶದ ಪಟ್ಟಾಭಿಷೇಕವನ್ನು ಮಾಡಿದ, ರಾಜ್ಯವನ್ನಿತ್ತು ಗೌರವಿಸಿದ."

"ಆ ಮಿತ್ರತ್ವವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಎಂಥವರಿಗೂ ತೃಪ್ತಿಕೊಡುವಂತಹ ಕಾರ್ಯ ಅದು."

"ಇಲ್ಲ, ಕರ್ಣನು ಈವರೆಗೆ ಯಾರಿಂದಲೂ ದಾನ ಸ್ವೀಕರಿಸದವನಲ್ಲ. ಅಂಗರಾಜ್ಯದ ಪದಾಧಿಕಾರ ದೊರಕಿದಾಗಲೂ ಸಹ ಆ ಪದವನ್ನು ಎಂದೂ ನನ್ನದಾಗಿ ನಾನು ಸ್ವೀಕಾರ ಮಾಡಿಕೊಂಡಿಲ್ಲ. ನಾನು ದುರ್ಯೋಧನ ನೊಂದಿಗೆ ಚಿತ್ರಾಂಗದನ ಸ್ವಯಂವರಕ್ಕೆಂದು ಹೋದಾಗ ನನ್ನ ಸೂಚನೆಯ ಮೇರೆಗೆ ಆ ರಾಜಕನ್ಯೆಯನ್ನು ದುರ್ಯೋಧನನು ಅಪಹಾರ ಮಾಡಿದ. ಅಲ್ಲಿ ಕೂಡಿದ ರಾಜಾಧಿರಾಜರ ಗುಂಪು ಆತನನ್ನು ಎದುರಿಸಲು ಸಿದ್ಧವಾಯಿತು. ಅವರನ್ನೆಲ್ಲ ಪ್ರತಿಭಟಿಸಲು ಏಕಾಂಗಿಯಾಗಿ ಹೋರಾಡಲು ನಾನು ಸಿದ್ಧ ನಾದೆ. ಜರಾಸಂಧನ ಮಲ್ಲಯುದ್ಧವನ್ನೂ ನಾನು ಆಸ್ವಾದಿಸಿದೆ. ಆಗ ವಿಜಯಿಯಾದ ನನಗೆ ಮಾಲಿನಿ ನಗರವನ್ನು ಜರಾಸಂಧನು ಒಪ್ಪಿಸಿದ. ಆ ಮಾಲಿನಿ ನಗರವೇ ಇಂದು ಚಂಪಾನಗರವೆಂದು ಕರೆಸಿಕೊಳ್ಳುತ್ತಿದೆ. ನಾನು

ಸ್ವಂತ ಪರಾಕ್ರಮದಿಂದ ಈ ನಗರವನ್ನು ಪಡೆದುಕೊಂಡ ನಂತರವೇ ಅಂಗ ದೇಶದ ಅಧಿಪತ್ಯವನ್ನು ಸ್ವೀಕರಿಸಿಕೊಂಡೆ."

"ನಿಮ್ಮ ಆ ಪರಾಕ್ರಮವನ್ನೂ ನಾನು ಕೇಳಿ ತಿಳಿದಿದ್ದೇನೆ. ಯಾವ ಜರಾಸಂಧನ ಆಕ್ರಮಣದ ಬೆದರಿಕೆಯಿಂದ ಯಾದವರನ್ನೆಲ್ಲ ಕರೆದುಕೊಂಡು ಹೋಗಿ ನಾನು ದ್ವಾರಕಾನಗರ ನಿರ್ಮಾಣ ಮಾಡಿದೆನೋ ಅಂಥ ಜರಾಸಂಧ ನೊಂದಿಗೆ ದ್ವಂದ್ವಯುದ್ಧ ಮಾಡಿಯೂ ನೀವು ಸ್ನೇಹ ಸಂಪಾದಿಸಿರುವುದು ಸಾಮಾನ್ಯ ಪರಾಕ್ರಮವೆಂದೆನಿಸಲಾರದು."

ಕೃಷ್ಣನ ಹೊಗಳಿಕೆಯ ಮಾತುಗಳಿಂದ ಉದ್ವಿಗ್ನವಾಗಿದ್ದ ಕರ್ಣನ ಮನಸ್ಸು ಸ್ವಲ್ಪ ಸ್ಥಿಮಿತಕ್ಕೆ ಬಂದಿತು. ಸಂಕೋಚಗೊಂಡ ಆತನ ಮನಸ್ಸು ವಿಷಯವನ್ನು ಬದಲಿಸಲು ಪ್ರಯತ್ನಿಸತೊಡಗಿತು.

"ತಮ್ಮಲ್ಲಿ ಒಂದು ಪ್ರಾರ್ಥನೆ ಇದೆ."

"ಹೇಳಿರಿ."

"ತಮ್ಮ ಮನದಲ್ಲಿ ನನ್ನ ವಿಷಯವಾಗಿ ಸ್ನೇಹಭಾವವಿದ್ದಲ್ಲಿ ದಯ ಮಾಡಿ ತಾವು ಬಹುವಚನವನ್ನು ಉಪಯೋಗಿಸಬಾರದು."

"ಆಗಬಹುದು."

"ನನ್ನೊಂದಿಗೆ ಈ ಚಂಪಾನಗರವನ್ನು ಸುತ್ತಾಡಿಕೊಂಡು ಬರಲು ತಾವು ಅನುಮತಿಯನ್ನೀಯಬೇಕು."

"ನಗರ ಪ್ರದಕ್ಷಿಣೆಯೆ !"

"ಅಹುದು ! ತಮ್ಮ ಆಗಮನದ ಸಮಾಚಾರವು ಈ ನಗರದ ತುಂಬೆಲ್ಲ ಹಬ್ಬಿದೆ : ನಗರವಾಸಿಗಳು ತಮ್ಮ ದರ್ಶನ ಪಡೆಯಲು ಉತ್ಸುಕರಾಗಿದ್ದಾರೆ. ರಥಶಾಲೆ ಗೋಶಾಲೆಗಳನ್ನು ಸಹ ತಾವು ನೋಡಿದಂತಾಗುತ್ತದೆ."

"ಸಂತೋಷದಿಂದ ಬರುತ್ತೇನೆ ! ರಾಜನೊಂದಿಗೆ ಪ್ರಜೆಗಳನ್ನು ಕಾಣುವ ಭಾಗ್ಯವನ್ನು ಯಾರು ಕಳೆದುಕೊಳ್ಳುತ್ತಾರೆ."

ಕರ್ಣನ ರಥ ಸಿದ್ಧವಾಯಿತು. ಆ ರಥದ ಹಿಂದೆ ಹಾಗೂ ಮುಂದೆ ಅಶ್ವದಳದ ರಕ್ಷಕರಿದ್ದರು. ರಥದ ಸಾರಥ್ಯ ಕರ್ಮವನ್ನು ಕರ್ಣನೇ ವಹಿಸಿ ಕೊಂಡಿದ್ದ. ರಾಜಬೀದಿಯ ಎಡಬಲಗಳಲ್ಲಿ ಪ್ರಜೆಗಳು ಕರ್ಣ ದರ್ಶನಾರ್ಥಿ ಗಳಾಗಿ ನಿಂತಿದ್ದರು. ಕೃಷ್ಣನು ಕರ್ಣನೊಂದಿಗೆ ಚಂಪಾನಗರವನ್ನೆಲ್ಲ

ನೋಡಿದ. ಗೋಶಾಲೆ ರಥಶಾಲೆಗಳಿಗೆ ಭೇಟಿಕೊಟ್ಟು ಮರಳುತ್ತಿರುವಾಗ ಒಂದು ಹಳೆಯ ಮನೆಯ ಮುಂದೆ ಕರ್ಣನ ರಥವು ನಿಂತಿತು. ಸೇವಕರು ಆ ಮನೆಯ ಬಾಗಿಲುಗಳ ಮುಂದೆ ನಿಂತುಕೊಂಡಿದ್ದರು. ಕರ್ಣನು ರಥದಿಂದಿಳಿದೊಡನೆ ಕೃಷ್ಣನೂ ಕೆಳಗಿಳಿದು ಬಂದ. ಸೇವಕರು ಅವಸರದಿಂದ ಆ ಮನೆಯ ಬಾಗಿಲುಗಳನ್ನು ತೆಗೆದರು. ಒಳಭಾಗವನ್ನು ಪ್ರವೇಶ ಮಾಡಿದಾಗ, ವಿಶಾಲವಾದ ಪ್ರಾಂಗಣದಲ್ಲಿ ಪಾರಿಜಾತ ವೃಕ್ಷವು ಕಾಣಿಸಿತು. ಆ ವೃಕ್ಷವಾದರೂ ಸಹ ತುಂಬ ಪುರಾತನವಾದುದು ಎಂದೆನಿಸುತ್ತಿತ್ತು. ಅಂಗಳದ ಮಧ್ಯಭಾಗದಲ್ಲಿರುವ ಒಂದು ಸ್ಥಳದಲ್ಲಿ ಅಲಂಕೃತವಾದ ಆಸನವಿತ್ತು. ಸಾಯಂಕಾಲದ ಸಮಯವಾದುದರಿಂದ ಪರಿಸರವೆಲ್ಲ ನಿಗೂಢತೆಯಿಂದ ತುಂಬಿಕೊಂಡಂತೆ ಭಾಸವಾಗುತ್ತಿತ್ತು. ಕೃಷ್ಣನ ದೃಷ್ಟಿಯು ಆ ಆಸನದ ಮೇಲಿಟ್ಟಿರುವ ಪುಟ್ಟದಾದ, ಅತಿ ಸುಂದರವಾದ, ರಥವನ್ನು ನೋಡುವುದರಲ್ಲಿ ತಲ್ಲೀನವಾಯಿತು. ಆ ರಥದ ಪ್ರತಿಯೊಂದು ಭಾಗವೂ ಬಹು ಸೂಕ್ಷ್ಮರೀತಿಯ ಕೆತ್ತನೆಯಿಂದ ಕೂಡಿದುದಾಗಿತ್ತು.

ಮನಸ್ಸನ್ನು ತಡೆಹಿಡಿದುಕೊಳ್ಳಲಾರದೆ ಕೃಷ್ಣನು

"ಕರ್ಣಾ, ಯಾರದು ಈ ಮನೆ?"

ಕೃಷ್ಣನ ಇರುವಿಕೆಯನ್ನೂ ಸಹ ಮರೆತು ತನ್ನ ವಿಚಾರದಲ್ಲಿಯೇ ತಾನು ಮುಳುಗಿಹೋಗಿದ್ದ ಕರ್ಣನು ಈ ಪ್ರಶ್ನೆಯಿಂದಾಗಿ ಎಚ್ಚರಗೊಂಡು ಹಿಂದಕ್ಕೆ ಸರಿಯುತ್ತ,

"ಹಾಂ!"

"ಈ ಮನೆ ಯಾರದು?"

"ನಮ್ಮದು!" ಕೃಷ್ಣ, ಈ ಮನೆಯಲ್ಲಿಯೇ ನನ್ನ ಬಾಲ್ಯವು ಕಳೆದಿದೆ. "ಸೂತಗ್ರಾಮ" ಎಂದೇ ಚಂಪಾನಗರ ಪ್ರತೀತಿ. ನದಿಯ ಪ್ರವಾಹದೊಂದಿಗೆ ನಾನು ತೇಲಿ ಬಂದಿರಬಹುದು. ಆದರೆ ರಾಧಾತಾಯಿಯ ಅಂತಃಕರಣವು ಮಾತ್ರ ಎಂದೂ ನನ್ನನ್ನು ಪರಕೀಯನೆಂದು ಭಾವಿಸಲಿಲ್ಲ. ಮಾತಾಪಿತೃಗಳ ಮಮತೆ ಹಿರಿದಾದುದು ಎಂಬ ಭಾವನೆಯೂ ನನಗುಂಟಾಗಲಿಲ್ಲ. ನಾನು ದೊರೆತ ನಂತರವೇ ರಾಧಾತಾಯಿಗೆ ಮಕ್ಕಳು ಹುಟ್ಟಿದರು. ಹೀಗಿದ್ದರೂ ಅವಳ ಅಂತಃಕರಣದಲ್ಲಿ ಯಾವ ತಾರತಮ್ಯವನ್ನೂ ನಾನು ಕಾಣಲಿಲ್ಲ."

ಈ ಮಾತುಗಳನ್ನು ಹೇಳುವಾಗ ಅಲ್ಲಿರುವ ಆ ಪುಟ್ಟ ರಥದ ಮೇಲೆ ಕರ್ಣನು ಬೆರಳಾಡಿಸುತ್ತಲಿದ್ದು ಮೋಹಕ ಧ್ವನಿಯಲ್ಲಿ ಆತ ಮತ್ತೆ ಹೇಳಿದ.

"ನಾನು ಚಿಕ್ಕವನಿರುವಾಗ ತಂದೆ ಈ ರಥವನ್ನು ಸಿದ್ಧಪಡಿಸಿದರು; ಅದು ಯಾವಾಗ ಗೊತ್ತೇ ? ಶಿಕ್ಷಣಾರ್ಥಿಯಾಗಿ ನಾನು ಆಶ್ರಮಕ್ಕೆ ಹೋಗಿದ್ದೆ. ತಂದೆತಾಯಿಗಳಿಗೆ ನನ್ನ ವಿಯೋಗವು ಸಹಿಸದಂತಾಯಿತು. ತುಂಬಿದ ಸಂಸಾರದಲ್ಲಿದ್ದರೂ ಸಹ ಅವರ ಅಂತರಾತ್ಮವು ಏಕಾಕಿತನವನ್ನು ಅನುಭವಿಸತೊಡಗಿತು. ಆ ಮನಸ್ಸನ್ನು ಹಿಡಿತಕ್ಕೆ ತರಲು ಅವರು ಕುಶಲ ಕರ್ಮಿಗಳನ್ನು ಬರಮಾಡಿಕೊಂಡು ಅವರ ಮುಂದೆ ಕುಳಿತು ಈ ರಥವನ್ನು ಸಿದ್ಧಪಡಿಸುವಂತೆ ಏರ್ಪಾಟು ಮಾಡಿದರು. ಆದರೆ ಈ ರಥದಲ್ಲಿಯೂ ಸಹ ದೊಡ್ಡ ತಪ್ಪು ಕಾಣುವಂತಾಗಿದೆ."

"ಯಾವುದು ?"

ಕರ್ಣನು ನಕ್ಕ.

"ನನ್ನ ಬಾಲ್ಯದ ರೂಪವನ್ನು ಮುಂದಿಟ್ಟುಕೊಂಡು ಈ ರಥವನ್ನು ನಿರ್ಮಿಸಲಾಗಿದೆ, ಆಶ್ರಮದಿಂದ ಮರುಳಿದಾಗ ನಾನು ದೊಡ್ಡವನಾಗಿದ್ದೆ. ಆದುದರಿಂದ ಇದು ನಮ್ಮ ಮನೆಯಲ್ಲಿ ಒಂದು ಕಾಲದ ದ್ಯೋತಕನಾಗಿ ಉಳಿಯಿತು." ಈ ಮಾತುಗಳು ಹೇಳುತ್ತಿದ್ದಂತೆ ಆತ ಗಂಭೀರನಾದ, ಆತನ ಹಾಸ್ಯವು ಮಾಯವಾಗಿ ಕಣ್ಣು ಹಸಿಗೂಡಿದವು.

"ಈ ರಥವು ಇಲ್ಲಿಯೇ ಉಳಿದು ಹೋಯಿತು. ನನ್ನ ಸಾಕು ತಂದೆ ತನ್ನ ಮಕ್ಕಳಿಗೂ ಸಹ ಕೈಹಚ್ಚಗೊಡಲಿಲ್ಲ. ನನ್ನ ಸಾಕು ತಂದೆ ತಾಯಿಗಳ ನೆನಪಾದಾಗಲೆಲ್ಲ ನಾನು ಇಲ್ಲಿಗೆ ಬರುತ್ತೇನೆ. ಹಿಂದೆ ಈ ಮನೆ ಹೇಗಿತ್ತೋ ಅದನ್ನು ಹಾಗೆಯೇ ರಕ್ಷಿಸಿಕೊಂಡು ಬರುತ್ತಲಿದ್ದೇನೆ."

ಆ ಸುಂದರವಾದ ಪುಟ್ಟ ರಥದ ಹಿನ್ನೆಲೆಯ ಕಥೆಯನ್ನರಿತು ಕೃಷ್ಣನು ಅಸ್ವಸ್ಥನಾದ. ಕರ್ಣನ ಹೆಗಲ ಮೇಲೆ ಕೈಯನ್ನಿಡುತ್ತ ಆತನು ಹೇಳಿದ.

"ಕರ್ಣ, ಜೀವನದಲ್ಲಿ ಅನೇಕ ಬಯಕೆಗಳು ಆಕಾಂಕ್ಷೆಗಳು ಹುಟ್ಟಿಕೊಳ್ಳುವುದುಂಟು. ಸುಂದರವಾದ ಸ್ವಪ್ನದಂತೆ ಅವು ಮನದಲ್ಲಿ ಮನೆ ಮಾಡಿಕೊಂಡು ಬಹುದಿನ ವಾಸಿಸುವುದುಂಟು. ಆದರೆ ಆ ಮನದ ಬಯಕೆಗಳೆಲ್ಲ

ಸಾಕಾರ ರೂಪವನ್ನು ತಾಳಿದಾಗ ರೂಪಿತವಾದ ಮನೋಬಯಕೆಗಳೆಲ್ಲ ಇವನ್ನು ಅಪೂರ್ಣವೆಂದೆನಿಸುತ್ತವೆ".

ಕರ್ಣನು ಕೃಷ್ಣನತ್ತ ನೋಡಿ ಹೇಳಿದ :

"ಸತ್ಯವೆಂದೆನಿಸಿದರೂ ಇಂಥ ವಿಚಾರಗಳನ್ನು ಅರಗಿಸಿಕೊಳ್ಳುವುದು ಕಠಿಣವೆಂದೆನಿಸುತ್ತದೆ. ಕತ್ತಲೆಯಾಗತೊಡಗಿದೆ, ಹೊರಡೋಣವೆ ?"

ಸಾಯಂಕಾಲ ದೀಪ ಹಚ್ಚುವ ಸಮಯ. ಕೃಷ್ಣನೊಂದಿಗೆ ಕರ್ಣನು ರಾಜಗೃಹವನ್ನು ಪ್ರವೇಶಿಸಿದ. ರಾತ್ರಿ ಭೋಜನವಾದ ನಂತರ ಬೆಳಗಿನ ಜಾವದಲ್ಲಿ ಪ್ರಯಾಣ ಮಾಡುವುದಾಗಿ ಕೃಷ್ಣನು ಸೂಚನೆಯನ್ನಿತ್ತ. ಈ ಮಾತನ್ನು ಕೇಳಿ ಕರ್ಣ ಹಾಗೂ ವೃಷಾಲಿ ಗಾಬರಿಯಾದರು.

"ನಮ್ಮ ಆದರಾತಿಥ್ಯದಲ್ಲಿ ಏನಾದರೂ ಕುಂದುಕೊರತೆಗಳಾಗಿದ್ದಲ್ಲಿ ಕ್ಷಮಿಸಿರಿ. ತಮ್ಮ ಸಹವಾಸ ಇನ್ನೂ ಹೆಚ್ಚಾಗಿ ಲಭಿಸಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ."

"ಕರ್ಣ, ರಾಜೈಶ್ವರ್ಯದಿಂದ ಕೂಡಿದ ನಿನ್ನ ಗೃಹದಲ್ಲಿ ಯಾವ ಕೊರತೆಯಿದೆ. ನಿಮ್ಮ ಸಹವಾಸವು ನನಗೂ ಪ್ರಿಯವೆನಿಸಿದೆ. ಆದರೆ ದ್ರುಪದನು ತನ್ನ ಕನ್ಯೆಯ ಸ್ವಯಂವರವನ್ನು ಏರ್ಪಾಟು ಮಾಡಿದ್ದಾನೆ. ಆತನು ನನ್ನ ಪರಮಮಿತ್ರ. ಆತನ ಸ್ನೇಹಕಕ್ಕಾಗಿ ಅಗತ್ಯವಾಗಿ ನಾನು ಹೋಗಬೇಕಾಗಿದೆ. ಸ್ವಯಂವರದ ಆಮಂತ್ರಣವು ನಿನಗೂ ಬಂದಿರಬಹುದಷ್ಟೆ ?"

"ಅಹುದು."

"ಹಾಗಾದರೆ ನೀನು ಬರುವುದಿಲ್ಲವೆ ?"

"ಇಲ್ಲ"

"ಕಾರಣ ?"

"ದ್ರುಪದನೊಂದಿಗೆ ನನ್ನ ಮಿತ್ರತ್ವವಿಲ್ಲ. ಅಲ್ಲದೆ ಸ್ವಯಂವರಕ್ಕೆ ವೀರರು ಹೋಗುವುದು ವಿಜಯ ಸಂಪಾದನೆಗಾಗಿ."

ವೃಷಾಲಿಯನ್ನು ನೋಡುತ್ತಾ "ಆದಕ್ಕಾಗಿ ನಾನು ಸ್ವಯಂವರವನ್ನು ಹುಡುಕಿಕೊಂಡು ಹೋಗುವ ಅವಶ್ಯಕತೆಯೂ ಇಲ್ಲ. ಜೀವನದಲ್ಲಿ ನಾನು ತೃಪ್ತನಾಗಿದ್ದೇನೆ."

ಕೃಷ್ಣನು ಆನಂದದಿಂದ ನಕ್ಕಾಗ ವೃಷಾಲಿಯು ತುಂಬಾ ಲಜ್ಜಿತ ಳಾದಳು. ಕರ್ಣನು ಮತ್ತೆ ಕೇಳಿದ.

"ತಾವು ನಾಳೆಯೇ ಹೊರಡಬೇಕೆ ?"

"ಸ್ವಯಂವರಕ್ಕಾಗಿ ನಾನು ಹೊರಟವನಲ್ಲ. ಅದರ ಪೂರ್ವ ಸಿದ್ಧತೆ ಗಾಗಿ ಹೋಗುತ್ತಲಿದ್ದೇನೆ."

"ದ್ರುಪದರಾಜ ಕನ್ಯೆ ತುಂಬ ಸುಂದರಿಯಾಗಿದ್ದಾಳೆಯೇ ?"

"ಸುಂದರ ಈ ಶಬ್ದವೇ ಅಪೂರ್ಣವಾದುದು ! ಆ ಕನ್ಯೆ ದ್ರುಪದನ ಮಗಳಲ್ಲ, ದ್ರುಪದನು ಮಾಡಿದ ಯಜ್ಞಕುಂಡದಲ್ಲಿ ಜನಿಸಿದ ತೇಜಸ್ವೀಕನ್ಯೆ ಅವಳು."

ವೃಷಾಲಿಯ ಕಡೆ ನೋಡಿ ಮುಗುಳುನಗೆಯೊಂದಿಗೆ ಕೃಷ್ಣನು ಹೇಳಿದ. "ವೃಷಾಲಿ, ಇವರ ಮನಸ್ಸು ಪರಿವರ್ತನೆಯಾಗಬಹುದು. ಆದರೂ ಇವರನ್ನು ಸ್ವಯಂವರಕ್ಕೆ ಕಳಿಸಿಕೊಡಬೇಡ. ಒಂದು ವೇಳೆ ಆ ಯಜ್ಞ ಸೇನೆಯು ಇವರ ಕವಚಕುಂಡಲಗಳು ಹಾಗೂ ಇವರ ರೂಪ ಇವುಗಳನ್ನು ನೋಡಿ ಮನಸೋಲಬಹುದು. ಕರ್ಣ, ನಾನಿನ್ನು ಹೊರಡುವೆನೆಂದು ಬೇಸರ ಪಡಬೇಡ. ಭೇಟಿಯು ಎಷ್ಟು ಕಾಲ ನಡೆಯಿತೆನ್ನುವುದಕ್ಕಿಂತ ಯಾವ ಭಾವನೆಯಿಂದ ನಡೆಯಿತು ಎನ್ನುವುದು ತುಂಬ ಮಹತ್ವದ ವಿಷಯ. ನಿಮ್ಮ ಪ್ರೀತಿ ಅಂತಃಕರಣ ನನ್ನ ಮನಸ್ಸಿನಲ್ಲಿ ಯಾವಾಗಲೂ ಉಳಿಯುವಂತಹುದು."

ಮರುದಿನ ನಸುಕಿನ ಜಾವದಲ್ಲಿ ರಾಜಾಂಗಳದ ಬಯಲಿನಲ್ಲಿ ಕೃಷ್ಣ, ಕರ್ಣ, ವೃಷಸೇನ, ವೃಷಾಲಿ ಇವರೆಲ್ಲ ನಿಂತಿದ್ದರು. ಕೃಷ್ಣನ ಸೇನೆಯು ಪ್ರಯಾಣಕ್ಕೆ ಸಜ್ಜಾಗಿ ನಿಂತಿತ್ತು. ಪೂರ್ವಾದ್ರಿಯಲ್ಲಿ ಅರುಣ ಪ್ರಕಾಶ ರಾಗರಂಜಿತವಾಗಿ ಕಾಣಲಾರಂಭಿಸಿತ್ತು. ಕೃಷ್ಣನೆಂದ.

"ಕರ್ಣ ಇನ್ನು ಅಪ್ಪಣೆಯನ್ನು ಕೊಡು"

"ತಮ್ಮೊಂದಿಗೆ ಸ್ವಲ್ಪ ದೂರ ನಾನೂ ಬರುತ್ತೇನೆ."

"ಬೀಳ್ಕೊಡುವ ಸಮಯದಲ್ಲಿ ಮಂದಗತಿಯು ವಿಹಿತವಲ್ಲ. ಆದರಿಂದ ವ್ಯಥೆಯು ಹೆಚ್ಚುತ್ತದೆ. ಆದುದರಿಂದಲೇ ಈ ಬೀಳ್ಕೊಡುವುದನ್ನು ಆದಷ್ಟು ಬೇಗನೆ ಮುಗಿಸುವುದು ವಿಹಿತ. ಈ ಕಾರಣದಿಂದ ನೀವು ಮಹಾದ್ವಾರದ

ವರೆಗೂಕೂಡ ಬರುವುದು ಬೇಡ. ಇಲ್ಲಿಯೇ ನಿಲ್ಲಿ. ಹೊರಡುತ್ತಿರುವಂತೆ ಬಹು ಹೊತ್ತು ನಿಮ್ಮನ್ನು ನೋಡಲು ಬರುತ್ತದೆ. ಇನ್ನು ನಾನು ಬರಲೇ ?"

ಕೃಷ್ಣನ ಮಾತುಗಳಿಂದ ಕರ್ಣನ ಹೃದಯವು ತುಂಬಿ ಬಂದಿತು. ಕೇವಲ ಎರಡು ದಿನಗಳ ಅಲ್ಪಾವಧಿಯ ಸಹವಾಸವು ಬಹು ದೀರ್ಘಕಾಲದ ಗಾಢವಾದ ಮಿತ್ರತ್ವವನ್ನು ಹೆಣೆದಂತೆ ಭಾಸವಾಗುತ್ತಿತ್ತು. ಕೃಷ್ಣನ ಅಗಲುವಿಕೆಯನ್ನು ಸಹಿಸದೆ ಕರ್ಣನು ಹೇಳಿದ,

"ಕೃಷ್ಣಾ, ನಾನೇನು ಹೇಳಲಿ ? ಇರಿ ಎಂದು ಹೇಳಿದಲ್ಲಿ ಅಧಿಕಾರ ಚಲಾಯಿಸಿದಂತಾಗುತ್ತದೆ, ಹೋಗಿರಿ ಎಂದು ಹೇಳಿದಲ್ಲಿ ಉಪೇಕ್ಷೆ ಮಾಡಿದಂತಾಗುತ್ತದೆ. ಇವೆರಡನ್ನು ಬಿಟ್ಟು ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ ಎಂದರೆ ಅದು ನನ್ನ ಉದಾಸೀನತೆಯನ್ನು ತೋರಿಸುತ್ತದೆ. ಹೀಗಿದ್ದರೂ ಸಹ ಒಂದು ಮಾತನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಬೇಕೆನ್ನಿಸುತ್ತದೆ. ನಾವು ಎಲ್ಲಿದ್ದರೂ ಸಹ ನಮ್ಮಿಬ್ಬರಲ್ಲಿ ಯಾವಾಗ ನೆನಪಾಗುತ್ತದೆಯೋ ಆ ನೆನಪು ಒಳ್ಳೆಯ ಭಾವನೆಯಿಂದ ಕೂಡಿದುದಾಗಿರಲಿ. ಆ ನೆನಪು ಜೀವನದ ಸಾರ್ಥಕ್ಯವನ್ನು ಹೆಚ್ಚಿಸುವಂತಾಗಿರಲಿ."

ಕೃಷ್ಣನು ಭರದಿಂದ ಕರ್ಣನನ್ನಪ್ಪಿಕೊಂಡು ಆತನ ಬೆನ್ನ ಮೇಲೆ ಕೈಯಾಡಿಸುತ್ತ ಹೇಳಿದ.

"ಆಗಲಿ. ಹಾಗೆಯೇ ಆಗಲಿ, ಹಾಗೆಯೇ ಘಟಿಸಲಿ."

ಆಲಿಂಗನದಿಂದ ದೂರವಾದೊಡನೆ ವೃಷಾಲಿಯು ಕೃಷ್ಣನಿಗೆ ನಮಸ್ಕಾರ ಮಾಡಿದಳು. ಆತ ತನ್ನ ಹಸ್ತವನ್ನು ಮೇಲೆತ್ತಿದರೂ ಸಹ ಶಬ್ದಗಳು ಹೊರಬರದಂತಾದವು. ವೃಷಸೇನನು ಮುಂದೆ ಬಂದು ಕೃಷ್ಣನ ಪಾದಗಳಿಗೆ ನಮಿಸಿದಾಗ ಆ ಮಗುವನ್ನು ಮೇಲಕ್ಕೆತ್ತಿ ಎದೆಗವಚಿಗೊಳ್ಳುತ್ತ ಹೇಳಿದ.

"ಮಿತ್ರಾ, ಈತನನ್ನು ಜಪ್ಪಿಸು."

ವೃಷಸೇನನನ್ನು ಕೆಳಗಿಳಿಸಿದ ಕೃಷ್ಣನು ತನ್ನ ಕೈಯಲ್ಲಿ ಹಿಡಿದಿದ್ದ ಬಂಗಾರದ ಎಳೆಗಳಲ್ಲಿ ಚಿತ್ರಾಕಾರದ ಕೆಲಸ ಮಾಡಿದ ರೇಷ್ಮೆಯ ಶಾಲನ್ನು ಕರ್ಣನ ಕೈಯಲ್ಲಿಡುತ್ತ,

"ಬಹು ಹೆಸರುವಾಸಿಯಾದ ಕಲಾಕಾರನೊಬ್ಬ ಇದನ್ನು ನೆಯ್ದಿದ್ದಾನೆ. ನನ್ನ ನೆನಪಿಗಾಗಿ ಇದು ನಿಮ್ಮಲ್ಲಿರಲಿ. ನಾನು ಬರುತ್ತೇನೆ."

ಕೃಷ್ಣನು ಹೊರಟಾಗ ಹಿಂಬದಿಯು ಆತನ ಆ ರೂಪವನ್ನೇ ವೃಷಾಲಿ ಹಾಗೂ ಕರ್ಣ ಇಬ್ಬರೂ ವೀಕ್ಷಿಸತೊಡಗಿದರು. ಏನು ಹೇಳಬೇಕೆಂಬ ಪ್ರಜ್ಞೆ ಅವರಿಬ್ಬರಲ್ಲಿಯೂ ಉಳಿದಿರಲಿಲ್ಲ. ಕ್ಷಣಮಾತ್ರದಲ್ಲಿ ಗಂಭೀರವಾದ ಶಂಖನಾದವು ಪರಿಸರವನ್ನೆಲ್ಲಾ ವ್ಯಾಪಿಸಿತು. ಆ ಧ್ವನಿಯೊಂದಿಗೆ ಕಾಲುಗಳ ಸಪ್ಪಳವು ಕೇಳತೊಡಗಿತು. ಅದರೊಂದಿಗೆ ರಥದ ಗಾಲಿಗಳ ಶಬ್ದವೂ ಮಿಶ್ರಣಗೊಂಡಿತು, ತನ್ನ ಪರಿವಾರದೊಂದಿಗೆ ಹೊರಟ ಕೃಷ್ಣನ ರಥವು ರಾಜಭವನದ ಹೆಬ್ಬಾಗಿಲನ್ನು ದಾಟಿ ಮುಂದೆ ಸರಿಯುತ್ತಲಿತ್ತು. ಕರ್ಣನು ತನಗರಿವಿಲ್ಲದಂತೆ ಕೈ ಜೋಡಿಸಿಕೊಂಡು ನಿಂತುಕೊಂಡಿದ್ದನು.

ಬೆಳಗಿನ ಸೂರ್ಯಕಿರಣಗಳೊಂದಿಗೆ ಕೃಷ್ಣನ ರಥವು ಕಾಣಿಸದಂತಾಯಿತು. ಧೀರ್ಘನಿಟ್ಟುಸಿರಿನೊಂದಿಗೆ ಕರ್ಣನು ಮರಳಿ ಹೊರಟಾಗ ಆತನ ಮುಖದ ಮೇಲೆ ಅವ್ಯಕ್ತವಾದ ಭೀತಿಯು ಕಾಣಿಸಿಕೊಂಡಿತು. ಯಾವ ಸ್ಥಳದಲ್ಲಿ ಕರ್ಣನ ನೋಟ ಕೇಂದ್ರೀಕೃತವಾಗಿತ್ತೋ ಆ ಸ್ಥಳವನ್ನು ವೃಷಾಲಿಯೂ ನೋಡಿದಳು. ಅವಳ ಮನಸ್ಸು ತುಂಬಾ ವಿಚಲಿತಗೊಂಡಿತು. ಉಪ್ಪರಿಗೆಯ ತುದಿ ಅಂಚಿನಲ್ಲಿ ನಿಂತು ಮುಂಬಾಗಿ ವೃಷಸೇನನು ಕೃಷ್ಣನ ರಥವನ್ನು ನೋಡುತ್ತಲಿದ್ದ. ವೃಷಾಲಿ ಕರ್ಣನಿಗೆ ಸಂಜ್ಞೆ ಮಾಡಿದಳು. ಆಗ ಕರ್ಣನು,

"ವಸೂ"

ವೃಷಸೇನನು ಹಿಂದಿರುಗಿದಾಗ ನಗುಮುಖಿಯಾಗಿ ಪ್ರಸನ್ನಚಿತ್ತನಾಗಿ ಕಂಡನು. ಆತನ ಮುಂಗುರುಳು ಗಾಳಿಯಲ್ಲಿ ಹಾರಾಡುತ್ತಿದ್ದವು. ವೃಷಾಲಿಯ ದೃಷ್ಟಿಯೊಂದಿಗೆ ಆತನ ದೃಷ್ಟಿಯು ಒಂದುಗೂಡಿತು. ಮುಂದಡಿಯಿಟ್ಟ ಅವಳು ಮಗುವನ್ನೆತ್ತಿಕೊಂಡು ಹೊರಟಳು.

ನಿಶ್ಚಿಂತೆಯ ಉಸಿರೆಳೆಯುತ್ತ ಕರ್ಣನು ಪ್ರಶ್ನೆ ಮಾಡಿದ.

"ಅಂಜಿಕೆಯಾಗಲಿಲ್ಲವೆ ?"

"ಅಂಜಿಕೆ ! ಯಾತರ ಅಂಜಿಕೆ. ಆತನನ್ನು ನೋಡುವವರೆಗೆ ಸ್ವಲ್ಪ ಹೆದರಿಕೊಂಡಿದ್ದೆ, ಅಷ್ಟೆ. ಅನಂತರ ಅದೂ ಹೊರಟು ಹೋಯಿತು. ಆತ

ತಾನು ನಿಂತ ಸ್ಥಳದಿಂದ ಅಲ್ಲಾಡಲಾರನೆಂಬ ಸಂಪೂರ್ಣ ವಿಶ್ವಾಸವು ನನ್ನದಾಗಿತ್ತು."

"ನಿನ್ನ ಕಣ್ಣುಗಳಲ್ಲಿ ಅಂಥ ಪವಾಡವಿದೆಯೋ ?"

"ನನ್ನ ಕಣ್ಣುಗಳಲ್ಲಿ ಅಂಥ ಶಕ್ತಿ ಇರದಿದ್ದರೆ ತಾಯಿಯಾಗುವ ಅರ್ಹತೆ ನನಗೆ ಬರಲಾರದು." ಎಂದು ನಗುತ್ತ ಹೇಳಿದಳು ವೃಷಾಲಿ.

"ನಮಗೂ ಅದರ ಅನುಭವವಿದೆ. ನಿನ್ನ ನೋಟದಿಂದ ಯಾವಾಗಲೂ ನಾವು........" ಎಂದು ಕರ್ಣ ವಿನೋದವಾಗಿ ನುಡಿದ.

ವೃಷಾಲಿ ಹುಸಿಕೋಪದಿಂದ ಕರ್ಣನನ್ನು ನೋಡಿದಳು. ಆತ ದೊಡ್ಡದಾಗಿ ನಗುತ್ತ ವೃಷಸೇನನನ್ನೆತ್ತಿಕೊಂಡು ಹೆಬ್ಬಾಗಿಲಿನತ್ತ ನೋಡಿದ. ಗಗನ ಚುಂಬಿತ ಧೂಳು ಮೇಲೆದ್ದಿರುವುದು ಕಾಣಿಸಿತು. ಕೃಷ್ಣನ ನೆನಪು ಪುನಃ ಮರುಕಳಿಸಿತು. ಆತ ಗಂಭೀರನಾದ.

"ಕೃಷ್ಣನ ಭೇಟಿಯ ಆನಂದವು ಇಷ್ಟೊಂದು ಅಗಾಧವಾದುದೆಂಬ ಕಲ್ಪನೆ ನಾನು ನನ್ನ ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಆ ಮಹಾನುಭಾವನ ರೂಪವು ಈ ಸೂರ್ಯದೇವನ ಕಿರಣಗಳಂತೆ ಸಮಸ್ತ ವಿಶ್ವವನ್ನೇ ಬೆಳಗುತ್ತಿರುವಂತೆ ಭಾಸವಾಗುತ್ತಿದೆ" ಎಂದು ವೃಷಾಲಿಯು ನುಡಿದಳು.

## 3

ರಾಜಗೃಹದಲ್ಲಿ ಕರ್ಣನು ಮಧ್ಯಾಹ್ನದ ವಿಶ್ರಾಂತಿಯನ್ನು ಪಡೆಯುತ್ತಲಿದ್ದ. ಆತನ ಪಕ್ಕದಲ್ಲಿಯೇ ವೃಷಸೇನ ಆಟವಾಡುತ್ತಲಿದ್ದ.

"ಅಪ್ಪಾ"

"ಹ್ಞುಂ"

"ಕೃಷ್ಣ ಮಹಾರಾಜರು ಯಾವಾಗ ಬರುತ್ತಾರೆ ?"

ಕೃಷ್ಣನ ಹೆಸರು ಕೇಳಿದೊಡನೆ ಕರ್ಣನ ಗಮನವು ವೃಷಸೇನನತ್ತ ಹೊರಳಿತು. ಕೃಷ್ಣನು ಚಂಪಾನಗರಿಗೆ ಭೇಟಿ ಕೊಟ್ಟು ಎಂಟು ದಿನಗಳಾಗಿದ್ದವು. ಆದರೂ ವೃಷಸೇನನ ಮನಸ್ಸಿನಲ್ಲಿ ಆ ಕೃಷ್ಣನಮೂರ್ತಿಯು ಅಚ್ಚಳಿಯದೇ ಉಳಿದುಹೋಗಿತ್ತು. ಒಂದು ರೀತಿಯಲ್ಲಿ ಕರ್ಣನ ಮನಸ್ಥಿತಿಯೂ ಸಹ ವೃಷಸೇನನಂತೆಯೇ ಆಗಿತ್ತು.

"ಹೇಳು ತಂದೆ."

"ವಸೂ, ನಮ್ಮ ಜೀವನದಲ್ಲಿ ಯಾವ ಗಳಿಗೆಯಲ್ಲಿ ಆನಂದದ ಕ್ಷಣಗಳು ಬರುತ್ತವೆಯೋ ಅಂಥ ಸಮಯದಲ್ಲಿ ಮಾತ್ರ ಇಂತಹ ಮಹಾನುಭಾವರ ದರ್ಶನ ಹಾಗೂ ಸಹವಾಸವು ಲಭಿಸುತ್ತದೆ. ದೈವದಲ್ಲಿ ಏನು ಬರೆದಿದೆ. ಎಂಬುದನ್ನಾರು ಹೇಳಬಲ್ಲರು!" ವೃಷಸೇನನಿಗೆ ತಂದೆಯ ಮಾತುಗಳೊಂದೂ ಅರ್ಥವಾಗಲಿಲ್ಲ. ಆದುದರಿಂದ ಇನ್ನೇನಾದರೂ ಕೇಳ ಬೇಕೆಂಬ ಚಪಲತೆಯಲ್ಲಿದ್ದ. ಅಷ್ಟರಲ್ಲಿ ಆತನ ಗಮನವು ಬಾಗಿಲತ್ತ ಹೊರಳಿತು. ಆತನ ತಾಯಿಯಾದ ವೃಷಾಲಿಯು ಕರ್ಣನ ಸಮೀಪಕ್ಕೆ ಬಂದು ನುಡಿದಳು.

"ನಿಮ್ಮ ಭೇಟಿಗಾಗಿ ಯಾರೋ ಬಂದಿದ್ದಾರೆ."

"ಯಾರು ?"

"ನೀವೇ ಹೇಳಿರಿ ನೋಡುವಾ !"

"ಹಸ್ತಿನಾಪುರದಿಂದ ಶತ್ರುಂಜಯ ಬಂದಿರಬಹುದು."

"ಇಲ್ಲ" ಎನ್ನುವಂತೆ ಅವಳು ತಲೆ ಅಲ್ಲಾಡಿಸಿದಳು.

"ವೃಷಕೇತು ಬಂದಿರಬಹುದೇ ?"

"ಇಲ್ಲ"

"ಹಾಗಿದ್ದರೆ ಉತ್ತರಿಸುವುದು ಬಹು ಸುಲಭ. ನನ್ನ ಆತ್ಮೀಯ ಗೆಳೆಯ ಚಕ್ರಧರ ಬಂದಿರಬಹುದು"

"ಅದನ್ನು ನೀವು ಹೇಗೆ ತಿಳಿದುಕೊಂಡಿರಿ ?"

"ನನ್ನನ್ನು ಭೇಟಿಯಾಗದೆ ನೇರವಾಗಿ ನಿನ್ನಲ್ಲಿಗೆ ಬರುವವರೆಂದರೆ ನನ್ನ ಇಬ್ಬರು ಮಕ್ಕಳು. ಆತ್ಮೀಯ ಮಿತ್ರ ಚಕ್ರಧರ. ಎಲ್ಲಿದ್ದಾನೆ ಆತ ?"

ಬಾಗಿಲ ಮರೆಯಲ್ಲಿ ನಿಂತ ಚಕ್ರಧರನು ಪತಿಪತ್ನಿಯರ ಈ ಸಂವಾದ ವನ್ನು ಕೇಳಿ ನಗುತ್ತ ಹೊರಬಂದ. ಆತನನ್ನು ಭರದಿಂದ ಕರ್ಣನು ಆಲಿಂಗಿಸಿ ಕೊಂಡ.

"ಅಂಗರಾಜ ತಮ್ಮ ಸೇವಕನಾದ ಈ ಚಕ್ರಧರನು ವಂದನೆಗಳನ್ನು ಸಲ್ಲಿಸುತ್ತಾನೆ."

ಮಿತ್ರಾ, ನಿನಗೆ ಕಲ್ಯಾಣವಾಗಲಿ. ನೀನು ಬಂದಿದ್ದು ತುಂಬ ಒಳ್ಳೆಯದಾಯಿತು."

"ಒಳ್ಳೆಯ ಸಮಾಚಾರವನ್ನು ನಾನು ತಂದಿಲ್ಲ."

"ಏನಾಯಿತು !"

"ನಿನ್ನೆ ರಾತ್ರಿ ತಸ್ಕರನು ಬಂದು ಎಲ್ಲ ಗೋ ಸಂಪತ್ತನ್ನು ಕದ್ದುಕೊಂಡು ಹೋಗಿದ್ದಾನೆ."

"ನಮ್ಮ ಗೋಸಂಪತ್ತನ್ನೆಲ್ಲ ತೆಗೆದುಕೊಂಡು ಹೋದರೆ ?" ಗಾಬರಿಯಿಂದ ವೃಷಾಲಿಯು ಹೇಳಿದಳು.

"ಅಹುದು" ಒಂದು ಹಸುವನ್ನೂ ಬಿಡದೆ ತೆಗೆದುಕೊಂಡು ಹೋಗಿದ್ದಾರೆ. ರಾತ್ರಿಯ ಸಮಯವಾದುದರಿಂದ ಅವರನ್ನು ಬೆನ್ನಟ್ಟುವುದು ಸಾಧ್ಯವಾಗಲಿಲ್ಲ.

"ನೀವು ಹೋಗಲಿಲ್ಲವೆ ?" ವೃಷಾಲಿ ಮತ್ತೆ ಕೇಳಿದಳು.

"ಅತ್ತಿಗೆ, ಗಾಡಾಂಧಕಾರದ ರಾತ್ರಿಯ ಸಮಯ; ನಾನು ಮಧ್ಯಸೇವನೆಯಿಂದ ಮತ್ತನಾಗಿದ್ದೆ. ಅಂಥ ಪರಿಸ್ಥಿತಿಯಲ್ಲಿ ಹೋಗುವುದಾದರೂ ಹೇಗೆ ?"

ದೊಡ್ಡ ದನಿಯಿಂದ ಕರ್ಣನು ನಗಲಾರಂಭಿಸಿದ. ವೃಷಾಲಿಗೆ ವಿಪರೀತಕೋಪ ಬಂದಿತು.

"ಗೋಸಂಪತ್ತೆಲ್ಲ ಕೈ ಬಿಟ್ಟು ಹೋದಾಗ ನೀವು ನಗುತ್ತಿರುವಿರಲ್ಲ !"

ನಗುವನ್ನು ಸಂಬಾಳಿಸಿಕೊಳ್ಳುತ್ತಾ ಕರ್ಣನು ಹೇಳಿದ.

"ಈತನ ಮಾತಿನಲ್ಲಿ ನಂಬಿಕೆಯನ್ನಿಡಬೇಡ. ಗೋವುಗಳನ್ನು ಓಡಿಸಿಕೊಂಡು ಹೋಗಿದ್ದರೆ ಈತ ಹೇಳಲು ಬರುತ್ತಿದ್ದನೆ ? ಬೇರೊಬ್ಬರ ಗೋಸಂಪತ್ತನ್ನು ಓಡಿಸಿಕೊಂಡು ಬಂದ ನಂತರವೇ ಆ ಸುದ್ದಿಯನ್ನು ತಿಳಿಸಲು ಇಲ್ಲಿಗೆ ಬರುತ್ತಿದ್ದ."

ಚಕ್ರಧರ ಹಾಗೂ ಕರ್ಣ ಇಬ್ಬರೂ ನಗಲಾರಂಭಿಸಿದರು. ಅದನ್ನು ಕಂಡು ಹುಸಿಕೋಪ ತಾಳಿದ ವೃಷಾಲಿಯು

"ಇದೆಂಥ ತಮಾಷೆ ?"

"ತಮಾಷೆ, ವಿನೋದ, ಇವು ಚಕ್ರಧರನ ಜನ್ಮಜಾತ ಸ್ವಭಾವ. ವೃಷಾಲೀ, ನಾವು ಆಶ್ರಮವಾಸಿಗಳಾಗಿದ್ದಾಗ ಈತನ ಚೇಷ್ಟೆಯಿಂದಾಗಿ ಎಲ್ಲರೂ ಬೇಸತ್ತು ಹೋಗುತ್ತಿದ್ದೆವು. ಒಂದು ಸಲ ನಾವೆಲ್ಲ ಕಾಡಿಗೆ ಹೋಗಿದ್ದೆವು. ಮರಳುವಾಗ ಈ ಮಹಾನುಭಾವ ನಮ್ಮೆಲ್ಲರಿಗಿಂತ ಮುಂದೆ ಬಂದು ನಾನು ಬಾವಿಯಲ್ಲಿ ಬಿದ್ದಿರುವುದಾಗಿ ರಾಧಾತಾಯಿಗೆ ಹೇಳಿದ."

"ಅನಂತರ !"

"ಗಾಬರಿಯಾಗಿ ಅವಳು ಅಳಲಾರಂಭಿಸಿದಳು. ಅಷ್ಟರಲ್ಲಿ ನಮ್ಮ ಸವಾರಿಯೂ ಚಿತ್ತೈಸಿತು. ಆ ಅಲ್ಪಾವಧಿಯಲ್ಲಿ ಏನೆಲ್ಲ ನಡೆದುಹೋಯಿತು. ಮುಂದೆ ನಿಜವಾದುದೇನು ? ಎಂಬ ಮಾತು ಹೊರಬಿತ್ತು. ಈ ಸ್ವಭಾವಕ್ಕಾಗಿಯೇ ತಂದೆಯಿಂದ ಈತ ಹೊಡೆಸಿಕೊಂಡುದೂ ಉಂಟು. ಆದರೂ ಹುಟ್ಟು ಗುಣ ಹೋಗಲು ಸಾಧ್ಯವೆ ?"

ಮುಕ್ತಮನಸ್ಸಿನಿಂದ ವೃಷಾಲಿಯೂ ನಗತೊಡಗಿದಳು.

"ಅತ್ತಿಗೆ, ಇಂದೇ ನಾನು ಹೊರಡುತ್ತೇನೆ."

"ಎಲ್ಲಿಗೆ ?"

"ಗೋವುಗಳನ್ನು ನೋಡಿಕೊಳ್ಳಲು. ಏಕೆಂದರೆ ಇನ್ನು ಒಂದು ವಾರದೊಳಗಾಗಿ ಆ ಹಸುಗಳೆಲ್ಲ ಮೇಯಲು ಹೊರಬೀಳುತ್ತವೆ. ಅವುಗಳನ್ನೆಲ್ಲ ಇವರು ನೋಡಬೇಕಲ್ಲ."

"ಚಕ್ರಧರಾ, ನೀನಿರುವಾಗ ನಾನು ನೋಡುವುದೆಂದರೇನು ?

"ಅದು ಸಾಧ್ಯವಿಲ್ಲ. ಈ ಮಾತನ್ನು ನನಗಾಗಿ ಹೇಳುವುದಿಲ್ಲ. ಗೋಸಂಪತ್ತನ್ನು ಯಾರು ರಕ್ಷಣೆ ಮಾಡುತ್ತಾರೋ ಅಂಥವರಿಗೆ ವರ್ಷದಲ್ಲಿ ಒಂದು ಸಲವಾದರೂ ರಾಜದರ್ಶನ ಲಭಿಸುವುದು ಅತ್ಯಾವಶ್ಯಕ. ಆ ನಿಮಿತ್ತದಿಂದ ಬೇಟೆಯ ಉದ್ದೇಶವನ್ನೂ ಸಾಧಿಸಿಕೊಳ್ಳಬಹುದು."

ಕರ್ಣನು ಸಿಧಾನವಾಗಿ ಉಸಿರೆಳೆದುಕೊಳ್ಳುತ್ತ "ಇನ್ನು ಮುಂದೆ ನಮ್ಮ ಆಟ ಸಾಗಲಾರದು, ಮಿತ್ರಾ, ಇಷ್ಟು ಅವಸರವೇಕೆ ನಾಳೆ ಹೊರಡೋಣ."

"ನಾನೂ ಬರಲೇ" ವೃಷಸೇನನು ಕೇಳಿದ.

"ಅಲ್ಲಿ ತಾಯಿಯ ಬೆರಳು ಹಿಡಿದು ನಡೆಯುವಂತಿಲ್ಲ, ಕುದುರೆಯ

ಬೆನ್ನೇರಿ ಅವುಗಳನ್ನು ಓಡಿಸಬೇಕಾಗುತ್ತದೆ." ಆ ಮಗುವನ್ನು ಹಿಡಿಸಲು ಚಕ್ರಧರನು ಚೇಷ್ಟೆಯ ಮಾತನ್ನಾಡಿದ.

"ಮಗುವನ್ನೇಕೆ ಅಳಿಸುತ್ತೀಯೋ" ವೃಷಸೇನನನ್ನು ಸಮೀಪಕ್ಕೆ ಬರ ಮಾಡಿಕೊಂಡ ಕರ್ಣನು.

"ಮಗೂ ನೀನು ದೊಡ್ಡವನಾಗು ಆಮೇಲೆ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ.

ತಂದೆಯ ಮಾತುಗಳಿಂದ ವೃಷಸೇನನು ಸಮಾಧಾನವನ್ನು ತಾಳಿದ.

## 4

ಕರ್ಣನ ರಾಜಗೃಹದಲ್ಲಿ ಬಿಡುವಿಲ್ಲದ ಗಲಾಟೆ ಆರಂಭವಾಗಿತ್ತು. ಎಲ್ಲರೂ ದುರ್ಯೋಧನನ ಸೇವೆಯಲ್ಲಿ ನಿರತರಾಗಿದ್ದರು. ರಾಜಗೃಹದ ಮುಂಭಾಗದಲ್ಲಿ ಸಕಲ ರಾಜಚಿನ್ಹೆಗಳಿಂದ ಅಲಂಕೃತವಾದ ದುರ್ಯೋಧನನ ಸುವರ್ಣ ರಥವು ಸಿದ್ಧವಾಗಿ ನಿಂತಿತ್ತು. ಪ್ರಾಂಗಳದ ತುಂಬೆಲ್ಲ ಆತನ ರಕ್ಷಣಾದಳವು ಹರಡಿಕೊಂಡಿತ್ತು.

ಸೂರ್ಯೋದಯವಾದ ನಂತರ ಕರ್ಣನು ದುರ್ಯೋಧನನ ದರ್ಶನಾರ್ಥವಾಗಿ ಆತನು ಬಿಡಾರ ಮಾಡಿದ ಸ್ಥಳಕ್ಕೆ ಬಂದು ಅತ್ಯಂತ ವಿನಯದಿಂದ ಆತನಿಗೆ ನಮಸ್ಕಾರವನ್ನು ಸಲ್ಲಿಸಿದ. ಈ ನಮಸ್ಕಾರದ ಶಾಸ್ತ್ರವು ಮುಗಿಯುವ ಮೊದಲೇ ದುರ್ಯೋಧನನು ಆತ್ಮೀಯತೆಯಿಂದ ಕರ್ಣನನ್ನು ಬಿಗಿದಪ್ಪಿಕೊಳ್ಳುತ್ತ ಹೇಳಿದ.

"ಔಪಚಾರಿಕವೆನಿಸಬಹುದಾದ ಈ ಪದ್ಧತಿಯನ್ನು ತೆಗೆದು ಹಾಕು. ನೀನು ಅಂಗದೇಶದ ರಾಜನಾಗಿರುವೆ, ನನ್ನ ಜೀವಸ್ನೇಹಿತನಿರುವೆ."

"ಇವೆರಡೂ ತಮ್ಮ ಕೃಪಾನುಗ್ರಹದಿಂದ"

"ಯಾವಾಗ ಬಂದೆ ?"

"ತಮ್ಮ ಆದೇಶವು ತಲುಪಿದೊಡನೆ ಹೊರಟುಬಿಟ್ಟೆ. ನಾನು ಬಂದಾಗ ರಾತ್ರಿಯಾಗಿತ್ತು. ತಾವು ನಿದ್ರೆ ಹೋಗಿದ್ದಿರಿ. ಆಕಸ್ಮಿಕವಾಗಿ ಬಂದುದರಿಂದ ತಮ್ಮ ಸ್ವಾಗತ........"

"ಯಾವ ತರಹದ ತೊಂದರೆಯೂ ಆಗಿಲ್ಲ. ಈ ರಾಜಭವನವು ನನಗೆ ಎರಡನೆಯದೇನು ?"

ಮಧ್ಯಾಹ್ನದ ಭೋಜನವಾದ ನಂತರ ಕರ್ಣನ ಮನೆಯಲ್ಲಿ ದುರ್ಯೋಧನ, ಕರ್ಣ, ವೃಷಾಲಿ ಇವರು ವಿಶ್ರಾಂತಿ ಪಡೆಯುತ್ತಿದ್ದರು. ಆಗ ದುರ್ಯೋಧನನು ಹೇಳಿದ.

"ಕರ್ಣ, ಕೇವಲ ನಿನ್ನ ಭೇಟಿಗಾಗಿ ನಾನು ಇಲ್ಲಿಯವರೆಗೆ ಬಂದವನಲ್ಲ. ನಿನ್ನನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ."

"ತಮ್ಮ ಅಪ್ಪಣೆ ಶಿರೋಮಾನ್ಯ."

"ಎಲ್ಲಿಗೆ ಎಂದು ಕೇಳಲೇ ಇಲ್ಲವಲ್ಲ ?"

"ಅದು ನನ್ನ ಅಧಿಕಾರವೆನಿಸಲಾರದು."

"ನಿನ್ನ ಪರಾಕ್ರಮವನ್ನು ತೋರಿಸುವಂತಹ ಒಂದು ಸುಯೋಗವು ತಾನಾಗಿಯೇ ಬಂದಿದೆ."

"ಅಹುದೇ ?"

"ಹೌದು. ನಾನು ನಿನ್ನನ್ನು ಸ್ವಯಂವರಕ್ಕೆ ಕರೆದೊಯ್ಯಲು ಬಂದಿದ್ದೇನೆ,"

"ದ್ರುಪದರಾಜ ಕನ್ಯೆಯದೇ ?"

"ಊಹೆ ಸರಿಯಾಗಿದೆ. ನಿನಗೂ ಆಮಂತ್ರಣ ಬಂದಿರಬಹುದಲ್ಲವೆ ?"

"ಹೌದು, ಕೃಷ್ಣ ಅದನ್ನು ಹೇಳಿದ."

"ಕೃಷ್ಣ ?"

"ಹೇಳುವುದನ್ನೇ ಮರೆತುಬಿಟ್ಟಿದ್ದೆ. ಎಂಟು ದಿನಗಳ ಹಿಂದೆ ದ್ವಾರಕಾಧೀಶ ಕೃಷ್ಣ ಇಲ್ಲಿಗೆ ಬಂದು ಹೋದ."

"ಇಲ್ಲಿಗೆ ಬಂದಿದ್ದನೇ ? ಕಾರಣ ?"

"ಇವರನ್ನು ಕಂಡು ಹೋಗಲು" ಎಂದು ವೃಷಾಲಿಯು ಹೇಳಿ "ಆ ಎರಡು ದಿನಗಳನ್ನು ನಾವು ತುಂಬ ಉತ್ಸಾಹದಿಂದ ಕಳೆದೆವು" ಎಂದಳು.

"ಮಿತ್ರಾ, ಎಂಥ ವಿಚಾರ ಮಾಡುತ್ತಿರುವೆ" ಕರ್ಣ ಪ್ರಶ್ನೆ ಮಾಡಿದ,

"ಕೃಷ್ಣನ ಕೆಲಸವೇನಾದರೂ ಇತ್ತೇ ?"

"ಯಾವ ಕೆಲಸಕಾರ್ಯವೂ ಇರಲಿಲ್ಲ. ಆತನು ಕಾಮರೂಪಕ್ಕೆ ತಪಸ್ಗೈಯಲು ಹೋಗಿದ್ದನಂತೆ. ಮರಳುವಾಗ ಆಕಸ್ಮಿಕವಾಗಿ ಇಲ್ಲಿ ತಂಗಿದ್ದ."

ದುರ್ಯೋಧನನು ನಕ್ಕು ತನ್ನ ತೊಡೆಯನ್ನು ತಪ್ಪಡಿಸುತ್ತ ಹೇಳಿದ.

"ಈ ಜಗತ್ತಿನಲ್ಲಿ ಆಕಸ್ಮಿಕ ಎಂಬ ಮಾತೇ ಇಲ್ಲ. ಯಾರಿಗೆ ಹಿಂದು ಮುಂದಿನ ಸಂದರ್ಭಗಳ ಅರಿವಿರುವುದಿಲ್ಲವೋ ಅಂಥವರಿಗೆ ಮಾತ್ರ ನಡೆದ ಘಟನೆಗಳೆಲ್ಲ ಆಕಸ್ಮಿಕವೆಂದೇ ಭಾಸವಾಗುತ್ತವೆ. ಕೃಷ್ಣ ಬಂದುದೇಕೆ? ಎಂಬುದನ್ನು ನಾನು ಹೇಳುವೆ."

"ಏಕೆ ಬಂದದ್ದು ?"

"ಕಾರಣ ಇಷ್ಟೇ ಜರಾಸಂಧನ ಭೀತಿ! ಕಾಮರೂಪ ಅಂಗದೇಶಗಳ ಮೇಲೆ ಆತನ ಪ್ರಭುತ್ವವಿದೆ. ಆತ ಕೃಷ್ಣನ ಶತ್ರು. ಜರಾಸಂಧನನ್ನು ಸೋಲಿಸಿ ಆತನ ಮಿತ್ರತ್ವವನ್ನು ಗಳಿಸಿಕೊಂಡವನೆಂದರೆ ನೀನೊಬ್ಬನೆ. ಆದುದರಿಂದಲೇ ಕೃಷ್ಣನಿಗೆ ನಿನ್ನ ಮಿತ್ರತ್ವವು ಅಗತ್ಯವೆನಿಸಿತು. ಈ ಕಾರಣದಿಂದಲೇ ಆತನು ಜೇನೊಂದು ಮಾರ್ಗವನ್ನು ಹುಡುಕಿರಬಹುದು."

ಈ ಮಾತುಗಳಿಗೆ ಕರ್ಣನು ಏನನ್ನೂ ಉತ್ತರಿಸಲಿಲ್ಲ. ಅದನ್ನು ಕಂಡ ದುರ್ಯೋಧನನು ಮೂಲ ವಿಷಯಕ್ಕೆ ಕೈ ಹಾಕಿದ.

"ಕರ್ಣಾ, ಸ್ವಯಂವರಕ್ಕೆ ಬರುವಿಯಷ್ಟೆ ?"

"ಇಲ್ಲ"

"ಯಾಕೆ ? ಅದು ತುಂಬಾ ಕಠಿಣ ಕೆಲಸವೆಂದೋ ?"

"ಬಹು ಅಸಾಧ್ಯವಾದ ಪಣ."

"ದ್ರುಪದನು ಮತ್ಸ್ಯಯಂತ್ರವನ್ನು ನಿಲ್ಲಿಸಿದ್ದಾನೆ. ಅದನ್ನು ಭೇದಿಸುವ ಸಾಮರ್ಥ್ಯ ಕೇವಲ ನಿನ್ನಲ್ಲಿಲ್ಲದೆ........"

"ಯುವರಾಜ ಈ ಹಟವನ್ನು ಬಿಡಿರಿ. ನಿಮ್ಮ ಅನುಗ್ರಹದಿಂದ ಅಧಿಕಾರ ಐಶ್ವರ್ಯಗಳು ನನಗೆ ಪ್ರಾಪ್ತವಾಗಿವೆ. ದಾಸದಾಸಿಯರಿಂದ ಸುಸಜ್ಜಿತವಾಗಿ ಬಾಳುತ್ತಲಿದ್ದೇನೆ. ಈ ಮನೆಯಲ್ಲಿ ಇನ್ನೊಬ್ಬ ರಾಜಕನ್ಯೆಯ ಅವಶ್ಯಕತೆ ಸ್ವಲ್ಪವೂ ಇಲ್ಲ."

"ಮನದ ಇಂಗಿತವನ್ನು ಮರೆಮಾಚಿಕೊಳ್ಳಲು ಸುಂದರವಾದ ಕಾರಣವನ್ನೀಯುತ್ತಿರುವಿ, ನಿನ್ನ ಮಾತುಗಳಿಂದ ನನಗೆ ಸಂತೋಷವಾಗಿದೆ."

"ಮನದ ಇಂಗಿತ ಮರೆಮಾಚಲು........"

"ಅಷ್ಟಲ್ಲದೆ ಮತ್ತೇನು ? ಆ ಮತ್ಸ್ಯಯಂತ್ರದ ಹೆಸರೆತ್ತಿದೊಡನೆ ಕೌರವ ಸಭೆಯು ವೀರಾಧಿವೀರರೆಲ್ಲ ಯಾವುದೋ ಕಾರಣಗಳನ್ನೊಡ್ಡಿ ಹಿಂದೆ ಸರಿದರು. ಆದರೆ ಇಂಥ ಸುಂದರವಾದ ಕಾರಣವನ್ನು ಮಾತ್ರ ಯಾರೂ ನನ್ನ ಮುಂದೆ ಮಂಡಿಸಿರಲಿಲ್ಲ."

"ಆ ಮತ್ಸ್ಯಯಂತ್ರಕ್ಕೆ ನಾನು ಅಂಜಿದವನಲ್ಲ."

ಇಂಥ ಎಷ್ಟೋ ಮತ್ಸಯಂತ್ರಗಳನ್ನು ಭೇಧಿಸುವ ಸಾಮರ್ಥ್ಯ ನನಗಿದೆ."

"ಸರಿ."

"ಮಿತ್ರಾ, ನಾನು ಕೇವಲ ದ್ರೋಣಾಚಾರ್ಯರಲ್ಲಿ ಮಾತ್ರ ಶಿಕ್ಷಣ ಪಡೆದವನಲ್ಲ. ಭಗವಾನ್ ಪರಶುರಾಮರಲ್ಲಿಯೂ ಶಸ್ತ್ರ ವಿದ್ಯೆಯನ್ನು ಕಲಿತವನು."

"ನಿಲ್ಲಿಸು ಕರ್ಣಾ," ದುರ್ಯೋಧನನ ಧ್ವನಿಯು ಗಡುಸಾಯಿತು. "ಒಳ್ಳೆಯ ಸಮಯದಲ್ಲಿ ಯಾವ ಗುಣಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲವೋ ಅಂಥ ಗುಣಗಳ ಕಥೆಯನ್ನು ಕಟ್ಟುವುದಾದರೂ ಯಾತಕ್ಕೆ ? ಆ ದ್ರುಪದನು ನನಗೇನು ಹೇಳಿ ಕಳಿಸಿದ್ದಾನೆ ಎಂಬುದು ನಿನಗೆ ಗೊತ್ತಿದೆಯೇ ? ನಿಮ್ಮ ರಾಜಸಭೆಯಲ್ಲಿ ಮತ್ಸ್ಯ ಯಂತ್ರ ಭೇದಿಸುವಂತಹ ವೀರರು ಯಾರಾದರೂ ಇದ್ದಲ್ಲಿ ಅವರೊಂದಿಗೆ ಬನ್ನಿರಿ. ಒಂದು ವೇಳೆ ಅದಿಲ್ಲವಾದಲ್ಲಿ ನಮ್ಮ ಆತಿಥ್ಯವನ್ನು ಸ್ವೀಕರಿಸುವುದಕ್ಕಾಗಿಯಾದರೂ ಬನ್ನಿರಿ. ಸರಿಯಾಗಿದೆ. ಮನೆಯಲ್ಲಿ ಉಪವಾಸದ ದಿನಗಳಿವೆ ಎಂದು ಕೌರವ ಕುಲದ ಯುವರಾಜನು ಅನ್ನಕ್ಕಾಗಿ ದ್ರುಪದನ ಮನೆಗೆ ಹೋಗುವ ಸಂದರ್ಭ ಬಂದಲ್ಲಿ ಯಾವ ತೊಂದರೆಯೂ ಇಲ್ಲ."

"ಮಿತ್ರಾ !"

"ಕರ್ಣಾ, ಮಿತ್ರನೆಂಬ ಶಬ್ದದ ಗೌರವವನ್ನು ಕಾಪಾಡುವ ಕಾಲವು ಈಗ ಸನ್ನಿಹಿತವಾಗಿದೆ. ಕೌರವ ರಾಜಸಭೆಯ ತೇಜೋಭಂಗವಾಗುವ ಸಮಯವು ಸನ್ನಿಹಿತವಾದಾಗ ಎಂಥ ಕಾರಣವನ್ನು ಮುಂದೊಡ್ಡುತ್ತಿರುವೆ?"

"ಗೆಳೆಯಾ, ತೊಂದರೆಪಡಬೇಕಾಗಿಲ್ಲ. ನಾನು ಬರುತ್ತೇನೆ. ಆ

ಮತ್ಸ್ಯಯಂತ್ರವನ್ನು ಭೇದಿಸುತ್ತೇನೆ. ಸ್ವಯಂವರದಲ್ಲಿ ಜಯಗಳಿಸುತ್ತೇನೆ. ನಾನಿರುವವರೆಗೂ ನೀನು ಅವಮಾನಿತನಾಗಬೇಕಾಗಿಲ್ಲ."

ಆನಂದದಿಂದ ದುರ್ಯೋಧನನ ಮುಖವು ಅರಳಿಕೊಂಡಿತು. ಎದ್ದು ಬಂದು ಆತನು ಕರ್ಣನ ಬೆನ್ನು ಚಪ್ಪರಿಸುತ್ತ ವೃಷಾಲಿಯತ್ತ ನೋಡಿ,

"ಅತ್ತಿಗೆ, ನಿಮ್ಮ ಆಕ್ಷೇಪಣೆ ಏನೂ ಇಲ್ಲವಷ್ಟೆ ?"

"ಸ್ವಲ್ಪವೂ ಇಲ್ಲ. ಈ ಮನೆಯಲ್ಲಿ ರಾಜಕನ್ಯೆಯನ್ನು ಸ್ವಾಗತಿಸಲು ನಾನು ತುಂಬ ಸಂತೋಷಪಡುವೆ"

ಪ್ರಯಾಣದ ದಿನ ವೃಷಾಲಿಯು ಕರ್ಣನಿಗೆ ನೆನಪು ಮಾಡಿದಳು.

"ಸ್ವಯಂವರಕ್ಕೆ ಹೋಗುವುದು ನಿಶ್ಚಯವೆ ?"

"ನಿಶ್ಚಯ."

"ಸ್ವಯಂವರದಲ್ಲಿ ಭಾಗವಹಿಸುವಿರಾ ?"

"ನಾನು ಸ್ವಯಂವರಕ್ಕೆ ಹೋಗುವುದು ಪಣವನ್ನು ಗೆಲ್ಲುವುದಕ್ಕಾಗಿಯೇ. ಆದುದರಿಂದ ಯಾವುದೇ ತರಹದ ಅಪಶಯದ ಮಾತೇ ಇಲ್ಲ. ರಾಜಕನ್ಯೆಯೊಂದಿಗೆ ಬರುವೆ"

"ನಿಮ್ಮಿಬ್ಬರನ್ನು ಸ್ವಾಗತಿಸಲು ದಾರಿ ಕಾಯುವೆ. ಅದು ನನಗೆ ಮಹದಾನಂದವನ್ನುಂಟು ಮಾಡುತ್ತದೆ."

"ಅವಶ್ಯವಾಗಿ ಮಾರ್ಗವನ್ನು ನಿರೀಕ್ಷಿಸು."

ಪತ್ನಿಯನ್ನಾಲಿಂಗಿಸಿಕೊಂಡ ಕರ್ಣನು

"ಸವತಿಯ ಕಲ್ಪನೆಯೇ ಸರಿಯಾದುದಲ್ಲ ಎಂದೆನ್ನುತ್ತಾರೆ,"

ಪತಿಯ ಆಲಿಂಗನವನ್ನು ಬಿಡಿಸಿಕೊಳ್ಳುತ್ತಾ ವೃಷಾಲಿಯು,

"ಆ ವಿಷಯದಲ್ಲಿ ವಿಶ್ವಾಸವಿಲ್ಲದಿದ್ದರೆ ನಾನು ಖಂಡಿತವಾಗಿಯೂ ರಾಜಕನ್ಯೆಯನ್ನು ಮನೆಗೆ ಕರೆತರಲು ಎಂದೂ ಅನುಮತಿಯನ್ನೀಯುತ್ತಿರಲಿಲ್ಲ. ನಾನು ಅಂಥ ದಡ್ಡಿಯಲ್ಲ."

ವೃಷಾಲಿಯ ಮಾತುಗಳಿಂದ ಕರ್ಣನು ಹರ್ಷಚಿತ್ತನಾಗಿದ್ದ.

"ನಡೆ, ಯುವರಾಜರು ಕಾಯುತ್ತಿರಬಹುದು"

"ತನ್ನೊಂದಿಗೆ ಯಾರು ಹೊರಡುತ್ತಾರೆ ?"

"ಚಕ್ರಧರನಿದ್ದಾನಲ್ಲ."

ವೃಷಾಲಿಯು ನಕ್ಕು

"ಸುಮ್ಮನೇ ಕೇಳಿದೆ : ಈ ಮಾತನ್ನು ವಿಚಾರಿಸದೆ ನಾನು ತಿಳಿದು ಕೊಳ್ಳಬೇಕಾಗಿತ್ತು."

ದ್ರುಪದರಾಜ ಕನ್ಯೆಯ ಸ್ವಯಂವರದಲ್ಲಿ ಭಾಗವಹಿಸಲು ಆಗಮಿಸು ತ್ತಿದ್ದ ರಾಜಾಧಿರಾಜರಿಗೆಲ್ಲ ಇಳಿದುಕೊಳ್ಳಲು ಅನುಕೂಲವಾಗುವಂತೆ ರಾಜೋಚಿತವಾದ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಪಾಂಚಾಲ ದೇಶದ ಪರಿಣಿತರಾದ ಕುಶಲಕರ್ಮಿಗಳು ಹೊಸ ನಗರವನ್ನೇ ನಿರ್ಮಾಣ ಮಾಡಿ ದ್ದರು. ಸ್ವಯಂವರ ಮಂಟಪವನ್ನು ಅಲೌಕಿಕವಾದ ರೀತಿಯಲ್ಲಿ ನಿರ್ಮಾಣ ಮಾಡಲು ಅನೇಕರು ಪ್ರಯತ್ನಿಸಿದ್ದರು. ಹಗಲು ರಾತ್ರಿಗಳೆನ್ನದೆ ಕೆಲಸ ಕಾರ್ಯಗಳೆಲ್ಲ ಭರದಿಂದ ಸಾಗಿದ್ದವು. ನಿರ್ಮಿತವಾದ ಹೊಸ ನಗರಕ್ಕೆ ಯಕ್ಷನಗರದ ವೈಭವವು ಪ್ರಾಪ್ತವಾಗಿತು.

ನಗರ ಪ್ರವೇಶ ಮಾಡುವ ನಾನಾ ದೇಶಗಳ ರಾಜರುಗಳನ್ನು ನೋಡಲು ಪ್ರಜೆಗಳು ರಾಜಬೀದಿಗಳಲ್ಲಿ ನೆರೆಯುತ್ತಿದ್ದರು. ಕಾಮರೂಪ ಮಗಧ, ಗಾಂಧಾರ, ಸೌರಾಷ್ಟ್ರ, ಆನರ್ತ, ಕಾಂಬೋಜ ಮೊದಲಾದ ರಾಜರು ತಮ್ಮ ತಮ್ಮ ವೈಭವಗಳೊಂದಿಗೆ ನಗರವನ್ನು ಪ್ರವೇಶ ಮಾಡಿದರು. ಒಂದು ದಿನ ದುರ್ಯೋಧನನು ಕರ್ಣನೊಂದಿಗೆ ದ್ರುಪದ ನಗರವನ್ನು ಪ್ರವೇಶ ಮಾಡಿದ ಆಮಂತ್ರಿತ ರಾಜರೆಲ್ಲ ಒಂದುಗೂಡಿದ ನಂತರ ದ್ರುಪದನು ಸ್ವಯಂವರದ ದಿನವನ್ನು ನಿಶ್ಚಯ ಮಾಡಿದ. ಆ ದಿನವನ್ನು ಎಲ್ಲರೂ ಎದುರು ನೋಡುತ್ತಿದ್ದರು.

ನಿಶ್ಚಿತವಾದ ಸ್ವಯಂವರದ ದಿನವು ಬೆಳಕನ್ನು ಕಂಡಿತು. ನಗರದ ಈಶಾನ್ಯ ಭಾಗದಲ್ಲಿ ಸಭಾ ಮಂಟಪವನ್ನು ಏರ್ಪಡಿಸಲಾಗಿತ್ತು. ಪ್ರವೇಶ ದ್ವಾರಗಳ ಮೇಲೆಲ್ಲ ಗಗನ ಚುಂಬಿತವಾದ ಗೋಪುರಗಳು ಕಾಣಬರುತ್ತಿದ್ದವು. ರತ್ನಖಚಿತ್ರವಾದ ಸುವರ್ಣದ ಆಸನಗಳು ಹಾಗೂ ಹಸಿರು ತೋರಣ ಇವೇ ಮೊದಲಾದವುಗಳಿಂದ ಸಭಾ ಭವನವು ಅಲೌಕಿಕವಾದ ಕಾಂತಿಯನ್ನು ಹೊಂದಿತ್ತು. ದ್ರುಪದನ ಆಪ್ತ ಸಚಿವರು ಹೊರಭಾಗದಿಂದ ದಯಮಾಡಿಸಿದ ರಾಜರುಗಳನ್ನು ಸ್ವಾಗತಿಸುವುದರಲ್ಲಿ ನಿರತರಾಗಿದ್ದರು. ದುರ್ಯೋಧನ ನೊಂದಿಗೆ ಕರ್ಣನು ಸಭಾ ಭವನವನ್ನು ಪ್ರವೇಶ ಮಾಡಿದ. ಕರ್ಣನನ್ನು

ಕೂಡೊಡನೆಯೇ ಜರಾಸಂಧನು ತನ್ನ ಆಸನದಿಂದ ಮೇಲೆದ್ದು ಬಂದು, ಆತನನ್ನು ಎದುರುಗೊಂಡ. ದುರ್ಯೋಧನನಿಗೆ ವಂದನೆಗಳನ್ನು ಸಲ್ಲಿಸುತ್ತ,

"ಕೌರವಾಧಿಪತಿ ಯುವರಾಜ ದುರ್ಯೋಧನ ಮಹಾರಾಜರಿಗೆ ಜಯವಾಗಲಿ"

ಮೃದುವಾಗಿ ಕತ್ತನ್ನು ಬಗ್ಗಿಸಿದ ದುರ್ಯೋಧನನು

"ಆಶೀರ್ವಾದ ಮಾಡಿರಿ."

ಕರ್ಣನ ವಂದನೆಗಳನ್ನು ಸ್ವೀಕರಿಸಿ ಜರಾಸಂಧನು

"ಅಂಗರಾಜ, ಕ್ಷೇಮವಷ್ಟೆ?"

"ತಮ್ಮ ಕೃಪೆ".

"ಅಂಗರಾಜನ ಆಗಮನದಿಂದ ನಮಗೆ ಸ್ವಯಂವರದ ಚಿಂತೆ ತಪ್ಪಿತು. ಸ್ವಯಂವರದ ನಿರ್ಣಯವು ನಿಶ್ಚಿತವಾದಂತಾಯಿತು. ಅಂಗರಾಜ ನಿಮ್ಮ ಮನೋಕಾಮನೆಯು ಫಲಿಸಲಿ."

ಕರ್ಣನು ದುರ್ಯೋಧನನೊಂದಿಗೆ ಆಸನದಲ್ಲಿ ಕುಳಿತುಕೊಂಡು ಸಭೆಗೆ ಬಂದ ರಾಜರುಗಳನ್ನೆಲ್ಲ ನೋಡುತ್ತಿರುವಾಗ ಆತನಿಗೆ ಕೃಷ್ಣನು ಕಾಣಿಸಿದನು. ಬಲರಾಮನೊಂದಿಗೆ ಕುಳಿತುಕೊಂಡಿದ್ದ ಕೃಷ್ಣನು ಕರ್ಣನನ್ನೇ ನೋಡುತ್ತಲಿದ್ದ. ಕುಳಿತ ಸ್ಥಳದಿಂದಲೇ ಕೃಷ್ಣನಿಗೆ ತಾನು ನಮಿಸುತ್ತಿರುವುದನ್ನು ವ್ಯಕ್ತಪಡಿಸಿದ. ಕೃಷ್ಣನೂ ಮುಗುಳುನಗೆಯಿಂದ ಆತನ ನಮಸ್ಕಾರವನ್ನು ಸ್ವೀಕಾರಮಾಡಿದ.

ಕರ್ಣನ ಲಕ್ಷ್ಯವು ಮತ್ಸ್ಯಯಂತ್ರದತ್ತ ಹರಿಯಿತು. ಸಭಾ ಭವನದ ಮಧ್ಯಭಾಗದಲ್ಲಿ ಅದನ್ನು ಕಟ್ಟಿದ್ದರು. ಆ ಯಂತ್ರದ ಮಧ್ಯಭಾಗದಲ್ಲಿ ಒಂದು ಛಿದ್ರವನ್ನು ಮಾಡಲಾಗಿತ್ತು. ಯಂತ್ರದ ಮೇಲ್ಭಾಗದಲ್ಲಿ ಮತ್ಸ್ಯಾಕೃತಿಯು ಸುತ್ತುತ್ತಲಿತ್ತು. ಅದರ ಅಡಿಯಲ್ಲಿ ಸುವರ್ಣ ಪ್ರತಿಬಿಂಬವು ಆ ದ್ರವದಲ್ಲಿ ಕಾಣಿಸುತ್ತಿತ್ತು.

ಸಭಾಭವನದಲ್ಲಿ ಶಾಂತತೆ ಪಸರಿಸಿತು. ಮತ್ಸ್ಯಯಂತ್ರದ ಸಮೀಪಕ್ಕೆ ಬರುತ್ತಿರುವ ದ್ರುಪದರಾಜನನ್ನು ಕರ್ಣನು ನೋಡಿದ. ಕೈ ಜೋಡಿಸಿಕೊಂಡು ನಿಂತ ದ್ರುಪದರಾಜನು.

"ವೀರರೇ! ದ್ರೌಪದಿಯು ಯಜ್ಞಕುಂಡದಿಂದ ಹುಟ್ಟಿ ಬಂದ ತೇಜಸ್ವಿನಿಯಾದ ಮಗಳು. ಆದುದರಿಂದ ಅವಳ ಸ್ವಯಂವರಕ್ಕೆಂದು ವೀರ

ಸ್ಪರ್ಧೆಯನ್ನೇರ್ಪಡಿಸಿದ್ದೇನೆ. ಯಾರು ಈ ಯಂತ್ರದ ಸಮೀಪದಲ್ಲಿಟ್ಟಿರುವ ಧನಸ್ಸನ್ನು ಎತ್ತಿ ಮತ್ಸ್ಯಯಂತ್ರವನ್ನು ಭೇದಿಸುವರೋ ಅಂಥವರಿಗೆ ನನ್ನ ಮಗಳನ್ನು ಕೊಡುತ್ತೇನೆ. ಇದು ಈ ಸ್ವಯಂವರದ ಪಣವಾಗಿದೆ."

ಪಣದ ವಿವರವನ್ನು ಕೇಳಿದೊಡನೆ ರಾಜಾಧಿರಾಜರ ಗುಂಪಿನಲ್ಲಿ ಗುಜು ಗುಜು ಆರಂಭವಾಯಿತು. ಎಲ್ಲರ ಗಮನವೂ ಅಲ್ಲಿರುವ ಮತ್ಸ್ಯಯಂತ್ರ ಹಾಗೂ ಆ ಧನುಸ್ಸಿನತ್ತ ಕೇಂದ್ರೀಕೃತವಾಯಿತು. ರಾಜಕನ್ಯೆ ಸಭಾಂಗಣವನ್ನು ಪ್ರವೇಶ ಮಾಡಿದಳು ಇದ್ದಕ್ಕಿದ್ದಂತೆ ಶಾಂತತೆಯು ಪಸರಿಸಿತು. ರಾಜಕನ್ಯೆಯ ಮುಂಭಾಗದಲ್ಲಿ ದ್ರುಪದ ಪುತ್ರ ದೃಷ್ಟದ್ಯುಮ್ನನಿದ್ದ. ಆತನ ಹಿಂದಿನಿಂದ ನಿಧಾನವಾಗಿ ರಾಜಕನ್ಯೆಯು ನಡೆದುಬರುತ್ತಿದ್ದಳು. ಅವಳಿಗಾಗಿ ಮತ್ಸ್ಯಯಂತ್ರದ ಸಮೀಪದಲ್ಲಿಯೇ ವೇದಿಕೆಯನ್ನು ಸಿದ್ಧಪಡಿಸಲಾಗಿತ್ತು. ಮಾಲೆಯನ್ನು ಹಿಡಿದಿರುವ ದ್ರೌಪದಿಯು ಆ ವೇದಿಕೆಯನ್ನೇರಿ ನಿಂತಳು.

ಕರ್ಣನು ರಾಜಕನ್ಯೆಯನ್ನೇ ನೋಡುತ್ತಲಿದ್ದನು. ಆಕೆಯ ರೂಪ ಲಾವಣ್ಯಗಳನ್ನು ಕುರಿತು ಆವನು ತುಂಬ ಕೇಳಿ ತಿಳಿದುಕೊಂಡಿದ್ದ. ಆ ವಿಷಯದಲ್ಲಿ ಯಾವ ನ್ಯೂನತೆಯೂ ಇದ್ದಂತೆ ಕಾಣಲಿಲ್ಲ. ಅಲ್ಲದೆ ತಾನು ಈವರೆಗೆ ಕೇಳಿದ ವರ್ಣನೆಯೇ ತುಂಬ ಕಡಿಮೆ ಎಂದೆನಿಸಲಾರಂಭಿಸಿತು. ದ್ರೌಪದಿಯ ಆ ಮೋಹಕ ರೂಪವನ್ನು ಕಂಡು ಎಲ್ಲ ರಾಜರೂ ಬೆರಗಾಗಿದ್ದರು. ಸಾಕ್ಷಾತ್ ದುರ್ಗೆಯೋ ಅಥವಾ ಮಹಾಲಕ್ಷ್ಮಿಯೋ ಈ ರೂಪದಿಂದ ಪ್ರಕಟವಾಗಿರಬಹುದು ಎಂದು ಯೋಚಿಸತೊಡಗಿದ್ದರು.

ಸ್ವಯಂವರವು ಆರಂಭವಾಯಿತು. ಯಾರಾದರೂ ಮತ್ಸ್ಯಯಂತ್ರವನ್ನು ಭೇದಿಸಲು ಮುಂದೆ ಬಂದಲ್ಲಿ ದೃಷ್ಟದ್ಯುಮ್ನನು ಉಚ್ಚಕಂಠದಿಂದ ಆ ರಾಜರ ಶೌರ್ಯ ಸಾಹಸ ಮೊದಲಾದವುಗಳ ಪರಿಚಯ ಮಾಡಿಕೊಡುತ್ತಿದ್ದ. ಅನೇಕ ರಾಜರು ಪ್ರಯತ್ನಿಸಿದರು. ಆ ಧನುಸ್ಸಿನ ತುದಿಯನ್ನು ಸಹ ಬಗ್ಗಿಸಲಾರದೆ ಮರಳಿ ಹೋದರು. ಸ್ವಯಂವರಕ್ಕಿಡಲಾದ ಪಣವು ಪೂರ್ಣಗೊಳ್ಳಬಹುದೇ? ಎಂಬ ಸಂಶಯವು ಸಭಿಕರಲ್ಲಿ ಮೂಡಲಾರಂಭಿಸಿತು. ಮುಂಭಾಗದಲ್ಲಿ ವಿರಾಜಮಾನರಾಗಿದ್ದ ತಾಪಸಿಗರು ಹಾಗೂ ಬ್ರಾಹ್ಮಣರ ಮುಖಗಳಲ್ಲಿ ಚಿಂತೆಯ ಲಕ್ಷಣಗಳು ಕಾಣಲಾರಂಭಿಸಿದವು. ದುರ್ಯೋಧನನು ಕರ್ಣನನ್ನು ನೋಡಿದ. ಆಗ ಕರ್ಣನು ಎದ್ದು ನಿಂತನು. ಎಲ್ಲರ ಗಮನವೂ

ಕರ್ಣನಲ್ಲಿಯೇ ಕೇಂದ್ರಿಕೃತವಾಯಿತು. ಅದನ್ನು ಕಂಡ ದೃಷ್ಟದ್ಯುಮ್ನನು.

"ರಾಜಕನ್ಯೆ, ನಿನ್ನ ಸಲುವಾಗಿ ಈ ಸ್ವಯಂವರವನ್ನು ಗೆಲ್ಲಲು ಎದ್ದು ನಿಂತಿರುವ ಈ ವೀರನ ಪರಾಕ್ರಮಕ್ಕೆ ಸರಿಸಮಾನರಾರೂ ಇಲ್ಲ. ತಮ್ಮ ಪರಾಕ್ರಮದಿಂದ ಅನೇಕ ರಾಜರುಗಳನ್ನು ಗೆದ್ದಿದ್ದಾರೆ. ಇವರ ದಾತೃತ್ವದ ಕೀರ್ತಿ ತ್ರಿಲೋಕಗಳಲ್ಲಿಯೂ ವ್ಯಾಪಿಸಿದೆ. ಮಹಾರಥಿ ಕರ್ಣ ಈಗ ಮತ್ಸ್ಯಯಂತ್ರವನ್ನು ಭೇಧಿಸಲು ಸಭಾ ಸ್ಥಾನಕ್ಕೆ ಬರುತ್ತಲಿದ್ದಾರೆ."

ರಾಜರ ಹೆಸರನ್ನು ಹೇಳಿದಾಗ ತಲೆಯನ್ನು ಮೇಲಕ್ಕೆತ್ತದೆ ಸಂಕೋಚದಿಂದಲೇ ಅವರನ್ನು ನೋಡುತ್ತಲಿದ್ದ ದ್ರೌಪದಿ ಈಗ ಕರ್ಣನ ಹೆಸರನ್ನು ಹೇಳಿದೊಡನೆ ನೆಟ್ಟದೃಷ್ಟಿಯಿಂದ ಆತನನ್ನು ನೋಡತೊಡಗಿದಳು. ಅವಳ ಕೈಯ್ಯಲ್ಲಿದ್ದ ಮಾಲೆಯು ನಡುಗಲಾರಂಭಿಸಿತು. ಅವಳು ಸಮೀಪಿಸುತ್ತಿದ್ದ ಕರ್ಣನನ್ನೇ ನಿಖರವಾಗಿ ನೋಡುತ್ತಲಿದ್ದಳು. ಕರ್ಣನೂ ಸಹ ಒಂದು ಸಲ ದ್ರೌಪದಿಯನ್ನು ನೋಡಿ ಧನುಸ್ಸಿನ ಮೇಲೆ ಕೈಯನ್ನಿಟ್ಟ. ಆಗ ದ್ರೌಪದಿಯ ಮೈ ಮೇಲೆ ಮುಳ್ಳು ಹರಿದಂತಾಯಿತು. ಆತನ ಕೈ ತನ್ನ ಮೈಮೇಲಾಡಿಸಿದಂತಹ ಅನುಭವವಾಯಿತು. ಅನೇಕರಿಂದ ಎತ್ತಲು ಸಾಧ್ಯವಾಗದ ಆ ಧನುಸ್ಸನ್ನು ಆತನು ಲೀಲಾಜಾಲವಾಗಿ ಎತ್ತಿ ಹಿಡಿದಿದ್ದ. ಗಾಳಿಯು ವೇಗವು ತಾಲವೃಕ್ಷವನ್ನು ಮಣಿಸುವಂತೆ ಕರ್ಣನು ಆ ಧನುಸ್ಸನ್ನು ಬಗ್ಗಿಸಿ ಹೆದೆಯೇರಿಸಿದ. ಆತನ ಈ ಕೌತುಕವನ್ನು ಕಂಡು ಸಭಾಗೃಹವೆಲ್ಲ ಬೆರಗಾಗಿ ಹೋಯಿತು. ಕರ್ಣನಿಗೆ ಅದಾವುದರ ಗಮನವೂ ಇರಲಿಲ್ಲ. ಆತನು ಧನುಸ್ಸನ್ನೆತ್ತಿ ವೇದಿಕೆಯ ಮೇಲಿಟ್ಟು ಬಾಣವನ್ನು ಕೈಗೆತ್ತಿಕೊಂಡು ಆ ಧನುಸ್ಸಿಗೆ ಬಾಣವನ್ನು ಹೂಡಿ ವೀರಾಸನವನ್ನು ಹಾಕಿದ. ಪಾತ್ರೆಯಲ್ಲಿ ಕಾಣುತ್ತಿದ್ದ ಪ್ರತಿಬಿಂಬವನ್ನು ನೋಡುತ್ತ ಧನುಸ್ಸನ್ನೆಳೆಯಲಾರಂಭಿಸಿದ. ಒಂದು ಕ್ಷಣ ಆ ಪ್ರತಿಬಿಂಬದ ಬದಲಾಗಿ ಆತನಿಗೆ ಆ ಸ್ಥಳದಲ್ಲಿ ಯಜ್ಞಸೇನೆಯು ಕಾಣಿಸಿದಳು. ಆಗ ಕರ್ಣನ ಮುಖದಲ್ಲಿ ನಗು ಮೂಡಿತು. ಬಲಗಾಲಿನ ಮೊಳಕಾಲನ್ನು ಭೂಮಿಗೆ ಅಂಟಿಸಿ ಎಡಗಾಲಿನ ಮುಂಡಿಯ ಮೇಲೆ ಎಡಗೈ ಮಧ್ಯಭಾಗವನ್ನು ಸ್ಥಿರವಾಗಿ ನಿಲ್ಲಿಸಿ ಧನುಸ್ಸನ್ನು ಮತ್ತಷ್ಟು ಬಿಗಿಯಾಗಿ ಹಿಡಿದ. ಬಾಣವನ್ನು ಸರಿಯಾಗಿ ಎಳೆದು ಏಕಾಗ್ರ ಮನೋಭಾವದಿಂದ

ಮತ್ಸ್ಯದ ಗುರಿಯನ್ನು ವೀಕ್ಷಿಸಲಾರಂಭಿಸಿದ. ಯಂತ್ರದಲ್ಲಿದ್ದ ಮೀನು ಒಂದೇ ಸಮನೆ ಸುತ್ತುತ್ತಲಿತ್ತು. ಸಭೆಯ ಶ್ವಾಸೋಛ್ವಾಸವೆಲ್ಲ ನಿಂತು ಹೋದಂತೆ ಭಾಸವಾಗತೊಡಗಿತು. ಇನ್ನೇನು ಬಾಣವು ಕೈಯಿಂದ ಚಿಮ್ಮುವ ಸಮಯ. ಆ ಬಾಣಕ್ಕಿಂತಲೂ ವೇಗವಾದ ಶಬ್ದಗಳು ರಾಜಸಭೆಯನ್ನೆಲ್ಲ ವ್ಯಾಪಿಸಿದವು.

"ನಾನು ಸೂತಪುತ್ರನನ್ನು ವರಿಸಲಾರೆ."

ಕಾದ ಕಬ್ಬಿಣದ ರಸದಂತೆ ಆ ಶಬ್ದಗಳು ಕರ್ಣನ ಕಿವಿಗೆ ಬಂದಪ್ಪಳಿಸಿದವು. ಬಾಣದ ಎಳೆತವು ಆತನಿಗರಿವಿಲ್ಲದಂತೆ ಸಡಿಲುಗೊಂಡಿತು. ಸಂತಪ್ತನಾಗಿ ಆತ ಒಂದು ಸಲ ದ್ರೌಪದಿಯನ್ನು ನೋಡಿದ. ಅವಳ ಮುಖದಲ್ಲಿ ಸಂತಾಪದ ಜ್ವಾಲೆಗಳು ಕಾಣುತ್ತಲಿದ್ದವು. ಚಕಿತನಾದ ಧೃಷ್ಟದ್ಯುಮ್ನನು,

"ರಾಜಕನ್ಯೆ, ನೀನು ಏನು ಹೇಳಿದೆ ?"

"ಹೌದು" ಧೃಡಭಾವದಿಂದ ದ್ರೌಪತಿಯು ಹೇಳಿದಳು. "ಸೂತಪುತ್ರನನ್ನು ನಾನು ವರಿಸಲಾರೆ ಎಂದು ಹೇಳಿದೆ. ಇಂಥ ಹತ್ತು ಮತ್ಸ್ಯಯಂತ್ರವನ್ನು ಭೇಧಿಸಿದರೂ ನಾನು ಮಾತ್ರ ಎಂದಿಗೂ ಅವರನ್ನು ಮೆಚ್ಚಲಾರೆ. ಅಣ್ಣಾ, ಕಾಗೆಯು ರಾಜಹಂಸವನ್ನು ನೋಡಬಾರದು. ಈ ಮಾತನ್ನು ಅವರಿಗೆ ತಿಳಿಸಿಹೇಳು"

ಕರ್ಣನು ಎದ್ದು ನಿಂತು ಕೈಯಲ್ಲಿದ್ದ ಧನುಸ್ಸನ್ನು ಬಿಸಾಕಿದ. ಗಾಯದ ಮುಖವನ್ನು ಮೇಲೆತ್ತಿದಾಗ ವಿಕಟಾಟ್ಟಹಾಸವು ಕೇಳಬಂದಿತು. ಸೂರ್ಯದೇವನನ್ನು ನೋಡಿ ಆತ ಮನದಲ್ಲಿಯೇ ನಕ್ಕುಬಿಟ್ಟ. ಆ ನಗು ಆತನ ಕ್ರೋಧಾಗ್ನಿಗಿಂತ ಹೆಚ್ಚಿನದಾಗಿತ್ತು.

ದ್ರೌಪದಿಯ ಕಡೆಗೆ ನೋಡದೆ ಕರ್ಣನು ಹಿಂದಿರುಗಿ ಬರುತ್ತಲಿದ್ದ. ಈ ಘಟನೆಯಿಂದಾಗಿ ಇಡೀ ಸಭೆಯೇ ತತ್ತರಿಸಿ ಹೋಯಿತು. ಕೃಷ್ಣ ಹಾಗೂ ಜರಾಸಂಧರು ತಮ್ಮ ಆಸನದಿಂದ ಮೇಲೆದ್ದು ನಿಂತರು ದುರ್ಯೋಧನನು ಖಡ್ಗ ಹಿರಿದು ಮುಂದೆ ಸಾಗಿದ. ಕರ್ಣನು ತನ್ನ ಎಡಗೈಯಿಂದ ದುರ್ಯೋಧನನ ಖಡ್ಗ ಹಿಡಿದ ಕೈಯ್ಯನು ಬಲವಾಗಿ ಹಿಡಿದು ತನ್ನೊಂದಿಗೆ ಬರುವಂತೆ ಸಂಜ್ಞೆಮಾಡಿದ. ನೋಡುತ್ತಿದ್ದಂತೆ ಕರ್ಣನು ದುರ್ಯೋಧನನೊಂದಿಗೆ ಸಭಾಮಂಟಪವನ್ನು ತ್ಯಜಿಸಿ ಹೊರಬಂದುಬಿಟ್ಟ. ಸಾಧ್ಯವಾದಷ್ಟು ಬೇಗನೇ

ಆ ಸ್ಥಳದಿಂದ ಬಹುದೂರ ಹೋಗಬೇಕೆಂದು ಚಡಪಡಿಸತೊಡಗಿದ. ಕರ್ಣನ ಹಿಂಬದಿಯಲ್ಲಿಯೇ ಸಾಗಿ ಬರುತ್ತಿದ್ದ ದುರ್ಯೋಧನನು ಆತನನ್ನು ತಡೆದು ನಿಲ್ಲಿಸಿ,

"ಮಿತ್ರಾ, ಹೀಗೇಕೆ ನನ್ನನ್ನು ಹೊರಗೆ ಕರೆದುಕೊಂಡು ಬಂದಿರುವೆ. ಆ ರಾಜಕನ್ಯೆಯನ್ನು ಅಪಹರಿಸುವ........"

"ಯುವರಾಜ, ನನಗೆ ಅದಾವುದೂ ಬೇಡವೆನಿಸಿದೆ."

"ಕರ್ಣಾ, ನನ್ನ ಮಾತನ್ನು ಕೇಳು. ಇನ್ನೂ ಕೈಮಿಂಚಿಹೋಗಿಲ್ಲ. ಈ ಸಭೆಯಲ್ಲಿ ಜರಾಸಂಧನಂತಹ ಅನೇಕ ಮಿತ್ರರಿದ್ದಾರೆ. ಈ ಸ್ವಯಂವರವನ್ನು ಅವರು ಸಿಮಿಪಾರ್ಥದಲ್ಲಿ ಧ್ವಂಸಮಾಡಿ ಬಿಡುತ್ತಾರೆ."

"ಯುವರಾಜ, ನಾನು ಈಗಾಗಲೇ ಹೇಳಿಲ್ಲವೆ,ಆ ರಾಜಕನ್ಯೆ ಬೇಕಾದವರಿಗೆ ಮಾಲೆ ಹಾಕಲಿ. ಅವಳನ್ನು ಅಡ್ಡಿಪಡಿಸುವ ವಿಚಾರ ನನಗಿಲ್ಲ."

ಕರ್ಣನ ಮಾತುಗಳನ್ನು ಕೇಳಿದಾಗ ಮುಂದೇನೆಂಬುವೇ ದುರ್ಯೋಧನನಿಗೆ ತೋಚದಾಯಿತು.

"ಮಿತ್ರಾ ಈಗ ನಾನೇನು ಮಾಡಲಿ?"

"ಬೇಕಾದ್ದು ಮಾಡಬಹುದು. ಆದರೆ ಆ ಪಟ್ಟಣದಲ್ಲಿ ಅರೆಕ್ಷಣವೂ ಸಹ ನಿಲ್ಲಲು ನನ್ನ ಮನಸ್ಸು ಒಪ್ಪದಾಗಿದೆ ಆದುದರಿಂದ ನಾನು ಚಂಪಾ ನಗರಕ್ಕೆ ಹೊರಡುತ್ತೇನೆ. ನಾನು ಮರಳಿ ಹೋಗುವುದಕ್ಕೆ ತಾವು ಅಪ್ಪಣೆಯನ್ನಿತ್ತರೆ ಅದೇ ನನ್ನ ಪುಣ್ಯ ಎಂದು ಭಾವಿಸುವೆ."

ದುರ್ಯೋಧನನಿಗೆ ವಂದನೆಗಳನ್ನು ಸಲ್ಲಿಸಿದ ಚಕ್ರಧರನೂ ಸಹ ಕರ್ಣನನ್ನು ಅನುಸರಿಸಿ ಹೊರಟುಬಿಟ್ಟನು.

ಅಶ್ವದಳದೊಂದಿಗೆ ಕರ್ಣನ ರಥವು ದ್ರುಪದನಗರಿಯಿಂದ ಹೊರ ಹೊರಡಲಿರುವುದು ಕಾಣಬರತೊಡಗಿತು.

ಕರ್ಣನು ಬರುತ್ತಿರುವುದನ್ನು ಕಂಡ ವೃಷಾಲಿಯು ಮಹಾದ್ವಾರದತ್ತ ಧಾವಿಸಿ ಬಂದಳು. ಬಾಗಿಲ ಮುಂದೆ ಬಂದ ರಥವು ಬರಿದಾಗಿತ್ತು. ಕರ್ಣನು ತನ್ನ ಬಿಡಾರದತ್ತ ಹೋಗಿರುವುದನ್ನು ಗಮನಿಸಿದ ಅವಳು ಅತ್ತ ಸಾಗಿದಳು. ಚಕ್ರಧರ ಹಾಗೂ ಕರ್ಣರಿಬ್ಬರೂ ನಿಂತಿರುವುದು ಕಾಣಬಂದಿತು. ವೃಷಾಲಿ

ಯನ್ನು ಕಂಡೊಡನೆ ಕರ್ಣನ ಮುಖದಲ್ಲಿ ಕೃತಿಮ ನಗೆಯು ಕಾಣಿಸಿಕೊಂಡಿತು.

"ಸ್ವಯಂವರವು ಮುಗಿಯಿತೆ ?''

"ಹ್ಞಾಂ"

"ಹಾಗಾದರೆ ತಾವೊಬ್ಬರೇ ಬಂದಿರಲ್ಲ."

"ದುರ್ಯೋಧನನು ಹಿಂದುಳಿದಿದ್ದಾನೆ."

"ನಾನು ದುರ್ಯೋಧನ ಮಹಾರಾಜರನ್ನು ಕೇಳುತ್ತಿಲ್ಲ."

"ಹಾಗಾದರೆ ಯಾರ ಬಗ್ಗೆ ನೀನು ಕೇಳುತ್ತಿರುವುದು."

"ರಾಜಕನ್ಯೆಯನ್ನು ತರುವವರಿದ್ದೀರಲ್ಲವೆ ?"

"ಸಾಧಿಸಲಿಲ್ಲ.''

"ಪಣವು ಅಸಾಧ್ಯವಾಗಿತ್ತೇ ?''

ಚಕ್ರಧರನು ಮುಂದೆ ಬಂದು

"ಅತ್ತಿಗೇ ಅವನನ್ನು ಏನೂ ಕೇಳಬೇಡಿರಿ. ಏನಾದರೂ ಕೇಳುವುದಿದ್ದರೆ ಅದನ್ನು ನನಗೆ ಕೇಳಿರಿ.''

"ಚಕ್ರಧರ'' ಜಬರಿಸುವಂತೆ ಕರ್ಣನು ಕೂಗಿಕೊಂಡ. ಆದರೆ ಅವನ್ನು ಗಮನಿಸದೆ,

"ಅತ್ತಿಗೆ, ಪಣವು ಅಸಾಧ್ಯವಾಗಿತ್ತು. ಮತ್ಸ್ಯಯಂತ್ರವನ್ನು ಭೇಧಿಸಬೇಕಾಗಿತ್ತು. ಪಣಕ್ಕಿಟ್ಟಿದ್ದ ಧನುಸ್ಸನ್ನು ಎತ್ತುವ ಮಾತಂತೂ ಇರಲಿ, ಇನ್ನು ಮತ್ಸ್ಯಯಂತ್ರವನ್ನು ಭೇದಿಸುವ ಮಾತಂತೂ ದೂರೇ ಉಳಿಯಿತು."

"ಇವರು ಭಾಗವಹಿಸಲಿಲ್ಲವೇ ?"

"ಭಾಗವಹಿಸಿದ್ದರು. ನಿರಾಯಾಸವಾಗಿ ಧನುಸ್ಸನ್ನೆತ್ತಿ ಗುರಿ ಸಾಧಿಸುವುದರಲ್ಲಿ ನಿರತರಾಗಿದ್ದರು."

''ನಿಜವೇ !" ಆಶ್ಚರ್ಯದಿಂದ ಕೇಳಿದಳು.

''ಹೌದು, ಇನ್ನೇನು ಬಾಣಪ್ರಯೋಗ ಮಾಡುವುದು ಮಾತ್ರ ಉಳಿದುಕೊಂಡಿತ್ತು. ಈ ಮಹಾನುಭಾವನು ಧನುರ್ಬಾಣಗಳನ್ನು ಅಲ್ಲಿಯೇ ಚಲ್ಲಿಬಿಟ್ಟು ಹಿಂತಿರುಗಿ ಬಂದುಬಿಟ್ಟ. ಮತ್ಸ್ಯಭೇದದ ಕೆಲಸವು ಹಾಗೆಯೇ ಉಳಿದುಕೊಂಡಿತು.

"ಯಾಕೆ ?"

"ಯಾಕೆಂದರೆ ಮತ್ಸ್ಯಯಂತ್ರ ಭೇಧಿಸುವ ಮೊದಲೇ ಇವರ ಮೇಲೆ ಗುರಿಯನ್ನಿಡಲಾಗಿತ್ತು."

"ಗುರಿ" ವೃಷಾಲಿಯ ಮುಖವು ಗಂಭೀರವಾಯಿತು.

"ಹೌದು ಅತ್ತಿಗೆ, ಅದು ಎಂದಿಗೂ ಶಾಂತವಾಗದ ಗುರಿ. ಇವರು ಧನುಸ್ಸನ್ನೆತ್ತಿದರು. ರೂಪಗರ್ವಿತಳಾದ ಅವಳು ತುಂಬಿದ ಸಭೆಯಲ್ಲಿ ಸೂತಪುತ್ರನನ್ನು ವರಿಸುವುದಿಲ್ಲ. ಎಂದು ಹೇಳುವುದರೊಂದಿಗೆ ಕಾಗೆಯು ರಾಜಸಂಸದತ್ತ ನೋಡಬಾರದೆಂದು ಹೇಳಿದಳು."

ಚಕ್ರಧರನ ಮುಷ್ಠಿಗಳು ಬಿಗಿಯಾಗಿದ್ದವು. ಕಂಠವು ಭಾರವಾಗಿತ್ತು. ಪ್ರೇತಕಳೆಯಂತೆ ವೃಷಾಲಿಯ ಮುಖವು ಬಿಳುಪೇರಲಾರಂಭಿಸಿತು.

"ಭಾವನವರೇ, ಹೇಳಿರಿ ಮುಂದೇನಾಯಿತು ?"

"ಏನೆಲ್ಲ ನಡೆದು ಹೋಯಿತು. ನಿಮ್ಮ ಈ ಪತಿದೇವರು ಎಲ್ಲವನ್ನೂ ಕೇಳಿಸಿಕೊಂಡು ಯಾವ ಸದ್ದುಗದ್ದಲವನ್ನೂ ಮಾಡದೆ ಧನುಸ್ಸನ್ನು ಅಲ್ಲಿಯೇ ಚಲ್ಲಿ ಮಂಟಪದಿಂದ ಹೊರಬಂದರು. ನಂತರ ಒಂದು ಸಲವೂ ಅವರು ಹಿಂತಿರುಗಿ ನೋಡಲಿಲ್ಲ.

ಶೂನ್ಯ ಮನಸ್ಸಿನಿಂದ ಎಲ್ಲವನ್ನೂ ಕೇಳುತ್ತಲಿದ್ದ ಕರ್ಣನತ್ತ ವೃಷಾಲಿ ಧಾವಿಸಿ ಬಂದಳು.

"ಈ ಮಾತುಗಳೆಲ್ಲಾ ನಿಜವೇ ?"

"ಹೌದು"

"ನಿಜವೇ ಈ ಮಾತು ?"

ವಿಚಿತ್ರನಗುವಿನೊಂದಿಗೆ ಕರ್ಣನು ಹೇಳಿದ.

"ಚಕ್ರಧರನು ಹೇಳಿದ ಮಾತುಗಳೆಲ್ಲವೂ ಅಕ್ಷರಶಃ ನಿಜವಾಗಿವೆ. ಅದರಲ್ಲಿ ಸುಳ್ಳು ಎಂಬುದು ಲವಲೇಶವೂ ಇಲ್ಲ."

ವೃಷಾಲಿಯ ಶರೀರವು ಸಂತಪ್ತಗೊಂಡಿತು. ಕೇದಿಗೆಯ ಬಣ್ಣದಂತಿರುವ ಅವಳ ಮುಖವು ಕೆಂಡದಂತಾಯಿತು. ಕಣ್ಣೀರು ಧಾರಾಕಾರವಾಗಿ ಇಳಿಯಲಾರಂಭಿಸಿತು.

"ಯಾವ ಕಾರಣಕ್ಕಾಗಿ ಎಲ್ಲವನ್ನೂ ಸಹನೆ ಮಾಡಿದಿರಿ. ಇಂಥ ಅಪಮಾನವನ್ನು ಸಹಿಸಿಕೊಂಡು ಬರುವುದಕ್ಕಿಂತ ಸ್ವಯಂವರವನ್ನು ಧ್ವಂಸಗೊಳಿಸಿ ಆ ಉನ್ಮತ್ತ ರಾಜಕನ್ಯೆಯನ್ನು........"

"ಅತ್ತಿಗೇ, ಈ ಮಾತನ್ನು ಯುವರಾಜ ದುರ್ಯೋಧನರೂ ಹೇಳಿದರು. ಆದರೆ ಇವರು ಯಾರ ಮಾತಿಗೂ ಕಿವಿಗೊಡಲಿಲ್ಲ."

"ಚಕ್ರಧರ, ವೃಷಾಲೀ...."

"ನನಗೆ ಅದನ್ನು ಮಾಡುವ ಮನಸ್ಸಿದ್ದರೆ ಯುವರಾಜರ ಸಹಾಯದ ಅಗತ್ಯವು ಬೇಕಾಗಿರಲಿಲ್ಲ. ವೃಷಾಲೀ, ನನ್ನ ಸಲಹೆಯು ಮೇರೆಗೆ ಹಿಂದೆ ಚಿತ್ರಾಂಗದನ ಸ್ವಯಂವರ ಮಂಟಪದಲ್ಲಿ ಆತನ ಮಗಳನ್ನು ದುರ್ಯೋಧನನು ಓಡಿಸಿಕೊಂಡು ಬರುವಾಗ ನಾನೊಬ್ಬನೇ ಎಲ್ಲ ರಾಜರನ್ನೂ ತಡೆ ಹಿಡಿದು ನಿಲ್ಲಿಸಿದುದನ್ನು ನೀನು ಮರೆತುಬಿಟ್ಟೆಯೋ ಹೇಗೆ? ಅಂಥ ಪರಾಕ್ರಮ ಮಾಡಿದ ನಾನು ಈ ಸಲವೂ ಸಹ ಹಾಗೆ ಮಾಡಬಹುದಾಗಿತ್ತು."

"ಹಾಗಾದರೆ ಪರಾಕ್ರಮ ತೋರಿಸದೆ ಬಿಟ್ಟುದಾದರೂ ಏಕೆ? ಆ ರಾಜಕನ್ಯೆಯನ್ನೇಕೆ ಓಡಿಸಿಕೊಂಡು ಒರಲಿಲ್ಲ"

"ಅವಳನ್ನೋಡಿಸಿಕೊಂಡು ಬಂದಿದ್ದರೆ ನನ್ನ ಮೇಲೆ ಅವಳ ಪ್ರಭುತ್ವವೇ ನಡೆಯುತ್ತಿತ್ತು. ಅವಳು ಆ ಯೋಗ್ಯತೆಗೂ ಅರ್ಹಳಾದವಳಲ್ಲ."

"ನನಗೆ ತಿಳಿಯಲಿಲ್ಲ."

"ಇದರಲ್ಲಿ ತಿಳಿಯುವಂತಹದೇನಿದೆ? ದ್ರೌಪದಿ ರೂಪಸಂಪನ್ನಳಾಗಿ ತೋರಿದುದೇನೋ ನಿಜ. ಆದರೆ ಅವಳಲ್ಲಿರುವುದು ಅಷ್ಟೆ. ಏಕೆಂದರೆ ಪುರುಷಾರ್ಥಕ್ಕಿಂತ ಮಿಗಿಲಾಗಿ ಕುಲ ಹಾಗೂ ಗುಣಕ್ಕಿಂತಲೂ ಹೆಚ್ಚಾಗಿ ರೂಪದ ಅಹಂಕಾರ ಯಾರಲ್ಲಿರುತ್ತದೆಯೋ ಅಂಥ ಹೆಣ್ಣಿಗೆ ನನ್ನ ಜೀವನದಲ್ಲಿ ಎಂದಿಗೂ ಸ್ಥಾನವಿಲ್ಲ. ಅವಳಿಗೆ ಈ ಮನೆಯ ದಾಸಿಯಾಗಿ ಬರುವ ಯೋಗ್ಯತೆಯೂ ಇಲ್ಲ. ಆದುದರಿಂದಲೇ ನಾನು ಸಂಯಮದಿಂದ ಮರಳಿ ಬಂದೆ."

## 7

ರಾಜಗೃಹದಲ್ಲಿ ಶಾಂತವಾತಾವರಣವು ಆವರಿಸಿತ್ತು. ಎತ್ತರವಾದ ದೀಪದ ಕಂಬಗಳು ಅರಮನೆಯ ತುಂಬೆಲ್ಲ ಮಂದಪ್ರಕಾಶವನ್ನು ಬೆಳಗಿಸಿ

ದ್ದವು. ಅಲ್ಲಲ್ಲಿ ಕೆಲವು ದೀಪಗಳಿಗೆ ಕುಡಿ ಬಂದು ಮಂದವಾಗಿ ಬೆಳಗುತ್ತ ಕೊನೆಗೆ ಶಾಂತವಾಗುವ ಸ್ಥಿತಿಯಲ್ಲಿದ್ದವು. ಭವ್ಯವಾದ ಆ ರಾಜಗೃಹದಲ್ಲಿ ಎಚ್ಚರವಾಗಿದ್ದವನೆಂದರೆ ಕರ್ಣನೊಬ್ಬನೆ. ಪತಿಯ ಮಾರ್ಗವನ್ನು ನಿರೀಕ್ಷಿಸುವುದರಲ್ಲಿಯೇ ವೃಷಾಲಿಯು ನಿದ್ರಾಧೀನಳಾಗಿದ್ದಳು. ಹಾಸಿಗೆಯಲ್ಲಿ ಕುಳಿತುಕೊಂಡಿದ್ದ ಕರ್ಣನು ಆಗಾಗ ಬೆಚ್ಚಗಿನ ನಿಟ್ಟುಸಿರನ್ನು ಬಿಡುತ್ತಿದ್ದನು. ಸ್ಫಟಿಕ ಪಾತ್ರೆಯಲ್ಲಿರಿಸಿದ ಮಧ್ಯವನ್ನೆತ್ತಿಕೊಂಡು ಆಗಾಗ ಸೇವಿಸುತ್ತಲಿದ್ದನು. ರಾತ್ರಿಯ ಅರ್ಧಭಾಗವು ಯಾವಾಗಲೋ ಕಳೆದು ಹೋಗಿತ್ತು. ಅದಾವುದರ ಪರಿವೆಯೂ ಆತನಿಗಿರಲಿಲ್ಲ. ಆತನ ಗಮನವು ಸಮೀಪದಲ್ಲಿರಿಸಿದ ದೀಪದ ಕಂಬಗಳತ್ತ ಹರಿಯಿತು. ಅಲ್ಲಿ ಬೆಳಗುತ್ತಿದ್ದ ಆ ದೀಪವು ಥರಥರನೆ ನಡುಗುತ್ತಿರುವಂತೆ ಕಾಣಿಸಿತು.

"ಬೆಳಕು."!

ಥರಥರನೆ ನಡುಗುವ ಜ್ಯೋತಿ

ಅವಳು ಯಾಜ್ಞಸೇನಿ. ಯಜ್ಞಕುಂಡದಿಂದ ಹುಟ್ಟಿ ಬಂದ ಜ್ಯೋತಿ, ಬೆಳಕು.

ಥರಥರನೆ ನಡುಗುವುದೇನು ?

ದಾಹ !

ತನ್ನ ತೇಜಸ್ಸಿನಿಂದ ಇನ್ನೊಬ್ಬರನ್ನು ದಹಿಸುವಂತೆ ಮಾಡುವುದು ಈ ಜ್ಯೋತಿ.

ಯಜ್ಞಸೇನೆ ! ದ್ರೌಪದಿ !

ಯಜ್ಞಕಾರ್ಯದಲ್ಲಿ ನಿರತನಾದ ದ್ರುಪದನು ಎಂಥ ಆಹುತಿಯನ್ನಿತ್ತಿದ್ದನೋ, ಯಾವ ಮಂತ್ರಗಳನ್ನು ಪಠಿಸಿದ್ದನೊ, ಅಹಂಕಾರದಿಂದ ಕೂಡಿದ ಕಾಮ, ಕ್ರೋಧ, ಮದ, ಮೋಹ ಮತ್ಸರಗಳೆಂಬ ಸಮಿತ್ತುಗಳಿಂದ ಕೂಡಿದ್ದ ಆ ಯಜ್ಞವು ಪರಿಸಮಾಪ್ತಿಯನ್ನು ಹೊಂದಿರಬಹುದು. ಹಾಗಿಲ್ಲದೆ ಹೋದಲ್ಲಿ ಆ ಯಜ್ಞಕುಂಡದಿಂದ ದ್ರೌಪದಿಯಂತಹ ಭಯಾನಕವಾದ ಜ್ಯೋತಿಯು ಬೆಳಕನ್ನು ಕಂಡುದಾದರೂ ಹೇಗೆ ?

ನಾನು ಸೂತಪುತ್ರನನ್ನು ವರಿಸಲಾರೆ !

ಈ ಮಾತನ್ನು ಹೇಳಿದವರಾರು ? ದ್ರೌಪದಿ, ಅವಳಿಗೆ ನನ್ನ ಕುಲೋಚ್ಚಾರ ಮಾಡುವ ಅಧಿಕಾರವಾದರೂ ಏನಿದೆ. ರೂಪಗರ್ವಿಷ್ಟೇ ! ನಿನ್ನ ಕುಲವಾದರೂ ಎಂಥದು ? ನೀನೇನು ದ್ರುಪದರಾಜನ ಮಗಳಾಗಿ ಹುಟ್ಟಿ ಬಂದೆಯಾ ? ನನ್ನ ಗುರುಗಳಾದ ದ್ರೋಣಾಚಾರ್ಯರನ್ನು ನಾಶ ಮಾಡಲು ಹೂಡಲಾದ ಯಜ್ಞ ಕುಂಡದ ಬೂದಿಯಲ್ಲಿ ಹುಟ್ಟಿ ಬಂದವಳು ನೀನು, ದಾನಪುತ್ರಿ ಎಂದು ಕರೆಯಲ್ಪಡುವ ನೀನು ನನ್ನ ಕುಲೋಚ್ಚಾರ ಮಾಡಲು ಹೊರಟೆಯಾ ?

ಮದ್ಯದ ಪಾತ್ರೆಯನ್ನೆತ್ತಿ ಬಟ್ಟಲಿಗೆ ಅದನ್ನು ಬಗ್ಗಿಸಿಕೊಂಡು ಕಣ್ಣು ಮುಚ್ಚಿ ಗಂಟಲಿಗಿಳಿಸಲು ಕರ್ಣನು ಪ್ರಯತ್ನಿಸುತ್ತಿದ್ದ. ಆದರೂ ಸಹ ಹಿಂದಿನ ಆ ಚಿತ್ರಗಳು ಆತನ ಕಣ್ಮುಂದೆಯೇ ಬಂದು ಸುಳಿದಾಡುತ್ತಿದ್ದವು.

ಮತ್ಸ್ಯಯಂತ್ರವನ್ನು ಭೇಧಿಸಲು ಸಿದ್ಧನಾದುದು ನಿನ್ನ ರೂಪ ಲಾವಣ್ಯಗಳಿಗೆ ಮಾರುಹೋದುದರಿಂದ ಎಂದೇನೂ ಅಲ್ಲ. ನಿನ್ನ ಶಯ್ಯ ಸುಖವನ್ನು ಮನದಲ್ಲಿ ಮುಂಡಿಸಿಕೊಂಡು ಧನುಸ್ಸಿಗೆ ಹೆದೆಯೇರಿಸಿದವನು ನಾನಲ್ಲ. ಜೀವನದಲ್ಲಿ ನಾನು ಎಂದೂ ಭೋಗಕ್ಕೆ ವಿಶೇಷ ಮಹತ್ವ ವನ್ನಿತ್ತವನಲ್ಲ.

ಹಾಗಾದರೆ ಆ ಸಂಥಾಹ್ವಾನವನ್ನೇಕೆ ಸ್ವೀಕರಿಸಿದೆ ?

ದ್ರೌಪದಿ ಮಹಾ ಸುಂದರಳು ಎಂದಲ್ಲ ನಾನು ದುರ್ಯೋಧನನಿಗಾಗಿ ಎದ್ದು ನಿಂತೆ. ಕಾಮವು ಜಾಗೃತವಾಗುವಂತಹ ರೂಪವನ್ನು ಅವಳು ಹೊಂದಿದ್ದಳೆಂದು ನಾನು ಈ ಪ್ರಯತ್ನದಲ್ಲಿ ನಿರತನಾದೆ ಎಂದೇನಲ್ಲ. ಅದು ಸೌಂದರ್ಯದ ಆಹ್ವಾನವಾಗಿರಲಿಲ್ಲ. ಪ್ರತಿಯಾಗಿ ಪರಾಕ್ರಮಕ್ಕೆ ಆಹ್ವಾನ ಎಂದೆನಿಸುವಂತಿತ್ತು. ಅದನ್ನು ಸ್ವೀಕರಿಸಬೇಕಾದುದು ನನ್ನ ಧರ್ಮವಾಗಿತ್ತು. ಪ್ರತಿಫಲಾಪೇಕ್ಷೆಗಿಂತ ಪರಾಕ್ರಮವು ನನಗೆ ಪ್ರಿಯವಾಗಿತ್ತು, ಆದುದರಿಂದಲೇ ನಾನು ಆಹ್ವಾನವನ್ನು ಸ್ವೀಕರಿಸಿದೆ. ಕುಲಗೋತ್ರದ ಸಂಬಂಧವಿರುವುದಾದಲ್ಲಿ ನಾನು ಎಂದು ಇಂಥದನ್ನು ಅಂಗೀಕರಿಸುತ್ತಿರಲಿಲ್ಲ. ಸ್ವಹಸ್ತದಿಂದ ಎಂದೂ ಸೂತಕುಲದ ಅವಹೇಳನವನ್ನು ಮಾಡಿಸಿಕೊಳ್ಳುತ್ತಿರಲಿಲ್ಲ. ನನಗೆ ಆ ಅವಮಾನದ ಬೆಲೆಯು ಅನುಭವವಿದೆ. ಆದುದರಿಂದ ಮತ್ತೆ ಅಂಥ ತಪ್ಪನ್ನು ನಾನು ಮಾಡಬಯಸುತ್ತಿರಲಿಲ್ಲ.

ಆದರೂ ಸಹ ನಡೆದು ಹೋಯಿತು.

ಹೌದು ! ನಡೆದೇ ಹೋಯಿತು. ಅದರಲ್ಲಿ ನನ್ನ ತಪ್ಪೇನಿದೆ ? ಹಾಗಿದ್ದರೆ ತಪ್ಪು ಯಾರದು ? ದ್ರೌಪದಿಯ ತಪ್ಪೇ ?

ತನಗೆ ಬೇಕಾದವರನ್ನು ಹುಡುಕಿಕೊಳ್ಳುವ ಅಧಿಕಾರವು ಅವಳಿಗೆ ಸೇರಿದುದಲ್ಲವೆ ?

ಇಲ್ಲ. ಸಾವಿರಸಲ ಹೇಳುವೆ. ಇಲ್ಲ. ಒಂದು ವೇಳೆ ಆ ಅಧಿಕಾರವು ಅವಳಿಗೆ ಸೇರಿದುದಾದ ಪಕ್ಷದಲ್ಲಿ ಮತ್ಸ್ಯಭೇದದಂತಹ ಪಣವನ್ನು ಮುಂಡಿಸುವ ಅಗತ್ಯವೇ ಇರಲಿಲ್ಲ. ದ್ರುಪದನು ಘೋಷಣೆ ಮಾಡಿದುದರಿಂದಲೇ ಅವಳು ವೀರರ ಕಾಣಿಕೆಯಾಗಿ ತೋರುತ್ತಿದ್ದಳು. ಯಾರು ಪರಾಕ್ರಮವನ್ನು ತೋರಿಸುತ್ತಿದ್ದರೋ ಅವಳು ಅಂಥವರ ಸ್ವತ್ತಾಗುತ್ತಿದ್ದಳು.

ಪಾನಪಾತ್ರೆಯನ್ನು ತುಂಬಿಕೊಂಡು ಮತ್ತೆ ಅದನ್ನು ಬರಿದು ಮಾಡಿದ.

ಮಧ್ಯವು ಬುದ್ಧಿಯನ್ನು ಮಂದ ಮಾಡುವುದೆಂದು ಕೇಳಿರುವೆ. ಅಪಮಾನಗಳನ್ನು ಅದು ಮರೆಸುತ್ತದೆಂದೂ ಹೇಳುತ್ತಾರೆ. ಆದರೆ ಇಂದು ಈ ಸುರೆಗೂ ಸಹ ಏನೋ ಆಗಿದೆ. ಅದು ತನ್ನ ಗುಣ ಧರ್ಮಗಳನ್ನೆಲ್ಲಾ ಇಂದು ಮರೆತುಬಿಟ್ಟಂತೆ ತೋರುತ್ತದೆ.

ತುಂಬಿದ ರಾಜಸಭೆಯಲ್ಲಿ ಅಪಮಾನ. ಅದೂ ಒಬ್ಬ ಹೆಂಗಸಿನಿಂದ !

ಸ್ತ್ರೀ ಜಾತಿಗೆ ಸಹಜವಾದ ಯಾವ ಸಂಕೋಚವೂ ಅವಳನ್ನು ಬಾಧಿಸಿದಂತೆ ತೋರುವುದಿಲ್ಲ. ಅದೂ ಹೋಗಲಿ, ವೀರಾಧಿವೀರರಿಗೆ ಸಹಜ ಸಿದ್ಧವೆನಿಸಿದ ಕೋಪವು ಅಂದು ನನ್ನಲ್ಲಿ ಅದೇಕೆ ಜಾಗೃತವಾಗದೆ ಹೋಯಿತು ! ನಾನು ಯಾತಕ್ಕಾಗಿ ಆ ಅವಮಾನವನ್ನು ಸಹಿಸಿಕೊಂಡೆ ? ಯಾವ ಪ್ರತಿಷ್ಠೆ ನನ್ನನ್ನು ತಡೆದು ನಿಲ್ಲಿಸಿತು ? ಇದೆಲ್ಲಾ ನಡೆದುದಾದರೂ ಹೇಗೆ ?

ಉಳಿದುಳಿದ ಮದ್ಯವನ್ನೆಲ್ಲಾ ಬಗ್ಗಿಸಿಕೊಂಡು ಕುಡಿದು ಮುಗಿಸಿದಾಗ ಆತನ ಸ್ಮೃತಿಯು ತೂಕವು ತಪ್ಪಲಾರಂಭಿಸಿತು.

ಇದೆಲ್ಲ ಹೇಗೆ ಘಟಿಸಿತು ?

ಈ ವಿಚಾರಗಳಿಂದ ಆತನಿಗೆ ನಗು ಬಂದಿತು.

ದ್ರೌಪದಿ ! ಅವಳು ಹೇಳಿ ಕೇಳಿ ಯಾಜ್ಞಸೇನಿ. ಜ್ವಾಲೆಗಳನ್ನೆಬ್ಬಿಸು

ವುದೇ ಅವಳ ಕೆಲಸ. ಅವಳಿಗೆ ಜನ್ಮಸಿದ್ಧವಾಗಿ ಬಂದ ಹಕ್ಕು. ಆದರೆ ನಾನು....ನಾನು ನೀರಿನಲ್ಲಿ ತೇಲುವವ. ಪ್ರವಾಹದಲ್ಲಿ ತೇಲುವ ಅನುಭವ ಇದ್ದವನು ನಾನು. ನಾನೇನು ಮಾಡಬಲ್ಲೆ. ಬಂದ ಅಪಮಾನಗಳನ್ನೆಲ್ಲ ಸಹಿಸಬೇಕಾದವನ ಹೆಸರೇ ಅಂಗರಾಜ....... ರಾಧೇಯ....ಸೂತಪುತ್ರ.

ಸೂತಪುತ್ರ.

ಸೂತಪುತ್ರನೆಂದು ಕರೆಸಿಕೊಳ್ಳಲು ನನಗೆ ಅವಮಾನವೆನಿಸುವುದಿಲ್ಲ. ಅದರ ಬದಲಾಗಿ ಅಭಿಮಾನವೆನಿಸುತ್ತದೆ. ಹೀಗಿದ್ದರೂ ಸಹ ನನಗೆ ಕೋಪ ಬರುವುದು ಸೂತಕುಲಕ್ಕಾಗಿ. ಬೇರೆಯವರು ತಿಳಿದುಕೊಂಡ ಅಲ್ಪ ತಿಳಿವಳಿಕೆಗಾಗಿ. ಶ್ರೇಷ್ಠ ಕುಲದ ಮರ್ಯಾದೆಯಾದರೂ ಎಷ್ಟು !

ಶ್ರೇಷ್ಠ ಕುಲ !

ಈ ಶ್ರೇಷ್ಠ ಕುಲವೆಂಬುದರ ಅರ್ಥವಾದರೂ ಏನು ?

ಶ್ರೇಷ್ಠ ಕುಲವೆಂದರೆ ರಾಜಕುಮಾರನಾಗಿ ಜನಿಸಬೇಕು ಎಂಬ ಅರ್ಥವೇ ? ಅಥವಾ ಬ್ರಾಹ್ಮಣ ಕುಲದಲ್ಲಿ ಹುಟ್ಟಬೇಕೆಂದು ಅರ್ಥವೇ ? ಕುಲದ ಅರ್ಥವೇ ಇಷ್ಟು ಎಂದಾದರೆ ? ಸಾಕು. ಇನ್ನು ಇದಕ್ಕಿಂತ ಬೇರೊಂದು ಅನರ್ಥವಿಲ್ಲ.

ಯಾವ ಕುಟುಂಬದ ಪರಂಪರಾಗತವಾದ ಸಂಸ್ಕಾರಗಳನ್ನು ಬಳಸಿಕೊಂಡು ಬರುತ್ತಿದೆಯೋ ಚಾರಿತ್ರ್ಯ ನೀತಿ, ವ್ಯವಹಾರ ನಿಯಮಗಳನ್ನು ಅಖಂಡವಾಗಿ ಅನುಸರಿಸಿಕೊಂಡುಬರುತ್ತಿದೆಯೋ ಅಂಥ ಕುಟುಂಬಗಳಿಗೆ ಮಾತ್ರ ಕುಲೋಚ್ಚಾರ ಮಾಡುವ ಅಧಿಕಾರವು ಪ್ರಾಪ್ತವಾಗುತ್ತದೆ.

ಇದನ್ನೇ ಶ್ರೇಷ್ಠಕುಲದ ಸಂಕೇತ ಎಂದಿಟ್ಟುಕೊಂಡಲ್ಲಿ ಎಷ್ಟು ಜನರಿಗೆ ತಮ್ಮ ಕುಲೋಚ್ಚಾರ ಮಾಡುವ ಧೈರ್ಯವು ಪ್ರಾಪ್ತವಾದೀತು. ಅರ್ಥಹೀನವಾದ ಇಂಥ ಕುಲೋಚ್ಚಾರಗಳ ಪರಂಪರೆಯನ್ನು ಮುಂದುವರೆಸುವುದಕ್ಕಿಂತ ಪರಂಪರಾಗತವಾಗಿ ಬಂದ ಉದ್ಯಮಗಳನ್ನೇ ಜಾತಿ ಎಂದು ಹೇಳಿಕೊಂಡು ಬರುವ ಸೂತ, ಸಾರಥಿ, ಕಂಬಾರ, ಕುಂಬಾರ ಮೊದಲಾದವರು ಪ್ರಾಮಾಣಿಕರೆಂದೆನಿಸುವುದಿಲ್ಲವೇ ? ಸಂತಾನ ಪ್ರಾಪ್ತಿಗಾಗಿ ಇನ್ನೊಬ್ಬರ ನೆರವನ್ನು ಪಡೆದೇ ಕುಲಗೌರವಗಳನ್ನುಳಿಸಿಕೊಳ್ಳುವ ಹಂಬಲ ಇದ್ದವರು ಶ್ರೇಷ್ಠಕುಲವನ್ನು ಕುರಿತು ವಿಚಾರ ಮಾಡದಿರುವುದೇ ವಿಹಿತವೆಂದೆನಿಸುತ್ತದೆ.

ಮಧ್ಯಸೇವನೆಗಾಗಿ ಪಾತ್ರೆಯನ್ನೆತ್ತಿದಾಗ ಅದು ಬರಿದಾಗಿತ್ತು. ಬರಿದಾದ ಪಾತ್ರೆಯನ್ನು ಕಂಡು ಕರ್ಣನು ಹೇಳಿದ್ದ. ದೀಪಸ್ತಂಭಗಳಲ್ಲಿಯ ಜ್ಯೋತಿ ಥರಥರನೆ ನಡುಗುತ್ತಿರುವುದನ್ನು ಕಂಡು ಸಂತಾಪಗೊಂಡ. ಸಿಟ್ಟಿನಿಂದ ತನ್ನ ಕೈಯ್ಯಲ್ಲಿದ್ದ ಪಾನಪಾತ್ರೆಯನ್ನು ದೀಪದ ಕಂಬದತ್ತ ಬಿಸಾಡಿದ. ಸುವರ್ಣಪಾತ್ರೆಯ ಸೀನಾದವು ರಾಜಗೃಹವನ್ನೆಲ್ಲ ವ್ಯಾಪಿಸಿ ಕೊಂಡಿತು. ಅದರಿಂದಾಗಿ ವೃಷಾಲಿಯು ಎಚ್ಚರಗೊಂಡಳು. ಪರಿಸರವನ್ನೆಲ್ಲ ಒಂದು ಸಲ ನೋಡಿದಳು. ಕೆಂಗಣ್ಣಿನಿಂದ ಕರ್ಣನು ಬೆಳಗುತ್ತಿರುವ ದೀಪವನ್ನೇ ನೋಡುತ್ತಲಿದ್ದ. ಆ ರೂಪವನ್ನು ಕಂಡು ಅವಳು ಗಾಬರಿ ಗೊಂಡಳು. ದುಃಖವು ತಡೆಯದೆ ಅಳಲಾರಂಭಿಸಿದಳು.

ಅಳುವ ಶಬ್ದದಿಂದ ಕರ್ಣನಿಗೆ ಎಚ್ಚರವಾಯಿತು.

"ವೃಷಾಲೀ, ವಸೂ........ಅಳುತ್ತಿರುವೆಯಾ? ನನ್ನ ಸಲುವಾಗಿ ದುಃಖ ಪಡುತ್ತಿರುವೆಯಾ? ನನಗೆ ಅಪಮಾನವಾಯಿತೆಂದು ಕೆಡಕೆನಿಸಿ ಕೊಳ್ಳುತ್ತಿರುವೆಯಾ?" ತನ್ನನ್ನು ತಾನೇ ಸಂಬಾಳಿಸಿಕೊಳ್ಳುತ್ತ ಕರ್ಣನು ಮುಂದಡಿಯಿಟ್ಟ.

"ಮದನಿಕಾ‥ ಮದನಿಕಾ‥"

ರಾಜಮಹಲಿನ ಬಾಗಿಲು ತೆರೆಯಿತು. ರೂಪಸಂಪನ್ನಳಾದ ದಾಸಿಯು ಅರೆನಿದ್ರೆಯಲ್ಲಿಯೇ ಧಾವಿಸಿ ಬಂದಳು. ತನ್ನ ಉತ್ತರೀಯಗಳನ್ನು ಸಾವರಿಸಿ ಕೊಳ್ಳಬೇಕೆಂಬ ವ್ಯವಧಾನವೂ ಅವಳಿಗಿರಲಿಲ್ಲ. ಕಂಚುಕಿಯ ವೇಷದಲ್ಲಿದ್ದ ಆ ಮದನಿಕೆಯು ಗಾಬರಿಯಾಗಿ ತನ್ನ ಯಜಮಾನನನ್ನೇ ನೋಡುತ್ತ ಲಿದ್ದಳು. ಅವಳ ತಾರುಣ್ಯವು ಅಂಗಾಂಗಗಳಲ್ಲೆಲ್ಲ ವ್ಯಾಪಿಸಿತ್ತು. ಅವಳತ್ತ ಕೈಮಾಡಿ ಕರ್ಣನು,

"ವೃಷಾಲೀ, ನೋಡು! ಈ ಮದನಿಕೆಯ ಸೌಂದರ್ಯವನ್ನು ನೋಡು. ಇವಳೇನು ಆ ಸೌಂದರ್ಯದಲ್ಲಿ ಕಡಿಮೆಯಾಗಿದ್ದಾಳೆಯೇ? ಆ ಯಾಜ್ಞ ಸೇನೆಗಿಂತ ನೂರಾರು ಪಟ್ಟು ಇವಳು ಸುಂದರಳಾಗಿದ್ದಾಳೆ. ಇಂಥ ಅನೇಕ ದಾಸಿಯರು ಈ ಮಹಲಿನಲ್ಲಿದ್ದಾರೆ. ನನ್ನ ಸ್ಪರ್ಶಮಾತ್ರದಿಂದ ಇವರು ಪುಲಕಿತರಾಗಬಹುದು. ಹಾಗೆಂದು ನಾನು ಇವರನ್ನು ಎಂದಾದರೂ ಮುಟ್ಟು ತ್ತೇನೆಯೇ? ಇಲ್ಲ. ವೃಷಾಲಿ, ಈ ಮಾತು ಎಂದಿಗೂ ಸಾಧ್ಯವಿಲ್ಲ.

ಕರ್ಣನು ಎಂದೂ ದಾನವನ್ನು ಸ್ವೀಕರಿಸಿದವನಲ್ಲ. ಮನ ಬಂದಷ್ಟು ದಾನ ಕೊಡುವುದೇ ಆತನಿಗೆ ತಿಳಿದ ವಿಷಯವಾಗಿದೆ. ಹೋಗು ಮದನಿಕೇ ನಿಶ್ಚಿಂತಳಾಗಿ ಮಲಗಿಕೊ ಹೋಗು."

ಬಾಗಿಲು ಮುಂದೆ ಮಾಡಿಕೊಂಡು ಮದನಿಕೆ ಮರೆಯಾದಳು. ದಣಿದ ಕರ್ಣನು ಹಾಸಿಗೆಯಲ್ಲಿ ಬಿದ್ದುಕೊಂಡು ವೃಷಾಲಿಯನ್ನು ಕೂಗಿದ. ಅವಳು ವಿಶಾಲವಾದ ಕರ್ಣನ ಎದೆಯ ಮೇಲೆ ತಲೆಯನ್ನಿಟ್ಟು ಮಲಗಿದಳು. ಅವಳ ನೇತ್ರಗಳಲ್ಲಿ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿದ್ದಿತು. ಕರ್ಣನು ಅವಳ ತಲೆಯ ಮೇಲೆ ಕೈಯಾಡಿಸುತ್ತಲಿದ್ದ.

"ವಸೂ ಅಳಬೇಡ. ನನ್ನ ಸಲುವಾಗಿ ದುಃಖಿಸಬೇಡ. ನಿನ್ನ ಪತಿ ಮಹಾ ಪರಾಕ್ರಮಿ ಎಂಬುದನ್ನೂ ಮರೆಯಬೇಡ. ಗೆಲ್ಲುವುದೊಂದೇ ಪರಾಕ್ರಮವಲ್ಲ, ಸೋಲು ಹಾಗೂ ಅಪಜಯಗಳನ್ನನುಭವಿಸುವುದೂ ಸಹ ಪರಾಕ್ರಮವೆಂದೆನಿಸುವುದು. ಇದಕ್ಕೆ ವಿಶೇಷವಾಗಿ ನಿರ್ಲಜ್ಜತನದ ಮನಸ್ಸು ಹಾಗೂ ಧೈರ್ಯ ಇವುಗಳು ಅಗತ್ಯ. ಪೂಜ್ಯ ಗುರುಗಳಾದ ಪರಶುರಾಮರೇ ನನಗೆ ವರವನ್ನಿತ್ತಿದ್ದಾರೆ. ನನ್ನಂಥ ಕ್ಷತ್ರಿಯ ವೀರರು ತ್ರಿಲೋಕದಲ್ಲಿಯೇ ಸಿಗಲಾರನೆಂಬುದು ಅವರ ವಚನವಾಗಿದೆ. ಅವರ ಮಾತು ಸುಳ್ಳಾದೀತೆ? ಜನ್ಮಜಾತವಾಗಿ ಬಂದ ಈ ನನ್ನ ಕರ್ಣಕುಂಡಲಗಳು ನನ್ನ ರಕ್ಷಣೆಗಾಗಿಯೇ ಇವೆ. ಅವುಗಳಿಲ್ಲದೆ ಹೋಗಿದ್ದರೆ ಆ ದ್ರೌಪದಿಯು ಮಾಡಿದ ಆಘಾತ ದಿಂದಾಗಿ ನನ್ನ ಎದೆ ಎಂದೋ ಬಿರಿದು ಹೋಗುತ್ತಿತ್ತು. ಕಾದ ಕಬ್ಬಿಣದ ರಸದಂತೆ ಅವಳ ಶಬ್ದಗಳು ನನ್ನ ಕಿವಿಯಲ್ಲಿ ಬಿದ್ದಾಗ ನನ್ನ ಕಿವಿಗಳೂ ಸಾಮಾನ್ಯರಂತಿದ್ದರೆ ಎಂದೋ ನಾನು ಅವುಗಳನ್ನು ಕಳೆದುಕೊಳ್ಳ ಬೇಕಾಗಿತ್ತು. ನಾನು ಓರ್ವ ಯೋಧನೆಂಬುದನ್ನು ಮರೆಯಬೇಡ. ಜನ್ಮ ದೊಂದಿಗೆ ಆರಂಭವಾದ ಈ ಯುದ್ಧವನ್ನು ಜೀವನದ ಕೊನೆಯುಸಿರು ವವರೆಗೂ ನಡೆಸಿಕೊಂಡು ಹೋಗಬೇಕಾಗಿದೆ. ಪಾಲಿಗೆ ಬಂದ ಅವಮಾನ ಗಳನ್ನೆಲ್ಲಾ ನಾನು ಅನುಭವಿಸುತ್ತಲೇ ಸಾಗಬೇಕಾಗಿದೆ. ಅದರಲ್ಲಿಯೇ ನನ್ನ ಜೀವನದ ಸಾಫಲ್ಯವು ಅಡಕವಾಗಿದೆ. ಆದುದರಿಂದ ವಸೂ ನೀನು ನನಗಾಗಿ....ಕಣ್ಣೀರು...."

ವೃಷಾಲಿಯು ತಲೆ ಎತ್ತಿ ನೋಡಿದಳು.

ಮಾತನಾಡುತ್ತ ಮಾತನಾಡುತ್ತ ಕರ್ಣನು ನಿದ್ರಾವಶನಾದ.

8

ಚಳಿಗಾಲವು ಕೊನೆಗೊಂಡಿತು. ವಸಂತಮಾಸವು ಒಂದೊಂದೇ ಹೆಜ್ಜೆಯನ್ನು ಮುಂದಿಡಲಾರಂಭಿಸಿತು. ನಿಸರ್ಗವೆಲ್ಲ ನವರೂಪ ಧಾರಣ ಮಾಡಲಾರಂಭಿಸಿತು. ಮೈ ಕೊರೆಯುವ ಚಳಿಯು ಬದಲಾಗಿ ಬೆಳಗಿನ ಗಾಳಿಯು ಮನಸ್ಸಿಗೆ ಹಿತವನ್ನುಂಟು ಮಾಡಲಾರಂಭಿಸಿತು. ನಿತ್ಯಾಹ್ನಿಕಗಳನ್ನು ಮುಗಿಸಿಕೊಂಡು ಮರಳುತ್ತಿರುವಾಗ ನಿಸರ್ಗದ ಒಂದೊಂದೇ ಬದಲಾವಣೆಗಳನ್ನು ಕರ್ಣನು ನಿತ್ಯವೂ ಪರೀಕ್ಷಿಸುತ್ತಿದ, ಅನುಭವಿಸುತ್ತಲಿದ್ದ.

ರಾಜಗೃಹವನ್ನು ಪ್ರವೇಶಿಸುತ್ತಿದ್ದಂತೆ ವೃಷಾಲಿಯು ಅವನನ್ನೆದುರುಗೊಂಡಳು. ಚಕ್ರಧರನು ಬಂದ ಸಮಾಚಾರವನ್ನು ತಿಳಿಸಿದಳು. ಕರ್ಣನ ಮನಸ್ಸು ಪ್ರಸನ್ನವಾಗಿರುವುದನ್ನು ಕಂಡು ಅವಳು ಸಮಾಧಾನಪಟ್ಟಳು.

ಕರ್ಣನು ಮೊದಲು ಚಕ್ರಧರನನ್ನು ಭೇಟಿ ಮಾಡಿದ. "ಮಿತ್ರಾ, ಯಾವಾಗ ಬಂದೆ ?" ಎಂದು ಅವನ ಕ್ಷೇಮ ಸಮಾಚಾರವನ್ನು ವಿಚಾರಿಸಿದ.

"ಸ್ವಲ್ಪ ಸಮಯವಾಯಿತು."

"ಗೋಶಾಲೆ ?"

"ಎಲ್ಲವೂ ಚೆನ್ನಾಗಿದೆ. ಆದರೆ ಕೇವಲ ಒಂದು ಮಾತ್ರ ಈಗ ಇಲ್ಲದಂತಾಗಿದೆ."

"ಹಾಗಂದರೆ ?"

"ಒಂದು ಪಶು ಈಗ ತಮ್ಮ ಮುಂದೆ ನಿಂತಿದೆಯಲ್ಲವೆ ?"

ಆ ಮಾತಿನಿಂದ ವೃಷಾಲಿ ಹಾಗೂ ಕರ್ಣ ಇಬ್ಬರೂ ನಕ್ಕರು.

"ಪಶುವಿನೊಂದಿಗೆ ತನ್ನನ್ನು ಹೋಲಿಸಿಕೊಳ್ಳುವುದು ಬುದ್ಧಿವಂತಿಕೆ ಎಂದೆನಿಸಿಕೊಳ್ಳಲಾರದು."

"ದೊಡ್ಡವರನ್ನನುಸರಿಸುವುದು ಧರ್ಮ."

"ಯಾರು ದೊಡ್ಡವರು !" ಕರ್ಣ ಪ್ರಶ್ನೆ ಮಾಡಿದ.

"ಎಲ್ಲರೂ."

ಚಕ್ರಧರನು ಅರ್ಥಗರ್ಭಿತವಾಗಿ ಮಾತನಾಡುತ್ತಿದ್ದರೂ ಸಹ ನಗೆ ಆತನಿಗೆ ತಡೆಯದಂತಾಯಿತು. ಅದನ್ನು ಅರಿತುಕೊಂಡ ವೃಷಾಲಿಯು,

"ಭಾವನವರ ಮನಸ್ಸಿನಲ್ಲಿ ಏನೋ ಇದ್ದಂತೆ ತೋರುವುದು."

"ಏನೂ ಇಲ್ಲ."

"ಹೇಳು ಮಿತ್ರ, ಏನಿದೆಯೋ ಅದೆಲ್ಲ ಒಂದು ಸಲ ಹೊರಬೀಳಲಿ."

"ಆ ದ್ರುಪದನ ರಾಜಕನ್ಯೆಯ ಗತಿ ಏನಾಯಿತೆಂಬುದು ಗೊತ್ತೇ ?"

ದ್ರೌಪದಿಯ ನೆನಪಾದೊಡನೆ ಕರ್ಣನು ಗಂಭೀರನಾದ. ಆತನು ಯಾವ ಉತ್ಸಾಹವನ್ನೂ ತೋರಿಸಲಿಲ್ಲ

"ಏನಾಯಿತು ?"

"ನಾವು ಸ್ವಯಂವರ ಮಂಟಪದಿಂದ ಹೊರಬಂದ ನಂತರ ಓರ್ವ ಬ್ರಾಹ್ಮಣ ಮತ್ಸ್ಯಯಂತ್ರವನ್ನು ಭೇದಿಸಿದ. ದ್ರೌಪದಿ ಆ ಬ್ರಾಹ್ಮಣ ನನ್ನು ವರಿಸಿದಳು."

"ಬ್ರಾಹ್ಮಣ !"

"ಅದರಲ್ಲಿಯೇ ಸ್ವಾರಸ್ಯವಿದೆ. ಸ್ವಯಂವರ ಮುಂಭಾಗದಲ್ಲಿ ಋಷಿಗಳು ಕುಳಿತಿದ್ದ ಹಿಂಬದಿಯ ಸಾಲಿನಲ್ಲಿ ಬ್ರಾಹ್ಮಣರು ಕುಳಿತುಕೊಂಡಿದ್ದರು. ಇದು ನಿಮ್ಮ ನೆನಪಿನಲ್ಲಿರಬಹುದು. ಅದರಲ್ಲಿ ಐದು ಜನ ಬ್ರಾಹ್ಮಣರ ದೊಂದು ಗುಂಪು ಇತ್ತು. ಅವರು ಬೇರಾರೂ ಅಲ್ಲ, ಆ ಐದು ಜನರ ಗುಂಪೇ ಪಾಂಡವರು."

"ಏನು ಹೇಳುತ್ತಿರುವೆ ?" ಕರ್ಣನು ಆಶ್ಚರ್ಯಚಕಿತನಾಗಿ ಕೇಳಿದ.

"ನಿಜ, ನಮ್ಮ ರಥಶಾಲೆಯ ಕೆಲಸಗಾರನು ದುರ್ಯೋಧನ ಮಹಾ ರಾಜರನ್ನು ಬಿಡಲು ಹಸ್ತಿನಾವತಿಗೆ ಹೋಗಿದ್ದ. ಈಗ ಆತನು ಮರಳಿ ಬಂದಿದ್ದಾನೆ. ಅವನಿಂದಲೇ ಈ ಎಲ್ಲ ವಿಷಯಗಳನ್ನೂ ಕೇಳಿದ್ದೇನೆ."

"ಪಾಂಡವರು ಲಾಕ್ಷಾಗಾರದಲ್ಲಿ ಬೆಂದು ಭಸ್ಮವಾಗಿ ಹೋದರೆಂದು ನನ್ನಲ್ಲಿ ದುರ್ಯೋಧನನು ಹೇಳುತ್ತಲಿದ್ದ."

"ಎಲ್ಲರೂ ತಿಳಿದುಕೊಂಡಿದ್ದು ಹಾಗೆಯೇ. ಆದರೆ ಪಾಂಡವರು ಮಾತ್ರ ಸುರಕ್ಷಿತವಾಗಿ ಆ ವಿಪತ್ತಿನಿಂದ ಪಾರಾಗಿದ್ದಾರೆ. ಅಷ್ಟೇ ಅಲ್ಲ, ತಮ್ಮ ಪರಿಚಯವು ಇನ್ನೊಬ್ಬರಿಗೆ ಸಿಗಬಾರದೆಂದೇ ಅವರು ಬ್ರಾಹ್ಮಣ ವೇಷ ದಲ್ಲಿ ಸಂಚರಿಸುತ್ತಿದ್ದರು."

ಮತ್ಸ್ಯಯಂತ್ರವನ್ನು ಭೇಧಿಸಿದವನಾರು ?''

"ಅರ್ಜುನನ ವಿನಃ ಈ ಕೆಲಸವು ಇನ್ನಾರಿಂದ ಸಾಧ್ಯ ?''

ಚಕ್ರಧರನು ನಡೆದುದನ್ನೆಲ್ಲ ಒಂದು ಕಥೆಯಾಗಿ ಮಾಡಿ ಅದನ್ನು ಹೇಳಿ ಆನಂದದಿಂದ ನಗುತ್ತಲಿದ್ದ. ಅವನ್ನು ಕಂಡು ಕರ್ಣನು ಸಂತಪ್ತನಾದ.

"ಮಿತ್ರ, ಅದರಲ್ಲಿ ನಗುವಂತಹದೇನಿದೆ ? ದ್ರೌಪದಿ ನಿಜವಾಗಿಯೂ ಭಾಗ್ಯಶಾಲಿ. ಅರ್ಜುನನಂತಹ ಧನುರ್ಧಾರಿಯಾದ ವೀರರನ್ನು ಅವಳು ಪತಿಯಾಗಿ ಪಡೆದಳು."

"ಎಲ್ಲರಂತಲ್ಲ ಅವಳ ಭಾಗ್ಯ, ಅದರಲ್ಲಿಯೂ ಸಹ ಒಂದು ವಿಶೇಷ ವಿದೆ. ಕೇವಲ ಒಬ್ಬನೊಂದಿಗೆ ಸಂಸಾರ ಮಾಡಿದಲ್ಲಿ ಅವಳು ಸುಖವನ್ನು ಹೇಗೆ ಕಂಡಾಳು ?"

ಈ ಮಾತುಗಳಿಂದ ಕರ್ಣನು ಇನ್ನಷ್ಟು ಕೋಪಿಸಿಕೊಂಡ.

"ಚಕ್ರಧರಾ, ದ್ರೌಪದಿ ವಿವಾಹಿತಳು. ಪರಸ್ತ್ರೀಯನ್ನು ಕುರಿತು ಇಂಥ ಮಾತನಾಡುವುದು ಸರ್ವಥಾ ಯೋಗ್ಯವಲ್ಲ. ಈ ನಡತೆ ನನಗೆ ಅಸಹನೀಯ."

"ಅವಳು ಈ ಮಾತನ್ನೆಲ್ಲಾ ಸಹಿಸಿಕೊಂಡಿದ್ದಾಳೆ. ಅಂದ ಮೇಲೆ ನಾನೇನು ಮಾಡಲು ಸಾಧ್ಯ?"

"ನಿಲ್ಲಿಸು, ಇನ್ನು ಮುಂದೆ ಈ ವಿಚಾರದಲ್ಲಿ ಒಂದು ಚಕಾರವನ್ನೂ ಎತ್ತಬೇಡ. ವಿನೋದಕ್ಕೂ ಒಂದು ಮಿತಿ ಇದೆ."

ಕರ್ಣನ ಮಾತುಗಳು ಚಕ್ರಧರನ ಮನಸ್ಸಿನ ಮೇಲೆ ಯಾವ ಪರಿಣಾಮ ವನ್ನೂ ಉಂಟು ಮಾಡಲಿಲ್ಲ. ಅದರ ಬದಲಾಗಿ ಆತ ಮತ್ತಷ್ಟು ವಿನೋದ ವಾಗಿಯೇ ಮಾತನಾಡಲಾರಂಭಿಸಿದ. ಅದನ್ನು ಕಂಡು ವೃಷಾಲಿ ಹಾಗೂ ಕರ್ಣ ಇಬ್ಬರೂ ಆಶ್ಚರ್ಯಪಡುವಂತಾಯಿತು.

"ಮಿತ್ರಾ, ನಗುವಿಯೇಕೆ ? ಅದಕ್ಕೇನಾದರೂ ಕಾರಣವಿದೆಯೆ ?"

"ಹೇಳುವೆ ; ಹೇಳುವೆ." ನಗೆಯನ್ನು ಹಿಡಿತಕ್ಕೆ ತಂದುಕೊಳ್ಳುತ್ತ ಚಕ್ರಧರನು "ಇಂದಿನವರೆಗೆ ಎಲ್ಲಿಯೂ ನಡೆಯದಿದ್ದಂತಹ ಒಂದು ಘಟನೆಯು ಸ್ವಯಂವರವನ್ನು ಗೆದ್ದ ಬಳಿಕ ನಡೆಯಿತು. ಸ್ವಯಂವರವು ಮುಗಿದ ನಂತರ ಪಾಂಡವರು ತಮಗೆ ಬಿಡಾರ ಮಾಡಲು ಆಶ್ರಯವನ್ನಿತ್ತಿದ್ದ ಕುಂಬಾರನ ಮನೆಗೆ ಹೋದರು. ಹೊರಭಾಗದಿಂದಲೇ ತಮ್ಮ ತಾಯಿ ಯನ್ನು ಕೂಗಿ,

"ಅಮ್ಮಾ ನಾವು ಹೆಣ್ಣನ್ನು ತಂದಿದ್ದೇವೆ" ಎಂದು ಹೇಳಿದರು. ಮನೆ ಗೆಲಸದಲ್ಲಿದ್ದ ಕುಂತಿದೇವಿಗೆ ಹೆಣ್ಣಿನ ಬದಲು ಹಣ್ಣು ಎಂದು ಕೇಳಿಸಿತು. ಆಗ ಅವಳು, "ಐದೂ ಜನ ಹಂಚಿಕೊಳ್ಳಿರಿ." ಎಂದು ಸೂಚನೆಯನ್ನಿತ್ತಳು.

"ಆನಂತರ ?"

"ಮಾತೃವಾಕ್ಯ ಪರಿಪಾಲಕರಾದ ಆ ಐದು ಜನ ಸೋದರರು ತಂದ ಹೆಣ್ಣನ್ನು ಸಮನಾಗಿ ಹಂಚಿಕೊಂಡರು."

"ಸುಳ್ಳು !"

"ಸಂಪೂರ್ಣ ಸತ್ಯವಾದ ಮಾತಿದು. ಪಾಂಡವರು ಪ್ರಕಟವಾಗಿ ದ್ದಾರೆ. ದ್ರೌಪದಿ, ಐದು ಜನ ಪಾಂಡವರ ಪತ್ನಿಯಾಗಿದ್ದಾಳೆ."

"ದ್ರೌಪದಿ ಐದು ಜನ ಪಾಂಡವರ ಪತ್ನಿ;" ಕರ್ಣನ ಮುಖ ಮ್ಲಾನ ಗೊಂಡಿತು.

"ಪರಾಕ್ರಮದ ಅವಮಾನ ಮಾಡುವುದು ಎಂಥ ಪಾಪದ ಕೆಲಸ. ಕೊನೆಗೂ ಯಾಜ್ಞಸೇನಿಯನ್ನು ಪಂಚಪಾಂಡವರು ಹಂಚಿಕೊಳ್ಳು ವಂತಾಯಿತು !"

"ಇದೆಲ್ಲ ತಾಯಿಯ ಮಾತಿಗಾಗಿ ನಡೆದ ಘಟನೆ ಎಂಬುದು ಕಟ್ಟುಕಥೆ ಎಂದು ಜನರಾಡಿಕೊಳ್ಳುತ್ತಿದ್ದಾರೆ, ದ್ರೌಪದಿಯು ರೂಪವನ್ನು ಕಂಡಾಗ ಐವರಲ್ಲಿಯೂ ಕಾಮೋದ್ದೀಪನವಾಯಿತಂತೆ. ಅದನ್ನು ಕಂಡು ಮುಂದಾಗ ಬಹುದಾದ ಅನರ್ಥಗಳನ್ನು ತಡೆಯಲು ತಾಯಿಯಾದವಳು ಐದು ಜನರನ್ನೂ ವರಿಸುವಂತೆ ಆಜ್ಞಾಪಿಸಿದಳಂತೆ !"

"ಅದೇನೇ ಇರಲಿ, ದ್ರೌಪದಿ ಐದು ಜನರನ್ನು ವರಿಸಿದುದಂತೂ ಖಂಡಿತವಷ್ಟೇ ? ಪಾಂಡವರು ಹಸ್ತಿನಾಪುರದಲ್ಲಿರುವರೇ ?"

"ಇಲ್ಲ, ಅವರು ಇಂದ್ರಪ್ರಸ್ಥದಲ್ಲಿ ಬಿಡಾರ ಮಾಡಿದ್ದಾರೆ."

"ಇಂದ್ರಪ್ರಸ್ಥ ?"

"ದ್ರುಪದನ ಮನೆಯಲ್ಲಿ ಪಾಂಡವರು ಪ್ರಕಟವಾದುದನ್ನು ಕೇಳಿ ಧೃತರಾಷ್ಟ್ರ ಮಹಾರಾಜನು ವಿದುರನನ್ನು ಅವರಿದ್ದಲ್ಲಿಗೆ ಕಳುಹಿಸಿದನಂತೆ, ಆಗ ವಿದುರನೊಂದಿಗೆ ಪಾಂಡವರು ಹಸ್ತಿನಾಪುರಕ್ಕೆ ಬಂದರು. ಕೌರವೇಶ್ವರನು ಖಾಂಡವವನದೊಂದಿಗೆ ಅರ್ಧರಾಜ್ಯವನ್ನು ಪಾಂಡವರಿಗಿತ್ತನಂತೆ. ಅನಂತರ

ಪಾಂಡವರು ಹೊಸ ನಗರವನ್ನೇ ನಿರ್ಮಾಣ ಮಾಡಿದ್ದಾರಂತೆ, ಆ ವೈಭವ ಪೂರ್ಣವಾದ ಇಂದ್ರಪ್ರಸ್ಥ ನಗರದಲ್ಲಿ ದ್ರೌಪದಿಯಿಂದ ಕೂಡಿಕೊಂಡು ತಾಯಿಯೊಂದಿಗೆ ಪಾಂಡವರು ವಾಸಿಸುತ್ತಿದ್ದಾರೆ."

ಈ ಎಲ್ಲ ವೃತ್ತಾಂತವನ್ನು ಕೇಳಿದ ಅನಂತರ ಕರ್ಣನು ದೀರ್ಘವಾದ ಉಸಿರನ್ನೆಳೆದ. ಅವನಿಗರಿವಿಲ್ಲದಂತೆ ಆತನ ಮನಸ್ಸು ಅಶಾಂತಿಯ ಗೂಡಾಗಲಾರಂಭಿಸಿತು. ದುರ್ಯೋಧನನ ಚಿತ್ರವು ಆತನ ಕಣ್ಮುಂದೆ ಬಂದಂತಾಯಿತು.

"ಈ ಎಲ್ಲ ಘಟನೆಗಳು ನಡೆದಾಗ ನಾನು ಹಸ್ತಿನಾಪುರದಲ್ಲಿರುವುದು ಅವಶ್ಯವಾಗಿತ್ತು. ದುರ್ಯೋಧನನಾದರೂ ನಡೆದುದನ್ನೆಲ್ಲ ತಿಳಿಸಿದ್ದರೆ ಚೆನ್ನಾಗಿರುತ್ತಿತ್ತು."

## 9

ಚಂಪಾನಗರವು ಸುಖದ ಆಗರವಾಗಿತ್ತು. ಮಹಾದಾನಿಯಾದ ಕರ್ಣನ ಅಧಿಪತ್ಯದಲ್ಲಿ ಪ್ರಜೆಗಳೆಲ್ಲ ಸಂತೃಪ್ತ ಜೀವನದಲ್ಲಿದ್ದರು. ಪ್ರಜೆಗಳ ಹಿತಚಿಂತಕನಾದ ಕರ್ಣನು ಅವರಿಗನುಕೂಲವಾದ ಕೆಲಸ ಕಾರ್ಯಗಳನ್ನು ಮಾಡಿಸುವುದರಲ್ಲಿ ಸದಾ ನಿರತನಾಗಿರುತ್ತಿದ್ದನು. ವರ್ಷಗಳು ಉರುಳುತ್ತಿದ್ದವು. ಹಾಗೆಯೇ ಕರ್ಣನ ಮನಸ್ಸಿನಲ್ಲಿಯೂ ಪರಿವರ್ತನೆಗಳಾಗ ತೊಡಗಿದವು. ಹಸ್ತಿನಾಪುರದಿಂದ ಬರುತ್ತಿದ್ದ ಸಮಾಚಾರಗಳು ಆತನ ಮನಸ್ಸನ್ನು ಕದಡುತ್ತಿದ್ದವು. ಪಾಂಡವರಿಂದ ನಿರ್ಮಿತವಾದ ಇಂದ್ರಪ್ರಸ್ಥ ಮಹಾನಗರದ ವರ್ಣನೆ ಅವರ್ಣನೀಯ ಎಂಬ ಮಾತುಗಳು ಆತನ ಕಿವಿಗೆ ಬೀಳತೊಡಗಿದ್ದವು, ಸಂವತ್ಸರಗಳು ಬದಲಾದಂತೆ ಬದಲಾದ ಘಟನೆಗಳ ಮಾತೂ ಕೇಳಬರುತ್ತಿದ್ದವು. ಆದರೆ ದುರ್ಯೋಧನನಿಂದ ಮಾತ್ರ ಹಸ್ತಿನಾವತಿಯ ಯಾವ ಸಮಾಚಾರವೂ ಬಾರದಂತಾಗಿತ್ತು.

ಇದೇ ವಿಚಾರದಲ್ಲಿ ತೊಡಗಿದಾಗ ಒಂದು ದಿನ ಪಾಂಡವರ ಸೇನೆಯು ಅಂಗರಾಜ್ಯದ ಮೇಲೆ ದಂಡೆತ್ತಿ ಬರುವ ಸಮಾಚಾರವು ಬಂದಿತು. ಅದನ್ನು ಕೇಳಿದೊಡನೆ ಕರ್ಣನು ತನ್ನ ಸೇನೆಯನ್ನೆಲ್ಲ ಒಂದುಗೂಡಿಸಿದನು. ರಥಶಾಲೆ

ಯಲ್ಲಿದ್ದ ರಥಗಳೆಲ್ಲ ಹೊರಬರುವಂತಾದವು. ಚಂಪಾನಗರದ ರಾಜಬೀದಿಗಳಲ್ಲೆಲ್ಲ ಕುದುರೆಯ ಕಾಲು ಸಪ್ಪಳವು ಕೇಳಲಾರಂಭಿಸಿತು. ಕುಟುಂಬದ ಆಶೀರ್ವಾದವನ್ನು ಪಡೆದುಕೊಂಡ ತರುಣರು ಸಮರವೇಷಧಾರಿಗಳಾಗಿ ಸೇನೆಯಲ್ಲಿ ಬಂದು ಕೂಡಿಕೊಳ್ಳಲಾರಂಭಿಸಿದರು.

ಕರ್ಣನು ತನ್ನ ಸೇನೆಯೊಂದಿಗೆ ಗಡಿಭಾಗಕ್ಕೆ ಬಂದು ತಲುಪಿದನು. ಪಾಂಡವರ ಸೇನಾ ಸಮೂಹವನ್ನು ಕಂಡಾಗ ಕರ್ಣನಿಗಾದ ಆಶ್ಚರ್ಯ ಹೇಳತೀರದು ಗ್ರೀಷ್ಮ ಕಾಲದ ಮೇಘಗಳು ಭೂಮಿಯನ್ನು ಮುತ್ತಿದಂತೆ ಪಾಂಡವರ ಅಸಾಧ್ಯವಾದ ಸೇನೆಯು ಮುಂದೆ ಮುಂದೆ ಸರಿಯುತ್ತಲಿತ್ತು. ಕೆಲವೇ ವರ್ಷಗಳ ಹಿಂದೆ ಯಾರು ಇಂದ್ರಪ್ರಸ್ಥ ಮಹಾನಗರವನ್ನು ನಿರ್ಮಾಣ ಮಾಡಿದ್ದರೋ ಆ ಪಾಂಡವರೇ ಇಂದು ಅಪಾರವಾದ ಇಂಥ ಸೇನೆಯೊಂದಿಗೆ ನಡೆದು ಬರುತ್ತಿರುವುದನ್ನು ಕಂಡು ಮೊದಮೊದಲು ಕರ್ಣನಿಗೆ ಈ ಮಾತಿನಿಂದ ವಿಶ್ವಾಸವಾಗಿರಲಿಲ್ಲ.

ಎರಡೂ ಸೇನೆಗಳು ಒಂದಕ್ಕೊಂದು ಎದುರಾದವು. ಯುದ್ಧವು ಆರಂಭವಾಯಿತು. ಆನೆಯ ಚೀತ್ಕಾರ ಧ್ವನಿ, ಚಕ್ರಗಳ ಶಬ್ದ, ಶಂಖಗಳ ಹಾಗೂ ರಣವಾದ್ಯಗಳ ಕೋಲಾಹಲ ಧ್ವನಿ, ಇವೇ ಮೊದಲಾದವುಗಳು ಭೂಮಿಯನ್ನು ತಲ್ಲಣಗೊಳಿಸಿದವು. ಸೇನೆಯ ಮುಂಭಾಗದಲ್ಲಿ ಕರ್ಣನ ರಥವಿತ್ತು. ತನ್ನ ಸೇನೆಯು ಪರಾಕ್ರಮವನ್ನು ಆತನು ಗಮನಿಸುತ್ತಿದ್ದ. ಚಕ್ರಧರನು ಆತನ ರಥದ ಸಾರಥ್ಯ ಕರ್ಮವನ್ನು ವಹಿಸಿಕೊಂಡಿದ್ದ.

"ಕರ್ಣಾ ಅತ್ತ ನೋಡು."

ಕರ್ಣನ ದೃಷ್ಟಿ ಹೊರಳಿದಾಗ ರಾಗರಂಜಿತನಾದ ಆಕಾಶದ ಮಧ್ಯದಲ್ಲಿ ಸೂರ್ಯದೇವನು ಕಾಣಿಸಿಕೊಂಡು ನೋಡನೋಡುತ್ತಿರುವಂತೆ ಪೂರ್ಣಾಕಾರ ತಾಳುವಂತೆ ಸುವರ್ಣಮಯವಾದ ಒಂದು ರಥವು ಕರ್ಣನ ರಥದತ್ತ ಸಾಗಿ ಬರುತ್ತಿರುವುದು ಕಾಣಿಸಿತು. ರಥದ ಮೇಲಿರುವ ಸಿಂಹಧ್ವಜವನ್ನು ಗಮನಿಸಿದಾಗ ಅದು ಭೀಮನ ರಥ ಎಂಬುದನ್ನು ಕರ್ಣನು ಗುರುತಿಸಿದ. ತಕ್ಷಣ ಕರ್ಣನ ರಥವು ಆತನನ್ನೆದುರಿಸಲು ಹೊರಟಿತು.

ಭೀಮನ ರಥವು ಕರ್ಣನ ರಥಕ್ಕೆ ಅನತಿ ದೂರದಲ್ಲಿ ಬಂದು ನಿಂತಿತು. ಸಾರಥಿಯ ಹಿಂಭಾಗದಲ್ಲಿ ಭೀಮನು ನಿಂತುಕೊಂಡಿದ್ದ. ಆ ರಥದೊಂದಿಗೆ

ತನ್ನ ಶರೀರದ ತೂಕವನ್ನು ಸರಿಮಾಡಿಕೊಳ್ಳುತ್ತಲಿದ್ದ. ಭೀಮನು ಮದೋನ್ಮತ್ತವಾದ ಆನೆಯಂತೆ ತೋರಿಬರುತ್ತಿದ್ದ. ಬಂಗಾರದಂತಹ ಬಣ್ಣ, ವಿಶಾಲವಾದ ಬಾಹುಗಳು, ಹರವಾದ ಎದೆಗಳಿಂದ ವೃಕೋದರನು ಕರ್ಣನನ್ನೇ ನೋಡುತ್ತಲಿದ್ದ. ಕರ್ಣನು ತನ್ನ ಧನುಸ್ಸಿಗೆ ಬಾಣಪ್ರಯೋಗ ಮಾಡಿದುದನ್ನು ಕಂಡು ಭೀಮಸೇನನು ತಕ್ಷಣವೇ ತನ್ನ ಧನುಸ್ಸನ್ನೆತ್ತಿಕೊಂಡು ಯುದ್ಧಸನ್ನದ್ಧನಾದ.

ಸೂರ್ಯಾಸ್ತದವರೆಗೂ ಭಯಂಕರವಾದ ಯುದ್ಧವು ನಡೆಯಿತು. ಜಯಾಪಜಯಗಳನ್ನು ಕುರಿತು ಯಾರೂ ಏನೂ ಹೇಳುವಂತಿರಲಿಲ್ಲ. ಸೂರ್ಯಾಸ್ತವಾದ ನಂತರ ರಣರಂಗವನ್ನೆಲ್ಲ ದೀರ್ಘಕಾಲದ ಶಂಖನಾದಗಳು ವ್ಯಾಪಿಸತೊಡಗಿದವು. ಆ ಧ್ವನಿಯೊಂದಿಗೆ ಅಂದಿನ ಯುದ್ಧವೂ ನಿಲ್ಲಿಸಲ್ಪಟ್ಟಿತು. ತಿರಸ್ಕಾರದ ನೋಟದಿಂದ ಭೀಮನು,

"ರಾಧೇಯಾ........ಸೂತಪುತ್ರಾ........ನಾಳೆಯ ರಣರಂಗದಲ್ಲಿ ನಿನಗೆ ಇಷ್ಟೊಂದು ಕಷ್ಟವಾಗಲಾರದು. ಹೋಗು ಮನೆಗೆ ಹೋಗಿ ವಿಶ್ರಮಿಸಿಕೋ. ಭೂಮಿಯ ಮೇಲಿನ ಕೊನೆಯ ವಿಶ್ರಾಂತಿಯನ್ನು ಮನಸ್ವೇಚ್ಛೆಯಾಗಿ ಪಡೆದುಕೋ,"

ಯುದ್ಧಕಾಲದಲ್ಲಿಯೂ ಭೀಮನಿಂದ ಈ ಮಾತುಗಳು ಕೇಳಬಂದಿದ್ದವು. ಆದರೆ ಈಗ ಮಾತ್ರ ಆ ಮಾತುಗಳಿಂದ ಆತನು ಅಸಂಯಮಿ. ಸಂತಾಪಿ, ಗರ್ವಿಷ್ಠ ಎಂಬುದನ್ನು ಎತ್ತಿ ತೋರಿಸಿದವು

ಕರ್ಣನು ಚಕ್ರಧರನಿಗೆ ಸೂಚನೆಯನ್ನಿತ್ತ ನಂತರ ಆತನ ರಥವು ಚಂಪಾನಗರದತ್ತ ಓಡಲಾರಂಭಿಸಿತು.

ಕರ್ಣನು ರಾಜಗೃಹವನ್ನು ಪ್ರವೇಶಿಸುತ್ತಿದ್ದಂತೆಯೇ ದೂತರು ಹಸ್ತಿನಾವತಿಯಿಂದ ಅಶ್ವತ್ಥಾಮನು ಬಂದಿರುವುದಾಗಿ ತಿಳಿಸಿದರು.

ಈ ಮಾತನ್ನು ಕೇಳಿದಾಗ ಕರ್ಣನ ಉದ್ವಿಗ್ನ ಮನಸ್ಸು ಶಾಂತವಾಗತೊಡಗಿತು. ಅವಸರದಿಂದ ಆತನು ಅಶ್ವತ್ಥಾಮನನ್ನು ಕಾಣಲು ಹೋದ.

"ಗುರುಬಂಧೂ ! ನಡೆಯುತ್ತಿರುವುದೆಲ್ಲ ಏನು ? ಯಾವ ಅಪರಾಧವನ್ನೂ ಮಾಡದಿರುವ ನನ್ನ ರಾಜ್ಯದ ಮೇಲೆ ಪಾಂಡವ ಸೈನ್ಯವು ಹರಿಯುತ್ತಿದೆ. ಇದನ್ನರಿತ ಕೌರವೇಶ್ವರನು ಹಸ್ತಿನಾವತಿಯಲ್ಲಿ ಸುಖದಿಂದ ಕುಳಿತುಕೊಂಡಿದ್ದಾನೆ."

"ಯುದ್ಧವು ಪ್ರಾರಂಭವಾಗಿದೆ ಎಂದು ಕೇಳಿರುವೆ."

"ಹೌದು ನಿಶ್ಚಿತವಾಗಿ ಹೇಳಲು ಬರದಂತಹ ರೀತಿಯಲ್ಲಿ ಇಂದಿನ ಯುದ್ಧವನ್ನು ನಡೆಸಿ ಈಗ ತಾನೇ ಮರಳುತ್ತಿದ್ದೇನೆ."

"ನಿಶ್ಚಿತ ಯುದ್ಧ."

"ಧೃತರಾಷ್ಟ್ರ ಮಹಾರಾಜರು ಯಾವ ಪಾಂಡವರಿಗೆ ಸ್ವಾಗತವನ್ನಿತ್ತು ಅರ್ಧ ರಾಜ್ಯವನ್ನಿತ್ತಿದ್ದಾರೆಯೋ, ಅಂಥ ಪಾಂಡವರ ಮೇಲೆ ನಾನು ಕೈ ಎತ್ತಬಹುದೇ ? ಭೀಮನ ಸೋಲಾದಲ್ಲಿ ಅವರು ನನ್ನನ್ನು ಹೊಗಳುತ್ತಾರೆಯೋ ಅಥವಾ ತೆಗಳುತ್ತಾರೆಯೋ ಎಂಬುದನ್ನು ಹೇಳುವವರಾರು ?"

"ಅಂಗರಾಜಾ, ಈ ಮಾತನ್ನು ನಾನು ಹೇಳುವೆ. ಆ ಭೀಮನನ್ನು ನೀನು ಪರಾಭವಗೊಳಿಸಿದಲ್ಲಿ ನಿನ್ನನ್ನು "ರಾಜದ್ರೋಹಿ" ಎಂದು ಪರಿಗಣಿಸಲಾಗುವುದು."

"ಹಂ !"

"ನಿರೀಕ್ಷೆಗಿಂತ ನನಗೆ ಹೆಚ್ಚಿನ ಸಮಯ ಹಿಡಿಯಿತು. ಇಲ್ಲದಿದ್ದರೆ ಇಂದಿನ ಯುದ್ಧವನ್ನು ನಿಲ್ಲಿಸಬಹುದಾಗಿತ್ತು. ಕೌರವರ ಮುಖ್ಯಮಂತ್ರಿ ಹಾಗೂ ಆಪ್ತಸಲಹೆಗಾರನಾದ ವಿದುರ ಹಾಗೂ ಕುಲಪಿತಮಹರಾದ ಭೀಷ್ಮಾಚಾರ್ಯರರ ಆಜ್ಞಾನುಸಾರವಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ."

"ಏನು ಅವರ ಅಪ್ಪಣೆ ತಿಳಿಸಬಹುದೇ ?"

"ಕೌರವರೊಂದಿಗೆ ಏಕನಿಷ್ಠರಾದ ರಾಜರುಗಳು ಪಾಂಡವರನ್ನು ವಿರೋಧಿಸಬಾರದು. ಪಾಂಡವರು ರಾಜಸೂಯ ಯಾಗವನ್ನು ಮಾಡಲು ಕರಭಾರ ಸಂಗ್ರಹಿಸುವುದಕ್ಕಾಗಿ ಐದು ದಿಕ್ಕಿನಲ್ಲಿಯೂ ಹೊರಟಿದ್ದಾರೆ. ಆದುದರಿಂದ ಅವರಿಗೆ ಎಲ್ಲರೂ ಕರಭಾರವನ್ನು ಒಪ್ಪಿಸಬೇಕು. ಸಖ್ಯತೆಯನ್ನು ಬೆಳೆಸಿಕೊಳ್ಳಬೇಕು. ಈ ಮಾತನ್ನು ತಿಳಿಸಲು ನನ್ನನ್ನು ಕಳುಹಿಸಿದ್ದಾರೆ."

"ಹಾಗೆಯೇ ಯುವರಾಜ ದುರ್ಯೋಧನರಾದರೂ...."

"ಈ ರಾಜಕಾರಣದಲ್ಲಿ ಆತನು ಭಾಗವಹಿಸಿಲ್ಲ."

"ಹಾಗಾದರೆ ಇದರಲ್ಲಿ ಏನಾದರೂ ಮತಭೇದಗಳಿವೆಯೇ ?"

"ನನಗೆ ಆ ವಿಷಯ ತಿಳಿಯದು."

"ಗುರುಪುತ್ರ! ಅಸತ್ಯವನ್ನಾಡಬೇಡ, ಯುವರಾಜ ದುರ್ಯೋಧನನಂತೆ ನೀನೂ ನನಗೆ ಆತ್ಮೀಯ ಮಿತ್ರನಿರುವೆ."

ಕರ್ಣನ ಈ ಮಾತುಗಳಿಂದ ಅಶ್ವತ್ಥಾಮನು ವಿಚಲಿತನಾದರೂ ಆತ ಅದನ್ನು ತೋರಗೊಡಲಿಲ್ಲ.

"ನನಗೆ ಯಾವ ವಿಚಾರವೂ ಗೊತ್ತಿಲ್ಲ. ಆಜ್ಞೆಯನ್ನು ಪರಿಪಾಲಿಸುವುದಷ್ಟೇ ಸೇವಕರ ಕರ್ತವ್ಯ. ಇನ್ನು ನಾನು ಹೊರಡುತ್ತೇನೆ."

"ಇಂಥ ಅಪರಾತ್ರಿಯಲ್ಲಿ...."

"ಮಿತ್ರಾ, ಈಗ ನೀನು ಏನನ್ನು ಅನುಭವಿಸುತ್ತಿರುವೆಯೋ ಹಾಗೆಯೇ ಇತರರದೂ ಎಂದು ಭಾವಿಸು. ಪಾಂಡವರ ಪ್ರಚಂಡವಾದ ಶಕ್ತಿಯ ಮುಂದೆ ಅರಣ್ಯವಾಸಿಗಳಾದ ರಾಜರುಗಳು ಹೇಗೆ ಮುಂದೆ ಬರಲು ಸಾಧ್ಯ ? ಆದುದರಿಂದ ಯಾರನ್ನು ಎಚ್ಚರಿಸಲು ಸಾಧ್ಯವೋ ಅಂಥವರನ್ನೆಲ್ಲ ಭೇಟಿಯಾಗಲೇ ಬೇಕಾಗಿದೆ. ನೀನು ಸಾಮೋಪಚಾರದಿಂದ ಪಾರಾಗಲು ಪ್ರಯತ್ನಿಸು. ಇನ್ನು ನಾನು ಬರುತ್ತೇನೆ."

ಅಶ್ವತ್ಥಾಮನನ್ನು ಮಹಾದ್ವಾರದವರೆಗೆ ಕಳಿಸಲು ಬಂದ ಕರ್ಣನು "ಮಿತ್ರಾ, ಈಗ ನಿನ್ನ ದೂತ ಕಾರ್ಯವು ಮುಗಿದಂತಾಯಿತಷ್ಟೇ ? ಹಸ್ತಿನಾಪುರದಲ್ಲಿ ಎಲ್ಲವೂ ಕ್ಷೇಮವೇ ?"

"ನಿನ್ನ ವಿನಃ ದುರ್ಯೋಧನನು ಏಕಾಂಗಿ"

"ಹಾಗೋ ?"

"ಅಧಿರಥ, ರಾಧಾತಾಯಿ ಯಾವಾಗಲೂ ನಿನ್ನನ್ನು ಸ್ಮರಣ ಮಾಡುತ್ತಿರುತ್ತಾರೆ. ನಾನು ಇಲ್ಲಿಗೆ ಬರುವ ಮುಂದೆ ಅವರನ್ನು ಭೇಟಿಯಾಗಿದ್ದೆ. ಏನಾದರೂ ಸಮಾಚಾರವಿದೆಯೇ ? ಎಂದು ಕೇಳಲು ಹೋಗಿದ್ದೆ. ಆಗ ಅಧಿರಥ ಒಂದು ಮಾತು ಹೇಳಿದ."

"ಯಾವ ಮಾತು ?"

"ನಾವಿಬ್ಬರೂ ಜೀರ್ಣರಾಗಿದ್ದೇವೆ. ನಮಗೆ ಆತನನ್ನು ನೋಡಬೇಕೆನಿಸುತ್ತಿದೆ."

"ಇಷ್ಟೇ ಹೇಳಿದರೆ ? ನನ್ನನ್ನು ಬರಲು ಹೇಳಲಿಲ್ಲವೇ ?"

"ನಿನಗೆ ಅನುಕೂಲವಾದಲ್ಲಿ ಸಹಕುಟುಂಬಿಯಾಗಿ ಬರಲು ತಿಳಿಸಿದ್ದಾರೆ."

ಅಶ್ವತ್ಥಾಮನು ಕರ್ಣನ ಅಪ್ಪಣೆಯನ್ನು ಪಡೆದು ಕಗ್ಗತ್ತಲಲ್ಲಿ ರಥವನ್ನೇರಿ ಹೊರಟುಹೋದ. ಆ ರಥವು ಮುಂದೆ ಸಾಗುತ್ತಿದ್ದಂತೆ ನಿಧಾನವಾಗಿ ಕುದುರೆಯ ಕಾಲು ಸಪ್ಪಳವು ಮಾತ್ರ ಕೇಳಬರತೊಡಗಿತು.

## 10

ಅತಿ ನಸುಕಿನ ಸಮಯ. ಸೂರ್ಯೋದಯವಾಗಲು ಇನ್ನೂ ಕಾಲಾವಕಾಶವಿತ್ತು. ಎತ್ತ ನೋಡಿದರತ್ತ ಪ್ರಶಾಂತ ವಾತಾವರಣವು ಪಸರಿಸಿತ್ತು. ರಣವೇಷವನ್ನು ಧರಿಸಿದ ಕರ್ಣನು ರಥಾರೂಢನಾಗಿದ್ದ. ಚಕ್ರಧರನ ಸಾರಥ್ಯದಲ್ಲಿ ಕರ್ಣನ ಸಂಕೇತದೊಡನೆ ರಥವು ಓಡಲಾರಂಭಿಸಿತು. ಆ ರಥವನ್ನನುಸರಿಸಿಕೊಂಡು ಅಶ್ವದಳವೂ ಬರುತ್ತಲಿತ್ತು.

ಕರ್ಣನ ಶಿಬಿರವು ಕಾಣಲಾರಂಭಿಸಿತು. ಶಿಬಿರದ ತುಂಬೆಲ್ಲ ಚಟುವಟಿಕೆಗಳು ಸಾಗಿದ್ದವು. ಪಾಂಡವರ ಸೇನಾ ಶಿಬಿರವೂ ಕಾಣಬರತೊಡಗಿತು. ಕಾಡಿನಲ್ಲಿ ಬೆಂಕಿ ಹತ್ತಿದಲ್ಲಿ ಆ ಕಾಡು ಹೇಗೆ ಕಾಣಿಸಬೇಕೋ ಹಾಗೆಯೇ ಚಂಪಾನಗರದ ಗಡಿಭಾಗವೆಲ್ಲ ಅಗ್ನಿಯಮಾಲೆಯನ್ನೇ ಹಾಕಿಕೊಂಡಂತೆ ಕಾಣಬರುತ್ತಿತ್ತು.

ಸೂರ್ಯೋದಯವನ್ನು ವೀಕ್ಷಿಸುತ್ತ ಎತ್ತರವಾದ ಒಂದು ಸ್ಥಳದಲ್ಲಿ ಕರ್ಣನು ನಿಂತುಕೊಂಡಿದ್ದ. ಆತನ ಮುಖದಲ್ಲಿ ಜ್ವಲಂತದೀಪ್ತಿಯು ಕಾಣಬರುತಿ ತ್ತು.

ಬೆಳಗಿನ ಸೂರ್ಯಕಿರಣಗಳ ಉಗಮದೊಂದಿಗೆ ಎರಡೂ ಸೇನಾ ಶಿಬಿರಗಳಲ್ಲಿ ವಾದ್ಯಗಳ ಸಬ್ದವು ಕೇಳಲಾರಂಭಿಸಿತ್ತು. ಸಂಪೂರ್ಣಸೂರ್ಯೋದಯದೊಂದಿಗೆ ಎರಡೂ ಸೇನೆಗಳು ಸಿದ್ಧಗೊಂಡವು.

"ಅಂಗರಾಜ."

"ಹಂ."

ಕರ್ಣನು ಹಿಂದಿರುಗಿ ನೋಡಿದಾಗ ಚಕ್ರಧರನು ಕಾಣಿಸಿದ. ಸೀ[illegible]ವಾಗಿ [illegible]ಗರೆದ ಕರ್ಣನು ಹೇಳಿದ.

"ನಡೆ."

ಕರ್ಣನು ರಥಾರೂಢನಾದರೂ ಆತನು ತನ್ನ ಧನುಸ್ಸನ್ನು ಕೈಗೆತ್ತಿಕೊಳ್ಳಲಿಲ್ಲ. ರಥವು ಸೇನೆಯ ಮುಂಭಾಗವಲ್ಲಿ ಬಂದು ನಿಂತುಕೊಂಡಿತು. ಕ್ಷಿತಿಜದಲ್ಲಿ ಸೂರ್ಯದೇವನು ಕಾಣಲಾರಂಭಿಸಿದನು. ಭೀಮನ ರಥದ ಶಂಖನಾದವು ಕೇಳಲಾರಂಭಿಸಿತು. ಅದಕ್ಕೆ ಪ್ರತಿಯಾಗಿ ಕರ್ಣನ ರಥದಿಂದ ಯಾವದೇ ತರಹದ ಪ್ರತಿಧ್ವನಿಯೂ ಕೇಳಿಸಲಿಲ್ಲ. ಆಗ ಚಕ್ರಧರನು ಹಿಂದಿರುಗಿ ನೋಡಿದ. ಶಾಂತರೀತಿಯಲ್ಲಿ ಕರ್ಣನು ರಥದಲ್ಲಿ ನಿಂತುಕೊಂಡಿದ್ದ. ಭೀಮನಿಂದ ಪುನಃ ಆಹ್ವಾನವು ಕೇಳಿಸಿತು. ಆಗ ಕರ್ಣನೆಂದ :

"ಮಿತ್ರಾ, ನಾವು ಭೀಮನ ಭೇಟಿಗೆ ಹೋಗೋಣ."

ಸೈನ್ಯವನ್ನೆಲ್ಲ ಹಿಂದಿಟ್ಟು ಏಕಾಕಿಯಾಗಿ ಬರುತ್ತಿರುವ ಕರ್ಣನನ್ನು ಕಂಡು ಭೀಮನಿಗೆ ಆಶ್ಚರ್ಯವಾಯಿತು. ಕರ್ಣನ ರಥವು ಸಮೀಪಿಸುತ್ತಿರುವಂತೆ ಭೀಮನು ತನ್ನ ಧನುಸ್ಸಿಗೆ ಹೆದೆಯೇರಿಸಿದ. ಅಷ್ಟರಲ್ಲಿ ಕರ್ಣನ ರಥವು ಮತ್ತಷ್ಟು ಸಮೀಪಿಸಿತು. ನಿರಾಯುಧನಾದ ಕರ್ಣನ ಆಕೃತಿಯು ಸಂಪೂರ್ಣವಾಗಿ ಕಾಣಲಾರಂಭಿಸಿತು. ತೀರ ಸಮೀಪಕ್ಕೆ ಬಂದ ನಂತರ ಕರ್ಣನು.

"ಪಾಂಡುಪುತ್ರನಾದ ಭೀಮನಿಗೆ ಜಯವಾಗಲಿ. ಅಂಗರಾಜ ಕರ್ಣನು ತಮಗೆ ಸ್ವಾಗತವನ್ನು ಬಯಸುತ್ತಾನೆ."

ಕರ್ಣನ ಅಹಂಕಾರಗಳನ್ನು ಹಾಗೂ ರೌದ್ರಾವತಾರವನ್ನು ಬಲ್ಲವನಾಗಿದ್ದ ಭೀಮಸೇನನಿಗೆ ಆತನ ಈ ಮಾತುಗಳು ಸರಿದೋರಲಿಲ್ಲ. ಆದುದರಿಂದ ನಿಧಾನವಾಗಿ,

"ಈ ಸ್ವಾಗತದ ಉದ್ದೇಶವೇನು ? ಎಂದು ಕೇಳಿದ."

"ರಾಜಸೂಯದಂತಹ ಪವಿತ್ರ ಕಾರ್ಯಕ್ಕಾಗಿ ಬಂದಿರುವ ವೀರನಿಗೆ ನಾವು ವಿರೋಧ ಮಾಡುವುದಿಲ್ಲ."

"ಈ ಮಾತು ನಿನ್ನೆಯೇ ಅರ್ಥವಾಗಿದ್ದರೆ ಚೆನ್ನಾಗಿರುತ್ತಿತ್ತು. ಅಂಗರಾಜ, ಅಪಜಯದ ಅಂಜಿಕೆಯಾಯಿತೇ ?"

ಕರ್ಣನು ತನ್ನ ಸಿಟ್ಟನ್ನು ನುಂಗಿಕೊಳ್ಳುತ್ತ ಹೇಳಿದ :

"ಇಲ್ಲ, ಖಂಡಿತವಾಗಿಯೂ ಇಲ್ಲ. ತಾವು ರಾಜಸೂಯಯಾಗದ ಆಹ್ವಾನವನ್ನು ಕೊಡಲು ಬಂದಿರುವಿರಷ್ಟೆ ?"

"ಅಹುದು, ಯಾರು ಕಪ್ಪ ಕಾಣಿಕೆಗಳನ್ನಿತ್ತು ನಮ್ಮ ಪ್ರಭುತ್ವವನ್ನು ಒಪ್ಪಿಕೊಳ್ಳುತ್ತಾರೆಯೋ, ಅಂಥವರಿಗೆ ಮಾತ್ರ ಆಮಂತ್ರಣವನ್ನೀಯ ಲಾಗುವುದು ಹಾಗೂ...."

"ಮತ್ತೇನು ?"

"ಯಾರು ನಮ್ಮ ಈ ಪಣವನ್ನು ಅಂಗೀಕರಿಸುವುದಿಲ್ಲವೋ ಅಂಥವ ರನ್ನು ಪರಾಜಯಗೊಳಿಸಿ, ರಾಜಸೂಯಯಾಗದ ಆಜ್ಞೆಯನ್ನು ಅವರಿಗೆ ಕೊಡುತ್ತೇವೆ. ಆದುದರಿಂದ ತಮಗೆ ಆಜ್ಞೆ ಬೇಕೋ ಅಥವಾ ಆಮಂತ್ರಣ ವನ್ನೀಯಬೇಕೋ ಎಂಬುದನ್ನು ನೀವೇ ನಿರ್ಧರಿಸಿರಿ. ಎರಡಕ್ಕೂ ನಾವು ಸಿದ್ಧರಿದ್ದೇವೆ."

"ತಮಗೆ ಅಪೇಕ್ಷಿತವಾದ ಕಪ್ಪುಕಾಣಿಕೆಗಳನ್ನರ್ಪಿಸಿ ತಾವು ಮಾಡು ತ್ತಿರುವ ರಾಜಸೂಯಯಾಗದಲ್ಲಿ ಭಾಗಿಗಳಾಗಲು ನಮಗೆ ಹೆಚ್ಚು ಆನಂದ ವೆನಿಸುತ್ತದೆ."

"ಹಾಗಿದ್ದರೆ ತಾವು ಸೋಲನ್ನಪ್ಪಿಕೊಂಡಿರಲ್ಲವೆ ?"

"ಅದರಿಂದ ನಿಮಗೆ ಸಮಾಧಾನವಾಗುತ್ತಿದ್ದರೆ ಹಾಗೆಯೇ ತಿಳಿದು ಕೊಳ್ಳಿರಿ. ತಮ್ಮನ್ನು ನಾನು ಚಂಪಾನಗರಿಗೆ ಕರೆದೊಯ್ಯಲು ಬಂದಿದ್ದೇನೆ."

"ನಿಮ್ಮ ಇಚ್ಛೆ."

ಕರ್ಣನು ತನ್ನ ರಥದಿಂದ ಕೆಳಗಿಳಿದು ಬಂದು ಭೀಮನ ರಥದ ಸಾರಥಿ ಯನ್ನು ಕೆಳಗಿಳಿಸಿ ನಂತರ ಆ ರಥದ ಸಾರಥ್ಯವನ್ನು ತಾನೇ ವಹಿಸಿಕೊಂಡ. ಅದೆಲ್ಲವನ್ನೂ ಕಂಡು ಭೀಮನಿಗೆ ಪರಮಾಶ್ಚರ್ಯವಾಯಿತು.

"ಅಂಗರಾಜ ತಾವು ಸಾರಥ್ಯ ಕರ್ಮವನ್ನು ವಹಿಸುವುದೇ ?"

ಕರ್ಣನು ಹಿಂದಿರುಗಿಯೂ ನೋಡದೆ,

"ತಾವು ಚಂಪಾನಗರಿಗೆ ದಯಮಾಡಿಸುತ್ತಿರುವಿರಿ. ಆದುದರಿಂದ ತಮ್ಮ ರಥದ ಸಾರಥ್ಯಕರ್ಮವನ್ನು ನಿರ್ವಹಿಸುವುದು ಹೆಚ್ಚು ಯೋಗ್ಯ ಹಾಗೂ ಸುರಕ್ಷಿತ ಎಂದೆನಿಸುವುದು."

ಭೀಮನ ರಥವನ್ನನುಸರಿಸಿ ಕರ್ಣನ ರಥ, ಅದಾದ ನಂತರ ಭೀಮನ ಅಂಗರಕ್ಷಕ ಸೇನೆ ಇವು ಹೊರಟವು. ಮುಂಭಾಗದಲ್ಲಿ ಕರ್ಣನ ಸೈನ್ಯವಿತ್ತು.

ಚಂಪಾನಗರದ ಕೋಟೆಯ ಮಹಾದ್ವಾರದಲ್ಲಿ ರಥಗಳು ಬಂದುನಿಂತಾಗ

ಕಂದಕಗಳನ್ನು ದಾಟಲು ಮರದ ಫಲಕಗಳನ್ನು ಬಿಡಲಾಯಿತು. ಕರ್ಣ ನೊಂದಿಗೆ ಭೀಮನು ಚಂಪಾನಗರವನ್ನು ಪ್ರವೇಶ ಮಾಡಿದ. ದಾರಿ ಯುದ್ದಕ್ಕೂ ಎದ್ದು ಕಾಣುವ ಗೋಪುರಗಳು, ಉದ್ಯಾನವನಗಳು, ಪುಷ್ಕರಣಿ ಗಳು, ಇವೇ ಮೊದಲಾದುವುಗಳಿಂದ ಆ ನಗರವು ಸುಂದರವಾಗಿ ಕಾಣುತ್ತಿತ್ತು.

ವಿಶಾಲವಾದ ರಾಜಬೀದಿಗಳಲ್ಲಿ ರಕ್ಷಕದಳದೊಂದಿಗೆ ರಥಗಳು ಓಡುತ್ತ ಲಿದ್ದವು. ಕರ್ಣನ ದರ್ಶನವಾದೊಡನೆಯೇ ಆತನ ಹೆಸರಿನಿಂದ ಪ್ರಜೆಗಳು ಆನಂದದಿಂದ ಜಯ ಜಯಕಾರ ಮಾಡುತ್ತಿದ್ದರು.

"ಅಂಗರಾಜ, ನಿಮ್ಮ ಈ ಪಟ್ಟಣವು ಯಕ್ಷನಗರಿಯಂತೆ ಸುಂದರ ವಾಗಿದೆ. ಆದರೆ ನಿಮ್ಮ ಪ್ರಜೆಗಳು ಮಾತ್ರ ಈ ಯಕ್ಷನಗರಿಯ ಭೋಗ ಜೀವನ ಅನುಭವಿಸುವಂತೆ ತೋರಿಬರುವುದಿಲ್ಲ. ಅಲ್ಲದೆ ಅವರು ಸುಶಿಕ್ಷಿತ ರಂತೆಯೂ ಕಾಣಬರುವುದಿಲ್ಲ. ಇವರ ಈ ಉದಾಸೀನತೆಗೆ ಕಾರಣವೇನು ?"

ಕರ್ಣನು ಖಿನ್ನ ಮನಸ್ಕನಾಗಿ ನಕ್ಕ.

"ಮಹಾಬಾಹೋ ಭೀಮಾ, ಅಪಜಯವು ಸಾಮಾನ್ಯ ಜನರಿಗೆ ಸುಲಭವಾಗಿ ಪಚನವಾಗಲಾರದು."

"ಅಂಗರಾಜ, ನಿಮ್ಮ ಮಾತು ಸಂಪೂರ್ಣ ಸತ್ಯವಾದುದು. ಪರಾಜಯದ ಅನುಭವವನ್ನು ಸಹಿಸಲು ಗಟ್ಟಿಯಾದ ಮನಸ್ಸಿರಬೇಕಾಗುವದು. ನಿಮ್ಮಂತಹ ಸಾಮರ್ಥ್ಯವಂತರು ಎಲ್ಲಿದ್ದಾರೆ ?"

ಕರ್ಣನು ಹಿಂದಿರುಗಿ ನೋಡದೆ ಚಾಬೂಕಿನ ಪ್ರಹಾರ ಮಾಡಿದ. ಕುದುರೆಗಳು ನಾಗಾಲೋಟದಿಂದ ಧಾವಿಸಲಾರಂಭಿಸಿದವು.

ರಾಜಗೃಹದಲ್ಲಿರುವ ಬಂಗಾರದ ಆಸನದಲ್ಲಿ ಭೀಮನು ಕುಳಿತಿದ್ದ. ಕರ್ಣನ ಸಚಿವರೆಲ್ಲ ಆತನ ಹಿಂದೆ ನಿಂತಿದ್ದರು. ಸಮ್ಮುಖದಲ್ಲಿ ಅತ್ಯಂತ ಉನ್ನತ ಮಟ್ಟದ ಮದ್ಯದ ಪಾತ್ರೆಗಳನ್ನಿಡಲಾಗಿತ್ತು. ಆದರೆ ಭೀಮನಿಗೆ ಅದಾವುದರ ಕಡೆಗೂ ಗಮನವಿರಲಿಲ್ಲ! ಆತನು ಕುಳಿತ ಸ್ಥಾನದಿಂದಲೇ ಕರ್ಣನ ರಾಜಗೃಹದ ವೈಭವವನ್ನು ತೂಗಿ ನೋಡುತ್ತಲಿದ್ದ. ಸ್ವಲ್ಪ ಹೊತ್ತಾದ ನಂತರ ಆತನು ದೊಡ್ಡದಾಗಿ ನಕ್ಕು,

"ಅಂಗರಾಜ, ನಿಮ್ಮ ಈ ಊರು ಹಾಗೂ ನಿಮ್ಮ ರಾಜಗೃಹ ಇವು

ನಮ್ಮ ಮನಸ್ಸಿಗೆ ತುಂಬ ಹಿಡಿಸಿದವು. ಈ ನಾಡು ಇಷ್ಟೊಂದು ಸಂಪದ್ಭರಿತ ವಾದುದೆಂಬ ಕಲ್ಪನೆಯೇ ನಮಗಿರಲಿಲ್ಲ."

"ಭಗವದನುಗ್ರಹದಿಂದ ಈ ನಾಡು ಸುರಕ್ಷಿತವಾಗಿದೆ."

"ನಮ್ಮ ಕೃಪೆಯಿಂದ ಈ ನಾಡು ಇನ್ನು ಮುಂದೆಯೂ ಸುರಕ್ಷಿತ ವಾಗಿಯೇ ಉಳಿಯುತ್ತದೆ. ಅಂಗರಾಜ, ಈ ರಾಜಗೃಹವನ್ನು ನೀವೇ ಕಟ್ಟಿಸಿದಿರೋ ಅಥವಾ ಮೊದಲಿನಿಂದಲೇ ಕಟ್ಟಲ್ಪಟ್ಟಿತ್ತೋ ?

"ನಾನೇ ಕಟ್ಟಿಸಿದ್ದೇನೆ."

"ಸುಂದರವಾಗಿದೆ. ಅಂಗರಾಜ, ನೀವು ಆ ಪರಾಕ್ರಮವನ್ನು ತೋರ ದಿದ್ದಲ್ಲಿ ನಾನು ಈ ಚಂಪಾನಗರದ ಪ್ರಭು ಆಗಬಹುದಿತ್ತೇನೋ ?"

"ಪರಾಕ್ರಮವೆಂಥದು ?"

"ಜರಾಸಂಧನೊಂದಿಗೆ ನಡೆದ ಮಲ್ಲಯುದ್ಧದಲ್ಲಿ ನೀವು ಅವನನ್ನು ಸೋಲಿಸಿದಿರಲ್ಲವೆ ? ಆತನಿಂದಲೇ ನೀವು ಈ ನಗರವನ್ನು ಪಡೆದುಕೊಂಡಿ ದ್ದಲ್ಲವೆ ?"

"ಅಹುದು"

"ಆ ನಿಮ್ಮ ಮಿತ್ರ ಜರಾಸಂಧನನ್ನು ಯುದ್ಧದಲ್ಲಿ ಸಂಹಾರ ಮಾಡಿದ ಅನಂತರವೇ ದಿಗ್ವಿಜಯಕ್ಕಾಗಿ ನಾನು ಹೊರಬಂದಿದ್ದೇನೆ."

"ಜರಾಸಂಧನ ಸಂಹಾರವಾಯಿತೇ ? ಅದೂ ಯುದ್ಧದಲ್ಲಿ ?"

"ಹೌದು, ಮಲ್ಲಯುದ್ಧದ ಆಹ್ವಾನವನ್ನು ನಾನು ಸ್ವೀಕರಿಸಿದೆ. ನನ್ನೊಂದಿಗೆ ನಡೆದ ಯುದ್ಧದಲ್ಲಿಯೇ ಆತನ ಸಂಹಾರವಾಯಿತು."

ಜರಾಸಂಧನ ಸಂಹಾರವಾದುದನ್ನು ಕೇಳಿ ಕರ್ಣನ ಮನಸ್ಸು ವ್ಯಾಕುಲ ಗೊಂಡಿತು. ವಿಶಾಲ ಹೃದಯಿಯೂ, ಔದಾರ್ಯ ಗುಣಸಂಪನ್ನನೂ ಆಗಿದ್ದ ಆತನ ಚಿತ್ರವು ಕಣ್ಮುಂದೆ ಬಂದು ನಿಂತಂತಾಯಿತು. ಆತನ ಕೊನೆಯ ಭೇಟಿಯಾದುದು ದ್ರೌಪದಿಯ ಸ್ವಯಂವರದಲ್ಲಿ. ಬಹು ಅಂತಃಕರಣ ಪೂರ್ವಕ ತನ್ನನ್ನು ಆತನು ಸ್ವಾಗತ ಮಾಡಿದ್ದ.

"ಯಾಕೆ ಸುಮ್ಮನಾದಿರಲ್ಲ, ಮಾತನಾಡುವುದಿಲ್ಲವೇ ?"

"ಮುಪ್ಪು ಎಂಥವರನ್ನೂ ಕೆಡಿಸುತ್ತದೆ."

ಈ ಮಾತಿನಿಂದ ಭೀಮನು ನಗಲಾರಂಭಿಸಿದ. ಆತನ ನಗು ರಾಜ ಗೃಹದ ತುಂಬೆಲ್ಲ ಅಲೆ ಅಲೆಯಾಗಿ ಪ್ರತಿಧ್ವನಿಗೈಯಲಾರಂಭಿಸಿತು.

"ಅಂಗರಾಜ, ನೀವು ಆ ಜರಾಸಂಧನೊಂದಿಗೆ ಮಲ್ಲಯುದ್ಧದ ಆಹ್ವಾನ ವನ್ನು ಸ್ವೀಕರಿಸಿದಾಗ ಆತ ತುಂಬ ತರುಣನಾಗಿದ್ದನೆ? ಇಲ್ಲ, ಆಗಲೂ ಆತ ನಿಗೆ ವಯಸ್ಸಾಗಿತ್ತು."

"ನನಗೆ ಆ ಮಾತಿನ ಪರಿಚಯವಿತ್ತು. ಆದುದರಿಂದಲೇ ನಾನು ಅವನನ್ನು ಸಂಹಾರ ಮಾಡದೆ ಬಿಟ್ಟು ಬಿಟ್ಟೆ. ಪಾಂಡುಪುತ್ರಾ, ಮಾನವನ ಜೀವನವು ಬೆಳೆದಂತೆಲ್ಲಾ ಆತನ ಆಸೆ ಆಕಾಂಕ್ಷೆಗಳು ಬೆಳೆಯುತ್ತ ಹೋಗು ತ್ತವೆ ಕೇವಲ ಎರಡು ವಿಷಯಗಳು ಮಾತ್ರ ಆತನ ಗಮನಕ್ಕೆ ಬಾರ ದಂತಾಗುತ್ತವೆ."

"ಆ ಎರಡು ವಿಷಯಗಳಾವವು?"

"ಮುಪ್ಪು; ಎಂದೂ ಆ ಮುಪ್ಪಿನ ಅರಿವು ಆತನಿಗೆ ಉಂಟಾಗದು."

"ಆನಂತರ?"

"ಮೃತ್ಯು: ಅದನ್ನಾರೂ ತಪ್ಪಿಸಲಾರರು. ಎಂಥ ಪರಾಕ್ರಮಿ ಯಾಗಿರಲಿ ಅಥವಾ ಎಷ್ಟೇ ದಿಗ್ವಿಜಯಗಳನ್ನು ಸಾಧಿಸಿರಲಿ, ಒಂದಲ್ಲ, ಒಂದು ದಿನ ಸಂಪಾದಿಸಿದ ಎಲ್ಲವನ್ನೂ ತೊರೆದು ಹೊರಡಲೇಬೇಕಾಗಬಹುದು. ನಿರ್ಜೀವವನ್ನಾಗಿ ಮಾಡುವುದೇ ಮೃತ್ಯು. ಆದರೆ ಅದು ಎಂದೂ ತನ್ನ ತನವನ್ನು ಮಾತ್ರ ತೋರಿಸಿಕೊಡುವುದಿಲ್ಲ."

ಮೃತ್ಯುವಿಗೆ ಸಂಬಂಧಿಸಿದ ಮಾತುಗಳು ಬಂದುದರಿಂದ ಭೀಮನ ಆನಂದ ಅಟ್ಟಹಾಸಗಳು ಕಡಿಮೆಯಾದವು.

"ಜನನ ಮರಣಗಳ ವಿಷಯವನ್ನು ತಿಳಿಸಿ ಹೇಳಲು ಪಾಠಶಾಲೆಗಳಿವೆ. ಸಾಕಷ್ಟು ಆಶ್ರಮಗಳೂ ಇವೆ. ಅದನ್ನು ಕೇಳಲು ನಾವು ಇಲ್ಲಿಯವರೆಗೆ ಬಂದಿಲ್ಲ ಅಂಗರಾಜ: ನಮ್ಮ ಕಾಣಿಕೆ...."

"ಅದರ ವ್ಯವಸ್ಥೆಯನ್ನೆಲ್ಲ ಮಾಡಲಾಗಿದೆ."

ಸಚಿವರು ತಟ್ಟೆಯ ಮೇಲಿನ ಹೊದಿಕೆಯನ್ನು ತೆಗೆದರು. ಬಂಗಾರದ ಹರಿವಾಣಗಳಲ್ಲಿ ಮುತ್ತು ರತ್ನಗಳನ್ನೆಲ್ಲ ತುಂಬಿಸಲಾಗಿತ್ತು. ಅದನ್ನೆಲ್ಲ ಕಂಡು ಭೀಮನಿಗೆ ಏನು ಹೇಳಬೇಕೆಂಬುದೇ ತಿಳಿಯದಾಯಿತು. ಆಗ ಕರ್ಣನು,

"ಪಾಂಡುಪುತ್ರಾ, ಇದರಿಂದ ತಮಗೆ ಸಮಾಧಾನವಾಗದಿದ್ದಲ್ಲಿ ಇನ್ನೂ........"

"ಸಾಕು, ನಮಗೆ ತುಂಬಾ ಸಂತೋಷವಾಗಿದೆ. ಇನ್ನು ನಾವು ಹೊರಡುತ್ತೇವೆ. ನಮ್ಮ ಸೋದರರ ಪರಿಯಿಂದ ತಾವು ರಾಜಸೂಯ ಯಾಗಕ್ಕೆ ಬರಬೇಕೆಂದು ಆದರದ ಆಮಂತ್ರಣವನ್ನೀಯುವೆ. ತಾವು ಅದನ್ನು ಸ್ವೀಕರಿಸಬೇಕು."

"ಇದೇನು ಆಜ್ಞೆಯೋ ಅಥವಾ ವಿನಂತಿಯೋ ?"

ಭೀಮಸಿಗೆ ತಕ್ಷಣವೇ ಉತ್ತರ ಹೊಳೆಯಲಿಲ್ಲ. ಆತ ಒಂದು ಸಲ ಕರ್ಣನನ್ನು ನೋಡಿದ. ವಿಲಕ್ಷಣವಾದ ಶಾಂತಿಯು ಆತನ ಮುಖದಲ್ಲಿತ್ತು. ಆತನ ದೃಷ್ಟಿಯೊಂದಿಗೆ ತನ್ನ ದೃಷ್ಟಿಯನ್ನು ಒಂದುಗೂಡಿಸುವುದು ಭೀಮಸಿಗೆ ಸಾಧ್ಯವಾಗಲಿಲ್ಲ. ಒಂದು ರೀತಿಯಲ್ಲಿ ಭೀಮನು ಆಗಂತುಕ ನಾಗಿದ್ದ, ಕರ್ಣನ ಆ ನೋಟವನ್ನು ತಪ್ಪಿಸಿಕೊಳ್ಳುತ್ತ,

"ಅಂಗರಾಜ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವೆ. ಇನ್ನು ನಾನು ಬರಲೇ ?"

"ಕ್ಷಮಿಸಿ, ಮಧ್ಯಾಹ್ನದ ಕಾಲವು ಸಮೀಪಿಸುತ್ತಿದೆ. ಇಲ್ಲಿಯೇ ತಮ್ಮ ಭೋಜನವಾದರೆ........

"ಇಲ್ಲ, ಅದು ಸಾಧ್ಯವಿಲ್ಲ. ಶರಣಾಗತರಾದವರಲ್ಲಿ ಕ್ಷತ್ರಿಯರು ಎಂದೂ ಭೋಜನ ಮಾಡಲಾರರು."

## 12

ಕಪ್ಪಕಾಣಿಕೆಗಳೊಂದಿಗೆ ಭೀಮನು ಹೊರಟು ಹೋದ. ಅನಂತರ ಕರ್ಣನ ಮನಸ್ಥಿತಿಯು ಮತ್ತಷ್ಟು ಕೆಟ್ಟು ಹೋಯಿತು. ಅಕಾರಣ ಗಳಿಂದಾಗಿ, ನಡೆದು ಹೋದ ಅವಮಾನಗಳ ಘಟನೆಗಳಿಂದಾಗಿ, ಆತನ ಅಂತ ರಾತ್ಮವು ಕುದಿಯಲಾರಂಭಿಸಿತು.

ದಿನ ನಿತ್ಯದ ಪದ್ಧತಿಯಂತೆ ಆತ ನದಿಯತ್ತ ಹೊರಡುವ ಸಿದ್ಧತೆ ಯಲ್ಲಿದ್ದ. ರಥವನ್ನು ಸಿದ್ಧಪಡಿಸಲು ಆಜ್ಞೆ ಮಾಡಲಾಗಿತ್ತು. ಆಗ ವೃಷಾಲಿಯು

"ಇನ್ನೂ ಸಾಕಷ್ಟು ಸಮಯವಿದೆ" ಎಂದಳು.

"ಹೌದು, ತಿಳಿದುಕೊಂಡರೆ ಉಂಟು, ಇಲ್ಲದಿದ್ದರೆ ಇಲ್ಲ. ವಸೂ, ಕಳೆದುಹೋದ ಮನಃಶಾಂತಿಯನ್ನು ಪುನಃ ಪಡೆದುಕೊಳ್ಳಲು ಕರ್ಣನಿಗೆ ಒಂದೇ ಒಂದು ದಾರಿಯು ಮಾತ್ರ ಉಳಿದುಕೊಂಡಿದೆ. ಈಶ್ವರಚಿಂತನೆಯಿಂದ ಮನಸ್ಸು ಹಗುರಾಗುತ್ತದೆ ?"

ವೃಷಾಲಿಯು ಯಾವ ಮಾತನ್ನೂ ಆಡಲಿಲ್ಲ.

ಕರ್ಣನ ರಥವು ರಾಜಮಾರ್ಗದಲ್ಲಿ ಓಡಲಾರಂಭಿಸಿತು.

ನದಿಯ ತಟಾಕವು ತುಂಬ ಪ್ರಶಾಂತವಾಗಿತ್ತು. ಸೂರ್ಯಕಿರಣಗಳ ಶಾಖದಿಂದಾಗಿ ಮರಳು ಕಾಯಲಾರಂಭವಾಗಿತ್ತು. ಆ ಬಿಸಿಲಿನ ತಾಪ ನುಂಗಿಕೊಂಡು ನೀಲಮಣಿಯಂತೆ ತೋರುತ್ತಿದ್ದ ಆ ಪ್ರವಾಹದ ನೋಟವೇ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿತ್ತು. ಆ ಪ್ರವಾಹದ ನಿಗೂಢತೆಯು ಕರ್ಣನ ಮನಸ್ಸಿಗೆ ಶಾಂತತೆಯನ್ನು ಉಂಟು ಮಾಡಲಾರಂಭಿಸಿತು.

ಮರಳು ತುಳಿದಂತೆಲ್ಲ ಕರ್ ಕರ್ ಎಂಬ ಶಬ್ದವು ಕೇಳಿಬರುತ್ತಲಿತ್ತು. ಸಂಗಡ ತಂದಿದ್ದ ವಸ್ತ್ರಗಳನ್ನೆಲ್ಲ ಬದಿಗಿಟ್ಟನಂತರ ಮೈಮೇಲಿನ ಉತ್ತರೀಯವನ್ನು ಸೊಂಟಕ್ಕೆ ಕಟ್ಟಿಕೊಂಡು ಆತನು ಪ್ರವಾಹವಲ್ಲಿಳಿದ. ಪಾದಗಳಿಗೆ ತಣ್ಣನೆಯ ನೀರು ಸ್ಪರ್ಶವಾದೊಡನೆ ಸುಖಾನುಭವವಾಗತೊಡಗಿತು. ಸೂರ್ಯದೇವನಿಗೆ ವಂದನೆಗಳನ್ನು ಸಲ್ಲಿಸಿದ. ಅನೇಕ ಕಿರಣಗಳಿಂದ ಆತನ ಮುಖ ಅರಳಿದಂತೆನಿಸಿತು. ಹಾಗೆಯೇ ಸ್ವಲ್ಪ ದೂರ ಮುಂದೆ ಸಾಗಿ ಮುಳುಗು ಹಾಕಿದ. ನಂತರ ಮನಸ್ವೇಚ್ಛೆಯಾಗಿ ನೀರಿನಲ್ಲಿ ಈಜಾಡಿದ. ಬಹು ಹೊತ್ತಿನ ಮೇಲೆ ದಂಡೆಗೆ ಬಂದು ಕೈ ಜೋಡಿಸಿ ನಿಂತು ಸೂರ್ಯೋಪಾಸನೆಯಲ್ಲಿ ನಿರತನಾದ.

ನಿತ್ಯೋಪಾಸನೆಯ ಕಾರ್ಯವು ಮುಗಿಯುತ್ತ ಹೋದಂತೆ ಸೂರ್ಯಕಿರಣಗಳು ಆತನ ಹಿಂಬದಿಗೆ ವಾಲಿದಂತೆ ಕಾಣುತ್ತಿದ್ದವು. ಕಪ್ಪಾದ ತಲೆಕೂದಲು ಆತನ ಭುಜಗಳಿಗೆ ಅಂಟಿಕೊಂಡಿದ್ದವು. ಸೂರ್ಯಕಿರಣಗಳ ಸ್ಪರ್ಶದಿಂದಾಗಿ ಆತನ ದೇಹ ಕಾದುಹೋಗಿತ್ತು. ಆದರೂ ಕರ್ಣನು ಶಾಂತನಾಗಿ ಕೈಯಲ್ಲಿ ಗಂಗಾ ಜಲವನ್ನೆತ್ತಿಕೊಂಡು,

"ಯಾರಾದರೂ ಯಾಚಕರು ಇದ್ದಾರೆಯೇ ?"

"ಇದ್ದಾರೆ." ಕೋಮಲವಾದ ಸ್ವರವು ಕೇಳಿಬಂದಿತು.

ಮಂದಸ್ಮಿತನಾದ ಕರ್ಣನು ಹಿಂದಿರುಗಿ ನೋಡದೆ,

"ಯಾಚಕನೇ. ನನ್ನ ಧರ್ಮ ಹಾಗೂ ಪೌರುಷ ಇವುಗಳನ್ನು ಹೊರತುಪಡಿಸಿ ನಿನ್ನ ಮನಸ್ಸಿಗೆ ಒಪ್ಪಿದುದನ್ನು ಕೊಡಲು ನಾನು ವಚನ ಬದ್ಧನಾಗಿರುವೆ."

ಬೊಗಸೆಯಲ್ಲಿದ್ದ ಗಂಗಾಜಲವನ್ನು ಪ್ರವಾಹಕ್ಕೆ ಬಿಟ್ಟು ಯಾಚಕನ ದರ್ಶನಪಡೆಯಲು ಕರ್ಣನು ಹೊರಳಿದ.

ಪ್ರವಾಹದ ದಂಡೆಯಲ್ಲಿ ಓರ್ವ ಮಹಿಳೆಯು ನಿಂತಿದ್ದು ಅವಳು ಕಪ್ಪು ಬಟ್ಟೆಗಳನ್ನು ಧರಿಸಿದ್ದಳು. ಅಧೋವದನಳಾಗಿ ತಲೆಯಮೇಲಿನ ಸೆರಗನ್ನು ಮುಂದೆ ಮಾಡಿಕೊಂಡಿದ್ದಳು. ಆದುದರಿಂದ ಅವಳ ರೂಪವು ಕಾಣು ವಂತಿರಲಿಲ್ಲ.

"ತಾಯೇ, ನಿನ್ನ ಅಪೇಕ್ಷೆ ಯಾವುದು ಎಂಬುದನ್ನು ತಿಳಿಸಿದಲ್ಲಿ ಅದನ್ನು ಪೂರೈಸಿಕೊಡುವುದರಲ್ಲಿ ಈ ಕರ್ಣನಿಗೆ ಧನ್ಯತೆ ಎನಿಸುವುದು."

ಆದರೆ ಅವಳು ಯಾವ ಮಾತನ್ನೂ ಆಡಲಿಲ್ಲ

"ಹೇಳು ತಾಯೀ, ಸಂಕೋಚವನ್ನು ಪಟ್ಟುಕೊಳ್ಳಬೇಡ. ಇಂದಿನ ವರೆಗೆ ಈ ಕರ್ಣನಲ್ಲಿ ಯಾವ ತರಹದ ಸಂಕೋಚವನ್ನು ಯಾರೂ ಪಟ್ಟು ಕೊಂಡುದಿಲ್ಲ ನನ್ನ ದಾತೃತ್ವದಲ್ಲಿ ನಿನಗೆ ನಂಬಿಕೆ ಹುಟ್ಟುವಂತೆ ಮಾಡಲು ಏನು ಮಾಡಬೇಕೆಂಬುದನ್ನು ನೀನೇ ಹೇಳು."

"ನನ್ನ ಮಗ ನನಗೆ ಬೇಕು."

"ನಿನ್ನ ಮಾತು ಅರ್ಥವಾಗಲಿಲ್ಲ, ತಾಯೀ"

"ನಿನ್ನೆ ನಡೆದ ಯುದ್ಧದಲ್ಲಿ ಅಕಾರಣವಾಗಿ ನನ್ನ ಮಗನು ರಣರಂಗದಲ್ಲಿ ಬಲಿಯಾಗಿದ್ದಾನೆ. ಆ ನನ್ನ ಏಕಮಾತ್ರ ಪುತ್ರನು ನನಗೆ ಬೇಕಾಗಿದೆ."

"ಮಾತೇ"

"ನಿಮ್ಮ ದಾತೃತ್ವದ ವಿಚಾರವಾಗಿ ನಾನು ತುಂಬ ಕೇಳಿದ್ದೇನೆ ನಿಮ್ಮನ್ನು ಯಾಚಿಸಿದ ಯಾರೂ ಬರಿಗೈಯಿಂದ ಮರಳಿಲ್ಲವೆಂದೂ ತಿಳಿದು ಕೊಂಡಿದ್ದೇನೆ."

"ತಾಯೀ, ಬೇಡಿಕೆಗೂ ಒಂದು ನಿಯಮವೆಂಬುದು ಇರಬೇಕಲ್ಲವೆ ?"

"ಎಂಥ ನಿಯಮ ?"

"ರಾತ್ರಿಯ ಕತ್ತಲು, ದಿನದ ಪ್ರಕಾಶ ಇವುಗಳನ್ನು ಕೇಳಿದಲ್ಲಿ ಅವುಗಳನ್ನು ಕೊಡಲು ಹೇಗೆ ಸಾಧ್ಯ ? ಅವು ಸೂರ್ಯದೇವನಿಗೆ ಮಾತ್ರ ಮೀಸಲು. ಹಾಗೆಂದೇ ಜನನ ಮರಣಗಳು ಮಾನವನ ಅಧೀನವಷ್ಟೆ ? ನನ್ನ ಮಗನ ಮರಣಕ್ಕೆ ನೀವೇ ಕಾರಣರಲ್ಲವೆ ?"

"ನಾನು ಕಾರಣನೇ !"

"ಹೌದು ರಾಜನ್, ನನ್ನನ್ನು ಕ್ಷಮಿಸಿ. ಮಗನನ್ನು ಕಳೆದುಕೊಂಡ ತಾಯಿಗೆ ತಾಳ್ಮೆ ಎಂಬುದಿರುವುದಿಲ್ಲ."

"ಅಮ್ಮ, ಸ್ಪಷ್ಟವಾಗಿ ಹೇಳಿರಿ. ಸತ್ಯವೆಂಬುದು ಎಷ್ಟೇ ಕಠೋರವಿದ್ದರೂ ಅದನ್ನು ಅನುಭವಿಸಲು ಸಿದ್ಧನಾಗಿರುವೆ."

"ಆ ಮಾತು ನಿಜ. ನನ್ನ ಮಗನು ರಣರಂಗದಲ್ಲಿ ಮರಣ ಹೊಂದಿದ್ದಾನೆ."

"ರಣರಂಗದ ನಿರ್ಣಯವನ್ನು ಯಾರು ಹೇಳಲು ಸಾಧ್ಯ ?"

"ನನಗೂ ಆ ವಿಷಯ ತಿಳಿದಿದೆ. ರಣರಂಗವನ್ನು ಪ್ರವೇಶ ಮಾಡಿದ ವೀರರು ಮೃತ್ಯುವಿನ ಆಹ್ವಾನವನ್ನು ಸ್ವೀಕರಿಸಲೇಬೇಕಾಗುತ್ತದೆ. ಆದರೆ ನನ್ನ ಮಗನ ಮರಣವು ಅಸಫಲತೆಯಿಂದ ರಣರಂಗದಲ್ಲಿ ಆಯಿತು. ಅದಕ್ಕಾಗಿ ನಾನು ದುಃಖಿಸುತ್ತಿರುವೆ."

"ಅಸಫಲತೆ !"

"ಅಹುದು ರಾಜಾ. ನಿನ್ನ ಅಪೇಕ್ಷೆಯ ಮೇರೆಗೆ ಆ ಯುದ್ಧವು ನಡೆಯಿತಲ್ಲವೆ ? ಜಯಾಪಜಯಗಳ ನಿರ್ಣಯವಾಗದಿದ್ದ ಆ ಯುದ್ಧದಲ್ಲಿ ನನ್ನ ಮಗನನ್ನು ನೂಕುವ ಅಧಿಕಾರವೇನಿತ್ತು ? ಕಪ್ಪ ಕಾಣಿಕೆಗಳನ್ನೇ ಕೊಡುವುದಾಗಿದ್ದಲ್ಲಿ ಅಂಥ ಯುದ್ಧವನ್ನೇಕೆ ಕೈಗೊಂಡಿರಿ ? ಅದು ನಿಮ್ಮ ಹವ್ಯಾಸವೆಂದು ಭಾವಿಸಬೇಕೇ ? ಅಥವಾ ಪ್ರಜಾನಿಷ್ಠೆಯು ನಿಮ್ಮ ಭಾರವನ್ನು ಕಡಿಮೆ ಮಾಡಿಕೊಳ್ಳುವ ಬಯಕೆ ಎಂದು ನಂಬಬೇಕೆ ?"

ನಡು ಮಧ್ಯಾಹ್ನದ ಬಿಸಿಲಿನ ತಾಪವು ಹೆಚ್ಚುತ್ತಲಿತ್ತು.

"ಅದರಲ್ಲಿ ನನ್ನ ಅಪರಾಧವಿಲ್ಲ."

"ಹೌದೇ ! ಹಾಗಾದರೆ ನನ್ನ ಮಗನೇ ತಪ್ಪು ಮಾಡಿದನೆಂದು ಹೇಳು

ತ್ತೀರಾ ? ಇರಬಹುದು. ಅವನದೇ ತಪ್ಪಾಗಿರಬಹುದು. ಏಕೆಂದರೆ ಅವನು ತನ್ನ ಒಡೆಯನಲ್ಲಿ ನಿಷ್ಠೆ ತಾಳಿದ. ಯೋಗ್ಯಾಯೋಗ್ಯತೆಯ ಅರಿವು ಆತನಿಗಿರಲಿಲ್ಲ ಕೊನೆಯವರೆಗೂ ಆತ ತನ್ನ ಕರ್ತವ್ಯಕ್ಕಾಗಿಯೇ ಹೋರಾಡಿದ. ಆದುದರಿಂದ ತಪ್ಪು ಅವನದೇ, ನಿಮ್ಮದಲ್ಲ. ಯಾರು ಬಲಿ ತೆಗೆದುಕೊಂಡರೋ ಅಂಥವರಿಗೆ ನೀವು ಕಷ್ಟಕಾಣಿಕೆಗಳನ್ನಿತ್ತು ನಿಶ್ಚಿಂತರಾದಿರಿ, ಅಲ್ಲವೇ ?"

"ಹೇಳು ಮಾತೇ, ನಿಲ್ಲಿಸಬೇಡ. ನೀನು ಏನು ಹೇಳುವಿಯೋ ಅದೆಲ್ಲವನ್ನೂ ಹೇಳು. ಕಳೆದ ಎರಡು ದಿನಗಳಿಂದಲೂ ನನ್ನ ಮನಸ್ಸು ವಿಚಲಿತಗೊಂಡಿದೆ. ನನ್ನ ಆ ವೇದನೆಯ ಸ್ವರದಲ್ಲಿಯೇ ನಿನ್ನ ಮಾತುಗಳು ಹೊರಬರುತ್ತಲಿವೆ. ಆ ಎಲ್ಲಾ ವೇದನೆಗಳನ್ನೂ ನಾನು ಸಹಿಸುತ್ತೇನೆ."

"ನಿಮಗೆ ಹೇಳುವುದೇನೂ ಇಲ್ಲ. ನನಗೆ ಬೇಕಾಗಿರುವುದು ನನ್ನ ಮಗ ಅಷ್ಟೇ."

"ತಾಯಿ, ಕದಡಿದ ಮನಃಶಾಂತಿ, ಅನುಭವಿಸದ ಸ್ವಪ್ನ, ಹಾರಿಹೋದ ಪ್ರಾಣ, ಇವುಗಳನ್ನು ಮರಳಿ ಪಡೆಯುವುದು ಹೇಗೆ ಸಾಧ್ಯ"

"ಆ ಎಲ್ಲ ವಿಚಾರಗಳನ್ನು ನಾನೇಕೆ ಮಾಡಲಿ ? ದಾನಕ್ಕಾಗಿ ಬಂದು ನಿಲ್ಲುವವರು ಇಂಥ ವಿಚಾರಗಳನ್ನು ಮಾಡಬೇಕೆ ? ಜೀವನವನ್ನು ಅರ್ಪಿಸುವುದಕ್ಕಾಗಿಯೇ ವೀರರು ರಣಾಂಗಣ ಪ್ರವೇಶ ಮಾಡುವುದುಂಟು. ಅವರಿಗೆ ರಾಜನ ವಿಶ್ವಾಸಘಾತತನದ ಅರಿವಿರುವುದಿಲ್ಲ."

ಆ ಮಾತೆಯ ಕೊನೆಯ ನುಡಿಗಳು ಕರ್ಣನ ಅಂತರಂಗವನ್ನು ಹಿಂಡಿತು.

"ಆಗಲಿ ತಾಯಿ, ನಿನ್ನ ಮಗನು ನಿನಗೆಸಿಗುತ್ತಾನೆ. ಇನ್ನು ಮುಂದೆ ರಣಾಂಗಣವನ್ನು ಪ್ರವೇಶ ಮಾಡುವ ಆ ನಿನ್ನ ಮಗನ ಹೆಸರು ಕರ್ಣನೆಂದು ತಿಳಿ. ನಿನ್ನ ಮಗನು ಇನ್ನು ಮೇಲೆ ಕರ್ಣನ ರೂಪದಲ್ಲಿಯೇ ಜೀವಂತನಾಗಿದ್ದಾನೆ ಎಂದು ಭಾವಿಸು."

"ಈ ಮೋಸದ ಮಾತುಗಳು ತಾಯಿಯ ಹೃದಯಕ್ಕೆ ಸಮಾಧಾನವನ್ನುಂಟು ಮಾಡಲಾರವು."

"ಇದು ಮೋಸದ ಮಾತಲ್ಲವಮ್ಮ. ಇನ್ನು ನನಗೆ ಎರಡು ದಿವಸಗಳ ಕಾಲಾವಕಾಶ ಕೊಡು, ಆ ಎರಡು ದಿವಸಗಳಲ್ಲಿ ಚಂಪಾನಗರವು ಬೇರೊಬ್ಬ ಅಧಿಪತಿಯನ್ನು ಹೊಂದುವುದು. ಆಗ ನಾನು ಖಂಡಿತವಾಗಿಯೂ ನಿನ್ನ

ಮನೆಯಲ್ಲಿ ನಿನ್ನ ಮಗನಾಗಿಯೇ ಸೇವೆ ಸಲ್ಲಿಸುತ್ತೇನೆ. ನೀನು ನಿನ್ನ ಮಗನಿಂದ ಯಾವ ಸುಖ ಸಂತೋಷಗಳನ್ನನುಭವಿಸುತ್ತಿದ್ದೆಯೋ, ಅದೆಲ್ಲವೂ ನಿನಗೆ ಲಭಿಸುವಂತೆ ನಾನು ಪ್ರಯತ್ನಿಸುತ್ತೇನೆ. ಇದು ನನ್ನ ಪ್ರತಿಜ್ಞೆಯಾಗಿದೆ. ಈ ಕರ್ಣನ ಮಾತಿನಲ್ಲಿ ನಂಬಿಕೆಯನ್ನಿಡು ತಾಯೀ."

ಕರ್ಣನಾಡಿದ ಆ ಮಾತುಗಳಿಂದ ಆ ಮಾತೆಯ ಹೃದಯವು ಗಾಳಿಗೆ ಸಿಕ್ಕ ತರಗೆಲೆಯಂತೆ ನಡುಗಲಾರಂಭಿಸಿತು. ಅದನ್ನು ತಡೆಹಿಡಿದುಕೊಳ್ಳುವ ಸಂಯಮವೂ ಸಹ ಅವಳಲ್ಲಿ ಉಳಿಯದಂತಾಯಿತು.

"ಬೇಡ ರಾಜನ್, ಅಂಥ ಕಠೋರವಾದ ಪ್ರತಿಜ್ಞೆಯನ್ನು ಮಾಡಬೇಡ, ನನ್ನ ದುಃಖವನ್ನು ನಾನೇ ಸಹನ ಮಾಡಿಕೊಳ್ಳುವೆ. ಪುತ್ರಹೀನ ಮಾತೆಯರ ಸಂರಕ್ಷಣಾರ್ಥವಾಗಿ ನಿನ್ನಂಥ ರಾಜನು ದೊರೆಯುವುದು ಬಹು ಕಠಿಣ"

ಅವಳು ಕಣ್ಣೀರು ಸುರಿಸಲಾರಂಭಿಸಿದಳು. ಶಾಂತ ಮನಸ್ಸಿನಿಂದ ಕರ್ಣನು ಆಕೆಯನ್ನು ಸಮೀಪಿಸಿದ. ತನ್ನ ಕೈಗಳಿಂದ ಅವಳ ಮುಖದ ಮೇಲಿದ್ದ ಸೆರಗನ್ನು ಸರಿಸಿದ. ಅವಳ ಆ ಮುಖದರ್ಶನವಾದೊಡನೆಯೇ ಆತನು ತಬ್ಬಿಬ್ಬಾಗಿ ಹೋದ. ತನ್ನ ಆಪ್ತಮಿತ್ರನಾದ ಚಕ್ರಧರನ ಹೆಂಡತಿ. ಅವಂತಿಯು ಅವನ ಮುಂದೆ ನಿಂತಿದ್ದಳು.

"ಅವಂತೀ ! ನೀನು ನಿನ್ನ ಕೌಸ್ತುಭ !"

"ಭಾವನವರೇ ಕೌಸ್ತುಭನನ್ನು ನಾನು ಎಂದೆಂದಿಗೂ ಕಳೆದುಕೊಂಡೆ."

ಆ ಮಾತುಗಳನ್ನು ಹೇಳುತ್ತಿದ್ದಂತೆಯೇ ಅವಂತಿ ಮರಳಿನಲ್ಲಿ ಕುಸಿದು ಬಿದ್ದಳು. ಕರ್ಣನು ಧಾವಿಸಿ ಅವಳನ್ನು ಹಿಡಿದು ನಿಲ್ಲಿಸಿದ. ಅವಳನ್ನು ಸಮಾಧಾನ ಪಡಿಸಲು ಕರ್ಣನಲ್ಲಿ ಏನೂ ಉಳಿದಿರಲಿಲ್ಲ. ನಿಧಾನವಾಗಿ ಕರೆದುಕೊಂಡು ಬಂದು ಅವಳನ್ನು ತನ್ನ ರಥದಲ್ಲಿ ಕೂಡಿಸಿ ಮನೆಗೆ ತಲುಪಿಸುವಂತೆ ಸಾರಥಿಗೆ ಆಜ್ಞೆ ಮಾಡಿದ.

ಅಂದು ಘಟಿಸಿದ ವಿಚಾರದಲ್ಲಿಯೇ ತಲ್ಲೀನನಾಗಿ ರಾಜಗೃಹವನ್ನು ಪ್ರವೇಶ ಮಾಡುತ್ತಲಿದ್ದ ಕರ್ಣನಿಗೆ ನಗೆಯ ಹೊನಲು ಕೇಳಬಂದಿತು. ಯಾರೋ ಧಾವಿಸಿ ಬರುವುದೂ ಕಾಣಿಸಿತು, ನಂತರ ಆತ ಚಕ್ರಧರನೇ ಎಂಬುದು ಸ್ಪಷ್ಟವಾಯಿತು. ಆ ಚಕ್ರಧರನ ಹಿಂಬದಿಯಲ್ಲಿ ವೃಷಸೇನನು

ಬರುತ್ತಲಿದ್ದ ಆತನು ಬಾಣ ಪ್ರಯೋಗ ಮಾಡಿದಂತೆ ನಟಿಸಿದಾಗ ಚಕ್ರಧರನು ತಾನು ನಿಂತ ಸ್ಥಳದಲ್ಲಿಯೇ ಕುಸಿದು ಬಿದ್ದು,

"ಸತ್ತೆ" ಎಂದು ಕೂಗಿಕೊಂಡ.

"ವ್ಹಾ !" ವೃಷಸೇನನು ಬೇಸರದ ಧ್ವನಿಯಿಂದ "ಯಾರಾದರೂ ಒಂದೇ ಬಾಣದಿಂದ ಸಾಯುತ್ತಾರೆಯೇ ?" ಚಕ್ರಧರನು ತಾನು ಬಿದ್ದಿರುವ ಸ್ಥಳದಿಂದಲೇ ಉತ್ತರಿಸಿದ,

"ಯುವರಾಜ, ನೂರಾರು ಬಾಣಗಳು ನಡುತ್ತವೆ. ಆದರೆ ಪ್ರಾಣ ಹೋಗುವುದು ಒಂದೇ ಬಾಣದಿಂದ. ಯಾವ ಬಾಣವು ಹೃದಯಕ್ಕೆ ತಾಕುತ್ತದೆಯೋ ಆ ಬಾಣದಿಂದ."

ಅದೇ ಸಮಯಕ್ಕೆ ಸರಿಯಾಗಿ ಕುಪಿತಳಾದ ವೃಷಾಲಿಯು ಆ ಸ್ಥಳಕ್ಕೆ ಬಂದಳು.

"ಇದೇನು ಭಾವನವರೇ, ನೀವೇನು ಸಣ್ಣಮಕ್ಕಳೇ! ಹೀಗೆ ಮಕ್ಕಳೊಂದಿಗೆ ಆಟವಾಡುತ್ತೀರಿ."

ಅವಳ ಮಾತಿನಿಂದ ಚಕ್ರಧರನು ಸಾವರಿಸಿಕೊಂಡು ಮೇಲೆದ್ದು ನಿಂತ. ಆಗ ಆತನ ಗಮನವು ಬಾಗಿಲತ್ತ ಹರಿಯಿತು. ಕರ್ಣನು ಧಾವಿಸಿ ಬರುತ್ತಲಿದ್ದ. ಆತನ ನೇತ್ರಗಳು ತುಂಬಿ ಬಂದಿದ್ದವು. ಭಾರವಾದ ನಡಗುವ ಕಂಠದಿಂದ ಕೂಗಿದ.

"ಪಿತಾಮಹ !!"

ಕರ್ಣನಿಂದ ದೂರ ಸರಿಯುತ್ತ ಚಕ್ರಧರನು.

"ಸ್ನೇಹಿತನೆ, ಒಂದು ಬದಿಯಿಂದ ಇನ್ನೊಂದು ಬದಿಗೆ ಪಾರಾಗು ವಂತಹ ರೀತಿಯಲ್ಲಿ ಬಾಣ ಪ್ರಯೋಗವಾಗಿದೆ. ನಾನು ಮರತೇಬಿಟ್ಟಿದ್ದೆ. ಹಸ್ತಿನಾವತಿಗೆ ಪ್ರಯಾಣ ಬೆಳೆಸಲು ರಥವು ಸಿದ್ಧವಾಗಿದೆ. ನೀನು ಯಾವಾಗ ಹೊರಡುವಿಯೋ ಅದನ್ನು ತಿಳಿಸಿದಲ್ಲಿ ನಾನು ಬರುವೆ."

ಚಕ್ರಧರನು ಹೊರಟು ಹೋದನಂತರ ವೃಷಾಲಿಯು ಕರ್ಣನ ಸಮೀಪಕ್ಕೆ ಬಂದಳು. ಧಾರಾಕಾರವಾಗಿ ಹರಿಯುತ್ತಲಿರುವ ಕರ್ಣನ ನೇತ್ರ ಗಳನ್ನು ಕಂಡ ಅವಳು.

"ಏನಾಯಿತು ?"

"ವಸೂ, ಚಕ್ರಧರನ ಮಗನಾದ ಕೌಸ್ತುಭನು ಮೊನ್ನೆ ನಡೆದ ಯುದ್ಧ ಸಮಯದಲ್ಲಿ ರಣಾಂಗಣದಲ್ಲಿ ಅಸುನೀಗಿದ" ಎಂದು ಹೇಳಿ ವೃಷಸೇನನನ್ನು ಅಪ್ಪಿಕೊಂಡು ತಡೆಹಿಡಿದು ಸಿಲ್ಲಿಸಿದ ಅಶ್ರುಧಾರೆಗೆ ಮಾರ್ಗ ತೋರಿಸಿದ.

## 13

ಹಸ್ತಿನಾವತಿಯು ಕಾಣತೊಡಗಿದಾಗ ವೃಷಸೇನನಿಗಾದ ಆನಂದ ಹೇಳತೀರದು. ಅವನ ಆಶಾಪೂರಿತವಾದ ನೇತ್ರಗಳು ಆ ನಗರದ ಒಂದೊಂದೇ ಭಾಗಗಳನ್ನು ವೀಕ್ಷಿಸುತ್ತಿದ್ದವು. ವಿಶಾಲವಾದ ಗಂಗೆಯ ದಂಡೆಯಲ್ಲಿ ಶುಭ್ರವಾದ ಕಮಲವು ಅರಳಿದಂತೆ ಹಸ್ತಿನಾವತಿಯು ಶೋಭಿಸುತ್ತಿತ್ತು. ಆ ನಗರದ ಗೋಪುರಗಳು ಆಕಾಶದತ್ತ ತಲೆ ಎತ್ತಿ ನಿಂತಿದ್ದವು. ಕಮಲ ದಳಗಳಂತೆ ಅಲ್ಲಿರುವ ಮನೆಗಳು ಕಾಣಬರುತ್ತಿದ್ದವು. ಕರ್ಣನು ವೃಷಸೇನನಿಗೆ ಹೇಳಿದ.

"ಮಗೂ, ಅಗೋ ನೋಡು. ಕೌರವೇಶ್ವರನ ರಾಜಧಾನಿ ಹಸ್ತಿನಾವತಿ."

"ತಂದೆಯೇ, ಆ ನಗರದಲ್ಲಿ ಆಶ್ಚರ್ಯವನ್ನುಂಟುಮಾಡುವಂತಹ ಅನೇಕ ನೋಟಗಳು ನೋಡಲು ಸಿಗಬಹುದಲ್ಲವೆ?"

ಸ್ವಪ್ನದಲ್ಲಿದ್ದವರಂತೆ ಕರ್ಣನು ನುಡಿದ. "ಮಗೂ ಅಲ್ಲಿ ನಿನ್ನ ತಾತ, ಅಜ್ಜಿ ನಿನಗಾಗಿ ದಾರಿ ಕಾಯುತ್ತಿದ್ದಾರೆ. ನಿನ್ನ ಅಣ್ಣ ಶತ್ರುಂಜಯ ಹಾಗೂ ವೃಷಕೇತು ಇವರುಗಳು ನಿನ್ನ ಮಾರ್ಗ ನಿರೀಕ್ಷಣೆಯಲ್ಲಿದ್ದಾರೆ. ದ್ಯುಮ್ನನೂ ಸಹ ಯಾವಾಗ ನೀನು ಬರುತ್ತೀಯೋ, ನಿನ್ನನ್ನು ರಥದಿಂದೆತ್ತಿಕೊಂಡು ರಾಜಮಹಲಿನಲ್ಲಿ ಯಾವಾಗ ಓಡಿ ಹೋಗುವೆನೋ, ಎಂದು ಆಸೆಗಣ್ಣಿನಿಂದ ನಿನ್ನ ದಾರಿಯನ್ನೇ ಕಾಯುತ್ತಲಿರುತ್ತಾನೆ."

"ರಾಜಮಹಲು!"

"ಹೌದು, ನಿನ್ನ ಚಿಕ್ಕಪ್ಪನು ದುರ್ಯೋಧನನೊಂದಿಗೆ ಇರುತ್ತಾನಲ್ಲವೆ?"

ಕರ್ಣನ ಮನಸ್ಸು ಯಾವಾಗ ರಾಧಾ ತಾಯಿಯನ್ನು ಕಾಣುವೆನೋ ಎಂದು ಚಡಪಡಿಸುತ್ತಲಿತ್ತು. ಹಸ್ತಿನಾವತಿಯ ಮಹಾದ್ವಾರವನ್ನು ಕಾಯುತ್ತಿದ್ದ ರಕ್ಷಕರಿಂದ ವಂದನೆಗಳನ್ನು ಸ್ವೀಕರಿಸಿದ ಅವನ ರಥವು

ಅಧಿರಥನ ಮನೆಯ ಮುಂಭಾಗದಲ್ಲಿರುವ ಅಂಗಳದಲ್ಲಿ ಬಂದು ನಿಂತಿತು. ರಥವನ್ನು ಕಂಡ ವೃಷಕೇತುವು ಅಂತಃಪುರವೆಲ್ಲ ಪ್ರತಿಧ್ವನಿಗೈಯುವಂತೆ ಕೂಗಲಾರಂಭಿಸಿದನು.

ಕರ್ಣ, ವೃಷಾಲಿ, ವೃಷಸೇನ ಇವರುಗಳೆಲ್ಲ ರಥದಿಂದಿಳಿದು ಬಂದಾಗ, ಶತ್ರುಂಜಯ, ವೃಷಕೇತು ಇಬ್ಬರೂ ಅವರ ಸಮ್ಮುಖಕ್ಕೆ ಬಂದು ಕರ್ಣನಿಗೆ ಅಭಿವಂದನೆಗಳನ್ನು ಸಲ್ಲಿಸಿದರು. ದ್ಯುಮನು ಬಂದು ನಮಸ್ಕರಿಸಬೇಕೆಂದಾಗ ಕರ್ಣನು ಅದಕ್ಕೆ ಅಸ್ಪದವನ್ನೀಯದೆ ಆತನನ್ನು ಅತ್ಯಾನಂದದಿಂದ ಆಲಿಂಗಿಸಿ ಕೊಂಡನು. ಎಲ್ಲರೂ ಗೃಹಪ್ರವೇಶ ಮಾಡಿದಾಗ ಅವರಿಗೆ ದ್ಯುಮನ ಪತ್ನಿಯ ದರ್ಶನವಾಯಿತು. ಕರ್ಣನ ದೃಷ್ಟಿಯು ಒಳಕೋಣೆಯಿಂದ ಬರುತ್ತಲಿದ್ದ ರಾಧಾತಾಯಿಯತ್ತ ಹರಿಯಿತು. ಅವಸರದಿಂದ ಮುಂದೆ ಹೋಗಿ ಆತನು ಆ ತಾಯಿಗೆ ವಂದನೆಗಳನ್ನು ಸಲ್ಲಿಸಿದ. ಆಗ ರಾಧಾ ತಾಯಿಯು,

"ನಿನ್ನನ್ನು ನೋಡಬೇಕೆಂದು ತುಂಬ ಹಂಬಲಿಸುತ್ತಿದ್ದೆ. ನೀವುಗಳು ಬಂದುದು ತುಂಬಾ ಒಳ್ಳೆಯದಾಯಿತು." ವಾರ್ಧಕ್ಯದಿಂದ ಬಾಡಿದ ತಾಯಿ ಯನ್ನೇ ಕರ್ಣನು ಮನದಣಿಯುವಂತೆ ನೋಡಿದ.

"ಎಷ್ಟು ಎತ್ತರವಾಗಿ ಬೆಳೆದುಬಿಟ್ಟಿರುವಿಯಲ್ಲೋ ! ಸ್ವಲ್ಪ ಬಗ್ಗಿಯಾ ದರೂ ಒಗ್ಗು."

ಕರ್ಣನು ಮುಂದೆ ಬಾಗಿದಾಗ ರಾಧಾತಾಯಿ ಅವನ ಮೈಮೇಲೆಲ್ಲ ಕೈಯಾಡಿಸಿದಳು. ಅಂತಃಕರಣದಿಂದ ಅವನನ್ನಪ್ಪಿಕೊಂಡಳು. ಅದನ್ನೆಲ್ಲ ಅನುಭವಿಸುತ್ತಿದ್ದ ಕರ್ಣನಿಗೆ ನಗು ಬಂತು

"ಅಮ್ಮಾ, ಈ ಮಕ್ಕಳೆಲ್ಲ ನೋಡಿ ನಗುತ್ತಿವೆ."

"ನಗಲಿ ಮಗೂ, ಅವರಾಗಲಿ ಅಥವಾ ಅವರ ತಾಯಿಯಾಗಲಿ ಆಕಾಶ ದಿಂದ ಕಳಚಿ ಬಿದ್ದಿದ್ದಾರೆಯೇ? ಅಂತಃಕರಣವನ್ನನುಭವಿಸುತ್ತ ಅವರೂ ಬೆಳೆ ದಿಲ್ಲವೇ ?"

"ಹೌದು, ಈಗ ಅಣ್ಣ ಬಹು ದೊಡ್ಡವನಾಗಿದ್ದಾನೆ ಅಲ್ಲವೆ ?"

"ಸುಮ್ಮನಿರೋ ದೊಡ್ಡವನಂತೆ; ದೊಡ್ಡವನು, ಅವನು ನನಗೆ ಮೊದಲಿನಂತೆಯೇ ಕಾಣುತ್ತಾನೆ."

ರಾಧಾ ತಾಯಿಯ ಗಮನವು ವೃಷಸೇನನತ್ತ ಹರಿಯಿತು. ಅವಳು ಅವನನ್ನು ಬರಸೆಳೆದು ಮುದ್ದಿಟ್ಟಳು.

ಆ ಮನೆಯ ವಾತಾವರಣವೆಲ್ಲ ಆನಂದದಿಂದ ತುಂಬಿಹೋಯಿತು. ಹೀಗಿದ್ದರೂ ಕರ್ಣನ ಮನಸ್ಸು ಯಾರನ್ನೋ ಹುಡುಕುತ್ತಲಿತ್ತು. ಅವನು ಆತುರತೆಯಿಂದಲೇ ಕೇಳಿದ.

"ಅಮ್ಮ, ತಂದೆ ಎಲ್ಲಿ ? ಕಾಣುವುದಿಲ್ಲವಲ್ಲ."

"ರಥ ಶಾಲೆಗೆ ಹೋಗಿದ್ದಾರೆ."

"ನಾನು ಅವರನ್ನು ಭೇಟಿಯಾಗಿ ಬರುತ್ತೇನೆ."

"ಬರುತ್ತಾರೆ ಮಗೂ, ಇಷ್ಟರಲ್ಲಿಯೇ ಬಂದುಬಿಡುತ್ತಾರೆ."

"ಬೇಡ, ನಾನು ಅವರನ್ನು ಭೇಟಿಯಾಗಿ ಬರುವೆ."

ಕರ್ಣನು ಹೊರಡಲುದ್ಯುಕ್ತನಾದುದನ್ನು ಕಂಡ ದ್ಯುಮ ತಾನೇ ಬಂದು ರಥದ ಸಾರಥ್ಯವನ್ನು ವಹಿಸಿಕೊಂಡು ದಾರಿಯುದ್ದಕ್ಕೂ ಮಾತನಾಡುತ್ತ ಒಂದೊಂದೇ ಘಟನೆಗಳನ್ನು ವಿವರಿಸುತ್ತ ಸಾಗಿದ.

ನಾಲ್ಕು ದಿಕ್ಕಿನಲ್ಲಿಯೂ ಭದ್ರವಾದ ಗೋಡೆಗಳು. ಅದರ ಮಧ್ಯದಲ್ಲಿ ರಥಶಾಲೆಯ ಕಟ್ಟಡ. ಹೆಬ್ಬಾಗಿನಲ್ಲಿಯೇ ಕರ್ಣ ಹಾಗೂ ದ್ಯುಮ ಇಬ್ಬರೂ ರಥದಿಂದಿಳಿದು ಮುನ್ನಡೆದರು. ವಿಶಾಲವಾದ ಪ್ರಾಂಗಣದ ಒಂದು ಭಾಗದಲ್ಲಿ ಕುದುರೆಯ ಲಾಯವಿತ್ತು. ಇನ್ನೊಂದು ಭಾಗದಲ್ಲಿ ನಾನಾ ಜಾತಿಯ ಮರಗಳನ್ನು ಜೋಡಿಸಿಡಲಾಗಿತ್ತು. ಮಧ್ಯಭಾಗದಲ್ಲಿ ರಥ ನಿರ್ಮಿಸುವ ಕಾರ್ಯಾಗಾರವಿತ್ತು. ದಾರಿಯುದ್ದಕ್ಕೂ ಅರ್ಧಮರ್ಧ ತಯಾರಿಸಿದ ರಥದ ಬಿಡಿ ಭಾಗಗಳು ಕಾಣಬರುತ್ತಿದ್ದವು. ಒಂದು ಕಾಲದಲ್ಲಿ ಇಲ್ಲಿ ನೂರಾರು ಜನ ಕೆಲಸಮಾಡುತ್ತಿದ್ದರು. ಎಲ್ಲಿ ನೋಡಿದರಲ್ಲಿ ಕಲರವ ಗದ್ದಲವಿರುತ್ತಿತ್ತು. ನಾನಾಪ್ರಕಾರದ ಶಬ್ದಗಳು ಅಲ್ಲಿ ಕೇಳಬರುತ್ತಿದ್ದವು. ಆದರೆ ಇಂದು ಆ ಕಾರ್ಯಾಗಾರವು ಒಂದು ಆಶ್ರಮದಂತೆ ತೋರುತ್ತಿತ್ತು. ಪರಿಸರವೆಲ್ಲ ಶಾಂತಮಯವಾಗಿತ್ತು. ರಥಶಾಲೆಯ ಮುಂಭಾಗದಲ್ಲಿ ಒಂದೇ ಚಕ್ರದಿಂದ ನಿಲ್ಲಿಸಿದ ಸುವರ್ಣ ರಥವು ಅವರ ಗಮನವನ್ನು ಸೆಳೆಯಿತು. ಆ ರಥದ ಇನ್ನೊಂದು ಚಕ್ರವನ್ನು ವಯೋವೃದ್ಧರಾದವರೊಬ್ಬರು ಪರೀಕ್ಷಿಸುತ್ತಿದ್ದರು. ಅವರ ಮುಖದ ಮೇಲೆ ವೃದ್ಧಾಪ್ಯದ ನಿರಿಗೆಗಳು, ನೀಳವಾದ ಬಿಳಿಯ ಗಡ್ಡ ಇವು ಎದ್ದು ಕಾಣುತ್ತಿದ್ದವು. ಅವರಿಗೆ ತಮ್ಮ ಸಮೀಪಕ್ಕೆ ಬಂದವರ ಪರಿವೆಯೂ

ಇರಲಿಲ್ಲ. ತಾವು ಸಿದ್ಧಪಡಿಸಿದ ಆ ಚಕ್ರವನ್ನು ತಿರುಗಿಸುತ್ತ, ಅದರ ಪರೀಕ್ಷೆಯಲ್ಲಿಯೇ ಅವರು ತಲ್ಲೀನರಾಗಿದ್ದರು.

"ತಂದೇ."

"ಹುಂ" ಎಂದು ಆ ವೃದ್ಧರು ತಮ್ಮ ದೃಷ್ಟಿಯನ್ನು ಮೇಲೆತ್ತಿದಾಗ ಕರ್ಣನನ್ನು ಕಂಡು ತುಂಬ ಹರ್ಷಿತರಾದರು. ವಂದನೆಗಳನ್ನು ಸಲ್ಲಿಸಿ ಮೇಲೆ ಏಳುತ್ತಿದ್ದ ಕರ್ಣನ ಬೆನ್ನಮೇಲೆ ಕೈಯಾಡಿಸುತ್ತ,

"ಮಗೂ ಯಾವಾಗ ಬಂದೆ ?"

"ಸ್ವಲ್ಪ ಹೊತ್ತಾಯಿತು."

"ಎಲ್ಲ ಕ್ಷೇಮವೇ ?"

"ತಮ್ಮ ಅನುಗ್ರಹದಿಂದ ಎಲ್ಲವೂ ಕ್ಷೇಮ."

"ಒಬ್ಬನೇ ಬಂದಿರುವೆಯಾ ?"

ಅಧಿರಥನು ಸೇವಕನನ್ನು ಕೂಗಿ "ಚಕ್ರವನ್ನು ರಥಕ್ಕೆ ಜೋಡಿಸು."

ರಥಕ್ಕೆ ಗಾಲಿಯನ್ನು ಜೋಡಿಸಲಾಯಿತು. ಅಧಿರಥನೊಂದಿಗೆ ಕರ್ಣನೂ ಆ ರಥವನ್ನು ನೋಡುತ್ತಲಿದ್ದ. ಆ ರಥವು ದೃಷ್ಟಿ ತಗಲುವಷ್ಟು ಸುಂದರವಾಗಿತ್ತು.

"ಈ ರಥ ಯಾರದು ?" ಎಂದು ಕರ್ಣನು ವಿಚಾರಿಸಿದ.

"ಮಗೂ, ದುರ್ಯೋಧನ ಮಹಾರಾಜರು ರಾಜಸೂಯ ಯಾಗಕ್ಕೆ ಹೋಗುವವರಿದ್ದಾರೆ. ಅವರಿಗಾಗಿಯೇ ಈ ರಥವನ್ನು ಸಿದ್ಧಪಡಿಸಲಾಗುತ್ತಿದೆ.'

"ತುಂಬ ಚೆನ್ನಾಗಿದೆ."

"ಮನಸ್ಸಿಗೊಪ್ಪುವ ರೀತಿಯಲ್ಲಿ ಕೆಲಸ ಮಾಡಲು ಅವಕಾಶವಿರುವುದರಿಂದಲೇ ಇಂಥ ಒಳ್ಳೆಯ ಕೆಲಸಗಳಾಗುತ್ತವೆ."

"ಈ ರಥದ ಕೆಲಸವೇನೂ ಹೆಚ್ಚಿಗೆ ಉಳಿದಂತಿಲ್ಲ."

"ಹಾಗೇನಾದರೂ ಇದ್ದರೆ ಅದು ಕಾಣಬರುತ್ತಿತ್ತು. ಈ ಮೊದಲೇ ಸಿದ್ಧಪಡಿಸಿದ ಅನೇಕ ರಥಗಳಿವೆ. ಅವುಗಳ ಪರೀಕ್ಷೆಯ ಕೆಲಸ ಮಾತ್ರ ಈಗ ಆಗಬೇಕಾಗಿದೆ. ಹಳೆಯ ಕೆಲಸಗಾರರು ಇರುವುದರಿಂದ ಅವರಿಗಾಗಿಯೇ ವಿದುರ ಮಹಾರಾಜರು ಈ ರಥಶಾಲೆಯನ್ನು ನಡೆಸಿಕೊಂಡು ಬರುತ್ತಲಿದ್ದಾರೆ. ಪಾಂಡವರಿಂದ ನಿರ್ಮಿಸಲಾದ ನೂತನ ರಾಜಧಾನಿಗೆ ಹಸ್ತಿನಾವತಿಯ ಅನೇಕ

ಕುಶಲ ಕರ್ಮಿಗಳು ಹೋಗಿದ್ದಾರೆ. ಈಗ ಅವರಿಗೆಲ್ಲ ಒಳ್ಳೆಯ ದಿನಗಳು ಬಂದಿವೆ."

"ಇಂದ್ರಪ್ರಸ್ಥವು ಅಷ್ಟೊಂದು ಸುಂದರವಾಗಿದೆಯೇ ?"

"ಆ ರಾಜಧಾನಿಯ ಮುಂದೆ ಈ ಹಸ್ತಿನಾವತಿ ನಗರ ಏನೇನೂ ಅಲ್ಲ. ಅಲ್ಲಿಯ ರಥಶಾಲೆಯನ್ನು ಸಿದ್ಧಗೊಳಿಸಿ ಬರಲು ನಾನೇ ಅಲ್ಲಿಗೆ ಹೋಗಿದ್ದೆ, ಕರ್ಣ, ಪಾಂಡವರು ನಿರ್ಮಿಸಿದ ಮಯಶಾಲೆಯನ್ನು ನೋಡಿದರೆ ನೀನು ಖಂಡಿತವಾಗಿಯೂ ಚಕಿತನಾಗುವೆ. ದೇವತೆಗಳೂ ಸಹ ಅಸೂಯೆ ಪಡುವಂತೆ ಅದನ್ನು ನಿರ್ಮಿಸಲಾಗಿದೆ. ಇನ್ನೂ ನಮ್ಮ ಗಜಶಾಲೆಯು ಆ ಕೆಲಸದಲ್ಲಿಯೇ ತೊಡಗಿಕೊಂಡಿದಿದೆ."

"ಗಜಶಾಲೆ !"

"ಅದಿಲ್ಲದೆ ಹೋದರೆ ಅಂಥ ಭವ್ಯವಾದ ಕಟ್ಟಡ ಹಾಗೂ ಅದರ ಗೋಪುರಗಳು, ರಾಜಗೃಹಗಳ ನಿರ್ಮಾಣ, ಇವುಗಳಿಗೆಲ್ಲ ಮರಗಳನ್ನಾರು ಪೂರೈಸುವರು. ದೇವದಾರು, ತಾಲವೃಕ್ಷ, ಸಾಗವಾನಿ ಮೊದಲಾದ ವೃಕ್ಷಗಳನ್ನು ಕಡಿದು ಅವುಗಳನ್ನೆಲ್ಲಿ ಮನುಷ್ಯರಿಂದ ಹೊತ್ತುಕೊಂಡು ಬರಲು ಸಾಧ್ಯವೇ ? ಆದುದರಿಂದ ನಮ್ಮ ಗಜಶಾಲೆಯೊಂದಿಗೆ ಚತುರಂಗ ಸೇನಾಬಲವೆಲ್ಲ ಅಲ್ಲಿ ಕೆಲಸ ಮಾಡುತ್ತಲಿದೆ. ಕರ್ಣ ಆಕಾಶದಲ್ಲಿ ಸೂರ್ಯ ಚಂದ್ರರು ಶೋಭಿಸುವಂತೆ ಈ ಭೂಮಿಯ ಮೇಲೆ ಹಸ್ತಿನಾವತಿ ಹಾಗೂ ಇಂದ್ರಪ್ರಸ್ಥ ನಗರಗಳೂ ಶೋಭಿಸುತ್ತವೆ."

ರಥಕ್ಕೆ ಚಕ್ರವನ್ನು ಜೋಡಿಸಿಡಲಾಯಿತು. ಅನಂತರ ಶ್ರೇಷ್ಠವಾದ ಕುದುರೆಗಳನ್ನು ಆ ರಥಕ್ಕೆ ಹೂಡಲಾಯಿತು.

"ಕರ್ಣ ನಡೆ. ಈ ರಥದ ಪರೀಕ್ಷೆಯನ್ನು ಮುಗಿಸಿದ ನಂತರವೇ ಮನೆಗೆ ಹೋಗುವ."

ಕರ್ಣನು ರಥಾರೂಢನಾದ, ಅಧಿರಥನು ಕುದುರೆಗಳ ಕಡಿವಾಣಗಳನ್ನು ಕೈಗೆತ್ತಿಕೊಂಡ ಮಂದಗತಿಯಿಂದ ರಥ ಸಾಗಿತು. ಅದು ರಥಶಾಲೆಯಿಂದ ಹೊರಬಂದಿತು. ಅದರ ಹಿಂದೆ ರಥದ ಸೇವಕರೊಂದಿಗೆ ದ್ಯುಮನು ಹಿಂದೆಯೇ ಬರುತ್ತಲಿದ್ದ. ಸ್ವಲ್ಪ ದೂರ ರಥವು ಮುಂದೆ ಬಂದ ನಂತರ ಅಧಿರಥನು,

"ಕರ್ಣ, ಇನ್ನು ನೀನು ಇಳಿದುಬಿಡು."

"ನಾನೂ ಬರುವೆ."

"ಮಗೂ, ಇದು ಮಹಾರಾಜರ ರಥ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಜವಾಬ್ದಾರಿಯೂ ಇದೆ. ಕೌರವ ಸಾಮ್ರಾಜ್ಯದ ಯುವರಾಜರ ರಥವು ಎಲ್ಲ ರೀತಿಯಿಂದಲೂ ಪರಿಪೂರ್ಣವಾಗಿರಬೇಕಾದುದು ಅತ್ಯಾವಶ್ಯಕ. ಈ ಕಾರಣದಿಂದ ಈ ರಥದ ಪರೀಕ್ಷೆಗಳಾಗಬೇಕಾಗುತ್ತದೆ."

"ಹಾಗೆಂದರೆ ?"

"ರಥವು ಸಮತೂಕದಲ್ಲಿಯೇ ಓಡಬೇಕು. ಅದನ್ನು ಪರೀಕ್ಷಿಸಬೇಕಾದಲ್ಲಿ ರಥದ ಓಟವು ಆರಂಭವಾಗುವ ಮುನ್ನ ರಥ ಚಕ್ರಗಳ ಗುಣಿಗಳನ್ನು ಬಿಚ್ಚಬೇಕಾಗುವುದು. ಎರಡೂ ಚಕ್ರಗಳು ಸಮಪ್ರಮಾಣದಲ್ಲಿದ್ದರೆ ಮಾತ್ರ ರಥವು ಸರಿಯಾಗಿ ಓಡುವುದು. ಚಕ್ರಗಳು ಕಳಚದಂತೆ ಓಡಿಸುವದೇ ಇದರ ಮೂಲ ಉದ್ದೇಶವಾಗಿರುವುವದು. ಆದುದರಿಂದಲೇ ಹೇಳುವೆ; ನೀನು ಇಳಿದು ಬಿಡು."

ಕರ್ಣನು ರಥದಿಂದ ಇಳಿದೊಡನೆ ಅಧಿರಥನು ಒಂದು ಸಲ ರಥಕ್ಕೆ ನಮಸ್ಕಾರ ಮಾಡಿ ಚಾಬೂಕವನ್ನೆತ್ತಿದ. ರಥವು ನಾಗಾಲೋಟದಿಂದ ಓಡಲಾರಂಭಿಸಿತು. ಸಮಪಾತಾಳದಿಂದ ಕೂಡಿದ ರಾಜಬೀದಿಯು ಬಂದೊಡನೆ ರಥದ ಚಕ್ರಗಳ ಎರಡೂ ಮೊಳೆಗಳನ್ನು ಕಳಚಿಬಿಡುವಂತೆ ಸೇವಕರಿಗೆ ಸಂಜ್ಞೆ ಮಾಡಿದ. ಹಾಗೆಯೇ ಕುದುರೆಗಳ ಓಟವೂ ಹೆಚ್ಚಾಗುವಂತೆ ನೋಡಿಕೊಂಡ. ಅರ್ಧ ಗಳಿಗೆಯಲ್ಲಿ ರಥವು ಮರಳಿ ಬಂದಿತು. ಕುದುರೆಗಳ ಮೈ ಬೆವರಿನಿಂದ ತಟಗುಟ್ಟುತ್ತಲಿದ್ದವು. ಅಧಿರಥನಿಗೆ ತುಂಬ ಸಮಾಧಾನವಾಗಿತ್ತು.

"ರಥವು ಈಗ ಸಂಪೂರ್ಣ ಸಿದ್ಧವಾಯಿತು"

"ಹೀಗೆ ರಥದ ಚಕ್ರದ ಮೊಳೆಗಳನ್ನು ಕಳಚಿ ಬೇಕಾದವರು ಓಡಿಸಬಹುದಲ್ಲ ?"

ಆ ಮಾತಿನಿಂದ ಅಧಿರಥನು ನಕ್ಕು ಬಿಟ್ಟ.

"ಎಲ್ಲರಿಗೂ ಅದು ಸಾಧ್ಯವಾಗಲಾರದು. ಯಾರಿಗೆ ರಥ ಪರೀಕ್ಷೆಯಲ್ಲಿ ಸಂಪೂರ್ಣವಾದ ಪರಿಣತಿ ಇದೆಯೋ ಅಂಥವರಿಗೆ ಮಾತ್ರ ಈ ಕೆಲಸ ಸಾಧ್ಯ. ಕರ್ಣಾ, ಕುಣಿಗಳನ್ನು ಬಿಚ್ಚಿ ರಥವನ್ನೋಡಿಸುವದು ಅವರ ಮೂಲ ಗುಣ

ಧರ್ಮ ಎಂದು ಕರೆಸಿಕೊಳ್ಳುವುದಿಲ್ಲ. ಅದು ಕೇವಲ ರಥ ಪರೀಕ್ಷೆಗಾಗಿ ಬಳಸುವ ಒಂದು ತಂತ್ರ, ಈ ತಂತ್ರವನ್ನು ನಾನು ಮಾತ್ರ ಬಳಸುವೆ."

ಸೇವಕರು ರಥವನ್ನು ತೆಗೆದುಕೊಂಡು ಹೋದರು. ಅನಂತರ ಅಧಿರಥನು ಕರ್ಣ ಹಾಗೂ ದ್ಯುಮನೊಂದಿಗೆ ಸ್ವಗೃಹದತ್ತ ನಡೆದ.

## 14

ನಸುಕಿನ ಜಾವದಲ್ಲಿ ಕರ್ಣನು ರಾಧಾತಾಯಿಯೊಂದಿಗೆ ಮಾತನಾಡುತ್ತ ಕುಳಿತುಕೊಂಡಿದ್ದ. ಆಗ ದ್ಯುಮನು ಅವಸರದಿಂದ ಅಲ್ಲಿಗೆ ಬಂದು ನುಡಿದ:

"ಅಣ್ಣಾ ದುರ್ಯೋಧನ ಮಹಾರಾಜರು ಬಂದಿದ್ದಾರೆ."

ಕರ್ಣನು ಏಳುವ ಮೊದಲೇ ದುರ್ಯೋಧನನು ಒಳಬಂದು ರಾಧಾತಾಯಿಗೆ ನಮಸ್ಕಾರ ಹೇಳಿದ. ಅವಳು ತುಂಬ ಸಂಕೋಚದಿಂದ,

"ದೀರ್ಘಾಯುಷಿಗಳಾಗಿರಿ" ಎಂದಳು.

"ಯುವರಾಜ."

ಕರ್ಣನತ್ತ ನೋಡಿದ ದುರ್ಯೋಧನನು,

"ಖಂಡಿತವಾಗಿಯೂ ನಾನು ನಿನ್ನೊಂದಿಗೆ ಮಾತನಾಡುವುದಿಲ್ಲ."

ಕರ್ಣನು ನಕ್ಕು ಶಾಂತರೀತಿಯಿಂದ ಕೇಳಿದ.

"ಈ ಮಾತನ್ನು ಹೇಳುವುದಕ್ಕಾಗಿಯೇ ಯುವರಾಜರಾದ ದುರ್ಯೋಧನ ಮಹಾರಾಜರು ಈ ಸೇವಕನ ಮನೆಯ ಅಂತಃಪುರದವರೆಗೂ ಧಾವಿಸಿ ಬಂದಂತೆ ತೋರುತ್ತದೆ."

ಒಂದು ಸಲ ನೆಟ್ಟ ದೃಷ್ಟಿಯಿಂದ ಕರ್ಣನನ್ನು ನೋಡಿ ನಕ್ಕ ದುರ್ಯೋಧನನು ಆತನನ್ನು ಅಪ್ಪಿಕೊಳ್ಳುತ್ತ ನುಡಿದ;

"ಮಿತ್ರಾ! ನಿನ್ನೆಯೇ ಬಂದಿದ್ದರೂ ನನಗೆ ಭೇಟಿಯಾಗಿಲ್ಲ."

"ಹಾಗೇನಿಲ್ಲ. ಬಹುದಿನಗಳ ನಂತರ ಬಂದಿರುವೆನಲ್ಲ ?"

"ಇರಲಿ ನಡೆ. ನಿನ್ನನ್ನು ಅರಮನೆಗೆ ಕರೆದುಕೊಂಡು ಹೋಗಲು ಬಂದಿದ್ದೇನೆ."

"ತಮ್ಮ ಅಪ್ಪಣೆ."

ಕರ್ಣನು ಸಿದ್ಧವಾದ ನಂತರ ಇಬ್ಬರೂ ರಾಜಗೃಹದತ್ತ ಸಾಗಿದರು.

ಬಹು ಶುಭ್ರವಾದ ಕಲ್ಲುಗಳಿಂದ ರಚಿತವಾದ ಭವ್ಯ ಗೃಹದ ಮುಂದೆ ರಥವು ಬಂದು ನಿಂತಿತು. ಸ್ಪಟಿಕದಂತಿರುವ ಮೆಟ್ಟಿಲುಗಳನ್ನೇರುತ್ತಿದ್ದ ದುರ್ಯೋಧನನಿಗೆ ಸೇವಕರು ತಲೆಬಾಗಿ ವಂದಿಸುತ್ತಲಿದ್ದರು ನಾನಾ ರೀತಿಯಲ್ಲಿ ಅಲಂಕೃತವಾದ ಅನೇಕ ಪ್ರಾಕಾರಗಳನ್ನು ದಾಟುತ್ತ ಅವರು ಮುನ್ನಡೆದಿದ್ದರು. ದಾರಿಯಲ್ಲಿ ಬಾಗಿಲು ಕಾಯುತ್ತಿದ್ದ ಸೇವಕರು ಗಂಭೀರವಾಗಿ ಹಿಂದೆ ಸರಿದು ತಮ್ಮ ಗೌರವವನ್ನು ಸೂಚಿಸುತ್ತಿದ್ದರು.

ಅತ್ಯುನ್ನತವಾದ ಸ್ಥಳದಲ್ಲಿ ಅನೇಕ ಕುಸುರಿನ ಕೆಲಸ ಮಾಡಿದ ಸುವರ್ಣಮಯವಾದ ಆಸನದಲ್ಲಿ ಧೃತರಾಷ್ಟ್ರ ಮಹಾರಾಜರು ಕುಳಿತಿದ್ದರು. ತಲೆಯ ಮೇಲೆ ರತ್ನ ಖಚಿತವಾದ ಕಿರೀಟ ಹಾಗೂ ರಾಜಭೂಷಣಗಳಿಂದ ಕೂಡಿದ ವಸ್ತ್ರಾಭರಣಗಳನ್ನು ಧರಿಸಿದುದರಿಂದ ಮುಖವು ವಿಲಕ್ಷಣವಾದ ಕಾಂತಿಯಿಂದ ಎದ್ದು ಕಾಣುತ್ತಿತ್ತು. ಕಣ್ಣುಗಳು ಮುಚ್ಚಿದಂತೆ ತೋರುತ್ತಿದ್ದವು. ಮಹಾರಾಜರ ಅಂಧತ್ವದ ಪರಿಚಯವಿದ್ದರೂ ಯಾವ ಕ್ಷಣದಲ್ಲಿ ಆ ಕಣ್ಣುಗಳು ಕಾಣಿಸಿಕೊಳ್ಳುವಂತಾಗಬಹುದೇನೋ ಎಂಬಂತೆ ತೋರಿಬರುತ್ತಿದ್ದವು

ಧೃತರಾಷ್ಟ್ರ ಮಹಾರಾಜರ ಹಿಂದೆ ನಿಂತ ದಾಸಿಯರು ನಿಧಾನವಾಗಿ ಅವರಿಗೆ ಚಾಮರ ಹಾಕುತ್ತಲಿದ್ದರು. ಮಹಾರಾಜರ ಬಲಭಾಗದಲ್ಲಿರುವ ಬೆಳ್ಳಿಯ ಆಸನದಲ್ಲಿ ವಿದುರನು ಕುಳಿತುಕೊಂಡಿದ್ದನು. ಗುಂಡಾದ ಮುಖ, ಶಾಂತವಾದ ನೋಟ, ಹಣೆಯ ಮೇಲೆ ಗಂಧ, ತಿಲಕಗಳನ್ನಿಟ್ಟುಕೊಂಡಿದ್ದ ವಿದುರನ ಗಮನವು ಆ ರಾಜಗೃಹವನ್ನು ಪ್ರವೇಶಿಸುತ್ತಿದ್ದ ದುರ್ಯೋಧನನತ್ತ ಹರಿಯಿತು. ಧೃತರಾಷ್ಟ್ರನ ಎಡಭಾಗದಲ್ಲಿದ್ದ ಭೀಷ್ಮರನ್ನು ಆತ ನೋಡಿದ. ಹಿಮಾಲಯದಂತೆ ಅವರ ರೂಪವು ಕಾಣಬರುತ್ತಿತ್ತು. ತಲೆಯಿಂದ ಇಳಿದಿದ್ದ ಶುಭ್ರವಾದ ಜಡೆ. ಹೊಕ್ಕಳನ್ನು ಸ್ಪರ್ಶಮಾಡುತ್ತಲಿದ್ದ ನೀಳವಾದ ಬಿಳಿಯ ಗಡ್ಡ, ತುಂಬ ಬೆಳ್ಳಗಾಗಿ ತೋರುವ ಮುಖದಲ್ಲಿ ರತ್ನದಂತೆ ಕಾಣುವ ಕಣ್ಣುಗಳು, ಭವ್ಯತೆಯೇ ಈ ರೂಪದಲ್ಲಿ ಬಂದಿಳಿದಿದೆಯೋ ? ಎಂಬಂತೆ ತೋರಿಬರುತ್ತಿದ್ದವು. ವಯೋವೃದ್ಧರೂ, ತಪೋವೃದ್ಧರೂ ಆದ ಭೀಷ್ಮರು ಕರ್ಣನನ್ನು ನೋಡಿ,

"ರಾಜನ್, ಯುವರಾಜ ದುರ್ಯೋಧನನ ಆಗಮನವಾಗುತ್ತಿದೆ."
ಕರ್ಣನೊಂದಿಗೆ ದುರ್ಯೋಧನನು ಮುಂದೆ ಬಂದು ವಂದಿಸುತ್ತ,

"ತಂದೆಯೇ ದುರ್ಯೋಧನನು ನಮಸ್ಕರಿಸುತ್ತಲಿದ್ದಾನೆ" ಎಂದ.

"ಕಲ್ಯಾಣವಾಗಲಿ."

ಅದೇ ರೀತಿಯಾಗಿ ಕರ್ಣನು ನಮಸ್ಕರಿಸುತ್ತ,

"ಸೂತಪುತ್ರನಾದ ರಾಧೇಯ ಕರ್ಣನು ತಮ್ಮನ್ನು ವಂದಿಸುತ್ತಿದ್ದಾನೆ."

ಧೃತರಾಷ್ಟ್ರನ ಮುಖದ ಮೇಲೆ ಆನಂದದ ಚಿಹ್ನೆಯು ಕಾಣಬಂದಿತು. ಆತನು ಶಾಂತಸ್ವರದಲ್ಲಿ

"ಅಂಗರಾಜಾ, ಯಾವಾಗ ಬಂದಿರುವೆ ?"

"ನಿನ್ನೆ ಸಾಯಂಕಾಲ,"

ಧೃತರಾಷ್ಟ್ರನು ಏನೋ ಹೇಳಬೇಕೆಂದುಕೊಂಡಿದ್ದ. ಅಷ್ಟರಲ್ಲಿ ಹಾವುಗೆಗಳ ಕಾಲಸಪ್ಪಳವು ಕೇಳಬರತೊಡಗಿತು. ದ್ರೋಣಾಚಾರ್ಯರು ರಾಜಸಭೆಯನ್ನು ಪ್ರವೇಶಮಾಡುತ್ತಿದ್ದರು ಅವರ ದೇಹವು ತುಂಬ ಎತ್ತರ. ಅವರ ತಪಃಪ್ರಭಾವ ಹಾಗೂ ತೇಜಸ್ಸು ಅವರ ಅಂಗಾಂಗಗಳಲ್ಲಿ ಎದ್ದು ಕಾಣಿಸುತ್ತಿತ್ತು. ಶುಭ್ರವಾದ ಜಡೆಯು ಅವರಿಗೆ ಒಂದು ಅಲಂಕಾರವಾಗಿ ತೋರುತ್ತಿತ್ತು. ನೀಳವಾದ ಗಡ್ಡಗಳು ಎದೆಯಿಂದ ಕೆಳಗಿಳಿದಿದ್ದವು. ಆಚಾರ್ಯರು ಸಮೀಪಿಸುತ್ತಿರುವುದನ್ನು ಗಮನಿಸಿದ ವಿದುರನು ಅದನ್ನು ಧೃತರಾಷ್ಟ್ರನಲ್ಲಿ ಅರಿಕೆಮಾಡಿಕೊಂಡನು. ಆಗ ಮಹಾರಾಜನು ಪೂಜ್ಯರಿಗೆ ವ್ಯಾಘ್ರಾಜಿನವನ್ನಿರಿಯುವಂತೆ ಆಜ್ಞಾಪಿಸಿದನು.

ಆಚಾರ್ಯರು ಆಸನಾರೂಢರಾದ ಮೇಲೆ ದುರ್ಯೋಧನ ಹಾಗೂ ಕರ್ಣ ಇಬ್ಬರೂ ಅವರಿಗೆ ವಂದನೆಗಳನ್ನು ಸಲ್ಲಿಸಿದರು. ಅವರು ತಮ್ಮ ಬಾಹುಗಳನ್ನು ಮೇಲಕ್ಕೆತ್ತಿ ಆಶೀರ್ವದಿಸುತ್ತ

"ರಾಜನ್, ಒಂದು ನೂರಾ ಒಂದು ಆಶ್ರಮ ಸ್ಥಳಗಳನ್ನು ನೋಡಿ ಬಂದಿರುವೆ. ಆ ಸ್ಥಳಗಳನ್ನು ಭೀಷ್ಮ ಮಹಾರಾಜರೂ ಒಂದು ಸಲ ನೋಡಿ ಒಪ್ಪಿಗೆಯನ್ನಿತ್ತಲ್ಲಿ ಮುಂದೆ ಆಶ್ರಮದ ಕೆಲಸಗಳನ್ನು ಆರಂಭಿಸಲು ಬರುವುದು."

"ನಾನು ನೋಡಬೇಕಾದುದೇನೂ ಇಲ್ಲ. ತಾವು ಆರಿಸಿದ ಸ್ಥಳಗಳು ಆಶ್ರಮಕ್ಕೆ ಯೋಗ್ಯವಾದವುಗಳೇ ಆಗಿರುತ್ತವೆ."

ಭೀಷ್ಮರ ಮಾತುಗಳಿಗೆ ಧೃತರಾಷ್ಟ್ರನೂ ತನ್ನ ಒಪ್ಪಿಗೆಯನ್ನಿತ್ತ.

ಆಗ ದ್ರೋಣಾಚಾರ್ಯರು ತುಂಬ ಸಂತೋಷಚಿತ್ತರಾಗಿ ನುಡಿದರು :

"ರಾಜನ್, ಕೆಲವೇ ವರ್ಷಗಳಲ್ಲಿ ಈ ಮಹಾನಗರವು ಬಹು ದೊಡ್ಡ ಜ್ಞಾನಪೀಠವಾಗಬಹುದು. ಅದರ ಕೀರ್ತಿಯು ತ್ರಿಲೋಕದಲ್ಲಿಯೂ ವ್ಯಾಪಿಸುವುದು. ಜ್ಞಾನಕ್ಕೆ ಸಮನಾದ ಪರಾಕ್ರಮವು ಬೇರೊಂದಿಲ್ಲ. ರಾಜಸೂಯ ಯಾಗದಿಂದ ಮರಳಿ ಬಂದೊಡನೆಯೇ ನಾನು ಈ ಕಾರ್ಯವನ್ನು ಪ್ರಾರಂಭಿಸಬೇಕೆಂದಿದ್ದೇನೆ."

"ರಾಜಸೂಯ ಯಾಗಕ್ಕೆ ಇನ್ನೂ ಕಾಲಾವಕಾಶವಿದೆಯಲ್ಲವೆ ?"

"ಸಮಯವೆಲ್ಲಿದೆ ? ಯುವರಾಜ ನಕುಲನು ಆಮಂತ್ರಣವನ್ನೀಯಲು ಬಂದಾಗ ಪೂಜ್ಯ ಭೀಷ್ಮರನ್ನೂ ನನ್ನನ್ನೂ ವಿದುರ ಮಹಾರಾಜರನ್ನೂ ಮೊದಲು ಬರುವ ಆವಶ್ಯಕತೆ ಇದೆ ಎಂದು ಮೇಲಿಂದ ಮೇಲೆ ಆಗ್ರಹಪೂರ್ವಕ ಒತ್ತಿ ಹೇಳಿದ್ದಾನೆ. ಆದುದರಿಂದ ಕೊನೆಯ ಗಳಿಗೆಯಲ್ಲಿ ಹೋದರೆ ಪ್ರಯೋಜನವೇನು ?"

ದ್ರೋಣಾಚಾರ್ಯರ ಧ್ವನಿಯು ಸ್ವಲ್ಪ ಎತ್ತರವಾದುದನ್ನು ಗಮನಿಸಿದ ಧೃತರಾಷ್ಟ್ರನು.

"ಹೌದು. ನೀವುಗಳೆಲ್ಲಾ ಹೋಗುವುದೇ ವಿಹಿತ. ಹೊರಡುವ ಮುಹೂರ್ತವನ್ನು ನೋಡಿರುವಿರಾ ?" ಎಂದು ಕೇಳಿದ.

"ನಾಳೆಯೇ ಹೊರಡಬೇಕಾಗುವುದು."

"ತಮ್ಮ ಅಪೇಕ್ಷೆಯಿದ್ದಂತಾಗಲಿ'' ಧೃತರಾಷ್ಟ್ರನು ತನ್ನ ಸಮ್ಮತಿಯನ್ನು ವ್ಯಕ್ತಪಡಿಸಿದನು.

ದುರ್ಯೋಧನನು ಕರ್ಣನನ್ನು ನೋಡಿ ಸೂಕ್ಷ್ಮವಾಗಿ ಸಂಜ್ಞೆ ಮಾಡಿದ. ಆಗ ಅವರಿಬ್ಬರೂ ಎಲ್ಲ ಹಿರಿಯರಿಗೆ ವಂದಿಸಿ ಆ ಸ್ಥಳದಿಂದ ಹೊರಟುಬಿಟ್ಟರು.

ರಾಜಗೃಹವನ್ನು ಪ್ರವೇಶಿಸುತ್ತಿದ್ದಂತೆ ದುರ್ಯೋಧನನ ಪತ್ನಿಯಾದ ಭಾನುಮತಿಯು ಕರ್ಣನಿಗೆ

"ಬನ್ನಿ, ಬಾವನವರೇ ಯಾವಾಗ ದಯಮಾಡಿಸಿದಿರಿ" ಎಂದು ಆದರದ ಸ್ವಾಗತವನ್ನು ನೀಡಿದಳು.

"ನಿನ್ನೆ ಬಂದಿರುವೆ. ನನ್ನ ಮಿತ್ರನ ಅಪಹಾರವಾಗಿದೆ. ಆದುದರಿಂದ ಬರಬೇಕಾಯಿತು."

"ಅಪಹಾರವಾಗಿದೆಯೋ ?"

"ಅಷ್ಟಲ್ಲದೆ ಬೇರೇನು ? ಸ್ವಯಂವರವು ಮುಗಿದ ನಂತರ ತನ್ನ ನೆನಪನ್ನೂ ಸಹ ನಿಮ್ಮ ಪತಿರಾಜರು ಮರೆತುಬಿಟ್ಟಿದ್ದಾರೆ."

ಕರ್ಣನ ಮಾತುಗಳನ್ನು ಕೇಳಿದ ಭಾನುಮತಿಯು ಆತನ ಕ್ಷೇಮ ಸಮಾಚಾರಗಳನ್ನು ವಿಚಾರಿಸಿಕೊಂಡು ನಂತರ ಅಂತಃಪುರಕ್ಕೆ ಹೋರಟು ಹೋದಳು.

ಕೇವಲ ಕರ್ಣ ದುರ್ಯೋಧನರಿಬ್ಬರೇ ಉಳಿದುಕೊಂಡರು, ದುರ್ಯೋಧನನ ಮುಖದಲ್ಲಿ ಚಂಚಲತೆ ಎದ್ದು ತೋರುತ್ತಿತ್ತು. ಅದನ್ನು ಗಮನಿಸಿದ ಕರ್ಣನು,

"ಮಿತ್ರಾ, ಎಲ್ಲವೂ ಕ್ಷೇಮವಷ್ಟೆ ?"

ದುರ್ಯೋಧನನು ಬಹು ಖಿನ್ನ ಮನಸ್ಕನಾಗಿನಕ್ಕು ಹೇಳಿದ. "ರಾಧೇಯಾ ಕ್ಷೇಮ ಎಂದು ಹೇಳುವ ಬದಲು ಇನ್ನಾವುದೂ ಉಳಿದಿಲ್ಲ. ತಂದೆ ಎಷ್ಟು ಆದರದಿಂದ ಮಾತನಾಡಿಸಿದರು ಎಂಬುದನ್ನು ನೀನು ನೋಡಿದೆಯಲ್ಲವೇ ? ಎಂದೋ ಒಂದು ದಿನ ಆಕಸ್ಮಿಕ ಭೇಟಿಯಾದಾಗಲೂ ಸಹ ಅದು ಹೀಗೆಯೇ ಘಟಿಸುತ್ತಿದೆ."

"ಆಕಸ್ಮಿಕವಾಗಿ ?"

"ಹೌದು ಆಕಸ್ಮಿಕವಾಗಿಯೇ. ಯಾಕೆಂದರೆ ಈ ನಡುವೆ ತಂದೆಯವರಿಗೆ ನನ್ನ ವಿಷಯದಲ್ಲಿ ತಪ್ಪು ಭಾವನೆಯುಂಟಾಗಿದೆ."

"ತಪ್ಪು ಭಾವನೆಯೇ ? ಯಾತಕ್ಕಾಗಿ ?"

"ಲಾಕ್ಷಾಗಾರದಲ್ಲಿ ಪಾಂಡವರು ಮೃತರಾಗುವಂತೆ ಮಾಡುವುದರಲ್ಲಿ ನನ್ನ ಕೈವಾಡವಿತ್ತು ಎಂದು ಯಾರೋ ಅವರಿಗೆ ಮನದಟ್ಟಾಗುವಂತೆ ಹೇಳಿದ್ದಾರೆ. ಆದರೆ ನಡೆದುದೇ ಬೇರೆ. ಪಾಂಡವರ ಸುದೈವದಿಂದಲೋ ಅಥವಾ ನನ್ನ ದುರ್ದೈವದಿಂದಲೋ ನನ್ನ ಆ ಸಂಚು ವಿಫಲವಾಯಿತು. ಮಹಾತ್ಮಾ ವಿದುರ ಹಾಗೂ ದ್ರೋಣಾಚಾರ್ಯರಿಗಾದ ಹರ್ಷವನ್ನು ನಾನು ಹೇಗೆ ವರ್ಣಿಸಲಿ ! ಅದನ್ನು ನೋಡಲು ನೀನು ಇಲ್ಲಿರಬೇಕಾಗಿತ್ತು."

"ಪಾಂಡವರು ಬದುಕಿದ್ದು ಒಳ್ಳೆಯದಾಯಿತು. ಈ ಮಾತಿನಿಂದ ನನಗೂ ಸಂತೋಷವಾಗಿದೆ."

"ಸಂತೋಷ ! ನೀನು ನನ್ನ ಮಿತ್ರನಲ್ಲವೆ ?"

"ಯುವರಾಜ, ದುರ್ದೈವದಿಂದ ಪಾಂಡವರು ಲಾಕ್ಷಾಗಾರದಲ್ಲಿ ಭಸ್ಮವಾಗಿ ಹೋಗಿದ್ದರೆ, ನಮ್ಮ ಪ್ರಜೆಗಳು ನಿದ್ರಾವಸ್ಥೆಯಲ್ಲಿಯೂ ಭಯಭೀತರಾಗಿರುತ್ತಿದ್ದರು. ಶತ್ರುಗಳನ್ನು ಪರಾಕ್ರಮದಿಂದ ಗೆಲ್ಲಬೇಕೇ ಹೊರತು ಇಂಥ ಕುಟಿಲ ತಂತ್ರಗಳಿಂದಲ್ಲ."

"ಹೋಗಲಿ ಬಿಡು ; ಈಗ ನಿನ್ನಲ್ಲಿ ನಾನು ಅನೇಕ ವಿಚಾರಗಳನ್ನು ಮಾತನಾಡಬೇಕಾಗಿದೆ. ಪಾಂಡವರು ಪಾರಾದದ್ದು ಅವರ ಸುದೈವದಿಂದಲ್ಲ. ಅದು ನಮ್ಮ ಗೃಹಛಿದ್ರಗಳ ಕಾರಣದಿಂದ. ಪಾಂಡವರು ಸುರಕ್ಷಿತರಾಗಿದ್ದಾರೆ ಎಂದು ತಿಳಿದು ಬಂದೊಡನೆ ನಮಗರಿವಿಲ್ಲದಂತೆ ಗುಪ್ತರೀತಿಯಲ್ಲಿ ಅನೇಕ ಕೆಲಸ ಕಾರ್ಯಗಳಾಗಿವೆ. ತಂದೆಯ ಭೇಟಿಗೆಂದು ಹೋಗುವುದಕ್ಕೂ ಕೆಲವು ದಿನ ನನಗೆ ಭಯವಾಗುತ್ತಲಿತ್ತು."

"ಅದೆಲ್ಲ ಈಗ ಪರಿಹಾರವಾಗಿದೆಯಲ್ಲವೆ ? ಅದಕ್ಕಾಗಿ ನಾವು ಸಂತೋಷಪಡುವಾ, ಸಮಾಧಾನ ತಾಳುವಾ."

"ಸಮಾಧಾನ ? ಈ ಹಸ್ತಿನಾವತಿಯಲ್ಲಿ ಸಮಾಧಾನದ ಮಾತೆಂಬುದೇ ಇಲ್ಲ. ಯಾವ ನಗರದಲ್ಲಿ ಭೀಷ್ಮಾಚಾರ್ಯರಂತಹ ಅಜಾತಶತ್ರುಗಳಿದ್ದಾರೆಯೋ, ಮಹಾತ್ಮ ವಿದುರರಂತಹ ಆದರ್ಶ ನೀತಿಜ್ಞರಾದ ಸಚಿವರಿರುವರೋ ಜ್ಞಾನ ಹಾಗೂ ವೈರಾಗ್ಯಗಳ ನಿಧಿ ಎಂದು ಕರೆಸಿಕೊಳ್ಳುವ ದ್ರೋಣಾಚಾರ್ಯರಂತಹ ಸಲಹೆಗಾರರಿದ್ದಾರೆಯೋ, ಅಲ್ಲಿಯವರಿಗೆ ಯಾವುದಕ್ಕೆ ಕೊರತೆ ಇದೆ ? ಈ ಮೂವರಿಂದಲೇ ಈ ರಾಜ್ಯದ ಗೌರವಗಳು ಹಾಗೂ ಕಾರಭಾರಗಳು ಉಳಿದುಕೊಂಡು ಬಂದಿವೆ. ನಿನಗೆ ಇನ್ನೂ ಗೊತ್ತಿಲ್ಲವೆಂದೆನಿಸುತ್ತಿದೆ. ಜ್ಞಾನಪ್ರಸಾರದ ನಿಮಿತ್ತವಾಗಿ ನೂರಾರು ಆಶ್ರಮಗಳನ್ನು ಈ ರಾಜ್ಯದಲ್ಲಿ ಆರಂಭಿಸುವ ಯೋಜನೆಗಳೂ ನಡೆದಿವೆ. ಕೌರವೇಶ್ವರನ ರಾಜಧಾನಿಯು ಜ್ಞಾನಪೀಠವೆಂದು ಕರೆಸಿಕೊಳ್ಳುವ ಕಾಲವು ಬಹು ದೂರವೇನೂ ಇಲ್ಲ. ಭವ್ಯಸ್ವಪ್ನಗಳನ್ನು ಮುಂದಿಟ್ಟುಕೊಂಡು ಅನೇಕ ಹೊಸ ಹೊಸ ಪಚಾರಗಳನ್ನು ಹಾಕಿಕೊಳ್ಳುತ್ತಲಿದ್ದಾರೆ. ಕರ್ಣ, ನಿನಗೆ

ಯಾವುದೂ ಗೊತ್ತಿಲ್ಲ. ರಾಜ್ಯದ ಪ್ರಾಣಿ ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದ್ದ ಸಿಂಹ ಶಾರ್ದೂಲಾದಿಗಳನ್ನೆಲ್ಲ ಬಂಧಮುಕ್ತಗೊಳಿಸಿ ಅವುಗಳನ್ನು ಅರಣ್ಯಕ್ಕೆ ಸಾಗಿಸಲಾಗಿದೆ."

"ಅದಕ್ಕೇನು ಕಾರಣ ?"

"ಆ ವನ್ಯಜೀವಿಗಳ ಆಹಾರಕ್ಕಾಗಿ ಪ್ರತಿದಿನ ನೂರಾರು ಪ್ರಾಣಿಗಳನ್ನು ವಧೆ ಮಾಡಬೇಕಲ್ಲವೆ ? ವಿದುರನು ಅಪರಾಧ ದಂಡನೀತಿಯನ್ನೇ ವಿಧಿಸಿದ್ದಾನೆ. ಆದುದರಿಂದಲೇ ಅವಶ್ಯವೆನಿಸಬಹುದಾದ ಮೃಗಗಳನ್ನು ಮಾತ್ರ ಸಂಗ್ರಹಾಲಯದಲ್ಲಿ ಇಟ್ಟುಕೊಳ್ಳಲಾಗಿದೆ. ಇಂದು ಹಸ್ತಿನಾವತಿಯ ನಾಗರಿಕರಷ್ಟೇ ಅಲ್ಲ, ಸಮಸ್ತ ಜೀವರಾಶಿಗಳೂ ಸಂತೃಪ್ತಿಯ ಜೀವನ ಸಾಗಿಸುವಂತೆ ಮಾಡಲಾಗಿದೆ."

"ಆದರೆ ಮಿತ್ರಾ, ನೀನು ಮಾತ್ರ ?"

"ನನ್ನ ಅದೃಷ್ಟದಲ್ಲಿ ಸುಖವೆಂಬುದಿಲ್ಲ, ಸಂತೃಪ್ತಿಯಂತೂ ದೂರ ಉಳಿಯಿತು. ಈ ಕುರುಸಾಮ್ರಾಜ್ಯದ ಹಕ್ಕುದಾರನಾದ ನನಗೆ ಶಾಂತಿ ಎಂಬುದು ಲಭಿಸುವುದಾದರೂ ಹೇಗೆ ? ಈ ಸಾಮ್ರಾಜ್ಯದ ವೈಭವವು ಬೆಳೆಯುವಂತಾಗಬೇಕು ; ಅದರ ಅಧಿಕಾರ ವ್ಯಾಪ್ತಿಯು ಹೆಚ್ಚುವಂತಾಗಬೇಕು. ರಾಜ್ಯವು ಬಲಶಾಲಿಯಾಗಬೇಕು. ಪ್ರಜೆಗಳು ಸ್ವಾಭಿಮಾನದಿಂದ ನಿರ್ಭಯರಾಗಿ ಜೀವಿಸುವಂತಾಗಬೇಕು. ಇಂಥ ಅನೇಕ ಬಯಕೆಗಳನ್ನು ಬೆಳೆಸಿಕೊಂಡವನು ನಾನು. ಅಂದ ಮೇಲೆ ನನ್ನ ಮನಸ್ಸಿಗೆ ನೆಮ್ಮದಿ ಸಿಗಲು ಹೇಗೆ ಸಾಧ್ಯ ? ಮಿತ್ರಾ, ನಾನು ಒಬ್ಬಂಟಿಗ, ಎಲ್ಲರೂ ನನ್ನನ್ನು ದೂರೀಕರಿಸಿದ್ದಾರೆ. ನಾನು ಯಾರಿಗೂ ಬೇಡವಾಗಿದ್ದೇನೆ. ಈ ಮನದ ಶಾಂತಿಗಾಗಿ ಎಲ್ಲಿಯಾದರೂ ಹೋಗೋಣವೆಂದರೂ ಅಲ್ಲಿಯೂ ಆ ಕಾಡೆಲ್ಲ ಭಯದಿಂದ ಓಡಿಹೋಗುತ್ತಿರುವಂತೆ ಭಾಸವಾಗುತ್ತಿದೆ. ಒಂದು ವೇಳೆ ಯಾವುದಾದರೂ ಬೇಟೆಯು ಕೈಗೆ ಸಿಕ್ಕು ಅದನ್ನು ವಧಿಸಿದಾಗ, ಆ ಬೇಟೆಯ ಸ್ಥಾನದಲ್ಲಿ ನಾನೇ ಸಿಕ್ಕಿಕೊಂಡಂತೆ ಅನುಭವವಾಗುತ್ತಿದೆ. ಹೀಗಾಗಿ ನನ್ನ ಮನಸ್ಸು ಬೇಟೆಯಲ್ಲಿಯೂ ರಮಿಸದಂತಾಗಿದೆ."

ದುರ್ಯೋಧನನ ಮನದಲ್ಲಾಗುವ ಕೋಲಾಹಲವನ್ನು ಗಮನಿಸಿದಾಗ ಆತನ ಅಂತರಂಗವು ತುಂಬ ಗಾಯಗೊಂಡಂತೆ ತೋರಿತು. ಅದನ್ನರಿತ ಕರ್ಣನು

"ಗೆಳೆಯಾ, ನೀನು ಹೀಗೆ ಹತಾಶನಾಗಬೇಡ. ಮೊದಲು ಒಂದು ಕೆಲಸವನ್ನು ಮಾಡು"

"ಯಾವ ಕೆಲಸ ?" ಆಸೆಯಿಂದ ಕೇಳಿದ ದುರ್ಯೋಧನ.

"ಆ ಕೃಷ್ಣನ ಮಿತ್ರತ್ವವನ್ನು ಸಂಪಾದಿಸು. ಆತನನ್ನು ನಿನ್ನವನನ್ನಾಗಿ ಮಾಡಿಕೊ."

ಆ ಮಾತುಗಳಿಂದ ದುರ್ಯೋಧನನು ಉದ್ವಿಗ್ನನಾಗಿ ನಕ್ಕುಬಿಟ್ಟ.

"ಈಗ ಆತನ ಆಸೆಯನ್ನು ಬಿಟ್ಟುಬಿಡು. ಕೃಷ್ಣನು ಪಾಂಡವರ ಪಕ್ಷಪಾತಿಯಾಗಿದ್ದಾನೆ. ರಾಜಮಾತೆಯಾದ ಕುಂತಿ ಅವನ ಅತ್ತೆ, ಅಷ್ಟೇ ಅಲ್ಲ ರಾಜರಿಂದಲೂ ಕಪ್ಪಕಾಣಿಕೆಗಳನ್ನು ಸಂಗ್ರಹಿಸಲು ಕೃಷ್ಣನ ಚದುರಂಗ ಬಲವು ಪಾಂಡವರ ಹಿಂದೆ ಸುಸಜ್ಜಿತವಾಗಿ ನಿಂತುಕೊಂಡಿದೆ."

"ಸರಿ. ಹಾಗಾದರೆ ಅದರ ಬಗ್ಗೆ ವಿಚಾರ ಮಾಡೋಣ."

"ಮಿತ್ರಾ, ಕೊನೆಯಪಕ್ಷ ನೀನಾದರೂ ನನ್ನ ಪರ ಇರುವೆಯಲ್ಲವೆ ?" ಈ ಮಾತನ್ನಾಡುವಾಗ ದುರ್ಯೋಧನನ ಕಣ್ಣುಗಳು ಹನಿಗೂಡಿದ್ದವು.

"ಸ್ನೇಹಿತನೇ, ಈ ಕರ್ಣನ ಜೀವ ನಿನ್ನ ಗೆಳೆತನದಷ್ಟು ದೊಡ್ಡದಲ್ಲ. ನಿನ್ನ ಆಸೆಗಳನ್ನು ಪೂರೈಸಲು ಈ ನಿನ್ನ ಮಿತ್ರನು ಯಾವಾಗಲೂ ನಿನ್ನ ಬೆಂಗಾವಲಾಗಿ ನಿಂತಿರುತ್ತಾನೆಂಬುದನ್ನು ಎಂದೂ ಮರೆಯಬೇಡ."

"ವಚನ ಕೊಡುವಿಯಾ ?!"

"ಸಜ್ಜನರು, ವೀರರು ಹಾಗೂ ತಪಸ್ವಿಗಳ ವಾಕ್ಯವನ್ನೇ ವಚನವೆಂದು ನಂಬಬೇಕು."

ದುರ್ಯೋಧನನಿಗೆ ಪರಮಾನಂದವಾಯಿತು. ಆತನು ಭರದಿಂದ ಕರ್ಣನನ್ನು ಅಪ್ಪಿಕೊಂಡ.

ದುರ್ಯೋಧನನಿಂದ ಅಪ್ಪಣೆ ಪಡೆದು ಕರ್ಣನು ಹೊರಟು ನಿಂತಾಗ,

"ಯುವರಾಜ, ರಾಜಸೂಯ ಯಾಗಕ್ಕೆ ನಾನು ಬರಲೇಬೇಕು ಎಂದು ಹೇಳುವೆಯಾ ?"

"ಯಾಕೆ ?"

"ನನಗೆ ಹೋಗಲು ಮನಸ್ಸಿಲ್ಲ."

"ಹೋಗುವ ಇಚ್ಛೆ ನನಗಾದರೂ ಇದೆಯೇ ? ಆದರೂ ಹೋಗಲೇ

ಬೇಕಾಗಿದೆ. ಆದುದರಿಂದ ನೀನು ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳ ಬೇಡ ರಾಜಸೂಯ ಯಾಗಕ್ಕೆ ನೀನು ಬಾರದೇ ಹೋದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ನಿನ್ನ ಬಗ್ಗೆ ವಿಕಲ್ಪವುಂಟಾಗುತ್ತದೆ. ಅಲ್ಲದೆ ರಾಜ ಮಂಡಲದಲ್ಲಿಯೂ ನಿನ್ನ ಬಗ್ಗೆ ತಪ್ಪು ಭಾವನೆಗಳುಂಟಾಗಬಹುದು.

"ತಮ್ಮ ಅಪೇಕ್ಷೆ ಹೇಗಿದೆಯೋ ಹಾಗೆಯೇ ಆಗಲಿ."

"ನಾಳೆ ಪಿತಾಮಹ ಹಾಗೂ ಆಚಾರ್ಯರು ರಾಜಸೂಯ ಯಾಗಕ್ಕಾಗಿ ಹೊರಡುವವರಿದ್ದಾರೆ. ನಾವು ಅನಂತರದಲ್ಲಿ ಹೊರಡೋಣ."

ತನ್ನ ಒಪ್ಪಿಗೆಯನ್ನಿತ್ತು ಮರಳಿದ ಕರ್ಣನಿಗೆ ರಾಜಸೂಯ ಯಾಗವೇ ಮನದಲ್ಲಿ ತುಂಬಿಕೊಂಡಿತು.

## 14

ಮೃಗಯಾ ವಿಹಾರಕ್ಕಾಗಿಯೇ ಖಾಂಡವ ವನವನ್ನು ಕಾಯ್ದಿಡ ಲಾಗಿತ್ತು. ಆದುದರಿಂದ ಆ ವನವು ನಾನಾ ಮೃಗಗಳಿಂದ ಹಾಗೂ ನಿಬಿಡಾರಣ್ಯಗಳಿಂದ ತುಂಬಿಕೊಂಡಿತ್ತು. ಅಂಥ ಭಯಂಕರವಾದ ಅರಣ್ಯ ವನ್ನೆಲ್ಲ ಕಡಿದು ಪಾಂಡವರು ಹೊಸ ರಾಜಧಾನಿಯನ್ನು ನಿರ್ಮಿಸಿಕೊಂಡಿರು ವುದನ್ನು ಕಂಡು ಕರ್ಣನಿಗೆ ತುಂಬ ಆಶ್ಚರ್ಯವಾಯಿತು. ಹೊಸದಾಗಿ ನಿರ್ಮಿತವಾದ ಆ ಮಹಾನಗರವು ಯಮುನಾ ತಟಾಕದಲ್ಲಿ ವೈಭವದಿಂದ, ಹೆಮ್ಮೆಯಿಂದ ತಲೆಯೆತ್ತಿ ನಿಂತಿತ್ತು. ರಾಜಗೃಹಗಳ ಶಿಖರಗಳು ಗಗನ ಚುಂಬಿಸುವಂತೆ ಬಹು ಎತ್ತರವಾಗಿ ಕಾಣಬರುತ್ತಲಿದ್ದವು. ವಿಶಾಲವಾದ ರಾಜಮಾರ್ಗದಿಂದ ಕೂಡಿದ ಹೆಬ್ಬಾಗಿಲಿನಲ್ಲಿ ಸ್ವಾಗತಕ್ಕಾಗಿ ನೂರೊಂದು ಆನೆಗಳನ್ನು ನಿಲ್ಲಿಸಿದ್ದರು. ರಾಜಗೃಹಗಳೆಲ್ಲ ಚಂದ್ರನ ಬೆಳದಿಂಗಳಂತೆ ಶುಭ್ರ ವಾಗಿ ಶೋಭಿಸುತ್ತಿದ್ದವು. ಯಜ್ಞಮಂಟಪ, ಅತಿಥಿ ಅಭ್ಯಾಗತರಿಗಾಗಿ ರಚಿತವಾದ ಮಂಟಪ, ರಾಜಾಧಿರಾಜರು ಬಂದು ಇಳಿದುಕೊಳ್ಳುವಂತಹ ಸುಸಜ್ಜಿತವಾದ ಅನೇಕ ಪರಿಕರಗಳಿಂದ ಕೂಡಿದ ಬೇರೆ ಬೇರೆ ಭಾಗಗಳು; ನಾಲ್ಕೂ ವರ್ಣದವರಿಗಾಗಿ ಇಳಿದುಕೊಳ್ಳಲು ಪ್ರತ್ಯೇಕ ಪ್ರತ್ಯೇಕವಾದ ಸ್ಥಳದ

ವ್ಯವಸ್ಥೆ ಹಾಗೂ ಅವರೆಲ್ಲರ ಮನರಂಜನೆಗಾಗಿ ಸಂಗೀತ, ನೃತ್ಯ, ನಾಟಕ ಇವೇ ಮೊದಲಾದ ವ್ಯವಸ್ಥೆ ಹೀಗೆ ಎಲ್ಲವೂ ಸಿದ್ಧವಾಗಿತ್ತು.

ಮಂಗಲ ವಾದ್ಯಗಳು ಯಜ್ಞ ಮಂಟಪದ ಮಹಾದ್ವಾರದಲ್ಲಿ ಮೊಳಗುತ್ತಲಿದ್ದವು. ಮಂಟಪದ ಮಧ್ಯಭಾಗದಲ್ಲಿ ಕುಶಲ ಕರ್ಮಿಗಳ ನೇತೃತ್ವದಲ್ಲಿ ಸುಂದರವಾದ ಯಜ್ಞವೇದಿಕೆಯನ್ನು ಸಿದ್ಧಪಡಿಸಿದ್ದರು. ಅಲ್ಲಲ್ಲಿ ಯಜ್ಞ ಕುಂಡಗಳನ್ನು ಏರ್ಪಡಿಸಲಾಗಿತ್ತು.

ಯಜ್ಞದೀಕ್ಷಾಕಾರ್ಯವು ನಿರ್ವಿಘ್ನವಾಗಿ ಸಾಗುವಂತೆ ಯುಧಿಷ್ಠಿರನು ಪ್ರತಿಯೊಬ್ಬರಿಗೂ ಅನೇಕ ಕೆಲಸ ಕಾರ್ಯಗಳನ್ನು ಹಂಚಿ ಅದರ ಜವಾಬ್ದಾರಿಯನ್ನೆಲ್ಲ ಅವರವರಿಗೆ ವಹಿಸಿಕೊಟ್ಟಿದ್ದನು. ಸಮಾರಂಭದ ಆಗುಹೋಗುಗಳ ಭಾರವನ್ನೆಲ್ಲ ದ್ರೋಣಾಚಾರ್ಯರಿಗೆ ಒಪ್ಪಿಸಲಾಗಿತ್ತು. ಭೋಜನಶಾಲೆಯನ್ನು ದುಶ್ಯಾಸನನಿಗೆ ವಹಿಸಲಾಗಿತ್ತು. ಯಜ್ಞಕ್ಕಾಗಿ ಆಗಮಿಸುವ ಬ್ರಾಹ್ಮಣರು ಹಾಗೂ ರಾಜಾಧಿರಾಜರನ್ನು ಅವರವರ ಯೋಗ್ಯತಾನುಸಾರವಾಗಿ ಸರಿಯಾದ ರೀತಿಯಲ್ಲಿ ಉಪಚರಿಸುವ ಕಾರ್ಯವನ್ನು ಸಂಜಯನಿಗೆ ವಹಿಸಿಕೊಡಲಾಗಿತ್ತು. ಕೃಪಾಚಾರ್ಯರಿಗೆ ದಕ್ಷಿಣೆ ಕೊಡುವುದನ್ನು ಒಪ್ಪಿಸಿದ್ದರು. ಯಜ್ಞದ ಖರ್ಚುವೆಚ್ಚಗಳ ಜವಾಬ್ದಾರಿಯನ್ನು ವಿದುರನು ನಿರ್ವಹಿಸುತ್ತಿದ್ದನು. ಯಜ್ಞಕ್ಕಾಗಿ ಆಗಮಿಸಿದ ರಾಜರಿಂದ ಕಪ್ಪ ಕಾಣಿಕೆಗಳನ್ನು ಸಂಗ್ರಹಿಸುವ ಕಾರ್ಯವನ್ನು ದುರ್ಯೋಧನನಿಗೆ ವಹಿಸಲಾಗಿತ್ತು.

ಸಾವಿರಾರು ಜನರು ಮಂತ್ರೋಚ್ಚಾರಣೆ ಮಾಡುತ್ತಿದ್ದರು. ಯಜ್ಞದ ಆಹುತಿಗಳಿಂದ ತೃಪ್ತಿಗೊಂಡ ಅಗ್ನಿಯ ಹೊಗೆಯು ಆಕಾಶವನ್ನೆಲ್ಲ ವ್ಯಾಪಿಸಿತ್ತು. ಪ್ರಾಥಮಿಕವಾದ ಯಜ್ಞಭಾಗದ ಕಾರ್ಯಕ್ರಮಗಳು ಮುಗಿದ ನಂತರ ರಾಜಸೂಯ ಯಾಗವನ್ನಾರಂಭಿಸುವ ಮುಹೂರ್ತವು ಬಂದಿತು. ಈ ಯಾಗದಲ್ಲಿ 'ಅಗ್ರಪೂಜೆ ಯಾರಿಗೆ ಸಂದಾಯವಾಗುವುದೆಂಬ' ವಿಚಾರ ತಿಳಿದುಕೊಳ್ಳಲು ಎಲ್ಲ ರಾಜರೂ ಕಾತುರರಾಗಿದ್ದರು. ಭೀಷ್ಮನು ವಸುದೇವನ ಪುತ್ರನಾದ ಕೃಷ್ಣನಿಗೆ ಅಗ್ರಪೂಜೆಯ ಮರ್ಯಾದೆಯನ್ನಿತ್ತನು. ಆಗ ಯುಧಿಷ್ಠಿರನು ತುಂಬಿದ ಸಭೆಯಲ್ಲಿ ಕೃಷ್ಣನಿಗೆ ಅಗ್ರಪೂಜೆ ಸಲ್ಲಿಸಿದನು. ಅದನ್ನೆಲ್ಲ ಕಂಡ ಶಿಶುಪಾಲನು ಕೆಂಡದಂತಾದನು. ಆತನು ತುಂಬಿದ ಸಭೆಯಲ್ಲಿ ಕೃಷ್ಣನ ಅವಹೇಳನವನ್ನು ಪ್ರಾರಂಭಿಸಿದನು. ಹದ್ದುಮೀರಿ ನಡೆದಾಗ ಕೃಷ್ಣನು ತನ್ನ

ಸುದರ್ಶನ ಚಕ್ರದಿಂದ ಆತನ ಸಂಹಾರ ಮಾಡಿದನು. ಯಜ್ಞಮಂಟಪದಲ್ಲಿ ನಡೆದುಹೋದ ಈ ಅನಾಹುತದಿಂದಾಗಿ ಎಲ್ಲರ ಮನಸ್ಸೂ ಗಾಬರಿಗೊಂಡಿತು.

ಯಜ್ಞ ಸಮಾರಂಭದ ಕೊನೆಯ ದಿನವಾದುದರಿಂದ ಎಲ್ಲ ರಾಜರೂ ಒಂದೇ ಸಾಲಿನಲ್ಲಿ ಭೋಜನಕ್ಕೆ ಕುಳಿತುಕೊಂಡಿದ್ದರು. ಗಂಧ, ಕರ್ಪೂರ ಮೊದಲಾದ ಸುಗಂಧ ಪರಿಮಳ ದ್ರವ್ಯಗಳ ವಾಸನೆಯು ಎಲ್ಲ ದಿಕ್ಕುಗಳಲ್ಲಿಯೂ ಹಬ್ಬಿಕೊಂಡಿತ್ತು. ಬಂಗಾರದ ಮಣೆಗಳನ್ನು ಹಾಕಿದ್ದುದರಿಂದ ಇಡೀ ಮಂಟಪವೆಲ್ಲ ಆಕಾಶದಂತೆ ಕಾಣಬರುತ್ತಿತ್ತು. ಮುಂಭಾಗದ ಸಾಲಿನಲ್ಲಿ ಭೀಷ್ಮ ದ್ರೋಣರು ಕಾಣುತ್ತಿದ್ದರು. ವಿದುರನ ಪಕ್ಕದಲ್ಲಿ ಕರ್ಣನು ಕುಳಿತುಕೊಂಡಿದ್ದ. ಭೋಜನದ ಸಾಲುಗಳಲ್ಲಿ ಕೃಷ್ಣನು ಸಂಚರಿಸುತ್ತಲಿದ್ದ. ಬಡಿಸಲು ಬಂದ ದಾಸಿಯರ ಮುಂಭಾಗದಲ್ಲಿ ದ್ರೌಪದಿಯೂ ಕಾಣಬರುತ್ತಿದ್ದಳು. ಆಗವಿದುರನು ಕರ್ಣನಿಗೆ ಹೇಳಿದ.

"ರಾಧೇಯಾ, ಜೀವನ ಸಾರ್ಥಕವಾದಂತೆನಿಸುತ್ತದೆ."

"ಕಾರಣ !"

"ಇಂಥ ವಿಶೇಷವಾದ ಯಜ್ಞಕಾರ್ಯವನ್ನು ಮಾಡುವುದು ಬಂದವರಿಗೆಲ್ಲ ಭೋಜನ ಮಾಡಿಸುವುದು ಇವು ಸಾಮಾನ್ಯ ಎಂದೆನಿಸಲಾರವು. ಪೂರ್ವಜನ್ಮದ ಪುಣ್ಯ ವಿಶೇಷದ ವಿನಃ ಇಂಥ ಕಾರ್ಯಗಳು ಸಾಧಿಸಲಾರವು. ನೀನು ಎಂದಾದರೂ ಇಂಥ ಯಜ್ಞವನ್ನು ನೋಡಿರುವೆಯಾ ?"

"ದುರ್ಯೋಧನನಿಂದಾಗಿಯೇ ಈ ಯಜ್ಞ ನೋಡುವ ಭಾಗ್ಯವು ಪ್ರಾಪ್ತವಾಯಿತು."

"ಪೂರ್ವಜನ್ಮದ ಪುಣ್ಯ ಇಲ್ಲದಿದ್ದಲ್ಲಿ...."

ಕರ್ಣನ ಎಲೆಯ ಮುಂಭಾಗದಲ್ಲಿ ಸುಕೋಮಲ ಪಾದಗಳು ಕಾಣಿಸಿಕೊಂಡವು ಆತನಿಗರಿವಿಲ್ಲದಂತೆ ದೃಷ್ಟಿ ಮೇಲೆ ಹೋಯಿತು. ಎದುರಿಗೆ ದ್ರೌಪದಿಯು ನಿಂತಿದ್ದಳು. ಇಬ್ಬರ ದೃಷ್ಟಿಗಳೂ ತಾಕಲಾಡಿದವು. ದ್ರೌಪದಿ ಬಡಿಸದೆ [illegible] ತಟ್ಟೆ ಹಿಡಿದುಕೊಂಡು ಹಾಗೆಯೇ ನಿಂತುಕೊಂಡಳು. ಕರ್ಣನು [illegible] ತಲೆಯೆತ್ತಿ ನೋಡಲಾರಂಭಿಸಿದನು. ಆ ಸಮಯದಲ್ಲಿ ಕೆಲವು ಶಬ್ದಗಳು ಕಿವಿಗೆ ಬಿದ್ದವು

"[illegible] ದಾಸಿಗಳ ಕಡೆ ನೋಡಬಾರದು."

ಸಂತಾಪಗೊಂಡ ಕರ್ಣನು ತನ್ನ ತಲೆ ಎತ್ತಿ ನೋಡಿದ. ದ್ರೌಪದಿ ಅತಿವೇಗದಿಂದ ಮುಂದೆ ಹೋಗಿ ಬಿಟ್ಟಿದ್ದಳು. ಆಗ ಕೃಷ್ಣನು ಆತನ ಮುಂದೆ ಬಂದು ನಿಂತುಕೊಂಡಿದ್ದ. ಕೃಷ್ಣನ ಮುಖದ ಮೇಲೆ ಕಾಣಿಸಿಕೊಂಡ ಆಶ್ಚರ್ಯದ ಭಾವವನ್ನು ಕರ್ಣನು ಗುರುತಿಸಿದ. ಮರುಕ್ಷಣದಲ್ಲಿ ಕೃಷ್ಣನ ದ್ರೌಪದಿಯ ಹಿಂದೆ ಹೋಗುತ್ತಿರುವುದು ಕಾಣಿಸಿತು.

ಕೈಲಿದ್ದ ತಟ್ಟೆಯನ್ನು ಹೇಗೋ ಸಂಬಾಳಿಸಿಕೊಂಡು ಆ ಸಾಲುಗಳಿಂದ ಪಾರಾಗಿ ಬಂದ ದ್ರೌಪದಿಯು ತನ್ನ ಸ್ಥಳವನ್ನು ಸೇರಿದಳು.

"ದ್ರೌಪದಿ"

ಹಿಂದಿರುಗಿ ನೋಡಿದಾಗ ಕೃಷ್ಣನನ್ನು ಕಂಡು ನಗುಮುಖಿಯಾದಳು.

"ಕೃಷ್ಣಾ, ನೀನು ಕೂಗಿದೆಯಾ ?"

"ಹೌದು !" ಪಕ್ಕದಲ್ಲಿ ಯಾರೂ ಇಲ್ಲದುದನ್ನು ಗಮನಿಸಿದ ಕೃಷ್ಣನು ;

"ಆ ಕರ್ಣನನ್ನು ಹೀಗೆ ಅವಮಾನಗೊಳಿಸುವುದು ಅಗತ್ಯವಿತ್ತೆ ?"

"ಅವನು ನನ್ನನ್ನು ನೋಡಿದ್ದೇಕೆ ?"

"ನಿನ್ನ ಸೆರಗು ಸರಿದರೆ ಅದರಲ್ಲಿ ಅವನದೇನು ತಪ್ಪು ? ಆತನು ನಮ್ಮ ಅತಿಥಿ ಎಂಬ ಅರಿವಾದರೂ ಬೇಡವೇ ?"

"ಕೃಷ್ಣಾ, ಆತನನ್ನು ನೋಡಿದರೆ ಸಾಕು ನನಗೇಕೋ ಸಂತಾಪವು ಹೆಚ್ಚುತ್ತದೆ. ಅದಕ್ಕೆ ಕಾರಣವೂ ಸಹ ನನಗೆ ತಿಳಿಯದು."

ಈ ಮಾತುಗಳನ್ನು ಕೇಳಿದಾಗ ಕೃಷ್ಣನ ಧ್ವನಿ ಕಠೋರವಾಯಿತು.

"ಅದಕ್ಕೆ ಕಾರಣ ನಿನಗೆ ತಿಳಿಯದಿರಬಹುದು. ಅದು ನನಗೆ ಅಪರಿಚಿತವೆಂದೇನೂ ಇಲ್ಲ. ನಿನ್ನ ಸೆರಗು ಜಾರಿತು. ಅದು ನಿನ್ನ ದೋಷ. ಆದರೆ ಆ ದೋಷವನ್ನು ಅವನ ತಲೆಗಂಟಿಸಲು ಯತ್ನಿಸುವೆ. ಇನ್ನು ತನ್ನ ತಲೆಯನ್ನು ಮೇಲೆತ್ತಿದ ದೋಷ ಆತನದು ಎಂದು ಹೇಳುವೆಯಲ್ಲವೆ ? ಕೃಷ್ಣೇ, ನಿನ್ನ ರೂಪ, ಹಾಗೂ ಕುಲಗಳ ಅಹಂಕಾರದಿಂದ ನೀನು ಇಂದು ಬಹುದೊಡ್ಡ ತಪ್ಪನ್ನು ಮಾಡಿದೆ. ಮಾಡಿದ ತಪ್ಪಿಗೆ ಆತನನ್ನೇಕೆ ಬಲಿ ತೆಗೆದುಕೊಳ್ಳುವೆ, ಅಂಥ ಪತಿ ದೊರೆಯಲಿಲ್ಲ ಎಂಬ ಪಶ್ಚಾತ್ತಾಪವು ಆದಲ್ಲಿ ಈಗ ಅದರಿಂದ ಪ್ರಯೋಜನವಾದರೂ ಏನು ?"

"ಕೃಷ್ಣಾ" ದ್ರೌಪದಿ ಕೂಗಿಕೊಂಡಳು. ಆ ಕೂಗನ್ನು ಕೇಳಲು ಕೃಷ್ಣನು ಅಲ್ಲಿರಲಿಲ್ಲ.

ಊಟದ ಸಾಲಿನಲ್ಲಿ ಪುನಃ ಕೃಷ್ಣನು ಬಂದಾಗ ಭೋಜನಕ್ಕೆ ಕುಳಿತವರೆಲ್ಲ ಎದ್ದು ಹೋಗುತ್ತಲಿದ್ದರು. ಆ ಜನಗಳಲ್ಲಿ ಕರ್ಣನಿದ್ದುದನ್ನು ಗಮನಿಸಿದ ಕೃಷ್ಣನು ಆತನ ಸಮೀಪಕ್ಕೆ ಹೋಗಿ

"ರಾಧೇಯಾ" ಎಂದ.

ಕೃಷ್ಣನ ದರ್ಶನ ಮಾತ್ರದಿಂದ ಆತನ ಮುಖದಲ್ಲಿ ಆನಂದವು ಕಾಣಿಸಿಕೊಂಡಿತು,

"ಕರ್ಣಾ, ಇನ್ನೂ ಇರುವೆಯಲ್ಲವೆ ?"

"ಇಲ್ಲ, ಇಂದು ಹೊರಡುವ ಯೋಚನೆಯಿದೆ. ಯುವರಾಜ ದುರ್ಯೋಧನ ಹಾಗೂ ಶಕುನಿ ಇವರು ಅನಂತರದಲ್ಲಿ ಬರುತ್ತಾರೆ."

"ಭೋಜನ ಸರಿಯಾಗಿತ್ತೆ ?"

"ತುಂಬ ಚೆನ್ನಾಗಿತ್ತು. ತುಂಬ ಹಿಡಿಸಿತು. ಬಹು ಸಂತೋಷವಾಯಿತು. ಪಕ್ವಾನ್ನಗಳಿಂದ ಹೊಟ್ಟೆ ತುಂಬಿತಾದರೂ ಅವುಗಳನ್ನು ಕೈಗೆತ್ತಿಕೊಂಡಾಗ ಅವುಗಳ ಸ್ವಾದವು ಮಾತ್ರ ಅದೇಕೋ ಎಂಜಲಿನಂತೆನಿಸಿತು. ಈಗ ಆ ಎಂಜಲನ್ನೇ ತೊಳೆದುಕೊಳ್ಳಲು ಹೋಗುತ್ತಿರುವೆ."

ಎಡಗೈಯಿಂದ ತನ್ನ ಉತ್ತರೀಯವನ್ನು ಸರಿಮಾಡಿಕೊಳ್ಳುತ್ತ ಕರ್ಣನು ಮುನ್ನಡೆದ. ಕೃಷ್ಣನು ಹಿಂದಿನಿಂದ ಆತನನ್ನೇ ನೋಡುತ್ತ ಚಿಂತಾಕ್ರಾಂತನಾಗಿ ನಿಂತುಕೊಂಡಿದ್ದ.

## 16

ದುರ್ಯೋಧನನು ತನ್ನ ಮಹಲಿನಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಶತಪಥ ಹಾಕುತ್ತಿದ್ದ. ಪ್ರಾಸಾದದ ಮಧ್ಯಭಾಗದಲ್ಲಿದ್ದ ಆಸನದಲ್ಲಿದ್ದ ಆತನ ಸೋದರನು ಅಂತರಂಗದ ತುಮುಲವನ್ನು ಅಳೆದು ನೋಡುವುದರಲ್ಲಿ ತಲ್ಲೀನನಾಗಿದ್ದ. ಇಂದ್ರಪ್ರಸ್ಥದಿಂದ ಮರಳಿ ಬಂದ ತಕ್ಷಣವೇ ಕರ್ಣನನ್ನು ಕರೆತರಲು ತನ್ನ ರಥವನ್ನು ಕಳುಹಿಸಿಕೊಟ್ಟಿದ್ದ. ಆತನ ಮನಃಸ್ಥಿತಿಯು ಯಾವಾಗ ಕರ್ಣನನ್ನು ಕಂಡೇನೋ ಎಂಬಂತಾಗಿತ್ತು. ರಥವು ಮರಳಿ

ಬಂದ ಶಬ್ದ ಕೇಳಿದೊಡನೆಯೇ ಆತನು ಮೊಗಸಾಲೆಯತ್ತ ಸಾಗಿದ. ಕರ್ಣನು ರಥದಿಂದಿಳಿಯುತ್ತಿರುವುದನ್ನು ಕಂಡಾಗ ಅವನ ಮನಸ್ಸು ಸಮಾಧಾನಗೊಂಡಿತು. ಆತನು "ಮಾಮಾ ಕರ್ಣನು ಬಂದುಬಿಟ್ಟ." ಎಂದು ಅಲ್ಲಿಂದಲೇ ಕೂಗಿಕೊಂಡ.

"ಯುವರಾಜ, ನೀವು ಆಜ್ಞೆ ಮಾಡಿದಾಗ ಯಾರು ತಾನೇ ಬರದೇ ಇರತ್ತಾರೆ ?'' ಎಂದು ಹೇಳಿ ಕರ್ಣನು ಅರಮನೆಯನ್ನು ಪ್ರವೇಶಮಾಡಿದ.

"ಬಾ ಕರ್ಣ, ನಾನು ನಿನ್ನ ದಾರಿಯನ್ನೇ ಕಾಯುತ್ತಿದ್ದೆ."

"ಯುವರಾಜ, ನೀವು ಯಾವಾಗ ಬಂದಿರಿ ?"

"ಈಗ ತಾನೇ ಬಂದಿದ್ದೇನೆ."

"ಇಷ್ಟೊಂದು ಅವಸರದಿಂದ ಕರೆ ಕಳಿಸಿದಿರಿ !"

"ನಿನ್ನನ್ನು ಭೇಟಿಯಾಗಬೇಕೆನಿಸಿತು. ಅದು ತಪ್ಪೇ ? ಹಾಗೆನಿಸುವು ದಾದಲ್ಲಿ ಕರೆಸಿದುದಕ್ಕೆ ಕ್ಷಮೆ ಕೇಳುವೆ."

ದುರ್ಯೋಧನನ ಈ ಮಾತುಗಳಿಂದ ಕರ್ಣನು ಚಕಿತನಾದ. ಆತನ ಸಮೀಪಕ್ಕೆ ಬಂದು,

"ಮಿತ್ರಾ, ನಿನ್ನ ಭೇಟಿ ನನಗೆ ಯಾವಾಗಲೂ ಆನಂದವನ್ನೇ ಉಂಟು ಮಾಡುತ್ತದೆ. ಅವಸರದಲ್ಲಿ ಕರೆಸಿದಿ. ಕಾರಣ ತಿಳಿದುಕೊಳ್ಳಲು ಕೇಳಿದೆ ಅಷ್ಟೆ."

ದುರ್ಯೋಧನನ ಕೋಪವು ಕೊಂಚ ಕಡಿಮೆಯಾಯಿತು ಅವನು ಕರ್ಣನ ಕೈಹಿಡಿದು ಕರೆತಂದು "ಬಾ ಇಲ್ಲಿ ಕುಳಿತುಕೊ" ಎಂದು ತನ್ನ ಪಕ್ಕದಲ್ಲಿಯೇ ಕೂಡಿಸಿಕೊಂಡ ಕರ್ಣನ ಲಕ್ಷ್ಯವು ಆಗ ಶಕುನಿಯತ್ತ ಹರಿಯಿತು

"ಕ್ಷಮಿಸಬೇಕು. ನಾನು ತಮ್ಮನ್ನು ಗಮನಿಸಲಿಲ್ಲ. ತಮ್ಮ ಪ್ರವಾಸವು ಚೆನ್ನಾಗಿ ಆಯಿತಷ್ಟೆ ?"

"ತುಂಬ ಚೆನ್ನಾಗಿತ್ತು,"

"ಇಂದ್ರ ಪ್ರಸ್ತದ ತಮ್ಮ ವಾಸ್ತವ್ಯ ?"

"ಅಮೋಘ, ಅತ್ಯಮೋಘವಾಗಿತ್ತು. ಕರ್ಣ ನಿನಗಿಂತಲೂ ನಾವು ಭಾಗ್ಯಶಾಲಿಗಳು. ನೀವು ಬೇಗನೇ ಹೊರಟುಬಂದಿರಿ. ಆದರೆ ನಾವು ಆಗ್ರಹ ಮಾಡಿದುದರಿಂದ ಎರಡು ದಿನ ಹೆಚ್ಚಿಗೆ ನಿಲ್ಲಬೇಕಾಯಿತು."

"ಇದ್ದುದು ಒಳ್ಳೆಯದಾಯಿತು. ಅಲ್ಲದೆ ಯುವರಾಜರಿಗೆ ಕರಭಾರ ಸ್ವೀಕರಿಸುವ ಕಾರ್ಯವನ್ನು ವಹಿಸಿಕೊಟ್ಟುದರಿಂದ ಯಜ್ಞಕಾರ್ಯವು ಮುಗಿಯುವವರೆಗೆ ವಿಶ್ರಾಂತಿಯೇ ದೊರೆಯದಂತಾಗಿತ್ತು.''

''ಕರ್ಣ, ಪಾಂಡವರಿಂದ ನಿರ್ಮಿತವಾದ ಆ ಮಯ ಸಭೆಯು ಕಟ್ಟಡವು ಭೂಮಿಯ ಮೇಲೆಯೇ ಬಹು ಆಶ್ಚರ್ಯಕರವಾದ ಕೃತಿ ಎಂದೆನಿಸುವುದಲ್ಲವೇ ? ಯಾಕೆಂದರೆ ನೀರಿರಬಹುದು ಎಂದು ತಿಳಿದು ಉಟ್ಟ ವಸ್ತ್ರಗಳನ್ನು ಮೇಲೆತ್ತಿಕೊಂಡು ನಡೆದಾಗ ಅಲ್ಲಿ ನೀರೇ ಇರುವುದಿಲ್ಲ. ಅದರಂತೆಯೇ ತೋರಿದ ಇನ್ನೊಂದು ಸ್ಥಳದಲ್ಲಿ ಹಿಂದಿನಂತೆ ಸ್ಫಟಿಕ ಮಣಿಯನ್ನೇ ಹಾಸಿರಬಹುದು ಎಂದು ತಿಳಿದು ನಿರ್ಭೀತರಾಗಿ ನಡೆದಲ್ಲಿ ಅಲ್ಲಿ ನೀರಿನ ಹೊಂಡವಿದ್ದು ಉಟ್ಟ ಬಟ್ಟೆಗಳೆಲ್ಲ ತೊಯ್ದು ಹೋದ ಅನುಭವ, ಬಾಗಿಲು ಎಂದು ಭಾವಿಸಿದಲ್ಲಿ ಅಲ್ಲಿ ಅಡ್ಡಗೋಡೆಯಿರುವುದು. ಗೋಡೆ ಎಂದು ತಿಳಿದು ನಿಂತುಬಿಟ್ಟಾಗ ಅಲ್ಲಿಯೇ ನಿಜವಾದ ದ್ವಾರವಿರುವುದು. ಛೀ, ಛೀ ಕರ್ಣ, ಖಂಡಿತವಾಗಿಯೂ ನೀನು ಆ ಮಯಸಭೆಯನ್ನು ನೋಡಬೇಕಾಗಿತ್ತು.''

''ಇದಕ್ಕೆಲ್ಲ ಮಯಸಭೆಯೇ ಇರಬೇಕು ಎಂದೇನೂ ಇಲ್ಲ. ಮಾವಾ ಈ ಜೀವನವೇ ಒಂದು ಮಯಸಭೆಯಲ್ಲವೇ ? ಸ್ನೇಹವನ್ನು ಅಪೇಕ್ಷಿಸಿಹೋದ ತಾಣದಲ್ಲಿ ದ್ವೇಷದ ಬುತ್ತಿಯನ್ನೇ ಕಟ್ಟಿಕೊಂಡು ಬರುವಂತಾಗುವುದು, ಯಾರು ಮಿತ್ರರೆಂದು ಭಾವಿಸುತ್ತೇವೆಯೋ ಅವರೇ ಶತ್ರುಗಳಾಗುವುದು ಒಳ್ಳೆಯವರನ್ನು ಪಡೆಯಲು ತಪಸ್ಸು ಮಾಡಿದರೆ ಪಾಪವನ್ನೇ ಉಡಿಯಲ್ಲಿ ಕಟ್ಟಿಕೊಳ್ಳುವುದು, ಯಾವ ದಿನಗಳನ್ನು ಭಾಗ್ಯದ ದಿನ ಎಂದು ಭಾವಿಸಿರುತ್ತೇವೆಯೋ ಅಂಥ ದಿನಗಳೇ ಜೀವನದ ಅತಿ ದುರ್ಭಾಗ್ಯದ ದಿನಗಳಂತಾಗುವುದು ಹೀಗೆ ಈ ಜೀವನವು ತನ್ನ ಅಂತರಂಗದಲ್ಲಿಯೇ ಮಯಸಭೆಯನ್ನು ಹೊತ್ತುಕೊಂಡಿರುವಾಗ ಬಾಹ್ಯನೋಟಕ್ಕೆ ತೋರುವ ಆ ಕೃತ್ರಿಮ ಸಭೆಯಲ್ಲೇನಿದೆ!"

ಕರ್ಣನ ಮಾತುಗಳಿಂದ ಶಕುನಿಯು ನಕ್ಕು ನುಡಿದ :

"ಕರ್ಣ, ಈ ನಿನ್ನ ಮಿತ್ರನ ಪರಿಸ್ಥಿತಿಯೂ ನನ್ನ ಹಾಗೆಯೇ ಆಗಿದೆ. ಆ ಮಯಸಭೆಯನ್ನು ನೋಡಲು ಹೋದಾಗ ಉಟ್ಟ ವಸ್ತ್ರಗಳೆಲ್ಲ ನೀರಿನಲ್ಲಿ ತೊಯ್ದು ಕಾಲು ಜಾರಿ ಬಿದ್ದು ........''

''ಮಾವಾ !'' ದುರ್ಯೋಧನ ಕೂಗಿಕೊಂಡ.

"ಒಬ್ಬನಿಗೆ ಮಾತ್ರ ಹಾಗಾಗಲಿಲ್ಲ. ಅದನ್ನು ಇಬ್ಬರೂ ಅನುಭವಿಸಿದೆವು. ನಮ್ಮ ಈ ದುರವಸ್ಥೆಯನ್ನು ಕಂಡು ಪಾಂಡವರಿಗೆ ಅದೇ ಬೇಸರ ಕಳೆಯುವ ವಿನೋದದ ನೋಟವಾಗಿಪರಿಣಮಿಸಿತು,"

ದುರ್ಯೋಧನನು ಏನೋ ಹೇಳಬೇಕೆಂದಿದ್ದಾಗ ವಿಕರ್ಣನು ಅಲ್ಲಿಗೆ ಬಂದುದು ಕಾಣಿಸಿತು. ಆತನು ತನ್ನ ಅಣ್ಣನಿಗೆ ನಮ್ರತೆಯಿಂದ ವಂದಿಸಿ,

"ತಂದೆಯವರು ತಮಗೆ ಬರಹೇಳಿದ್ದಾರೆ" ಎಂದು ತಿಳಿಸಿದ.

"ನಾವು ಈಗತಾನೇ ಬಂದಿದ್ದೇವೆ."

"ಅವರಿಗೆ ಆ ವಿಚಾರವು ತಿಳಿದಿದೆ. ಆದುದರಿಂದಲೇ ಅವರು ನಿಮ್ಮನ್ನು ಕರೆತರಲು ನನ್ನನ್ನು ಕಳುಹಿಸಿದ್ದಾರೆ."

"ಅಲ್ಲಿ ಯಾರಿದ್ದಾರೆ ?"

"ಯಾರೂ ಇಲ್ಲ, ಕೇವಲ ಪಿತಾಮಹ, ಆಚಾರ್ಯ ಹಾಗೂ ವಿದುರ ಕಾಕಾ ಇವರು ಮಾತ್ರ........"

ಅದನ್ನು ಕೇಳಿ ಖಿನ್ನನಾಗಿ ನಕ್ಕು ದುರ್ಯೋಧನನು "ಇನ್ನಾರು ಬೇಕು, ಇರಲಿ, ಬರುತ್ತೇನೆಂದು ತಿಳಿಸು" ವಿಕರ್ಣನು ಮರಳಿ ಹೋದ ನಂತರ,

"ಯಾವದೋ ಹೊಸ ಅಪರಾಧ ಘಟಿಸಿದಂತಿದೆ" ಎಂದ.

"ಯಾರಿಂದ" ಕರ್ಣನು ಕೇಳಿದ.

"ಬೇರೆ ಯಾರಿಂದ, ಏನಿದ್ದರೂ ಅದು ನನ್ನಿಂದಲೇ ಘಟಿಸಿರಬಹುದು. ಅದಿಲ್ಲದೇ ಹೋಗಿದ್ದರೆ ಇಷ್ಟೊಂದು ಅವಸರದಿಂದ ತಂದೆಯವರು ನನ್ನನ್ನು ಕರೆಸಿಕೊಳ್ಳುತ್ತಿರಲಿಲ್ಲ."

"ದುರ್ಯೋಧನ ನೀನು ತಪ್ಪು ಮಾಡುತ್ತಿರುವೆ" ಎಂದು ನುಡಿದ ಶಕುನಿಯು "ಸಾಮ್ರಾಟರು ನಿನ್ನ ಮೇಲೆ ತುಂಬ ಅಂತಃಕರಣವುಳ್ಳವರಾಗಿದ್ದಾರೆ. ಅದನ್ನು ನೀನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದೆನಿಸುತ್ತದೆ. ಅವರು ಅಂಧರಿರಬಹುದು. ಆದರೆ ಅವರ ಅಂತರಂಗವು ತಳಮಳಗೊಳ್ಳುತ್ತಲಿದೆ."

"ಆ ವಿಚಾರವನ್ನು ನಾನೂ ತಿಳಿದುಕೊಂಡಿರುವೆ. ಆದರೆ ಆ ಹಿಂದಿನ ದಿನಗಳು ಈಗ ಕಳೆದು ಹೋಗಿವೆ. ಮತ್ತೆ ಅಂಥ ದಿನಗಳು ಬರಲಾರವು."

"ನನಗಂತೂ ಹಾಗೆನಿಸುವುದಿಲ್ಲ. ನಿನ್ನ ಮೇಲೆ ಅವರಿಗೆ ಅಗಾಧವಾದ ಪ್ರೇಮವಿದೆ. ಈ ಮಾತನ್ನು ನಾನು ಚೆನ್ನಾಗಿ ಬಲ್ಲೆ.

"ಹಾಗಿದ್ದಲ್ಲಿ ನೀವೂ ನನ್ನೊಂದಿಗೆ ಬರುತ್ತೀರಾ ?"

ಅವಸರದಿಂದ ಮೇಲೇಳುತ್ತ ಶಕುನಿ ಕೇಳಿದ.

"ಎಲ್ಲಿಗೆ ?"

"ತಂದೆಯುವರಿದ್ದಲ್ಲಿಗೆ, ಅವರ ಪ್ರೇಮದ ಅನುಭವ ನಿಮಗೂ ದೊರೆಯು ಬೇಕಲ್ಲವೇ ?"

"ಬರುತ್ತಿದ್ದೆ, ಆದರೆ ಈ ಪ್ರವಾಸದಿಂದ ತುಂಬ ಬಳಲಿದ್ದೇನೆ."

"ಆಗಲಿ, ನೀವು ವಿಶ್ರಾಂತಿಯನ್ನು ಹೊಂದಿರಿ. ಕರ್ಣ ನೀನು ಬರುವೆಯಾ ?"

"ಅಪ್ಪಣೆ"

ದುರ್ಯೋಧನನು ಸ್ವಲ್ಪ ಹೊತ್ತು ಯೋಚನೆ ಮಾಡಿ ತನ್ನ ಭಂಡಾರದಲ್ಲಿದ್ದ ಕಂಠಾಭರಣವನ್ನೆತ್ತಿಕೊಂಡು ಪುನಃ ಆ ಪೆಟ್ಟಿಗೆಯನ್ನು ಸರಿಯಾಗಿಟ್ಟು ಅನಂತರ ಕರ್ಣನೊಂದಿಗೆ ಧೃತರಾಷ್ಟ್ರನನ್ನು ಕಾಣಲು ಹೊರಟು ಬಿಟ್ಟ.

ರಾಜಮಹಲಿನ ದೀಪಸ್ತಂಭಗಳನ್ನು ಬೆಳಗಿಸುವುದರಲ್ಲಿ ಸೇವಕರು ನಿರತರಾಗಿದ್ದರು.

## 17

ಸಾವಿರಾರು ದೀಪಸ್ತಂಭಗಳ ಬೆಳಕಿನಿಂದ ರಾಜಗೃಹವೆಲ್ಲ ಪ್ರಕಾಶಮಯವಾಗಿತ್ತು. ಧೃತರಾಷ್ಟ್ರ ಮಹಾರಾಜರ ಸಮ್ಮುಖದಲ್ಲಿ ವಿದುರನು ಕುಳಿತುಕೊಂಡಿದ್ದ. ಆತನ ಸಮೀಪದಲ್ಲಿಯೇ ಭೀಷ್ಮಾಚಾರ್ಯರಿದ್ದರು. ದ್ರೋಣಾಚಾರ್ಯರು ಕೃಷ್ಣಾಜಿನದ ಮೇಲೆ ಮಂಡಿತರಾಗಿದ್ದರು. ದಾಸದಾಸಿಯರು ಚಾಮರ ಹಾಕುತ್ತಲಿದ್ದರು. ಕರ್ಣ ಹಾಗೂ ದುರ್ಯೋಧನರು ಸಭಾಗೃಹ ಪ್ರವೇಶ ಮಾಡಿದುದನ್ನು ಕಂಡ ದ್ರೋಣಾಚಾರ್ಯರು "ರಾಜನ್ ಯುವರಾಜ ದುರ್ಯೋಧನನು ರಾಧೇಯನೊಂದಿಗೆ ಆಗಮಿಸುತ್ತಲಿದ್ದಾನೆ. ಅವರಿಬ್ಬರ ಮಿತ್ರತ್ವವು ಅಭೇದ್ಯವಾದುದು" ಎಂದರು.

ದುರ್ಯೋಧನನಿಗೆ ಆಚಾರ್ಯರ ಮಾತುಗಳನ್ನು ಕೇಳಿದಾಗ ಸಮಾಧಾನವೆನಿಸಿತು. ಪ್ರತಿಸಲವೂ ದುರ್ಯೋಧನನ ಆಗಮನವಾಗುತ್ತಿದ್ದಂತೆ ಗಂಭೀರ ಮುಖಭಾವವನ್ನು ತಾಳುತ್ತಿದ್ದ ಭೀಷ್ಮ, ದ್ರೋಣ, ವಿದುರಾದಿಗಳ ಮುಖವು ಇಂದು ಪ್ರಸನ್ನತೆಯಿಂದ ಕಾಣಬರುತ್ತಿತ್ತು. ಅದನ್ನು ಕಂಡ ದುರ್ಯೋಧನನೂ ಸಮಾಧಾನವನ್ನು ತಾಳಿದ. ಆತ ಎಲ್ಲರಿಗೂ ನಮಸ್ಕಾರವನ್ನು ಸಲ್ಲಿಸಿದ.

"ದುರ್ಯೋಧನಾ, ನೀನು ಇಂದ್ರಪ್ರಸ್ಥದಿಂದ ಮರಳಿ ಬಂದಿರುವೆ. ಎಂಬುದನ್ನು ಕೇಳಿದೆ, ಮನಸ್ಸು ನಿಲ್ಲಲಿಲ್ಲ. ನಾನು ಅನೇಕ ಸಲ ನಿನ್ನ ಮೇಲೆ ಕೋಪಿಸಿಕೊಂಡಿದ್ದರೂ ಕುರುಡನಾದ ಈ ನಿನ್ನ ತಂದೆಯ ಮನಸ್ಸು ನಿನ್ನ ಬಗ್ಗೆ ಯಾವಾಗಲೂ ಚಿಂತಿಸುತ್ತಿರುತ್ತದೆ. ನಿನ್ನ ಧ್ವನಿಯನ್ನು ಕೇಳಿ ತುಂಬ ದಿನಗಳಾಗಿದ್ದವು. ಆದುದರಿಂದಲೇ ಅವಸರದಿಂದ ನಿನ್ನನ್ನು ಕರೆಸಿದೆ."

"ತಂದೆಯೇ ನಿಮಗೆ ನನ್ನ ನೆನಪಾದುದಕ್ಕೆ ತುಂಬಾ ಸಂತೋಷಪಡುವೆ."

"ಅದಿರಲಿ ಮಗೂ ನಿನ್ನ ಪ್ರವಾಸವು ಸುಖಕರವಾಗಿತ್ತಷ್ಟೇ? ಯಜ್ಞದ ವಾತಾವರಣದಿಂದ ನಿನ್ನ ಮನಸ್ಸು ತೃಪ್ತಿಹೊಂದಿತಷ್ಟೇ?"

"ಯಾರು ತಾನೆ ಸಂತೋಷಪಡಲಿಕ್ಕಿಲ್ಲ. ತಂದೆ, ಅಲೌಕಿಕವಾದ ಅಂಥ ಯಜ್ಞವನ್ನೇ ನಾನು ಕಂಡಿಲ್ಲ. ಯಜ್ಞ. ಯಾಗ, ತಪಶ್ಚರ್ಯ ಮೊದಲಾದ ವಿಚಾರಗಳಲ್ಲಿ ಅನುಭವ ಹಾಗೂ ಸಿದ್ಧಿಯನ್ನು ಪಡೆದ ವಿದ್ವಾಂಸರ ಹಿರಿತನದಲ್ಲಿ ಆ ಯಜ್ಞಕಾರ್ಯವು ಪೂರೈಸಿತು. ಸಾವಿರಾರು ಬ್ರಾಹ್ಮಣರ ಮುಖದಿಂದ ಹೊರಹೊಮ್ಮುತ್ತಿದ್ದ ವೇದಘೋಷಗಳು ದಶ ದಿಕ್ಕುಗಳಿಗೂ ವ್ಯಾಪಿಸಿದ್ದವು. ಯಜ್ಞದೇವತೆಯ ದರ್ಶನಾಪೇಕ್ಷಿಗಳಾಗಿ ರಾಜರುಗಳೆಲ್ಲ ಸಾಲಾಗಿ ನಿಂತುಕೊಂಡಿದ್ದರು."

"ಯುವರಾಜ, ಯಾವುದನ್ನೂ ಅತಿಶಯೋಕ್ತಿಯಾಗಿ ಹೇಳುತ್ತಿಲ್ಲ. ಆ ಯಜ್ಞದ ರೂಪದಲ್ಲಿ ಪುಣ್ಯವೆಂಬುದು ಭೂತಲದಲ್ಲಿ ಅವತರಿಸಿದಂತಿದೆ." ಭೀಷ್ಮಾಚಾರ್ಯರು ನುಡಿದರು.

"ಅಬ್ಬಾ! ಈಗ ನಾನು ನಿಶ್ಚಿಂತನಾದೆ" ಎಂದು ಉದ್ಗಾರ ತೆಗೆದ

ಧೃತರಾಷ್ಟ್ರನು, "ನಿನ್ನ ಸಿಟ್ಟು ಹಾಗೂ ಸಂಶಯಯುಕ್ತವಾದ ಸ್ವಭಾವದಿಂದ ಆ ಯಜ್ಞವು ನಿನಗೆ ಹಿಡಿಸುವುದೋ ಇಲ್ಲವೋ ಎಂಬ ಹೆದರಿಕೆ ನನಗುಂಟಾಗಿತ್ತು. ನಿಮಗೆಲ್ಲ ಯಾವ ರೀತಿಯಿಂದಲೂ ತೊಂದರೆಯಾಗಲಿಲ್ಲವಷ್ಟೆ ?"

"ಒಂದು ವೇಳೆ ಆದರೂ ಸಹ ಏನು ಮಾಡುವುದು !"

ಭೀಷ್ಮ, ದ್ರೋಣ, ವಿದುರರು ಒಂದೇ ಸಲಕ್ಕೆ ದುರ್ಯೋಧನನತ್ತ ನೋಡಿದರು. ಆತನ ಮುಖದಲ್ಲಿ ವ್ಯಂಗತನದ ಛಾಯೆ ಎದ್ದು ಕಾಣುತ್ತಿತ್ತು.

"ಕೊರತೆ ಕಂಡುದು ನಮ್ಮ ಬಲದಲ್ಲಿಯೇ. ತಂದೆ, ಆ ಯಜ್ಞವನ್ನು ಪಾಂಡವರು ಪೂರೈಸಿದರಾದರೂ ಸಹ ಅದನ್ನು ಪಾರುಗಾಣಿಸಿದವರು ನಾವು. ಎಲ್ಲ ಜವಾಬುದಾರಿಯನ್ನೂ ನಮ್ಮ ಮೇಲೆಯೇ ಹಾಕಲಾಗಿತ್ತು. ಚಿಕ್ಕಪ್ಪ ವಿದುರರು ಖರ್ಚುವೆಚ್ಚಗಳ ಭಾರವನ್ನೆಲ್ಲ ನೋಡಿಕೊಂಡರು. ಪಿತಾಮಹ ಹಾಗೂ ಆಚಾರ್ಯರಿಗೆ ಸಮಾರಂಭದ ವಿಚಾರದಲ್ಲಿ ಹೆಚ್ಚು ಲಕ್ಷ್ಯವೀಯುವಂತೆ ಕೇಳಿಕೊಳ್ಳಲಾಗಿತ್ತು. ದುಶ್ಯಾಸನನು ಭೋಜನ ವಿಭಾಗವನ್ನು ನೋಡಿಕೊಳ್ಳುತ್ತಲಿದ್ದ. ಕೃಪಾಚಾರ್ಯರು ದಾನದಕ್ಷಿಣೆಗಳನ್ನೀಯುತ್ತಿದ್ದರು.

"ಹಾಗಾದರೆ ನಿನ್ನ ಕೆಲಸ ?"

"ನಾನು ಎಲ್ಲ ರಾಜರಿಂದ ಕೊಡಲ್ಪಟ್ಟ ಕಪ್ಪಕಾಣಿಕೆಗಳನ್ನು ಸ್ವೀಕರಿಸುವುದರಲ್ಲಿ ನಿರತನಾಗಿದ್ದೆ. ಬಂದ ಕಾಣಿಕೆಗಳನ್ನು ಸ್ವೀಕರಿಸುವುದರಲ್ಲಿಯೆ ನಾನು ಬಳಲಿ ಹೋಗಿದ್ದೆ."

ಮುಕ್ತ ಮನಸ್ಸಿನಿಂದ ಎಲ್ಲರೂ ನಕ್ಕರು.

"ಕರ್ಣ, ನಿನಗಾವ ಕಾರ್ಯವನ್ನು ವಹಿಸಿಕೊಟ್ಟಿದ್ದರು ?" ಎಂದು ಧೃತರಾಷ್ಟ್ರನು ವಿಚಾರಿಸಿದ.

"ನನಗಾವ ಕೆಲಸವೂ ಇರಲಿಲ್ಲ. ಆದುದರಿಂದ ಇವರೆಲ್ಲರಿಗಿಂತ ನಾನು ಯಜ್ಞ ಸಮಾರಂಭದ ಕಾರ್ಯದಲ್ಲಿ ಹೆಚ್ಚು ಭಾಗಿಯಾಗಿದ್ದೆ."

"ಮಹಾರಾಜ, ಕರ್ಣನು ನನ್ನ ಸ್ನೇಹಿತ ಎಂದು ಅಲ್ಲಿಗೆ ಹೋಗಿರಲಿಲ್ಲ. ಅಂಗದೇಶಾಧಿಪತಿ ಎಂದು ತಿಳಿದು ಆತನನ್ನು ಆಮಂತ್ರಿಸಲಾಗಿತ್ತು" ಎಂದು ದುರ್ಯೋಧನನು ತಿಳಿಸಿದ.

ವಿದುರನು ತುಂಬ ಸಂತೋಷಚಿತ್ತದಲ್ಲಿದ್ದ. ಆದುದರಿಂದ ಅವನು.

"ಮಗೂ ದುರ್ಯೋಧನ, ಇಂದು ನಾನು ತುಂಬ ಸಂತುಷ್ಟನಾಗಿರುವೆ. ನಿಮ್ಮ ಹಾಗೂ ಪಾಂಡವರ ಮಧ್ಯದಲ್ಲಿ ಬೆಳೆದ ಕಲ್ಮಷವೆಲ್ಲ ಈ ಯಜ್ಞ ಕಾರ್ಯದಿಂದಾಗಿ ದೂರವಾಯಿತು. ಯಜ್ಞವೇದಿಕೆಯಲ್ಲಿ ಲಭಿಸಿದ ತಾಪಸಿಗರ ದರ್ಶನ, ಅಲ್ಲಿಯ ಮಂತ್ರಶ್ರವಣ ಮೊದಲಾದುವುಗಳ ಪುಣ್ಯ ಲಭಿಸದೆ ಇರಲಾರದು."

ದುರ್ಯೋಧನನು ಇನ್ನೂ ಸ್ವಲ್ಪ ಮುಂದಕ್ಕೆ ಬಂದು ತನ್ನ ಕೈಯಲ್ಲಿದ್ದ ಕಂಠಾಭರಣವನ್ನು ಧೃತರಾಷ್ಟ್ರನ ತೊಡೆಯ ಮೇಲಿಡುತ್ತ.

"ಮಹಾರಾಜ, ನಾವು ಮರಳುವಾಗ ಯುಧಿಷ್ಠಿರನು ತಮಗಾಗಿ ಈ ಕಂಠಾಭರಣವನ್ನು ಕಳುಹಿಸಿದ್ದಾನೆ."

ನೀಲಮಣಿಗಳ ಮೇಲೆಲ್ಲ ಕೈಯಾಡಿಸುತ್ತ ಧೃತರಾಷ್ಟ್ರನು

"ಕಂಠಹಾರ ?"

"ಬೆಲೆ ಬಾಳುವ ನೀಲ ಮಣಿಯಿಂದ ಕೂಡಿದ ಕಂಠಾಭರಣವಿದು."

"ಆತನ ಪ್ರೇಮ ಅಂತಃಕರಣ ಇವೇ ಮೊದಲಾದವುಗಳು ಬೆಲೆಬಾಳು ವಂತಹ ಹಾರಗಳಾಗಿರುವಾಗ ಇದನ್ನು ಕಳಿಸುವ ಅಗತ್ಯವೇ ಇರಲಿಲ್ಲ."

"ತಂದೆ"

"ಹೇಳು ಮಗೂ"

"ಆ ಯಜ್ಞವನ್ನು ನೋಡಿ ಮರಳಿದಾಗಿನಿಂದ ನನ್ನ ಮನಸ್ಸಿನಲ್ಲಿಯೂ ಸಹ ಒಂದು ಅಪೇಕ್ಷೆಯಾಗಿದೆ."

"ಯಾವ ಅಪೇಕ್ಷೆಯಪ್ಪ"

"ಇಂಥ ರಾಜಸೂಯ ಯಾಗವನ್ನು ನಾವೂ ಮಾಡಬಹುದಲ್ಲವೆ ?"

ದ್ರೋಣಾಚಾರ್ಯರು ನಕ್ಕರು. ಆದರಿಂದ ದುರ್ಯೋಧನನು ಹಿಂದಕ್ಕೆ ತಿರುಗಿ ನೋಡಿದ. ಅವರು ತಮ್ಮ ಕೈಗಳನ್ನು ಮೇಲೆತ್ತಿ ಇನ್ನೂ ನಗುತ್ತಲೇ ಇದ್ದರು.

"ಗುರುಗಳೇ, ನನ್ನಿಂದ ಏನಾದರೂ ತಪ್ಪಾಯಿತೆ ?"

"ಯುವರಾಜ, ರಾಜಸೂಯ ಯಾಗ ಮಾಡಲು ನಿನಗೆ ಹೇಗೆ ತಾನೇ ಸಾಧ್ಯ ?"

"ಯಾಕೆ ?"

"ಧೃತರಾಷ್ಟ್ರ ಮಹಾರಾಜರು ಸಾಮ್ರಾಟರಾಗಿರುವಾಗ ಅಂಥ ಯಜ್ಞ ಮಾಡಲು ನಿನಗೆ ಅಧಿಕಾರ ಪ್ರಾಪ್ತವಾಗುವುದಿಲ್ಲ. ಈ ರಾಜಸೂಯ ಯಾಗವು ಸಾಮ್ರಾಜ್ಯ ಪಟ್ಟಕ್ಕಾಗಿ ಮಾಡುವ ಯಜ್ಞ ಎಂದೆನಿಸುವುದು."

"ಹೋಗಲಿ ಬೇರೊಂದು ಯಜ್ಞವನ್ನಾದರೂ ಮಾಡಬಹುದಲ್ಲವೇ ?"

"ಖಂಡಿತವಾಗಿಯೂ ಬರುತ್ತದೆ."—ಆಚಾರ್ಯರು ಒಪ್ಪಿಗೆಯನ್ನಿತ್ತರು.

"ದುರ್ಯೋಧನ, ಇಷ್ಟು ಅಲ್ಪಾವಧಿಯಲ್ಲಿ ಬೇರೊಂದು ಯಜ್ಞ ಕಾರ್ಯ ಮಾಡುವುದನ್ನು ಮನದಲ್ಲಿಯೂ ಸಹ ತರಬೇಡ" ಎಂದು ಭೀಷ್ಮರು ಹೇಳಿದರು.

"ಯಾಕೆ ?"

"ಈಗಾಗಲೇ ಎಲ್ಲರೂ ರಾಜಸೂಯ ಯಾಗಕ್ಕಾಗಿ ಕಪ್ಪಕಾಣಿಕೆಗಳನ್ನು ಕಳಿಸಿದ್ದಾರೆ. ಈಗ ಪುನಃ ಅವರ ಮೇಲೆ ಕರಭಾರ ಹಾಕುವುದು ಯೋಗ್ಯವೆನಿಸಲಾರದು."

ದುರ್ಯೋಧನನ ಮುಖದಲ್ಲಿ ವಿಚಿತ್ರ ಹಾಸ್ಯ ಕಾಣುವಂತಾಯಿತು. ಆತ ದ್ರೋಣಾಚಾರ್ಯರನ್ನು ಪ್ರಶ್ನೆ ಮಾಡಿದ.

"ಗುರುಗಳೇ, ತಾವು ರಾಜಸೂಯಯಾಗದ ಮೂಲೋದ್ದೇಶವೇನೆಂದು ಹೇಳಿದಿರಿ !"

"ಸಾಮ್ರಾಟ ಪದಪ್ರಾಪ್ತಿ."

"ಆ ಯಜ್ಞವನ್ನು ಪಾಂಡವರು ನೆರವೇರಿಸಿದರೇ ! ಹಾಗಾದರೆ ಸಾಮ್ರಾಟರ ಸಂಖ್ಯೆಯಾದರೂ ಎಷ್ಟು ?"

"ಸಾಮ್ರಾಟರೊಬ್ಬರೆ.'

"ಹಾಗಾದಲ್ಲಿ ಧೃತರಾಷ್ಟ್ರ ಮಹಾರಾಜರು ಯಾರು ? ಕರಭಾರವನ್ನು ಸ್ವೀಕರಿಸಿದ ಪಾಂಡವರ ಅಂಕಿತ ರಾಜರೇನು ?"

"ಯುವರಾಜ !"

"ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಿರಿ. ಗುರುಗಳೇ, ದಯಮಾಡಿ ಕೋಪಿಸಿಕೊಳ್ಳಬೇಡಿರಿ."

ಆ ಪ್ರಶ್ನೆಯಿಂದ ದ್ರೋಣಾಚಾರ್ಯರು ತಬ್ಬಿಬ್ಬಾದರು. ಅನಪೇಕ್ಷಿತ ವಾಗಿ ಬಂದ ಪ್ರಸಂಗವನ್ನೆದುರಿಸಲು ಅವರು ಚಿಂತಿತರಾದರು.

''ಯುವರಾಜ, ನಿಮಗೆ ತಪ್ಪು ತಿಳುವಳಿಕೆಯಾಗಿದೆ. ಪಾಂಡವ ವನದೊಂದಿಗೆ ಅರ್ಧರಾಜ್ಯವನ್ನು ಧೃತರಾಷ್ಟ್ರ ಮಹಾರಾಜರು ಈಗಾಗಲೇ ಅವರಿಗೆ ಹಂಚಿಕೊಟ್ಟಿದ್ದಾರೆ. ಆ ರಾಜ್ಯದ ಆಧಿಪತ್ಯಕ್ಕಾಗಿ ಅವರು ಯಜ್ಞ ವನ್ನು ಮಾಡಿದರು.''

''ಆದರೆ ಈ ಕಾರ್ಯಕ್ಕಾಗಿ ಯಾರು ಕೌರವರಿಗೆ ಏಕನಿಷ್ಠರು ಎಂದು ಕರೆಸಿಕೊಳ್ಳುತ್ತಿದ್ದರೋ ಅಂಥ ರಾಜರ ಮೇಲೆಲ್ಲ ದಂಡೆತ್ತಿ ಹೋಗಿ ಕರಭಾರ ವನ್ನು ವಸೂಲಿ ಮಾಡಲಾಯಿತು.''

''ಪವಿತ್ರವಾದ ಯಜ್ಞ ಕಾರ್ಯಕ್ಕೆಂದು ಅವರು ಕರಭಾರವನಿತ್ತಿ ದ್ದಾರೆ.'' ವಿದುರನು ಅದಕ್ಕೆ ಸ್ಪಷ್ಟೀಕರಣವನ್ನಿತ್ತನು.

"ವಿದುರ ಕಾಕಾ, ಕುಳಿತಲ್ಲಿಯೇ ಕುಳಿತು ನ್ಯಾಯ ನೀತಿಗಳ ವ್ಯಾಖ್ಯೆ ಹೇಳುತ್ತ ಹೋದರೆ ಅದು ಹೆಚ್ಚು ಅಭಿವೃದ್ಧಿಯಾಗಲಾರದು. ಕೆಲವು ಸಲ ಅನ್ಯಾಯದ ನೆರಳಿನಲ್ಲಿಯೇ ಅನೀತಿಯೂ ಸ್ವಚ್ಛಂದವಾಗಿ ತನ್ನತನ ವನ್ನು ಬೆಳೆಸಿಕೊಳ್ಳುತ್ತದೆ.''

''ಯುವರಾಜ, ಈ ಮಾತನ್ನು ಯಾರಿಗೆ ಹೇಳುತ್ತಿರುವೆ?'' ಧೃತ ರಾಷ್ಟ್ರನು ಕೇಳಿದ.

"ತಂದೆ, ಸ್ವಲ್ಪ ನಿಧಾನಿಸಿರಿ. ಶಾಂತಚಿತರಾಗಿ ನನ್ನ ಮಾತನ್ನು ಕೇಳಿರಿ" ಎಂದು ನುಡಿದು ವಿದುರನಲ್ಲಿಯೇ ನೆಟ್ಟ ದೃಷ್ಟಿಯನ್ನಿಟ್ಟು ತನ್ನ ಹಿಂದೆ ಕುಳಿತಿದ್ದ ಕರ್ಣನತ್ತ ಬೆರಳು ತೋರಿಸುತ್ತ "ಈ ಅಂಗರಾಜನ ಮೇಲೆ ಭೀಮನು ದಂಡೆತ್ತಿಹೋದ ಕಾರಣವೇನು? ಈ ಕೆಲಸವನ್ನು ಮಾಡು ವಾಗ ನನ್ನ ಗೆಳೆಯ ಅಲ್ಲದೆ ಕೌರವರ ಅಧೀನ ದೊರೆ ಎಂಬ ವಿಚಾರವಾದರೂ ಸಹ ಯಾರಿಗೂ ಇರಲಿಲ್ಲವೆಂದು ಭಾವಿಸಬೇಕೆ?" ಎಂದ.

"ಎಲ್ಲ ರಾಜರೂ ಕರಭಾರವನ್ನೀಯಬೇಕು ಯಾರೂ ವಿರೋಧ ವನ್ನು ಮಾಡಬಾರದು. ಈ ಮಾತನ್ನು ನಾವೇ ಹೇಳಿದ್ದೆವು. ಅಷ್ಟೇ ಅಲ್ಲ ಯಾರಾದರೂ ಆಜ್ಞಾಭಂಗ ಮಾಡಿದಲ್ಲಿ........"

ದ್ರೋಣಾಚಾರ್ಯರಿಗೆ ತಮ್ಮ ಮಾತನ್ನು ಪೂರ್ಣಗೊಳಿಸಲು ಸಾಧ್ಯ ವಾಗಲಿಲ್ಲ. ಮಧ್ಯದಲ್ಲಿಯೇ ದುರ್ಯೋಧನನು

"ಆಚಾರ್ಯರೆ, ನೀವು ನಿಮ್ಮ ಸಂದೇಶವನ್ನು ಕಳಿಸಿದಾಗ ಸಮಯವು ಮಿಂಚಿಹೋಗಿತ್ತು. ನಿಮ್ಮ ಸಂದೇಶವು ವಿಳಂಬವಾಗಿ ತಲುಪಿತು. ಆ ಅವಧಿಯೊಳಗಾಗಿ ಪಾಂಡವರು ಕೃಷ್ಣನು ಕಳುಹಿಸಿದ ಸೈನ್ಯಬಲದಿಂದ ಅರ್ಧ ರಾಜ್ಯವನ್ನೇ ಸ್ವಾಧೀನಪಡಿಸಿಕೊಂಡಿದ್ದರು. ತಮ್ಮ ಸಾಮರ್ಥ್ಯದಲ್ಲಿ ವಿಶ್ವಾಸ ವುಳ್ಳವರು, ಕೌರವ ಸಾಮ್ರಾಜ್ಯದಲ್ಲಿ ನಿಷ್ಠೆಯುಳ್ಳವರು ಇಂಥ ರಾಜರುಗಳು ಅಭಿಮಾನದಿಂದ ಖಡ್ಗ ಹಿರಿದು ಅವರನ್ನು ಎದುರಿಸಲು ನಿಂತಾಗ, ಅಂಥ ವೀರರು ಪರಾಜಿತರಂತೆ ಅಪಮಾನದ ಅವಹೇಳನವನ್ನು ಅನುಭವಿಸಬೇಕಾ ಯಿತು. ಪಾಂಡವರ ಆಜ್ಞಾನುಸಾರ ಯಜ್ಞದಲ್ಲಿ ಅವರು ಭಾಗಿಗಳಾಗ ಬೇಕಾಯಿತು. ಇಷ್ಟೆಲ್ಲ ನಡೆದುಹೋದರೂ ರಾಜಸೂಯ ಯಾಗವನ್ನು ಕೌರವರು ಇನ್ನು ಎಂದೂ ಮಾಡುವಂತಿಲ್ಲ."

ಭೀಷ್ಮರು ತುಂಬಾ ಸಂತಾಪಗೊಂಡರು.

"ಯುವರಾಜ, ಅಮಂಗಳ ವಿಚಾರಗಳಿಂದಾಗಿ ನಿನ್ನ ಮನಸ್ಸು ಕೆಟ್ಟು ಹೋಗಿದೆ. ಕೌರವ ಸಾಮ್ರಾಜ್ಯದ ಶ್ರೇಷ್ಠತೆ ಎತ್ತಿಹಿಡಿಯಲು ಯಜ್ಞದ ಅವಶ್ಯಕತೆ ಬೇಕಾಗಿಲ್ಲ. ಸಾಮ್ರಾಜ್ಯದ ಕೀರ್ತಿಯು ಅಮರವಾದುದು ಎಂಬುದನ್ನು ಎಲ್ಲರೂ ಬಲ್ಲವರಾಗಿದ್ದಾರೆ."

"ಈ ಸಾಮ್ರಾಜ್ಯವು ಅಷ್ಟೊಂದು ಕೀರ್ತಿಶಾಲಿಯಾದುದೇ ? ಎಂದು ಕೊಂಕು ಧ್ವನಿಯಿಂದ ನುಡಿದ ದುರ್ಯೋಧನನು "ನನಗೆ ಎಲ್ಲವೂ ಗೊತ್ತಿದೆ. ಇಂಥ ಅರ್ಥಹೀನವಾದ ಮಾತುಗಳಿಂದಲೇ ತಂದೆಯವರ ಮನವನ್ನು ರಮಿಸು ತ್ತಿರುವಿರಿ. ನಾನು ಅಂಧಪುತ್ರನಿರಬಹುದು. ನನಗೆ ಹೊರ ಜಗತ್ತಿನ ಆಗುಹೋಗುಗಳನ್ನು ಕಾಣಲು ಕಣ್ಣುಗಳಿವೆ. ಕಂಡದ್ದನ್ನು ಅರ್ಥ ಮಾಡಿ ಕೊಳ್ಳುವ ಚೈತನ್ಯವಿದೆ."

"ಯುವರಾಜ !" ಧೃತರಾಷ್ಟ್ರನು ಕೂಗಿದ.

"ತಂದೇ, ದಯಮಾಡಿ ನನ್ನನ್ನು ಕ್ಷಮಿಸಿರಿ. ರಾಜಸೂಯ ಯಾಗದಲ್ಲಿ ಅಗ್ರಪೂಜೆಯ ಮರ್ಯಾದೆಯನ್ನು ಕೃಷ್ಣನಿಗೆ ಸಲ್ಲುವಂತೆ ಮಾಡುವುದರಲ್ಲಿ ಈ ತಮ್ಮ ಪಿತಾಮಹರು ನಿರತರಾದಾಗ ಅವರ ಕುರು ರಾಜ್ಯದ ಅಭಿಮಾನವು ಎಲ್ಲಿ ಹೋಗಿತ್ತು ? ಕೌರವ ಸಾಮ್ರಾಜ್ಯದ ಯುವರಾಜನು ಅವರ ದೃಷ್ಟಿಗೇಕೆ ಬೀಳಲಿಲ್ಲ ? ಈ ಮಾತನ್ನು ನೀವು ಅವರಿಂದಲೇ ಕೇಳಿ ತಿಳಿದುಕೊಳ್ಳಿರಿ."

"ಅಗ್ರಪೂಜೆಯ ಮರ್ಯಾದೆಯನ್ನು ಬಲದಿಂದ ಅಳೆಯಲು ಸಾಧ್ಯವಿಲ್ಲ. ಆ ಅಧಿಕಾರವನ್ನು ಧಾರಣಮಾಡುವವನ ಸತ್ವಶಾಲಿಯಾದ ಗುಣಗಳೇ ಅದಕ್ಕೆ ಪೂರಕವಾಗಿರುತ್ತವೆ." ಈ ವಿಚಾರದಲ್ಲಿ ದ್ರೋಣಾಚಾರ್ಯರು ತಮ್ಮ ಅಭಿಮತವನ್ನು ತಿಳಿಸಿದರು,

"ಆ ಸಾತ್ವಿಕ ಗುಣಗಳನ್ನೆಲ್ಲ ನೀವು ಕೃಷ್ಣನಲ್ಲಿ ಕಂಡುಕೊಂಡಿರಲ್ಲವೆ? ಆಚಾರ್ಯವರ್ಯ, ಆ ಸಭೆಯಲ್ಲಿ ಕೃಷ್ಣನ ತಂದೆ ವಸುದೇವನೂ ಇದ್ದ, ಕೃಪಾಚಾರ್ಯರಿದ್ದರು, ಸ್ವತಃ ಭೀಷ್ಮಾಚಾರ್ಯರಂತಹ ಅನೇಕ ರಾಜರುಗಳಿದ್ದರು. ಅವರೆಲ್ಲರುಗಳ ಯೋಗ್ಯತೆ ತಮ್ಮ ಗಮನಕ್ಕೇಕೆ ಬರಲಿಲ್ಲ ?"

"ದುರ್ಯೋಧನ, ನೀನು ಆ ಮಹಾಪುರುಷನನ್ನು ಅರ್ಥಮಾಡಿಕೊಂಡಿಲ್ಲ ಅವನು ದೈವೀಗುಣ ಸಂಪನ್ನನಾಗಿದ್ದಾನೆ. ಆ ಮಹಾನುಭಾವನು ಭಗವತ್ ಸ್ವರೂಪಿಯಾಗಿದ್ದಾನೆ. ಈಶ್ವರನ ಅವತಾರವೇ ಅವನು" ಎಂದು ದ್ರೋಣರು ಭಕ್ತಿಪರವಶರಾಗಿ ಹೇಳಿದರು.

ದುರ್ಯೋಧನನ ವಿಕಟಾಟ್ಟಹಾಸವು ಆ ರಾಜಗೃಹವನ್ನೆಲ್ಲಾ ವ್ಯಾಪಿಸಿತು. ಆತನು ದ್ರೋಣರನ್ನು ಕುರಿತು,

"ಆಚಾರ್ಯರೇ, ತಾವು ಈ ಸಾಕ್ಷಾತ್ಕಾರವನ್ನು ಪಡೆದುದು ಯಾವಾಗ? ಇದು ತಮ್ಮ ಆತ್ಮಜ್ಞಾನ ಪ್ರತೀಕವೆಂದು ಭಾವಿಸಬೇಕೋ ಹೇಗೆ ? ಕೃಷ್ಣನು ಎಂದಿನಿಂದ ಭಗವದ್ರೂಪಿಯಾಗಿ ಕಂಡುಬಂದ ? ನಿಮ್ಮ ಹಾಗೂ ಪಿತಾಮಹರ ಪರಿಚಯ ಆತನಿಗೆ ಎಂದಿನಿಂದಿದೆ ? ಆತನ ಅಲೌಕಿಕ ಗುಣಗಳನ್ನು ಎಂದಿನಿಂದ ನೀವು ಕಂಡುಕೊಂಡಿರಿ ? ಶಿಶುಪಾಲನ ವಧೆಯಾದ ನಂತರವೇ ಇವೆಲ್ಲ ತಮ್ಮ ಗಮನಕ್ಕೆ ಬಂದಂತಿದೆ ಅಲ್ಲವೆ ?"

"ಹೌದು," ವಿದುರನು ಖಿನ್ನಮನಸ್ಸಿನಿಂದಲೇ ಉತ್ತರಿಸಿದ. "ಆ ಶಿಶುಪಾಲನೂ ಹೀಗೆಯೇ ಅಸಂಬದ್ಧನಾಗಿ ಮಾತನಾಡುತ್ತಿದ್ದ."

"ಆದುದರಿಂದಲೇ ಆತನನ್ನು ಎಲ್ಲ ರಾಜರ ಸಮಕ್ಷಮದಲ್ಲಿ ಸಂಹರಿಸಲಾಯಿತು. ಕಣ್ಣಿಟ್ಟು ಎಲ್ಲರೂ ಅದನ್ನು ನೋಡುತ್ತಿದ್ದರು "

"ನೀನು ವಿರೋಧಿಸಬಹುದಿತ್ತಲ್ಲ, ಯಾರಾದರೂ ನಿನ್ನನ್ನು ತಡೆದು ನಿಲ್ಲಿಸಿದ್ದರೆ ?" ಭೀಷ್ಮರು ಗುಡುಗಿದರು.

"ಯಾಕೆ ನಿಮಗೆಲ್ಲ ಮನಸ್ಸಿಗೆ ತುಂಬ ನೋವಾಯಿತೇ ! ಒಬ್ಬನಿಗೆ ಹೊಡೆತ ಬಿದ್ದುದನ್ನು ಕಂಡಾಗ ಇನ್ನೊಬ್ಬನು ಜಾಗೃತನಾಗಬೇಕಾದುದು ಧರ್ಮ. ನಾನು ಅಂಥ ಎಚ್ಚರಿಕೆ ವಹಿಸಿದುದೇ ನನಗೆ ಒಳಿತನ್ನು ಮಾಡಿತು. ಇಲ್ಲವಾದರೆ ನನಗೂ ಆ ಶಿಶುಪಾಲನ ಗತಿಯೇ ಕಾದಿರುತ್ತಿತ್ತು. ಪಿತಾಮಹರೇ, ನಾನು ವಿರೋಧ ಮಾಡದಿರಲು ಬಲವಾದ ಕಾರಣವಿದೆ. ಕೌರವರ ಅನ್ನವನ್ನು ತಿಂದು ಬದುಕಿದ ನೀವುಗಳೆಲ್ಲರೂ ಆ ಪಾಂಡವರ ಬೆಂಬಲಿಗರಾಗಿದ್ದಿರಿ."

"ದುರ್ಯೋಧನಾ !" ಸಂತಪ್ತರಾದ ಭೀಷ್ಮರು ಎದ್ದುನಿಂತರು.

"ಸುಮ್ಮನೆ ಕುಳಿತುಕೊಳ್ಳಿರಿ" ಅವರಷ್ಟೇ ಎತ್ತರದ ಧ್ವನಿಯಿಂದ ಅಬ್ಬರಿಸಿದ. "ಇದು ಪಾಂಡವರ ಸಭೆಯಲ್ಲ, ಕೌರವರ ಸಭೆ. ಸಾಮ್ರಾಜ್ಯದ ಯುವರಾಜನಿಗೆ ಉಪದೇಶ ಮಾಡುವವರ ಆಟ ಇಲ್ಲಿ ನಡೆಯಲಾರದು. ಪಾಂಡವರ ಬೆಂಬಲಿಗರು ಎಂದ ಮಾತ್ರಕ್ಕೆ ನಿಮ್ಮ ಕೋಪವು ಉಕ್ಕೇರಿತು. ಯಾವ ಅಧಿಕಾರದಿಂದ ನೀವು ಆ ಯಜ್ಞದಲ್ಲಿ ಭಾಗವಹಿಸಿದಿರಿ ಅದನ್ನಾದರೂ ಹೇಳುತ್ತೀರಾ ? ಸಾಮ್ರಾಟರಿಗೆ ಆಮಂತ್ರಣವನ್ನೀಯಲು ಇಲ್ಲಿಯವರೆಗೆ ಸ್ವತಃ ಯುಧಿಷ್ಠಿರನೇ ಬರಬೇಕಾಗಿತ್ತು. ಆದರೆ ಆಮಂತ್ರಣವನ್ನೀಯಲು ಬಂದವನು ನಕುಲ. ಬೇಕೆಂದೇ ಈ ಅವಮಾನ ಮಾಡಲಾಯಿತು. ಇದು ನಿಮಗಾದುದಲ್ಲ ; ಕೌರವ ಸಾಮ್ರಾಜ್ಯಕ್ಕಾದ ಅಪಮಾನ."

"ದುರ್ಯೋಧನಾ, ಶಾಂತನಾಗು, ಸಂಯಮವನ್ನು ಕಳೆದುಕೊಳ್ಳಬೇಡ." ಧೃತರಾಷ್ಟ್ರನು ಉಪದೇಶ ಮಾಡಿದ,

"ಸಂಯಮದ ಸೀಮಾರೇಖೆಯನ್ನು ದಾಟಿದವರು ಇವರೇ. ಅಂದ ಮೇಲೆ ಅದನ್ನು ನಾನು ಪಾಲಿಸುವುದೇನು ಬಂತು ! ಜರಾಸಂಧನು ಯಾವಾಗಲೂ ಕೌರವರ ಬೆಂಬಲಿಗನಾಗಿದ್ದ. ಯಾವನ ಪರಾಕ್ರಮವನ್ನು ಕಂಡು ಕೃಷ್ಣನೂ ತನ್ನ ಸೋಲನ್ನೊಪ್ಪಿ ದ್ವಾರಕೆಗೆ ಓಡಿಹೋಗಬೇಕಾಯಿತೋ, ಅಂಥ ಜರಾಸಂಧನನ್ನು ಒಬ್ಬಂಟಿಗನಾಗಿದ್ದಾಗ ಸಂಧಿಸಿ ಕಾಪಟ್ಯದಿಂದ ಅವನ ಸಂಹಾರವಾಗುವಂತೆ ಮಾಡಿದವನು ಆ ಕೃಷ್ಣನೆ. ಯಾವ ಶಿಶುಪಾಲನು ತನ್ನ ರಾಜ್ಯದಲ್ಲಿ ಭೀಮನಿಗೆ ಸ್ವಾಗತವನ್ನಿತ್ತು ಆದರದಿಂದ ಕರಭಾರವನ್ನಿತ್ತಿದ್ದನೋ

ಅಂಥವನು ತಾನಾಡಿದ ಸತ್ಯ ಮಾತುಗಳಿಗಾಗಿ ಪ್ರಾಣವನ್ನೇ ಅರ್ಪಿಸಿದ. ಅದನ್ನೆಲ್ಲ ನಮ್ಮ ಹಿರಿಯರು ನೋಡುತ್ತಲಿದ್ದರು. ಚೇದಿರಾಜನಾದ ಶಿಶುಪಾಲನ ಸಂಹಾರವನ್ನು ಕೌರವರ ಪ್ರತಿಷ್ಠೆಗಾಗಿಯೇ ಮಾಡಲಾಯಿತೇ? ಹಾಗಾದರೆ ಕೌರವ ಸಾಮ್ರಾಜ್ಯಕ್ಕಾಗಿ ರಕ್ತಸುರಿಸಲು ಸಿದ್ಧರಿದ್ದ ನಿಮ್ಮ ಈ ಮೂವರು ಆಪ್ತ ಸಲಹೆಗಾರರು ಚಕಾರವನ್ನೆತ್ತದೆ ಸುಮ್ಮನೆ ಕುಳಿತಿದ್ದರಲ್ಲ. ಭೀಮಸೇನನಿಂದ ಅಪಮಾನಿತರಾದ ನಮ್ಮ ರಾಜರುಗಳು ತಂದ ಕರಭಾರವನ್ನು ಈ ಕೌರವರ ಯುವರಾಜನು ಸ್ವೀಕರಿಸಿದ. ಅದನ್ನು ಕೌರವರ ಮಹಾಮಂತ್ರಿಯಾದ ಮಹಾತ್ಮ ವಿದುರನು ಪಾಂಡವರ ಪ್ರತಿಷ್ಠೆಯನ್ನು ಹೆಚ್ಚಿಸಲು ಖರ್ಚು ಮಾಡಿದ. ಧನ್ಯ! ಪಾಂಡವರ ಜೀವನವೇ ಧನ್ಯ! ಅವರ ಬುದ್ಧಿಮತ್ತೆಯೂ ಹೊಗಳುವಂತಹದೇ; ಕೌರವ ಶ್ರೇಷ್ಠರಿಂದ ತಮ್ಮ ರಾಜಸೂಯ ಯಾಗವನ್ನು ಪೂರೈಸಿಕೊಂಡ ಅವರು ನಿಜವಾಗಿಯೂ ಧನ್ಯರು. ತಂದೇ, ಆ ಪಾಂಡವರು ಮಾಡಿದ ಯಜ್ಞಕುಂಡದಲ್ಲಿ ಕೌರವ ಸಾಮ್ರಾಜ್ಯವು ದಹಿಸುತ್ತಿರುವುದನ್ನು ನಾನು ಕಂಡೆ."

"ದುರ್ಯೋಧನಾ, ಏನು ಮಾತನಾಡುತ್ತಿರುವೆ."

"ತಂದೇ, ಆ ದಾಹದಿಂದ ನನ್ನ ಕಣ್ಣೀರು ಎಂದೋ ಬತ್ತಿಹೋಗಿದೆ. ಆದರೆ ತಮ್ಮ ಕಣ್ಣಿಗಂತೂ ಎಂದೂ ಕಾಣಿಸದಂತಹದು. ಇಲ್ಲಿ ಕೂಡಿರುವ ಈ ನಿಮ್ಮ ಸಲಹೆಗಾರರ ನೇತ್ರಗಳು ಎಂದಿಗೂ ಅಶ್ರುಪೂರಿತವಾಗಿ ಮುಚ್ಚಲಾರವು. ಆ ಕೃಷ್ಣನಲ್ಲಿ ಮೋಹ, ಪಾಂಡವರಲ್ಲಿ ಪ್ರೀತಿ ಇವುಗಳಿಂದ ಪ್ರಮತ್ತರಾದ ಈ ಸ್ತುತಿಪಾಠಕರು ಎಂದೋ ಕೌರವ ಸಾಮ್ರಾಜ್ಯದ ಗೌರವವನ್ನು ರಸಾತಳಕ್ಕೆ ಮುಟ್ಟಿಸಿದ್ದಾರೆ. ನೀವು ಆ ಸಾಮ್ರಾಜ್ಯವು ಕುಸಿದು ಬೀಳುವುದನ್ನು ನೋಡಲಾರಿರಿ. ಅದೇ ನಿಮ್ಮ ಭಾಗ್ಯ, ಅದಕ್ಕಾಗಿ ನನಗೆ ಸಮಾಧಾನವೆನಿಸುತ್ತದೆ."

"ನಿಲ್ಲಿಸು, ದುರ್ಯೋಧನಾ ನಿಲ್ಲಿಸು. ಮನಬಂದಂತೆ ಮಾತನಾಡಬೇಡ. ಅನೇಕ ವಿಪತ್ತುಗಳನ್ನೆದುರಿಸಿಯೂ ಯಾವ ಪಿತಾಮಹರು ಈ ಸಾಮ್ರಾಜ್ಯವನ್ನು ರಕ್ಷಿಸಿಕೊಂಡು ಬಂದಿದ್ದಾರೆಯೋ, ತನ್ನ ಬುದ್ಧಿ ಸಾಮರ್ಥ್ಯದಿಂದ ಯಾವ ವಿದುರನು ಈ ರಾಜ್ಯದ ವೈಭವವು ಬೆಳೆಯುವಂತೆ ಮಾಡಿದ್ದಾನೆಯೋ, ಯಾವ ಆಚಾರ್ಯರು ತಮ್ಮ ಕೈಯಿಂದ ನಿಮಗೆಲ್ಲ ಶಸ್ತ್ರ ವಿದ್ಯೆ

ಕಲಿಸಿಕೊಟ್ಟು ಪರಿಣತರನ್ನಾಗಿ ಮಾಡಿದ್ದಾರೆಯೋ ಅಂಥ ಮಹಾನುಭಾವರ ವಿಷಯದಲ್ಲಿ ಇಂಥ ಅವಹೇಳನದ ಮಾತನಾಡುವುದೇ ?"

ದ್ರೋಣಾಚಾರ್ಯರೆಂದರು

"ಅಹುದು, ನಾವು ಸಾಮ್ರಾಜ್ಯವನ್ನು ಹಾಳುಮಾಡಿದೆವು."

"ನಿಜ, ನೀವೂ ಹಾಗೂ ನಿಮ್ಮ ಸದ್ಭಾವನೆಯೂ ಇದಕ್ಕೆಲ್ಲ ಕಾರಣ. ಒಬ್ಬರಂತೂ ಕುಲಪಿತಾಮಹರು, ಅವರಿಗೆ ನಾವಿಬ್ಬರೂ ಸರಿಸಮಾನರೇ. ಇನ್ನು ಎರಡನೆಯವರು ; ಅವರು ಮಹಾತ್ಮರು. ನಾವು ಅವರಿಗೆ ಸಮೀಪದಲ್ಲಿರುವುದರಿಂದ ನಮ್ಮ ದುರ್ಗುಣಗಳೇ ಅವರಿಗೆ ಹೆಚ್ಚಾಗಿ ಕಾಣಸಿಗುತ್ತವೆ. ಇನ್ನು ಪಾಂಡವರು ದೂರದಲ್ಲಿದ್ದಾರೆ, ಅವರು ಸದ್ಗುಣಿಗಳು. ಇನ್ನು ತಮ್ಮ ವಿಚಾರ. ತಾವಂತೂ ಯಾವಾಗಲೂ ಧರ್ಮನಿರ್ಣಯಕ್ಕಾಗಿಯೇ ಕುಳಿತಿರುತ್ತೀರಿ. ಈ ನಿಮ್ಮ ಮೂರು ಜನರಿಂದಲೇ ಸಾಮ್ರಾಜ್ಯವು ಕುಸಿದು ಬೀಳುವಂತಾಯಿತು.

"ಏನಾಗಿದೆ ಸಾಮ್ರಾಜ್ಯಕ್ಕೆ ?" ಭೀಷ್ಮರು ನಿಖರವಾಗಿ ಕೇಳಿದರು.

"ಏನಾಗಿದೆಯೇ ? ಒಂದುಸಲ ಕಣ್ತೆರೆದು ನೋಡಿರಿ. ಶ್ರಾದ್ಧಪಕ್ಷಗಳಿಗೆ ಪಿಂಡಗಳನ್ನಿಡುವಂತೆ ಸಾಮ್ರಾಜ್ಯವು ತಂಡು ತುಂಡಾಗಿ ಹೋಗಿದೆ ನನ್ನ ವಿರೋಧವನ್ನು ಮನ್ನಿಸದಿದ್ದರೂ ಚಿಂತೆಯಿಲ್ಲ. ತಂದೆಯವರನ್ನು ಅರಮನೆಯಲ್ಲಿ ಕೂಡಿಸಿ ಆ ಯುಧಿಷ್ಠಿರನಿಗೆ ರಾಜಮುಕುಟವನ್ನಿಟ್ಟಿದ್ದರೂ ಸಾಮ್ರಾಜ್ಯವು ಏಕತ್ರವಾಗಿಯಾದರೂ ಉಳಿಯಬಹುದಿತ್ತಲ್ಲ. ಸ್ವತಃ ನೀವುಗಳೇ ಕುಳಿತು ಭೇದಭಾವನೆ ಹುಟ್ಟಿಸಿ ನಂತರ ಹಳಹಳಿಸುವುದು ವಿಹಿತವೆ ?"

"ಸಂಘರ್ಷವಾಗದಂತೆ ನೋಡಿಕೊಳ್ಳಬೇಕಾಗಿದ್ದಲ್ಲಿ ನಮಗೆ ಬೇರೆ ಮಾರ್ಗವೇ ಇರಲಿಲ್ಲ. ಯಾರಿಗೆ ಬೇಕಾಗಿತ್ತು ಈ ರಾಜ್ಯವನ್ನು ತುಂಡರಿಸುವುದು ?" ವಿದರನು ಹೇಳಿದ.

"ರಾಜ್ಯವನ್ನು ಹಂಚಿಕೊಟ್ಟ ಮಾತ್ರಕ್ಕೆ ತೃಪ್ತರಾಗುವುದಿಲ್ಲ. ಇನ್ನು ನಿಮಗೆ ಈ ಕುರು ಸಾಮ್ರಾಜ್ಯದ ಪ್ರತಿಷ್ಠೆಯ ಪ್ರತೀಕವಾದ ಈ ಹಸ್ತಿನಾವತಿಯು ಶತ್ರುಗಳಿಗೆ ಭಯಭೀತಿಯನ್ನು ಹುಟ್ಟಿಸಬಹುದು ಎಂದು ನಿಮಗನ್ನಿಸಬಹುದು. ಆದರೆ ವೀರರಿಗೆ ಆಹ್ವಾನವನ್ನೀಯುವಂತಿದ್ದ ಈ ನಗರ

ವನ್ನು ನೀವು ನಿಸ್ತೇಜವಾಗುವಂತೆ ಮಾಡಿದಿರಿ. ಯಾವ ಮಹಾನಗರದಲ್ಲಿ ಶಸ್ತ್ರ ವಿದ್ಯಾಪಾಠಗಳು ನಡೆಯುತ್ತಲಿದ್ದವೋ, ರಾಜ್ಯ ಸಂರಕ್ಷಣೆಗಾಗಿ ವೀರರನ್ನು ತಯಾರಿಸಲಾಗುತ್ತಿತ್ತೋ, ಯಾವ ನೆಲವನ್ನು ನಿಜವಾಗಿಯೂ ವೀರಗರ್ಭಾ ಎಂದು ಕರೆಯುತ್ತಿದ್ದೆವೋ ಅಂಥ ಆಶ್ರಮಗಳೆಲ್ಲ ಇಂದು ನಿಮ್ಮ ಜ್ಞಾನಸತ್ರಗಳಾಗಿ ಪರಿವರ್ತನೆಗೊಂಡಿವೆ. ಹೊಸ ಹೊಸ ರಥಗಳನ್ನು ನಿರ್ಮಿಸುವುದರ ಬದಲಾಗಿ ನಮ್ಮ ನುರಿತ ಕೆಲಸಗಾರರು ಶತ್ರುಗಳ ಮನೆಯನ್ನು ಶೃಂಗಾರ ಮಾಡುವಂತೆ ನೋಡಿಕೊಂಡಿರಿ. ನಮ್ಮ ಮದೋನ್ಮತ್ತ ಆನೆಗಳ ಗುಂಪು ಸುವರ್ಣದ ಅಂಬಾರಿಯನ್ನು ಹೊತ್ತುಕೊಂಡು ರಣಭೂಮಿಯಲ್ಲಿ ಗರ್ಜಿಸುತ್ತ ತಿರುಗಾಡುವುದರ ಬದಲು ಆ ಗಜೇಂದ್ರಗಳಿಂದ ಕಾಡಿನಲ್ಲಿ ಮರದ ತುಂಡುಗಳನ್ನೆಳೆಯುವಂತೆ ಮಾಡಿಸಿದಿರಿ. ಶಾಂತಿಯ ನೆಪದಲ್ಲಿ ನಿಮ್ಮ ಸಾಮ್ರಾಜ್ಯವು ಚಿರಶಾಂತಿಯ ಮಾರ್ಗವನ್ನೇ ಹಿಡಿಯುವಂತಾಗಿದೆ ಯಾಕೆ, ಈ ಚಿತ್ರಗಳೆಲ್ಲ ನಿಮಗೆ ಕಾಣಬರುವುದಿಲ್ಲವೆ ?"

"ಇದಕ್ಕೇನು ಉಪಾಯ?" ಕಂಪಿತ ಸ್ವರದಲ್ಲಿ ಕೇಳಿದ ಧೃತರಾಷ್ಟ್ರ.

"ಅದನ್ನೇ ಹುಡುಕುತ್ತಲಿದ್ದೇನೆ" ದುರ್ಯೋಧನನು ಹೇಳಿದ.

"ಯಾವದು ಉಪಾಯ ?"

"ಆತ್ಮಘಾತ"

"ಆತ್ಮಘಾತ ;" ಧೃತರಾಷ್ಟ್ರನು ಉದ್ವೇಗಗೊಂಡ.

"ಹೌದು. ಆತ್ಮಘಾತ, ಅದರ ವಿನಃ ಬೇರೆ ಮಾರ್ಗವೇ ಇಲ್ಲ. ಅಂಥ ವಿಚಾರಗಳು ಮನದಲ್ಲಿ ಮೂಡಿಬಂದುದರಿಂದ, ಅದನ್ನು ಹೊರಗೆಡಹಿಸುವುದರಿಂದ ಅದನ್ನೇ ಉಚ್ಚರಿಸಬೇಡಿರಿ. ಈ ನಿಮ್ಮ ವಿಶ್ವಸನೀಯ ರಾಜಸಭೆಯಲ್ಲಿ ನಾವಾಡಿದ ಪ್ರತಿಯೊಂದು ಮಾತುಗಳೂ ಪಾಂಡವರ ಮಹಲಿನಲ್ಲಿ ಪ್ರತಿಧ್ವನಿಗೊಳ್ಳುತ್ತವೆ. ನಿಮ್ಮ ಪಕ್ಷದವರು ಇಲ್ಲಿ ಯಾರೂ ಇಲ್ಲ. ಯಾವ ಕಾರಣಕಾಗಿ ನೀವು ನನ್ನ ಮೇಲೆ ಕೋಪಿಸಿಕೊಳ್ಳುತ್ತೀರೊ ಆ ಕಾರಣವನ್ನೂ ಇಂದು ಹೇಳುತ್ತೇನೆ ಕೇಳಿರಿ. ಎಂದು ಈ ರಾಜ್ಯವನ್ನು ಒಡೆದು ಎರಡು ಭಾಗ ಮಾಡುವುದೆಂಬುದು ನಿಶ್ಚಯವಾಯಿತೋ, ಯಾವಾಗ ಅದನ್ನು ತಪ್ಪಿಸಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯು ಪ್ರಾಪ್ತವಾಯಿತೋ ಅಂದೇ ನಾನು ನಿಶ್ಚಯಿಸಿದೆ. ನಾನೇ ಪಾಂಡವರನ್ನು ಅರಗಿನ ಅರಮನೆಯಲ್ಲಿ

ಹಾಕಿ ಸುಡಿಸುವ ವ್ಯವಸ್ಥೆ ಮಾಡಿದೆ. ಪುರೋಚನನಿಂದ ಆ ಲಾಕ್ಷಾಗಾರ ವನ್ನು ನಿರ್ಮಿಸಿದೆ. ಆದರೆ ಪಾಂಡವರು ಯಾವ ಘಳಿಗೆಯಲ್ಲಿ ಆ ಗೃಹವನ್ನು ಪ್ರವೇಶಮಾಡಿದರೋ ಅಂದೇ ಅವರನ್ನು ಎಚ್ಚರಿಸುವಂತಹ ವ್ಯವಸ್ಥೆಯೂ ಈ ನಿಮ್ಮ ಮಹಲಿನಿಂದಲೇ ಅವರಿಗೆ ತಲುಪಿತು."

"ಯುವರಾಜ''

ವಿದುರನು, ಕಸಿವಿಸಿಯಾಗಿದ್ದ. ಆತನನ್ನೇ ದುರುಗುಟ್ಟಿಕೊಂಡು ನೋಡುತ್ತಲಿದ್ದ. ಧುರ್ಯೋಧನನು,

"ಕಾಕಾ, ನಿಮಗೆ ನಾನು ಏನನ್ನೂ ಅನ್ನಲಿಲ್ಲ. ನನ್ನ ಯೋಜನೆ ಯಂತೆಯೇ ಆ ಅರಗಿನ ಮನೆ ಸುಟ್ಟುಹೋಯಿತು. ಆದರೆ ಮನೆಮುರುಕರ ಸಹಕಾರದಿಂದ ಪಾಂಡವರು ಅದರಿಂದ ಉಳಿದುಕೊಂಡರು. ಗಾಡಾಂಧ ಕಾರದ ರಾತ್ರಿಯಲ್ಲಿ ಪಾಂಡವರನ್ನು ಸಾಗಿಸಲು ಗಂಗಾ ತಟಾಕದಲ್ಲಿ ನೌಕೆ ಸುಸಜ್ಜಿತವಾಗಿತ್ತು. ನಿಮ್ಮ ವಿದುರ ಮಹಾರಾಜರು ತಮ್ಮ ಜ್ಞಾನ ಚಕ್ಷು ಗಳಿಂದ ಭೂತ ಭವಿಷ್ಯತ್ತಿನ ವರ್ತಮಾನಗಳನ್ನೆಲ್ಲ ನೋಡುತ್ತಲಿದ್ದರು. ಆ ಶಕ್ತಿ ನನಗಿಲ್ಲವಾದರೂ ನಾನು ಯುವರಾಜನಾಗಿರುವೆ. ನನ್ನ ದೃಷ್ಟಿ ಗರುಡನಂತೆ ಬಹು ತೀಕ್ಷ್ಣ. ಯಾವಾಗ ಆ ಪಕ್ಷಿಯು ತನ್ನ ಕೆಲಸದಲ್ಲಿ ತೊಡಗುತ್ತದೆಯೋ ಆಗ ಅದಕ್ಕೆ ನಿಶ್ಚಿತವಾದ ಹಿಡಿತವೂ ದೊರೆಯುತ್ತದೆ. ತಂದೆ, ನಾನು ಇನ್ನು ಬರುತ್ತೇನೆ."

''ಹೊರಡುವಿಯಾ. ಎಲ್ಲಿಗೆ ?

''ಬೇಕಾದಲ್ಲಿ, ಆದರೂ ಈ ನೆಲದಿಂದ ಬಹು ದೂರ. ಎಲ್ಲಿ ಮಾನವಂತ ನಾಗಿ ಬಾಳಲು ಸಾಧ್ಯವೋ, ಯುವರಾಜಪದವಿಯನ್ನು ಮೆರೆಸುವಂತಹ ಯಾವ ತಾಣವಿದೆಯೋ ಅಲ್ಲಿಗೆ ಹೋಗುವೆ. ಪಾಂಡವರು ಬಿಸಾಡಿದ ಭಿಕ್ಷೆಯನ್ನೇ ಸಾಮ್ರಾಜ್ಯವೆಂದು ಭಾವಿಸಿ ಬದುಕಿಕೊಂಡಿರುವ ವ್ಯಕ್ತಿಯು ನಾನಲ್ಲ.''

ಧೃತರಾಷ್ಟ್ರನು ತುಂಬ ವ್ಯಾಕುಲಗೊಂಡಿದ್ದ. ಆತನು ತನ್ನ ಕೈಯ್ಯ ಲ್ಲಿದ್ದ ಕಂಠಾಹಾರವನ್ನು ಮೇಲಿಂದ ಮೇಲೆ ಅದುಮುತ್ತಲಿದ್ದ.

''ತಂದೆ, ಈ ಕಂಠಾಹಾರವು ನೀಲಮಣಿಗಳಿಂದ ಮಾಡಿದುದಾಗಿದೆ. ಇದರಲ್ಲಿ ಜಾತಿವಂತ ನೀಲಮಣಿಗಳಿವೆ. ನೀವು ಈ ಹಾರವನ್ನು ಅವಶ್ಯ ವಾಗಿ ಧರಿಸಿರಿ. ನಾಗಫಣಿಯ ನೇತ್ರಗಳಂತೆ ಆ ಮಣಿಗಳು ನಿಮಗೆ ಹೆಚ್ಚು

ಶೋಭೆಯನ್ನುಂಟುಮಾಡುತ್ತವೆ. ನೀಲಮಣಿಗಳ ಫಲವನ್ನು ಪರೀಕ್ಷಿಸಲು ಹೆಚ್ಚು ಸಮಯ ಕಾಯಬೇಕಾಗುವುದಿಲ್ಲ. ಒಂದೊವರೆ ಪ್ರಹರ ಅಥವಾ ಒಂದೂವರೆ ದಿನ ಇಲ್ಲವೆ ಏಳು ದಿನಗಳಲ್ಲಿ ಅದು ತನ್ನತನವನ್ನು ಹೊರಗೆಡಹುತ್ತದೆ. ಈಗ ಸಾಮ್ರಾಜ್ಯವಂತೂ ಇಲ್ಲ. ಇನ್ನು ಅದು ಬರುವುದಾದಲ್ಲಿ ಈ ನೀಲಕಂಠಾಭರಣದಿಂದಲೇ ಮರಳಿ ಬಂದೀತು. ಆದುದರಿಂದ ನೀವು ಆವಶ್ಯವಾಗಿ ಅದರ ಪರೀಕ್ಷೆ ಮಾಡಿರಿ. ಇನ್ನು ನಾನು ಬರುತ್ತೇನೆ.''

ದುರ್ಯೋಧನನು ಹೊರಡಲು ಸಿದ್ಧನಾದಾಗ ಕರ್ಣನೂ ಆತನನ್ನು ಅನುಸರಿಸಿಕೊಂಡು ಹೋದ.

ಕರ್ಣ ದುರ್ಯೋಧನರಿಬ್ಬರೂ ಹೊರಟುಹೋದ ನಂತರ ಸಭೆಯಲ್ಲಿ ಶಾಂತತೆ ಪಸರಿಸಿತು. ಏನು ಮಾತನಾಡಬೇಕು ಎಂಬ ಪ್ರಜ್ಞೆ ಯಾರಲ್ಲಿಯೂ ಇರಲ್ಲಿಲ್ಲ. ಅದನ್ನೆಲ್ಲ ಸಾವರಿಸಿಕೊಂಡು ವಿದುರನು ಹೇಳಿದ.

''ಅಸಾಧ್ಯ ಸಂತಾಪ, ಅಸಂಯಮ, ಇಂಥ ವರ್ತನೆಗಳ ಪರಿಣಾಮ...."

''ವಿದುರಾ ನಿಲ್ಲು, ಇನ್ನು ಏನೂ ಹೇಳಬೇಡ"

ಧೃತರಾಷ್ಟ್ರನ ಧ್ವನಿ ಗಡುಸಾಗಿತ್ತು. ಅವನು ಥರಥರ ನಡುಗುತ್ತಲಿದ್ದ. ಕೆಲವು ಸಮಯ ಅವನ ತುಟಿಗಳು ಅಲುಗಾಡುತ್ತಲಿದ್ದವು. ಅಂಥ ಸ್ಥಿತಿಯಲ್ಲಿಯೇ ಅವನು,

''ಒಂದುಸಲ ವಾದರೂ ಸತ್ಯವನ್ನು ಹೇಳಬಾರದೆ ?''

ಕೈಲಿದ್ದ ನೀಲಮಣಿಯನ್ನು ಬಿಸಾಡಿದ. ಕುರುಡುಗಣ್ಣುಗಳಿಂದ ಬಿಸಾಡಿದ ಆ ರತ್ನಾಹಾರವು ದೂರದಲ್ಲಿ ಬಿದ್ದುಬಿಟ್ಟಿತು. ಧಡಬಡಿಸುತ್ತ ಧೃತರಾಷ್ಟ್ರನು ನಡೆಯಲಾರಂಭಿಸಿದ. ಆತನನ್ನು ಹಿಡಿದುಕೊಳ್ಳಲು ದಾಸಿಯರು ಧಾವಿಸಿ ಬಂದರು.

## 18

ಮರುದಿನ ಸಾಯಂಕಾಲದ ಸಮಯದಲ್ಲಿ ದುರ್ಯೋಧನನ ಅರಮನೆಗೆ ಶಕುನಿ ಹಾಗೂ ಕರ್ಣ ಇಬ್ಬರೂ ಆಗಮಿಸಿದ್ದರು. ದುರ್ಯೋಧನನ ಕೋಪವು ಇನ್ನೂ ಶಾಂತವಾಗಿರಲಿಲ್ಲ. ಅವನು ಕರ್ಣನಿಗೆ ಹೇಳಿದ.

"ಮಿತ್ರಾ ನಿನ್ನ ಚಂಪಾನಗರದಲ್ಲಿ ನನಗೆ ಆಶ್ರಯ ದೊರೆಯಬಹುದೇ?"

"ಯುವರಾಜ, ರಾಜ್ಯವೇ ನಿಮ್ಮದು, ಹೀಗಿರುವಾಗ ಆಶ್ರಯವನ್ನು ಹುಡುಕಬೇಕಾದ ಆವಶ್ಯಕತೆ ಇಲ್ಲ. ಸಿಟ್ಟಿನ ಭರದಲ್ಲಿ...."

"ಈ ಮಾತನ್ನು ನಾನು ಸಂತಾಪಗೊಂಡು ಹೇಳುತ್ತಿಲ್ಲ. ಈ ನಗರದಲ್ಲಿ ಮನಸ್ಸೇ ನಿಲ್ಲದಂತಾಗಿದೆ,"

"ಈ ವೈರಾಗ್ಯದ ಮಾತನ್ನೇಕೆ ಆಡುವಿ." ಶಕುನಿ ನಿಧಾನವಾಗಿ ನುಡಿದ.

"ಇನ್ನೇನಾಗಬೇಕು, ನಿನ್ನೆ ನಡೆದುದೆಲ್ಲವನ್ನೂ ಕೇಳಿರುವೆಯಷ್ಟೆ ?"

"ಗೊತ್ತಾಗಿದೆ. ರಾಜಗೃಹದಲ್ಲಿ ಎಲ್ಲಿ ನೋಡಿದರೂ ನಿನ್ನೆಯ ಮಾತಿನ ಚರ್ಚೆಗಳೇ ನಡೆದಿವೆ."

"ಈ ಮಾತುಗಳು ಅಖಂಡವಾಗಿ, ಸಾರೋದ್ಧಾರವಾಗಿ ಸಾಗಿದರೂ ಅವರಿಂದ ನನಗಾಗಬಹುದಾದ ಪ್ರಯೋಜನವೇನು ?" ದುರ್ಯೋಧನನು ಮತ್ತಷ್ಟು ವ್ಯಗ್ರಚಿತ್ತನಾಗಿ ನುಡಿದ. "ಇತ್ತೀಚಿನ ದಿನಗಳಲ್ಲಿ ನಾನು ನಿದ್ರೆಯನ್ನೇ ಕಳೆದುಕೊಂಡಿದ್ದೇನೆ. ಕನಸಿನಲ್ಲಿಯೂ ಸಹ ಆ ಯಜ್ಞ ಹಾಗೂ ಆ ಮಯಸಭೆ ಇವುಗಳೇ ಕಾಣಿಸಿಕೊಳ್ಳುತ್ತವೆ. ಮಾವಾ, ಈ ಅನರ್ಥಗಳಿಗೆಲ್ಲ ನೀವೇ ಕಾರಣರು "

"ನಾನು ಕಾರಣನೇ ? ಇದೊಳ್ಳೇ ನ್ಯಾಯ...."

"ಹೌದು ನೀವೇ ಕಾರಣರು. ಆ ರಾಜಸೂಯ ಯಾಗಕ್ಕೆ ಹೋಗಬಾರದೆಂದು ನಾನು ನಿಶ್ಚಯಿಸಿದ್ದೆ. ಆದರೆ ನೀವು ಸಾಧ್ಯವಿಲ್ಲ, ಹೋಗಲೇಬೇಕೆಂದು ಅಗ್ರಹಪಡಿಸಿದಿರಿ. ಅದರಿಂದಾಗಿಯೇ ನಾನು ಅಪಮಾನವನ್ನು ಅನುಭವಿಸಬೇಕಾಗಿ ಬಂದಿತು. ಕಣ್ಮರೆಯಲ್ಲಿ ಏನೆಲ್ಲ ನಡೆದು ಹೋದರೂ ಅಷ್ಟೊಂದು ದುಃಖವೆನಿಸುವುದಿಲ್ಲ."

"ಶಾಂತನಾಗು ದುರ್ಯೋಧನ, ಶಾಂತನಾಗು." ಎಂದು ಶಕುನಿಯು ಮೃದುವಾಗಿ ಹೇಳಿದ. "ನಿನ್ನ ಸಂತಾಪಕ್ಕೆ ಕಾರಣವೇನೆಂಬುದನ್ನು ನಾನು ಬಲ್ಲೆ. ಆದರೆ ನೀನು ಸತ್ಯವನ್ನು ನಿರ್ಲಕ್ಷಿಸುತ್ತೀ. ರಾಜಸೂಯ ಯಾಗಕ್ಕೆ ಹೋಗದಿದ್ದಲ್ಲಿ ನೀನು ಬರಲಿಲ್ಲ ಎಂದು ಅದನ್ನು ನಿಲ್ಲಿಸಲಾಗುತ್ತಿತ್ತೇ ? ಶತ್ರು ಪಕ್ಷವನ್ನು ಅರಿಯಬೇಕಾದವರು ಕಣ್ಣು ಮುಚ್ಚಿ ಸುಮ್ಮನೇ ಕುಳಿತರೆ ಪ್ರಯೋಜನವಾಗದು. ಅದನ್ನು ತೆರೆದ ಕಣ್ಣಿಂದ, ಶಾಂತ ಮನಸ್ಸಿನಿಂದ ನೋಡಿ ತಿಳಿದುಕೊಳ್ಳಬೇಕು. ರಾಜಸೂಯ ಯಾಗದಲ್ಲಿ

ಅವರು ತೋರಿಸಿದ ಅಧಿಕಾರದರ್ಪವು ನಿನಗೆ ಹಿಡಿಸಲಿಲ್ಲ. ಇಂದಿನವರೆಗೆ ಯಾರು ಕೌರವರಿಗೆ ನತಮಸ್ತಕರಾಗಿರುತ್ತಿದ್ದರೋ ಅಂಥವರೆಲ್ಲ ಯುಧಿಷ್ಠಿರನ ಮೇಲೆ ಹೂವಿನ ಮಳೆಗರೆಯುತ್ತಿದ್ದರು. ಅಧಿಕಾರದ ಬಲ; ಸೇಡಿನ ಬಯಕೆಗಳಿರದಿದ್ದಲ್ಲಿ ಅವರು ಮಯಸಭೆಯಲ್ಲಿ ನಿನ್ನನ್ನು ಹಾಗೂ ನನ್ನನ್ನು ಹಾಗೆ ಅವಮಾನಗೊಳಿಸುತ್ತಿರಲಿಲ್ಲ. ದುರ್ಯೋಧನ. ಯುಧಿಷ್ಠಿರನು ರಾಜಸೂಯ ಯಾಗವನ್ನು ಮಾಡಿ ನಿಮ್ಮ ಕೌರವ ಸಾಮ್ರಾಜ್ಯಕ್ಕೆ ಆಹ್ವಾನವನ್ನಿತ್ತಿದ್ದಾನೆ."

"ಕೌರವರ ಬಾಹುಬಲದ ಅರಿವು ಇನ್ನೂ ಅವರಿಗೆ ಗೊತ್ತಾದಂತಿಲ್ಲ."

"ಬಾಹುಬಲ! ನಿಜ. ಯಾರದು ಆ ಬಾಹುಬಲ? ಯುಧಿಷ್ಠಿರನ ಮೇಲೆ ಛತ್ರಚಾಮರಗಳನ್ನು ಹಿಡಿಯಲಾಯಿತು. ಸಕಲ ರಾಜವೈಭವಗಳೊಂದಿಗೆ ಎಲ್ಲ ರಾಜರೂ ಪಾಂಡವರಿಗೆ ತಮ್ಮ ವಂದನೆಗಳನ್ನು ಸಲ್ಲಿಸಿದರು. ಪಿತಾಮಹರು ತಮ್ಮ ಅಗ್ರಪೂಜೆಯನ್ನು ಕೃಷ್ಣನಿಗೆ ಕೊಟ್ಟು ಗೌರವಿಸಿದರು. ಇಲ್ಲ ದುರ್ಯೋಧನ, ಒಲವು ಪಾಂಡವ ಪಕ್ಷದ ಮೇಲಿದೆ."

ಕರ್ಣನು ಶಾಂತ ರೀತಿಯಲ್ಲಿ ನುಡಿದ. "ಶಕುನೀ ಮಹಾರಾಜರೇ. ತಾವು ಒಂದು ಮಾತನ್ನು ಮಾತ್ರ ಮರೆತು ಬಿಟ್ಟಿರಿ. ಆ ಯಜ್ಞದಿಂದ ಸ್ಫೂರ್ತಿಯನ್ನು ಪಡೆದಿರಬಹುದು. ಆದರೆ ಅಷ್ಟರಿಂದಲೇ ಕೌರವರು ಕಡಿಮೆಯವರು ಎಂದು ಹೇಳುವ ಕಾರಣವೇನೂ ಇಲ್ಲ. ಭೀಷ್ಮರು ಕೃಷ್ಣನಿಗೆ ಅಗ್ರಪೂಜೆಯನ್ನಿತ್ತಿರಬಹುದು ಅಥವಾ ದ್ರೋಣರು ಯಜ್ಞವನ್ನು ಸಾಂಗಗೊಳಿಸಲು ಕಾರಣರಾಗಿರಬಹುದು. ಇಷ್ಟು ಮಾತ್ರದಿಂದ ನಾವು ಭಯಭೀತರಾಗಬೇಕಾದ ಕಾರಣವಿಲ್ಲ. ಒಂದು ವೇಳೆ ಪ್ರಸಂಗವು ಕೈಗೂಡಿ ಬಂದಲ್ಲಿ ನಾಳೆ ಇದೇ ಭೀಷ್ಮಾಚಾರ್ಯರು, ದ್ರೋಣಾಚಾರ್ಯರು, ವಿದುರ ಮೊದಲಾದವರೆಲ್ಲ ತಮ್ಮ ಪ್ರಾಣವನ್ನು ಬದಿಗಿಟ್ಟು ನಮ್ಮ ಪಕ್ಷದಲ್ಲಿ ಸೇರಿಕೊಂಡಾರು. ಈ ವಿಚಾರದಲ್ಲಿ ನಾನು ಸ್ವಲ್ಪವೂ ಸಂಶಯ ತಾಳಲಾರೆ. ಸಾಮ್ರಾಟ ಧೃತರಾಷ್ಟ್ರ ಮಹಾರಾಜರ ಒಂದು ಅಜ್ಞೆಯಿಂದ...."

ಶಕುನಿಯು "ಕರ್ಣ, ನೀನು ತುಂಬ ಚಿಕ್ಕವನು, ಇಂಥ ಆಸೆಗಳನ್ನಿಟ್ಟುಕೊಳ್ಳುವುದು ಎಂದಿಗೂ ವಿಹಿತವಲ್ಲ. ನಿನಗೆ ಇದೆಲ್ಲ ತಿಳಿಯದು. ಕೌರವ

ಸಾಮ್ರಾಟರು ಕುರುಡರು. ರಾಜಮಾತೆಯೂ ಪತಿನಿಷ್ಠಳು. ಆದುದರಿಂದ ಅವಳು ತನ್ನ ಕಣ್ಣಿಗೆ ಪಟ್ಟಿಯನ್ನು ಕಟ್ಟಿಕೊಂಡಿದ್ದಾಳೆ."

"ಹಾಗೆಂದರೆ ಕೌರವ ಪುತ್ರರೆಲ್ಲ ಕುರುಡರಾಗಿದ್ದಾರೆಯೇ?" ಶಕುನಿಯ ಮಾತುಗಳನ್ನು ದುರ್ಯೋಧನನು ಮಧ್ಯದಲ್ಲಿಯೇ ನಿಲ್ಲಿಸಿದ.

"ಇದಕ್ಕೆ ಉತ್ತರವನ್ನಪೇಕ್ಷಿಸುವೆಯಾ?"

"ಹೌದು, ಉತ್ತರ ಬೇಕು."

"ಕೌರವ ಸಂತಾನರ ಕಣ್ಣುಗಳ ಮೇಲೆಲ್ಲ ವಿದುರನು ನಿಸ್ಪೃಹ ನೀತಿಯ ಕಡಿವಾಣವನ್ನು ಹಾಕಿದ್ದಾನೆ. ಆದುದರಿಂದ ಅಂಧ ಸಾಮ್ರಾಟನ ರಥವು ವಿದುರನ ಸಾರಥ್ಯದಲ್ಲಿ ನೂರು ಜನ ಕೌರವ ಪುತ್ರರನ್ನು ಕುದುರೆಗಳನ್ನಾಗಿ ಮಾಡಿ ಆ ರಥವನ್ನು ಓಡಿಸಲಾಗುತ್ತಿದೆ."

"ಮಾಮಾ" ಸಿಟ್ಟಿನಿಂದ ಮೇಲೇಳುತ್ತ ದುರ್ಯೋಧನನು ಕೂಗಿದ.

"ಸ್ವಲ್ಪ ಮಧ್ಯವನ್ನು ಸೇವಿಸು. ಆಗ ನಿನ್ನ ಸಿಟ್ಟು ಒಂದು ಹಂತಕ್ಕೆ ಬರುವಂತಾದೀತು. ಯುವರಾಜ, ಸಿಟ್ಟಿನಿಂದ ಯಾವುದನ್ನೂ ಸಾಧಿಸಲಾಗದು. ಪಾಂಡವರ ರಾಜಸೂಯ ಯಾಗದ ಕೋಶಾಗಾರದಲ್ಲಿ ಬಂದು ಬೀಳುತ್ತಿದ್ದ ಮುತ್ತುರತ್ನಗಳನ್ನು ಎಣಿಸುವಾಗ ನಿನ್ನ ಕೋಪತಾಪಗಳು ಕಾಣಿಸಿಕೊಳ್ಳಬೇಕಾಗಿತ್ತು. ನೀನು ಕಾಲುಜಾರಿ ಬಿದ್ದಾಗ ಪಾಂಡವರ ಪತ್ನಿಯರೆಲ್ಲ ನಗುತ್ತಿರುವುದನ್ನು ನೋಡಿದಾಗ ನಿನಗೆ ನಾಚಿಕೆಯಾಗಬೇಕಾಗಿತ್ತು. ಅಂಧಪುತ್ರರೇ ಎಂದು ಭೀಮಸೇನನು ನಿಮ್ಮನ್ನೆಲ್ಲ ಸಂಬೋಧಿಸಿದನಲ್ಲ! ಆಗ ನಿನ್ನ ಕಣ್ಣು ತೆರೆಯಬೇಕಾಗಿತ್ತು.

''ಮಾಮಾ ನೀನು ಸಹ.''

''ಇಲ್ಲ ದುರ್ಯೋಧನ, ಆ ದುಃಖ ನಿನ್ನಷ್ಟೇ ನನಗೂ ಆಗಿದೆ.''

''ಇದಕ್ಕೆ ಯಾವ ಉಪಾಯವೂ ಇಲ್ಲವೇ?''

''ಪ್ರಯತ್ನಮಾಡಿ ಹುಡುಕಿದರೆ ಖಂಡಿತ ಸಿಗುತ್ತದೆ.''

''ಯಾವುದು?''

''ಹೇಳುವೆ''

ಶಕುನಿಯು ಮೂರು ಮಧ್ಯದ ಪಾತ್ರೆಗಳನ್ನು ಪುನಃ ತುಂಬಿದ. ಹಾಗೂ ತುಂಬಿದ ತನ್ನ ಪಾತ್ರೆಯನ್ನು ಕೈಗೆತ್ತಿಕೊಂಡು ಅದನ್ನು ಆಸ್ವಾದಿಸುತ್ತ ತುಟಿಯನ್ನು ಸವರಿಕೊಂಡು,

''ಮಧ್ಯವು ತುಂಬ ಚೆನ್ನಾಗಿದೆ ತೆಗೆದುಕೋ.''

ಇಬ್ಬರೂ ತಮ್ಮ ಪಾತ್ರೆಗಳನ್ನೆತ್ತಿಕೊಂಡರು. ಆಗ ಕರ್ಣನು ಹೇಳಿದ.

''ಯುದ್ಧ.''

''ಅಲ್ಲ.''

''ಸಾಮೋಪಚಾರ ?''

''ಅಲ್ಲ.''

"ಮೋಸ" ಕರ್ಣನ ಮುಖ ಗಾಬರಿಗೊಂಡಿತು ;

"ಇಲ್ಲ."

''ಹಾಗಿದ್ದಲ್ಲಿ ನೀವೇ ಹೇಳಿರಿ."

"ಹೇಳಿರಿ ಮಾಮಾ ಬೇಗ ಹೇಳಿರಿ." ಗುಟ್ಟನ್ನು ತಿಳಿದುಕೊಳ್ಳುವ ಆತುರ ದುರ್ಯೋಧನದಾಗಿತ್ತು.

"ತುಂಬ ವಿಚಾರ ಮಾಡಿ ನಾನು ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಒಂದೇ ಒಂದು ಉಪಾಯವಿದೆ."

"ಯಾವದು ಹೇಳಿರಿ."

"ಜೂಜು" ಶಕುನಿ ಕೊನೆಗೊಮ್ಮೆ ಹೊರಗೆಡುಹಿದ.

"ಜೂಜು !" ಕರ್ಣ ದುರ್ಯೋಧನರಿಬ್ಬರೂ ಒಂದೇ ಸಲ ಆಶ್ಚರ್ಯದಿಂದ ಉದ್ಗಾರ ತೆಗೆದರು. ನಂತರ ಒಬ್ಬರ ಮುಖವನ್ನೊಬ್ಬರು ನೋಡಲಾರಂಭಿಸಿದರು.

"ಏನು ಹೀಗೆ ನೋಡುತ್ತಿರುವಿರಿ" ಲೆತ್ತ ಹಾಕುವಾಗ ಕೈಮಾಡುವವರಂತೆ ನಟಿಸುತ್ತ ಶಕುನಿಯು ಕೇಳಿದ. "ಆ ಪಾಂಡವ ಶ್ರೇಷ್ಠ ಯುಧಿಷ್ಠಿರನು ದ್ಯೂತದ ಮಹಾ ವ್ಯಸನಿ. ಆದುದರಿಂದ ಆತನನ್ನು ಜೂಜಾಡಲು ಆಮಂತ್ರಿಸು. ಕ್ಷತ್ರಿಯನಾದ ಆತನು ನಿನ್ನ ಆಮಂತ್ರಣವನ್ನು ಎಂದೂ ಅಲ್ಲಗಳೆಯಲಾರ.''

''ಆದರೆ ಅದಕ್ಕೆ ಯಾವುದಾದರೂ ನಿಮಿತ್ತ ಬೇಕಲ್ಲ."

"ಅದಕ್ಕೇಕೆ ಚಿಂತಿಸುವೆ. ಪುಣ್ಯಪ್ರಾಪ್ತಿಗಾಗಿ ಒಂದು ಯಜ್ಞವನ್ನು ಏರ್ಪಡಿಸು. ಆ ಸಮಯಕ್ಕೆ ಸರಿಯಾಗಿ ಮಯಸಭೆಯಂತಹ ಒಂದು ಗೃಹವನ್ನು ನಿರ್ಮಾಣ ಮಾಡಿಸು. ನಿನ್ನ ಈ ಕಾರ್ಯಕ್ಕೆ ಧೃತರಾಷ್ಟ್ರ

ಮಹಾರಾಜರೂ ಸಹ ಅವಶ್ಯವಾಗಿ ಒಪ್ಪಿಗೆಯನ್ನೀಯುತ್ತಾರೆ. ಮೊದಲು ದ್ಯೂತದ ಪಟವನ್ನಂತೂ ಹಾಸಲಿ, ಆಗ ನೋಡಿರಿ ಈ ಮಾವನ ಕೈಚಳಕ. ಈ ಶಕುನಿಯ ಪ್ರಭಾವವು ಆಗ ನಿಮಗೆ ತಿಳಿದು ಬಂದೀತು."

"ಮಹಾರಾಜ, ಕ್ಷಮಿಸಿರಿ. ತಾವು ವಯಸ್ಸಿನಿಂದ ಹಿರಿಯರು, ತುಂಬ ಅನುಭವಶಾಲಿಗಳು, ತಿಳಿದವರು, ಹಸ್ತಿನಾವತಿಯಿಂದ ಗಾಂಧಾರ ದೇಶದ ವರೆಗೂ ಅನೇಕಾನೇಕ ಮೌಲ್ಯ ವಸ್ತುಗಳನ್ನು ಪರೀಕ್ಷಿಸಿ ಅವುಗಳನ್ನು ವ್ಯಾಪಾರ ಮಾಡಿಸುವುದರಲ್ಲಿ ನಿಸ್ಸೀಮರು, ಪರಿಣತರು, ಹಾಗೆಯೇ ಮನುಷ್ಯ ರನ್ನು ಪರೀಕ್ಷಿಸುವುದರಲ್ಲಿಯೂ ಸಹ ನಿಮಗಿರುವಷ್ಟು ಅನುಭವವು ಇನ್ನಾರಿಗೂ ಇರಲಾರದು. ಆದರೂ ಈ ಜೂಜಿನಲ್ಲಿ ವಿಶ್ವಾಸವಿಡುವುದೇದರೆ ?"

"ಖಂಡಿತವಾಗಿ ವಿಶ್ವಾಸವನ್ನಿಡಿರಿ" ತನ್ನ ಮೇಲುತ್ತರೀಯವನ್ನು ಸಾವರಿಸಿಕೊಳ್ಳುತ್ತ ಎದ್ದು ನಿಂತ ಶಕುನಿಯ ಕಣ್ಣುಗಳಲ್ಲಿ ವಿಲಕ್ಷಣ ತೇಜಸ್ಸು ಕಾಣಿಸಿಕೊಂಡಿತು. ಶಕುನಿಯು "ರಾಧೇಯಾ, ನಾನು ಕೇವಲ ವ್ಯಾಪಾರಿ ಯಷ್ಟೇ ಅಲ್ಲ. ಸುಬಲ ದೇಶದ ರಾಜಪುತ್ರನಿದ್ದು ಗಾಂಧಾರ ದೇಶಾಧಿಪತಿ ಯಾಗಿರುವೆ. ಈ ಮಾತನ್ನು ನೀನು ಮರೆಯಬೇಡ. ಗಾಂಧಾರದಿಂದ ಹಸ್ತಿನಾವತಿಯವರೆಗಿನ ನನ್ನ ಪ್ರವಾಸದ ಮೂಲೋದ್ದೇಶವು ಕೇವಲ ವ್ಯಾಪಾರ ನಿಮಿತ್ತವಾದುದೇನೂ ಅಲ್ಲ. ಅದು ಕೇವಲ ದ್ಯೂತ ನಿಮಿತ್ತ ವಾಗಿರುತ್ತವೆಂಬುದನ್ನು ಈಗಲಾದರೂ ತಿಳಿದುಕೋ"

"ಜೂಜಿಗಾಗಿಯೇ ನಿಮ್ಮ ಸಂಚಾರವೆ ?" ದುರ್ಯೋಧನನು ಆಶ್ಚರ್ಯದಿಂದ ಪ್ರಶ್ನಿಸಿದ.

"ಹೌದು, ಜೂಜಿಗಾಗಿಯೇ; ಈ ಭೂಮಿಯ ಮೇಲೆ ಸಾಮ್ರಾಟರು, ರಾಜಾಧಿರಾಜರು, ಆಗರ್ಭ ಶ್ರೀಮಂತರು ಇವರೇ ಮೊದಲಾದವರ ಗೃಹಗಳು ಸಂಪದ್ಭರಿತವಾದ ರೀತಿಯಲ್ಲಿ ಕಾಣುವಂತೆ ಬೆಲೆಬಾಳುವ ಮುತ್ತು ರತ್ನಾದಿ ಆಭರಣಗಳು, ವಸ್ತ್ರಾಲಂಕಾರಗಳು ಹಾಗೂ ಅತಿ ಸುಂದರಿಯರಾದ ದಾಸಿ ಯರು ಮೊದಲಾದವರನ್ನೆಲ್ಲಾ ಒಗ್ಗೂಡಿಸಿಕೊಂಡು ಹಸ್ತಿನಾವತೀಯತ್ತ ಪ್ರಯಾಣ ಹೊರಟ ವ್ಯಾಪಾರಿಗಳಿಗೆಲ್ಲ ಅತಿ ದುರ್ಗಮ ಪ್ರದೇಶವೆನಿಸಿದ ಗಾಂಧಾರ ದೇಶದಿಂದಲೇ ಮುಂದಿನ ಪ್ರಯಾಣ ಮಾಡಬೇಕಾಗುತ್ತದೆ."

ಕರ್ಣ ಹಾಗೂ ದುರ್ಯೋಧನರು ತದೇಕಚಿತ್ತರಾಗಿ ಶಕುನಿಯ ಮಾತುಗಳನ್ನು ಕೇಳುತ್ತಿದ್ದರು. ಶಕುನಿಯ ಗೌರವರ್ಣದ ಮುಖವು ಈಗ ಮತ್ತಷ್ಟು ಕೆಂಪಾಗಿತ್ತು. ಎತ್ತರವಾದ ನಿಲುವು. ನೀಳವಾದ ನಾಸಿಕ, ಆಗಾಗ ಜಾರುತ್ತಿದ್ದ ಉತ್ತರೀಯವನ್ನು ನಾಟಕೀಯ ರೀತಿಯಲ್ಲಿ ಸರಿಮಾಡಿಕೊಳ್ಳುತ್ತಿದ್ದ ಶಕುನಿಯ ಶೈಲಿ ವಿಶಿಷ್ಟ ರೀತಿಯಿಂದ ಕೂಡಿದುದಾಗಿತ್ತು.

"ಹಿಮಾಲಯದ ಕಡಿದಾದ ತಪ್ಪಲು ಮಾರ್ಗದಿಂದ ವ್ಯಾಪಾರಿಗಳು ತಮ್ಮ ಪ್ರವಾಸವನ್ನಾರಂಭಿಸುವುದು ಪದ್ಧತಿ. ಅವರೊಂದಿಗೆ ಬೆಲೆ ಬಾಳುವ ವಸ್ತುಗಳನ್ನು ಹೊತ್ತ ಒಂಟೆಗಳು ಸಾಲು ಸಾಲಾಗಿ ಸಾಗುವುದುಂಟು. ದಾರಿಯಲ್ಲಿ ಕಳ್ಳಕಾಕರ ಭಯವನ್ನೆದುರಿಸಲು ಅವರು ತಮ್ಮ ಸಂಗಡ ಧನುರ್ಬಾಣಗಳನ್ನೂ, ಖಡ್ಗ ಹಾಗೂ ಗದಾಧಾರಿಗಳಾದ ರಕ್ಷಕ ಯೋಧರನ್ನೂ ಸಂಗಡ ಕರೆತರುವುದುಂಟು. ತಮ್ಮ ಎಡಬಲಗಳಲ್ಲಿಯ ಸುರಕ್ಷತೆಯನ್ನು ಸಂಪೂರ್ಣವಾಗಿ ಕಂಡುಕೊಂಡ ನಂತರವೇ ಅವರು ತಮ್ಮ ಮುಂದಿ ಪ್ರಯಾಣವನ್ನಾರಂಭಿಸುವದು ಪದ್ಧತಿ. ರಾತ್ರಿಯ ಕಾಲದಲ್ಲಿ ಸುತ್ತಲೂ ಸೇವಕರನ್ನು ನಿಲ್ಲಿಸಿ ಜಾಗ್ರತರಾಗಿ ಆ ನಿಧಿಯನ್ನು ರಕ್ಷಿಸುವಂತೆ ವ್ಯವಸ್ಥೆ ಮಾಡುವರು. ಗಂಭೀರವಾದ ಕಾಳರಾತ್ರಿಯನ್ನು ಕಳೆಯಲು ಅವರು ಅಗ್ನಿಕುಂಡದ ಸುತ್ತಲೂ ನರ್ತಿಸುವರು, ಕುಣಿಯುವರು, ಹಾಡುವರು. ದಿನವೆಲ್ಲ ಕೊರೆಯುವ ಚಳಿಯಲ್ಲಿ ಪ್ರವಾಸಮಾಡಿ ದಣಿದ ಆ ಪ್ರವಾಸಿಗರು ರಾತ್ರಿಯಾದೊಡನೆ ಶ್ರೇಷ್ಠವಾದ ಮದ್ಯದ ಸೇವನೆಯಲ್ಲಿ ತೊಡಗುವರು. ಸುರಾಪಾನದಿಂದ ಅನೇಕರ ಕಣ್ಣು ಕೆಂಪಾಗುತ್ತವೆ. ಮತ್ತು ಹೆಚ್ಚಾದಾಗ ಅವರು ದ್ಯೂತವನ್ನಾಡುವರು."

"ದ್ಯೂತವೆಂದರೆ ತೀರಿಹೋಯಿತು. ಆ ಜೂಜಿನ ಭರವಸೆಯನ್ನಾರು ಬಲ್ಲರು?" ಕರ್ಣನು ಉದ್ವಿಗ್ನನಾಗಿ ನುಡಿದ.

"ಕರ್ಣ, ನಾನು ಅಂಥಿಂಥ ಜೂಜುಗಾರನಲ್ಲ. ನಾನಾ ದೇಶದ ಜೂ... ರೊಂದಿಗೆ ಲೆತ್ತ ಹಾಕಿದ ಕೈ ನನ್ನದು. ಆ ಲೆತ್ತಗಳ ಮೇಲೆ ಬಿಡಿಸಲಾ... ಚಿತ್ರಗಳಿಗೆ ನನ್ನ ಹಸ್ತ ಸ್ಪರ್ಶವಾದರೆ ಸಾಕು. ರಾತ್ರಿಯ ಅಂಧಕಾ... ದಲ್ಲಿಯೂ ಪ್ರಿಯತಮನ ಅಂಗ ಪ್ರತ್ಯಂಗಗಳ ಪರಿಚಯ ಹೇಗೆ ಸುಲ...

ಸಾಧ್ಯವೋ ಹಾಗೆ ಈ ಚಿತ್ರಗಳೂ ಸಹ ನನ್ನ ಸ್ಪರ್ಶ ಸುಖಾನುಭವವನ್ನನುಭವಿಸುತ್ತವೆ."

"ಜೂಜಿನಲ್ಲಿ ಯಶ ಲಭಿಸಬಹುದೇ ?" ದುರ್ಯೋಧನನು ಆಸೆಯಿಂದ ವಿಚಾರಿಸಿದ.

ಶಕುನಿಯು ಆತನಮಾತಿಗೆ ಉತ್ತರವನ್ನೀಯಬೇಕಾಗಿತ್ತು. ಆದರೆ ಮಧ್ಯದಲ್ಲಿಯೇ ಕರ್ಣನು "ಯುವರಾಜ ಜೂಜುಕೋರರಿಂದ ಯಶ ಸಂಪಾದಿಸುವೆ ಎಂಬ ಆಸೆಯನ್ನು ಕೇವಲ ಮೂರ್ಖ ವ್ಯಸನಿಗಳು ಮಾತ್ರ ಹೊಂದಿರುತ್ತಾರೆ. ಜೂಜು ಕೇವಲ ಮನರಂಜನೆಗಾಗಿ ಆಡುವ ಆಟ. ಅದನ್ನು ರಾಜಕಾರಣದಲ್ಲಿ ಬಳಸುವುದು ಹಿತವಲ್ಲ. ರಾಜಕಾರಣಕ್ಕೆ ಬುದ್ಧಿ ಹಾಗೂ ಬಾಹುಬಲದ ಪರಾಕ್ರಮಗಳು ವಿಜಯಕ್ಕೆ ಸಾಧನವೆಂದೆನಿಸುವುವು. ವೀರರಾದವರು ಇಂಥ ಮಾರ್ಗವನ್ನು ಅನುಸರಿಸಬೇಕೇ ವಿನಃ ದ್ಯೂತವನ್ನೆಂದೂ ಅವಲಂಬಿಸಬಾರದು.''

"ರಾಧೇಯಾ, ನೀನು ಯೋಗ್ಯವಾದುದನ್ನೇ ಹೇಳಿದೆ. ನಿನ್ನ ಮಾತು ಅತ್ಯಂತ ಹಿತವಾದುದು.'' ಎಂದು ಅನುಮೋದಿಸುವಂತೆ ನಟಿಸಿದ ಶಕುನಿಯು

"ರಾಜಕಾರಣದಲ್ಲಿ ಬುದ್ಧಿ ಹಾಗೂ ಬಲ — ಇವು ಅತ್ಯಂತ ಶ್ರೇಷ್ಠವಾದವುಗಳು. ನೀನು ಯೋಧನಿರುವಿ, ಶೂರನಿರುವಿ. ರಾಜಸೂಯ ಯಾಗದಲ್ಲಿ ಪಾಂಡವರು ಕೃಷ್ಣನ ಚತುರಂಗ ಸೇನಾಬಲವನ್ನು ತಮ್ಮ ಬೆನ್ನೆಲುಬಾಗಿಟ್ಟುಕೊಂಡುದನ್ನು ನೀನು ಕಂಡಿರುವಿ. ಅಲ್ಲದೆ ಇನ್ನೂ ಸಾವಿರಾರು ರಾಜಮಹಾರಾಜರು ಪಾಂಡವರಿಗೆ ಬೆಂಬಲರಾಗಿದ್ದುದೂ ನಿನಗೆ ತಿಳಿದ ವಿಷಯವಾಗಿದೆ ದಿನಗಳೆದಂತೆಲ್ಲ ಪಾಂಡವರು ಬಲಿಷ್ಠರಾಗತೊಡಗಿದ್ದಾರೆ. ಜರಾಸಂಧನಂತಹ ಕೌರವ ಶಕ್ತಿಯು ನಾಶವಾಗಿ ಹೇಳಹೆಸರಿಲ್ಲದಂತಾಗಿದೆ. ಇಂದು ಪಾಂಡವರನ್ನು ಯುದ್ಧ ಭೂಮಿಯಲ್ಲಿ ಸೋಲಿಸುವುದು ಸುಲಭವೆಂದು ಭಾವಿಸಿರುವೆಯಾ ? ಒಂದು ವೇಳೆ ನಿನಗೆ ಹಾಗೆನಿಸಿದರೂ ಸಹ ಧೃತರಾಷ್ಟ್ರ ಮಹಾರಾಜರು ಯುದ್ಧಕ್ಕೆ ಸಮ್ಮತಿಯನ್ನೀಯುವರೇ ? ಬರಲಿರುವ ಪ್ರತಿಯೊಂದು ಗಳಿಗೆಯೂ ಪಾಂಡವರ ಬಲವನ್ನು ಹೆಚ್ಚಿಸುತ್ತಲೇ ಬರುತ್ತಿವೆ. ಈ ಮಾತನ್ನು ನೀನು ಅರಿಯದವನೇ? ಅದುದರಿಂದ ಇನ್ನುಳಿದುದು ಕೇವಲ

ಬುದ್ಧಿ. ಆ ಬುದ್ಧಿಯ ಬಲವನ್ನೇ ಈಗ ನಾವು ಉಪಯೋಗಿಸಿಕೊಳ್ಳ ಬೇಕಾಗಿದೆ.''

"ಮಹಾರಾಜ, ಬುದ್ಧಿಯ ಬಲವಾದರೂ ಸಹ ಅದನ್ನು ಇನ್ನೊಬ್ಬರ ಕೈಯಿಂದ ನಡೆಸಲು ಸಾಧ್ಯವಿಲ್ಲ. ಅಸ್ಥಿರವಾದ ಈ ಕೈಗಳಿಂದಲೇ ನಾವು ಲೆತ್ತಗಳನ್ನು ಹಾಕಬೇಕಲ್ಲವೆ ?''

ಶಕುನಿಯು ಒಂದು ಸಲ ಕರ್ಣನನ್ನು ಇರಿಯುವಂತೆ ನೋಡಿ ಹೇಳಿದ.

"ಈ ನನ್ನ ಕೈಗಳು ಬಲಹೀನವಾದವುಗಳೆಂದು ತಿಳಿದಿರುವೆಯಾ? ಈ ಹಸ್ತಗಳ ಬೆಲೆ ನಿನಗೆ ತಿಳಿಯದು. ಆದುದರಿಂದ ನೀನು ಹೀಗೆ ಮಾತ ನಾಡುತ್ತಿರುವೆ. ಈ ಶಕುನಿಯ ಕೈಗಳಲ್ಲಿ ವಿಶ್ವಾಸವನ್ನಿಡು. ನೀನು ಮಧ್ಯ ಸೇವನೆಯಿಂದ ಅಸ್ಥಿರವಾದಂತೆ ತೋರುತ್ತಿದೆ. ಈ ಕೈಗಳು ಲೆತ್ತಗಳನ್ನು ಕೈಗೆತ್ತಿಕೊಂಡೊಡನೆಯೇ ಪರ್ವತದಂತೆ ಸ್ಥಿರವಾಗಿ ನಿಲ್ಲುತ್ತವೆ. ಈ ಕೈಗಳು ಸಾಮಾನ್ಯ ಜೂಜಾಟದ ಕೈಗಳೆಂದು ತಿಳಿಯಬೇಡ. ಇದು ಕೃತಹಸ್ತವೆನಿಸಿದೆ. ಇದನ್ನು "ಅತಿದೇವಿ'' ಹಸ್ತವೆಂದೂ ಕರೆಯುತ್ತಾರೆ. ದ್ಯೂತವೆಂಬುದು ಹದಿ ನೆಂಟು ವ್ಯಸನಗಳಲ್ಲಿ ಅತಿ ಶ್ರೇಷ್ಠವಾದ ವ್ಯಸನವೆನಿಸಿಕೊಂಡಿದೆ. ಬಾಹುಬಲ ದಷ್ಟೇ ಇದು ಶ್ರೇಷ್ಠತೆಯನ್ನು ಹೊಂದಿದೆ. ಈ ಹಸ್ತಸ್ಪರ್ಶವಾದರೆ ಸಾಕು. ಲೆತ್ತಗಳು ಹೇಳಿದಂತೆ ಕುಣಿಯುತ್ತವೆ. ದ್ಯೂತಪಟವನ್ನು ಹಾಕಿ ಆಟಕ್ಕೆ ಕುಳಿತು ಲೆತ್ತಗಳನ್ನು ಹಾಕತೊಡಗಿದಾಗ ಜಾರಿಣಿಯಾದ ಸ್ತ್ರೀ ಅನಿವಾರ್ಯ ಸೆಳೆತಗಳಿಂದಾಗಿ ಸಾಂಕೇತಿಕವಾದ ಸ್ಥಳಗಳಿಗೆ ಧಾವಿಸಿ ಬರುವಂತೆ ಈ ಆಟಕ್ಕೆ ಕುಳಿತವನ ಮನಸ್ಥಿತಿಯಾಗುತ್ತದೆ. ಜೂಜುಖೋರನಾದ ಆ ಯುಧಿಷ್ಠಿರನು ಈ ದಾಳಗಳ ನಾದಕ್ಕೆ ಸಿಕ್ಕು ತನ್ನ ಸರ್ವಸ್ವವನ್ನೂ ಪಣಕ್ಕಿಟ್ಟುಬಿಡುತ್ತಾನೆ. ನನ್ನ ಈ ಮಾತುಗಳನ್ನು ಸಂಪೂರ್ಣ ಲಕ್ಷ್ಯದಲ್ಲಿಟ್ಟುಕೊ.''

''ಜೂಜಿನ ಆ ದಾಳಗಳ ಮೇಲೆ ನಿಮಗೆ ಇಷ್ಟೊಂದು ವಿಶ್ವಾಸವಿದೆಯೇ?"

''ಬ್ರಹ್ಮಾಸ್ತ್ರವನ್ನು ಬಲ್ಲ ಕರ್ಣನಂತಹ ಯೋಧನು ನಾನಲ್ಲ, ಕವಚ ಕುಂಡಲಗಳನ್ನು ಪಡೆದ ಕರ್ಣನು ತನ್ನ ವಿದ್ಯಾಬಲದಿಂದ ಶತ್ರುಗಳನ್ನೆದುರಿಸ ಬಲ್ಲ. ಇನ್ನು ವೀರನ ರಥವನ್ನು ತೆಗೆದುಕೊಂಡು ಹೋಗಿ ಶತ್ರುಗಳನ್ನೆದುರಿ ಸಲು ಅಣಿಮಾಡಿಕೊಡುವಂತಹ ಸಾರಥಿಯನ್ನು ಸಹ ನಾನು ಹೊಂದಿಲ್ಲ. ನನಗೆ ಸಹಾಯ ಮಾಡುವಂತಹ ವಿದ್ಯೆ ಎಂದರೆ ನನ್ನಲ್ಲಿರುವ ಆ ದ್ಯೂತ

ವಿದ್ಯೆ. ನನ್ನ ಜೀವನದಲ್ಲಿ ಕಲೆ ಎಂದರೇನೇ ದ್ಯೂತ ಇನ್ನು ಈ ವಿದ್ಯೆಯ ಉಪಯೋಗವನ್ನು ಪಡೆಯುವುದು ಅಥವಾ ಬಿಡುವುದು ನಿನಗೆ ಸೇರಿದ ವಿಚಾರ.''

"ಜೂಜಿನ ದಾಳಗಳಲ್ಲಿ ಇಂಥ ಶಕ್ತಿ ಇದೆ ಎಂಬುದು........?''

"ಶಕ್ತಿ ? ಜೂಜಾಟದ ಶಕ್ತಿ ! ಈ ಆಟಗಳಲ್ಲಿ ದಾಳಗಳು ನೆಲಕ್ಕೆ ಬಿದ್ದರೂ ಅವುಗಳ ಪ್ರಕಾಶವು ಮಾತ್ರ ಸೂರ್ಯನನ್ನೇ ಮೀರಿಸುತ್ತದೆ. ಅವುಗಳಿಗೆ ಕೈಗಳಿಲ್ಲದಿದ್ದರೂ ಸಹ ತೋಳು ಬಲವಿದ್ದವನನ್ನು ಅಧೀರನನ್ನಾಗಿ ಮಾಡುತ್ತವೆ. ಪಟ ಹಾಸಿದೊಡನೆ ಉರುಳಿಸುವ ಈ ದಾಳಗಳು ದಿವ್ಯಲೋಕವನ್ನೇ ತೋರಿಸುತ್ತವೆ. ಕೈಯಲ್ಲಿ ತಣ್ಣಗಿದ್ದರೂ ಸಹ ಅವು ಪ್ರತಿಪಕ್ಷದವರ ಹೃದಯವನ್ನೇ ತಲ್ಲಣಗೊಳಿಸುತ್ತವೆ. ಅವುಗಳ ಬಲ ರಣಾಂಗಣದ ಯುದ್ಧಾಳುಗಳಿಗಿಂತಲೂ ಮಿಗಿಲಾದುದು. ರಾಜಸೂಯ ಯಾಗ ಮಾಡಿ ಪ್ರಮತ್ತರಾದ ಆ ಪಾಂಡವರ ರಾಜಮುಕುಟವನ್ನು ನನ್ನ ಈ ದ್ಯೂತಾಟದಿಂದ ಕೆಳಗಿಳಿಸುವೆ. ವಿಸ್ತರಿಸಿದ ಅವರ ರಾಜ್ಯವನ್ನೆಲ್ಲ ನಿನ್ನ ಪಾದಗಳಲ್ಲರ್ಪಿಸುವಂತೆ ಮಾಡುವೆ. ಇದನ್ನು ಮಾಡದಿದ್ದಲ್ಲಿ ನನ್ನನ್ನು ಶಕುನಿ ಎಂದು ಕರೆಯಬೇಡ. ಈ ನನ್ನ ಮಾತುಗಳನ್ನು ಖಂಡಿತವಾಗಿಯೂ ನಂಬು."

"ಇದನ್ನೇ ಆ ಯುಧಿಷ್ಠಿರನು ಸಾಧಿಸಿದರೆ ?" ಚಿಕಿತ್ಸಕ ಬುದ್ಧಿಯಿಂದ ಕರ್ಣನು ವಿಚಾರಿಸಿದ.

"ಸಾಧ್ಯವಿಲ್ಲ" ಅಷ್ಟೇ ಆತ್ಮವಿಶ್ವಾಸದಿಂದ ಶಕುನಿಯು ಹೇಳಿದ. "ರಾಧೇಯಾ, ಈ ದ್ಯೂತದಲ್ಲಿ ನೀನು ಹೊಸಬನಿರುವೆ, ಅದರ ವಿಷಯ ನಿನಗೆ ಏನೂ ತಿಳಿಯದು. ನಾಲ್ಕು ಬಾಣ ಪ್ರಯೋಗ ಮಾಡಲು ಬಂದರೆ, ಅಥವಾ ನಾಲ್ಕು ಶಸ್ತ್ರವಿದ್ಯಾ ವಿಧಾನಗಳನ್ನು ತಿಳಿದುಕೊಂಡರೆ, ಎಲ್ಲರೂ ಮಹಾ ಯೋಧರೆಂದೆನಿಸಿಕೊಳ್ಳಲಾರರು. ಅಂಥವರೆಲ್ಲ ರಣರಂಗಕ್ಕೆ ಬಂದು ನಿಂತರೆಂದರೆ ಆಗ ಮಾತ್ರ ಅವರ ಧೈರ್ಯವೆಲ್ಲ ಅಡಗಿಹೋಗುತ್ತದೆ. ರಣವಾದ್ಯಗಳ ನಿನಾದದೊಂದಿಗೆ ಯುದ್ಧದ ರೌದ್ರತೆಯನ್ನು ಕಂಡಾಗ ಎಂಥವರೂ ಥರಥರನೆ ನಡುಗಲಾರಂಭಿಸುತ್ತಾರೆ. ಯುದ್ಧಾಳುವಿಗೆ ಸಾವಿನ ಹೆದರಿಕೆ ಇದ್ದಲ್ಲಿ ಯಾವ ಕೆಲಸವೂ ಕೈಗೂಡಲಾರದು. ಮೃತ್ಯುವನ್ನು ಎದುರು ನೋಡುತ್ತಿದ್ದಂತೆಯೇ ಹೋರಾಡುವ ಸಂಸ್ಕಾರವನ್ನು ಆತ ಬೆಳೆಸಿಕೊಂಡು

ಬರಬೇಕಾಗುವದು. ರಣವಾದ್ಯಗಳನ್ನು ಕೇಳಿದೊಡನೆ ಯುದ್ಧೋತ್ಸವಿಸ ವೈಯುಬ್ಬಿ ಹೋಗಬೇಕು. ಅಂಥವನು ಮಾತ್ರ ಮರಣದ ವಿಚಾರವನ್ನು ಮಾಡದೇ ಶತ್ರುಗಳನ್ನು ಎದುರಿಸಲು ಸಿದ್ಧನಾಗುತ್ತಾನೆ. ಯಾವ ಯೋಧನು ಹೀಗೆ ನಡೆಯುವನೋ ಅಂಥವನ ಮನೋಭಾವವನ್ನು ಪೂರ್ವ ಜನ್ಮದ ಸಂಸ್ಕಾರವೆಂದು ಗುರುತಿಸಲಾಗುವದು. ಪಂಚಕಲ್ಯಾಣಿಯಂತಹ ಶ್ರೇಷ್ಠ ಕುದುರೆಯಮೇಲೆ ಹೇಡಿಯಾದವನು ಎಂದಾದರೂ ಕೂಡಬಹುದೆ ? ಹಾಗೆಯೇ ಈ ದಾಳಗಳಿಗೂ ಸಹ ಒಂದು ತರಹದ ಸಂಸ್ಕಾರವೆಂಬುದಿದೆ. ನಾನು ಈ ದಾಳ ವಿದ್ಯಾ ಪ್ರವೀಣನಿರುವೆ. ಇದ್ದುದನ್ನು ಕಳೆದುಕೊಳ್ಳುವುದ ಕ್ಕಿಂತ ಯಾರಿಗೆ ಗೆಲ್ಲುವ ಅಪೇಕ್ಷೆಯಿದೆಯೋ ಅಂಥವರಿಗೆ ಮಾತ್ರ ದಾಳಗಳು ಕೈವಶವಾಗುತ್ತವೆ. ಪಾಪ-ಪುಣ್ಯಗಳ ಶೋಧನೆಯಲ್ಲಿರುವ ಆ ಹೇಡಿ ಯುಧಿಷ್ಠಿರನಿಗೆ ಈ ದ್ಯೂತದಲ್ಲಿ ಜಯ ಲಭಿಸುವುದಾದರೂ ಹೇಗೆ ? ಅದು ಕೇವಲ ನಮಗೆ ಮಾತ್ರ ಸೀಮಿತವಾದುದೆಂಬುದನ್ನು ತಿಳಿದುಕೋ."

ಕರ್ಣನು ನಿರುತ್ತರನಾದ. ಅದರಿಂದ ದುರ್ಯೋಧನನಿಗೆ ಆನಂದ ವೆನಿಸಿತು. ಆತ ಪುನಃ ತನ್ನ ಮಾವನನ್ನು ಪ್ರಶ್ನೆಮಾಡಿದ.

"ಮಾವಾ, ಈ ದ್ಯೂತಕ್ಕೆ ತಂದೆಯವರು ಸಮ್ಮತಿಯನ್ನೀಯ ಬಹುದೇ ?"

"ಮೊನ್ನಿನ ನಿನ್ನ ಆ ಪರಾಕ್ರಮದಿಂದ ಅವರ ಕಣ್ಣುಗಳು ತೆರೆದಿವೆ. ಆದುದರಿಂದ ಅಕಸ್ಮಾತ್ ಅವರು ಸಮ್ಮತಿಯನ್ನೀಯಬಹುದು. ಆದರೂ ಸಹ ಹೇಗಾದರೂ ಮಾಡಿ ನೀನು ನಿನ್ನ ಈ ಎಲ್ಲ ವಿಚಾರವನ್ನು ನಿನ್ನ ತಂದೆಯ ಕಿವಿಯ ಮೇಲಿಡುವುದು ವಿಹಿತ. ಅವರ ಒಪ್ಪಿಗೆ ದೊರೆತರೆಸಾಕು. ಆಗ ವಿಜಯ ನಮ್ಮದೆಂದೇ ತಿಳಿದುಕೋ."

ದುರ್ಯೋಧನನು ಅತಿ ಸಲುಗೆಯಿಂದ ಹೇಳಿದ.

"ಮಾವಾ, ಈಗ ನಿಮ್ಮ ವಿನಃ ನನಗೆ ಬೇರಾರೂ ಇಲ್ಲ. ಈ ಮಾತು ಗಳನ್ನು ಹೇಗಾದರೂ ಮಾಡಿ ನೀವು ತಂದೆಯವರ ಕಿವಿಯ ಮೇಲಿಡಿರಿ. ಯಾಕೆಂದರೆ ಉಪಾಯಗಳನ್ನೆಲ್ಲ ಚೆನ್ನಾಗಿ ತಿಳಿಸಿ ನೀವು ಹೇಳಬಲ್ಲಿರಿ. ಅವರ ಮನಸ್ಸಿಗೆ ಹಿಡಿಸುವಂತೆ ಮಾಡಬಲ್ಲಿರಿ. ಅದೆಲ್ಲ ವಿಚಾರಗಳು ನನಗೆ ಬರ ಲಾರವು. ಅಷ್ಟೇ ಅಲ್ಲ ಬಹು ಕಠಿಣ ಎಂದೆನಿಸುವುದು."

"ಆಗಲಿ ನೀನು ಚಿಂತಿಸಬೇಡ. ಯಜ್ಞ ಹಾಗೂ ದ್ಯೂತ ಈ ಎರಡು ವಿಚಾರಗಳು ರಾಜಮಾನ್ಯ. ಇವು ರಾಜನೀತಿಯನ್ನೇ ಆಧರಿಸಿವೆ. ಆದುದರಿಂದ ಧೃತರಾಷ್ಟ್ರ ಮಹಾರಾಜರು ನಿರ್ವಂಚನೆಯಿಂದ ತಮ್ಮ ಒಪ್ಪಿಗೆಯನ್ನೀಯುತ್ತಾರೆ. ಈ ಕೆಲಸವನ್ನು ಸಾಧಿಸಿಕೊಡುವ ಜವಾಬುದಾರಿಯು ನನ್ನ ಮೇಲಿರಲಿ. ನಾಳೆ ಸೂರ್ಯೋದಯಾ ನಂತರ ಅವರ ಸಲಹಾ ಸಮಿತಿಯು ಒಕ್ಕೂಡುವ ಮೊದಲೇ ನಿನಗೆ ಸಾಮ್ರಾಟರಿಂದ ಕರೆಬರುತ್ತದೆ. ಆಗ ನೀನು ತಪ್ಪದೆ ಅಲ್ಲಿಗೆ ಬಂದು ಬಿಡು. ಆ ವೇಳೆಗಾಗಲೇ ನಾನು ದ್ಯೂತದ ಭೂಮಿಕೆಯನ್ನು ಸಿದ್ಧಪಡಿಸಿರುತ್ತೇನೆ."

ದುರ್ಯೋಧನನಿಗೆ ಆಶ್ವಾಸನೆಯನ್ನಿತ್ತ ಶಕುನಿಯು ರಾಜಭವನದಿಂದ ಹೊರಟು ಹೋದನು. ಸಮಾಧಾನ ಚಿತ್ತದಿಂದ ಆತನು ಕರ್ಣನನ್ನೊಂದು ಸಲ ನೋಡಿದ. ಆತನ ಮುಖದ ಮೇಲೆ ಚಿಂತೆಯ ಗೆರೆಗಳು ಕಾಣುತ್ತಿದ್ದವು.

"ಮಿತ್ರಾ !"

ಕರ್ಣನು ಮೇಲೇಳುತ್ತ ಹೇಳಿದ,

"ಯುವರಾಜ, ಈ ದ್ಯೂತ ನನ್ನ ಮನಸ್ಸಿಗೆ ಹಿಡಿಸುವಂತಹುದಲ್ಲ, ವೀರರ ಮಾರ್ಗವೂ ಇದಲ್ಲ."

"ಬೇರೆ ಯಾವುದಾದರೂ ಉಪಾಯವನ್ನು ಸೂಚಿಸುವೆಯಾ ?"

"ಬೇರೆ ಮಾರ್ಗ ತೋರಿದಲ್ಲಿ ಈ ದ್ಯೂತದ ಉಪಾಯಗಳನ್ನು ಕೇಳುತ್ತ ನಾನು ಎಂದೂ ಸುಮ್ಮನೆ ಕೂಡುತ್ತಿರಲಿಲ್ಲ. ಆದರೂ ಒಂದು ಮಾತನ್ನು ಹೇಳಬೇಕೆಂದೆನಿಸಿದೆ, ಈ ವಿಷಯದಲ್ಲಿ ಇನ್ನೊಂದು ಸಲ ವಿಚಾರ ಮಾಡಿರಿ. ಯಾವುದೇ ವಿಷಯವನ್ನು ಸಾರಾಸಾರವಾಗಿ ವಿಚಾರ ಮಾಡದೆ ಮುಂದಡಿ ಇಡುವುದು ವಿಹಿತವಲ್ಲ. ಜೂಜು ಹಾಗೂ ಚಾರಿತ್ರ್ಯ ಈ ಎರಡೂ ವಿಚಾರಗಳಲ್ಲಿ ನಾವು ಕಾಲಿಡುವುದಕ್ಕಿಂತ ಮೊದಲೇ ಸಾಕಷ್ಟು ವಿಚಾರ ಮಾಡಬೇಕು ಏಕೆಂದರೆ ಹಿಂದೆ ಹೆಜ್ಜೆ ಇಡಲು ಎಂದೂ ಸಾಧ್ಯವಾಗಲಾರದು. ಇನ್ನು ನಾನು ಬರಲೇ ?"

ದುರ್ಯೋಧನನ ಅಪ್ಪಣೆಯನ್ನು ಪಡೆದು ಕರ್ಣನು ತನ್ನ ಬಿಡಾರಕ್ಕೆ ಹೊರಟು ಬಂದಾಗಲೂ ದ್ಯೂತದ ವಿಚಾರವು ಮಾತ್ರ ಆತನ ಮನದಲ್ಲಿ ಅನೇಕ ತರಂಗಗಳನ್ನೆಬ್ಬಿಸಿ ಮನಸ್ಸನ್ನು ಹೊಯ್ದಾಡುವಂತೆ ಮಾಡಿತು.

## 19

ಹಸ್ತಿನಾವತಿಯ ರಾಜಬೀದಿಯಲ್ಲಿ ದುರ್ಯೋಧನನ ರಥವು ಓಡುತ್ತ ಲಿತ್ತು. ಆ ರಥದಲ್ಲಿ ಕರ್ಣನು ಕುಳಿತುಕೊಂಡಿದ್ದ. ಬಿಸಿಲಿನ ತಾಪವು ಹೆಚ್ಚಾಗಿತ್ತು. ಕರ್ಣನ ಮನಸ್ಸಿನಲ್ಲಿ ಶಕುನಿಯಿಂದ ಸೂಚಿತವಾದ ಹಾಗೂ ದುರ್ಯೋಧನನಿಂದ ಮಾಡಿಸಲ್ಪಡುವ ದ್ಯೂತದ ಸಂಚು ನಿಲ್ಲುವಂತಾದರೆ ಒಳಿತು ಎಂಬ ಯೋಚನೆಗಳು ಆರಂಭವಾಗಿದ್ದವು. ಸಾಮ್ರಾಟರಿಗೆ ಪುತ್ರ ಪ್ರೇಮವಿದ್ದರೂ ಕೂಡ ಅವರು ವಿದುರನ ಸಲಹೆಯನ್ನು ಪಡೆಯದೆ ಯಾವ ನಿರ್ಣಯವನ್ನೂ ಸ್ವೀಕರಿಸಲಾರರು ಎಂಬ ನಂಬಿಕೆ ಕರ್ಣನದಾಗಿತ್ತು. ವಿದುರನು ದ್ಯೂತವನ್ನಾಡಲು ಎಂದೂ ಪುರಸ್ಕಾರವನ್ನೀಯಲಾರ ಎಂಬುದು ಅವನ ಧೃಢ ನಂಬಿಕೆಯಾಗಿತ್ತು. ಒಂದು ವೇಳೆ ಆ ದ್ಯೂತದ ಸಂಚು ಕೈಗೂಡದಿರುವುದರಿಂದಲೇ ದುರ್ಯೋಧನನು ಆತುರದಿಂದ ತನ್ನ ರಥವನ್ನು ಕಳಿಸಿದರೂ ಕಳಿಸಿರಬಹುದು.

ರಥವು ರಾಜ ಪ್ರಸಾದದ ಉದ್ಯಾನವನವನ್ನು ಪ್ರವೇಶ ಮಾಡಿತು. ವನದಲ್ಲಿ ಸಂಚರಿಸುತ್ತಿದ್ದ ನವಿಲುಗಳ ಹಿಂಡುಗಳು ಮರವೇರಲು ಪ್ರಯತ್ನಿಸು ತ್ತಿದ್ದವು. ಅವುಗಳ ಪ್ರಯತ್ನವು ಎಂದಿನಂತೆ ಕರ್ಣನಿಗೆ ಮೋಹವನ್ನುಂಟು ಮಾಡಲಿಲ್ಲ. ಹೆಬ್ಬಾಗಿಲಿನ ಬಳಿ ರಥವು ಬಂದು ನಿಂತಿತು. ಕರ್ಣನು ತನ್ನ ರಥದಿಂದಿಳಿದು ನೋಡಿದಾಗ ದುರ್ಯೋಧನನು ಪ್ರಸನ್ನಚಿತ್ತನಾಗಿ ಮೆಟ್ಟಿಲು ಗಳ ಮೇಲೆ ನಿಂತಿರುವುದು ಕಾಣಿಸಿತು. ಕರ್ಣನನ್ನು ಕಂಡೊಡನೆ ಆತ ಒಂದೇ ಹಾರಿಕೆಯಲ್ಲಿ ಈ ಮೆಟ್ಟಿಲುಗಳನ್ನಿಳಿದು ಬಂದು ಕರ್ಣನ ಕೈಗಳನ್ನು ಹಿಡಿದುಕೊಳ್ಳುತ್ತ ನುಡಿದ.

"ಮಿತ್ರಾ, ನಡೆ ನಿನ್ನೊಂದಿಗೆ ತುಂಬ ಮಾತನಾಡುವುದಿದೆ."

"ಹೌದೆ ?"

"ಅಷ್ಟೇ ಅಲ್ಲ, ಮಹಾ ವೈಭವೋಪೇತವಾದ ಹಾಗೂ ಅಲೌಕಿಕ ವೆಂದೆನಿಸಿಕೊಳ್ಳುವಂತಹ ದ್ಯೂತಗೃಹವನ್ನು ನಿರ್ಮಿಸುವಂತೆ ಮಾಡಿದ್ದೇನೆ."

"ಈ ಸಂಚಿಗೆ ವಿದುರ ಸಮ್ಮತಿಯನ್ನಿತ್ತನೇ !"

"ಒಳ್ಳೆಯ ಮಾತನ್ನೇ ಕೇಳಿದೆ. ಚಿಕ್ಕಪ್ಪ ಎಂದಾದರೂ ಇಂಥ ವಿಚಾರ

ಗಳಿಗೆ ಸಮ್ಮತಿಯನ್ನೀಯುತ್ತಾನೆಯೆ? ಆತನಿಗೆ ತಿಳಿಯಗೊಡದಂತೆ ಈ ವಿಚಾರವನ್ನು ತುಂಬ ಗೌಪ್ಯವಾಗಿಯೇ ಇಡಲಾಗಿದೆ. ನಮ್ಮ ಎಲ್ಲ ಸಿದ್ಧತೆಗಳೂ ಪೂರ್ಣಗೊಂಡಾಗ ಮಾತ್ರ ಅದನ್ನು ಅವರಿಗೆ ತಿಳಿಸಲಾಗುತ್ತದೆ."

"ಯುವರಾಜ, ನನ್ನ ಮಾತನ್ನು ಸ್ವಲ್ಪ ಕೇಳುವೆಯಾ?"

"ಹೇಳು, ನೀನು ವಿರೋಧ ಮಾಡುವಿ ಎಂಬ ವಿಚಾರವು ಮಾತ್ರ ನನಗೆ ಚೆನ್ನಾಗಿ ಗೊತ್ತು. ಆದರೂ ನೀನು ಹೇಳುವುದನ್ನು ಕೇಳಲು ಸಿದ್ಧನಿರುವೆ."

"ಹಾಗಿದ್ದಲ್ಲಿ ನಾನೇನೂ ಹೇಳಲಾರೆ."

"ಈ ನಿನ್ನ ಮಾತು ನಿನ್ನ ವಿರೋಧಕ್ಕಿಂತಲೂ ಭಯಾನಕ. ನನ್ನ ಮೇಲೆ ಇಷ್ಟೊಂದು ಕೋಪಿಸಿಕೊಳ್ಳಬೇಡ."

"ಇಲ್ಲ ಯುವರಾಜ ಕೋಪವಿಲ್ಲ, ಆದರೆ ಇಂಥ ಕಳ್ಳತನದ ಮಾರ್ಗವನ್ನು ವೀರರಾದವರು ಎಂದೂ ಬಳಸಿಕೊಳ್ಳಬಾರದು. ನನ್ನ ಅಂತರಂಗವು ಹೀಗೆ ಹೇಳುತ್ತಲಿದೆ."

"ಕಳ್ಳತನದ ಮಾತು ಎಂಥದು? ಮಿತ್ರಾ, ಜೂಜೂ ರಾಜಮಾನ್ಯವಾದ ಆಟವೆಂದೆನಿಸಿದೆ."

"ರಾಜರು ದ್ಯೂತವನ್ನಾಡುವಾಗ ಗೆಲ್ಲುವ ಸಂಕಲ್ಪದಿಂದ ಅದರಲ್ಲಿ ಭಾಗವಹಿಸುವುದಿಲ್ಲ. ಅದು ಅವರಿಗೆ ವೇಳೆ ಕಳೆಯುವ ಒಂದು ಸಾಧನ ಮಾತ್ರ ತನ್ನನ್ನಾಶ್ರಯಿಸಿದವರಿಗೆ ಅದರಿಂದ ಅನುಕೂಲವಾಗಲೆಂಬ ಭಾವನೆಯೂ ಅದಕ್ಕೆ ಪೂರಕವಾಗಿರುತ್ತದೆ. ಈ ಎಲ್ಲ ಭಾವನೆಗಳನ್ನು ಬದಿಗೊತ್ತಿ ಮುಂದೆ ಹೋಗುವುದು ವಿಹಿತವಲ್ಲ."

"ಹೋಗಲಿ ನಾವು ಈಗ ಆ ದ್ಯೂತದ ವಿಚಾರವನ್ನು ಬಿಟ್ಟುಬಿಡೋಣ"

ಈ ಮಾತಿನಿಂದ ಕರ್ಣನಿಗೆ ಸ್ವಲ್ಪ ಹಿತವೆನಿಸಿತು. ದುರ್ಯೋಧನನು ತನ್ನ ತಂತ್ರಗಳಿಂದ ಹೀಗೆ ಸುಲಭವಾಗಿ ಹಿಂಜರಿಯಲಾರ ಎಂಬುದು ಅವನಿಗೆ ತಿಳಿದ ವಿಷಯವಾಗಿತ್ತು.

"ಯುವರಾಜ, ನಿನ್ನ ಈ ಮಾತಿನಿಂದ ನನಗೆ ತುಂಬ ಸಮಾಧಾನವಾಗಿದೆ. ನಿಮ್ಮ ಬಗ್ಗೆ ಅಭಿಮಾನವೆನಿಸುತ್ತಿದೆ."

"ಕೊನೆಯ ಪಕ್ಷ ನನ್ನ ಮಿತ್ರನ ಮನಸ್ಸಿನಲ್ಲಾದರೂ ಇಂಥ ವಿಚಾರಗಳು ಬರುತ್ತಿವೆಯಲ್ಲ, ಸಾಕು ಇದರಿಂದ ನನಗೂ ಸಮಾಧಾನವಿದೆ.

ಪಾಂಡವರ ಅಭಿವೃದ್ಧಿಯು ದಿನಗಳೆದಂತೆಲ್ಲ ಹೆಚ್ಚುತ್ತಾ ಹೋಗಲಿ. ತೆರೆದ ಕಣ್ಣುಗಳಿಂದ ಅದನ್ನೆಲ್ಲಾ ನಾವು ನೋಡುತ್ತ ಹೋಗೋಣ. ವಿಕಾಸಗೊಂಡ ಪಾಂಡವರ ಸಾಮರ್ಥ್ಯದೊಂದಿಗೆ ಕೌರವ ಸಾಮ್ರಾಜ್ಯವು ಸಂಪುಟಕ್ಕೆ ಬಂದುದನ್ನೂ ಕಾಣೋಣ. ನಿರ್ಲಜ್ಜರಾಗಿ ಪದರಿನಲ್ಲಿ ಬಿದ್ದಿದ್ದುದನ್ನೇ ದಾನವಾಗಿ ಸ್ವೀಕರಿಸಿಕೊಂಡು ತೃಪ್ತರಾಗೋಣ. ನಮ್ಮಿಬ್ಬರ ಪರಾಕ್ರಮದ ಬಲವತ್ತರ ಇಚ್ಛೆಯೂ ಇದೇ ಆಗಿದ್ದಲ್ಲಿ ಅದನ್ನು ತಡೆಯುವವರಾರು ?"

"ಆದರೆ ಜೂಜಿನ ವಿನಃ ಬೇರೆ ಮಾರ್ಗಗಳಾವವೂ ಇಲ್ಲವೆ ?"

"ನಿನಗೆ ಅಂಥ ಯಾವುದಾದರೂ ಉಪಾಯ ಇಲ್ಲವೆ ಮಾರ್ಗವು ಕಾಣುತ್ತಿದೆಯೇ ?"

"ನನಗೆ ಯಾವುದೂ ತಿಳಿಯದು. ಹೀಗಿದ್ದರೂ ನನ್ನ ಮನಸ್ಸು ಮಾತ್ರ ಈ ಜೂಜಿಗೆ ಒಪ್ಪಲೊಲ್ಲದು."

"ಅಶಕ್ತ ಮನಸ್ಸಿಗೆ ಜೂಜೇ ಸಂಗಾತಿ."

"ಅಶಕ್ತ ಮನಸ್ಸು, ಯಾರದು ?" ಕರ್ಣನು ಎದೆ ಮುಟ್ಟಿಕೊಂಡು ಹೇಳಿದ.

"ಮಿತ್ರಾ, ಈ ಕರ್ಣನ ಪರೀಕ್ಷೆ ಈವರೆಗೂ ಆಗಿಲ್ಲ ! ಹೇಳು ಆ ಇಂದ್ರಪ್ರಸ್ತದ ಮೇಲೆ ದಾಳಿಮಾಡಿ ಬಾ ಎಂದು ಆಜ್ಞೆಮಾಡು. ನನ್ನೊಂದಿಗೆ ಸೈನ್ಯವೆಷ್ಟಿದೆ ? ಎಂಬ ಯೋಚನೆ ನಿನಗೆ ಎಂದೂ ಬರಲಾರದು. ಶತ್ರು ಬಲಶಾಲಿ ಎಂದು ಚಿಂತಿಸುವವನಲ್ಲ. ಈ ಕರ್ಣನು ಶತ್ರುಗಳ ಮೇಲೇರಿ ಹೋದುದನ್ನು ಮಾತ್ರ ನೀನು ನೋಡುವೆ."

ದುರ್ಯೋಧನನು ನಗುತ್ತಲಿದ್ದ. ಆದನ್ನು ಕಂಡಾಗ ಕರ್ಣನ ಸಂತಾಪಸಮುತ್ತಷ್ಟು ಉಮ್ಮಳಿಸಿತು.

"ಯಾಕೆ ನನ್ನ ಈ ಮಾತುಗಳೆಲ್ಲ ಸುಳ್ಳು ಎಂದೆನಿಸುತ್ತವೆಯೆ?

"ಇಲ್ಲ, ಸುಳ್ಳಲ್ಲ." ಆತನು ಗಂಭೀರನಾಗಿ "ಜೂಜು ಹಾಗೂ ಯುದ್ಧ ಇವುಗಳಲ್ಲಿ ಯಾವುದಾದರೂ ತಾರತಮ್ಯವಿದೆ ಎಂದೆನಿಸುವದೇ ?"

"ಜೂಜು."

"ಹೌದು ಹಾಗಿಲ್ಲ ಎಂದರೇನು ? ಶತ್ರು ಬಲಶಾಲಿಯಾಗಿದ್ದಾಗಲೂ ಸಹ ಅವನ ಮೇಲೇರಿ ಹೋಗುವುದೆಂದರೇನು ?" ಈ ಮಾತಿನಿಂದ ಕರ್ಣನು ಚಕಿತನಾದ.

"ಮಿತ್ರಾ, ಈ ಜೀವನದಲ್ಲಿ ಜೂಜಿಗೆ ಹೋಲಿಸಲಾಗದಂತಹ ಯಾವ ಮಾತಿದೆ? ಅದನ್ನು ನೀನೇ ಹೇಳು. ರಣರಂಗದಲ್ಲಿ ಯಾವ ಶತ್ರುವನ್ನು ಎದುರಿಸಬೇಕಾಗುವದೋ ಆತ ಎಂಥ ಬಾಣಗಳನ್ನು ತೊಟ್ಟಿರುತ್ತಾನೆಯೋ ಅದನ್ನೆಲ್ಲ ಯಾರು ತಿಳಿದವರಾಗಿರುತ್ತಾರೆ? ಜಯಾಪಜಯಗಳ ಪರಿಚಯ ವಿಲ್ಲದೆ ಶತ್ರುಗಳ ಮೇಲೆ ಏರಿ ಹೋಗುವದೂ ಜೂಜಲ್ಲದೆ ಮತ್ತೇನು? ನೀನು ಜನ್ಮ ತಾಳುವದೇ ತಡ ನಿನ್ನ ತಾಯಿ ನಿನ್ನನ್ನು ಪ್ರವಾಹಕ್ಕೆ ಒಪ್ಪಿಸಿದಳು. ಅದು ನಿನ್ನ ಜೀವನದ ಜೂಜಾಟವಲ್ಲವೇ? ಸಂಸಾರದಲ್ಲಿ ಕೈಹಿಡಿದು ಬಂದ ಪತ್ನಿ, ಆತ್ಮೀಯತೆಯನ್ನು ಸಾಧಿಸದ ಮಿತ್ರ, ಇವರ ಸಂಬಂಧವು ಪ್ರತಿ ಕ್ಷಣದಲ್ಲಿಯೂ ಜೂಜಾಟದಂತೆಯೇ ಇರುತ್ತದೆ. ಗೆಳೆಯಾ, ಇದ್ದಕ್ಕಿದ್ದಂತೆ ಜೂಜಾಡಲು ಕುಳಿತವನು ತನ್ನ ಕವಡೆಗಳನ್ನು ಚೆಲ್ಲುವಾಗ ಆತನಿಗೆ ಭಯವೆನಿಸುವದಿಲ್ಲ. ಆದರೆ ಪಣದ ಜೂಜು ಮಾತ್ರ ಭಯವೆನಿಸಬೇಕೆ?"

"ಯುವರಾಜ ಅದೆಲ್ಲ ಹೇಳಿಕೇಳಿಯೂ ಜೂಜೇ, ಅದು ಯಾರತ್ತ ವಾಲುವದೋ ಹೇಗೆ ವಾಲುವುದೋ ಅದನ್ಯಾರು ಹೇಳಬಲ್ಲರು?"

"ಜೂಜು ಎಂದರೆ ಗೆಲ್ಲುವುದು ಅಥವಾ ಸೋಲುವುದು. ಇದರಲ್ಲಿ ಆ ದಾಳಗಳೊಂದಿಗೆ ದೈವವು ನರ್ತಿಸುವದು. ನಾವು ಗೆಲ್ಲೋಣ ಅದಿಲ್ಲವೆ ಹೋದರೆ ಇದ್ದುದನ್ನೆಲ್ಲ ಕಳೆದುಕೊಳ್ಳೋಣ. ಎರಡಕ್ಕೂ ನಾನು ಸಿದ್ಧನಾಗಿರುವೆ."

ಕರ್ಣನು ಹೇಳಿದ "ಆಗಲಿ ಜೂಜು ಎಂದರೆ ಜೂಜು."

"ನೀನು ಚಿಂತಿಸಬೇಡ. ಈ ದ್ಯೂತದಲ್ಲಿ ಜಯವು ಖಂಡಿತವಾಗಿಯೂ ನಮ್ಮದೇ. ಇನ್ನು ದ್ಯೂತಗೃಹವನ್ನು ಎಷ್ಟು ಬೇಗನೆ ನಿರ್ಮಿಸಲು ಸಾಧ್ಯವೋ ಅಷ್ಟು ಬೇಗನೆ ಅದನ್ನು ಸಿದ್ಧಗೊಳಿಸಲು ನಾವು ಪ್ರಯತ್ನಿಸಬೇಕು. ನಮ್ಮ ಈ ದ್ಯೂತಗೃಹವು ಆ ಮಯಸಭೆಗಿಂತಲೂ ಅದ್ಭುತವಾಗಿರಬೇಕು. ಎಲ್ಲಿ ನೀರಿನಂತೆ ಕಾಣುವುದೋ ಅಲ್ಲಿ ನೀರಿರಬೇಕೇ ವಿನಃ ನೆಲವಿರಬಾರದು. ಕೃತ್ರಿಮ ಸ್ಫಟಿಕ ನೆಲವಿರಲಾರದೆ ಅದನ್ನು ಸ್ಫಟಿಕ ಮಣಿಗಳಿಂದಲೇ ಸಿದ್ಧಪಡಿಸಬೇಕು. ಆದರೆ ಅದರ ಮೇಲೆ ಕಾಲಿಟ್ಟಾಗ ನೀರಿನ ಸ್ಪರ್ಶ ವಾಗಲಾರದು."

ದುರ್ಯೋಧನನ ಕಣ್ಣುಗಳಲ್ಲಿ ಸೇಡಿನ ಕಿಡಿಗಳು ಕಾಣಲಾರಂಭಿಸಿದ್ದವು ಅವನ ಮುಖದಲ್ಲಿ ವಿಕಟಾಟ್ಟಹಾಸವಿತ್ತು.

''ಕರ್ಣ, ಮದೋನ್ಮತ್ತರಾದ ಪಾಂಡವರು ನನ್ನ ದ್ಯೂತಗೃಹದಲ್ಲಿ ಮೊದಲು ಕಾಲಿಡಲಿ, ಕಣ್ಣಿಗೆ ನೀರೆಂದು ಕಾಣುವ ತಾಣದಲ್ಲಿಯೇ ಅವರು ಪಲ್ಲಟರಾಗುವಂತೆ ಮಾಡುವೆ. ಗೋಡೆ ಎಂದು ಭಾವಿಸಿದಲ್ಲಿಯೇ ಅವರು ತಲೆಯೊಡೆದುಕೊಳ್ಳುವಂತಾಗುವದು. ಗೆಳೆಯಾ, ನಡೆ ಈಗ ನಮಗೆ ಸಮಯವು ತುಂಬ ಕಡಿಮೆ ಇದೆ. ಮಾವನು ಈಗಾಗಲೇ ದ್ಯೂತಗೃಹದ ಸ್ಥಳವನ್ನು ನಿಶ್ಚಯಮಾಡಿದ್ದಾನೆ. ಆ ಸ್ಥಳವನ್ನು ಗುರುತಿಸಲು ಈಗಾಗಲೇ ಆತನು ಮುಂದೆ ಹೋಗಿದ್ದಾನೆ. ನಮ್ಮನ್ನೂ ಅಲ್ಲಿಗೆ ಬರುವಂತೆ ಸೂಚನೆಯನ್ನಿತ್ತಿದ್ದಾನೆ."

ದುರ್ಯೋಧನನೊಂದಿಗೆ ಕರ್ಣನೂ ಪೂರ್ವ ನಿರ್ಧಾರಿತವಾದ ದ್ಯೂತಗೃಹನಿರ್ಮಾಣದ ಸ್ಥಳವನ್ನು ನೋಡಲು ಹೊರಟುಬಿಟ್ಟ.

ರಾತ್ರಿಯ ಸಮಯ ಕರ್ಣನು ತನ್ನ ಶಯ್ಯಾಗೃಹದಲ್ಲಿ ಸುರಾಪಾನ ಮಾಡುತ್ತ ಕುಳಿತುಕೊಂಡಿದ್ದ. ಅಧಿರಥ, ದ್ಯುಮ, ವೃಷಕೇತು, ಶತ್ರುಂಜಯ ಇವರೆಲ್ಲರೊಂದಿಗೆ ಮನಸೋಕ್ತವಾಗಿ ಹರಟೆ ಹೊಡೆದುದರಿಂದ ಮನಸ್ಸಿನ ದುಗುಡವು ಕಡಮೆಯಾಗಿತ್ತು. ವೃಷಾಲಿಯು ಶಯ್ಯಾಗೃಹ ಪ್ರವೇಶಿಸುತ್ತಿರುವದನ್ನು ಕಂಡು,

"ವೇಳೆಯಾಯಿತೇ ?" ಎಂದ.

"ಅಹುದು ಅದು ಗೊತ್ತಾಗುತ್ತದೆ ಅತ್ತೆಯವರ ಕಾಲು ಮತ್ತುತ್ತಲಿದ್ದೆ"

"ರಾಧಾತಾಯಿ ಮಲಗಿಕೊಂಡಳೆ ?"

"ಇಲ್ಲ ಇನ್ನೂ ಎಚ್ಚರವಾಗಿದ್ದಾರೆ."

"ಹಾಗಿದ್ದಲ್ಲಿ ಅವಳು ನಿದ್ರಿಸುವವರೆಗೂ ನೀನು ಸೇವೆ ಮಾಡಬಹುದಿತ್ತಲ್ಲ."

"ಸಾಕು ಎಂದು ಹೇಳಿ ಅವರೇ ಕಳುಹಿಸಿದರು."

"ಯಾಕೆ ; ತಾಯಿ ಏನಾದರೂ ಅಂದಳೆ ?"

ವೃಷಾಲಿಗೆ ತುಂಬಾ ನಾಚಿಕೆಯಾಯಿತು. ಮುಂದೆ ನಿಂತಿದ್ದ ಅವಳನ್ನು ಬರಸೆಳೆದು ಪಕ್ಕದಲ್ಲಿ ಕುಳ್ಳಿರಿಸಿಕೊಂಡ.

"ಹೇಳಬಾರದೇ ?"

"ಊಹೂಂ" ಮತ್ತಷ್ಟು ನಾಚಿದಳು.

"ಹೇಳಬೇಕು" ಕರ್ಣನು ಹಟ ಹಿಡಿದ. "ಹೇಳು ವೃಷಾಲಿ, ತಾಯಿ ಏನೆಂದಳೆಂಬುದನ್ನು ತಿಳಿಸು"

"ಅವರು ಹೇಳಿದರು........ಅವರು........"

"ಏನು ಹೇಳಿದರು ?"

"ದಾರಿ ಕಾಯುತ್ತಿರಬಹುದು" ಎಂದು.

ಕರ್ಣನು ದೊಡ್ಡ ಧ್ವನಿಯಲ್ಲಿ ನಕ್ಕು ಅವಳನ್ನಪ್ಪಿಕೊಂಡ. ಆಗ ಪಕ್ಕದಲ್ಲಿದ್ದ ಮಧ್ಯಪಾತ್ರೆಯು ಕೆಳಗುರುಳಿಕೊಂಡಿತು.

ಪಾತ್ರೆಯು ಬಿದ್ದು ಅದರಲ್ಲಿದ್ದ ಮದ್ಯವೂ ಸಹ ಚೆಲ್ಲಿಹೋಯಿತು.

"ಜೂಜುಗಾರನಿಗೆ ಪಾತ್ರೆಯಲ್ಲಿದ್ದ ಮದ್ಯ ಚೆಲ್ಲಿಹೋದರೇನು ಮಹಾಪಾನ ಪಾತ್ರೆಯೇ ಬರಿದಾಗಿ ಹೋಯಿತೇ ?"

"ಜೂಜು ಎಂಥ ಜೂಜು ?"

"ಸುರೆಯ ಜೂಜು ; ನನ್ನ ಹಾಗೂ ನಿನ್ನ ವಿವಾಹವೆಂಬ ಜೂಜು."

"ಏನು ಮಾತನಾಡುತ್ತೀರಿ ?"

"ಇಂದು ನನಗೆ ಜ್ಞಾನೋದಯವಾಗಿದೆ'' ಎಂದು ನಕ್ಕು "ವಸೂ, ನಾವು ಈ ಶಯ್ಯಾಗೃಹದಲ್ಲಿ ನಗುತ್ತಲಿದ್ದೇವೆ, ಆನಂದದಲ್ಲಿದ್ದೇವೆ. ಹೀಗೆಯೇ ಸ್ವಲ್ಪ ಸಮಯ ಕಳೆದ ನಂತರ ಪರಸ್ಪರರೂ ಜಗಳವಾಡುವುದಿಲ್ಲ ಎಂದು ಹೇಗೆ ಹೇಳುವಿ ? ಇದೂ ಜೂಜಲ್ಲವೆ ?''

"ಸಾಕಷ್ಟು ಕೇಳಿದೆ. ಇರಲಿ ಇನ್ನು ಏಳಿರಿ, ತುಂಬಾ ರಾತ್ರಿಯಾಗಿದೆ.''

ಕರ್ಣನು ಮೇಲೇಳುತ್ತ ನುಡಿದ "ಜೂಜುಗಾರರದೇನು ?''

"ಆ ವಿಷಯವನ್ನು ನೀವು ವಿಚಾರ ಮಾಡಬೇಡಿರಿ. ಶಯ್ಯಾಗೃಹದಲ್ಲಿ ದ್ಯೂತದ ದಾಳಗಳು ಸ್ತ್ರೀಯರ ಕೈಯಲ್ಲಿರುತ್ತವೆ'' ವೃಷಾಲಿ ಮೃದುವಾಗಿ ನಕ್ಕು ನುಡಿದಳು.

ಕರ್ಣನು ಅವಳತ್ತ ನೋಡಿದಾಗ ದೀಪಸ್ತಂಭಗಳಲ್ಲಿಯ ಜ್ಯೋತಿಯನ್ನು ಶಾಂತಗೊಳಿಸುತ್ತಿದ್ದಳು. ನಿಧಾನವಾಗಿ ಕತ್ತಲೆ ಆವರಿಸಿಕೊಂಡಿತು.

ದುರ್ಯೋಧನನು ತಾನು ಮೊದಲೇ ನಿರ್ಧರಿಸಿದಂತೆ ದ್ಯೂತ ಗೃಹ ಹಾಗೂ ಯಜ್ಞಶಾಲೆ ಎರಡರ ನಿರ್ಮಾಣ ಕಾರ್ಯವನ್ನೂ ಆರಂಭಿಸಿದ. ದ್ಯೂತ ಗೃಹದ ಮುಂಭಾಗದಲ್ಲಿಯೇ ಪಾಂಡವರು ರಾಜಸೂಯ ಯಾಗದಲ್ಲಿ ನಿರ್ಮಿಸಿದಂತಹ ಯಜ್ಞಮಂಟಪವನ್ನು ಸಕಲ ರೀತಿಯಿಂದಲೂ ಮೀರಿಸುವಂತೆ ಭವ್ಯವಾದ ಯಜ್ಞ ವೇದಿಕೆಯನ್ನು ರಚಿಸುವಂತೆ ಆಜ್ಞೆ ಮಾಡಿದ. ರಾಜಭವನದಲ್ಲಿರುವ ವಿಸ್ತೀರ್ಣವಾದ ಉದ್ಯಾನವನದ ಒಂದು ಭಾಗದಲ್ಲಿ ಅವನ ದ್ಯೂತ ಗೃಹವು ನಿರ್ಮಾಣವಾಗಲಾರಂಭಿಸಿತು. ನೂರಾರು ಶಿಲ್ಪಕಲಾ ಕೋವಿದರು ಸಾವಿರಾರು ಸಂಖ್ಯೆಯ ಕೂಲಿಯಾಳುಗಳು ಈ ಕಾರ್ಯದಲ್ಲಿ ಭಾಗವಹಿಸಿದರು. ಈ ದ್ಯೂತ ಗೃಹವನ್ನು ಬೇಗನೇ ಮುಗಿಸಿಕೊಡಲು ತಜ್ಞರಾದವರ ಒಂದು ಗುಂಪನ್ನೇ ಮೇಲ್ವಿಚಾರಣೆಗೆಂದು ಆತನು ನಿಯಮಿಸಿದ. ದುರ್ಯೋಧನನು ಮಾತ್ರ ಯಾವಾಗಲೂ ಆ ಕಟ್ಟಡದ ಕನಸನ್ನೇ ಕಾಣುತ್ತಲಿದ್ದ.

ಸಾವಿರಾರು ಜನರ ಪರಿಶ್ರಮದ ಫಲವಾಗಿ ಆ ದ್ಯೂತ ಗೃಹವು ಸಿದ್ಧವಾಯಿತು. ನೂರಾರು ಕಂಬಗಳ ಆಶ್ರಯದಲ್ಲಿ ಅನೇಕ ರೀತಿಯ ಸುವರ್ಣ ಯುಕ್ತವಾದ ಕಮಾನುಗಳು ರೂಪಿತವಾಗಿದ್ದವು. ಅಲ್ಲಲ್ಲಿ ರೇಖಾ ಚಿತ್ರಗಳನ್ನು ಬಿಡಿಸಲಾಗಿತ್ತು, ವಜ್ರವೈಢೂರ್ಯಗಳನ್ನು ಜೋಡಿಸಲಾಗಿತ್ತು. ಚಿತ್ರ ವಿಚಿತ್ರವಾದ ಕುಸುರಿನ ಕೆಲಸಗಳನ್ನು ಮಾಡಲಾಗಿತ್ತು. ಆ ಭವ್ಯವಾದ ಕಟ್ಟಡಕ್ಕೆ ಅನೇಕ ಬಾಗಿಲುಗಳನ್ನು ಮಾಡಿದ್ದರು. ಮಹಾದ್ವಾರದ ಮೇಲ್ಭಾಗದಲ್ಲಿ ಶಿವ-ಪಾರ್ವತಿಯರು ದ್ಯೂತವಾಡುತ್ತ ಕುಳಿತಿರುವ ಚಿತ್ರವನ್ನು ಬಿಡಿಸಿದ್ದರು. ಆ ಭವನದಲ್ಲಿ ಚಂದ್ರಾಕಾರದ ರೀತಿಯಲ್ಲಿ ಕೂಡಲು ಆಸನಗಳನ್ನೇರ್ಪಡಿಸಿದ್ದರು. ಒಂದು ಬದಿಯಲ್ಲಿ ಎತ್ತರವಾದ ವೇದಿಕೆಯನ್ನು ನಿರ್ಮಾಣ ಮಾಡಿ ಅದು ಆಟದ ಸ್ಥಳವೆಂದು ಹೆಸರಿಟ್ಟಿದ್ದರು. ಆ ವೇದಿಕೆಯ ಸುತ್ತಲೂ ಅನೇಕ ಸುವರ್ಣಾಸನಗಳನ್ನಿಡಲಾಗಿತ್ತು. ಮಧ್ಯಭಾಗದಲ್ಲಿ ಸಾಮ್ರಾಟರಿಗಾಗಿ ಒಂದು ಆಸನವನ್ನಿಟ್ಟಿದ್ದು ಆ ಪೀಠದ ಹಿಂಭಾಗದಲ್ಲಿ ಛತ್ರಚಾಮರಗಳನ್ನು ಬಿಡಿಸಿದ್ದರು. ಯಾವದೇ ಆಸನದಲ್ಲಿ ಮಂಡಿಸಿದರೂ ದ್ಯೂತವನ್ನಾಡುವವರು ಹಾಕುವ ಲೆತ್ತದ ದಾಳಗಳು ಎಲ್ಲರಿಗೂ ಕಾಣಿಸುವಂತಹ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಸಾಮ್ರಾಟರು ಕುಳಿತು

ಕೊಳ್ಳುವ ಸಿಂಹಾಸನದ ಮೇಲೆ ತನ್ನ ರೆಕ್ಕೆಗಳನ್ನು ಬಿಚ್ಚಿ ಹಾರುತ್ತಿರುವಂತೆ ತೋರುವ ರತ್ನಖಚಿತವಾದ ಗರುಡನ ಚಿತ್ರವನ್ನು ಬಿಡಿಸಿದ್ದರು.

ಅರ್ಧವರ್ತುಲಾಕಾರದಲ್ಲಿ ಮಂಡಿತವಾದ ಆಸನಗಳ ಮಧ್ಯದಲ್ಲಿ ಹಸ್ತಿದಂತದಿಂದ ಮಾಡಿದ ಒಂದು ದೊಡ್ಡದಾದ ಆಸನವನ್ನಿಟ್ಟಿದ್ದರು. ಅದಕ್ಕೆ ನಾಲ್ಕೂ ಬದಿಗೂ ಬೆಳ್ಳಿಯ ಕಲಶಗಳಿದ್ದವು. ಆ ಆಸನದ ಮೇಲೆ ದ್ಯೂತದ ಪಟವನ್ನು ಹಾಸಿದ್ದರು.

"ಕರ್ಣ, ಈ ದ್ಯೂತ ಗೃಹದಲ್ಲಿ ಏನಾದರೂ ಕಡಿಮೆ ಎಂದೆನಿಸುವದೆ?"

"ಇಲ್ಲ ಯುವರಾಜ, ಸಕಲ ಸಾಧನಗಳಿಂದಲೂ ಈ ದ್ಯೂತಗೃಹವು ಪರಿಪೂರ್ಣ ಎಂದೆನಿಸಿದೆ. ಇನ್ನು ನಿನಗೆ ಹೇಳುವದಾದಲ್ಲಿ ಎಂದೂ ಈ ದ್ಯೂತಗೃಹದ ಬಗ್ಗೆ ನನಗೆ ಆಕರ್ಷಣೆ ಎಂಬುದು ಇಲ್ಲವೇ ಇಲ್ಲ. ಹೀಗಿದ್ದರೂ ನಿನ್ನ ಈ ದ್ಯೂತಗೃಹವನ್ನು ನೋಡಿದಾಗ ನಾನೂ ಒಂದು ಸಲ ದಾಳಗಳನ್ನೇಕೆ ಎಸೆಯಬಾರದು ಎಂದೆನಿಸುತ್ತಿದೆ."

ಕರ್ಣನೊಂದಿಗೆ ದುರ್ಯೋಧನನು ಆ ದ್ಯೂತಗೃಹದ ಪ್ರತಿಯೊಂದು ಕಾರ್ಯವನ್ನೂ ಪರೀಕ್ಷಿಸಿ ಎಲ್ಲ ವಿವರಗಳನ್ನೂ ತಿಳಿದುಕೊಂಡು ಸಮಾಧಾನ ಪಟ್ಟ ನಂತರ ಅತಿ ಹೆಮ್ಮೆಯಿಂದ ಕರ್ಣನಿಗೆ ಹೇಳಿದ,

"ಇನ್ನು ಹೆಚ್ಚು ದಿನ ಕಾಯಬೇಕಾಗಿಲ್ಲ. ಸಪ್ತಮಿಯ ದಿನ ತುಂಬ ಒಳ್ಳೆಯದು ಎಂದು ಮಾವನು ಹೇಳಿದ್ದಾನೆ."

"ಸಪ್ತಮಿ! ತುಂಬ ಸಮೀಪ."

"ಯಾಕೆ? ಅಡಚಣೆ ಎನಿಸಿದೆ? ಯಜ್ಞದ ಸಕಲ ಸಿದ್ಧತೆಯೂ ಪೂರ್ಣಗೊಂಡಿದೆ. ತಂದೆಯವರು ನಿನ್ನೆಯೇ ವಿದುರನನ್ನು ಇಂದ್ರಪ್ರಸ್ಥಕ್ಕೆ ಕಳಿಸಿಕೊಟ್ಟಿದ್ದಾರೆ. ಪಾಂಡವರನ್ನು ಕರೆತರುವಂತೆ ಹೇಳಿದ್ದಾರೆ."

"ವಿದುರನ ಕೈಯಿಂದ ಆಮಂತ್ರಣವೆ?"

"ಹೌದು, ರಾಜಸೂಯ ಯಾಗದಿಂದ ಪಾಂಡವರು ಆಯಾಸಗೊಂಡಿದ್ದಾರೆ. ಅವರ ಶ್ರಮಪರಿಹಾರಾರ್ಥವಾಗಿ ನಾಲ್ಕು ದಿನ ಇಲ್ಲಿ ಬಂದಿರುತ್ತಾರೆ. ಸಂಗೀತ ನೃತ್ಯ, ದ್ಯೂತ ಮೊದಲಾದುವುಗಳಿಂದ ಅವರ ಆಯಾಸವು ದೂರವಾಗಬೇಕಾಗಿದೆ."

ಯಾರೋ ಹಿಂದೆ ಬರುತ್ತಿರುವಂತೆನಿಸಿತು. ದುರ್ಯೋಧನನು ತಿರುಗಿ ನೋಡಿದಾಗ ಆತನ ಸೋದರ ವಿಕರ್ಣನು ದ್ಯೂತಗೃಹವನ್ನು ಪ್ರವೇಶ ಮಾಡುತ್ತಿದ್ದ.

"ಅಣ್ಣಾ, ಮಹಾತ್ಮಾ ವಿದುರರು ಬರುತ್ತಿದ್ದಾರೆ."

ದುರ್ಯೋಧನನು ಕರ್ಣನನ್ನೊಂದು ಸಲ ನೋಡಿದ. "ನೋಡಿದೆಯಾ ಮಿತ್ರಾ, ನಮ್ಮ ಚಿಕ್ಕಪ್ಪನಿಗೆ ಆಯುಷ್ಯವೆಷ್ಟಿದೆ ಎಂಬುದನ್ನು ತಿಳಿದು ಕೊಂಡೆಯಾ" ಎಂದು ಹೇಳಿ ವಿಕರ್ಣನತ್ತ ತಿರುಗಿ "ಅವರು ಇಂದ್ರಪ್ರಸ್ಥಕ್ಕೆ ಹೊರಡುವವರಿದ್ದರಲ್ಲವೆ ?

"ಹೌದು ಪ್ರಯಾಣದ ಸಿದ್ಧತೆಗಳೆಲ್ಲಾ ಮುಗಿದಿವೆ, ಇಂದು ಭೋಜನಾ ನಂತರ ನಾನೂ ಅವರೊಂದಿಗೆ ಹೊರಡುವೆ."

ವಿಕರ್ಣನಿಗೆ ಮುಂದೆ ಮಾತನಾಡುವದಾಗಲಿಲ್ಲ. ಯಾಕೆಂದರೆ ಅಷ್ಟ ರಲ್ಲಿಯೇ ವಿದುರನು ಮಹಾದ್ವಾರದಲ್ಲಿ ಕಾಣಿಸಿಕೊಂಡ. ಆತನ ಮುಖವು ತುಂಬಾ ಚಿಂತಾಕ್ರಾಂತವಾಗಿತ್ತು. ದುರ್ಯೋಧನನು ವಿದುರನಿಗೆ ನಮಸ್ಕರಿಸಿದ. ನಂತರ ಕರ್ಣನೂ ಆತನ ಅನುಕರಣೆ ಮಾಡಿದ, ಅನಂತರ ದುರ್ಯೋಧನನು ನುಡಿದ,

"ಚಿಕ್ಕಪ್ಪ, ತಾವು ಬಂದಿದ್ದು ತುಂಬ ಒಳ್ಳೆಯದಾಯಿತು. ಒಂದು ಸಲ ತಾವು ಈ ದ್ಯೂತಗೃಹವನ್ನು ನೋಡುವುದು ವಿಹಿತ" ಎಂದು ಹೇಳಿ ಅರ್ಧ ಚಂದ್ರಾಕಾರದಲ್ಲಿಡಲಾದ ಆಸನಗಳತ್ತ ಅವರನ್ನು ಕರೆದುಕೊಂಡು ಬಂದು ಅವುಗಳನ್ನು ತೋರಿಸುತ್ತ "ಚಿಕ್ಕಪ್ಪ ನೋಡಿರಿ ! ಈ ಸುವರ್ಣ ಸಿಂಹಾಸನ ಗಳ ಮೇಲೆ ಆಮಂತ್ರಿತ ರಾಜರು ಕುಳಿತುಕೊಳ್ಳುತ್ತಾರೆ. ಮಧ್ಯಭಾಗದಲ್ಲಿ ಕೌರವ ಶ್ರೇಷ್ಠರಿರುತ್ತಾರೆ. ಅವರ ಪಕ್ಕದಲ್ಲಿಯೇ ಭೀಷ್ಮಾಚಾರ್ಯರ ಆಸನವಿದೆ. ಆದರೆ ತಂದೆಯ ಪಕ್ಕದಲ್ಲಿಯೇ ಇರುತ್ತಿದ್ದ ನಿಮ್ಮ ಆಸನವನ್ನು ಮಾತ್ರ ಈ ಸಲ ಸ್ವಲ್ಪ ಬದಲಿಸಲಾಗಿದೆ. ದ್ಯೂತದಾಟವು ಎಲ್ಲರಿಗೂ ಸರಿಯಾಗಿ ಕಾಣಬೇಕೆಂದು ಎಲ್ಲ ರೀತಿಯ ವ್ಯವಸ್ಥೆಯನ್ನೂ ಮಾಡಲಾಗಿದೆ."

ದಣಿದ ಮನಸ್ಸಿನಂತೆ ತೋರುತ್ತಿದ್ದ ವಿದುರನು "ಯುವರಾಜ, ಧೃತ ರಾಷ್ಟ್ರ ಮಹಾರಾಜರು ಪಾಂಡವರಿಗೆ ಆಮಂತ್ರಣವನ್ನೀಯುವಂತೆ ನನಗೆ ಆಜ್ಞಾಪಿಸಿದ್ದಾರೆ."

"ನನಗೆ ಆ ವಿಚಾರ ತಿಳಿದಿದೆ. ವಿಶೇಷವಾಗಿ ತಮ್ಮನ್ನಲ್ಲದೆ ಬೇರೆ ಯಾರನ್ನೂ ಕಳಿಸಬಾರದೆಂದು ತಂದೆಯವರಲ್ಲಿ ಆಗ್ರಹಪಡಿಸಿದೆ."

"ಇಂಥ ವಿಚಾರಗಳಲ್ಲಿ ನನಗೆ ಅಭಿರುಚಿ ಎಂಬುದಿಲ್ಲ."

"ಯಾಕೆ ? ಅಭಿರುಚಿ ಇರಲಾರದಂಥ ಕಾರಣವಾದರೂ ಏನು ? ಪಾಂಡವರ ರಾಜಸೂಯ ಯಾಗದಲ್ಲಿ ನಿಮ್ಮ ಉತ್ಸಾಹದ ಮೇರೆಯು ಮೀರಿದಂತಿತ್ತಲ್ಲ ! ಹಾಗೆಯೇ ಇಲ್ಲಿಯೂ ಯಜ್ಞಯಾಗಾದಿಗಳು ನಡೆಯುತ್ತವೆ. ಅಲ್ಲಿಯ ಮಯಸಭೆಯಂತೆಯೇ ಈ ದ್ಯೂತಗೃಹವೂ ಇದೆ."

"ನಿಮ್ಮ ಈ ದ್ಯೂತ, ಹಾಗೂ ಯಜ್ಞ ಇವು ನಿಜವಾಗಿದ್ದ ಪಕ್ಷದಲ್ಲಿ ನಾನು ಬಹು ಸಂತೋಷದಿಂದ ಇಂದ್ರಪ್ರಸ್ಥಕ್ಕೆ ಹೋಗುತ್ತಿದ್ದೆ."

"ಹಾಗೆಂದರೆ ಇದು ನಿಜವಾದ ಯಜ್ಞವಲ್ಲ ಎಂದು ತಮ್ಮ ಅಭಿಪ್ರಾಯವೆ? ಕರ್ಣ ಕೇಳು ಚಿಕ್ಕಪ್ಪನವರು ಮಾತನಾಡುತ್ತಿರುವುದನ್ನು ಕೇಳು'' ದುರ್ಯೋಧನನು ವ್ಯಂಗ್ಯವಾಗಿ ನಗುತ್ತಲಿರುವುದನ್ನು ಕಂಡ ವಿದುರನು ''ದುರ್ಯೋಧನಾ ನನ್ನ ಮಾತನ್ನು ಕೇಳು, ನೀನು ಈ ದ್ಯೂತ ಮಂಡಿಸುವದನ್ನು ಬಿಡು. ಹೋಗಲಿ ಕೊನೆಯ ಪಕ್ಷ ಆ ಪಾಂಡವರನ್ನು ಕರೆತರುವ ಕೆಲಸವನ್ನಾದರೂ ನನಗೆ ಹೇಳಬೇಡ.''

''ಕಾಕಾ, ನಿಮಗೆ ಹೇಳಲಿಕ್ಕೆ ನಾನಾರು ? ತಂದೆ ಹೇಳಿದುದನ್ನೇ ನಾನು ಕೇಳಿದೆ.''

''ಅಹುದು. ನನ್ನನ್ನೇ ಕೇಳಿಸಬೇಕೆಂಬ ಆಗ್ರಹವಾದರೂ ಯಾತಕ್ಕೆ?"

''ಚಿಕ್ಕಪ್ಪ, ನಮಗಿಂತಲೂ ನಿಮಗೆ ಪಾಂಡವರ ಮೇಲೆ ಹೆಚ್ಚಿನ ಮಮತೆ ಇದೆ. ನೀವು ಅವರ ಹಿತಚಿಂತಕರು.''

''ಅವರ ಹಿತವನ್ನೇನು ಮಾಡಿರುವೆ !''

ದುರ್ಯೋಧನನ ವ್ಯಂಗ್ಯ ನಗೆ ಹಾಗೂ ಮಾತು ಒಂದು ಕ್ಷಣ ನಿಂತಿತು. ಆದರೆ ಅದು ಕೇವಲ ಒಂದೇ ಒಂದು ಕ್ಷಣ ಮಾತ್ರ

''ಚಿಕ್ಕಪ್ಪ, ತುಂಬ ಚೆನ್ನಾಗಿ ಹೇಳಿದಿರಿ. ನೀವು ಬೆಂಗಾವಲಾಗಿರದಿದ್ದಲ್ಲಿ ಅವರು ಲಾಕ್ಷಾಗಾರದಿಂದ ಪಾರಾಗಿ ಬದುಕುತ್ತಿರಲಿಲ್ಲ. ನೀವು ನೌಕೆಯನ್ನಿಡದೇ ಹೋಗಿದ್ದರೆ ಅವರು ಗಂಗಾ ಪ್ರವಾಹವನ್ನು ದಾಟಲು ಸಾಧ್ಯವಿತ್ತೇ ? ನನಗೆ ಎಲ್ಲವೂ........!!''

"ಆದರೂ ನನ್ನನ್ನು ಕಳಿಸುತ್ತಿರುವೆಯಲ್ಲ."

"ನೀವು ಪಾಂಡವರ ಹಿತಚಿಂತಕರಿದ್ದಂತೆ ತಂದೆಯವರ ಸಲಹೆಗಾರರೂ ಇರುವಿರಿ. ಪಾಂಡವರಿಂದ ನೀವು ಯಾವುದನ್ನೂ ಬಚ್ಚಿಡಲಾರಿರಿ. ಆದುದರಿಂದ ನನ್ನ ಮೇಲೆ ವಿಶ್ವಾಸಘಾತತನದ ಆರೋಪವು ಬರಲಾರದು."

"ಕರ್ಣ, ಈ ಸಲಹೆ ನಿನ್ನದೇನು ?"–ವಿದುರನು ಪ್ರಶ್ನೆಮಾಡಿದ."

"ಚಿಕ್ಕಪ್ಪ, ಇದರಲ್ಲಿ ಕರ್ಣನ ಪಾತ್ರ, ಯಾವ ಸಂಬಂಧವೂ ಇಲ್ಲ."

"ಕರ್ಣ, ನೀನೂ ಸಹಕಾರವನ್ನಿತ್ತಿರುವಿಯಾ" ವಿದುರನು ಪುನಃ ಪ್ರಶ್ನೆ ಮಾಡಿದ.

"ಅಹುದು ಎಂದು ನಾನು ಉತ್ತರಿಸಿದರೆ !"

"ನಿನ್ನ ಮಾತು ನಿಜವೆನಿಸುವದಿಲ್ಲ, ನೀನು ದ್ಯೂತ ಮಾರ್ಗವನ್ನು ಅನುಸರಿಸಲಾರೆ. ಯುದ್ಧ ಮಾಡಲು ಸಿದ್ಧನಿರುವವನು ದ್ಯೂತ........"

"ಹಾಗಿದ್ದಲ್ಲಿ ನೀವು ನನ್ನನ್ನೇಕೆ ವಿಚಾರಿಸುವಿರಿ." ಕರ್ಣನು ಮರು ಪ್ರಶ್ನೆ ಮಾಡಿದ.

"ಚಿಕ್ಕಪ್ಪ, ನಿಮಗೆ ತಂದೆಯವರ ಅಪ್ಪಣೆಯಾಗಿದೆ, ನೀವು ಇಂದ್ರಪ್ರಸ್ಥಕ್ಕೆ ಹೊರಡಿರಿ. ದ್ಯೂತವಾಡಲು ಪಾಂಡವರಿಗೆ ಆಮಂತ್ರಣ ಕೊಟ್ಟು ಬನ್ನಿರಿ. ಯಜ್ಞವು ಕೇವಲ ನಿಮಿತ್ತ ಮಾತ್ರ ಎಂಬುದನ್ನು ಅವರಿಗೆ ತಿಳಿಸಿರಿ, ದ್ಯೂತವೇ ನಮ್ಮ ಆಹ್ವಾನವೆಂಬುದನ್ನು ಸ್ಪಷ್ಟಪಡಿಸಿರಿ. ಯಜ್ಞಮಂಟಪದ ಸುಗ್ರಾಸ ಭೋಜನಕ್ಕಾಗಿ ನಾವು ಅವರನ್ನು ಆಮಂತ್ರಿಸುತ್ತಿಲ್ಲ. ಜೂಜಾಡಲು ಅವರಿಗೆ ಕರೆಸುತ್ತಿರುವುದಾಗಿ ತಿಳಿಸಿರಿ. ಸುಬಲ ಪುತ್ರ, ಗಾಂಧಾರ ದೇಶಾಧಿಪತಿ ಶಕುನಿ ಈ ದ್ಯೂತದಲ್ಲಿ ಭಾಗವಹಿಸುವರೆಂಬುದನ್ನೂ ಅವರಿಗೆ ಹೇಳಿರಿ, ಜೂಜಿನಲ್ಲಿ ಅವರು ಅಪ್ರತಿಮರೆಂಬುದನ್ನು ತಿಳಿಸಲು ಮರೆಯಬೇಡಿರಿ. ಯಾಕೆಂದರೆ ಅವರು ಕೃತಹಸ್ತರು. ಅವರು ಹೇಳಿದಂತೆ ಅವರ ಕೈಯೊಳಗಿನ ದಾಳಗಳು ಉರುಳುತ್ತವೆ. ಅವರೊಂದಿಗೆ ಜೂಜಾಡುವದೆಂದರೆ ಅಪಜಯವನ್ನು ಉಡಿಯಲ್ಲಿ ಕಟ್ಟಿಕೊಂಡಂತೆ ಎಂಬುದನ್ನು ತಿಳಿಸಿರಿ. ಈ ಎಲ್ಲ ವಿವರಗಳನ್ನೂ ಯುಧಿಷ್ಠಿರನಿಗೆ ತಿಳಿಸಿ ಅನಂತರ ಆತನಿಗೆ ದ್ಯೂತದ ಆಮಂತ್ರಣವನ್ನು ಕೊಡಿರಿ. ಅವರೆಲ್ಲರನ್ನೂ ಮರ್ಯಾದೆಯಿಂದ ಕರೆದು ಕೊಂಡು ಬನ್ನಿರಿ."

ದುರ್ಯೋಧನನ ಮಾತುಗಳನ್ನು ಕೇಳಿದ ಕರ್ಣನೂ ಆಶ್ಚರ್ಯಚಕಿತನಾದ, ದ್ಯೂತದ ರಹಸ್ಯವೆಲ್ಲ ಈಗ ಹೊರಗೆಡಹಿದಂತಾಗಿತ್ತು. ಅದನ್ನೆಲ್ಲ ಕೇಳಿದ ಮೇಲೆ ತಡೆಯಲಾರದೆ,

"ಯುವರಾಜ, ಆಮಂತ್ರಣವನ್ನೀಯುವಾಗಲೇ ಹೀಗೆ ಹೇಳಿಕಳಿಸಿದರೆ ಬುದ್ಧಿವಂತರಾದವರು ಎಂದಾದರೂ ಜೂಜಾಡಲು ಬರುತ್ತಾರೆಯೇ ?"

"ಬುದ್ಧಿವಂತರು ಬಾರದಿದ್ದರೂ ಸಹ ಪಾಂಡವರಂತೂ ಖಂಡಿತವಾಗಿ ಬಂದೇ ಬರುತ್ತಾರೆ. ತಮ್ಮ ಕೈಗಳಿಂದ ಸರ್ವಸ್ವವನ್ನೂ ಕಳೆದುಕೊಂಡು ಹೋಗುತ್ತಾರೆ. ಯಾಕೆಂದರೆ ಅವರು ದ್ಯೂತದ ವ್ಯಸನಿಗಳಷ್ಟೇ ಅಲ್ಲ. ಕೃತ್ರಿಮ ಸಾಮ್ರಾಟರೂ ಆಗಿದ್ದಾರೆ. ಆದುದರಿಂದಲೇ ಅವರಿಗೆ ತಮ್ಮ ಸಾಮ್ರಾಟ ಪದವಿಯನ್ನು ಉಳಿಸಿಕೊಳ್ಳಬೇಕಾಗಿದ್ದಲ್ಲಿ ಅವಶ್ಯವಾಗಿ ಅವರು ಈ ದ್ಯೂತಕ್ಕಿಳಿಯಬೇಕಾಗುತ್ತದೆ."

"ಸಾಮ್ರಾಟ ಪದವಿಗೂ ಈ ದ್ಯೂತದ ಆಟಕ್ಕೂ ಯಾವ ಸಂಬಂಧ ?"

"ಸಂಬಂಧವನ್ನು ತಿಳಿಯಬಯಸುವೆಯಾ ? ಮಿತ್ರಾ, ಒಂದು ಸಲ ಯುಧಿಷ್ಠಿರನು ನಮ್ಮ ಈ ಆಹ್ವಾನವನ್ನು ಸ್ವೀಕರಿಸದೆ ಹೋಗಲಿ, ಆಗ ಅದರ ಮೋಜನ್ನಾದರೂ ನೋಡುವಿಯಂತೆ, ನಿಜವಾದ ಕ್ಷತ್ರಿಯರು ಎಂದೂ ದ್ಯೂತದ ಆಹ್ವಾನವನ್ನು ನಿರಾಕರಿಸಲಾರರು. ಯಾರು ಕ್ಷತ್ರಿಯರೋ ಅವರು ಎಂದೂ ಸಾಮ್ರಾಟರೆಂದೆನಿಸಿಕೊಳ್ಳಲಾರರು. ಮಿತ್ರಾ, ಯುಧಿಷ್ಠಿರನು ಇಲ್ಲಿಗೆ ಬರಲೇಬೇಕಾಗುವದು."

ದುರ್ಯೋಧನನು ಅಟ್ಟಹಾಸದಿಂದ ನಗುತ್ತಲಿದ್ದ. ವಿದುರನು ಆ ದ್ಯೂತಗೃಹದಿಂದ ಹೊರಟು ಹೋಗುವವರೆಗೂ ಆತ ನಗುತ್ತಲೇ ಇದ್ದ.

ದುರ್ಯೋಧನನ ಮುಂಧೋರಣೆಗಳೆಲ್ಲ ಸತ್ಯವಾಗಿದ್ದವು. ಇಂದ್ರಪ್ರಸ್ಥದಿಂದ ಪಾಂಡವರೆಲ್ಲ ತಮ್ಮ ಪರಿವಾರವನ್ನು ಕೂಡಿಕೊಂಡು ಹಸ್ತಿನಾಪುರಕ್ಕೆ ಆಗಮಿಸಿದರು. ಕೌರವರ ರಾಜಗೃಹದಲ್ಲಿ ಅವರು ಬಿಡಾರ ಮಾಡಿದರು. ಯಜ್ಞಕ್ಕೆ ಬಂದ ರಾಜಾಧಿರಾಜರಿಗೆಲ್ಲ ಪಾಂಡವರು ಹಾಗೂ ಕೌರವರಲ್ಲಿಯ ಸಖ್ಯತ್ವವನ್ನು ಕಂಡು ಸಮಾಧಾನವೆನಿಸಿತು. ಪಾಂಡವರಿಗೆ ಯಾವ ರೀತಿಯಿಂದಲೂ ಅನಾನುಕೂಲಗಳಾಗದಂತೆ ಸರ್ವರೀತಿಯಿಂದಲೂ ವ್ಯವಸ್ಥೆಯನ್ನು ಮಾಡಲಾಗಿತ್ತು. ನವ ವಿಧವಾದ ಸುಗ್ರಾಸ ಭೋಜನಕ್ಕಾಗಿ ಭವ್ಯವಾದ

ಪಂಕ್ತಿಯ ಏರ್ಪಾಡುಗಳನ್ನು ಮಾಡಿದ್ದರು. ಭೋಜನಾನಂತರ ನೃತ್ಯ, ಸಂಗೀತ ಮೊದಲಾದ ವ್ಯವಸ್ಥೆಗಳಿಂದಾಗಿ ಪಾಂಡವರೆಲ್ಲ ತಮ್ಮ ಬಿಡಾರದಲ್ಲಿ ಸಂಗೀತ ಶ್ರವಣದಲ್ಲಿ ತಲ್ಲೀನರಾಗಿದ್ದರು.

ಉಷಃಕಾಲದಲ್ಲಿ ವಂದಿಮಾಗಧರ ಸ್ತುತಿಪಾಠಕದೊಂದಿಗೆ ಪಾಂಡವರು ಎದ್ದು ತಮ್ಮ ನಿತ್ಯಾಹ್ನಿಕಗಳನ್ನು ತೀರಿಸಿಕೊಂಡು ಧೃತರಾಷ್ಟ್ರನ ಭೇಟಿಗಾಗಿ ಹೊರಟರು. ರಾಜಸಭೆಯಲ್ಲಿ ಭೀಷ್ಮಾಚಾರ್ಯರು, ದ್ರೋಣಾಚಾರ್ಯ, ವಿದುರ ಮೊದಲಾದವರೊಂದಿಗೆ ದುರ್ಯೋಧನ ಹಾಗೂ ಕರ್ಣರು ಉಪಸ್ಥಿತರಿದ್ದರು. ಕ್ಷೇಮಸಮಾಚಾರಗಳು ಮುಗಿದ ನಂತರ ಧೃತರಾಷ್ಟ್ರನು ಹೇಳಿದ,

"ಯುಧಿಷ್ಠಿರನೆ, ಯುವರಾಜ ದುರ್ಯೋಧನನು ಯಜ್ಞಶಾಲೆಯೊಂದಿಗೆ "ಸ್ಫಟಿಕ ತೋರಣ" ಎಂಬ ದ್ಯೂತಗೃಹವನ್ನೂ ಕಟ್ಟಿಸಿದ್ದಾನೆ. ನೀವೆಲ್ಲ ಆ ಹೊಸ ಕಟ್ಟಡದಲ್ಲಿ ಮನರಂಜನೆಯ ಸುಖವನ್ನನುಭವಿಸಿರಿ."

ಈ ಮಾತಿಗೆ ಸಮ್ಮತಿಯನ್ನೀಯಲು ಧರ್ಮರಾಜನು "ತಮ್ಮ ಆಜ್ಞೆ. ಮಹಾರಾಜ, ಆ ದ್ಯೂತಗೃಹದ ವಿಷಯವಾಗಿ ನಾನು ತುಂಬ ಕೇಳಿರುವೆ. ದ್ಯೂತದ ಆಮಂತ್ರಣವನ್ನು ಸ್ವೀಕರಿಸಿಯೇ ನಾನಿಲ್ಲಿ ಬಂದಿದ್ದೇನೆ."

ಯುಧಿಷ್ಠಿರನೊಂದಿಗೆ ಧೃತರಾಷ್ಟ್ರ ಮಹಾರಾಜನೂ ದ್ಯೂತಗೃಹವನ್ನು ಪ್ರವೇಶಮಾಡಿದಾಗ ಅಲ್ಲಿ ಅನೇಕ ರಾಜರು, ಸಾಮಂತರು ಪ್ರತಿಷ್ಠಿತ ನಾಗರೀಕರು ತಮ್ಮ ತಮ್ಮ ಆಸನಗಳಲ್ಲಿ ಮಂಡಿತರಾಗಿದ್ದರು. ಸಂಜಯನು ಧೃತರಾಷ್ಟ್ರನ ಕೈಹಿಡಿದುಕೊಂಡು ನಿಧಾನವಾಗಿ ಅವರನ್ನು ಕರೆದುಕೊಂಡು ಬರುತ್ತಿದ್ದ. ಮಾರ್ಗಮಧ್ಯದಲ್ಲಿ ಕಾಣಬರುವ ದ್ಯೂತ ಗೃಹದ ಕಲಾ ವೈಭವಗಳನ್ನೆಲ್ಲ ಮಹಾರಾಜರಿಗೆ ಮನದಟ್ಟಾಗುವಂತೆ ಆತನು ವಿವರಣೆಗಳನ್ನೀಯುತ್ತಿದ್ದ. ರಾಷ್ಟ್ರದ ಹೆಸರಾಂತ ಜೂಜುಗಾರರನೇಕರು ಅಂದಿನ ದ್ಯೂತದಾಟವನ್ನು ನೋಡಲು ಈಗಾಗಲೇ ಅಲ್ಲಿ ಮಿಳಿತರಾಗಿದ್ದರು. ಯುಧಿಷ್ಠಿರನಿಗೆ ಅವರೆಲ್ಲರ ಪರಿಚಯವನ್ನು ಮಾಡಿಕೊಡಲಾಯಿತು. ಧೃತರಾಷ್ಟ್ರ ಮಹಾರಾಜರು ಸಿಂಹಾಸನದಲ್ಲಿ ಮಂಡಿತರಾದೊಡನೆ ಎಲ್ಲರೂ ಪುನಃ ತಮ್ಮ ತಮ್ಮ ಆಸನದಲ್ಲಿ ಕುಳಿತುಕೊಂಡರು. ದ್ಯೂತಗೃಹದಲ್ಲಿ ಶಾಂತತೆಯು ಪಸರಿಸಿತು. ಆಗ ದುರ್ಯೋಧನನು ಎದ್ದು ನಿಂತು ನುಡಿದ,

"ಹಿರಿಯರೂಪರೇ, ತಮ್ಮ ಆಶೀರ್ವಾದದಿಂದ ದ್ಯೂತವನ್ನಾಡಲು ಈ

ನೂತನ ಗೃಹವನ್ನು ನಿರ್ಮಿಸಲಾಗಿದೆ. ಅಲೌಕಿಕವಾದ ರೀತಿಯಲ್ಲಿ ನಿರ್ಮಿಸಲಾದ ಈ ಗೃಹವನ್ನು ನೋಡಿ ಆನಂದಿಸಲು ಅನೇಕ ರಾಜರುಗಳನ್ನೂ, ರಾಜಪ್ರಮುಖರನ್ನೂ, ನಾಗರೀಕರನ್ನೂ ಆಮಂತ್ರಿಸಲಾಗಿದೆ. ಈ ದ್ಯೂತದಲ್ಲಿ ಭಾಗವಹಿಸಲು ರಾಜಸೂಯ ಯಜ್ಞ ಮಾಡಿ ಸಾಮ್ರಾಟ ಪದವಿಯನ್ನು ಪಡೆದ ಯುಧಿಷ್ಠಿರ ಮಹಾರಾಜರು ತಮ್ಮ ಸೇವಕರೊಂದಿಗೆ ಇಲ್ಲಿಗೆ ದಯಮಾಡಿಸಿದ್ದಾರೆ. ನಮ್ಮ ದೂತದಾಟವನ್ನು ಆಶೀರ್ವದಿಸಲು ಪಿತಾಮಹರಾದ ಭೀಷ್ಮರು, ಮಹಾತ್ಮ ವಿದುರ, ದ್ರೋಣಾಚಾರ್ಯ, ಕೃಪಾಚಾರ್ಯರಂತಹ ಹಿರಿಯರೂ ಸಹ ಇಲ್ಲಿ ಉಪಸ್ಥಿತರಿದ್ದಾರೆ. ದ್ಯೂತವನ್ನು ನೋಡಲು ಕಾತುರವಾದ ಈ ಸಭೆಗೆ ತಾವು ಅಪ್ಪಣೆ ದಯಪಾಲಿಸಬೇಕು."

ಧೃತರಾಷ್ಟ್ರ ಮಹಾರಾಜರು ಗಂಭೀರ ಸ್ವರದಲ್ಲಿ ನುಡಿದರು;

"ಮಕ್ಕಳೇ ಜೂಜು ಕಲಹಕ್ಕೆ ಮೂಲ" ಅನೇಕರು ಅದನ್ನು 'ಮೃತ್ಯುದ್ವಾರ' ಎಂದೂ ಕರೆದಿದ್ದಾರೆ. ಆದರೂ ದ್ಯೂತವು ರಾಜಮಾನ್ಯ, ಧರ್ಮಮಾನ್ಯವೂ ಆಹುದು. ನೀವುಗಳೆಲ್ಲ ಸ್ನೇಹಬುದ್ಧಿಯಿಂದ ಹಾಗೂ ಮುಕ್ತ ಮನಸ್ಸಿನಿಂದ ಈ ದ್ಯೂತವನ್ನಾಡಿರಿ."

ದುರ್ಯೋಧನನ ದೃಷ್ಟಿ ಯುಧಿಷ್ಠಿರನ ಕಡೆ ತಿರುಗಿದಾಗ ಆತ ಎದ್ದು ದುರ್ಯೋಧನನನ್ನು ಕುರಿತು ಪ್ರಶ್ನೆ ಮಾಡಿದ.

"ನಾನು ಯಾರೊಂದಿಗೆ ದ್ಯೂತವಾಡಬೇಕು ? ಪಣಕ್ಕಿಟ್ಟ ಭಾಗವನ್ನು ಕೊಡುವವರು ಯಾರು ? ಇದನ್ನು ತಿಳಿದುಕೊಳ್ಳಬಹುದೇ "

ಆಗ ದುರ್ಯೋಧನನು ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿದ.

"ಹೇ ಭೂಪತೇ, ನಿನಗೆ ಮೊದಲೇ ತಿಳಿಸಿದಂತೆ ನನ್ನ ಮಾವನಾದ ಸುಬಲ ಪುತ್ರ ಗಾಂಧಾರ ದೇಶಾಧಿಪತಿ ಶಕುನಿ ಮಹಾರಾಜನು ತನ್ನೊಂದಿಗೆ ದ್ಯೂತವಾಡುತ್ತಾನೆ. ದ್ಯೂತದಲ್ಲಿ ನೀವು ಗೆದ್ದುದನ್ನೆಲ್ಲ ನಿಮಗೆ ನಾನು ಕೊಡುತ್ತೇನೆ. ಇಲ್ಲಿ ಕೂಡಿದ ಸಭಾಸದರೇ ಈ ನನ್ನ ವಚನಕ್ಕೆ ಸಾಕ್ಷಿ.

ಶಕುನಿಯು ತನ್ನ ಆಸನದಿಂದೆದ್ದು ನಿಂತು ಯುಧಿಷ್ಠಿರನಿಗೆ ಹೇಳಿದ

"ಯುಧಿಷ್ಠಿರನೇ ನಾನು ನಿನ್ನೊಂದಿಗೆ ದ್ಯೂತವನ್ನಾಡಲು ಸಿದ್ಧನಿರುವೆ.

ಯುಧಿಷ್ಠಿರನು ಸಭೆಯನ್ನೆಲ್ಲ ಒಂದು ಸಲ ಅವಲೋಕಿಸಿದ.

"ಶಕುನಿ, ಸಾಮ್ರಾಟ್ಟರು ಈ ಮೊದಲೇ ದ್ಯೂತವೆಂಬುದು ಪಾಪದ ಮೂಲ ಎಂಬುದನ್ನು ತಿಳಿಸಿದ್ದಾರೆ. ಜೂಜಾಟದಲ್ಲಿ ನಿರತರಾದವರು ಯಾವಾಗಲೂ ಕಪಟತನವನ್ನೇ ಅವಲಂಭಿಸಿರುತ್ತಾರೆ."

"ರಾಜಾ, ನೀನು ಮಹಾಜ್ಞಾನಿಯಾಗಿರುವಿ. ಈ ಜಗತ್ತಿನ ಆಹ್ವಾನವು ಹೀಗೆಯೇ ಇರುತ್ತದೆ. ವಿದ್ವಾಂಸನು ಅವಿದ್ಯಾವಂತನಿಗೆ, ಶಾಸ್ತ್ರಜ್ಞನು ಮೂಢನಿಗೆ ಬಲಾಢ್ಯನು ದುರ್ಬಲನಿಗೆ, ಇಂಥದೇ ಆಹ್ವಾನವನ್ನೀಯುತ್ತ ಬಂದಿದ್ದಾನೆ. ನಿನಗೆ ನನ್ನ ಭಯವೆನಿಸಿದರೆ ಈ ಕ್ಷಣವೇ ಈ ಆಟವನ್ನು ನಿಲ್ಲಿಸಬಹುದು."

ತಕ್ಷಣ ಯುಧಿಷ್ಠಿರನು ತನ್ನ ತಲೆಯನ್ನೆತ್ತಿದ. ಉತ್ತರೀಯವನ್ನು ಸಾವರಿಸಿಕೊಂಡು ದ್ಯೂತವೇದಿಕೆಯತ್ತ ಸಾಗುತ್ತ "ನಾನು ಸಿದ್ಧನಿರುವೆ"

ಶಕುನಿಯ ಮುಖದ ಮೇಲೆ ಆನಂದದ ಚಿಹ್ನೆಗಳು ಕಾಣಿಸತೊಡಗಿದವು. ಆತನೂ ದ್ಯೂತಪಟದತ್ತ ಸಾಗಿದ.

ಸಭಾ ಮಧ್ಯದಲ್ಲಿ ಹಾಸಿದ ದ್ಯೂತಪಟದತ್ತ ಎಲ್ಲರ ಗಮನವು ಕೇಂದ್ರೀಕೃತವಾಯಿತು. ಯುಧಿಷ್ಠಿರನು ತನ್ನ ಸ್ಥಳದಲ್ಲಿ ಕುಳಿತನಂತರ ಆತನ ಹಿಂಬದಿಯಲ್ಲಿ, ಭೀಮ ಅರ್ಜುನ, ನಕುಲ, ಸಹದೇವ ಹೀಗೆ ಕುಳಿತರು. ಎಲ್ಲರ ಮುಖದಲ್ಲಿಯೂ ಚಿಂತೆಯ ಗೆರೆ ಕಾಣಬರುತ್ತಿತ್ತು. ಪಟದ ಇನ್ನೊಂದು ಬದಿಯಲ್ಲಿ ಶಕುನಿಯು ಕುಳಿತುಕೊಂಡಿದ್ದ. ಆತನು ಒಂದು ಸಲ ಸಭಾಸ್ಥಾನವನ್ನವಲೋಕಿಸಿದ. ಯುಧಿಷ್ಠಿರನು ತನ್ನ ಬೆರಳಿನಲ್ಲಿದ್ದ ಉಂಗುರವನ್ನು ತೆಗೆದು ಸಮೀಪದಲ್ಲಿರುವ ಆಸನದ ಮೇಲಿಟ್ಟ. ನಂತರ ವಿದುರನನ್ನು ಒಂದು ಸಲ ನೋಡಿ ದಾಳಗಳನ್ನು ಕೈಗೆತ್ತಿಕೊಂಡ. ಆಗ ಶಕುನಿಯೂ ತನ್ನ ದಾಳಗಳನ್ನು ಅಂಗೈಯಲ್ಲಿ ಹಾಕಿಕೊಂಡು ಅವುಗಳನ್ನು ನಿವಿಯಲಾರಂಭಿಸಿದ. ಆ ರೀತಿ ನಾಲ್ಕಾರು ಸಲ ತಿಕ್ಕಿದ ನಂತರ ಅವುಗಳನ್ನು ಕೆಳಹಾಕುವ ಶೈಲಿಯಲ್ಲಿ ಹಿಡಿದಿರುವ ಶಕುನಿಯು.

"ಹೇಳು ರಾಜಾ, ನಿನ್ನ ಪಣವೇನೆಂಬುದನ್ನು ತಿಳಿಸು" ಎಂದ.

ಯುಧಿಷ್ಠಿರನ ಕೈ ಕಂಠಾಭರಣದತ್ತ ಹೋಯಿತು. ಅದನ್ನು ತೆಗೆದಿಡುತ್ತ "ಈ ಬೆಲೆ ಬಾಳುವ ಹಾರವನ್ನು ಪಣಕ್ಕಿಟ್ಟಿರುವೆ"

ಶಕುನಿಯು ತನ್ನ ಕೈಯ್ಯಲ್ಲಿಟ್ಟುಕೊಂಡಿದ್ದ ದಾಳ ಹಾಕಿದ. ಎಲ್ಲರ

ಕಣ್ಣುಗಳೂ ಶಕುನಿಯಿಂದ ಬಿಡಲ್ಪಟ್ಟ ದಾಳಗಳತ್ತ ಕೇಂದ್ರೀಕೃತವಾದವು. ಎತ್ತರದ ಧ್ವನಿಯಲ್ಲಿ ಶಕುನಿಯು ಹೇಳಿದ "ರಾಜಾ ನಾನು ಪಣವನ್ನು ಗೆದ್ದಿರುವೆ." ದುರ್ಯೋಧನನ ಮುಖ ಹರ್ಷದಿಂದ ಅರಳಲಾರಂಭಿಸಿತು. ಆತನು ತನ್ನ ಸಮೀಪದಲ್ಲಿ ಕುಳಿತ ಕರ್ಣನನ್ನು ನೋಡಿದ. ಕುತೂಹಲ ಕೆರಳಿದಂತಾದ ಆತನ ಮುಖದಲ್ಲೂ ನಗುವು ಕಾಣಬರುತ್ತಿತ್ತು.

ಪರ್ವತದ ತುದಿಭಾಗದಲ್ಲಿರುವ ದೊಡ್ಡ ಬಂಡೆಯು ಕುಸಿಯಿತೆಂದರೆ ಅದರೊಂದಿಗೆ ಅನೇಕ ಸಣ್ಣ ಪುಟ್ಟ ಕಲ್ಲು ಗುಂಡುಗಳು ತಾನಾಗಿಯೇ ಉರುಳುವಂತೆ ಕಂಠಾಭರಣದೊಂದಿಗೆ ದಾಸ ದಾಸಿಯರು, ಗೋಧನ, ಐಶ್ವರ್ಯ ಮೊದಲಾದುವುಗಳೊಂದಿಗೆ ಯುಧಿಷ್ಠಿರನು ತನ್ನ ರಾಜ್ಯವನ್ನೂ ಸಹ ಕಳೆದುಕೊಂಡ. ಇಷ್ಟಾದರೂ ಸಹ ಅವನ ಸೋಲು ಅಲ್ಲಿಗೆ ಮುಗಿಯಲಿಲ್ಲ. ಎಲ್ಲ ಕಳೆದುಕೊಂಡ ಯುಧಿಷ್ಠಿರನ ಗಮನವು ತನ್ನ ಹಿಂದೆ ಕುಳಿತಿರುವ ಸೋದರರತ್ತ ಹೋಯಿತು. ಒಬ್ಬರ ಹಿಂದೊಬ್ಬರಂತೆ ಪಣಕ್ಕಿಟ್ಟು ನಕುಲ ಸಹದೇವರನ್ನೂ ಸಹ ಆತ ಕಳೆದುಕೊಂಡ. ಮುಂದೇನು? ಎಂಬುದೇ ತೋಚದಂತಾಯಿತು. ಅವನ ಪರಿಸ್ಥಿತಿಯನ್ನು ಕಂಡ ಶಕುನಿಯು

"ರಾಜಾ ಸಂಕೋಚವೇಕೆ, ಮಲಸಹೋದರರನ್ನು ಪಣಕ್ಕಿಟ್ಟ ಬೆನ್ನಿಗೆ ಬಿದ್ದ ಭೀಮ, ಅರ್ಜುನ ಇವರನ್ನು ಸುರಕ್ಷಿತವಾಗಿಡುವೆಯಾ ಇದು ನಿನ್ನ ಧರ್ಮವೆ?"

ಆ ಮಾತಿನಿಂದ ಯುಧಿಷ್ಠಿರನು ಸಂತಾಪಗೊಂಡು ಭೀಮಾರ್ಜುನರನ್ನೂ ಸಹ ಪಣಕ್ಕಿಟ್ಟು ಸೋತುಬಿಟ್ಟ. ಅವರಿಬ್ಬರನ್ನೂ ಗೆದ್ದಾದ ಮೇಲೆ ಶಕುನಿಯು

"ರಾಜಾ, ನೀನು ಎಲ್ಲವನ್ನೂ ಸೋತಿರುವೆ."

"ಇಲ್ಲ ಸರ್ವಸ್ವವನ್ನೇನೂ ನಾನು ಕಳೆದುಕೊಂಡಿಲ್ಲ. ನಾನು ಇನ್ನೂ ಇದ್ದೇನೆ. ಈ ದೇಹದಿಂದ ಹಾಗೂ ಮನಸ್ಸಿನಿಂದ ಕೇವಲ ಧರ್ಮವನ್ನೇ ನಂಬಿ ಆಚರಿಸುತ್ತ ಬಂದಿದ್ದೇನೆ. ಈಗ ನಾನು ನನ್ನ ಧರ್ಮವನ್ನೇ ಪಣಕ್ಕಿಡುವೆ. ನನ್ನ ಪೂರ್ವಜನ್ಮದ ಪುಣ್ಯಫಲವಿದ್ದರೆ ಕಳೆದುಹೋದುದನ್ನೆಲ್ಲ ಪುನಃ ಮರಳಿ ಪಡೆಯುತ್ತೇನೆ."

ಇಷ್ಟೆಲ್ಲ ಕಳೆದುಕೊಂಡಿದ್ದರೂ ಸಹ ಯುಧಿಷ್ಠಿರನು ಭ್ರಾಂತನಾಗಿಯೇ ಇದ್ದ. ಆಗಲೂ ಸಹ ದ್ಯೂತದ ದಾಳಗಳು ಯುಧಿಷ್ಟಿರನನ್ನು ಸೋಲಿಸಿದವು. ಆ ದಾಳಗಳನ್ನು ಕಂಡು ಸಭೆಯಲ್ಲಿ ಕೋಲಾಹಲವು ಕೇಳಬರಲಾರಂಭಿಸಿತು. ಹತಾಶನಾದ ಯುಧಿಷ್ಟಿರನು ತನ್ನ ಕೈಯಿಂದ ಜಾರಿಬಿದ್ದಿರುವ ಆ ದಾಳಗಳನ್ನೇ ನೋಡುತ್ತಲಿದ್ದ.

"ರಾಜಾ, ನಿನ್ನಲ್ಲಿ ಕೂಡಿಟ್ಟ ಹಣವಿದ್ದರೂ ಕೂಡ ಅದನ್ನು ತೋರದು ನಿನ್ನನ್ನು ನೀನೇ ಪಣಕ್ಕಿಟ್ಟುಕೊಂಡಿರುವುದು ಸರಿ ಎಂದು ತೋರಲಿಲ್ಲ. ಒಂದು ರೀತಿಯಲ್ಲಿ ಅದು ಪಾಪವೆಂದೇ ತೋರುವುದು."

"ನನ್ನ ಸಂಪತ್ತನ್ನೆಲ್ಲ ಕಳೆದುಕೊಂಡಿರುವೆ. ಈಗ ನನ್ನದಾಗಿ ಯಾವುದೂ ಉಳಿಯಲಿಲ್ಲ."

"ಇಲ್ಲ ಎಂದೆನ್ನಬೇಡ. ಈಗಲೂ ನಿನ್ನ ಪ್ರಿಯಪತ್ನಿ ಉಳಿದುಕೊಂಡಿದ್ದಾಳಲ್ಲವೆ ? ಆ ಪಾಂಚಾಲಿಯು ನಿನ್ನ ಸಂಪತ್ತಲ್ಲವೆ ?"

ಎಲ್ಲರ ಶ್ವಾಸಗಳೂ ಕಟ್ಟಿದಂತಾಯಿತು. ಅಲ್ಲದ ಪ್ರತಿಷ್ಟೆಗೆ ಬಲಿಯಾದ ಯುಧಿಷ್ಟಿರನು ಶಕುನಿಯ ಮಾತುಗಳನ್ನು ಕೇಳಿ ಕ್ಷೀಣ ಧ್ವನಿಯಲ್ಲಿ ಹೇಳಿದ.

"ಪಾಂಚಾಲಿ ;"

"ಹಾಂ, ಪಾಂಚಾಲಿ, ಇನ್ನೂ ಉಳಿದಿದ್ದಾಳೆ. ಅವಳನ್ನು ಪಣಕ್ಕೆ ಹಚ್ಚಿ ಗೆದ್ದುಕೊಂಡಲ್ಲಿ ನೀನು ನಮ್ಮ ದಾಸ್ಯದಿಂದ ಮುಕ್ತನಾಗುವೆ. ಒಂದು ವೇಳೆ ನಾನೇ ಗೆದ್ದ ಪಕ್ಷದಲ್ಲಿ ದ್ರೌಪದಿ ನಮ್ಮ ದಾಸಿಯಾಗುವಳು. ಇದಕ್ಕೆ ನಿನ್ನ ಒಪ್ಪಿಗೆ ಇದೆಯೇ ?"

ದೇಹದ ಮೇಲಿನ ಎಚ್ಚರಿಕೆಯನ್ನೇ ಕಳೆದುಕೊಂಡಿದ್ದ ಯುಧಿಷ್ಟಿರನು

"ಆಗಲಿ, ಈ ಷರತ್ತು ನನಗೆ ಒಪ್ಪಿಗೆ ಇದೆ. ಕೇಳು ಶಕುನೀ ; ಯಾರ ನೇತ್ರಗಳು ಶರದೃತುವಿನ ಕಮಲಗಳಂತಿವೆಯೋ, ಯಾರ ಮೈ ಕಾಂತಿಯು ಸುಗಂಧವನ್ನು ಹೊರಸೂಸುವುದೋ, ಯಾವಳ ಕಪ್ಪು ಕೂದಲುಗಳು ಸುದೀರ್ಘವಾಗಿವೆಯೋ, ಯಾವಳ ತುಟಿಗಳು ಯಜ್ಞವೇದಿಕೆಯ ಮಧ್ಯಭಾಗದಂತಿವೆಯೋ, ಅಂಥ ಸರ್ವಾಂಗ ಸುಂದರಳಾದ ದ್ರೌಪದಿಯನ್ನು ಪಣಕ್ಕಿಟ್ಟು ನಿನ್ನೊಂದಿಗೆ ದ್ಯೂತವನ್ನಾಡುವೆ" ಎಂದ.

ಯುಧಿಷ್ಟಿರನ ಮಾತುಗಳನ್ನು ಕೇಳಿದಾಗ ನಾಚಿಕೆಯಿಂದ ಆ ಸಭೆಯ

ಜನವೆಲ್ಲ ತಲೆಬಾಗಿಸಿತು. ಧಿಕ್ಕಾರ! ಧಿಕ್ಕಾರ! ಎಂಬ ತಿರಸ್ಕಾರದ ಶಬ್ದಗಳೂ ಕೇಳಬರಲಾರಂಭಿಸಿದವು. ಭೀಷ್ಮ, ದ್ರೋಣ, ವಿದುರ, ಕೃಪಾಚಾರ್ಯ ಮೊದಲಾದವರು ಚೇತನಾರಹಿತರಾದಂತೆ ಕಾಣತೊಡಗಿದರು. ಅವರೆಲ್ಲರ ಕಣ್ಣುಗಳು ಜಲದುಂಬಿ ಬಂದುವು. ಶಕುನಿಯು ತನ್ನ ಕೈಯನ್ನು ಮೇಲಕ್ಕೆತ್ತಿದ. ಭಯಾನಕವಾದ ಶಾಂತತೆಯು ಪಸರಿಸಿತು. ದುರ್ಯೋಧನನು ಎದ್ದು ನಿಂತ. ಪ್ರಳಯಕಾಲವನ್ನು ನಿರೀಕ್ಷಿಸುತ್ತಿದ್ದ ದಾಳಗಳು ಶಕುನಿಯ ಅಂಗೈಗಳಲ್ಲಿ ಶಬ್ದ ಮಾಡಲಾರಂಭಿಸಿದವು.

## 21

ದ್ಯೂತಪಟದ ಮೇಲೆಲ್ಲ ದಾಳಗಳು ಹರಡಿಕೊಂಡಿದ್ದವು. ಹತಾಶರಾದ ಪಾಂಡವರ ಮೇಲೆ ಆಸಕ್ತ ಶಕುನಿಯ ಕಣ್ಣುಗಳು ಸ್ಥಿರಗೊಂಡಿದ್ದವು. ಕ್ಷತಹಸ್ತನಾದ ಶಕುನಿಯ ವಿಜಯವಾಗಿತ್ತು. ರಾಜಸಭೆಯಲ್ಲಿ ಈಗ ಶಾಂತತೆಯು ಅಸಹ್ಯವೆಂದೆನಿಸತೊಡಗಿತ್ತು. ಕುರುಡ ಧೃತರಾಷ್ಟ್ರನು ಅಧೀರ ಮನಸ್ಸಿನಿಂದ ತನ್ನ ಸಮೀಪದಲ್ಲಿ ಕುಳಿತುಕೊಂಡಿದ್ದ ಸಂಜಯನನ್ನು ವಿಚಾರಿಸಿದ.

"ನಾನು ಗೆದ್ದೆನಲ್ಲವೆ? ಏನೇನು ಗೆದ್ದುಕೊಂಡೆ?"

ಸಂಜಯ ಉತ್ತರಿಸುವ ಮೊದಲೇ ಹತಾಶನಾದ ಯುಧಿಷ್ಠಿರನು ನುಡಿದ.

"ನಾನು ಸೋತೆ?"

ಗೆದ್ದೆ! ಗೆದ್ದೆ! ಉನ್ಮಾದ, ಹರ್ಷದಲ್ಲಿ ದ್ಯೂತದ ಪಟವನ್ನು ಮೇಲೆತ್ತಿದನು. ಕೌರವ ಸಮೂಹದಲ್ಲೆಲ್ಲ ಆನಂದವು ಪಸರಿಸಿತು. ಪಾಂಡವರು ದ್ರೌಪದಿಯನ್ನು ಕಳೆದುಕೊಂಡರು ಎಂಬ, ಕೂಗು ಸಭಾಗೃಹದ ತುಂಬೆಲ್ಲ ವ್ಯಾಪಿಸಿತು. ದ್ರೌಪದಿ ದಾಸಿಯಾದಳು!

ಆಕಾಶದಲ್ಲಿದ್ದ ಚಂದ್ರನು ಪೃಥ್ವಿಯ ಮೇಲೆ ಬೀಳುವಂತಾಯಿತು. ಸೂರ್ಯ ಕಿರಣಗಳು ಕಪ್ಪಿಟ್ಟುಹೋದವು. ಗಾಳಿಯು ಚಲಿಸದಂತಾಯಿತು. ದ್ರೌಪದಿಯು ದಾಸಿಯಾದಳು. ಪಾಂಡವರಿಗೆ ಇನ್ನು ಕಳೆದುಕೊಳ್ಳಲು ಅಥವಾ ಕೌರವರಿಗೆ ಗೆಲ್ಲಲು ಯಾವವೂ ಉಳಿಯಲಿಲ್ಲ.

ಆನಂದಸಾಗರದಲ್ಲಿ ಮುಳುಗಿದ ಶಕುನಿಯು ಸಭೆಯನ್ನೊಂದು ಸಲ ನೋಡಲು ಎದ್ದು ನಿಂತ. ದೊರೆತ ವಿಜಯಕ್ಕಾಗಿ ಆತನ ದೇಹವೆಲ್ಲ ಉಬ್ಬಿ ಹೋಗಿತ್ತು. ತಲೆಯ ಮೇಲಿದ್ದ ಆತನ ಕಿರೀಟದಲ್ಲಿರುವ ಗರಿಗಳು ಮತ್ತಷ್ಟು ಹೆಮ್ಮೆಯಿಂದ ನರ್ತಿಸತೊಡಗಿದ್ದವು. ಸೋತುಹೋದ ಪಾಂಡವರ ಪರಿಸ್ಥಿತಿಯನ್ನು ತೆರೆದ ಕಣ್ಣುಗಳಿಂದ ನೋಡುತ್ತಲಿದ್ದ. ಪಾಂಡವರತ್ತ ಕೈ ಮಾಡಿ ನಿಂತಿರುವ ಆತನನ್ನು ಕಂಡು ಸಭೆ ಸ್ತಂಭೀಭೂತವಾಯಿತು.

"ಕೌರವಶ್ರೇಷ್ಠರೇ, ದ್ಯೂತದಲ್ಲಿ ಐಶ್ವರ್ಯದೊಂದಿಗೆ ರಾಜ್ಯವನ್ನೂ ಕಳೆದುಕೊಂಡ ಪಾಂಡವರು ಈಗಾಗಲೇ ಉಟ್ಟಬಟ್ಟೆಯ ಮೇಲಿದ್ದಾರೆ. ಪಣದಲ್ಲಿ ತಮ್ಮ ಅರ್ಧಾಂಗಿಯನ್ನೂ ಕಳೆದುಕೊಂಡಿದ್ದಾರೆ. ಆದುದರಿಂದ ದ್ರೌಪದಿಯು ಈಗ ಕೌರವರ ದಾಸಿಯಾಗಿದ್ದಾಳೆ. ಈ ಕ್ಷಣದಿಂದಲೇ ಆ ಕೃಷ್ಣೆಯ ದೈವದಾಟವು ಕೌರವರನ್ನವಲಂಭಿಸಿದೆ."

ದುರ್ಯೋಧನನ ಪಕ್ಕದಲ್ಲಿ ಕುಳಿತಿದ್ದ ಕರ್ಣನು ಇದೆಲ್ಲವನ್ನೂ ಶಾಂತ ಚಿತ್ತದಿಂದ ನೋಡುತ್ತಲಿದ್ದ. ದುರ್ಯೋಧನನ ಹಸ್ತ ಸ್ಪರ್ಶವಾದೊಡನೆ ಆತನತ್ತ ತಿರುಗಿದ ಆತನ ಮುಖವು ಪ್ರಸನ್ನವಾಗಿತ್ತು. ಅದೇ ಸಮಯಕ್ಕೆ ಸರಿಯಾಗಿ ವಿದುರನು ಸಭೆಯಲ್ಲಿ ಎದ್ದುನಿಂತ. ಅದನ್ನು ಕಂಡೊಡನೆ ದುರ್ಯೋಧನನ ಮನಸ್ಸು ಮತ್ತೆ ಹೊಯ್ದಾಡಲು ಆರಂಭಿಸಿತು. ಆತನ ಹಣೆಯ ಮೇಲೆ ಗೆರೆಗಳು ಕಾಣಲಾರಂಭಿಸಿದವು.

ಮಹಾಸಭೆಯ ಗಮನವೆಲ್ಲ ವಿದುರನ ಕಡೆಗೆ ಹರಿಯಿತು. ಕೌರವ ಸಮೂಹದಲ್ಲಿ ವಿದುರನು ಕಠೋರ ಸತ್ಯವಾದಿ ಎಂದು ಹೆಸರುವಾಸಿಯಾಗಿದ್ದವನು. ಆತನ ಮನದಲ್ಲಿದ್ದ ಪಾಂಡವ ಪ್ರೇಮ ಹಾಗೂ ಕೃಷ್ಣನ ಸ್ನೇಹ ಇವು ಎಲ್ಲರಿಗೂ ತಿಳಿದ ವಿಷಯಗಳಾಗಿದ್ದವು. ಆದುದರಿಂದ ವಿದುರ ಏನು ಹೇಳುವನೋ ಎಂದು ಇಡೀ ಸಭೆಯು ಉತ್ಸುಕತೆಯಿಂದ ನೋಡುತ್ತಲಿತ್ತು. ಅವನು ಒಂದು ಸಲ ತುಂಬಿದ ಸಭೆಯನ್ನು ಶಾಂತ ದೃಷ್ಟಿಯಿಂದ ನೋಡಿ, ನುಡಿದ :

"ಶಕುನೀ ಮಹಾರಾಜರೇ, ಇಂದು ತಾವು ತಮ್ಮ ದ್ಯೂತದ ನೈಪುಣ್ಯತೆಯಿಂದಾಗಿ ಪಾಂಡವರನ್ನು ಗೆದ್ದಿರುವಿರಿ. ದ್ಯೂತದ ಈ ನಿಮ್ಮ ಪರಾಕ್ರಮವು ಅಸಾಮಾನ್ಯವಾದುದು. ಈ ದಾಳಗಳು ನಿಮ್ಮ ಅಪೇಕ್ಷೆಯಂತೆಯೇ ನಿಮ್ಮ

ಕೈಯಲ್ಲಿ ನರ್ತಿಸಿದವು. ಕೃತಹಸ್ತರಾದ ನಿಮ್ಮಿಂದ ಪಾಂಡವರು ತಮ್ಮ ರಾಜ್ಯ ಹಾಗೂ ಐಶ್ವರ್ಯಗಳನ್ನಷ್ಟೇ ಅಲ್ಲ, ಯುಧಿಷ್ಠಿರನಿಂದಾರಂಭಿಸಿ ದ್ರೌಪದಿಯನ್ನೂ ಪಣಕ್ಕೆ ಹಚ್ಚುವಂತೆ ತಾವು ಮಾಡಿದಿರಿ ಹೀಗಿದ್ದರೂ ದ್ಯೂತವನ್ನಾಡುವುದು ಮನೋರಂಜನೆಗಾಗಿ ಮಾತ್ರ ಎಂಬುದನ್ನು ಹಿರಿಯರು ಹೇಳುತ್ತ ಬಂದಿದ್ದಾರೆ. ಅದನ್ನು ಇನ್ನೊಬ್ಬರ ಆತ್ಮಘಾತಕ್ಕಾಗಿ ಬಳಸುವದು ಸರ್ವಥಾ ಯೋಗ್ಯವಲ್ಲ. ನೀವು ವ್ಯಾಪಾರದಲ್ಲಿಯೂ ಪ್ರಖ್ಯಾತರೆಂದು ನಾನು ಕೇಳಿದ್ದೇನೆ. ಈ ಜಗತ್ತಿನಲ್ಲಿ ವಸ್ತ್ರಗಳು, ಮುತ್ತು ರತ್ನಗಳು, ಬೆಲೆಬಾಳುವ ವಸ್ತುಗಳ ವ್ಯಾಪಾರ ನಡೆಯುವುದು ಪದ್ಧತಿ. ಹಾಗೆಯೇ ಮದೋನ್ಮತ್ತ ಗಜಗಳು ಹಾಗೂ ಅನೇಕ ಸುಲಕ್ಷಣಗಳಿಂದ ಕೂಡಿದ ಕುದುರೆಗಳು ಇವೇ ಮೊದಲಾದವುಗಳ ಕ್ರಯ ವಿಕ್ರಯಗಳೂ ನಡೆಯುತ್ತವೆ. ಈ ಎಲ್ಲ ವಿಚಾರಗಳಲ್ಲಿಯೂ ತಮ್ಮಂಥ ಅನುಭವಶಾಲಿಗಳಾದ ಪರಿಣಿತರು ದೊರೆಯುವದು ತೀರ ವಿರಳ. ಈ ವ್ಯಾಪಾರಗಳು ಹೇಗೆ ನಡೆಯುತ್ತವೆಯೋ ಹಾಗೆಯೇ ದ್ಯೂತದಲ್ಲಿ ಮನುಷ್ಯರನ್ನು ಮಾರಾಟ ಮಾಡುವ ಪದ್ಧತಿಯು ಮಾತ್ರ ಎಲ್ಲಿಯೂ ಇಲ್ಲ, ದ್ಯೂತದಲ್ಲಿ ಸೋತರು ಎಂದ ಮಾತ್ರಕ್ಕೆ ಪಾಂಡವರು ದಾಸರಾಗುವುದಿಲ್ಲ. ಅವರು ಸ್ವಪರಾಕ್ರಮದಿಂದ ಯಜ್ಞ ಯಾಗಾದಿಗಳನ್ನು ಪೂರೈಸುವ ಮಹಾವೀರರೆಂದು ಕರೆಸಿಕೊಂಡಿದ್ದಾರೆ ತಾವು ಇದನ್ನು ಮರೆತಂತೆ ತೋರುತ್ತಿದೆ ದ್ರೌಪದಿ ದಾಸಿ ಎಂದು ಭಾವಿಸಿದರೂ ಅವಳೊಬ್ಬ ಸ್ತ್ರೀ ಎಂಬುದನ್ನು ಮರೆಯಬೇಡಿರಿ. ಈ ಮಾತು ಇಲ್ಲಿ ಉಪಸ್ಥಿತರಿರುವ ರಾಜರುಗಳಿಗೂ ಧರ್ಮಗುರುಗಳಿಗೂ ಭೂಷಣವೆನಿಸಲಾರದು. ನೀವು ನೀತಿನಿಯಮಗಳ ಬಂಧನವನ್ನು ಬಹು ಸಹಜವಾಗಿ ಕಿತ್ತು ಬಿಸಾಡಬಹುದು. ಆದರೆ ಅಂಥ ಕೆಲಸವು ನಮ್ಮಿಂದಾಗಲಾರದು. ಹಾಗೆ ಮಾಡುವದೂ ಅಮರ್ಯಾದೆ ಎಂದೆನಿಸುವದು." ವಿದುರನು ಒಂದು ಸಲ ಕರ್ಣನತ್ತ ದೃಷ್ಟಿಯನ್ನು ಚಲ್ಲಿ ಮುಂದುವರಿಸಿದ ;

"ಈ ಜಗತ್ತಿನಲ್ಲಿ ಇನ್ನೊಬ್ಬರಿಂದ ಕೊಡಮಾಡಿದ ಭೂಮಿಯನ್ನಾಳಿದಲ್ಲಿ ಅವನೆಂದೂ ರಾಜನೆಂದು ಕರೆಸಿಕೊಳ್ಳಲಾರ, ಹಾಗೆಯೇ ರಾಜ್ಯವನ್ನು ಕಳೆದು ಕೊಂಡಾಕ್ಷಣವೇ ಅಂಥವರು ಎಂದೂ ದಾಸರಾಗಲಾರರು. ದ್ರೌಪ

ದಿಯು ಜನ್ಮಜಾತಳಾದ ರಾಜಕನ್ಯೆ. ಅವಳು ಇಂದ್ರಪ್ರಸ್ಥದ ಮಹಾರಾಣಿ ಯಾಗಿದ್ದಾಳೆ"

ಮರ್ಮಾಘಾತವನ್ನನುಭವಿಸಿದ ಕರ್ಣನಿಗೆ ವಿದುರನ ಕೊನೆಯ ಮಾತುಗಳು ಹೆಚ್ಚು ಸಂತಾಪಗೊಳ್ಳುವಂತೆ ಮಾಡಿದವು. ಕುಳಿತ ಆಸನದಿಂದೆದ್ದ ಕರ್ಣನು ಹೇಳಿದ.

"ಮಹಾರಾಣಿ ! ಯಾವಳು ಆ ಮಹಾರಾಣಿ ? ದ್ರೌಪದಿಯು ಮಹಾರಾಣಿಯೋ ? ಹಾಗಾದರೆ ರಾಜಮಾತೆಯಾದ ಗಾಂಧಾರಿ ದೇವಿಯನ್ನು ಏನೆಂದು ಕರೆಯುವಿರಿ ? ಕೌರವ ಕುಲದ ಅಮಾತ್ಯ ಪದವಿಯನ್ನನುಭವಿಸುತ್ತಿರುವ ವಿದುರರು ಮಹಾಸಾಮ್ರಾಟರಾದ ಧೃತರಾಷ್ಟ್ರ ಮಹಾರಾಜರನ್ನು ಮರೆತಂತೆ ತೋರುತ್ತದೆ. ಹಾಗಿಲ್ಲದೆ ಹೋಗಿದ್ದರೆ ಈ ಕೌರವರ ಸಭೆಯಲ್ಲಿ ಸಾಮ್ರಾಟ ಪದವಿಯನ್ನು ಪಾಂಡವರಿಗರ್ಪಿಸುವ ಧೈರ್ಯವನ್ನೆಂದೂ ತೋರಿಸುತ್ತಿರಲಿಲ್ಲ. ರಾಜನೀತಿ, ಧರ್ಮನೀತಿ ಇವುಗಳಿಗೆ ದ್ಯೂತವು ಮಾನ್ಯವೆಂದೆನಿಸಿದೆ. ಕೈಗಡವಾಗಿ ಪಡೆದುಕೊಂಡ ರಾಜ್ಯವನ್ನು ಪಾಂಡವರು ಈಗ ಕಳೆದುಕೊಂಡಿದ್ದಾರೆ. ಎಲ್ಲಿ ರಾಜರೇ ಇಲ್ಲವೋ ಅಲ್ಲಿ ರಾಣಿಯ ಪದವಿಯಾದರೂ ಹೇಗಿರಲು ಸಾಧ್ಯವಾದೀತು ?"

ಕರ್ಣನಿಗೆ ಬೆಂಬಲವನ್ನೀಯಲು ಮುಂದೆ ಬಂದ ದುರ್ಯೋಧನನು

"ಕರ್ಣ, ದಾಸ್ಯತ್ವದಲ್ಲಿರುವವರಿಗೆ ದಾಸೀಪುತ್ರನಿಂದಲೇ ಪಾಠ ಕಲಿಸುವಂತಾಗಬೇಕು. ಅದರಲ್ಲಿ ಆಶ್ಚರ್ಯಪಡುವಂತಹದೇನೂ ಇಲ್ಲ. ವಿದುರ ಎಂದರೆ ಸಾಕ್ಷಾತ್ ಪಾಂಡವರ ಪಕ್ಷಪಾತಿ. ಆತನು ಎಂದಾದರೂ ನಮ್ಮ ಪಕ್ಷಕಟ್ಟಿ ಮಾತನಾಡಲು ಸಾಧ್ಯವೇ ?" ಎಂದ.

ದುರ್ಯೋಧನನ ಭೀಭತ್ಸಿತ ಮಾತುಗಳಿಂದ ಒಂದು ಕ್ಷಣ ವಿದುರನೂ ತಬ್ಬಿಬ್ಬಾಗಿ ಹೋದ. ಆದರೂ ಆತನು ತನ್ನ ವಾದವನ್ನು ಸಮರ್ಥಿಸುವುದಕ್ಕಾಗಿ ಹೇಳಿದ.

"ಯುವರಾಜ, ನಿನ್ನ ಸಂತಾಪವನ್ನು ನಾನು ಚೆನ್ನಾಗಿ ಬಲ್ಲೆ. ಯಾವ ಕುಲದ ಅನ್ನದಿಂದ ನಾನು ಪೋಷಣೆ ಹೊಂದಿರುವೆನೋ ಆ ಕುಲದ ಅಪಮಾನವನ್ನು ನಾನು ಹೇಗೆ ಮಾಡಬಲ್ಲೆ ? ಪ್ರತಿಯಾಗಿ ಸಿಟ್ಟಿನ ಭರದಲ್ಲಿ ಯಾವದೇ ತರಹದ ಅನಾಹುತವಾಗಬಾರದೆಂದೇ ನಾನು ಪ್ರಯತ್ನಿಸುತ್ತ

ಲಿದ್ದೇನೆ. ಈ ಪಾಂಡವರು ನಮ್ಮ ಆಮಂತ್ರಣದ ಮೇರೆಗೆ ಇಲ್ಲಿಗೆ ಬಂದಿದ್ದಾರೆ. ಅಭ್ಯಾಗತರಿಗೆ ಸತ್ಕಾರ, ಸನ್ಮಾನ........"

"ಸನ್ಮಾನ! ಅದೂ ಈ ಪಾಂಡವರಿಗೆ?" ದುರ್ಯೋಧನನು ಮತ್ತಷ್ಟು ಕೋಪದಿಂದ "ಈ ಜೂಜೇ ಅವರಿಗೆ ಯೋಗ್ಯ ಸನ್ಮಾನವಾಗಿದೆ. ಮನೆಗೆ ಬಂದ ಅಭ್ಯಾಗತರನ್ನು ಹೇಗೆ ಆದರಿಸಬೇಕೆಂಬುದನ್ನು ಅವರೇ ನನಗೆ ಕಲಿಸಿಕೊಟ್ಟಿದ್ದಾರೆ. ರಾಜಸೂಯ ಯಾಗದಲ್ಲಿ ಅವರು ನಿರ್ಮಿಸಿದ ಮಯಸಭೆಯ ಉಪಭೋಗವನ್ನು ನನ್ನಷ್ಟು ಬೇರಾರೂ ಪಡೆದಿರಲಾರರು. ನಮ್ಮನ್ನು ಅಪಮಾನ ಪಡಿಸುವಾಗ ಮನೆಗೆ ಬಂದ ಅಭ್ಯಾಗತರ ಪರಿವೆ ಇವರಿಗಿರಲಿಲ್ಲವೇಕೆ ? ಚಿಕ್ಕಪ್ಪ ನೀವು ಯಾವಾಗಲೂ ಒಂದು ಮಾತನ್ನು ಲಕ್ಷ್ಯದಲ್ಲಿಡಿರಿ. ಪಾಂಡವರು ಆಮಂತ್ರಿತರೇನೋ ನಿಜ. ಆದರೆ ಅವರು ನಮ್ಮ ಬಂಧುಗಳೆಂದು ಅವರನ್ನು ಕರೆಸಿಕೊಂಡಿಲ್ಲ. ನಾವು ಅವರನ್ನು ದ್ಯೂತವಾಡಲು ಆಹ್ವಾನವನ್ನಿತ್ತಿದ್ದೇವೆ. ನಮ್ಮ ಮಾವನವರಾದ ಶಕುನಿ ಮಹಾರಾಜರು ದ್ಯೂತದಲ್ಲಿ ಮಹಾನಿಪುಣರೆಂಬ ಮಾತನ್ನು ಪಾಂಡವರಿಗೆ ನೀವೆ ಹೇಳಿದ್ದೀರಲ್ಲವೆ ? ಯಾರನ್ನು ತಪ್ಪಿಸಿಕೊಂಡು ಹೋಗಲು ಗುಪ್ತ ಮಾರ್ಗಗಳನ್ನು ರಚಿಸಿದಿರೋ. ಯಾರಿಗೆ ತುಂಬಿದ ನದಿಯನ್ನು ದಾಟಿ ಪಾರಾಗಲು ರಾತ್ರಿಯ ಹೊತ್ತಿನಲ್ಲಿ ಸಕಲ ಸೌಕರ್ಯಗಳನ್ನೊದಗಿಸಿದಿರೋ, ಅಂಥವರ ದೈವಬಲವನ್ನು ನೀವು ತಪ್ಪಿಸಲು ಸಾಧ್ಯವೇ ? ಈ ಮಾತು ನಿಮಗೆ ಈಗಲಾದರೂ ಅನುಭವಕ್ಕೆ ಬಂದಿರಬಹುದಲ್ಲವೇ ? ವಿದುರಕಾಕಾ, ಪಾಂಡವರ ಈ ದುರ್ದೆಶೆಗೆ ನೀವೇ ಕಾರಣೀಭೂತರು. ಅರ್ಧಕ್ಕೆ ನಿಂತ ಕಾರ್ಯವನ್ನು ಈಗ ನೀವೇ ಪೂರ್ಣಗೊಳಿಸಿರಿ. ಈ ಕ್ಷಣವೇ ನೀವು ಅಂತಃಪುರಕ್ಕೆ ಹೋಗಿ ಸ್ವತಃ ಯಾವ ಯುಧಿಷ್ಠಿರನಿಂದ ವರ್ಣಿತಳಾಗಿರುವಳೋ, ಆ ಅಸಾಮಾನ್ಯ ಲಾವಣ್ಯವತಿಯಾದ ಪಾಂಚಾಲಿಯನ್ನು ಈ ರಾಜಸಭೆಗೆ ಕರೆತನ್ನಿರಿ. ಈ ಕೆಲಸ ಮಾಡಲು ನೀವೇ ಹೆಚ್ಚು ಯೋಗ್ಯರಾಗಿರುವಿರಿ."

ದುರ್ಯೋಧನನ ಆಜ್ಞಾಧಾರಕ ವಾಕ್ಯಗಳಿಂದಾಗಿ ವಿದುರನು ಕುಸಿದು ಹೋದ. ತನ್ನ ಆಸನದಲ್ಲಿ ಕುಸಿದುಬಿದ್ದ ವಿದುರನ ಪರಿಸ್ಥಿತಿಯನ್ನು ಕಂಡು ದುರ್ಯೋಧನನ ಮುಖವು ನಗುವಿನಿಂದ ತುಂಬಿತು. ಆಗ ಅವನು ತನ್ನ ಮಗನಾದ ಪ್ರತಿಕರ್ಮನನ್ನು ಕರೆದು ಆಜ್ಞೆ ಮಾಡಿದ,

"ಪ್ರತಿಕರ್ಮ್ಮ, ಈ ಹೇಡಿಯ ಕೈಯಿಂದ ಆ ಕೆಲಸವಾಗಲಾರದು. ಈ ವಿದುರನು ಯಾವಾಗಲೂ ನಮ್ಮ ನಿಂದೆ, ಪಾಂಡವರ ಹೊಗಳಿಕೆಯನ್ನೆ ಮಾಡುತ್ತ ಬಂದಿದ್ದಾನೆ. ಕೌರವ ಕುಲದ ದರ್ಪವಾದರೂ ಹೇಗಿರುತ್ತದೆ. ಎಂಬುದನ್ನು ಒಂದು ಸಲವಾದರೂ ಆತನು ಕಣ್ದೆರೆದು ನೋಡುವಂತಾಗಲಿ. ನೀನು ಥೀಗೆಯೇ ಈ ಕ್ಷಣವೇ ಅಂತಃಪುರಕ್ಕೆ ಹೋಗಿ ಆ ದಾಸಿಯನ್ನು ನಮ್ಮ ಸೇವೆಗೆ ಕರೆದುಕೊಂಡು ಬಾ."

ಪ್ರತಿಕರ್ಮ್ಮನು ದುರ್ಯೋಧನನ ಆಜ್ಞೆಯನ್ನು ಪರಿಪಾಲಿಸಲು ಹೊರಟುಬಿಟ್ಟ.

ಯುವರಾಜನ ಈ ಆಜ್ಞೆಯಿಂದಾಗಿ ರಾಜಸಭೆಯಲ್ಲಿ ಗುಸುಗುಸು ಆರಂಭವಾಯಿತು. ಸ್ವಲ್ಪ ಸಮಯ ಕಳೆಯುವುದರೊಳಗಾಗಿ ಪ್ರತಿಕರ್ಮ್ಮನು ಒಬ್ಬಂಟಿಗನಾಗಿಯೇ ರಾಜಸಭೆಗೆ ಮರಳಿದ. ಅದನ್ನು ಕಂಡ ದುರ್ಯೋಧನನು

"ಪ್ರತಿಕರ್ಮ್ಮ, ಪಾಂಚಾಲಿಯು ಎಲ್ಲಿದ್ದಾಳೆ ?"

"ಮಹಾರಾಜ, ದ್ರೌಪದಿಯು ಈ ಸಭೆಗೆ ಬರುವ ಸ್ಥಿತಿಯಲ್ಲಿಲ್ಲ"

"ಕಾರಣ ?"

"ಅವಳು ಏಕವಸ್ತ್ರಳಾಗಿದ್ದು ರಜಸ್ವಲೆಯಾಗಿದ್ದಾಳೆ. ತಮ್ಮ ಆಜ್ಞೆಯನ್ನು ನಾನು ತಿಳಿಸಿದಾಗ ಅವಳು ಒಂದು ಪ್ರಶ್ನೆಯನ್ನು ತಮ್ಮ ಮುಂದಿಡಲು ಹೇಳಿದ್ದಾಳೆ."

"ಎಂಥ ಪ್ರಶ್ನೆ ?" ದುರ್ಯೋಧನನು ಪ್ರಶ್ನಿಸಿದ.

"ಪ್ರತಿಕರ್ಮ್ಮ, ಯುಧಿಷ್ಠಿರನ ಹತ್ತಿರ ಹೋಗಿ ರಾಜಾ ಯುಧಿಷ್ಠಿರಾ, ದ್ರೌಪದಿಯು ನಿನಗೆ ಒಂದು ಪ್ರಶ್ನೆಯನ್ನು ಕೇಳಿದ್ದಾಳೆ. ದ್ಯೂತದಲ್ಲಿ ನೀನು ನಿನ್ನನ್ನೇ ಸೋತನಂತರ ದ್ರೌಪದಿಯನ್ನು ಪಣಕ್ಕೆ ಹಚ್ಚಿದೆಯೋ ಅಥವಾ ಅದಕ್ಕೆ ಮೊದಲೋ ಎಂದು ಪ್ರಶ್ನೆ ಮಾಡಿದ್ದಾಳೆ ಎಂದು ಹೇಳು ?"

ದ್ರೌಪದಿಯು ಹೇಳಿ ಕಳುಹಿಸಿದ ಪ್ರಶ್ನೆಯನ್ನು ಕೇಳಿದಾಗ ಯುಧಿಷ್ಠಿರನು ನಿಶ್ಚೇಷ್ಟಿತನಾದ. ಅದನ್ನು ಕಂಡ ದುರ್ಯೋಧನನು,

"ಮಗೂ, ನೀನು ಅವನನ್ನೇನು ಕೇಳುವೆ. ಹೋಗು ಹಿಂದಕ್ಕೆ ಹೋಗಿ ದ್ರೌಪದಿಯನ್ನು ಕರೆದುಕೊಂಡು ಬಾ. ಏನು ಪ್ರಶ್ನೆಗಳನ್ನು ಕೇಳ ಬೇಕಾದರೂ ಅದನ್ನು ಈ ಸಭೆಯಲ್ಲಿ ಕೇಳಿ ತಿಳಿದುಕೊಳ್ಳಲಿ, ಆ ಸಂವಾದ ದಲ್ಲಿಯೂ ಒಂದು ಮೋಜು ಇದೆ."

ಪ್ರತಿಕರ್ಮನಿಗೆ ಈ ಕಠೋರ ಕೆಲಸವು ಬೇಡವಾಗಿತ್ತು. ಯುಧಿಷ್ಠಿರನು ಏನಾದರೂ ಹೇಳಬಹುದು, ಆತನ ಮಾತಿಗೆ ಸಭೆಯೂ ಯಾವದಾದರೊಂದು ನಿರ್ಣಯಕ್ಕೆ ಬರಬಹುದು ಎಂದು ಭಾವಿಸಿದ್ದ. ಸುಮ್ಮನೇ ಕುಳಿತ ಯುಧಿಷ್ಠಿರನನ್ನು ಒಂದು ಸಲ ನೋಡಿ ಪ್ರತಿಕರ್ಮನು ತನ್ನ ಸಮೀಪದಲ್ಲಿಯೇ ನಿಂತಿದ್ದ ದೂತನನ್ನು ಕರೆದು ದ್ರೌಪದಿಯನ್ನು ಕರೆತರುವಂತೆ ಹೇಳಿದ.

“ಎಲೈ ದೂತನೇ, ನೀನೇ ದ್ರೌಪದಿಯು ಇದ್ದಲ್ಲಿಗೆ ಹೋಗಿ ನನ್ನ ನಿರೂಪವನ್ನು ತಿಳಿಸು. ಪ್ರಶ್ನೆಗಳನ್ನು ಕೇಳುತ್ತಾ ಹೋದಲ್ಲಿ ಸಂಕಟ ಪರಿಹಾರವಾಗುವ ಸಮಯ ಇದಲ್ಲ. ಏಕವಸ್ತ್ರಳಿದ್ದರೂ, ರಜಸ್ವಲೆಯಾಗಿದ್ದರೂ ನೀನು ಇರುವ ಪರಿಸ್ಥಿತಿಯಲ್ಲಿಯೇ ರಾಜಸಭೆಗೆ ಬರುವಂತೆ ಹೇಳು. ರಾಜಪುತ್ರಿಯಾದ ನೀನು ಆ ನಿನ್ನ ಅವಸ್ಥೆಯಲ್ಲಿಯೇ ಬಂದುದಾದಲ್ಲಿ ನಿನ್ನ ಸ್ಥಿತಿಯನ್ನು ಕಂಡು ಈ ಕೌರವರ ಮನದಲ್ಲಿ ನಿನ್ನ ಸಲುವಾಗಿ ಸ್ವಲ್ಪವಾದರೂ ಅನುಕಂಪ ಹುಟ್ಟಬಹುದೆಂಬುದನ್ನು ತಿಳಿಸು.”

ಗಂಡನೆಂದು ಕರೆಸಿಕೊಳ್ಳುವ ಯುಧಿಷ್ಠಿರನ ಈ ಮಾತುಗಳನ್ನು ಕೇಳಿದಾಗ ಕೌರವ ಸಭೆಯಲ್ಲಿದ್ದ ಭೀಷ್ಮ, ದ್ರೋಣ, ಕೃಪಾಚಾರ್ಯರೂ ಹತಾಶರಾದರು. ಕರ್ಣನಿಗೆ ಯುಧಿಷ್ಠಿರನ ವಿಷಯದಲ್ಲಿ ಅತಿ ಹೇಸಿಗೆ ಹುಟ್ಟಿತು. ಉತ್ಸಾಹದ ಭರದಲ್ಲಿದ್ದ ದುರ್ಯೋಧನನು ತನ್ನ ತಮ್ಮನಾದ ದುಶ್ಯಾಸನನ್ನು ಕೂಗಿ ಆಜ್ಞೆ ಮಾಡಿದ.

“ದುಶ್ಯಾಸನನೇ, ಸುಮ್ಮನೇ ನಿಂತಿರುವಿ ಏಕೆ ? ಅಂತಃಪುರಕ್ಕೆ ಹೋಗಿ ಆ ದಾಸಿಯನ್ನು ಎಳೆದು ತಾ. ಅವಳು ಹಾಗೆ ಬಾರದೆ ಹೋದಲ್ಲಿ ಅವಳನ್ನು ಬಲವಂತವಾಗಿ ಎಳೆದುಕೊಂಡು ಬಾ. ಹೇಗಿದ್ದರೂ ಬರಿಗೈಯಿಂದ ಮಾತ್ರ ಮರಳಬೇಡ.”

ದುಶ್ಯಾಸನನು ಅಣ್ಣನ ಆಜ್ಞೆಯನ್ನು ನಡೆಸಲು ಸಭಾಗೃಹದಿಂದ ಹೊರಟು ಹೋದ. ದ್ರೌಪದಿಯನ್ನು ರಾಜಸಭೆಗೆ ತರಲಾಗುವದೆಂಬ ಮಾತಿನಿಂದ ರಾಜಸಭೆ ಗಾಬರಿಗೊಂಡಿತು. ಆಸುರೀವೃತ್ತಿಯು ತನ್ನ ಶಿಖರವನ್ನು ತಲುಪಿದಂತಾಗಿತ್ತು. ಸಭಾಗೃಹದ ಹೊರಭಾಗದಲ್ಲಿ ನಡೆದ ಗದ್ದಲವನ್ನು ಕೇಳಿದಾಗ ಎಲ್ಲರ ಗಮನವು ಆ ಮಹಾದ್ವಾರದತ್ತ ಹೊರಳಿತು.

ಕೆಲವೇ ಕ್ಷಣಗಳಲ್ಲಿ ದ್ರೌಪದಿಯು ಕೂದಲುಗಳನ್ನು ಹಿಡಿದು ಅವಳನ್ನು ಎಳೆತರುತ್ತಿದ್ದ ದುಶ್ಯಾಸನನ್ನು ಎಲ್ಲರೂ ನೋಡಲಾರಂಭಿಸಿದರು. ಒಂದೇ ಸಮನೆ ದ್ರೌಪದಿ ಕೂಗಿಕೊಳ್ಳುತ್ತಲಿದ್ದಳು.

ಬಾವಿಯಲ್ಲಿದ್ದ ನೀರು ತುಂಬಿದ ಕಪಿಲೆಯು ಎತ್ತುಗಳ ಎಳೆತದಿಂದ ಮೇಲಕ್ಕೆ ಬರುವಂತೆ ದುಶ್ಯಾಸನನ ಹಿಡಿತದಲ್ಲಿ ಸಿಕ್ಕಿಕೊಂಡ ದ್ರೌಪದಿಯು ರಾಜಸಭಾ ಮಧ್ಯದಲ್ಲಿ ಕಾಣಿಸುವಂತಾದಳು. ಅಪಮಾನಿತಳಾದ ಅವಳು ಸಭಾಮಧ್ಯದಲ್ಲಿ ಕುಸಿದು ಬಿದ್ದಳು. ನೀಲವರ್ಣ ಯುಕ್ತವಾದ ಅವಳ ಕೇಶಗಳೆಲ್ಲ ಬಿಚ್ಚಿ ಹರಡಿಕೊಂಡಿದ್ದವು. ದ್ರೌಪದಿಯತ್ತ ಕೈಮಾಡಿ ದುಶ್ಯಾಸನನು ಹೇಳಿದ.

"ಕೌರವರ ದಾಸಿಯು ರಾಜಸಭೆಯಲ್ಲಿ ಉಪಸ್ಥಿತಳಾಗಿದ್ದಾಳೆ."

ದುಶ್ಯಾಸನನ ಈ ಶಬ್ದಗಳು ದ್ರೌಪದಿಯ ಕಿವಿಗೆ ಬಿದ್ದಾಗ ಅವಳಿಗೆ ಎಚ್ಚರ ಬಂದಿತು. ಅವಳು ನಿಶ್ಚಯಾತ್ಮಕ ಭಾವದಿಂದಲೇ ತನ್ನ ತಲೆಯನ್ನು ಮೇಲೆತ್ತಿದಳು. ಒಂದು ಕೈಯಲ್ಲಿ ವಸ್ತ್ರ ಹಾಗೂ ಕೂದಲುಗಳನ್ನು ಹಿಡಿದುಕೊಂಡು ಇನ್ನೊಂದು ಕೈಯಿಂದ ವಸ್ತ್ರದಲ್ಲಿದ್ದ ತನ್ನ ಲಜ್ಜೆಯನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತ ಎದ್ದು ನಿಂತು, ಕೌರವಸಭೆಯನ್ನೊಂದು ಸಲ ನೋಡಿದಳು. ಪೆಟ್ಟಿನಿಂದ ಅವಳ ನೋಟವು ದೀನರಾಗಿ ಕುಳಿತ ತನ್ನ ಪತಿಗಳಲ್ಲಿ ಕ್ಷಣಕಾಲ ಸ್ಥಿರಗೊಂಡಿತು. ಅವರ ಸ್ಥಿತಿಯನ್ನು ಕಂಡಾಗ ಅವಳಿಗೆ ತನ್ನ ಅಸಹ್ಯತೆಯನ್ನು ಸಹಿಸದಂತಾಯಿತು. ಆಕೆಯ ಕಣ್ಣುಗಳು ಸಂತಾಪಗೊಂಡವು. ರಕ್ತಸಿಕ್ತವಾದ ಅರ್ಧವಸ್ತ್ರಲಾಂಛಿತಳಾಗಿರುವೆನೆಂಬ ಪ್ರಜ್ಞೆಯೂ ಸಹ ಅವಳಿಗುಳಿಯಲಿಲ್ಲ. ರಾಜಸಭೆಯಲ್ಲಿ ಉಪಸ್ಥಿತರಿದ್ದ ಭೀಷ್ಮಾಚಾರ್ಯರನ್ನು ಕುರಿತು ಅವಳು ಪ್ರಶ್ನೆ ಮಾಡಿದಳು.

"ಪಿತಾಮಹರೇ, ನೀವಾದರೂ ನನಗೆ ನ್ಯಾಯದ ದಾರಿ ತೋರಿಸಿರಿ. ಯಾರಿಗೆ ದ್ಯೂತವೆಂಬುದೇ ಗೊತ್ತಿಲ್ಲವೋ ಅಂಥ ನನ್ನ ಪತಿಗಳನ್ನು ಜೂಜಿನಲ್ಲಿಯೇ ಅಗ್ರೇಸರರೆಂದು ಖ್ಯಾತರಾದವರಿಂದ ಆಹ್ವಾನವನ್ನು ಕೊಡಿಸಿ ಎಲ್ಲವನ್ನೂ ಕಸಿದುಕೊಳ್ಳುವಂತಾದುದು ಯಾವ ನ್ಯಾಯ ? ಇದು ತಮಗೆ ಯೋಗ್ಯವೆನಿಸುವುದೇ ?"

ಪಕ್ಕದಲ್ಲಿಯೇ ನಿಂತಿದ್ದ ದುರ್ಯೋಧನನು ಅವಳ ಈ ಮಾತುಗಳನ್ನು ಕೇಳಿ ಕೆಂಡದಂತಾಗಿ ಹೇಳಿದ.

"ಇದಕ್ಕೆಲ್ಲ ಪಿತಾಮಹರು ಉತ್ತರಿಸಬೇಕಾದ ಅವಶ್ಯಕತೆ ಏನಿಲ್ಲ. ಆ ಪ್ರಶ್ನೆಗಳಿಗೆಲ್ಲ ನನ್ನ ದಾಸನಾದ ಈ ಯುಧಿಷ್ಠಿರನೇ ಉತ್ತರವನ್ನೀಯುತ್ತಾನೆ. ದಾಸ್ಯವೃತ್ತಿಯು ಬಂದಿದ್ದರೂ ಆತನ ಧರ್ಮಬುದ್ಧಿಯು ಮಾತ್ರ ಹೋಗಿರಲಾರದು".

ಎಲ್ಲರೂ ಯುಧಿಷ್ಠಿರನನ್ನು ನೋಡಲಾರಂಭಿಸಿದರು. ಆತನು ತಲೆಯನ್ನೆತ್ತಿ ಕ್ಷೀಣ ಸ್ವರದಲ್ಲಿಯೇ ನುಡಿದ.

"ಪಾಂಚಾಲಿ, ಆತನು ಹೇಳಿದ ಮಾತುಗಳೆಲ್ಲವೂ ಸತ್ಯ. ನಾನು ನನ್ನ ಕೈಯಿಂದ ಎಲ್ಲವನ್ನೂ ಕಳೆದುಕೊಂಡಿದ್ದೇನೆ.

ಪತಿಯ ಮಾತುಗಳಿಂದ ದ್ರೌಪದಿಯು ಮತ್ತಷ್ಟು ಕುಸಿದುಹೋದಳು. ಆದರೂ ಸಹ ಅವಳು ನಿರಾಶಳಾಗದೆ ಧೈರ್ಯದಿಂದ ಭೀಷ್ಮರನ್ನೇ ಪುನಃ ವಿಚಾರಿಸಿದಳು.

"ಪಿತಾಮಹರೇ, ಈ ಸಭೆಗೆ ಬಲಾತ್ಕಾರವಾಗಿ ನನ್ನನ್ನು ಎಳೆದುತರುವ ಮುನ್ನ ನಾನು ಯಾವ ಪ್ರಶ್ನೆಗಳನ್ನು ಮಾಡಿದ್ದೆನೋ ಆ ಪ್ರಶ್ನೆಗಳಲ್ಲಿ ಸತ್ಯದ ಉದ್ದೇಶ್ಯವಿದೆ. ಎಲ್ಲವನ್ನೂ ಕಳೆದುಕೊಂಡ ಅನಂತರ ತನ್ನನ್ನೇ ಪಣಕ್ಕೆ ಹಚ್ಚಿ ಯಾರು ದಾಸ್ಯವನ್ನು ಅಂಗೀಕರಿಸಿದ್ದಾರೆಯೋ ಅಂಥವರು ತಾವೇ ದಾಸರಾದ ಮೇಲೆ ತಮ್ಮ ಪತ್ನಿಯನ್ನು ಪಣಕ್ಕಿಡುವ ಅಧಿಕಾರವಾದರೂ ಹೇಗೆ ಪ್ರಾಪ್ತವಾಗುತ್ತದೆ? ಪಿತಾಮಹರೇ, ನನ್ನ ಪತಿಗಳು ಯಾವ ಸ್ಥಳದಲ್ಲಿ ಹೇಡಿಗಳಂತಾಗಿದ್ದಾರೆಯೋ; ಅಲ್ಲಿ ನೀವೇ ನನಗೆ ರಕ್ಷಕರಾಗಿರುವಿರಿ. ಈ ಪಣದಿಂದ ನಾನು ಸೋತಿರುವೆನೋ ಹೇಗೆ? ಎಂಬುದನ್ನು ನೀವೇ ನಿರ್ಣಯ ಮಾಡಿರಿ.

ಜೀವನದಲ್ಲಿ ಯಾರು ತ್ಯಾಗದ ವಿನಃ ಬೇರೆ ಏನನ್ನೂ ಕಂಡರಿಯರೋ, ಯಾರು ಪಿತೃವಾಕ್ಯ ಪರಿಪಾಲನೆಗಾಗಿ ತಮ್ಮ ಆಸೆ, ಆಕಾಂಕ್ಷೆಗಳನ್ನೆಲ್ಲ ತಮ್ಮ ಹದ್ದಿನಲ್ಲಿಟ್ಟುಕೊಂಡಿರುವರೋ, ಸ್ವಾರ್ಥವು ಯಾರನ್ನು ಎಂದೂ ಸಮೀಪಿಸಲಿಲ್ಲವೋ ಅಂಥ ಭೀಷ್ಮಾಚಾರ್ಯರಿಗೆ ದ್ರೌಪದಿಯ ಈ ಪ್ರಶ್ನೆಗಳು ಧರ್ಮಸಂಕಟದಂತೆ ತೋರಿಬಂದವು. ಎಲ್ಲರೂ ಆ ಹಿರಿಯರನ್ನೇ ನೋಡಲಾರಂಭಿ

ಸಿದರು. ಅವರು ಆಸನದಿಂದೆದ್ದು ಮನಸ್ಸಿನ ಉದ್ವೇಗಗಳನ್ನು ಸಂಯಮ ದಲ್ಲಿಟ್ಟುಕೊಂಡು ಹೇಳಿದರು.

"ಮಗೂ, ನಿನ್ನ ಪ್ರಶ್ನೆ ತುಂಬ ಗಂಭೀರವಾದುದು. ಸಮರ್ಥ ಪುರುಷರು ಯಾವುದನ್ನು ಧರ್ಮ ಎಂದು ಕರೆಯುತ್ತಾರೆಯೋ, ಅದುವೇ ನಿಜವಾದ ಧರ್ಮ ಎಂದು ಲೋಕವು ಅರ್ಥಮಾಡಿಕೊಳ್ಳುತ್ತದೆ. ನಾನಾದರೂ ಅಂಥ ಧರ್ಮಕ್ಕೆ ಬದ್ಧನಾಗಿರುವೆ, ಮನಸ್ಸಿನಲ್ಲಿದ್ದರೂ ಸಹ ನಿನಗೆ ಅನುಕೂಲವಾದ ಉತ್ತರವನ್ನು ಕೊಡಲಾರದವನಾಗಿರುವೆ. ಈ ಮಾತಿನ ಬಗ್ಗೆ ತುಂಬ ವ್ಯಥೆ ಪಡುತ್ತಿದ್ದೇನೆ. ಸೋತವನು ನಿನ್ನನ್ನು ಪಣಕ್ಕಿಡಲು ಬರುವುದಿಲ್ಲ ಎಂಬ ನಿನ್ನ ಮಾತಿನಲ್ಲಿ ಸತ್ಯತೆ ಇದೆ. ಆದರೆ ಪಾಂಚಾಲಿ, ನೀನು ಪಾಂಡವರ ಧರ್ಮಪತ್ನಿಯಾಗಿರುವೆ. ಯಾವಾಗ ಪಾಂಡವರು ಸೋತುಹೋದರೋ ಆಗ ನೀನೂ ಸೋತಂತಾಯಿತು. ದಾಸನ ಹೆಂಡತಿ ದಾಸಿ ಎಂಬ ಮಾತು ಸತ್ಯ. ಯುಧಿಷ್ಠಿರನು ತನ್ನ ಮುಖದಿಂದಲೇ ಈ ಮಾತನ್ನು ಒಪ್ಪಿಕೊಂಡಿದ್ದಾನೆ. ಆದುದರಿಂದ ನಿನ್ನ ಪ್ರಶ್ನೆಗೆ ನೀನೇ ಉತ್ತರ ಹುಡುಕಬೇಕಾಗಿದೆ. ಈ ವಿಷಯದಲ್ಲಿ ನಿರ್ಣಯವನ್ನೀಯಲು ನಾನು ಅಸಮರ್ಥನಾಗಿರುವೆ."

ಅಸಾಧ್ಯವಾದ ಮೋಡಗಳಿಂದ ಸೂರ್ಯಪ್ರಕಾಶವೆಲ್ಲ ಮುಚ್ಚಿ ಹೋಗುವಂತಹ ಅನುಭವ ದ್ರೌಪದಿಗಾಯಿತು. ಭೀಷ್ಮರ ಉತ್ತರದಿಂದಾಗಿ ದುರ್ಯೋಧನ ಹಾಗೂ ಕರ್ಣರು ಆನಂದಪಟ್ಟರು. ವಿದುರ ಹಾಗೂ ವಿಕರ್ಣರಂಥ ಸಾತ್ವಿಕರು ದ್ರೌಪದಿಯ ಪಕ್ಷವನ್ನು ವಹಿಸಿದರು. ಭೀಷ್ಮರ ಮಾತುಗಳಿಂದ ಕೌರವರ ಪಕ್ಷಕ್ಕೆ ಹೆಚ್ಚಿನ ಬಲವು ಪ್ರಾಪ್ತವಾಯಿತು. ಸಮುದ್ರ ಮಧ್ಯದಲ್ಲಿ ಬಿರುಗಾಳಿಗೆ ಸಿಕ್ಕ ಚಿಕ್ಕ ನೌಕೆಯಂತೆ ದ್ರೌಪದಿಯ ಸ್ಥಿತಿಯಾಯಿತು. ಭೀಷ್ಮರು ತಮ್ಮ ಆಸನದಲ್ಲಿ ಕುಳಿತುಕೊಳ್ಳುವುದನ್ನೇ ಕಾಯುತ್ತಲಿದ್ದ ದುರ್ಯೋಧನನು ದ್ರೌಪದಿಗೆ ಹೇಳಿದ.

"ದ್ರೌಪದಿ. ನಿನಗೆ ನನ್ನ ವಿನಃ ಬೇರಾರೂ ಆಶ್ರಯವನ್ನೀಯಲಾರರು. ಈ ಯುಧಿಷ್ಠಿರನು ಪತಿಯಲ್ಲವೆಂದು ಹೇಳು. ಆಗ ನಾನು ನಿನ್ನನ್ನು ದಾಸ್ಯತ್ವದಿಂದ ಮುಕ್ತಳನ್ನಾಗಿ ಮಾಡುವೆ. ಈ ಯುಧಿಷ್ಠಿರನ ದ್ಯೂತ ಕ್ರಮವೆಲ್ಲ ಸುಳ್ಳೆನಡೆಂದು ಹೇಳು. ಆಗ ನಾನು ಈ ಸಂಕಟದಿಂದ ನಿನ್ನನ್ನು ಪಾರು ಮಾಡುವೆ."

ದ್ರೌಪದಿಗೆ ಹಾಗೆ ಹೇಳುವ ಬಲವಿರಲಿಲ್ಲ. ಅವಳು ಮುಖವನ್ನು ಕೆಳಗೆ ಮಾಡಿದಳು. ಅದನ್ನು ಕಂಡಾಗ ದುರ್ಯೋಧನನ ವಿಜಯದ ನಗೆ ಸಭಾಗೃಹವೆಲ್ಲ ವ್ಯಾಪಿಸುವಂತಾಯಿತು ಮೊದಲಿನಿಂದಲೂ ವಿದುರನೊಂದಿಗೆ ದ್ರೌಪದಿಯ ವಿಷಯದಲ್ಲಿ ಸದ್ಭಾವನೆಯನ್ನು ತಾಳಿದ ವಿಕರ್ಣನಿಗೆ ಮುಂದೆ ಬರಲಿರುವ ವಿಪತ್ತಿನ ಅರಿವಾಗಲಾರಂಭಿಸಿತು. ಆಗ ಆತನು ಎದ್ದು ನಿಂತು,

"ಇಲ್ಲಿ ಕೂಡಿದ ಎಲ್ಲ ನರೇಂದ್ರರೇ, ಧರ್ಮವೆಂಬುದು ಬಿಲ್ಲಿನಂತೆ. ನಾವು ಅದನ್ನು ಹೇಗೆ ಬಾಗಿಸುತ್ತೇವೆಯೋ ; ಹಾಗೆ ಅದೂ ಸಹ ಬಾಗುತ್ತದೆ. ಮೂಲತಃ ರಾಜಸಭೆಗೆ ಸ್ತ್ರೀಯರನ್ನು ಕರೆತರುವದು ಅಧರ್ಮವೆನಿಸುವದು. ಕಪಟಿಗಳೇ, ಗೆದ್ದ ಜೂಜಿನಿಂದ ಸ್ವಾರ್ಥದ ಸೇಡು ತೀರಿಸಿಕೊಳ್ಳುತ್ತಿರುವ ನಿಮ್ಮಂಥ ಪಾಪಿಗಳು ಇನ್ನೊಬ್ಬರಿಲ್ಲ. ಈ ಪಾಂಚಾಲಿ ದ್ರುಪದನ ಕನ್ಯೆ ಯಾಗಿದ್ದಾಳೆ. ದ್ರೌಪದಿಯನ್ನು ಯಾರೂ ಗೆಲ್ಲಲಿಲ್ಲ ಎಂಬುದೇ ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ"

ವಿಕರ್ಣನ ಮಾತುಗಳಿಂದ ಸಂತಾಪಗೊಂಡ ಕರ್ಣನು ಎದ್ದು ನಿಂತು ತನ್ನ ಕೈಗಳನ್ನು ಮೇಲಕ್ಕೆತ್ತಿ ಹೇಳಿದ.

"ವಿಕರ್ಣಾ ! ಧರ್ಮ, ನೀತಿ, ಇವುಗಳ ಬಗ್ಗೆ ನಿರ್ಣಯವನ್ನೀಯುವಷ್ಟು ನೀನು ದೊಡ್ಡ ಮನುಷ್ಯನಲ್ಲ. ವಯಸ್ಸಿಗೆ ಅನುಗುಣವಾದ ರೀತಿಯಲ್ಲಿಯೇ ಮಾತನಾಡುವುದು ವಿಹಿತ. ಈ ದ್ರೌಪದಿಯು ನಿನಗೆ ಪತಿವ್ರತೆಯಾಗಿ ಕಾಣಬಂದರೆ ಅದಕ್ಕಿಂತ ಅಜ್ಞಾನವೆಂಬುದು ಬೇರೊಂದಿಲ್ಲ. ದೇವರು ಸ್ತ್ರೀಯರಿಗಾಗಿ ಒಬ್ಬ ಪತಿಯನ್ನು ನಿರ್ಧರಿಸುತ್ತಾನೆ. ಅಂಥದರಲ್ಲಿ ಅನೇಕರೊಂದಿಗೆ ಭೋಗಮಾಡುತ್ತಿರುವ ಇವಳು ಪತಿವ್ರತೆ ಎಂದು ಹೇಗೆ ಕರೆಸಿಕೊಳ್ಳುತ್ತಾಳೆ ? ಇವಳು ದುರಾಚಾರಿಣಿ ! ಇಂಥವಳು ಏಕವಸ್ತ್ರಳಿರಬಹುದು ಅಥವಾ ವಿವಸ್ತ್ರಳಾಗಿರಬಹುದು. ಅದರಿಂದ ಯಾರಿಗೆ ಹಾನಿಯಾಗುತ್ತದೆ ? ವಿಕರ್ಣಾ, ಇದು ದ್ಯೂತಗೃಹ. ಧರ್ಮಸಭೆಯಲ್ಲ" ಎಂದು ಹೇಳಿ ದ್ರೌಪದಿಯತ್ತ ತೊರಳಿದ ಅವನು "ಹೇ ಯಾಜ್ಞಸೇನೆ, ನೀನು ನಮ್ಮ ದಾಸಿಯಾಗಿರುವೆ. ಧರ್ಮದ ಆಶ್ರಯ ಹುಡುಕುವುದರ ಬದಲು ನೀನು ಯಾರ ದಾಸಿಯಾಗಿರುವೆಯೋ, ಆ ದುರ್ಯೋಧನ ಮಹಾರಾಜರ ಅಂತಃಪುರಕ್ಕೆ ಹೋಗು.

ನಿನ್ನ ಸೇವಾದಿಗಳಿಂದ ಅವರನ್ನು ಪ್ರಸನ್ನಗೊಳಿಸು. ಅದರಲ್ಲಿಯೇ ನಿನ್ನ ಹಿತವಿದೆ, ಅದುವೇ ನಿನ್ನ ಧರ್ಮವಾಗಿದೆ,"

"ನನ್ನ ಧರ್ಮ?" ಯುಧಿಷ್ಠಿರನ ಕಡೆ ನೋಡಿದ ದ್ರೌಪದಿಯು "ನನ್ನ ಧರ್ಮಕ್ಕೆ ಎಡೆಯೇ ಇಲ್ಲದಂತಾಗಿದೆ."

"ದ್ರೌಪದೀ ನೋಡು ನಿನ್ನ ಸ್ಥಳ ಇಲ್ಲಿದೆ?" ಎಂದು ಹೇಳಿ ದುರ್ಯೋಧನನು ಸರ್ವಲಕ್ಷಣಗಳಿಂದ ಕೂಡಿದ ಬಾಳೆಯ ಕಂಬದಂತಿದ್ದ, ವಜ್ರಸದೃಶವಾದ, ತನ್ನ ತೊಡೆಯನ್ನು ತೆಗೆದು ಚಪ್ಪರಿಸಿ ತೋರಿಸಿದ.

ಸಮಗ್ರ ಭೂಮಂಡಲವೇ ಸೂರ್ಯದಾಹದಿಂದ ಹುರುಪಳಿಸುತ್ತಿರುವಂತೆ ಭಾಸವಾಯಿತು, ಆಕಾಶವನ್ನು ಭೇದಿಸುವ ರೀತಿಯಲ್ಲಿ ಮೇಘನಾದವು ಹೊರಬೀಳುವಂತೆ ಭೀಮನು ಘರ್ಜಿಸಿದ.

"ನರೇಂದ್ರರೇ! ನನ್ನ ಈ ಪ್ರತಿಜ್ಞೆಯನ್ನು ಕೇಳಿರಿ. ಯಾವ ದುಶ್ಯಾಸನನು ದ್ರೌಪದಿಯ ಕೂದಲುಗಳಿಗೆ ಕೈ ಹಚ್ಚಿರುವನೋ ಅವನ ವಕ್ಷಸ್ಥಳವನ್ನು ಸೀಳಿ ಆತನ ರಕ್ತವನ್ನು ನಾನು ಕುಡಿಯುತ್ತೇನೆ. ಹಾಗೂ ಉನ್ಮತ್ತನಾಗಿ ತುಂಬಿದ ಸಭೆಯಲ್ಲಿ ತೆರೆದ ತೊಡೆಯನ್ನು ಚಪ್ಪರಿಸಿದ ಈ ದುರ್ಯೋಧನನ ತೊಡೆಗಳನ್ನು ತನ್ನ ಗದೆಯಿಂದ ಮುರಿದು ಚಲ್ಲುತ್ತೇನೆ. ಈ ಕಾರ್ಯವಾದಾಗಲೇ ನನ್ನ ಪ್ರತಿಜ್ಞೆಯು ಪೂರೈಸಿದಂತಾಗುತ್ತದೆ."

ಭೀಮನ ಈ ಘೋರ ಪ್ರತಿಜ್ಞೆಯಿಂದಾಗಿ ಇಡೀ ಸಭೆಯು ನಡುಗಿ ಹೋಯಿತು. ದುರ್ಯೋಧನನ ಅಪಮಾನದಿಂದಾಗಿ ಕರ್ಣನು ಸಂತಪ್ತನಾದ. ಅವನನ್ನು ಸಮಾಧಾನಪಡಿಸುತ್ತ ಎಲ್ಲರಿಗೂ ಕೇಳಿಸುವಂತೆ ದುರ್ಯೋಧನನು ಕೂಗಿ ಹೇಳಿದ.

"ಪ್ರತಿಜ್ಞೆ! ಅದೂ ನನ್ನ ಸಭೆಯಲ್ಲಿ. ನನ್ನ ದಾಸರಾದವರು ನನ್ನನ್ನೇ ಪರಾಜಿತಗೊಳಿಸಲು ಪ್ರತಿಜ್ಞೆ ಮಾಡುತ್ತಾರೆ! ಇನ್ನೂ ಈ ದಾಸರ ಮೈಮೇಲೆ ರಾಜವಸ್ತ್ರ, ರಾಜಚಿಹ್ನೆಗಳಿವೆಯಲ್ಲವೇ? ಆದುದರಿಂದಲೇ ಅವರಿಗೆ ತಮ್ಮ ಪರಿಸ್ಥಿತಿಯ ಅರಿವಿಲ್ಲದಂತೆ ತೋರುತ್ತದೆ. ಎಲೈ ವೃಕೋದರನೇ, ನೀನು ನನ್ನ ದಾಸ. ತೆರೆದ ತೊಡೆಯ ದರ್ಶನವು ದಾಸನಿಗೆ ಲಭಿಸಿದಲ್ಲಿ ಅದು ತನ್ನ ಸನ್ಮಾನವೆಂದು ಆತನು ಗ್ರಹಿಸಬೇಕು. ಅಷ್ಟೇ ಅಲ್ಲದೆ ದಾಸ್ಯವೃತ್ತಿಯಲ್ಲಿದ್ದವರು ಅತ್ತ ಕಡೆಗೆ ಲಕ್ಷ್ಯವೀಯಬಾರದು. ಇಂಥ ಪ್ರಮಾದಗಳನ್ನು

ಮಾಡಿದಲ್ಲಿ ಮುಂದೆ ಏನಾಗುತ್ತದೆ ಎಂಬುದನ್ನು ಈಗಲೇ ನಿನಗೆ ತೋರಿಸಿ ಕೊಡುತ್ತೇನೆ." ದುರ್ಯೋಧನನ ಧ್ವನಿಯು ಮತ್ತಷ್ಟು ತಾರಕಕ್ಕೇರಿತು. ಆತನು ಪಾಂಡವರತ್ತ ಕೈಮಾಡಿ "ಸೇವಕರೇ ಏನು ನೋಡುತ್ತಿರುವಿರಿ. ಈ ಉನ್ಮತ್ತ ಪಾಂಡವರ ವಸ್ತ್ರಾಭರಣಗಳನ್ನೆಲ್ಲ ಕಿತ್ತು ತನ್ನಿರಿ"

ಈ ಆಜ್ಞೆಯಿಂದಾಗಿ ಇಡೀ ಸಭೆಯು ಸ್ಥಳದಲ್ಲಿಯೇ ಕುಸಿದುಹೋಯಿತು. ಸೇವಕರು ಮುಂದಾದುದನ್ನು ಕಂಡ ಯುಧಿಷ್ಠಿರನು ತನ್ನೆಲ್ಲ ರಾಜಭೂಷಣಗಳನ್ನು ಬಿಚ್ಚಿಟ್ಟನು. ಉಳಿದವರೂ ಆತನ ಅನುಕರಣೆ ಮಾಡಿದರು. ಪತಿಗಳೈವರ ಈ ಅವಸ್ಥೆಯನ್ನು ನೋಡಲಾರದೆ ದ್ರೌಪದಿಯು ತನ್ನ ಮುಖವನ್ನು ಮುಚ್ಚಿಕೊಂಡಳು. ಅದೇ ಸಮಯಕ್ಕೆ ಸರಿಯಾಗಿ ಕರ್ಣನ ನೋಟವು ಅವಳತ್ತ ಹೊರಳಿತು. ಅವನು ದುಶ್ಶಾಸನನಿಗೆ ಹೇಳಿದ.

"ದುಶ್ಶಾಸನ, ಈ ದಾಸರು ಹೇಗೆ ವಸ್ತ್ರರಹಿತರಾಗಿದ್ದಾರೆಯೋ ಹಾಗೆಯೇ ಈ ಪಾಂಚಾಲಿಯನ್ನೂ ವಿವಸ್ತ್ರಳನ್ನಾಗಿ ಮಾಡು ! ರಾಜಹಂಸವು ಹೇಗಿರುತ್ತದೆಂಬುದನ್ನು ಈ ಸೂತಪುತ್ರನು ನೋಡಬೇಕಾಗಿದೆ. ಸಾಮಾನ್ಯ ಸ್ತ್ರೀಯರಿಗಿಂತ ರಾಜಸ್ತ್ರೀ ಹೇಗಿರುತ್ತಾಳೆಂದು ನೋಡಲು ನಾನು ಉತ್ಸುಕನಾಗಿದ್ದೇನೆ. ಏನು ನೋಡುತ್ತಿರುವಿ, ಏಕವಸ್ತ್ರಳಾದ ಅವಳನ್ನು ವಿವಸ್ತ್ರಗೊಳಿಸು."

ಮೊದಲೇ ಚೇತನಾಶೂನ್ಯರಾದ ಭೀಷ್ಮ, ವಿದುರರು ಕರ್ಣನ ಈ ಮಾತುಗಳಿಂದ ಚಕಿತರಾಗಿ ಎಚ್ಚರಗೊಂಡರು. ಭಯಭೀತಳಾದ ದ್ರೌಪದಿಯ ನೇತ್ರಗಳು ಕೆಂಡದಂತಾದವು. ದುಶ್ಶಾಸನನು ಹೆಜ್ಜೆ ಮುಂದಿಟ್ಟಿರುವುದನ್ನು ನೋಡಿ ಭಯಗ್ರಸ್ತಳಾದ ದ್ರೌಪದಿಯು ಹಿಂದೆ ಸರಿಯಲಾರಂಭಿಸಿದಳು. ಅಟ್ಟಹಾಸದಿಂದ ನಗುತ್ತ ದುಶ್ಶಾಸನನೂ ಸಹ ಮುಂದೆ ಹೆಜ್ಜೆಗಳನ್ನು ಹಾಕುತ್ತಲಿದ್ದ. ಅದನ್ನು ಕಂಡು ಸಂತಾಪಗೊಂಡು ನಡುಗುತ್ತಿದ್ದ ಭೀಷ್ಮರು,

"ನಿಲ್ಲು ; ದುಶ್ಶಾಸನಾ ನಿಲ್ಲು ! ಮುಂದೆ ಹೆಜ್ಜೆಯನ್ನಿಡಬೇಡ."

ಇಡೀ ಸಭೆಯು ನಿಶ್ಶಬ್ದಗೊಂಡಿತು. ತೇಜಃಪುಂಜರಾದ ಭೀಷ್ಮಾಚಾರ್ಯರ ಮುಖದ ಮೇಲಿನ ಶುಭ್ರಕೂದಲುಗಳು ಕಂಪಿಸುತ್ತಲಿದ್ದುವು ಸಿಡಿಲಿನಂತೆ ಅಬ್ಬರಿಸಿದ ಅವರು,

"ಈ ಸಭೆಗೆ ಧಿಕ್ಕಾರವಿರಲಿ ! ಪರಾಕ್ರಮಿಗಳೆಂದು, ಸಜ್ಜನರೆಂದು

ಕರೆಸಿಕೊಳ್ಳುವ ಈ ನರೇದ್ರರೆಲ್ಲರಿಗೂ ಧಿಕ್ಕಾರವಿರಲಿ! ಈರಾಜಸಭೆಯ ಪೌರುಷವೆಲ್ಲ ಇಂದು ಅಳಿದುಹೋಯಿತೇ? ಇದೇನು ರಾಜಸಭೆಯೋ ಅಥವಾ ಅಧರ್ಮಿಗಳ ಕೂಟವೋ? ರಾಜನೀತಿಯ ವಿಷಯ ಎಂದು ನಾನು ಎಲ್ಲವನ್ನೂ ಸಹನ ಮಾಡಿಕೊಂಡಿದ್ದೆ. ಆದರೆ ನಿಮ್ಮ ಅಧೋಗತಿಗೆ ಸೀಮೆಯೇ ಇಲ್ಲ ಎಂದು ತೋರುತ್ತದೆ. ಸೂತಕುಲದಲ್ಲಿ ಜನಿಸಿ ಹೀನವೃತ್ತಿಯನ್ನನುಸರಿಸಿದಂಥವರಿಗೆ ನಾನು ದೋಷವನ್ನೀಯಲಾರೆ ಆದರೆ ಅಂಥ ಕೆಳವರ್ಗದವರ ಸಲಹೆಯಿಂದಾಗಿ ಇಂಥ ಘೋರ ಕೃತ್ಯಕ್ಕಿಳಿದ ನಿಮ್ಮ ವಿವೇಕವೆಲ್ಲ ಅಳಿದು ಹೋಯಿತೆ? ಇದೇ ಈ ಸಭೆಯ ಮರ್ಯಾದೆಯಾಗಿರುವದೇ? ಎಲ್ಲಿಯವರೆಗೆ ಈ ಭೀಷ್ಮನು ಇಲ್ಲಿರುವನೋ ಅಲ್ಲಿಯವರೆಗೆ ಅಬಲೆಯನ್ನು ವಿವಸ್ತ್ರಗೊಳಿಸುವಂತಹ ಸಾಹಸವನ್ನು ಯಾರೂ ಮಾಡಲಾರರು. ದುಶ್ಯಾಸನಾ, ಹಿಂದಕ್ಕೆ ಹೋಗು, ಇದು ನನ್ನ ಆಜ್ಞೆಯಾಗಿದೆ."

ದುಶ್ಯಾಸನನು ತಾನು ನಿಂತಲ್ಲಿಂದಲೇ ದುರ್ಯೋಧನನ್ನು ನೋಡಲಾರಂಭಿಸಿದ. ಆಗ ದುರ್ಯೋಧನನು ತನ್ನ ಸಂತಾಪವನ್ನು ಸಾವರಿಸಿಕೊಂಡು ಕೇಳಿದ.

"ಪಿತಾಮಹರೇ, ನೀವು ಯಾವ ಬಲದಿಂದ ಈ ಆಜ್ಞೆಯನ್ನು ಮಾಡುತ್ತಿರುವಿರಿ?"

"ಏನು ಕೇಳುತ್ತಿರುವೆ!" ಭೀಷ್ಮರು ಚಕಿತರಾಗಿ ಕೇಳಿದರು.

"ತಾವು ಈ ಆಜ್ಞೆಯನ್ನು ಯಾವ ಬಲದಿಂದ ಕೊಡುವಿರಿ" ಶಾಂತಸ್ವರದಲ್ಲಿ ಪುನಃ ದುರ್ಯೋಧನನು ಪ್ರಶ್ನೆ ಮಾಡಿದ.

"ನನ್ನ ಬಲವನ್ನು ನೀನು ಪ್ರಶ್ನೆ ಮಾಡುವೆಯಾ?" ಭೀಷ್ಮರ ಸಿಟ್ಟು ನೆತ್ತಿಗೇರಿತು. ಈ ಬಲವೆಲ್ಲ ಎಲ್ಲಿಂದ ಬಂದಿತು? ಯಾವ ಹೆಸರಿನಿಂದ ನೀನು ನನ್ನನ್ನು ಸಂಭೋಧಿಸುವೆಯೋ ಅದೇ ನನ್ನ ಬಲವಾಗಿದೆ. ನಾನು ಪಿತಾಮಹಭೀಷ್ಮನಿರುವೆ. ಈ ರಾಜ್ಯದ ನಿಜವಾದ ಹಕ್ಕುದಾರನಾಗಿರುವೆ. ನೀನು ನನಗೆ ಪ್ರಶ್ನೆ ಮಾಡುವಿಯಾ? ಅಧೋಗತಿಯ ತುಟ್ಟ ತುದಿಯನ್ನು ಮುಟ್ಟಿರುವೆ. ಇನ್ನು ಮುಂದೆ ಇದಕ್ಕೂ ಹೆಚ್ಚು ಜಾರಬೇಡ."

ತಮ್ಮ ವಾಗ್ಬಾಣಗಳು ದುರ್ಯೋಧನನ ಮನಸ್ಸಿನ ಮೇಲೆ ಪರಿಣಾಮ ಬೀರಬಲ್ಲವೆಂಬ ಕಲ್ಪನೆಯಲ್ಲಿದ್ದ ಭೀಷ್ಮರಿಗೆ, ಪ್ರತಿಯಾಗಿ ಆತನ ಮುಖದಲ್ಲಿ

ಹಾಸ್ಯವಾಡುತ್ತಿದ್ದುದನ್ನು ಕಂಡು ಚಕಿತರಾದರು. ಅವರ ಮನೋಗತ ವನ್ನರಿತ ದುರ್ಯೋಧನನು,

"ಪಿತಾಮಹರೇ! ನೀವು ನಿಮ್ಮ ದಾತೃತ್ವದ ಉಲ್ಲೇಖವನ್ನು ಮಾಡಿ ಕೊಂಡು ನಿಮ್ಮ ವ್ಯಕ್ತಿತ್ವವನ್ನು ನೀವೆ ಕೆಳಗಿಳಿಸಿಕೊಂಡಿರಿ. ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನಿತ್ತು ಇನ್ನಷ್ಟು ಕುಸಿಯಬೇಡಿರಿ, ದುರ್ದೈವದಿಂದ ನಾನು ಈ ಮಾತನ್ನು ಹೇಳಬೇಕಾಗಿದೆ."

ದುರ್ಯೋಧನನ ಪ್ರತ್ಯಾಘಾತದಿಂದ ಭೀಷ್ಮರು ಸ್ತಂಭೀಭೂತರಾದರು. ಹಿಮವತ್ಪರ್ವತದಲ್ಲಿ ತಪ್ತಕಿರಣಗಳು ಬಿದ್ದೊಡನೆ ಹಿಮಗಡ್ಡೆಗಳು ಕರಗಿ ಉರುಳಿ ಬೀಳುವಂತೆ ಕುರುಕುಲ ಶ್ರೇಷ್ಠನ ಪರಿಸ್ಥಿತಿಯಾಯಿತು. ಅವರ ಆವೇಶವೆಲ್ಲ ಇಳಿದು ಹೋಯಿತು. ನಿಸ್ತೇಜರಾದರು, ಸರ್ವಾಂಗವು ಕಂಪಿಸ ತೊಡಗಿತು. ದುರ್ಯೋಧನನು ಅವರಿಗೆ ಮರ್ಮಾಘಾತವನ್ನೇ ಮಾಡಿದ್ದ.

"ಯುವರಾಜ, ಎಲ್ಲಿದ್ದರೂ ನಾನು ಸತ್ಯವನ್ನೇ ನುಡಿದಿದ್ದೇನೆ. ಸಮ ಯಕ್ಕೆ ಸರಿಯಾಗಿ ಎಚ್ಚರಿಕೆಯನ್ನೀಯುತ್ತಿದ್ದೇನೆ. ಈ ಭೀಷ್ಮನ ದೈವದಲ್ಲಿ ಇನ್ನು ಇಳಿತದ ವಿನಃ ಬೇರಾವ ಮಾರ್ಗವೂ ಇಲ್ಲ."

ಭೀಷ್ಮಾಚಾರ್ಯರು ತಮ್ಮ ಪಾದುಕೆಗಳನ್ನು ಧರಿಸಿದರು. ರಾಜಸಭೆ ಯನ್ನು ತೊರೆದು ಮುಂದೆ ಸಾಗಿದರು ಅವರನ್ನು ತಡೆದು ನಿಲ್ಲಿಸುವ ಧೈರ್ಯವು ವಿದುರನಲ್ಲಿಯೂ ಇಲ್ಲದಂತಾಗಿತ್ತು. ಸಭಾಭವನದಲ್ಲಿ ಹಾಸಿದ ಸ್ಫಟಿಕ ನೆಲದಿಂದ ಪಾದುಕೆಗಳ ಶಬ್ದವು ಕೇಳಬರತೊಡಗಿತ್ತು. ಆ ಶಬ್ದ ದೊಂದಿಗೆ ದ್ರೌಪದಿಯ ಅಳಿದುಳಿದ ಆಧಾರವೂ ಸಹ ಕಳಚಿಹೋದಂತಾಯಿತು ದುರ್ಯೋಧನನ ಮನಸ್ಸಿನ ಮೇಲಿದ್ದ ಭಾರವು ತಾನಾಗಿಯೇ ಸರಿದು ಹೋದಂತೆನಿಸಿತು. ಆತನು ದುಶ್ಶಾಸನನಿಗೆ ಸಂಜ್ಞೆ ಮಾಡಿದ.

ಇಡೀ ಸಭೆಯು ಸ್ತಬ್ಧವಾಗಿತ್ತು. ದುಶ್ಶಾಸನನು ಆತ್ಮವಿಶ್ವಾಸದಿಂದ ಮುಂದೆ ಬಂದು ದ್ರೌಪದಿಯ ವಸ್ತ್ರಕ್ಕೆ ಕೈಹಾಕಿದನು. ಕುಳಿತಲ್ಲಿಯೇ ಕರ್ಣನ ಮೈ ಕಂಪಿಸತೊಡಗಿತು. ಎದೆಗೆ ಪೆಟ್ಟು ಬಿದ್ದಂತೆನಿಸಿತು. ಯಾವುದು ನಡೆಯ ಬೇಕೆಂದು ಅಪೇಕ್ಷಿಸಿದ್ದನೋ ಅದನ್ನು ನೋಡುವ ಧೈರ್ಯವು ಮಾತ್ರ ಕರ್ಣ ನಲ್ಲಿ ಉಳಿಯಲಿಲ್ಲ.

ಅವಸಿಗರಿವಿಲ್ಲದಂತೆ ಅತನ ಕಣ್ಣುಗಳು ಮುಚ್ಚಿಕೊಂಡವು.

## 22

ದ್ರೌಪದಿಯ ವಸ್ತ್ರಕ್ಕೆ ದುಶ್ಯಾಸನನು ಕೈಹಾಕಿದಾಗ ಸಭೆಯಲ್ಲಿ ಉಸಿರು ಗಟ್ಟುವಂತಹ ಸ್ಮಶಾನ ಮೌನವು ಆವರಿಸಿತು. ನಗ್ನತೆಯ ಭಯದಿಂದಾಗಿ ಅವಳು ಮತ್ತಷ್ಟು ಭಯಭೀತಳಾದಳು. ಹಾಗೆಯೇ ಇಡೀ ಸಭೆ ಮೌನವ್ರತ ತಾಳಿದುದನ್ನು ಅವಳು ಗಮನಿಸಿದಳು. ಎದುರಿಸಬೇಕಾದ ಸನ್ನಿವೇಶವನ್ನು ಕುರಿತು ಕಣ್ದೆರೆದು ನೋಡಿದಾಗ ಎಲ್ಲರ ಗಮನವೂ ಮಹಾದ್ವಾರದತ್ತ ಹೊರಳಿದುದು ಕಂಡುಬಂದಿತು ಸೀರೆಯನ್ನು ಹಿಡಿದಿದ್ದ ದುಶ್ಯಾಸನನ ಕೈ ಹಾಗೆಯೆ ನಿಂತಿತು. ಎಲ್ಲರೂ ನೋಡುತ್ತಿರುವಂತೆ ದ್ರೌಪದಿಯೂ ಮಹಾ ದ್ವಾರದ ಕಡೆಗೆ ನೋಡಿದಳು.

ಸಭಾಗೃಹದ ದ್ವಾರದಲ್ಲಿ ಕೃಷ್ಣನು ನಿಂತುಕೊಂಡಿದ್ದ.

ದ್ರೌಪದಿಗೆ ಆ ಕೃಷ್ಣ ರೂಪವನ್ನು ಕಂಡಾಗ ವಿಶ್ವಾಸವೆನಿಸಲಿಲ್ಲ. ಆದುದರಿಂದ ಅವಳು ತದೇಕ ಚಿತ್ತದಿಂದ ಆ ರೂಪವನ್ನು ನೋಡುವುದರಲ್ಲಿ ತಲ್ಲೀನಳಾಗಿದ್ದಳು. ಧೀರವಾದ ನಡಿಗೆಯಲ್ಲಿ ಕೃಷ್ಣನು ಸಭಾಗೃಹವನ್ನು ಪ್ರವೇಶ ಮಾಡುತ್ತಲಿದ್ದ. ರೇಶಿಮೆಯ ಪೀತಾಂಬರ, ಉತ್ತರೀಯ, ತಲೆಯ ಮೇಲಿಟ್ಟ ಸ್ವರ್ಣ ಕಿರೀಟ, ಎಲ್ಲವೂ ಹಿಂದಿನಂತೆಯೇ ; ಅದೇ ಮೋಹಕ ರೂಪ. ಹೆಗಲಮೇಲಿಳಿದ ಕಪ್ಪು ಕೂದಲುಗಳು, ವಿಶಾಲವಾದ ಕಣ್ಣುಗಳು, ಆ ಮೋಹಕ ರೂಪದಲ್ಲಿ ಎದ್ದು ತೋರುತ್ತಿದ್ದ ಒಂದು ಕೊರತೆಯೆಂದರೆ ಯಾವಾಗಲೂ ಕಾಣುತ್ತಲಿದ್ದ ಮುಗುಳುನಗೆ ಮಾತ್ರ ಮಾಯವಾಗಿತ್ತು. ಆತನ ಕಣ್ಣುಗಳು ತೆರೆಗಳಿಲ್ಲದ ಸಮುದ್ರದಂತೆ ವಿಲಕ್ಷಣ ಶಾಂತಿಯಿಂದ ಕೂಡಿದವುಗಳಾಗಿದ್ದವು. ಕೃಷ್ಣ ದರ್ಶನವಾದೊಡನೆ ದ್ರೌಪದಿಯ ಮನದ ದುಗುಡವು ಇಮ್ಮಡಿಸಿತು. ಮುಂಬರುತ್ತಲಿದ್ದ ಕೃಷ್ಣನತ್ತ ಅವಳು ಧಾವಿಸಿದಳು. ನೋಡು ನೋಡುತ್ತಿದ್ದಂತೆ ಅವಳು ಕೃಷ್ಣನ ಬಾಹುಗಳಲ್ಲಿ ವಿಲೀನಳಾಗಿ ಹೋದಳು. ಕೃಷ್ಣನ ಅಭಯ ಹಸ್ತವು ಅವಳ ಬೆನ್ನಮೇಲಾಡುತ್ತಿತ್ತು. ಆ ಅಭಯ ಹಸ್ತದಿಂದ ಚೇತರಿಸಿಕೊಂಡ ದ್ರೌಪದಿಯು,

"ಕೃಷ್ಣಾ, ಇಲ್ಲೇಕೆ ಬಂದೆ? ಸಾಕ್ಷಾತ್ ಪುರುಷಾರ್ಥರೂಪಿಯಾದ ನನ್ನ ಪತಿ ಭೀಮ, ಅರ್ಜುನರ ಈ ಅವಸ್ಥೆಯನ್ನು ನೋಡು, ಧರ್ಮಬುದ್ಧಿ ಯುಧಿಷ್ಠಿರನ ದ್ಯೂತ ಲಂಪಟತನವನ್ನು ನೋಡು. ದ್ಯೂತದಲ್ಲಿ ಪತಿಗಳು ಐಶ್ವರ್ಯ, ರಾಜ್ಯ, ಅಷ್ಟೇ ಏಕೆ? ತಮ್ಮನ್ನೂ ಕಳೆದುಕೊಂಡರೆಂಬ ದುಃಖವು ನನಗಾಗಿಲ್ಲ. ಆದರೆ ತಮ್ಮ ಹೆಂಡತಿಯನ್ನೇ ಪಣಕ್ಕಿಟ್ಟು ತಮ್ಮ ಪುರುಷಾರ್ಥ ವನ್ನೇ ಕಳೆದುಕೊಂಡಿರುವರಲ್ಲ! ಅದನ್ನು ನೆನೆದಾಗ ಮಾತ್ರ ನನಗೆ ಪ್ರಾಣ ಹೋಗುವಂತಹ ಸಂಕಟವಾಗುತ್ತಿದೆ. ಯಾರಿಂದ ನನಗೆ ಅಭಯದ ಅಪೇಕ್ಷೆ ಯಿತ್ತೋ ಅವರೇ ನನ್ನ ವಸ್ತ್ರಾಪಹರಣ ನೋಡುವ ಉತ್ಸಾಹದಲ್ಲಿದ್ದಾರೆ. ಇಲ್ಲಿ ನೆರೆದಿರುವ ಯಾವ ಧರ್ಮಜ್ಞನಿಗೂ ನನ್ನ ಸ್ತ್ರೀತ್ವದ ಪರಿವೆಯೇ ಇಲ್ಲ. ಯಾವ ವೀರರಿಗೂ ನನ್ನ ಅನುಕಂಪಿತವಾದ ಈ ಸ್ಥಿತಿಯನ್ನು ನೋಡಿ ನಾಚಿಕೆ ಯೆನಿಸಲಿಲ್ಲ. ಇಷ್ಟೆಲ್ಲ ನಡೆದಾಗ ನನಗೆ ಒಂದೇ ಒಂದು ಸಮಾಧಾನವೆಂದರೆ ನೀನಾದರೂ ಈ ವಿಡಂಬನೆ ನೋಡಲು ಇರಲಿಲ್ಲವಲ್ಲ! ಅದೇ ಸಾಕಾಗಿತ್ತು. ನನ್ನ ಹಣೆಯ ಬರಹದಲ್ಲಿ ಇಷ್ಟೂ ಇಲ್ಲವೇ? ಯಾತಕ್ಕಾಗಿ ನೀನಿಲ್ಲಿಗೆ ಬಂದೆ? ಈ ವಿಡಂಬನೆ ನೋಡಲು ಬಂದೆಯಾ?"

"ಶಾಂತಳಾಗು ದ್ರೌಪದಿ" ಕೃಷ್ಣನು ಅವಳ ಕಣ್ಣೀರನ್ನೊರಸಿದ. "ನಾನು ವಿಡಂಬನೆ ನೋಡಲು ಬಂದವನಲ್ಲ, ಈ ದ್ಯೂತದ ಕಲ್ಪನೆಯೂ ಸಹ ನನಗಿರಲಿಲ್ಲ. ಆವರ್ತ ದೇಶದಿಂದ ನಾನು ದೂರ ಹೋಗಿದ್ದೆ. ಸ್ವದೇಶದಲ್ಲಿ ಇದ್ದಿದ್ದರೆ ವೇಳೆಗೆ ಸರಿಯಾಗಿ ಬಂದು ಈ ದ್ಯೂತವನ್ನು ನಿಲ್ಲಿಸುತ್ತಿದ್ದೆ. ಹೇ ಕೃಷ್ಣೇ! ನೀನು ಭಯಗ್ರಸ್ತಳಾಗಬೇಡ, ವಸ್ತ್ರಾಪಹರಣ ಮಾಡುವುದು ಅಷ್ಟು ಸುಲಭವಲ್ಲ. ಪ್ರತಿಯೊಂದು ಮಾನವೀಯ ಜೀವನಕ್ಕೆ ವಿಧಾತನು ಅನೇಕ ಸುಂದರ ವಸ್ತ್ರಗಳಿಂದ ವಿಭೂಷಣಗೊಳಿಸಿದ್ದಾನೆ. ಈ ಮಾನವೀಯ ಜೀವನದ ಲಜ್ಜೆಯನ್ನು ರಕ್ಷಿಸಲು ಅನೇಕ ಸೂಕ್ಷ್ಮ ವಸ್ತ್ರಗಳಿಂದ ಕಾಣದಂತೆ ಮಾಡಿದ್ದಾನೆ. ಆ ವಸ್ತ್ರಗಳು ದಿವ್ಯ ವಸ್ತ್ರಗಳೆಂದು ಕರೆಸಿಕೊಳ್ಳುತ್ತವೆ ತಂದೆ, ತಾಯಿ, ಬಂಧು, ಬಳಗ, ಪತಿ, ಪುತ್ರ, ಗುರು, ಮಿತ್ರ, ಹೀಗೆ ಅನೇಕರ ಸ್ನೇಹ ಸಂಬಂಧದಿಂದ ಹೆಣೆಯಲ್ಪಟ್ಟ ಆ ಸುಂದರ ವಸ್ತ್ರಗಳಿಂದಲೇ ಜೀವನದ ನಿಜ ವಾದ ಮರ್ಯಾದೆಯು ರಕ್ಷಿಸಲ್ಪಡುತ್ತದೆ. ಪರಾಕ್ರಮಿಗಳಾದ ನಿನ್ನ ಪತಿಗಳು ನಿನ್ನನ್ನು ರಕ್ಷಿಸಲು ಅಸಮರ್ಥರಾಗಿರಬಹುದು. ಈ ಮಹಾ ಸಭೆಯ

ಯೋಗ್ಯತೆ ಅಪರಿಪೂರ್ಣ ಎಂದೆನಿಸಿರಬಹುದು. ಆದರಿಂದ ನೀನು ಭಯ ಪಡಬೇಡ. ವ್ಯಾಕುಲಳಾಗಬೇಡ, ಅಮ್ಮಾ ನಾನು ಬಂದಿಲ್ಲವೆ? ಕೊನೆಗೆ ನನ್ನ ಮೇಲಾದರೂ ವಿಶ್ವಾಸವನ್ನಿಡು."

ಕೃಷ್ಣನ ಸ್ವಾಂತನದ ಮಾತುಗಳಿಂದ ದ್ರೌಪದಿಯ ಮನಸ್ಸು ಶಾಂತಗೊಳ್ಳುವುದರ ಬದಲಾಗಿ ಮತ್ತಷ್ಟು ಕೆರಳಿತು. ಅವಳು ತನ್ನ ಅಸಮ್ಮತಿಯನ್ನು ಸೂಚಿಸಲು ತಲೆಯನ್ನಲ್ಲಾಡಿಸಿದಳು.

"ಕೃಷ್ಣಾ ಬಹಳಷ್ಟು ಸಮಯ ಕಳೆದುಹೋಯಿತು. ಯಾವದು ನಡೆಯಬಾರದಾಗಿತ್ತೋ ಅದೆಲ್ಲವೂ ಈಗಾಗಲೇ ನಡೆದುಹೋಯಿತು. ನಾನು ಏಕವಸ್ತ್ರಳಾಗಿರುವೆ ಎಂಬುದನ್ನು ಪುರುಷರಾದವರು ತಿಳಿದುಕೊಳ್ಳಲಿಲ್ಲ. ನನ್ನ ಪತಿಗಳೇ ಈ ಅವಸ್ಥೆಯಲ್ಲಿದ್ದ ನನ್ನನ್ನು ರಾಜಸಭೆಗೆ ಬರುವಂತೆ ಆಗ್ರಹ ಪಡಿಸಿದರು. ಈ ದುಶ್ಶಾಸನನು ಅಂತಃಪುರ ಪ್ರವೇಶ ಮಾಡಿ ನನ್ನ ಕೂದಲನ್ನು ಹಿಡಿದು ಎಳೆದು ಇಲ್ಲಿಯವರೆಗೂ ತಂದಿದ್ದಾನೆ. ಕೃಷ್ಣಾ, ನಾನು ಯಾಜ್ಞಸೇನೆ, ದ್ರುಪದ ಕನ್ಯೆ. ನನ್ನನ್ನು ಎಳೆತರುತ್ತಿರುವುದನ್ನು ಕಂಡಾಗಲೂ ಸಹ ಇಲ್ಲಿ ಕುಳಿತವರಾರಿಗೂ ನಾಚಿಕೆಯಾಗಲಿಲ್ಲ." ತನ್ನ ಕಪ್ಪು ಕೂದಲನ್ನು ಎಡಗೈಯ್ಯಲ್ಲಿ ಹಿಡಿದುಕೊಂಡ ಅವಳು "ಹೇ ಮಧುಸೂದನಾ, ಈ ಕೂದಲಿನ ಮರ್ಯಾದೆಯನ್ನು ನೀನೇ ಉಳಿಸು. ದುಶ್ಶಾಸನನಿಂದ ಮುಟ್ಟಲ್ಪಟ್ಟ ನನ್ನ ಈ ಮುಡಿಯ ಶಾಪವು ಎಂದಿಗೂ ವ್ಯರ್ಥವಾಗಲಾರದು. ಕೃಷ್ಣಾ, ಈ ಸಭೆಯಲ್ಲಿ ಯಾವದು ನಡೆಯಲಿಲ್ಲ! ಕಣ್ಣಿನ ಸಂಕೇತಗಳು ನಡೆದವು! ತೆರೆದ ತೊಡೆಯನ್ನು ತೋರಿಸಲಾಯಿತು! ಅಪಶಬ್ದಗಳು ಕೇಳಿಬಂದವು; ಅಷ್ಟೇ ಅಲ್ಲ ನನ್ನ ಸೀರೆಯ ಸೆರಗಿಗೂ ಕೈಹಾಕಿದರು! ಇದಕ್ಕೂ ಇನ್ನೇನು ವಿಡಂಬನೆಗಳಾಗಬೇಕು? ಸ್ವಾಭಿಮಾನದಿಂದ ಬದುಕಲು ಬರುವಂತೆ ಈ ನಿನ್ನ ಅಭಾಗ್ಯ ಸೋದರಿಯ ಹತ್ತಿರ ಈಗ ಯಾವದೂ ಉಳಿಯಲಿಲ್ಲ."

ಕರುಣಾಪೂರಿತವಾದ ದ್ರೌಪದಿಯ ಮಾತುಗಳಿಂದ ಕೃಷ್ಣನ ನೇತ್ರಗಳು ತುಂಬಿ ಬಂದವು. ಆತನು ನಡುಗುವ ತನ್ನ ಕೈಗಳಿಂದ ಅವಳ ಕೇಶರಾಶಿಯನ್ನು ಸವರಿದ. ಆತನ ಕಂಠವು ಬಿಗಿದು ಬಂದಿತ್ತು. ಕೆಂಡದಂತಹ ಕಣ್ಣುಗಳನ್ನರಳಿಸಿದ ಕೃಷ್ಣನು,

"ಕೃಷ್ಣೇ, ಪೃಥ್ವಿಯ ಮೇಲೆ ನಡೆಯುವ ಪ್ರತಿಯೊಂದು ಘಟನೆಯೂ

ಈಶ ಸಂಕಲ್ಪವೆಂದು ತಿಳಿ. ದುಷ್ಟರ ವಿನಾಶ ಕಾಲವು ಸನ್ನಿಹಿತವಾದಾಗ ಪಾಪರಾಶಿಯನ್ನು ಹೆಚ್ಚಿಸುವ ಸಂಧಿಯೂ ಅತ್ಯಾವಶ್ಯಕ ನೀನು, ಬಿಚ್ಚಿದ ಈ ನಿನ್ನ ಮುಡಿಗಾಗಿ ಚಿಂತಿಸಬೇಡ. ನನ್ನ ಮೈ ಮುಟ್ಟಿದರೆಂದು ವ್ಯಥಿತಳಾಗಬೇಡ, ಅಪಶಬ್ದಗಳನ್ನು ಕೇಳುವಂತಾಯಿತೆಂದು ದುಃಖಿಸಬೇಡ, ಯಾರು ಈ ಸಭೆಯಲ್ಲಿ ಹೇಗೆ ನಡೆದುಕೊಂಡಿದ್ದಾರೆಯೋ, ಯಾರು ನಿನ್ನನ್ನು ಹೇಗೆ ನೋಡಿದ್ದಾರೆಯೋ ಅವರೆಲ್ಲರ ಮೃತ್ಯುವನ್ನು ರಣರಂಗದಲ್ಲಿ ನೋಡಿದ ನಂತರವೇ ನಾನು ಈ ದೇಹವನ್ನು ಬಿಡುತ್ತೇನೆ. ಕೌರವ ಸ್ತ್ರೀಯರೆಲ್ಲ ತಮ್ಮ ಮುಡಿಗಳನ್ನು ಬಿಚ್ಚಿಕೊಂಡು ಬರಿದಾದ ಹಣೆಯಿಂದ ಶೋಕಪಡುತ್ತ ಹೋಗುವದನ್ನು ನೀನು ನೋಡುವಿ, ಈ ಎಲ್ಲವೂ ಘಟಿಸುವವರೆಗೆ ನನ್ನ ಈ ಪ್ರತಿಜ್ಞೆಗೆ ಈ ಸಭೆಯೇ ಸಾಕ್ಷಿಯಾಗಲಿ" ಎಂದು ನುಡಿದಾಗ.

ದುಶ್ಶಾಸನನು ಆವೇಶದಿಂದ ಮುಂದೆ ಬಂದು.

"ಕೃಷ್ಣಾ, ಆಮಂತ್ರಣವಿಲ್ಲದೆ ಬರುವದೇ ಬಹು ದೊಡ್ಡ ಅಪರಾಧ. ಅದರಲ್ಲಿ ಇಂಥ ಪ್ರತಿಜ್ಞೆ."

ದಹಿಸುತ್ತಿರುವ ಕೃಷ್ಣನ ನೋಟದಿಂದ ದುಶ್ಶಾಸನನಿಗೆ ಮುಂದೆ ಶಬ್ದವೇ ಹೊರಡದಂತಾಯಿತು. ಅವನು ಅತ್ಯಂತ ತಿರಸ್ಕಾರಯುತವಾದ ಸ್ವರದಲ್ಲಿ ಹೀಗೆ ಹೇಳಿದ.

"ಸಮರ್ಥಶಾಲಿಯಾದ ಪುರುಷನಿಗೆ ದುರ್ಬಲರ ಸಭೆಗೆ ಬರಲು ಆಮಂತ್ರಣದ ಆವಶ್ಯಕತೆಯೇ ಬರುವುದಿಲ್ಲ"

ಕೃಷ್ಣನು ಹೊತ್ತ ಉತ್ತರೀಯ ಸರಿಮಾಡಿಕೊಂಡು ಸಭೆಯತ್ತ ಹೊರಳಿದ. ಇಡೀ ಸಭೆಯು ಕೃಷ್ಣನ ಆಕಸ್ಮಿಕವಾದ ಆಗಮನದಿಂದ ಹಾಗೂ ಆತನ ಮಾತುಗಳಿಂದ ತಲ್ಲಣಿಸಿ ಹೋಗಿತ್ತು. ಆತನು ದ್ರೌಪದಿಯನ್ನು ಬಿಟ್ಟು ಸಭೆಯ ಜನರನ್ನು ಅವಲೋಕಿಸಿದ. ನಂತರ ದ್ಯೂತಪಟದತ್ತ ಹೆಜ್ಜೆಯನ್ನಿಡತೊಡಗಿದ. ಸ್ತಬ್ಧವಾದ ಆ ಸಭೆಯಲ್ಲಿ ಕೇವಲ ಅವನ ಪಾದಗಳ ಸಪ್ಪಳವು ಮಾತ್ರ ಕೇಳಬರುತ್ತಿತ್ತು. ಆತನ ಶಬ್ದಗಳು ಸಭೆಯನ್ನು ಒಡಿದೆಬ್ಬಿಸಿದವು.

"ಕೌರವಶ್ರೇಷ್ಠರೇ! ಆಮಂತ್ರಣವಿಲ್ಲದೆ ನಾನು ಬಂದಿರುವೆನೆಂದು ವಿಚಲಿತರಾಗಬೇಡಿರಿ. ನೀವು ಮಾಡಿದ ಯಜ್ಞದ ಮುಂದೆ ಪಾಂಡವರಿಂದ

ನಿರ್ಮಿತವಾದ ಮಯಸಭೆಯನ್ನೂ ಸಹ ಮೀರಿ ನಿಂತ ನಿಮ್ಮ ಈ ಸಂಪದ್ಯುಕ್ತ ವಾದ ದ್ಯೂತ ಗೃಹವನ್ನು ನೋಡುವುದಕ್ಕಾಗಿಯೇ ನಾನು ಬಂದಿದ್ದೇನೆ. ನಿಮ್ಮ ಈ ಸುವರ್ಣಾಸನಗಳು, ರತ್ನಖಚಿತವಾದ ತೋರಣಗಳು ಇವುಗಳನ್ನೆಲ್ಲ ನೋಡಿದಾಗ ಸಾಕ್ಷಾತ್ ಗಂಧರ್ವನಗರಿಯು ನೆನಪು ಬರುವಂತಾಗಿದೆ. ನಿಮ್ಮ ಆನಂದದಲ್ಲಿ ಭಾಗಿಯಾಗಬೇಕೆಂಬ ಆಪೇಕ್ಷೆಯಿಂದಲೇ ಇಲ್ಲಿಯವರೆಗೆ ಧಾವಿಸಿ ಬಂಧಿದ್ದೇನೆ."

ಕೃಷ್ಣನು ಸಭೆಯ ಮಧ್ಯಭಾಗಕ್ಕೆ ಬಂದು ತಲುಪಿದ್ದ. ಆತನು ಆ ಸಭೆಯ ಪ್ರತಿಯೊಂದು ಭಾಗವನ್ನೂ ಒಂದು ಸಲ ನೋಡಿದ.

"ಸಜ್ಜನರೇ ! ಈ ಸಭೆ ಅಲೌಕಿಕವಾದುದು. ಕಣ್ಣು ಕುರುಡಿದ್ದರೂ ಯಾವ ಜ್ಞಾನಚಕ್ಷುಗಳು ಎಂದೂ ವಿಶ್ರಾಂತಿಯನ್ನಪೇಕ್ಷಿಸಲಿಲ್ಲವೋ ಅಂಥ ಕುರುಶ್ರೇಷ್ಠ ಸಾಮ್ರಾಟ ಧೃತರಾಷ್ಟ್ರ ಮಹಾರಾಜರು ಈ ಸಭೆಯಲ್ಲಿ ಸಿಂಹಾಸನಾರೂಢರಾಗಿದ್ದಾರೆ. ತನ್ನ ತ್ಯಾಗದಿಂದ ಪರಮೋಚ್ಚ ಪತಿನಿಷ್ಠ ಪರಾಯಣೆ ಎಂದು ಕರೆಸಿಕೊಂಡ ಗಾಂಧಾರಿಯ ಸುಪುತ್ರರು ಇಲ್ಲಿ ಸಭಾ ಭೂಷಿತರಾಗಿದ್ದಾರೆ. ಈ ಸಭೆ ದ್ರೋಣಾಚಾರ್ಯ, ಕೃಪಾಚಾರ್ಯರಂಥ ಜ್ಞಾನಯೋಗಿಗಳಿಂದ ಸಿದ್ಧಿಪಡೆದಿದೆ. ತನ್ನ ಪ್ರತಿಜ್ಞೆಗಾಗಿ ಹಾಗೂ ಕೊಟ್ಟ ಮಾತಿಗಾಗಿ ಯಾರು ಕುರು ರಾಜ್ಯದ ಮೇಲಿನ ತಮ್ಮ ಹಕ್ಕನ್ನು ಬಿಟ್ಟಿರು ವರೋ ಅಂಥ ಮಹಾನುಭಾವರಾದ ಪಿತಾಮಹ ಭೀಷ್ಮರ ಬರಿದಾದ ಆಸನವು ಅವರ ತ್ಯಾಗದ ಪ್ರತೀಕವೆಂದೆನಿಸಿದೆ. ಕೃತಹಸ್ತರು, ಅತಿದೇವಿ ಮೊದಲಾದ ಹೆಸರುಗಳಿಂದ ಖ್ಯಾತರಾದ ದ್ಯೂತ ನಿಪುಣ ಶಕುನಿ ಈ ದ್ಯೂತದಲ್ಲಿ ಸಾಕ್ಷಾ ತ್ತಾಗಿ ತೋರಣ ಭಾಗದಲ್ಲಿದ್ದಾರೆ. ಪ್ರತಿಕಾಮಿ ದುಶ್ಶಾಸನನಂಥ ಕಠೋರ ಕರ್ತವ್ಯದ ಆಜ್ಞಾಪಾಲಕರು ಕಾರ್ಯಸಿದ್ಧಿಗಾಗಿ ಸಮರ್ಥರಾಗಿದ್ದಾರೆ. ಯಾರ ಪರಾಕ್ರಮದ ತುಲನೆಯನ್ನು ಸಾಕ್ಷಾತ್ ಸೂರ್ಯದೇವನಿಗೆ ಹೋಲಿಸ ಲಾಗುವುದೋ ಅಂಥ ವೀರ ದುರ್ಯೋಧನನ ಸಭೆ ಇದು. ದೇವನ ಬಗ್ಗೆ ಅಭಿಮಾನವು ಕಡಿಮೆಯಾಗಬಹುದಾದ ರೀತಿಯಲ್ಲಿ ದಾತೃತ್ವದಿಂದ ಯಾರು ಮೂರು ಲೋಕದಲ್ಲಿಯೂ ಕೀರ್ತಿಯನ್ನು ಸಂಪಾದಿಸಿರುವರೋ ಅಂಥ ಮಹಾರಥಿ ಕರ್ಣನಂಥವರೂ ಇಲ್ಲಿದ್ದಾರೆ. ಅನೇಕ ಕ್ಷಾತ್ರವೀರರೂ ಇಲ್ಲಿ ದ್ದಾರೆ. ತೇಜಸ್ಸಿನಿಂದ ಈ ಸಭೆ ಪ್ರಕಾಶಮಾನವಾಗಿದೆ. ಈ ಸಭೆಯಲ್ಲಿ

ವಿದುರನು ಉಪಸ್ಥಿತನಾಗುವುದರಿಂದ ವಿವೇಕವೇ ಸಾಕ್ಷಾತ್ಕಾರವನು ತಾಳಿದೆ. ಐದು ನದಿಗಳ ಉದಕದಿಂದ ಯಾವ ಶುದ್ಧ ಪುಣ್ಯವು ಪ್ರಾಪ್ತವಾಗುವುದಿಲ್ಲವೋ ಅಂಥ ಪುಣ್ಯವು ಈ ಸಭೆಯ ದರ್ಶನ ಮಾತ್ರದಿಂದ ಲಭಿಸುತ್ತದೆ. ಇದು ಭಯಹಾರಿಣಿಯಾದ ಪುಣ್ಯರ ಸಭೆಯಾಗಿದೆ. ಈ ಸಭೆಯ ದರ್ಶನ ಮಾತ್ರದಿಂದ ನಾನು ಧನ್ಯನಾಗಿದ್ದೇನೆ.

"ಪಾಂಡವರು ಇಂದ್ರಪ್ರಸ್ಥದಲ್ಲಿ ರಾಜಸೂಯ ಯಾಗವನ್ನು ಮಾಡಿದರು, ಅವರು ತಮ್ಮ ಪರಾಕ್ರಮದಿಂದ ಹಾಗೂ ದಿಗ್ವಿಜಯಗಳಿಂದ ಆ ಯಜ್ಞವನ್ನು ಪೂರ್ಣಗೊಳಿಸಿದರು. ಆ ಮಹಾ ಯಜ್ಞದಲ್ಲಿ ವೀರ ದುರ್ಯೋಧನ, ಮಹಾರಥಿ ಕರ್ಣ, ಶಕುನಿ ಮಹಾರಾಜರಂಥ ಅನೇಕ ಕೌರವ ಶ್ರೇಷ್ಠರು ಉಪಸ್ಥಿತರಿದ್ದರು. ಆ ಮಹಾಯಜ್ಞ ಹಾಗೂ ಅದಕ್ಕಾಗಿ ಏರ್ಪಡಿಸಿದ ಮಹಾದಾನ, ಮನರಂಜನೆಗಾಗಿ ನಿರ್ಮಿಸಿದ ಮಯಸಭೆಯನ್ನು ನೋಡಿ ಎಲ್ಲರೂ ಸಂತೋಷಪಟ್ಟರು, ಆದರೆ ನೀವು ಮಾತ್ರ ಅಸೂಯೆಪಟ್ಟು ಬಂದಿರಿ. ಈ ಲಕ್ಷಣವು ನಿಮ್ಮ ಬೆಳೆಯುವ ಪರಾಕ್ರಮದ ಭಾವಿ ಉತ್ಕರ್ಷೆಯೇ ಆಗಿದೆ. ಅತೃಪ್ತಾತ್ಮರು ಎಂದೂ ದಿಗ್ವಿಜಯಿಗಳಾಗುವುದಿಲ್ಲ."

ಸುಮ್ಮನಿರದ ದುಶ್ಶಾಸನನು ಮಧ್ಯದಲ್ಲಿಯೇ ಮಾತನಾಡಿದ.

"ಸತ್ಯ ! ತುಂಬ ಸತ್ಯವಾದುದನ್ನೇ ಮಾತನಾಡಿದಿರಿ."

ಸಭೆಯಲ್ಲಿ ಆತನ ಮಾತಿಗೆ ಯಾರೂ ಬೆಂಬಲವನ್ನೀಯಲಿಲ್ಲ. ಆಗ ಆತನಿಗೆ ತಾನೆಲ್ಲಿಯೋ ತಪ್ಪಿದನೆಂದು ಭಾಸವಾಯಿತು. ಕೃಷ್ಣನು ಆತನನ್ನು ಕಣ್ಣೆತ್ತಿಯೂ ಸಹ ನೋಡಲಿಲ್ಲ. ತನ್ನ ಮಾತನ್ನು ಆತ ಮುಂದುವರಿಸುತ್ತಲಿದ್ದ.

"ಪಾಂಡವರು ರಾಜಸೂಯ ಯಾಗ ಮಾಡಿದ ನಂತರ ಸ್ವತಃ ಅಭಿಷೇಕ ಮಾಡಿಕೊಂಡಿರಬಹುದು. ಆದರೆ ನೀವು ಮಾತ್ರ ಜನ್ಮಸಿದ್ಧವಾಗಿ ಬಂದ ಸಾಮ್ರಾಟ್‌ಪದವಿಯನ್ನು ಅನುಭವಿಸುತ್ತಿದ್ದೀರಿ. ಧೃತರಾಷ್ಟ್ರ ಮಹಾರಾಜರಿಗೆ ಅದನ್ನು ಸಿದ್ಧಪಡಿಸಿಕೊಳ್ಳಲು ಬೇರೆ ಯಜ್ಞ ಮಾಡಬೇಕಾದ ಅಗತ್ಯವಿರಲಿಲ್ಲ. ನಿಮ್ಮ ಐಶ್ವರ್ಯ, ಅಧಿಕಾರ, ಇವು ಜಗತ್ಪ್ರಸಿದ್ಧವಾದವುಗಳು. ಹೀಗಿರುವಾಗ ಈ ಸಭೆಯನ್ನು ಕೂಡಿಸುವ ಅಗತ್ಯವೇ ಇರಲಿಲ್ಲ.

"ನೀವು ಯಜ್ಞ ಮಾಡಿದುದು ಒಳ್ಳೆಯದೇ, ಯಜ್ಞದಿಂದ ಪುಣ್ಯಸಂಚಯವಾಗುತ್ತದೆ ಅದಕ್ಕಾಗಿಯೇ ಯಜ್ಞ ಮಾಡಿದಿರಲ್ಲವೆ ? ನೀವು

ಸಾಮ್ರಾಟರಿದ್ದೀರಿ, ಸರ್ವಾಧಿಕಾರಿಗಳಿದ್ದೀರಿ. ಇದನ್ನು ತಿಳಿಯಪಡಿಸುವದ ಕ್ಕಾಗಿಯೇ ಈ ಯಜ್ಞವನ್ನು ಮಾಡಿರುವಿರಲ್ಲವೆ ? ಹಾಗಿದ್ದಲ್ಲಿ ಆ ಯಜ್ಞ ಕುಂಡಗಳು ಇನ್ನೂ ಶಾಂತವಾಗುವ ಪೂರ್ವದಲ್ಲಿಯೇ ಈ ಅಬಲೆಯನ್ನು ತುಂಬಿದ ಸಭೆಯಲ್ಲಿ ವಿವಸ್ತ್ರಳನ್ನಾಗಿ ಮಾಡುವ ಧೈರ್ಯವು ನಿಮಗೆ ಹೇಗೆ ಬಂದಿತು ? ಸರ್ವನಾಶ ಪಡಿಸುವಂಥ ಮೋಹ ಬರಲು ಕಾರಣವೇನು ?”

ಮುಖ ಕೆಳಗೆ ಹಾಕಿಕೊಂಡಿದ್ದ ದುರ್ಯೋಧನನು ತಲೆಯೆತ್ತಿ ಕೃಷ್ಣನನ್ನು ನೋಡಿದ. ಆದರೆ ಆ ದೃಷ್ಟಿಯ ದಾವಾನಲವನ್ನು ಅವನಿಂದ ಸಹಿಸಿಕೊಳ್ಳುವದಾಗಲಿಲ್ಲ. ಅತಿ ತುತ್ಸತೆಯಿಂದ ಆತನನ್ನು ನೋಡಿದ ಕೃಷ್ಣನು,

“ಪ್ರಜಾಪಾಲನೆಯು ಸಾಮ್ರಾಟ ಪದದ ಮೊದಲು ಧರ್ಮ. ಸಾಮ್ರಾಟರಿಗೆ ಪ್ರಜೆಗಳು ಮಕ್ಕಳಿದ್ದಂತೆ, ನಿಮ್ಮ ಮನದಲ್ಲಿ ಪಾಂಡವರ ಬಗ್ಗೆ ವೈರ ಭಾವವಿರಬಹುದು. ಆದರೆ ಯಾವ ಗಳಿಗೆಯಲ್ಲಿ ಅವರು ದ್ಯೂತದಲ್ಲಿ ಸೋತು ಹೋಗಿ, ನಿಮ್ಮ ದಾಸರಾದರೊ ಆಗ ಅವರು ನಿಮ್ಮ ಪ್ರಜಾಕೋಟಿಗೆ ಸೇರಿದವರಾಗಲಿಲ್ಲವೆ ? ಈ ದ್ರೌಪದಿಯು ದಾಸಿಯಷ್ಟೇ ಅಲ್ಲ, ಅವಳೂ ನಿಮ್ಮ ಪ್ರಜೆ ಎಂಬ ಭಾವನೆ ನಿಮಗಾರಿಗೂ ಉಂಟಾಗಲಿಲ್ಲವೇ ಯಾವ ಸಾಮ್ರಾಟರು ತಮ್ಮ ಪ್ರಜೆಗಳನ್ನು ನಗ್ನ ಮಾಡಲೆತ್ನಿಸುವರೊ? ಅವರೆಂಥ ಸಾಮ್ರಾಟರು ?

“ವೀರರೇ, ಪುಣ್ಯ ಪ್ರಾಪ್ತಿಗಾಗಿ ಯಜ್ಞ ಮಾಡುವರೆಂಬುದನ್ನು ನಾನು ಕೇಳಿದ್ದೇನೆ. ಯಜ್ಞವನ್ನು ನಾಶಗೊಳಿಸಲು ದುಷ್ಟರಾದ ರಾಕ್ಷಸರು ಆಕಾಶ ದಿಂದಿಳಿದು ಬಂದು ಯಜ್ಞ ವೇದಿಕೆಯನ್ನು ಕೆಡಿಸುವರೆಂದು ಕೇಳಿದ್ದೇನೆ. ಆದರೆ ಇಂದು ಅದೆಲ್ಲ ಸುಳ್ಳು ಎಂದೆನಿಸತೊಡಗಿದೆ. ಯಜ್ಞ ಕಾಲದಲ್ಲಿ ಮಂತ್ರೋ ಚ್ಚಾರಣೆಗಳೊಂದಿಗೆ ಯಾವ ತುಪ್ಪವನ್ನು ಧಾರಾಕಾರವಾಗಿ ಬಿಡುತ್ತಾರೆಯೋ, ಸುಗಂಧ ದ್ರವ್ಯಗಳೊಂದಿಗೆ ಚಂದನಾದಿ ಕಾಷ್ಟಗಳು ಅಗ್ನಿರೂಪವನ್ನು ತಾಳುತ್ತ ವೆಯೋ, ಅಂಥ ಯಜ್ಞದ ಹೊಗೆ ಆಕಾಶವನ್ನು ಮುಟ್ಟುವುದರೊಳಗಾಗಿಯೇ ಅಹಂಕಾರದ ರಾಕ್ಷಸರು ಉದ್ಭವಿಸುತ್ತಾರೆ. ವಾಸನೆಯ ಆಸಕ್ತಿ, ಐಶ್ವರ್ಯದ ಮದ, ಹಾಗೂ ಅಧಿಕಾರದ ದರ್ಪ ಇವೇ ಮೊದಲಾದುವುಗಳಿಂದ ನಮ್ಮ ಜ್ಞಾನ ಯಜ್ಞಗಳು ನಾಶವಾಗಿವೆ. ಈ ಮಾತಿನ ಸತ್ಯತೆಯನ್ನು ಇಲ್ಲಿ ಕುಳಿ

ತಿರುವ ದ್ರೋಣಾಚಾರ್ಯ, ಕೃಪಾಚಾರ್ಯರಂಥವರು ನಿಮಗೆ ತಿಳಿಸಿ ಹೇಳ ಬೇಕಾಗಿತ್ತು. ಯಾರ ವಿವೇಕವು ದಾಸ್ಯತ್ವದಿಂದ ಬೆಂದುಹೋಗಿದೆಯೋ ಅಂಥವರ ನಾಲಿಗೆಯಿಂದ ಯಜ್ಞ ಮಂತ್ರಗಳಾದರೂ ಹೇಗೆ ಉಚ್ಚರಿಸಲ್ಪಡುತ್ತವೆ?

"ಯಜ್ಞ ಮಾಡುವ ಮುನ್ನ ಯಜ್ಞದ ಉಪಯೋಗವನ್ನಾದರೂ ಮನಸ್ಸಿನಲ್ಲಿ ತರಬಾರದಾಗಿತ್ತೆ? ದಿಗ್ವಿಜಯಕ್ಕಾಗಿ ಹೊರಬಿದ್ದ ವೀರರಲ್ಲಿ ಯಾವಾಗಲೂ ಅಸೂಯೆ, ಈರ್ಷ್ಯೆಗಳೇ ಬೆಳಗುತ್ತಿರುತ್ತವೆ. ಹೊಸ ಕ್ಷೇತ್ರಗಳನ್ನು ಪಾದಾಕ್ರಾಂತ ಮಾಡಿಕೊಳ್ಳುವ ಸ್ವಾಮಿತ್ವದ ಭಾವನೆ ಅವರಲ್ಲಿ ಬಲವಾಗಿರುತ್ತದೆ. ಶರಣಾಗತರಾದ ನರೇಂದ್ರರ ದರ್ಶನ ಮಾತ್ರದಿಂದ ಅಹಂಕಾರವು ಇಮ್ಮಡಿಸುತ್ತದೆ. ರಣವಾದ್ಯಗಳ ಸಪ್ಪಳ ಕೇಳಿದಾಗಲಂತೂ ಕಿವಿಗಳು ತುಂಬಿ ಬಂದಂತೆನಿಸುತ್ತವೆ. ಶತ್ರುಗಳು ಭೂಮಿಗುರುಳಿದುದನ್ನು ಕಂಡಾಗ ಯಶದ ಮತ್ತು ಪಾತ್ತಪ್ಪು ನೆತ್ತಿಗೇರುತ್ತದೆ. ಇಂಥ ದಿಗ್ವಿಜಯವನ್ನು ಸಾಧಿಸಿಕೊಂಡು ಬಂದವರು ಬೇರೊಂದು ಯಜ್ಞವನ್ನು ಮಾಡುತ್ತಾರೆ.

"ಯಜ್ಞ ಮಾಡುವವರಲ್ಲಿ ಸಾತ್ವಿಕತನದ ಅಧಿಕಾರವಿರಬೇಕಾಗುತ್ತದೆ. ನ್ಯಾಯ, ನೀತಿ, ದಾತೃತ್ವ, ವಿವೇಕ ಹಾಗೂ ಧರ್ಮ ಇವುಗಳಿಂದ ಪರಿಪೂರ್ಣರಾದಂಥವರು ಮಾತ್ರ ಯಜ್ಞ ಮಾಡುವ ಸಾಹಸವನ್ನು ಕೈಕೊಳ್ಳುತ್ತಾರೆ. ನೀವು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಹಾಗೂ ಅಹಂಕಾರಗಳಿಂದ ಲಿಪ್ತರಾಗಿದ್ದೀರಿ. ಆದುದರಿಂದಲೇ ಓರ್ವ ರಜಸ್ವಲೆಯಾದ ಹೆಣ್ಣುಗಳನ್ನು ರಾಜಸಭೆಗೆ ತಂದು ಆವಳ ಜೀವನದ ಮೇಲೆ ಹುಡುಗಾಟವಾಡುತ್ತಿದ್ದೀರಿ. ಯಾವ ನರೇಂದ್ರರು ಯುಧಿಷ್ಠಿರನ ತಲೆಯ ಮೇಲೆ ರಾಜಸೂಯ ಯಾಗದಲ್ಲಿ ಛತ್ರ ಚಾಮರಗಳನ್ನು ಹಿಡಿದುಕೊಂಡು ನಿಂತುದನ್ನು ನೋಡಿದೆವೋ ಅದೇ ಯುಧಿಷ್ಠಿರನು ಇಂದು ಕುತಂತ್ರದಿಂದ ಕೂಡಿದ ಈ ದ್ಯೂತದಲ್ಲಿ ಸೋತನೆಂದು ತಿಳಿದು ಸಾಕ್ಷಾತ್ ಧರ್ಮಸ್ವರೂಪನೆನಿಸಿದ ಆತನ ಮೈ ಮೇಲಿನ ಬಟ್ಟೆಗಳನ್ನೂ ಸಹ ಕಳಚಿಕೊಳ್ಳುವಂತಹ ನೀಚರು ನೀವಾಗಿದ್ದೀರಿ. ಇಂಥ ನಿಮಗೆ ಯಾರು ಸಾಮ್ರಾಟರೆಂದು ಕರೆಯುತ್ತಾರೆ? ಮನುಷ್ಯತ್ವಕ್ಕೆ ಕಲಂಕವನ್ನು ತರುವ ಈ ಕೃತಿಯಿಂದ

ನೀವು ರಾಜ್ಯಾಧಿಕಾರಕ್ಕೆ ಅನರ್ಹರಾಗಿದ್ದೀರಿ ಎಂಬುದನ್ನು ಸಿದ್ಧಪಡಿಸಿ ತೋರಿಸಿದಿರಿ.

"ಮನೋರಂಜನೆಗಾಗಿ ಪಾಂಡವರು ಕಟ್ಟಿಸಿದ ಮಯಸಭೆಯು ಕೇವಲ ವಿನೋದ ಹಾಗೂ ವಿಹಾರಗಳಿಗಾಗಿ ಬಳಸಲಾಗಿತ್ತು. ನಿಜವಾಗಿಯೂ ಅದೊಂದು ಅಲೌಕಿಕವಾದ ಕೃತಿ ಎಂದೆನಿಸುವಂತಿತ್ತು. ಮಾನವನ ಕಣ್ಣು ಕಿವಿಗಳನ್ನು ಹೇಗೆ ಮೋಸಗೊಳಿಸಲು ಸಾಧ್ಯ ಎಂಬುದನ್ನು ಅದು ಎತ್ತಿ ತೋರಿಸುತ್ತಿತ್ತು. ಆದರೆ ಈ ನಿಮ್ಮ ತೋರಣ ಸ್ಫಟಿಕವು ವಿಶ್ವಾಸಘಾತದ ಮೂರ್ತಿವೆತ್ತ ಮಂದಿರವೆನಿಸಿದೆ. ಈ ದ್ಯೂತಗೃಹಕ್ಕೆ ನರಕದಲ್ಲಿಯೂ ಸ್ಥಾನ ದೊರೆಯಲಾರದು. ಓರ್ವ ರಜಸ್ವಲೆಯ ರಕ್ತಲಾಂಛನ ಸ್ಪರ್ಶದಿಂದ ನಿಮ್ಮ ಈ ತೋರಣ ಸ್ಫಟಿಕವು ಸಾಕ್ಷಾತ್ ರೌರವ ನರಕವೆಂದು ಗುರುತಿಸುವಂತಾಗಿದೆ. ನಿಮ್ಮ ಕ್ಷುದ್ರವಾದ, ಹೀನವಾದ, ದುರ್ಬಲವಾದ ಮನೋವಿಕಾರಗಳ ತೋರಣವನ್ನು ನಿಮ್ಮ ಕೈಯಿಂದಲೇ ಆ ಯಜ್ಞ ವೇದಿಕೆಗೆ ಸಮರ್ಪಿಸಲು ಹೊರಟ ನಿಮಗೆ ನಾಚಿಕೆಯಾದರೂ ಬರುವುದಿಲ್ಲವೆ ?"

ದುರ್ಯೋಧನನು ಬಹು ಸಂತಾಪದಿಂದ ಕೃಷ್ಣನನ್ನು ನೋಡಿದ. ಅದನ್ನು ಕಡೆಗಣಿಸಿದ ಕೃಷ್ಣನು ತನ್ನ ವಾಕ್ತಾಡನವನ್ನು ಮುಂದುವರಿಸಿದ.

"ನನ್ನ ಮಾತುಗಳಿಂದ ಸಂತಾಪವಾಗುತ್ತಿದೆಯಲ್ಲವೆ ?" ಕುಳಿತ ಪಾಂಡವರತ್ತ ಕೈ ಮಾಡಿ ತೋರಿಸಿ, "ಧರ್ಮಬುದ್ಧಿಯ ಈ ಯುಧಿಷ್ಠಿರ ಪುರುಷೋತ್ತಮನಾದ ಪಾರ್ಥ, ಬಲಶಾಲಿಯಾದ ಭೀಮ, ಇವರು ತಮಗೆ ಬಂದೊದಗಿದ ಅಪಮಾನವನ್ನು ಸಹಿಸುತ್ತ ಈ ಸಭೆಯಲ್ಲಿ ಕುಳಿತಿರುವುದು ನಿಮ್ಮ ವಿಜಯದ ಪ್ರತೀಕವೇಂದೇನೂ ಅಲ್ಲ. ಅದು ಅವರು ರಾಜಸೂಯ ಯಾಗದಿಂದ ಪಡೆದುಕೊಂಡ ವಿವೇಕದ ಲಕ್ಷಣವೆನಿಸಿದೆ. ಅವರು ನಡೆಸಿಕೊಂಡು ಬರುತ್ತಲಿರುವ ವಿವೇಕದ ಜೀವನಕ್ಕೆ ನೀವು ಕೊಡುತಿರುವ ಆಹ್ವಾನವನ್ನು ಅವರು ಸ್ವೀಕಾರ ಮಾಡುತ್ತಿದ್ದಾರೆ, ಮೂಢರೇ ! ಇದೆಲ್ಲ ನಿಮ್ಮ ಲಕ್ಷಕ್ಕೆ ಏಕೆ ಬರುವದಿಲ್ಲ. ಪಾಂಡವರ ಮೇಲಿನ ಅಸೂಯೆಯಿಂದಲೇ ಈ ಉದ್ಭವಿಸಿದ ನಿಮ್ಮ ಯಜ್ಞ ಹಾಗೂ ಕುಟಿಲತೆಯಿಂದ ನಿರ್ಮಿತವಾದ ನಿಮ್ಮ ಈ ಸಭೆ ಇವುಗಳಿಂದೆಲ್ಲ ನಿಮಗೆ ಎಂದಾದರೂ ಪುಣ್ಯಪ್ರಾಪ್ತಿಯಾಗುವುದುಂಟೆ !"

ಕೃಷ್ಣನು ಮತ್ತೆ ಎರಡು ಹೆಜ್ಜೆ ಮುಂದಿಟ್ಟಾಗ ವಿಜಯೋನ್ಮತ್ತನಾದ ಶಕುನಿಯಿಂದ ಬಿಸಾಡಿದ ದಾಳಗಳು ಈಗ ಅವನ ಕಾಲಡಿಯಲ್ಲಿದ್ದವು ಒಂದು ಕ್ಷಣ ಆ ದಾಳಗಳನ್ನು ಕೃಷ್ಣನು ನೋಡಿದ, ತಕ್ಷಣವೇ ಹುಳದಂತೆ ಕಾಲಿನಿಂದ ಚಿವುಟಿ,

"ಜೂಜು ! ಕ್ಷತ್ರಿಯತ್ವದ ಆಹ್ವಾನವನ್ನೀಯುವುದಕ್ಕಾಗಿಯೇ ನೀವು ಯುಧಿಷ್ಠಿರನಿಗೆ ದ್ಯೂತದ ಆಹ್ವಾನವನ್ನಿತ್ತಿರುವಿರಲ್ಲವೆ ? ನಿಮ್ಮ ಕುತಂತ್ರವೆಲ್ಲ ತಿಳಿದಾಗಲೂ ಸಹ ಆತನು ನಿಮ್ಮ ಆಹ್ವಾನವನ್ನು ಸ್ವೀಕಾರ ಮಾಡಿದ. ಆವನೂ ಅಹಂಕಾರದಿಂದಲೇ ನಿಮ್ಮ ಆಹ್ವಾನವನ್ನೊಪ್ಪಿಕೊಂಡ. ನಿಜವಾದ ಕ್ಷತ್ರಿಯರು ದ್ಯೂತದ ಆಹ್ವಾನವನ್ನು ಎಂದಿಗೂ ನಿರಾಕರಿಸುವುದಿಲ್ಲ, ಈ ಮಾತು ನಿಜ, ಜೂಜು ಕ್ಷತ್ರಿಯರ ಮುಖ್ಯ ಲಕ್ಷಣ. ಆದರೆ ಅದು ಇಂಥ ಪಟಗಳ ಮೇಲೆ ದಾಳಗಳಿಂದಾಡುವ ಜೂಜಲ್ಲ ! ಕ್ಷತ್ರಿಯತ್ವದ ಜೂಜಿನ ದಾಳಗಳು ಆಕಾಶದಲ್ಲಿರುವ ಸೂರ್ಯ, ಚಂದ್ರರಿಂದ ಕೂಡಿದವುಗಳಾಗಿರುತ್ತವೆ ಪೃಥ್ವಿಯೊಂದಿಗೆ ಎಲ್ಲ ಗ್ರಹಗಳನ್ನೂ ಸುತ್ತುವ ಶಕ್ತಿ ಅವುಗಳಲ್ಲಿರುತ್ತದೆ. ವೀರ ನರೇಂದ್ರರು ಕೂಡಿದ ಸ್ವಯಂವರ ಮಂಟಪದಿಂದ ರಾಜಕನ್ಯೆಯನ್ನು ಅಪಹಾರ ಮಾಡಿಕೊಂಡು ಬರುವುದರಲ್ಲಿ, ಅವರ ಜೂಜು ವ್ಯಕ್ತವಾಗುತ್ತದೆ. ಆ ದಾಳವನ್ನು ಗೆದ್ದಲ್ಲಿ ರಾಜಕನ್ಯೆಯು ಮನೆಗೆ ಬರುತ್ತಾಳೆ. ದಾಳವು ಸ್ವಲ್ಪ ತಪ್ಪಾಗಿ ಬಿದ್ದಲ್ಲಿ ರಾಜಕನ್ಯೆಯು ಕೈಜಾರಿ ಹೋಗುತ್ತಾಳೆ. ಅಲೌಕಿಕವಾದ ಇಂಥ ಆಟವನ್ನು ಕ್ಷತ್ರಿಯರಾದವರು ಆಡುತ್ತಾರೆ. ರಣರಂಗವೆಂಬ ಪಟದಲ್ಲಿ ಎದುರು ಸಾಗಿಬರುತ್ತಿರುವ ಬಲಶಾಲಿಯಾದ ಎದುರಾಳಿಯೊಂದಿಗೆ ಕೈಯಲ್ಲಿ ಯಾವ ಆಯುಧವನ್ನೂ ಹಿಡಿಯದೆ, ಜೀವನ್ಮರಣಗಳ ಕವಡೆಗಳನ್ನು ಚೆಲ್ಲುತ್ತ ಮುನ್ನುಗ್ಗುವುದರಿಂದ ಕ್ಷತ್ರಿಯರ ದ್ಯೂತವು ರಂಗಿಗೇರುತ್ತದೆ. ಗೆದ್ದರೆ ಸ್ವರಾಜ್ಯ; ದಾಳಗಳು ಕೈಕೊಟ್ಟರೆ ಸ್ವರ್ಗ ಸುಖವನ್ನು ಅನುಭವಿಸುವ ; ಇಂಥ ಜೂಜನ್ನು ನಿಜವಾದ ಕ್ಷತ್ರಿಯರು ಆಡಬೇಕು. ಇದೆಂಥ ನಿಮ್ಮ ಜೂಜು ಇದೆಂಥ ನಿಮ್ಮ ಸಭೆ !!

"ಅಯ್ಯೋ, ಇದೇನು ರಾಜಸಭೆಯೋ ?"

"ಒಂದು ವೇಳೆ ವಿವಸ್ತ್ರಳಾದವಳು ಕಂಡುಬಂದಲ್ಲಿ ಸವಸ್ತ್ರಳಾಗಿಸುವುದೇ ರಾಜಸಭೆ. ಪತಿತಳಿಗೂ ಪಾವನಳಾಗುವ ಅನುಭವವನ್ನೀಯುವಂತಹ

ಸಭೆಯೇ ರಾಜಸಭೆ. ಅಬಲೆಯನ್ನು ಸಬಲೆಯನ್ನಾಗಿ ಮಾಡುವುದೇ ರಾಜ ಸಭೆ. ಇದೆಂಥ ರಾಜಸಭೆ ? ನ್ಯಾಯವು ಯಾವ ಸ್ಥಳದಲ್ಲಿ ಕುರುಡಾಗಿದೆಯೋ, ಯಾವ ಸ್ಥಳದಲ್ಲಿ ಅಸಕ್ತರ ಮೇಲೆ ಶಕ್ತಿ ಪ್ರಹಾರವಾಗುತ್ತದೆಯೋ, ಅಂಥ ಸ್ಥಳದಲ್ಲಿ ಪರಾಕ್ರಮವೂ ಸಹ ಅಸಹ್ಯವೆನಿಸುತ್ತದೆ. ಧರ್ಮಕ್ಕೆ ಗ್ಲಾನಿ ಯನ್ನುಂಟುಮಾಡುವಂಥ ಕೂಟವನ್ನು ರಾಜಸಭೆಯೆಂದೇಕೆ ಕರೆಯಬೇಕು ? ಎಲ್ಲಿ ವ್ಯಭಿಚಾರವು ನಡೆಯುತ್ತದೆಯೋ ಆ ಸ್ಥಳದಲ್ಲಿ ಪುಣ್ಯಪ್ರಾಪ್ತಿಯಾದರೂ ಹೇಗಾದೀತು ?

"ಪಾಂಡವರಿಗೆ ನೀವು ರಣಾಂಗಣದಲ್ಲಿ ಆಹ್ವಾನವನ್ನಿತ್ತು ಅವರನ್ನು ಗೆದ್ದುಕೊಂಡಿದ್ದಲ್ಲಿ ಅದು ನಿಮ್ಮ ಪರಾಕ್ರಮಕ್ಕೆ ಶೋಭಿಸುತ್ತಿತ್ತು. ಆದರೆ ನೀವು ಜೂಜಿನ ಮಾರ್ಗವನ್ನು ಹಿಡಿದಿರಿ. ಅದು ಕಪಟತನದಿಂದ ತುಂಬಿ ಹೋಗಿದೆ. ಶಕುನಿ ಕೃತಹಸ್ತ, ಅತಿದೇವಿ, ಅವನಿಂದ ಬೇಕಾದಂತೆ ದಾಳ ಗಳನ್ನು ಹಾಕಿಸಿ ಈ ಪಾಂಡವರನ್ನು ಗೆದ್ದಿರಿ. ಹಾಗೂ ಈ ದ್ರೌಪದಿಯನ್ನು ತುಂಬಿದ ರಾಜಸಭೆಗೆ ತಂದು ಮಾನವತ್ವದ ಮರ್ಯಾದೆಯನ್ನೇ ಹಾಳು ಮಾಡಿ ದಿರಿ. ಈ ಶಕುನಿಯ ನೀಚತನದಿಂದ ಗಳಿಸಿದ ವಿಜಯವನ್ನೇ ಮಹಾ ವಿಜಯವೆಂದು ಭಾವಿಸುವಿರಾ ? ಅದರಿಂದ ನಿಮಗೆ ಸಂತೋಷವಾಗು ತ್ತಿದೆಯೇ ? ಹಾಗಿದ್ದರೆ ಅದು ಎಂದಿಗೂ ಕ್ಷತ್ರಿಯ ಧರ್ಮವೆಂದು ಕರೆಸಿ ಕೊಳ್ಳಲಾರದು. ನಿರಾಧಾರಳಾದ ಅಬಲೆಗೆ ನೀವು ಅಭಯವನ್ನಿತ್ತಿದ್ದರೆ ಆಗ ನಿಮ್ಮ ಚಾರಿತ್ರ್ಯಕ್ಕೆ ತೇಜಸ್ಸಿನ ಭೂಷಣವು ಪ್ರಾಪ್ತವಾಗುತ್ತಿತ್ತು. ಆದರೆ ಏಕವಸ್ತ್ರಳಾದವಳನ್ನು ನೀವು ವಿವಸ್ತ್ರಳನ್ನಾಗಿ ಮಾಡಲು ಪ್ರಯತ್ನಿಸಿದಿರಿ, ನಿಮ್ಮ ಹೀನತನವನ್ನು ಪ್ರದರ್ಶಿಸಿದಿರಿ. ಇಲ್ಲಿ ನೀವು ಖಂಡಿತವಾಗಿಯೂ ಸಾಮ್ರಾಟರಲ್ಲ........ ರಾಜತನದ ಲಕ್ಷಣಗಳೇ ನಿಮ್ಮಲ್ಲಿಲ್ಲ. ಅಷ್ಟೇ ಅಲ್ಲ, ಸಾಮಾನ್ಯ ಮಾನವರೆಂದು ಬಾಳುವ ಯೋಗ್ಯತೆಯೂ ಕೂಡ ನಿಮ್ಮಲ್ಲಿಲ್ಲ. ಈ ಮಾತನ್ನು ನಿಮ್ಮ ದ್ಯೂತ ಹಾಗೂ ಈ ರಾಜಸಭೆಯೇ ಸಿದ್ಧಮಾಡಿ ತೋರಿಸಿದೆ. ಈ ಪಾತಕವನ್ನು ನೀವು ಹೇಗೆ ತೊಳೆದುಕೊಳ್ಳುವಿರೆಂಬುದನ್ನು ಆ ಪರಮೇಶ್ವರನೂ ಹೇಳಲಾರ."

ಕೃಷ್ಣನು ಸ್ವಲ್ಪ ತಡೆದು ತನ್ನ ಬೆರಳನ್ನು ಮೇಲೆತ್ತಿ ಹೇಳಿದ,

"ಸ್ವಂತದ ಸ್ತುತಿಪಾಠ ಮಾಡಿಕೊಳ್ಳುವ ಸ್ವಭಾವವು ನನ್ನದಲ್ಲ. ಅದ

ರಲ್ಲಿಯೂ ಇಂಥ ಸಭೆಯಲ್ಲಿ ಪರಿಚಯ ಮಾಡಿಕೊಳ್ಳುವ ಅಗತ್ಯವೇನಿದೆ? ಸಾಮ್ರಾಟನೆಂದು ಕರೆಸಿಕೊಳ್ಳುತ್ತಿದ್ದ ಅನ್ಯಾಯಿಯಾದ ಕಂಸನನ್ನು ಯಾರು ಕೊಂದರೋ ಆ ಕೃಷ್ಣನೇ ನಾನು. ಬಲಾಢ್ಯನಾದ ಜರಾಸಂಧನನ್ನು ವಧಿಸುವಂತೆ ಮಾಡಿದವನೇ ನಾನು. ರಾಜಸೂಯ ಯಜ್ಞದಲ್ಲಿ ಉನ್ಮತ್ತನಾಗಿ ಮಾತನಾಡಿದ ಶಿಶುಪಾಲನನ್ನು ಎಲ್ಲರೂ ನೋಡುವಂತೆ ತುಂಡರಿಸಿದವನೇ ನಾನು. ನನ್ನ ಸಾಮರ್ಥ್ಯವನ್ನು ವ್ಯಕ್ತಪಡಿಸಬೇಕೆಂದು ನಿರ್ಧರಿಸಿದಲ್ಲಿ ದುಶ್ಯಾಸನನಂಥ ಅನೇಕ ವಿವೇಕ ಶೂನ್ಯರನ್ನಾಗಲಿ ಅಥವಾ ಚತುರಂಗ ಸೇನಾ ಬಲವನ್ನಾಗಲಿ ನಾನು ಲೆಕ್ಕಿಸಲಾರೆ. ಇಂದು ಈ ರಾಜಸಭೆಯಲ್ಲಿ ದ್ರೌಪದಿಯು ನಿಂತಿದ್ದಾಳೆ, ಅವಳು ನನ್ನ ತಂಗಿ. ಅವಳ ಮೇಲೆ ದೃಷ್ಟಿ ದಾಯಿಸಬೇಡಿರಿ. ಅಂಥ ದಾರ್ಷ್ಟ್ಯವನ್ನು ಯಾರಾದರೂ ತೋರಿಸಿದಲ್ಲಿ ಅನಂತರ ಘಟಿಸಬಹುದಾದ ಅನಾಹುತಗಳ ಬಗ್ಗೆ ನನ್ನನ್ನು ಗುರಿಪಡಿಸಬೇಡಿರಿ.

"ಎಲೈ ಕೌರವ ಅಂಧಪುತ್ರರೇ! ನಿಮ್ಮ ಸಭೆಗೆ ಬಂದು ನಾನು ನನ್ನ ಶರೀರ ಹಾಗೂ ವಾಣಿಯನ್ನು ಅಪವಿತ್ರಗೊಳಿಸಿಕೊಂಡಂತೆನಿಸಿದೆ. ನಿಮ್ಮ ಅವನತಿಯ ಸೀಮಾ ರೇಖೆಯು ಎಲ್ಲಿಗೆ ಮುಟ್ಟುತ್ತದೆಂಬುದನ್ನು ನೋಡಲು ತುಂಬ ಉತ್ಸುಕನಾಗಿದ್ದೇನೆ. ನಿಮ್ಮ ಪುಣ್ಯಪ್ರದವಾದ ಕ್ರಿಯೆಗಳಿಗೆಲ್ಲ ಈ ಸಭೆಯೇ ಸಾಕ್ಷಿಯಾಗುತ್ತದೆ. ಬಂಧು ಬಲ ದೊರೆತ ನಂತರ ನಿರ್ಭಯಳಾದ ನನ್ನ ಈ ಸೋದರಿಯು ನಿಮ್ಮ ನಿರ್ಣಯದ ಮಾರ್ಗ ನಿರೀಕ್ಷಿಸುವದರಲ್ಲಿದ್ದಾಳೆ."

ಕೃಷ್ಣನ ಮಾತುಗಳು ನಿಂತಾಗ ಸಭೆಯಲ್ಲಿ ಶಾಂತತೆಯು ಪಸರಿಸಿತು. ಕೃಷ್ಣನಿಗೆ ಆಸನವನ್ನೀಯಬೇಕೆಂಬ ಪ್ರಜ್ಞೆಯೂ ಸಹ ಯಾರಲ್ಲಿಯೂ ಇರಲಿಲ್ಲ. ಆ ಶಾಂತತೆಯನ್ನು ಸರಿಸಲೆತ್ನಿಸಿದವನು ವಿದುರ. ಆತನು ತನ್ನ ಆಸನದಿಂದ ಮೇಲೆದ್ದು ನಿಂತಾಗ ಪಶ್ಚಾತ್ತಾಪದಿಂದ ಅವನ ಮುಖವು ಬಾಡಿದಂತಾಗಿತ್ತು. ಅಶ್ರು ಬಿಂದುಗಳು ಧಾರಾಕಾರವಾಗಿ ಸುರಿಯುತ್ತಲಿದ್ದವು. ಆ ಸ್ಥಿತಿಯಲ್ಲಿಯೇ ಮುಂದೆ ಬಂದ ವಿದುರನು ಕೃಷ್ಣನಿಗೆ ತನ್ನ ಆಸನವನ್ನಿತ್ತ ಬೇರೆ ಏನನ್ನೂ ಹೇಳದೆ ಕೃಷ್ಣನು ವಿದುರನ ಆಸನವನ್ನು ಸ್ವೀಕರಿಸಿದ.

## 23

ಮಹಾ ತೇಜಸ್ವಿಯಾದ ಕೃಷ್ಣನ ಮಾತುಗಳು ಸಭೆಯನ್ನು ಬಡಿದೆಬ್ಬಿಸುವಂತೆ ಮಾಡಿದವು. ಕರ್ಣ ಹಾಗೂ ದುರ್ಯೋಧನರಿಗೆ ತಮ್ಮ ಮುಖವನ್ನು ಮೇಲೆತ್ತಿ ನೋಡುವುದೂ ಸಹ ಅಸಾಧ್ಯವಾಗಿತ್ತು. ಧೃತರಾಷ್ಟ್ರನ ಸ್ಥಿತಿಯೂ ಸಹ ಶೋಚನೀಯವಾಗಿತ್ತು. ತುಂಬಿದ ಸಭೆಯಲ್ಲಿ ಕೃಷ್ಣನಿಂದಾದ ಅಪಹಾಸ್ಯ, ತೇಜೋಭಂಗಗಳಿಂದ ಕೌರವ ಕುಲವನ್ನು ಹೇಗೆ ಉಳಿಸಬೇಕು ಎಂಬುದೇ ಅವರಿಗೆ ತಿಳಿಯದಾಗಿತ್ತು. ಮುಂದಾಗುವ ಚಿತ್ರವನ್ನೆಲ್ಲ ಕೃಷ್ಣನು ಸಷ್ಟವಾಗಿ ಎಲ್ಲರಿಗೂ ತಿಳಿಯುವಂತೆ ಚಿತ್ರಿಸಿದ್ದ. ಅದನ್ನು ಚಿಂತಿಸಿದಂತೆಲ್ಲ ಮನಸ್ಸು ಕಂಪಿಸಲಾರಂಭಿಸಿತ್ತು. ರಾಜಸಭೆಯ ಉತ್ಸಾಹವಂತೂ ಯಾವಾಗಲೋ ಹಾರಿಹೋಗಿತ್ತು. ರಾಜರುಗಳೆಲ್ಲ ಯಾವಾಗ ಇಲ್ಲಿಂದ ಪಾರಾಗಿ ಹೊರಬೀಳುತ್ತೇವೆಯೋ ಎಂದು ಯೋಚಿಸುತ್ತಿದ್ದರು. ಒಬ್ಬರು ಇನ್ನೊಬ್ಬರನ್ನು ನೋಡುತ್ತಿದ್ದರೆ ವಿನಃ ಯಾವ ನಿರ್ಣಯಕ್ಕೂ ಅವರು ಬರಲಾಗದಂತಾಗಿದ್ದರು.

"ಕೃಷ್ಣಾ !" ಎಂದು ತನ್ನ ಉತ್ತರೀಯದಿಂದ ಬೆವರೊರೆಸಿಕೊಂಡ ಧೃತರಾಷ್ಟ್ರನು ನಿನ್ನ ಸತ್ಯವಾದ ಮಾತುಗಳನ್ನು ಕೇಳಿ ನಾನು ಕೃತಾರ್ಥನಾದೆ. ಮಕ್ಕಳ ಆಗ್ರಹದಿಂದ ಮನಸ್ಸಿಲ್ಲದಿದ್ದರೂ ನಾನು ಈ ದ್ಯೂತಕ್ಕೆ ಒಪ್ಪಿಗೆಯನ್ನಿತ್ತೆ. ಇದು ಕೇವಲ ಮನರಂಜನೆಯ ಒಂದು ಭಾಗವಾಗಬಹುದು ಎಂದು ಭಾವಿಸಿಕೊಂಡಿದ್ದೆ. ಈ ನಿಮಿತ್ತದಲ್ಲಿ ಬಂಧುಬಾಂಧವರ ಮಿಲನವಾಗಬಹುದೆಂದು ಊಹಿಸಿಕೊಂಡಿದ್ದೆ. ಮಕ್ಕಳ ಗುಣ ಪ್ರದರ್ಶನವಾಗಬಹುದು ಎಂಬ ನಂಬಿಕೆಯನ್ನು ತಾಳಿದೆ. ಆದರೆ ಅವೆಲ್ಲ ನನ್ನ ಕಲ್ಪನೆಯು ಮಾಯವಾಗಿ ಈ ದ್ಯೂತವು ಇಂಥ ಅನರ್ಥಕಾರಿಯಾದ ಪರಿಣಾಮವನ್ನು ಉಂಟುಮಾಡಬಹುದು ಎಂದು ಕನಸಿನಲ್ಲಿಯೂ ನಾನು ಭಾವಿಸಿರಲಿಲ್ಲ. ಕೃಷ್ಣಾ, ನೀನು ಸರಿಯಾದ ಸಮಯಕ್ಕೆ ಬಂದಿರುವೆ. ನನ್ನನ್ನು ಹಾಗೂ ನನ್ನ ಮಕ್ಕಳನ್ನೂ ಈ ಪಾಪದಿಂದ ಉದ್ಧಾರಮಾಡು. ಅದರಿಂದ ನನ್ನ ಮನಸ್ಸಿಗೆ ಸಮಾಧಾನವಾಗುತ್ತದೆ" ಎಂದ. ಧೃತರಾಷ್ಟ್ರನು ತಗ್ಗಿದ ಧ್ವನಿಯಿಂದ,

"ದ್ರೌಪದೀ !" ಎಂದು ಪ್ರಾರ್ಥಿಸಿದ.

ಅವಳು ಧೃತರಾಷ್ಟ್ರನನ್ನು ಒಂದು ಸಲ ನೋಡಿದ ನಂತರ ಕೃಷ್ಣನತ್ತ ಹೊರಳಿದಳು. ಆತನು ಸಮ್ಮತಿಯ ಸೂಚನಾರ್ಥವಾಗಿ ತಲೆಯನ್ನಲ್ಲಾಡಿಸಿದ.

"ಆಜ್ಞೆ"

"ಮಗಳೇ ಆಜ್ಞೆಯಂಥದು, ಆ ಅಧಿಕಾರವು ಈಗ ಉಳಿದುಕೊಂಡಿಲ್ಲ. ನೀನು ರಾಜಪತ್ನಿ, ನನ್ನ ಮೇಲೆ ಕೋಪಿಸಿಕೊಳ್ಳಬೇಡ. ಈ ಸಭೆಯಲ್ಲಿ ನಡೆದ ಘಟನೆಗಳಿಂದ ನನಗೆ ಮರಣಪ್ರಾಯದ ದುಃಖವೆನಿಸಿದೆ. ಹುಟ್ಟು ಕುರುಡ, ಅದರ ಮೇಲೆ ವೃದ್ಧಾಪ್ಯ. ಇದರಿಂದಾಗಿ ನನ್ನ ಉನ್ಮತ್ತ ಮಕ್ಕಳ ಈ ಸಭೆಯಲ್ಲಿ ನಿನ್ನನ್ನು ರಕ್ಷಿಸಲಾರದಷ್ಟು ಹೇಡಿಯಾದೆನೆಂದು ನನ್ನನ್ನು ದೂಷಿಸಬೇಡ. ಒಡಹುಟ್ಟಿದ ಮಗಳಷ್ಟೇ ನೀನು ನನಗೆ ಪ್ರಿಯಳಾಗಿರುವೆ, ನಿನ್ನ ಮೇಲಾದ ಅನ್ಯಾಯದ ಪರಿಮಾರ್ಜನೆಯನ್ನು ಮಾಡಿಕೊಳ್ಳಲು ನಾನು ಸಮರ್ಥನಿರುವೆ. ನನಗೆ ಬೇಕಾದ ವರವನ್ನು ಕೇಳು."

ಕೃಷ್ಣನ ಮುಖದಲ್ಲಿ ಸಂತಾಪದ ಯಾವ ಚಿಹ್ನೆಗಳೂ ಕಾಣುತ್ತಿರಲಿಲ್ಲ. ಬದಲಾಗಿ ಎಂದಿನಂತೆ ಮುಗ್ಧ ನಗು ಕಾಣುತ್ತಿತ್ತು. ಒಂದು ಸಲ ದ್ರೌಪದಿ ತನ್ನ ಪತಿಗಳತ್ತ ನೋಡಿದಳು. ಅವಳ ಸಂತಾಪವು ಪುನಃ ಮರುಕಳಿಸಿತು.

"ಹೇ ಪೂಜ್ಯ ಭರತಶ್ರೇಷ್ಠ ! ನಿಮ್ಮ ಅಭಯದ ಮಾತುಗಳಿಂದ ನಾನು ನಿಶ್ಚಿಂತಳಾಗಿರುವೆ. ನಿಜವಾಗಿಯೂ ನಿಮಗೆ ವರ ಕೊಡುವ ಅಪೇಕ್ಷೆಯಿದ್ದಲ್ಲಿ ಒಂದೇ ಒಂದು ವರವನ್ನು ಕೊಡಿರಿ. ಧರ್ಮದ ನೆರಳಿನಲ್ಲಿ ನಡೆಯುವ ಈ ನನ್ನ ಪತಿಗಳು ದಾಸ್ಯತ್ವದಿಂದ ಬಿಡುಗಡೆಯಾಗುವಂತಾಗಲಿ, ನನ್ನ ಸಂತಾನರೂ ಸಹ ದಾಸ್ಯದಿಂದ ವಿಮುಕ್ತರಾಗಲಿ."

ದ್ರೌಪದಿಯ ಈ ಬೇಡಿಕೆಯಿಂದ ಇಡೀ ಸಭೆಯು ಚಕಿತಗೊಂಡಿತು. ಧೃತರಾಷ್ಟ್ರನು,

"ಹಾಗೆಯೇ ಆಗಲಿ. ಭದ್ರೇ, ನೀನು ಯೋಗ್ಯವಾದುದನ್ನೇ ಕೇಳಿರುವೆ ನಾನು ಪ್ರಸನ್ನನಾಗಿರುವೆ. ಮತ್ತೊಂದನ್ನೂ ಕೇಳು. ಒಂದೇ ವರಕ್ಕೆ ನೀನು ಯೋಗ್ಯಳಲ್ಲ, ಆದುದರಿಂದ ಇನ್ನೊಂದು ವರವನ್ನು ಕೇಳು."

"ಐದು ಜನ ಪಾಂಡುಪುತ್ರರೂ ತಮ್ಮ ತಮ್ಮ ವಸ್ತ್ರಗಳಿಂದ ಕೌರವ ದಾಸ್ಯದಿಂದ ಮುಕ್ತರಾಗಲಿ."

"ತಥಾಸ್ತು ! ಆದರೂ ಯಾಜ್ಞಸೇನಿ. ನೀನು ವರವನ್ನು ಬೇಡು ವಾಗ ಸಂಕೋಚಪಡುವಿಯೇಕೆ ? ನಿಮ್ಮ ರಾಜ್ಯ, ಐಶ್ವರ್ಯ ಎಲ್ಲವನ್ನೂ ಬೇಡಿ ತೆಗೆದುಕೋ, ಅವುಗಳನ್ನೆಲ್ಲ ಆನಂದದಿಂದ ಕೊಡುವೆ. ಆದುದರಿಂದ ನೀನು ಇನ್ನೊಂದು ವರವನ್ನು ಕೇಳು."

"ಮಹಾರಾಜಾ, ತಮ್ಮ ಕೃಪಾದೃಷ್ಟಿ ಅಗಾಧವಾದುದು. ನನಗಿನ್ನೇನೂ ಬೇಕಿಲ್ಲ. ಅತಿ ಲೋಭವು ವಿನಾಶಕ್ಕೆ ಕಾರಣವೆಂದೆನಿಸುವದು. ಆದುದರಿಂದ ನನಗೆ ಮೂರನೆಯ ವರವು ಬೇಡ." ಎಂದು ನುಡಿದು ತನ್ನ ಪತಿಗಳತ್ತ ನೋಡಿ ಅವಳು ಪುನಃ ಹೇಳಿದಳು. "ಪುರುಷಾರ್ಥವೆಂಬುದು ಏನಾದರೂ ಇದ್ದಲ್ಲಿ ನನ್ನ ಪತಿಗಳು ಕಳೆದುಕೊಂಡ ರಾಜ್ಯ, ಐಶ್ವರ್ಯ ಧನ, ಕನಕ, ಮೊದಲಾದವುಗಳನ್ನು ಶಸ್ತ್ರಬಲದಿಂದ ಮತ್ತೆ ಸಂಪಾದಿಸಕೊಳ್ಳ ಬಲ್ಲರು. ಹಾಗಾದರೆ ಮಾತ್ರ ರಾಜ್ಯೈಶ್ವರ್ಯದೊಂದಿಗೆ ಗೃಹಲಕ್ಷ್ಮಿಯ ಯೋಗ್ಯತೆಯೂ ಸಹ ಅವರಿಗೆ ತಿಳಿಯುವಂತಾಗುವುದು. ಯಾವುದನ್ನು ತಾವು ಅನುಗ್ರಹಿಸಿರುವಿರೋ ಅದರಲ್ಲಿಯೇ ಇಂದು ನಾನು ತೃಪ್ತಳಾಗಿದ್ದೇನೆ"

ದ್ರೌಪದಿಯ ಮಾತುಗಳಿಂದ ಸಭೆಯು ಆಶ್ಚರ್ಯಗೊಂಡಿತು. ಶೋಚನೀಯ ಸ್ಥಿತಿಯಲ್ಲಿದ್ದಾಗಲೂ ಕೂಡ ಅವಳ ನಿಷ್ಠೆ, ಆವೇಶ, ಇವುಗಳನ್ನೆಲ್ಲ ಕಂಡ ಕರ್ಣನಿಗೆ ತಡೆಯದಂತಾಯಿತು. ಅವನಿಗರಿವಿಲ್ಲದಂತೆ ಕೆಲವು ಮಾತುಗಳು ಅವನಿಂದ ಹೊರಬರುವಂತಾದವು.

"ದ್ರೌಪದೀ ನೀನು ಧನ್ಯಳು ! ನಿನ್ನ ಕ್ಷಾತ್ರ ತೇಜವು ಅಲೌಕಿಕವಾದುದು. ನಿನ್ನಿಂದಾಗಿ ಈ ಪಾಂಡವರು ಉಳಿದುಕೊಂಡರು. ದಾಸ್ಯತ್ವದಿಂದ ಮುಕ್ತರಾದರು. ಹೇ ಪಾಂಚಾಲಿ, ಈ ವಿಪತ್ತಿನ ಸಾಗರದಲ್ಲಿ ನೌಕಾಹೀನರಾಗಿ ಮುಳುಗುತ್ತಿರುವ ಪಾಂಡು ಪುತ್ರರನ್ನು ಮೇಲೆತ್ತಲು ನೀನು ನೌಕಾರೂಪಿಯಾಗಿ ಕಾಣಿಸಿಕೊಂಡೆ. ಧನ್ಯೆ ! ನಿಜವಾಗಿಯೂ ನೀನು ಧನ್ಯಳು."

ಧೃತರಾಷ್ಟ್ರನ ಅನುಮತಿಯಂತೆ ಪಾಂಡವರು ತಮ್ಮ ವಸ್ತ್ರಗಳನ್ನು ಪರಿಧಾನ ಮಾಡಿಕೊಂಡರು. ಅನಂತರ ಧೃತರಾಷ್ಟ್ರನು,

"ಹೇ ಯುಧಿಷ್ಠಿರನೇ, ನೀನು ನಿರ್ವಿಘ್ನವಾಗಿ ಮರಳಿಹೋಗು ನಿಮ್ಮ ಐಶ್ವರ್ಯ ಹಾಗೂ ಪರಿವಾರದೊಂದಿಗೆ ಮಿಳಿತರಾಗಿ ಸುಖದಿಂದ ನೀವು ರಾಜ್ಯ ಭಾರ ಮಾಡಿರಿ. ಕುರುಡನಾದುದರಿಂದ ಒಂದೇ ಒಂದು ಮಾತನ್ನು ಹೇಳ

ಬಯಸುತ್ತೇನೆ. ಈವರೆಗೆ ನಡೆದ ಘಟನೆಗಳನ್ನೆಲ್ಲ ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಡಿರಿ. ನನ್ನ ಮಕ್ಕಳ ಬಗ್ಗೆ ಸೇಡಿನ ಮನೋಭಾವವನ್ನಿಟ್ಟುಕೊಳ್ಳಬೇಡಿರಿ. ದುರ್ಯೋಧನನೇ ಮೊದಲಾದ ಸೋದರರ ಮೇಲೆ ನಿಮ್ಮ ಪ್ರೇಮವಿರಲಿ! ನಿನ್ನ ಮನಸ್ಸು ಯಾವಾಗಲೂ ಹೀಗೆಯೇ ಶಾಂತವಾಗಿರಲಿ.”

ಕೃಷ್ಣನು ಎದ್ದು ಬಂದು ಪಾಂಚಾಲಿಯನ್ನು ಸಮೀಪಿಸಿ ಅವಳಿಗೆ ತನ್ನ ಬಲಗೈ ಆಸರೆಯನ್ನಿತ್ತು ಸಭಾಗೃಹದಿಂದ ಅವಳನ್ನು ಹೊರಕ್ಕೆ ಕರೆದುಕೊಂಡು ನಡೆದನು. ದ್ರೌಪದಿಯೊಂದಿಗೆ ಕೃಷ್ಣನು ಹೊರಟುದುದನ್ನು ಕಂಡ ದುರ್ಯೋಧನನಿಗೆ ಪುನಃ ಉಸಿರು ಬಂದಂತಾಯಿತು. ಸ್ವಲ್ಪ ದೂರ ಹೋದ ನಂತರ ಕೃಷ್ಣನು ಒಂದು ಸಲ ಹಿಂದಿರುಗಿ ನೋಡಿದ. ದುರ್ಯೋಧನನು ಸಂತಾಪದಿಂದ ಎದ್ದು ನಿಂತಿರುವುದು ಕಾಣಿಸಿತು. ಕೃಷ್ಣನ ನೋಟವು ಆತನ ಮೇಲೆ ಪುನಃ ಕೇಂದ್ರೀಕೃತವಾದಾಗ ಹೇಗೆ ಎದ್ದಿದ್ದನೋ, ಹಾಗೆಯೇ ತನ್ನ ಆಸನದಲ್ಲಿ ಕುಸಿದುಬಿಟ್ಟನು. ಸ್ವಲ್ಪ ಹೊತ್ತಾದ ನಂತರ ದುರ್ಯೋಧನನು ಪುನಃ ಹೆಬ್ಬಾಗಿಲಿನತ್ತ ನೋಡಿದ. ಕೃಷ್ಣ ದ್ರೌಪದಿಯರಿಬ್ಬರೂ ಕಾಣದಂತಾಗಿದ್ದರು. ತೆರೆದ ಹೆಬ್ಬಾಗಿಲು ತೆರೆದಂತೆಯೇ ಇತ್ತು.

## 24

ಕೃಷ್ಣನು ದ್ರೌಪದಿಯೊಂದಿಗೆ ಸಭೆಯಿಂದ ಹೊರಟು ಹೋದನಂತರ ಸಂಜಯನ ಆಶ್ರಯದೊಂದಿಗೆ ಧೃತರಾಷ್ಟ್ರನೂ ಆ ಸ್ಥಳದಿಂದ ಹೊರಟುಬಿಟ್ಟ. ನಂತರ ಇಡೀ ಸಭೆಯಲ್ಲಿ ಗಂಭೀರ ಪರಿಸ್ಥಿತಿಯು ಆವರಿಸಿತು. ದ್ರೋಣಾಚಾರ್ಯ ಹಾಗೂ ಕೃಪಾಚಾರ್ಯರೂ ಸಹ ಚಕಾರವನ್ನೂ ಎತ್ತದೆ ಹೊರಟುಬಿಟ್ಟರು. ಒಳಗಿಂದೊಳಗೆ ಕುದಿಯುತ್ತಲಿದ್ದ ಶಕುನಿ ಹೊರಡಲುದ್ಯುಕ್ತನಾದುದನ್ನು ಕಂಡು ಆತನೊಂದಿಗೆ ದುರ್ಯೋಧನನೂ ಕೂಡ ಹೊರಟು ಬಿಟ್ಟನು. ಹೀಗೆ ಒಬ್ಬರಾದ ನಂತರ ಒಬ್ಬರು ಹೊರಟು ಹೋದುದರಿಂದ ಸಭಾಗೃಹವೆಲ್ಲ ಬರಿದಾಗಿ ಹೋಯಿತು.

ಆ ಸಭಾಗೃಹದಲ್ಲಿ ಒಬ್ಬನೇ ಒಬ್ಬ ಮಹಾನುಭಾವನು ಶಾಂತಭಾವದಿಂದ ಆಸನಾರೂಢನಾಗಿ ಕುಳಿತು ಕೊಂಡಿದ್ದ. ಯಾವ ಸ್ಥಳದಲ್ಲಿ ಕೃಷ್ಣನು

ಕುಳಿತುಕೊಂಡಿದ್ದನೋ ಆ ಸ್ಥಳದಲ್ಲಿ ಈಗ ವಿದುರನಿದ್ದ. ಆತನು ಒಂದು ಸಲ ಕರ್ಣನ ಮೇಲೆ ದೃಷ್ಟಿ ಹಾಯಿಸಿ ಸಭಾಗೃಹವನ್ನು ಬಿಟ್ಟು ಹೊರಟು ಹೋದ. ಈಗ ಆ ತೋರಣ ಸ್ಫಟಿಕ ಸಭಾಗೃಹದಲ್ಲಿ ಕರ್ಣನೊಬ್ಬನೇ ಉಳಿದುಕೊಂಡಿದ್ದ.

ಬೆಲೆಬಾಳುವ ರತ್ನಾದಿಗಳಿಂದ ಅಲಂಕೃತವಾದ ಆ ಸಭಾಗೃಹ, ಅದರಲ್ಲಿಡಲಾಗಿದ್ದ ಸುವರ್ಣಮಯವಾದ ಆಸನಗಳು, ಅವುಗಳ ಮಧ್ಯಭಾಗದಲ್ಲಿಡಲಾಗಿದ್ದ ಸಿಂಹಾಸನ ಮೊದಲಾದುವುಗಳನ್ನೇ ತದೇಕ ಚಿತ್ತದಿಂದ ಕರ್ಣನು ನೋಡುತ್ತಲಿದ್ದ. ಎಷ್ಟೋ ಹೊತ್ತಿನ ನಂತರ ಆತನೂ ಹೊರಟು ನಿಂತ. ಆಗ ಸಭಾಗೃಹವೆಲ್ಲ ಭಯಾನಕವಾಗಿ ಕಾಣಲಾರಂಭಿಸಿತು. ವಿಚಿತ್ರವಾದ ಉದಾಸೀನತೆಯು ಆ ಭವನವನ್ನೆಲ್ಲ ವ್ಯಾಪಿಸಿತು.

ಈ ಐಶ್ವರ್ಯ, ಬರಿದಾದ ಈ ಸುವರ್ಣಾಸನಗಳು, ದಿವ್ಯವಾದ ಈ ಸಿಂಹಾಸನ ಇವುಗಳನ್ನೆಲ್ಲ ಧಾರಣ ಮಾಡಿದ ಈ ನೆಲ ಇವುಗಳನ್ನೆಲ್ಲ ಹೇಗೆ ಬರಿದಾಗಿಯೇ ಉಳಿಯುವವೇ ? ಎಂದಾದರೊಂದು ದಿನ ಹೀಗೆ ನಡೆಯಬಹುದೇ ? ಹಾಗಾದರೆ ಅದು ನಿಶ್ಚಿತ ಎಂದಾದಲ್ಲಿ ಈ ತರಹದ ಈರ್ಷ್ಯೆ, ಮತ್ಸರ, ಅವಮಾನ, ಇವುಗಳೆಲ್ಲ ಯಾತಕ್ಕಾಗಿ ? ಯಾರಿಗಾಗಿ ? ಇವುಗಳಿಗೆಲ್ಲ ಹುಟ್ಟು ಸಾವುಗಳ ಆಹ್ವಾನವೇನಾದರೂ ಇವೆಯೇ ?

ಈ ವಿಚಾರಗಳು ಪ್ರಾರಂಭವಾದೊಡನೆ ಕರ್ಣನಿಗೆ ತುಂಬ ಕಸಿವಿಸಿಯಾಯಿತು. ಹೊರಡಲುದ್ಯುಕ್ತನಾಗಿ ಪಾವಟಿಗೆಗಳನ್ನಿಳಿಯಲಾರಂಭಿಸಿದ. ಸಭಾಗೃಹದ ತುಂಬೆಲ್ಲ ಚಿತ್ರವಿಚಿತ್ರವಾದ ವಸ್ತುಗಳನ್ನು ಹಾಸಿದ್ದರು. ನಡುಮಧ್ಯದಲ್ಲಿ ಹಾಸಿದ ಹಾಸಿಗೆಯ ಮೇಲೆ ಬಿಸಾಡಿದ ದ್ಯೂತಪಟದತ್ತ ಆತನ ಗಮನ ಹರಿಯಿತು. ವಿಜಯೋನ್ಮಾದದಿಂದ ಹಾರಿಸಲಾದ ಪಟವು ಈಗ ಅಸ್ತವ್ಯಸ್ತಗೊಂಡಿತ್ತು, ದಾಳಗಳೆಲ್ಲ ಚೆಲ್ಲಾಪಿಲ್ಲಿಯಾಗಿದ್ದವು. ತನ್ನ ಕಾಲಹತ್ತಿರ ಬಿದ್ದ ದಾಳದತ್ತ ಆತನ ಗಮನವು ಹೋಯಿತು. ಆ ದಾಳದ ಮೇಲೆ ಕೊರೆಯಲಾದ ಚಿತ್ರಗಳು ಆತನ ಕಣ್ಣು ತುಂಬುವಂತೆ ಮಾಡಿದವು.

ಹಸ್ತಮುದ್ರಾ ! ತೆರೆದ ಕೈಯಿಂದ ಯಾವ ದಾಳಗಳು ಉರುಳಿ ಬಿದ್ದಿದ್ದವೋ, ಆ ತೆರೆದ ಕೈಯಿಂದಲೇ ಎಲ್ಲವನ್ನು ಗೆದ್ದುಕೊಂಡಾಗಿತ್ತು. ಯಾರು ದ್ಯೂತಪಟವನ್ನು ಹಾರಿಸಿದ್ದರೋ ; ಅವರೇ ದ್ಯೂತದಲ್ಲಿ ಗೆದ್ದ

ಅನಂತರದಲ್ಲಿ ಆ ಪಟವನ್ನು ಎತ್ತಿ ಹಾರಿಸಿದ್ದರು. ಈಗ ಆ ದ್ಯೂತಪಟವು ಸಾಮಾನ್ಯ ವಸ್ತ್ರವಾಗಿತ್ತು. ಇನ್ನು ದಾಳಗಳು, ಅವುಗಳ ಮೇಲೆ ಹಸ್ತಿ ದಂತದ ಚಿತ್ರಗಳ ವಿನಃ ಬೇರೇನೂ ಕಾಣಬರುತ್ತಿರಲಿಲ್ಲ.

ನಾವು ಕಾಣುವ ಈ ರೂಪದ ಹೊರತಾಗಿ ಈ ದಾಳಗಳಿಗೆ ಬೇರೆ ಯಾವುದಾದರೂ ಅಸ್ತಿತ್ವವಿದೆಯೇ ? ರೂಪವಿದೆಯೇ ?

ಮಾನವ ಬುದ್ಧಿಯಿಂದ ರಚಿತವಾದ ಈ ದ್ಯೂತವು ಎಷ್ಟು ಸಹಜವಾಗಿ ತನ್ನ ಕೆಲಸ ಮಾಡಿತಲ್ಲ !

ಇದಕ್ಕೆಲ್ಲ ಯಾವದಾದರೂ ಇಚ್ಛಾಶಕ್ತಿ, ಕ್ರಿಯಾಶಕ್ತಿ ಎಂಬುದು ಇದೆಯೇ ?

ಕೊನೆಯ ಗಳಿಗೆಯಲ್ಲಿ ಕೃಷ್ಣನು ಇಲ್ಲಿಗೆ ಬಂದುದು ಹೇಗೆ !

ಕರ್ಣನ ಮುಖದಲ್ಲಿ ಖಿನ್ನತೆಯ ನಗು ಮೂಡಿ ಬಂದಿತು.

ಯಾರನ್ನು ಹೆತ್ತ ತಾಯಿಯೇ ಬಿಸಾಡಿದ್ದಾಳೆಯೋ ಅಂಥವರಿಗೆ ವಿಧಾತನ ಸಹಕಾರವಾದರೂ ಹೇಗೆ ಸಿಕ್ಕೀತು ?

ಬಿದ್ದಿರುವ ದಾಳಗಳನ್ನೆತ್ತಲು ಕರ್ಣನು ಬಾಗಿದ. ಅವುಗಳನ್ನೆತ್ತಿ ಕೊಳ್ಳಲು ತನ್ನ ಕೈಯನ್ನು ಮುಂದೆ ಚಾಚಿದ. ಆದರೆ ಆ ಕೈ ತಕ್ಷಣ ತಾನಾಗಿಯೇ ಹಿಂದೆ ಸರಿಯಿತು. ಹುಲ್ಲಿನ ಮೇಲೆ ಬಿದ್ದಿರುವ ಚೆಂಡನ್ನು ಎತ್ತಿಕೊಳ್ಳಲು ಹೋದಾಗ ಹೆಡೆ ಎತ್ತಿ ಕುಳಿತ ಹಾವನ್ನು ಕಂಡ ಮಗುವಿನಂತೆ ಕರ್ಣನ ಸ್ಥಿತಿಯಾಗಿತ್ತು. ಆತನು ತುಂಬ ಭಯಭೀತನಾಗಿದ್ದ. ಅಂಜಿದವನಂತೆ ಆ ದಾಳಗಳನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಲಿದ್ದ.

ಹಸ್ತಿದಂತಗಳಿಂದ ರಚಿತವಾದ ಆ ದಾಳದ ಮಧ್ಯದಲ್ಲಿ ಕಪ್ಪಾದ ಕೂದಲೆಳೆ ಹೊಯ್ದಾಡುತ್ತಿರುವಂತೆ ತೋರಿತು. ಅತಿ ಸೂಕ್ಷ್ಮವಾದ ಆ ಕೂದಲೆಳೆಯನ್ನು ಕಂಡಾಗ ಕರ್ಣನ ಮನದಲ್ಲಿ ಮಿಂಚಿನಂತಹ ವೇದನೆಯು ಅನುಭವವಾಯಿತು.

ಅಪಮಾನ, ಸಂತಾಪಗಳಲ್ಲಿ ವಿವೇಕವೆಂಬುದು ಎಷ್ಟು ಮಹತ್ವಪೂರಿತ ವಿಚಾರ, ದ್ರೌಪದಿಯನ್ನು ವಿವಸ್ತ್ರಳಾಗಿ ಮಾಡಿದ್ದಲ್ಲಿ ಅದನ್ನು ನೋಡುವ ದಾರ್ಢ್ಯವು ಪಾಂಡವರಿಗಿರುತ್ತಿತ್ತೆ ? ಯಜ್ಞ ಕುಂಡದಲ್ಲಿ ತುಪ್ಪವನ್ನು ಹಾಕುವಾಗ ಅದನ್ನು ಎತ್ತರದಿಂದಲೇ ಹಾಕುತ್ತಾರೆ. ಆ ಅಂತರವು ಇಲ್ಲದೇ

ಹೋದಲ್ಲಿ ತುಪ್ಪದ ಧಾರೆಯೊಂದಿಗೆ ಪ್ರಜ್ವಲಿತವಾದ ಅಗ್ನಿಯು ಶಾಖವು ತಾಕಿ ಕೈ ಸುಟ್ಟು ಹೋಗಬಹುದು. ಅಪಮಾನವೆಂಬ ಅಗ್ನಿಯಲ್ಲಿ ವಾಸನೆಗಳೆಂಬ ತುಪ್ಪದ ಧಾರೆಯನ್ನು ಬಿಡುವಾಗ ಆ ಅಂತರದ ವ್ಯವಧಾನವೆಂಬುದು ಎಲ್ಲಿ ಹೋಯಿತು ? ಅದನ್ನು ಹೇಗೆ ಕಳೆದುಕೊಂಡೆ ?

ವಾಸನೆ ? ಛೆ ! ವಾಸನೆಯ ಲವಲೇಶವೂ ಇಲ್ಲ.

ಹಾಗಿದ್ದರೆ ಬೇರೆ ಏನು?

ಈ ಪ್ರಶ್ನೆಗೆ ಕರ್ಣನಿಗೆ ಉತ್ತರವೇ ದೊರೆಯದಂತಾಯಿತು. ಆ ಕೂದಲನ್ನು ಮುಟ್ಟುವ ಸಾಮರ್ಥ್ಯವೂ ಸಹ ಅವನಿಗಿರಲಿಲ್ಲ. ತನ್ನ ದೃಷ್ಟಿಯನ್ನು ಬಹು ಪರಿಶ್ರಮದಿಂದ ಬದಲಿಸಿದ ಆತನು ಸಭಾಗೃಹವನ್ನು ತೊರೆದು ಹೊರಡಲುದ್ಯುಕ್ತನಾದ. ಆ ಸ್ಥಳದಲ್ಲಿ ಒಂದು ಕ್ಷಣ ನಿಲ್ಲಲೂ ಆತನ ಮನಸ್ಸು ಒಪ್ಪಲಿಲ್ಲ.

ಕರ್ಣನು ಸಭಾಗೃಹದಿಂದ ಹೊರಬಂದಾಗ ಹೆಬ್ಬಾಗಿಲಿನಿಂದ ಮುಂದೆ ಸಾಗುತ್ತಲಿದ್ದ ವಿದುರನತ್ತ ಆತನ ಗಮನವು ಹರಿಯಿತು. ಮಹಾದ್ವಾರದ ಮುಂಭಾಗದಲ್ಲಿ ಸುವರ್ಣ ರಥವನ್ನು ನಿಲ್ಲಿಸಲಾಗಿತ್ತು. ಆ ರಥದತ್ತ ಹೋಗುತ್ತಿರುವ ಕೃಷ್ಣನನ್ನು ಕೂಡಿಕೊಳ್ಳಲು ವಿದುರನು ಅವಸರದಿಂದ ಧಾವಿಸುತ್ತಿದ್ದ. ಕರ್ಣನು ಹೆಬ್ಬಾಗಿಲಿನಲ್ಲಿದ್ದ ಪಾವಟಿಗೆಗಳನ್ನಿಳಿಯುವಾಗ ವಿದುರನು ಕೃಷ್ಣನ ಹೆಸರಿನಿಂದ ಕೂಗುತ್ತಿರುವುದು ಕೇಳಿಸಿತು.

ಕೃಷ್ಣನು ಹಿಂದಿರುಗಿ ನೋಡಿದಾಗ ತನ್ನನ್ನು ಸಮೀಪಿಸುತ್ತಿರುವ ವಿದುರ, ಹಾಗೂ ಇನ್ನೂ ಆ ಮೆಟ್ಟಿಲುಗಳ ಮೇಲಿದ್ದ ಕರ್ಣ, ಇಬ್ಬರೂ ಕಾಣಿಸಿಕೊಂಡರು. ಅತಿ ಸಮೀಪಕ್ಕೆ ಬಂದ ವಿದುರನನ್ನು ಕುರಿತು,

"ವಿದುರ. ಹೇಳಬೇಕಾದ ಅವಶ್ಯಕತೆ ಏನೂ ಇಲ್ಲ. ನಾನು ದೋಷವನ್ನೀಯಲಾರೆನಾದರೂ ನಡೆದುದೆಲ್ಲ ಸರಿಯಾದುದೇನಲ್ಲ. ಇಂದು ದೈವ ವಿಕೋಪವನ್ನು ನಾನು ಸ್ಪಷ್ಟವಾಗಿ ಕಂಡುಕೊಂಡೆ. ಆದುದರಿಂದ ಈ ನೆಲದಲ್ಲಿ ಒಂದು ಕ್ಷಣವನ್ನೂ ಸಹ ನಾನು ಕಳೆಯಲಾರೆ. ನನ್ನ ಮನ ಈ ಪರಿಸರವನ್ನು ಒಪ್ಪದಂತಾಗಿದೆ. ಆದುದರಿಂದ ಇನ್ನು ಹೊರಡುವೆ."

ತನ್ನ ಉತ್ತರೀಯವನ್ನು ಸರಿಮಾಡಿಕೊಂಡು ಕೃಷ್ಣನು ರಥಾರೂಢ

ನಾದ. ರಥದ ಮುಂಭಾಗದಲ್ಲಿದ್ದ ಆತನ ಅಶ್ವದಳವು ಮುಂದೆ ಧಾವಿಸ ತೊಡಗಿತು. ಆ ದಳದೊಂದಿಗೆ ಕೃಷ್ಣನ ರಥವೂ ಓಟವನ್ನಾರಂಭಿಸಿತು.

ವಿದುರನು ನಿಧಾನವಾಗಿ ಹೆಜ್ಜೆ ಹಾಕಲಾರಂಭಿಸಿದ. ಆದರೆ ಕರ್ಣನನ್ನು ನೋಡಿದಾಗ ಮಾತ್ರ ನೋಡದವನಂತೆ ಅವಸರದ ಹೆಜ್ಜೆಗಳನ್ನು ಹಾಕಲಾರಂಭಿಸಿದ. ಆಗ ಆಕಸ್ಮಿಕವಾಗಿ ಅವನ ಉತ್ತರೀಯವು ಕಾಲಿಗೆ ಸಿಕ್ಕಿಕೊಂಡು ಆತ ಬಿದ್ದು ಹೋಗುವುದರಲ್ಲಿದ್ದ. ಅದನ್ನು ಕಂಡ ಕರ್ಣನು ಧಾವಿಸಿ ಬಂದು ಆತನನ್ನು ಹಿಡಿದುಕೊಂಡ. ನಂತರ ಸಾವಸಿರಿಕೊಂಡ ವಿದುರನು,

"ಕರ್ಣಾ ಇರಲಿ : ನಾನು ಚನ್ನಾಗಿರುವೆ, ಸರಿಯಾಗಿರುವೆ. ದಾಸಿ ಪುತ್ರನಾದ ನಾನು ನನ್ನ ತೂಕವನ್ನೆ ಸಂಬಾಳಿಸಿಕೊಳ್ಳಲಾರೆ. ಯಾಕೆಂದರೆ ಆತನು ಯಾವಾಗಲೂ ವಿಪತ್ತುಗಳನ್ನೇ ಎದುರಿಸಬೇಕಾಗುತ್ತದೆ ಕೆಲವು ಸಲ ದೇಹಕ್ಕೆ ಸರಿಯಾದ ವಸ್ತ್ರಗಳನ್ನೂ ಆತನು ಪರಿಧಾರಣ ಮಾಡಲಾರ."

ಉತ್ತರದ ಯಾವ ಅಪೇಕ್ಷೆಯನ್ನೂ ನಿರೀಕ್ಷಿಸದೆ ವಿದುರನು ಮುನ್ನಡೆದು ಬಿಟ್ಟ.

ಕರ್ಣನು ರಾಜಬೀದಿಯಲ್ಲಿ ನಿಂತು ನೋಡಿದಾಗ ಪಯಣ ಕಾಲದಲ್ಲಿ ಕೃಷ್ಣನ ಪರಿವಾರದವರಿಂದ ಎದ್ದ ಧೂಳು ಆಕಾಶವನ್ನೆಲ್ಲ ವ್ಯಾಪಿಸಿರುವುದು ಕಾಣಿಸುತ್ತಿತ್ತು. ರಥವು ಕಾಣಬರುತ್ತಿರಲಿಲ್ಲವಾದರೂ ಆ ಮಾರ್ಗದಲ್ಲಿ ಓಡಿಸಲಾದ ರಥದ ಗಾಲಿಗಳ ಗುರುತುಗಳು ಮಾತ್ರ ಸ್ಪಷ್ಟವಾಗಿ ಕಾಣಬರುತ್ತಿದ್ದವು. ಅಷ್ಟರಲ್ಲಿ ಕರ್ಣನ ರಥವೂ ಸಹ ಬಂದು ನಿಂತಿತು. ಆತನು ರಥಾರೂಢನಾದ ನಂತರ ಆ ರಥವು ಮುಂದೆ ಸಾಗಿತು. ಕೃಷ್ಣನು ಹೊರಟು ಹೋದ ದಾರಿಯಲ್ಲಿಯೇ ಕರ್ಣನ ರಥವೂ ಸಹ ಓಡಲಾರಂಭಿಸಿತು.

## 25

ದ್ಯೂತಗೃಹದಿಂದ ಕರ್ಣನು ತನ್ನ ಬಿಡಾರಕ್ಕೆ ಮರಳಿದ. ದ್ಯುಮ್ನ ಬಾಗಿಲಿನಲ್ಲಿಯೇ ನಿಂತುಕೊಂಡಿದ್ದ. ಆತನು ಮುಂದೆ ಬಂದು ವಿಚಾರಿಸಿದ.

"ಅಣ್ಣಾ, ನಾವು ಕೇಳಿದುದೆಲ್ಲ ನಿಜವೇ ?"

ತಮ್ಮನನ್ನು 'ಅವಲೋಕಿಸಿದ' ಕರ್ಣನು

"ದ್ಯುಮ, ನೀನು ಏನು ಕೇಳಿರುವೆ ಎಂಬುದೇ ನನಗೆ ತಿಳಿಯದು. ಈಗ ನನಗೆ ತುಂಬ ದಣಿವಾಗಿದೆ"

ಕರ್ಣನು ನೇರವಾಗಿ ತನ್ನ ಶಯ್ಯಾಗೃಹಕ್ಕೆ ಹೋದ. ಅಲ್ಲಿ ಯಾರ ಸುಳಿವೂ ಇರಲಿಲ್ಲ. ಚಂಚಲವಾದ ಮನಸ್ಸಿಗೆ ಆ ಸ್ಥಳವೂ ಕೂಡ ಸಮಾಧಾನ ವನ್ನೀಯದಂತೆನಿಸಿತು. ಮುಂಭಾಗದಲ್ಲಿರುವ ಪ್ರಕಾರದಲ್ಲಿ ಬಂದು ನಿಂತು ಕೊಂಡ. ಬಿಸಿಲಿನ ತಾಪದಿಂದ ಹಸ್ತಿನಾವತಿಯು ತಳಮಳಿಸುತ್ತಿತ್ತು. ದೂರದೂರದವರೆಗೆ ಹಾಸಿದಂತಿದ್ದ ರಾಜಮಾರ್ಗಗಳು, ರಾಜಪ್ರಸಾದಗಳು ಕಾಣಬರುತ್ತಿದ್ದವು. ಪ್ರಾಸಾದದತ್ತ ಯಾರೋ ಬರುತ್ತಿರುವಂತೆನಿಸಿತು. ಆದುದರಿಂದ ಅವನು ಹಿಂದಿರುಗಿ ನೋಡಿದ, ವೃಷಾಲಿಯು ಕಾಣಿಸಿದಳು.

"ದ್ಯೂತ ಸಭೆಯು ಮುಗಿಯಿತೆ ?"

"ಹ್ಞಂ !"

"ಕೃಷ್ಣ ಬಂದಿದ್ದನೇ ?"

"ನಿನಗಾರು ಹೇಳಿದರು ?"

"ಕೆಲ ಸಮಯದ ಹಿಂದೆ ಕೃಷ್ಣನ ರಥವು ರಾಜಗೃಹದ ಮುಂದೆ ನಿಂತಿರುವದನ್ನು ನಾನು ಕಂಡಿದ್ದೆ."

"ಹೌದು"

ಕರ್ಣನ ತುಂಡು ನುಡಿಗಳು ಹಾಗೂ ಗಂಭೀರ ಮುಖಭಾವ ಇವು ಗಳನ್ನು ಕಂಡು ಅವಳಿಗೆ ಆಶ್ಚರ್ಯವೆನಿಸಿತು. ಸ್ವಲ್ಪ ನಿಧಾನಿಸಿ ಪುನಃ ಅವಳು ಹೇಳಿದಳು.

"ಊಟವು ಸಿದ್ಧವಿದೆ"

"ನನಗೆ ಹಸಿವೆ ಇಲ್ಲ", ಎಂದು ಕರ್ಣನು ಹಾಸಿಗೆಯತ್ತ ಹೊರಟ.

"ಒಂದು ಮಾತನ್ನು ಕೇಳಬಹುದೇ ?"

"ಕೇಳು"

"ಇಂದು ದ್ರೌಪದಿಯ ವಸ್ತ್ರ ಅಪಹರಣವಾಯಿತಂತೆ ?"

"ಆಗಲಿಲ್ಲ, ಸುದೈವದಿಂದ ಉಳಿದುಕೊಂಡಿತು."

"ಕೃಷ್ಣನಿಂದ ;"

"ಅವನಿಂದಲ್ಲ, ನಮ್ಮ ಸುದೈವದಿಂದ ! ಅವಳ ಅದೃಷ್ಟದಲ್ಲಿ ಯಾವಾಗಲೂ ಕೃಷ್ಣನ ಬೆಂಬಲವಿದೆ."

"ಅದಕ್ಕಾಗಿಯೇ ಕೃಷ್ಣನ ಆಗಮನವಾಗಿತ್ತೇ ?"

"ಹೌದು. ಒಳ್ಳೆಯ ಸಮಯದಲ್ಲಿಯೇ ಕೃಷ್ಣನು ಬಂದು ಆ ಕಲಂಕವನ್ನು ತೊಳೆದ."

"ಕಲಂಕ " ಎಂಥ ಕಲಂಕ !"

"ವಸೂ ! ವ್ರತಸ್ಥಳಾದ ಸ್ತ್ರೀಯನ್ನು ನೋಡುವ ಅಧಿಕಾರವು ಕೇವಲ ಅವಳ ಪತಿ ಹಾಗೂ ಪುತ್ರರಿಗೆ ಮಾತ್ರ ಮೀಸಲು ಅಲ್ಲವೆ ? ಅವರ ವಿನಃ ಬೇರಾರೂ ಅಂಥ ಸಾಹಸವನ್ನು ಮಾಡಲಾರರು. ಕ್ರೋಧವಶರಾದವರಿಂದ ಇಂದು ಅಂಥ ಮಹಾಪಾತಕತನವು ಘಟಿಸುವುದರಲ್ಲಿತ್ತು ಗೊತ್ತೇ ? ಸರಿಯಾದ ಸಮಯದಲ್ಲಿ ಕೃಷ್ಣನು ಕಾಣಿಸಿಕೊಂಡ. ಆ ಮಹಾನುಭಾವನ ಆಗಮನದಿಂದ ಎಲ್ಲರೂ ಆ ಮಹಾ ಪಾತಕದಿಂದ ಉಳಿಯುವಂತಾಯಿತು."

"ಕೃಷ್ಣನು ಬಾರದೇ ಹೋಗಿದ್ದರೆ ವಸ್ತ್ರಾಪಹರಣ !"

"ಹಾಗಾಗಿದ್ದರೆ ! ಏನಾಗುತ್ತಿತ್ತು !" ಕರ್ಣನ ಮೈ ಜುಂ ಎಂದಿತು. ಅವನು ವೃಷಾಲಿಯನ್ನು ನೋಡಿದ. "ಹಾಗೇನಾದರೂ ನಡೆದಿದ್ದಲ್ಲಿ ನಿನ್ನ ಹಣೆಗೆ ವೈಧವ್ಯವು ಪ್ರಾಪ್ತವಾಗುತ್ತಿತ್ತು. ಆತ್ಮಘಾತದ ವಿನಃ ನನಗೆ ಬೇರಾವ ಮಾರ್ಗವೂ ಇರುತ್ತಿರಲಿಲ್ಲ. ಅದನ್ನು ಕೇಳಿ ಗಾಬರಿಗೊಂಡ ವೃಷಾಲಿಯು ತನ್ನ ಬಾಯಿಯ ಮೇಲೆ ಕೈಯನ್ನಿಟ್ಟುಕೊಂಡಳು. ಹಾಸಿಗೆಯ ಮೇಲೆ ತನ್ನ ದೇಹವನ್ನು ಚಲ್ಲುತ್ತ ಕರ್ಣನು ಹೇಳಿದ,

"ವೃಷಾಲಿ : ಹೋಗು ಸಾಕಷ್ಟು ಮದ್ಯವನ್ನು ತೆಗೆದುಕೊಂಡು ಬಾ."

ಮದ್ಯ ತರಲು ಹೋದ ವೃಷಾಲಿಯು ಮರಳಿ ಬಂದು ನೋಡಿದಾಗ ಕರ್ಣನು ನಿದ್ರಾವಶನಾಗಿದ್ದುದು ಕಾಣಬಂದಿತು.

ಕರ್ಣನಿಗೆ ಒಮ್ಮಿಂದೊಮ್ಮೆ ಎಚ್ಚರವಾಯಿತು, ಗಾಬರಿಯಿಂದ ಆತನ ಮೈ ಬೆವರೊಡೆದುಕೊಂಡಿತ್ತು. ಮೇಲುಸಿರೆಳೆಯುತ್ತಿದ್ದುದರಿಂದ ಆತನ ಎದೆ ಅಗಲವಾಗಿ ಆಕುಂಚಿತಗೊಳ್ಳುತ್ತಿರುವಂತೆ ತೋರಿತು. ಆತನ ಪಕ್ಕದಲ್ಲಿಯೇ ವೃಷಾಲಿಯು ನಿಂತುಕೊಂಡಿದ್ದಳು. ಮೈ ಮೇಲಿನ ಬೆವರನ್ನೊರಸಿಕೊಳ್ಳುತ್ತ ಕರ್ಣನು ಹೇಳಿದ.

"ಎಂಥ ಭಯಾನಕ ಸ್ವಪ್ನವನ್ನು ಕಂಡೆ!"

"ಸ್ವಪ್ನ!!"

"ಹಂ, ಹೌದು ಸ್ವಪ್ನ. ಎಚ್ಚರವಾದುದೇ ಒಳಿತಾಯಿತು! ವಸೂ ಸ್ವಪ್ನದಲ್ಲಿ ನಾನು ಪಾಂಡವರು ವನವಾಸಕ್ಕೆ ಹೋಗುತ್ತಿರುವುದನ್ನು ಕಂಡೆ!"

"ನಿಜವಾಗಲೂ!"

"ರಾಜಬೀದಿಗಳಲ್ಲೆಲ್ಲ ಪ್ರಜೆಗಳು ತುಂಬಿಕೊಂಡಿದ್ದರು. ಕಪ್ಪು ಮನುಷ್ಯ ನೊಬ್ಬ ಡೊಳ್ಳನ್ನು ಬಾರಿಸುತ್ತ ವಿಕಟಾಟ್ಟಹಾಸದಿಂದ ಮುನ್ನಡೆಯುತ್ತ ಲಿದ್ದ. ಆತನ ಹಿಂದೆ ಐದು ಜನ ಪಾಂಡವರು ಹಾಗೂ ದ್ರೌಪದಿ ಕೆಳ ಮುಖ ಹಾಕಿಕೊಂಡು ಸಾಗಿದ್ದರು."

"ಆಶ್ಚರ್ಯವಾಗಿದೆ, ನಡೆಯುವುದೆಲ್ಲ ಸ್ವಪ್ನದಲ್ಲಿ ಕಾಣಿಸುವುದಿಲ್ಲ ಎಂದು ಕೆಲವರು ಹೇಳುತ್ತಾರೆ."

"ನಡೆಯುತ್ತಿರುವದು ?"

"ಹೌದು ಜೂಜಿನಲ್ಲಿ ಸೋತು ಹೋದ ಪಾಂಡವರು ಈ ಕ್ಷಣದಲ್ಲಿ ವನ ವಾಸಕ್ಕೆ ಹೊರಟಿದ್ದಾರೆ."

"ನಿನಗೇನು ಹುಚ್ಚು ಹಿಡಿದಿದೆಯೇ, ಪಾಂಡವರು ಇಂದ್ರಪ್ರಸ್ಥಕ್ಕೆ ಹೋದುದನ್ನು ನೋಡಿಯೇ ನಾನು ಬಂದಿದ್ದೇನೆ."

"ಇಲ್ಲ, ನನಗೆ ಹುಚ್ಚೇನೂ ಹಿಡಿದಿಲ್ಲ, ಸತ್ಯವಾದುದನ್ನೇ ಹೇಳು ತ್ತಿರುವೆ."

ಕರ್ಣನು ಹೊರಬಂದು ನೋಡಿದ. ರಾಜಬೀದಿಗಳಲ್ಲಿ ಗದ್ದಲವಿರು ವದು ಕಾಣಬರುತ್ತಿತ್ತು.

"ಜನರಿಂದ ರಾಜಬೀದಿಗಳೆಲ್ಲ ತುಂಬಿಹೋಗಿದ್ದವು. ಇಂದ್ರಪ್ರಸ್ಥಕ್ಕೆ ಪ್ರಯಾಣ ಬೆಳೆಸುತ್ತಿದ್ದ ಪಾಂಡವರನ್ನು ಪುನಃ ಕರೆಯಿಸಿದರು, ಮತ್ತೊಮ್ಮೆ ದ್ಯೂತದ ಆಹ್ವಾನವನ್ನಿತ್ತರು, ಪುನಃ ಯುಧಿಷ್ಠಿರನು ಮರಳಿ ಬಂದ. ಈ ಸಲದ ದ್ಯೂತದಲ್ಲಿ ಒಂದೇ ಒಂದು ಪಣವನ್ನಿಡಲಾಗಿತ್ತು.

ಹನ್ನೆರಡು ವರ್ಷ ವನವಾಸ, ಒಂದು ವರ್ಷದ ಅಜ್ಞಾತವಾಸ. ಪಾಂಡ ವರು ಮತ್ತೆ ಸೋತರು."

"ಅದನ್ನು ಹೇಳಬೇಕಾದ ಅವಶ್ಯವೇನಿಲ್ಲ. ಯುವರಾಜನು ಅದಕ್ಕಾಗಿಯೇ ಆಶಕುನಿಯೊಂದಿಗೆ ವಸರದಿಂದ ಹೊರ ಹೋಗಿರಬಹುದು."

"ಏನಂದಿರಿ ?"

"ಏನೂ ಇಲ್ಲ."

ಹೊರಗಿನ ಗದ್ದಲವು ಹೆಚ್ಚಾಗತೊಡಗಿತ್ತು. ಮುಹಡಿಯ ಮುಂಭಾಗದಲ್ಲಿರುವ ಅಂಗಳಕ್ಕೆ ವೃಷಾಲಿಯು ಸಾಗಿದಳು. ಅದನ್ನರಿತ ಕರ್ಣನು,

"ಬೇಡ ವೃಷಾಲಿ, ಅದನ್ನು ನೋಡಲು ಹೋಗಬೇಡ. ಇಂದ್ರಧನಸ್ಸು ಕಾಣಿಸಿಕೊಂಡಾಗ ನೋಡಬಹುದು. ಆದರೆ ಅದರ ಅಸ್ತಂಗತವನ್ನು ನೋಡಬಾರದು."

ಉದ್ವಿಗ್ನ ಮನದಲ್ಲಿದ್ದ ಕರ್ಣನು ತನ್ನ ಪಾನಪಾತ್ರೆಗೆ ಮದ್ಯವನ್ನು ತುಂಬಿದ.

## 26

ಸಾಕಷ್ಟು ಮದ್ಯವನ್ನು ಸೇವಿಸಿದರೂ ಕರ್ಣನ ಮನಸ್ಸು ಒಂದು ಸ್ಥಿಮಿತಕ್ಕೆ ಬಾರದಂತಾಗಿತ್ತು. ಬಿಡಾರದಲ್ಲಿದ್ದ ದೀಪಸ್ತಂಭಗಳನ್ನು ಯಾವಾಗಲೋ ಅಂಟಿಸಿಯಾಗಿತ್ತು. ಕರ್ಣನು ತನ್ನ ವಸ್ತ್ರಗಳನ್ನು ಸರಿಮಾಡಿಕೊಂಡು ಮೇಲೆದ್ದ. ಆ ಸಮಯಕ್ಕೆ ಸರಿಯಾಗಿ ವೃಷಾಲಿಯು ಬಂದಳು. ಹೆಗಲ ಮೇಲಿರುವ ಆತನ ಉತ್ತರೀಯವನ್ನು ಕಂಡು,

"ಹೊರಗೆ ಹೋಗುತ್ತೀರಾ ?"

"ಹೌದು !"

"ಬೆಳಗಿನಿಂದ ತಾವು ಉಪವಾಸವಿದ್ದೀರಿ"

"ಒಂದು ದಿವಸದ ಉಪವಾಸದಿಂದ ಏನಾಗುತ್ತದೆ? ಹನ್ನೆರಡು ವರ್ಷದ ಉಪವಾಸವನ್ನೇ ಒಪ್ಪಿರುವಾಗ ಒಂದು ದಿನದ ಉಪವಾಸವೇನು ಮಹಾ; ವೃಷಾಲಿ, ನನ್ನ ರಥವನ್ನು ತರುವಂತೆ ಹೇಳು."

ವೃಷಾಲಿಯು ಹೊರಟುಹೋದ ನಂತರ ಕರ್ಣನು ಉಪ್ಪರಿಗೆಯ ಪಾವಟಿಗೆಗಳನ್ನಿಳಿದು ಬಂದ. ಪಡಶಾಲೆಯಲ್ಲಿರುವ ಆಸನದಲ್ಲಿ ಅಧಿರಥನು

ಕುಳಿತುಕೊಂಡಿದ್ದ. ಆತನ ಸಮೀಪದಲ್ಲಿಯೇ ದ್ಯುಮ, ಶತ್ರುಂಜಯ, ವೃಷಕೇತು ಇವರು ಕುಳಿತಿದ್ದರು. ಬಾಗಿಲ ಬಳಿ ರಾಧಾ ತಾಯಿ ನಿಂತುಕೊಂಡಿದ್ದಳು. ಅವರೆಲ್ಲರ ಮುಂದೆ ವೃಷಕೇತುವು ಹೇಳುತ್ತಲಿದ್ದ.

"ಗಡಿ ಭಾಗದವರೆಗೆ ಎಲ್ಲ ಜನರು ಕಳಿಸುವದಕ್ಕಾಗಿ ಹೋಗಿದ್ದರು. ದುಃಖದಿಂದ ಕಣ್ಣೀರನ್ನು ಹಾಕದಿದ್ದವರೇ ಇಲ್ಲ."

"ತಾತ, ಪಾಂಡವರು ಅಳುತ್ತಿರಲಿಲ್ಲ. ಯುಧಿಷ್ಠಿರ ಮಹಾರಾಜರು ಎಲ್ಲರಿಗೂ ಸಮಾಧಾನ ಹೇಳುತ್ತಿದ್ದರು. ಅವರು ಎಲ್ಲರ ಅನುಮತಿಯನ್ನೂ ಪಡೆದುಕೊಂಡರು."

ಅಧಿರಥನು ದೀರ್ಘವಾದ ನಿಟ್ಟುಸಿರನ್ನು ಬಿಟ್ಟು ನುಡಿದ.

"ದೈವ ! ಅದರ ವಿನಃ ಬೇರಾವುದೂ ಇಲ್ಲ. ಕೆಲವೇ ದಿನಗಳ ಹಿಂದೆ ಯಾರು ರಾಜಸೂಯ ಯಾಗ ಮಾಡಿದರೊ, ಆ ಮಹಾ ಪರಾಕ್ರಮಿಗಳಾದ ಪಾಂಡವರು, ದ್ಯೂತದಲ್ಲಿ ಎಲ್ಲವನ್ನೂ ಕಳೆದುಕೊಳ್ಳುವದೆಂದರೇನು ! ವನವಾಸಕ್ಕೆ ಹೋಗುವದೆಂದರೇನು !"

"ಗಂಡಸರು ಸಹಿಸಿಕೊಳ್ಳಬಹುದು. ಆದರೆ ಪಾಪ ಆ ರಾಜಕನ್ಯೆ !" ರಾಧಾತಾಯಿಯ ಕಂಠ ಭಾರವಾಯಿತು, ಕಣ್ಣುಗಳು ಹಸಿಗೂಡಿದವು.

ಕರ್ಣನು ಕೆಮ್ಮಿದುದರಿಂದ ಎಲ್ಲರ ಗಮನವು ಅವನತ್ತ ಹೊರಳಿತು, ಅವನು ಮುಂದೆ ಬಂದಾಗ ಅಧಿರಥನು ಕೇಳಿದ.

"ಹೊರಕ್ಕೆ ಹೋಗುವಿಯಾ ?"

"ಹೌದು ರಾಜಭವನದ ಕಡೆಗೆ!"

"ಅವಶ್ಯವಾಗಿ ಹೋಗು, ಆದರೆ ಬರುವಾಗ ನನ್ನದೊಂದು ಕೆಲಸ ಮಾಡು."

"ಏನದು ?"

"ನೀನು ಮರಳಿ ಬರುವಾಗ ಆ ದಾಳಗಳನ್ನು ತೆಗೆದುಕೊಂಡು ಬರುವಿಯಾ ? ನಾನು ಅವುಗಳ ದರ್ಶನ ಪಡೆಯಬೇಕಾಗಿದೆ."

"ತಂದೇ."

"ರಾಧೇಯಾ, ಅವುಗಳ ಯೋಗ್ಯತೆ ಭಗವಂತನಿಗಿಂತ ಮಿಗಿಲಾದದ್ದು. ಇನ್ನು ಈ ಭೂಮಿಯ ಮೇಲಿರುವ ಪರಾಕ್ರಮವು ಆ ದಾಳಗಳಷ್ಟೇ ಉಳಿದುಕೊಂಡಿದೆ."

"ತಂದೇ."

"ಕರ್ಣ, ನೀನು ನನ್ನನ್ನು ಈ ರೀತಿಯಾಗಿ ಸಂಬೋಧಿಸಬೇಡ. ನೀನು ನದಿಯ ಪ್ರವಾಹದಲ್ಲಿ ನನಗೆ ದೊರೆತವನು. ಈಶ್ವರ ಪ್ರಸಾದವೆಂದು ಭಾವಿಸಿ ನಿನ್ನನ್ನು ಮನೆಗೆ ತಂದೆ. ಪುತ್ರಹೀನರಾಗಿದ್ದ ನಮಗೆ ನಿನ್ನ ಪಾಲನೆ ಯಿಂದಾಗಿ ಜೀವನವು ಸಾಫಲ್ಯವೆಂದೆನಿಸುವಂತಾಯಿತು. ನೀನು ಬಂದೆ. ಅನಂತರ ಈ ದ್ಯುಮನು ಹುಟ್ಟಿದ. ನಿನ್ನ ಗುಣಗಳಿಂದ ನಮ್ಮ ಕುಲ ಉದ್ಧಾರವಾದಂತೆನಿಸತೊಡಗಿತು. ಆದರೆ ಇಂದು ಅದೆಲ್ಲ ಸುಳ್ಳು ಎಂದೆನಿಸು ವಂತಾಯಿತು ಕರ್ಣಾ, ನಿನ್ನ ಈ ಕೃತ್ಯದಿಂದಾಗಿ ನಾನು ಯಾರಿಗೂ ಮುಖ ತೋರಿಸದಂತಾಗಿದೆ."

"ನನ್ನ ಕೃತ್ಯ! ನಾನೇನು ಮಾಡಿದೆ?"

"ಏನು ಮಾಡಿದೆ ಎಂದು ಕೇಳುವೆಯಾ? ಇಂದು ಸಮಗ್ರಹಸ್ತಿನಾ ಪುರವೇ ಅದನ್ನು ಮಾತನಾಡಿಕೊಳ್ಳುತ್ತಿದೆ. ಧೈರ್ಯವಿದ್ದರೆ ಅದನ್ನೂ ಕೇಳಿ ದೃಢಪಡಿಸಿಕೊಂಡೇ ಮುಂದೆ ಹೋಗು. ನಿನ್ನ ಸಹಕಾರದಿಂದಲೇ ಆ ದ್ಯೂತವು ಏರ್ಪಟ್ಟಿತು. ಆ ದ್ಯೂತ ನಡೆಯಲು ನೀನೇ ಕಾರಣ ಎಂದು ಎಲ್ಲರೂ ಮಾತ ನಾಡಿಕೊಳ್ಳುತ್ತಿದ್ದಾರೆ."

"ಸುಳ್ಳು ತಾತಾ, ಸಂಪೂರ್ಣ ಸುಳ್ಳು, ನಾನು ಯುದ್ಧವನ್ನೇರ್ಪಡಿಸು ವಂತೆ ಸಲಹೆಯನ್ನಿತ್ತಿದ್ದೆ. ಆ ದ್ಯೂತದಲ್ಲಿ ನಾನು ಸ್ವಲ್ಪವೂ ಭಾಗಿಯಾ ಗಿರಲಿಲ್ಲ."

"ಆದರೆ ಹಸ್ತಿನಾವತಿಯ ಪ್ರಜೆಗಳು ಹಾಗೆ ತಿಳಿದುಕೊಂಡಿಲ್ಲ."

"ಅದಕ್ಕೆ ನಾನೇನು ಮಾಡಲಿ?"

"ಜನರ ಮಾತಿನಲ್ಲಿ ಸುಳ್ಳೇನೂ ಇಲ್ಲ. ನೀನು ಬೇಡವೆಂದು ಹಠ ಹಿಡಿ ದಿದ್ದರೆ ಯುವರಾಜರು ಈ ದ್ಯೂತವನ್ನೇರ್ಪಡಿಸುತ್ತಿರಲಿಲ್ಲ."

"ಯುವರಾಜರು ಇಷ್ಟು ಆಜ್ಞಾಧಾರಕರಿರುವರೇ?" ಕರ್ಣನು ನಕ್ಕು ನುಡಿದ.

"ರಾಧೇಯಾ, ನಾನು ನಿನ್ನನ್ನು ತಿಳಿದುಕೊಂಡಷ್ಟು ಆ ಯುವರಾಜನೂ ತಿಳಿದುಕೊಂಡಿರಲಾರ. ನಿನ್ನ ವಿರೋಧವನ್ನು ಸಹಿಸುವ ಶಕ್ತಿ ಆ ಯುವ ರಾಜನಲ್ಲಿ ಇಲ್ಲವೇ ಇಲ್ಲ; ಈ ಮಾತು ನನಗೆ ಚೆನ್ನಾಗಿ ಗೊತ್ತು. ನಡೆದು

ದನ್ನೆಲ್ಲ ನೀನು ತೆರೆದ ಕಣ್ಣುಗಳಿಂದ ನೋಡಿದೆ. ಹಾಗೂ ಈ ಎಲ್ಲ ಘಟನೆಗಳೂ ನಡೆಯುವಂತೆ ಮಾಡಿದೆ, ಅದೇ ನಿನ್ನ ಅಪರಾಧ. ಕರ್ಣ ಜಗತ್ತಿಗೆ ಮೋಸಮಾಡಬಹುದು. ಆದರೆ ಅಂತರಾತ್ಮಕ್ಕೆ........ಅದು ಎಂದಿಗೂ ಸಾಧ್ಯವಾಗದ ಮಾತು. ಎಂಥ ಮಧ್ಯಪಾನದಿಂದಲೂ...."

"ನಾನು ಬರುತ್ತೇನೆ."

ಕರ್ಣನು ಹೊರಬಂದಾಗ ರಥವು ಸಿದ್ಧವಾಗಿತ್ತು. ರಥಾರೂಢನಾದುದನ್ನು ಕಂಡ ದ್ಯುಮನು,

"ಅಣ್ಣಾ ನಾನು ಬರಬಹುದೇ ?"

"ಬೇಡ."

ಕುದುರೆಯ ಲಗಾಮುಗಳನ್ನು ಕೈಗೆತ್ತಿಕೊಂಡಾಗ ಕರ್ಣನ ರಥವು ಅರಮನೆಯತ್ತ ಧಾವಿಸಲಾರಂಭಿಸಿತು.

ಅರಮನೆಯನ್ನು ತಲುಪಿದಾಗ ದುರ್ಯೋಧನನು ತೋರಣ ಸ್ಫಟಿಕ ಗೃಹದಲ್ಲಿರುವುದಾಗಿ ತಿಳಿದು ಬಂದಿತು. ಕರ್ಣನು ತನ್ನ ರಥವನ್ನು ಸಭಾಗೃಹದತ್ತ ಓಡಿಸಿದ.

"ಯುವರಾಜ."

"ಒಳಗಿದ್ದಾರೆ."

"ಅವರೊಂದಿಗೆ ಬೇರೆ ಯಾರಾದರೂ ಇದ್ದಾರೆಯೇ ?"

"ಶಕುನಿ ಮಹಾರಾಜ !"

"ಮತ್ತೆ."

"ಬೇರೆ ಯಾರೂ ಇಲ್ಲ."

ಅಂಥ ಪರಿಸ್ಥಿತಿಯಲ್ಲಿಯೂ ಸಹ ಕರ್ಣನ ಮುಖದ ಮೇಲೆ ನಗು ಮೂಡಿತು. ಆತನು ಅವಸರದಲ್ಲಿ ಮೆಟ್ಟಲುಗಳನ್ನು ಹತ್ತಿ ಹೆಬ್ಬಾಗಿಲಿನಲ್ಲಿ ಬಂದು ನಿಂತ. ದೀಪಸ್ತಂಭಗಳ ಬೆಳಕಿನಿಂದ ಇಡೀ ಸಭಾಗೃಹವು ಪ್ರಕಾಶಮಯವಾಗಿತ್ತು. ಶಕುನಿ ಹಾಗೂ ದುರ್ಯೋಧನರಿಬ್ಬರೂ ಸುರಾಪಾನ ಮಾಡುತ್ತ ದ್ಯೂತದಲ್ಲಿ ನಿರತರಾಗಿದ್ದರು. ದುರ್ಯೋಧನನು ಕೈಯಲ್ಲಿದ್ದ ದಾಳಗಳನ್ನು ಹಾಕಿ ಒಂದೇ ಧ್ವನಿಯಲ್ಲಿ ಕೂಗಿಕೊಂಡ.

"ಮಾಮಾ ನಾನು ಗೆದ್ದೆ."

"ಹೌದು, ಯುವರಾಜ ನಾನು ಒಪ್ಪಿಕೊಳ್ಳುವೆ. ವೈಢೂರ್ಯದ ನನ್ನ ಈ ಉಂಗುರವನ್ನು ಸೋತಿರುವೆ" ಎಂದು ಶಕುನಿಯು ನುಡಿದ. ಆಗ ದುರ್ಯೋಧನನಿಗೆ ತುಂಬ ಸಮಾಧಾನವಾಯಿತು. ಮದ್ಯದ ಪಾತ್ರೆಯನ್ನು ಬರಿದು ಮಾಡಿದ. ಹಿಂದೆ ನಿಂತ ದಾಸಿಯು ಆ ಪಾತ್ರೆಯನ್ನು ತುಂಬಿದಳು. ಆನಂದದ ಭರದಲ್ಲಿ ದುರ್ಯೋಧನನು ಹೇಳಿದ.

"ಆ ಮೂರ್ಖ ಯುಧಿಷ್ಠಿರನು ಹೇಗೆ ಸೋತನೋ ತಿಳಿಯದು."

"ಯುವರಾಜ, ಜೂಜಿಗೆ ಕೈಗುಣದ ಆವಶ್ಯಕತೆಯೂ ಇದೆ. ಆ ಗುಣವು ನಿನ್ನ ಕೈಯಲ್ಲಿದೆ. ಹ್ಞಂ, ದಾಳವನ್ನೆತ್ತು, ಇಂದಿನ ಗೆಲುವು ನಿನ್ನದೇ ಆಗಿವೆ"

"ಮಾಮಾ ಪಣವೇನು ?"

ತನ್ನ ಕಂಠಾಭರಣವನ್ನು ಮುಟ್ಟಿಕೊಂಡ ಶಕುನಿಯು,

"ನನ್ನ ಅಮೂಲ್ಯವಾದ ಈ ಹಾರವನ್ನು ಪಣಕ್ಕಿಡುವೆ. ಯುವರಾಜ ಇದಕ್ಕೆ ಪ್ರತಿಯಾಗಿ ನೀನೇನಿಡುವೆ ?"

ಅವರಿಬ್ಬರನ್ನೂ ಸಮೀಪಿಸುತ್ತ ಕರ್ಣನು ಹೇಳಿದ. "ಯುವರಾಜರ ಕಂಠದಲ್ಲಿರುವ ಹಾರ."

ದುರ್ಯೋಧನ ಹಾಗೂ ಶಕುನಿ ಇಬ್ಬರೂ ಒಂದೇ ಸಲ ಕರ್ಣನತ್ತ ನೋಡಿದರು. ಧಡಪಡಿಸುತ್ತ ಮೇಲೆದ್ದ ದುರ್ಯೋಧನನು,

"ಬಾ ಗೆಳೆಯಾ, ನಾನು ಇಂದು ಆನಂದ ಸಾಗರದಲ್ಲಿರುವೆ. ಆ ಪಾಂಡವರು ಹನ್ನೆರೆಡು ವರುಷಗಳ ವನವಾಸ, ಒಂದು ವರುಷ ಅಜ್ಞಾತ ವಾಸಕ್ಕೆ ಹೋಗಿದ್ದಾರೆ. ನನ್ನ ಈ ಮಾವನಿಂದಲೇ ಅದೆಲ್ಲ ಸಾಧ್ಯ ವಾಯಿತು."

"ಯುವರಾಜ, ಎರಡನೆಯ ಸಲದ ದ್ಯೂತವು ಹೇಗೆ ನಡೆಯಿತು ? ನನಗೆ ಅದನ್ನೇಕೆ ತಿಳಿಸಲಿಲ್ಲ ?"

ದುರ್ಯೋಧನನು ನಗಲಾರಂಭಿಸಿದ. ಸುರೆಯ ಪ್ರಭಾವ ಸಾಕಷ್ಟು ಪರಿಣಾಮವನ್ನುಂಟು ಮಾಡಿತ್ತು. ಆತನು ಮತ್ತಿನಲ್ಲಿಯೇ ಮಾತನಾಡಿದ.

"ಅದು ಗುಪ್ತವಾಗಿದೆ. ಆ ಎರಡನೆ ಸಲದ ದ್ಯೂತದಲ್ಲಿ ನೀನಿರಬಾರ ದೆಂದು ಈ ಮಾವನೇ ಹೇಳಿದ. ನೀನು ವಿರೋಧಿಸುತ್ತಿದ್ದೆಯಲ್ಲವೇ ?"

'ಹೌದು' ಎನ್ನುವಂತೆ ಕರ್ಣನು ತಲೆಯನ್ನಲ್ಲಾಡಿಸಿದ.

"ಸರಿಯಾಗಿದೆ, ಮಾವನ ಅಂದಾಜು ಎಂದೂ ಸುಳ್ಳಾಗಲಾರದು. ಆ ಪಾಂಡವರು ಹೊರಟುಹೋದರು. ಅನಂತರ ನಾನೂ ಶಕುನಿಮಾವಾ ಇಬ್ಬರೂ ಕೂಡಿಕೊಂಡು ಧೃತರಾಷ್ಟ್ರ ಮಹಾರಾಜರಲ್ಲಿ ಹೋದೆವು. ತಂದೆಯವರು ನಮಗೆ ಮತ್ತೆ ದ್ಯೂತದ ಸಮ್ಮತಿಯನ್ನಿತ್ತರು. ಪಾಂಡವರನ್ನು ಮತ್ತೆ ಕರೆಸಿದೆವು. ಆ ಮೂರ್ಖ ಯುಧಿಷ್ಠಿರನು ನಮ್ಮ ಬೇಡಿಕೆಯನ್ನೊಪ್ಪಿಕೊಂಡ. ಮುಂದಿನ ಕೆಲಸವೆಲ್ಲ ಅವಸರದಲ್ಲಿಯೇ ಮುಗಿಯಿತು. ಶಕುನೀಮಾವ ಒಂದೇ ಪಣವನ್ನು ಮುಂದಿಟ್ಟಿದ್ದ. ಅದಕ್ಕೆ ಪಾಂಡವರು ಸಂಪೂರ್ಣವಾಗಿ ಸೋತುಬಿಟ್ಟರು........"

ದುರ್ಯೋಧನನು ಕರ್ಣನ ಹೆಗಲ ಮೇಲೆ ಕೈಯ್ಯನ್ನಿಟ್ಟು ದ್ಯೂತಪಟದತ್ತ ಅವನನ್ನು ಕರೆದುಕೊಂಡು ಬಂದ, ಆ ಪಟವನ್ನು ತೋರಿಸುತ್ತ ಆತನಿಗೆ ಹೇಳಿದ,

"ಕರ್ಣಾ, ಇಂದು ಮಾವನೊಂದಿಗೆ ನಾನು ದ್ಯೂತವಾಡಿದೆ. ಆದರೆ ಸೋಲಲಿಲ್ಲ, ಮಾವನೇ ಸೋತಿದ್ದಾನೆ. ನಾನು ಗೆದ್ದಿದ್ದೇನೆ."

"ಯುವರಾಜರು ಎಂದೂ ಸೋಲುವುದಿಲ್ಲ" ಕರ್ಣನು ಉತ್ತರಕೊಟ್ಟ.

"ನಿನಗೆ ಸುಳ್ಳು ಎಂದೆನಿಸುತ್ತಿದ್ದರೆ ಬೇಕಾದರೆ ಮಾವನನ್ನೇ ಕೇಳು"

"ಅಂಗರಾಜ, ಯುವರಾಜರು ಸತ್ಯವನ್ನೇ ಹೇಳುತ್ತಿದ್ದಾರೆ. ಇಂದು ಈ ದಾಳಗಳು ಅವರ ಕೈವಶವಾಗಿವೆ."

"ವ್ಹಾ, ಒಂದೇ ದಿನದಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಯುವರಾಜ, ನೀವು ಹೀಗೆಯೇ ಆಡುತ್ತ ಹೋದರೆ ಹನ್ನೆರಡು ವರುಷಗಳಲ್ಲಿ ಕೃತಹಸ್ತರೆಂದೂ, ಅತಿದೇವಿ ಎಂದೂ ನೀವೂ ಮಾವನವರಂತೆ ಖ್ಯಾತರಾಗುವಿರಿ"

ದುರ್ಯೋಧನನು ನಗುತ್ತಲಿದ್ದರೂ ಕರ್ಣನಿಗೆ ಅದಾವುದರ ಗಮನವೂ ಇರಲಿಲ್ಲ. ಆತನು,

"ಯುವರಾಜ, ಇಂದು ಒಂದೇ ಒಂದು ಕಡಿಮೆಯಾಗಿದೆ" ಎಂದ.

"ಯಾವದು ?"

"ನಿಮ್ಮ ರಾಜ್ಯದಲ್ಲಿ ದ್ಯೂತ ಗೃಹವಂತೂ ಇದ್ದೇ ಇದೆ. ಇನ್ನು ಮೇಲೆ ಮಧ್ಯಶಾಲೆಯನ್ನಾರಂಭಿಸುವುದು. ಹಾಗೂ ಆ ಮದ್ಯದಂಗಡಿಗಳಿಗೆ ಸರಿಯಾದ ರೀತಿಯಲ್ಲಿ ಮದ್ಯವು ಪೂರೈಸುವಂತೆ ನೋಡಿಕೊಳ್ಳುವದು."

ದುರ್ಯೋಧನನು ನೆಟ್ಟದೃಷ್ಟಿಯಿಂದ ಒಂದು ಸಲ ಕರ್ಣನನ್ನು ನೋಡಿದ.

"ತಮಾಷೆ ಮಾಡುತ್ತಿರುವೆಯಾ ?"

"ಯುವರಾಜರೊಂದಿಗೆ ತಮಾಷೆಯೇ ? ಇನ್ನು ಹೆದರಬೇಕಾದ ಆವಶ್ಯಕತೆಯಾದರೂ ಏನಿದೆ ? ಹನ್ನೆರಡು ವರುಷಗಳ ಕಾಲ ನಾವು ದ್ಯೂತದಲ್ಲಿ ಪ್ರವೀಣರಾಗಬಹುದಲ್ಲವೆ ? ಒಂದು ವೇಳೆ ಪಾಂಡವರು ಮರಳಿ ಬಂದಲ್ಲಿ ಅವರನ್ನು ಹನ್ನೆರಡು ವರ್ಷಗಳ ಕಾಲ ವನವಾಸಕ್ಕೆ ಕಳಿಸಲು ಸುಲಭವಾಗುವುದಲ್ಲವೆ ?" ಸಮೀಪದಲ್ಲಿದ್ದ ದಾಸಿಯನ್ನು ಕರೆದು "ಇನ್ನು ಮೇಲೆ ಯುವರಾಜರ ಪಾನಪಾತ್ರೆಯು ಬರಿದಾಗಿರ ಕೂಡದು. ಅದನ್ನು ಯಾವಾಗಲೂ ತುಂಬುತ್ತಿರುವ ಕೆಲಸ ನಿನ್ನದು ತಿಳಿಯಿತೆ ?"

ದಾಸಿಯು ಮುಂದೆ ಬಂದಳು. ಪಾನಪಾತ್ರೆಯನ್ನು ತುಂಬಿ ಅದನ್ನು ದುರ್ಯೋಧನನ ಕೈಗಿತ್ತಳು. ಸಂತಾಪಗೊಂಡ ದುರ್ಯೋಧನನು ಅದನ್ನು ದೂರ ಬಿಸಾಡಿದ.

"ಮಿತ್ರಾ, ಸಮಾಧಾನದ ಒಂದು ದಿನವನ್ನಾದರೂ ಅನುಭವಿಸುವ ಭಾಗ್ಯವನ್ನು ದೈವವು ನನ್ನ ಹಣೆಯಲ್ಲಿ ಬರೆದಿಲ್ಲವೆ !"

"ಯುವರಾಜ, ನಾಳೆಯಿಂದ ನಿಮಗೆ ಯಾವ ತೊಂದರೆಯೂ ಆಗಲಾರದು"

"ನಾಳೆ ಏಕೆ !"

"ನಾನು ಚಂಪಾನಗರಕ್ಕೆ ತೆರಳು ಹೋಗುವೆ. ಆದುದರಿಂದಲೇ ತಮ್ಮ ಅಪ್ಪಣೆಯನ್ನು ಪಡೆದುಕೊಂಡು ಹೋಗಲು ಬಂದಿದ್ದೇನೆ."

"ಬೇಡ ಮಿತ್ರಾ, ನನ್ನನ್ನು ಬಿಟ್ಟು ಹೋಗಬೇಡ. ನೀನು ನನ್ನನ್ನು ಬಿಟ್ಟು ಎಲ್ಲಿಯೂ ಹೋಗಕೂಡದು."

"ಯಾಕೆ ? ಪಾಂಡವರು ಪುನಃ ಬರಬಹುದು ಎಂಬ ಭೀತಿಯೇನಾದರೂ ಇದೆಯೇ ?"

"ಭೀತಿ, ಆ ಒಂದು ಶಬ್ದವು ಮಾತ್ರ ಈ ದುರ್ಯೋಧನನಿಗೆ ಅರ್ಥವಾಗಿಲ್ಲ."

"ಅಂಗರಾಜ, ಇಷ್ಟು ಅಶುಭ ಚಿಂತನೆಯನ್ನು ಮಾಡಬೇಡ. ನೈ

ಮೇಲಿನ ಬಟ್ಟೆಯೊಂದಿಗೆ ಪಾಂಡವರು ನಡೆಯುತ್ತ ಹೋದುದನ್ನು ನೀನು ನೋಡಿಲ್ಲವೆಂದು ತೋರುತ್ತದೆ" ಶಕುನಿಯು ಉತ್ತರವನ್ನಿತ್ತ.

"ಅವರ ಬೆನ್ನು ಹತ್ತಿ ರಾಜಧಾನಿಯ ಗಡಿಯಂಚಿನವರೆಗೂ ಹಸ್ತಿನಾ ಪುರದ ಪ್ರಜೆಗಳು ಕಣ್ಣೀರಿಡುತ್ತ ಹೋಗಿದ್ದರೆಂಬುದನ್ನು ನೀವು ನೋಡಿಲ್ಲ ವೆಂದೆನಿಸುತ್ತದೆ" ಕರ್ಣನು ಖಾರವಾಗಿ ನುಡಿದ.

"ಇಂದು ಅಳುವವರು ನಾಳೆ ನಗುತ್ತಾರೆ"

"ಏನಂದೆ ?"

"ಶಕುನೀ ಮಹಾರಾಜರೇ ಜೂಜನ್ನು ಒಂದೇ ಸಲ ಗೆಲ್ಲಬಹುದು, ಹನೆರ್ಡು ವರುಷಗಳು ಹಾಂ ಹಾಂ ಅನ್ನುವುದರೊಳಗೆ ಕಳೆದುಹೋಗುತ್ತವೆ. ಪಾಂಡವರು ಹಿಂದಿರುಗಿ ಬಂದಾಗ ಇಂದು ಅಳುತ್ತಿದ್ದ ಇದೇ ಜನರು ಅವರನ್ನು ಹೆಗಲ ಮೇಲೆ ಕೂಡಿಸಿಕೊಳ್ಳುತ್ತಾರೆ. ಆ ಕಾಲ ಬರುವುದರೊಳಗಾಗಿ ನಿಮ್ಮ ಈ ಜೂಜು ಮದಿರೆಗಳಿಂದ ಜನ ತ್ರಸ್ತರಾಗಿ ಹೋಗಿರುತ್ತಾರೆ."

"ಅಂಗರಾಜಾ !" ಸಂತಾಪದಿಂದ ಕೂಗಿಕೊಂಡ ಶಕುನಿ.

"ಮಾಮಾ, ಪಾಂಡವರನ್ನು ವನವಾಸಕ್ಕೆ ಕಳುಹಿಸಿದ ಮಾತ್ರಕ್ಕೆ ನೀವು ಸಂಕಟದಿಂದ ಪಾರಾದಂತಾಗಲಿಲ್ಲ. ನಿಮಗೆ ಅದರ ನಿಜವಾದ ಅರಿವಿದ್ದಲ್ಲಿ ಅವರ ವನವಾಸದ ಕಾಲ ಪೂರೈಸುವ ಮೊದಲೇ ಜನಮನದಲ್ಲಿ ಪಾಂಡವರು ಪಡೆದುಕೊಂಡಿದ್ದ ಸಿಂಹಾಸನವನ್ನು ನೀವು ನಿಮ್ಮದನ್ನಾಗಿ ಮಾಡಿಕೊಳ್ಳಿರಿ."

"ನಾವು ಅದಕ್ಕಾಗಿ ಪ್ರಯತ್ನಮಾಡೋಣ" ದುರ್ಯೋಧನನು ಕರ್ಣನಿಗೆ ಸಮಾಧಾನ ಮಾಡುವ ರೀತಿಯಲ್ಲಿ ಹೇಳಿದ.

"ಯಾವ ಬಲದಿಂದ ? ಈ ದಾಳಗಳ ಬಲದಿಂದ ಮಾಡುವಿರಾ ? ಆ ಕಲೆಯು ಶಕುನಿ ಮಹಾರಾಜರಿಗೂ ಅವಗತವಾಗಿಲ್ಲ. ಯುವರಾಜ, ಸ್ವಂತದ ವ್ಯಕ್ತಿತ್ವವನ್ನು ಈ ದಾಳ, ಹಾಗೂ ಈ ಪಟಗಳಲ್ಲಿ ಮರೆತುಬಿಡಬೇಡಿರಿ. ತುಂಬಿದ ಸ್ವಯಂವರದಲ್ಲಿ ರಾಜಕನ್ಯೆಯನ್ನು ಹರಣ ಮಾಡುವ ಧೈರ್ಯವು ಯಾರಿಗಿದೆಯೋ, ಯಾರ ಕೈಯೊಳಗಿನ ಗದೆ ಬಲರಾಮನ ಕೃಪೆಯಿಂದ ಅಜಿಂಕ್ಯ ಎಂದೆನಿಸಿದೆಯೋ, ಅಂಥ ಕೌರವ ರಾಜ್ಯದ ಯುವರಾಜನೆಂದು ಕರೆಸಿಕೊಳ್ಳುವವರು ದ್ಯೂತಪಟದಲ್ಲಿ ಸಿಕ್ಕಿಹಾಕಿಕೊಂಡು ಕೂಡವದೆಂದರೆ ಇದಕ್ಕಿಂತ ಬೇರಾವದುರ್ದೈವವಿದೆ, ಎಂಬ ಮಾತನ್ನು ನೀವೇ ಯೋಚಿಸಿರಿ.

ಶಕುನಿಯ ಕೈಚಳಕದಿಂದ ರಾಜ್ಯಸೂತ್ರಗಳನ್ನು ಸಂಬಾಳಿಸಲು ಸಾಧ್ಯವೇ? ರಣರಂಗದ ಜೂಜಾಟವನ್ನು ನೀವು ಹಾಸಿದ ಈ ದ್ಯೂತ ಪಟದಿಂದ ನಿಶ್ಚಯವಾಗಿಯೂ ನಿರ್ಧರಿಸಲಾಗದು."

"ನಿಲ್ಲಿಸು ಅಂಗರಾಜಾ, ಇನ್ನು ಮುಂದೆ ಅಪಮಾನದ ಒಂದು ಶಬ್ದವನ್ನೂ ನಾನು ಸಹಿಸಲಾರೆ. ಯಾರಿಂದ ನೀವು ಈ ದಿನವನ್ನು ಕಂಡಿರುವಿರೋ ಅಂಥವರಿಗಾಗಿ ಆಡುವ ಕೃತಜ್ಞತೆಯ ಮಾತುಗಳೇ ಇವು? ಯುವರಾಜ, ಇಂದೇ ನಿರ್ಧಾರವಾಗಲಿ, ನಿಮಗೆ ಈ ರಾಧೇಯನು ಬೇಕೋ ಅಥವಾ ನಾನು ಬೇಕೋ?"

ದುರ್ಯೋಧನನು ಇಬ್ಬರನ್ನೂ ನೋಡುತ್ತಲಿದ್ದ, ಏನು ಹೇಳಬೇಕೆಂಬುದೇ ತೋಚಲಿಲ್ಲ. ಆಗ ಕರ್ಣನೇ ಮುಂದೆ ಬಂದು ಹೇಳಿದ.

"ಯುವರಾಜ, ಶಕುನೀ ಮಹಾರಾಜರಲ್ಲಿ ಕ್ಷಮೆ ಕೇಳುತ್ತೇನೆ."

ಕರ್ಣನ ಮಾತುಗಳಿಂದ ಶಕುನಿಗೆ ಸಮಾಧಾನವೆನಿಸಿತು. ಆಗ ಕರ್ಣನು ದುರ್ಯೋಧನನನ್ನು ವಿಚಾರಿಸಿದ.

"ಯುವರಾಜ, ನಿಮ್ಮ ಖಡ್ಗವೆಲ್ಲಿದೆ?"

"ರಾತ್ರಿಯ ಹೊತ್ತು ದ್ಯೂತಗೃಹದಲ್ಲಿ ಅದರಲ್ಲಿಯೂ ಸುಖೋಪಭೋಗದಲ್ಲಿ ನಿರತರಾದಾಗ ಯಾರಾದರೂ ತಮ್ಮ ಸಂಗಡ ಖಡ್ಗವನ್ನಿಡುತ್ತಾರೆಯೇ?"

"ಹಾಗಾದರೆ ಯುವರಾಜ, ನಿಮ್ಮ ಕಿರೀಟ!"

"ಇದೇನು ರಾಜಸಭೆಯೆ? ಕಿರೀಟವನ್ನಿಟ್ಟು ಕೊಳ್ಳಲು?"

"ಕೊನೆಯ ಪಕ್ಷ ತಮ್ಮ ಎದೆಯ ಮೇಲೆ ಕವಚವಾದರೂ ಇರಬಹುದಿತ್ತು."

ಕರ್ಣನ ಮಾತುಗಳಿಂದ ದುರ್ಯೋಧನನಿಗೆ ನಗು ತಡೆಯಲಾಗಲಿಲ್ಲ.

"ಗೆಳೆಯಾ, ಮದ್ಯವು ಹೆಚ್ಚಾದಂತೆ ತೋರುವುದು. ಕವಚ ಧರಿಸುವುದು ರಣರಂಗದಲ್ಲಿ, ದ್ಯೂತ ಗೃಹದಲ್ಲಿ ಅದರ ಅವಶ್ಯಕತೆಯೇನು?"

"ಯುವರಾಜ, ನಾನೂ ಅದನ್ನೇ ಹೇಳಬೇಕಾಗಿದೆ. ಅಗತ್ಯಕ್ಕೆ ಸರಿಹೋಗುವಂತಹ ಶಸ್ತ್ರ, ಅಸ್ತ್ರ, ವಸ್ತ್ರಾದಿಗಳನ್ನು ಧಾರಣ ಮಾಡುವುದು

ನಿಯಮ. ರಣಾಂಗಣದಲ್ಲಿ ಶಸ್ತ್ರಾದಿಗಳು ಉಪಯೋಗಕ್ಕೆ ಬರುತ್ತವೆ ಎಂದು ಅವುಗಳನ್ನು ಧರಿಸಿ ಶಯ್ಯಾಗೃಹವನ್ನು ಪ್ರವೇಶ ಮಾಡುವುದಿಲ್ಲ. ಆ ಶಸ್ತ್ರಗಳನ್ನೆಲ್ಲ ಶೇಖರಿಸಿಡುವ ಶಸ್ತ್ರಾಗಾರದಲ್ಲಿಯೇ ಬಿಚ್ಚಿಡುತ್ತಾರೆ. ಯುವರಾಜ ಇನ್ನು ಹೆಚ್ಚು ಅವಕಾಶವಿಲ್ಲ, ಹನ್ನೆರಡು ವರುಷಗಳು ಚುಟಿಗೆ ಹೊಡೆಯುವುದರೊಳಗೆ ಕಳೆದು ಹೋಗುತ್ತವೆ. ಆದುದರಿಂದ ಮೊದಲು ಶಸ್ತ್ರಶಾಲೆ, ರಥಶಾಲೆ, ಗಜಶಾಲೆ ಮೊದಲಾದವುಗಳನ್ನು ಪೂರ್ವದ ಸ್ಥಿತಿಗೆ ತರಲು ಪ್ರಯತ್ನಿಸಿರಿ, ರಾಜ್ಯವು ಸುರಕ್ಷಿತವಾಗಿರಲಿ."

"ತುಂಬ ಯೋಗ್ಯವಾದ ಸಲಹೆಗಳನ್ನಿತ್ತಿರುವೆ" ಎಂದು ಹೇಳಿದ ದುರ್ಯೋಧನನು ಶಕುನಿಯತ್ತ ನೋಡಿ ದ್ಯೂತ ಪಟವನ್ನು ಬದಿಗೆ ಸರಿಸುತ್ತ "ಗೆಳೆಯಾ, ನಾನು ನಿನಗೆ ವಚನವನ್ನೀಯುವೆ. ಇನ್ನು ಮುಂದೆ ಈ ದಾಳಗಳನ್ನು ಎಂದೂ ಮುಟ್ಟುವುದಿಲ್ಲ, ಇವುಗಳ ಆಶ್ರಯವನ್ನು ಇನ್ನು ಮುಂದೆ ಎಂದೂ ಪಡೆಯಲಾರೆ."

ಸಂತಾಪಗೊಂಡ ಶಕುನಿಯು ತನ್ನ ಉತ್ತರೀಯವನ್ನು ಸರಿಮಾಡಿಕೊಳ್ಳುತ್ತ "ಯುವರಾಜ, ನಾನು ಬರುವೆ, ಹೋಗಲು ಅನುಮತಿಯನ್ನು ಕೊಡು" ಎಂದು ನುಡಿದ.

"ನಿಲ್ಲಿರಿ ಮಾವ, ನಾನು ಎಂದೆಂದಿಗೂ ನಿಮಗೆ ಕೃತಜ್ಞನಾಗಿರುವೆ. ಅಗತ್ಯವೆನಿಸಿದಾಗ ಕೌರವರ ಕೋಶಾಗಾರವು ನಿಮಗಾಗಿ ಸದಾ ತೆರೆದಿಟ್ಟಿರುತ್ತದೆ. ಯಾರೂ ನಿಮ್ಮನ್ನು ತಡೆಯಲಾರರು."

ಶಕುನಿಯೊಂದಿಗೆ ದುರ್ಯೋಧನ ಹಾಗೂ ಕರ್ಣ ಎಲ್ಲರೂ ಸ್ಫಟಿಕ ತೋರಣದಿಂದ ಹೊರಬಿದ್ದರು. ಯುವರಾಜನನ್ನು ರಾಜಗೃಹಕ್ಕೆ ತಲುಪಿಸಿ ಕರ್ಣನು ತನ್ನ ಬಿಡಾರಕ್ಕೆ ಮರಳಿದ; ಅರ್ಧ ರಾತ್ರಿಯು ಕಳೆದು ಹೋಗಿತ್ತು. ಅಧಿರಥನು ಕೈಯಲ್ಲಿ ದೀವಟಿಗೆಯನ್ನು ಹಿಡಿದು ಬಾಗಿಲು ತೆಗೆದ. ಕರ್ಣನು ಒಳಬಂದನಂತರ ಪುನಃ ಬಾಗಿಲನ್ನು ಮುಂದೆ ಮಾಡಿ ಮರಳಿದ. ಅದನ್ನು ಗಮನಿಸಿದ ಕರ್ಣನು,

"ತಂದೇ, ನೀವು ಇನ್ನೂ ಎಚ್ಚರವಾಗಿಯೇ ಇರುವಿರಲ್ಲ ?" ಎಂದ.

"ನಿನ್ನ ದಾರಿಯನ್ನೇ ಕಾಯುತ್ತಿದ್ದೆ." ಅಧಿರಥನ ಧ್ವನಿ ಕಂಪಿಸುತ್ತಿತ್ತು. "ವಸೂ, ನೀನು ಕೋಪಿಸಿಕೊಳ್ಳಲಿಲ್ಲವಷ್ಟೇ ? ನೀನು ಈ ಮನೆಗೆ

ಬಂದ ದಿನದಿಂದ ನಾನು ಎಂದೂ ಇಂಥ ಕಟು ನುಡಿಗಳನ್ನಾಡಿರಲಿಲ್ಲ, ಆದರೆ........"

ಆ ವೃದ್ಧ ಸಾಕು ತಂದೆಯ ಮಾತಿನಿಂದ ಕರ್ಣನು ಪುಲಕಿತನಾದ. ಅಧಿರಥನು ಕರ್ಣನಿಗೆ ವಸುಷೇಣ ಎಂದು ಹೆಸರಿಟ್ಟಿದ್ದ. ವಸೂ ಎಂಬ ಶಬ್ದ ಕಿವಿಗೆ ಬಿದ್ದೊಡನೆ ಅಂತಃಕರಣದಿಂದ ಕರ್ಣನು ತಂದೆಯನ್ನು ಬಿಗಿದಪ್ಪಿದ.

"ಇಲ್ಲ ತಂದೆ, ಮಕ್ಕಳ ಮೇಲೆ ಹಿರಿಯರಾದವರು ಆಗಾಗ್ಗೆ ಸಿಟ್ಟು ಮಾಡುತ್ತಿರಬೇಕು, ಅದರಿಂದಲೇ ಅವರ ಕಲ್ಯಾಣವಾಗುವುದು. ಇನ್ನು ನೀವು ವಿಶ್ರಾಂತಿಯನ್ನು ಪಡೆಯಿರಿ. ನಾಳೆಯ ದಿನದಿಂದ ನಿಮಗೆ ಹೆಚ್ಚು ಕೆಲಸದ ಭಾರ ಬೀಳುವದರಲ್ಲಿದೆ."

"ಹೆಚ್ಚು ಕೆಲಸದ ಭಾರ !!"

"ಹೌದು, ಇನ್ನು ಮೇಲೆ ರಥಶಾಲೆ ಹಾಗೂ ಶಸ್ತ್ರಾಗಾರಗಳಲ್ಲಿ ಕೆಲಸ ಕಾರ್ಯಗಳು ಆರಂಭವಾಗುವವು."

ಅಧಿರಥನ ಮುಖದ ಮೇಲೆ ಸಮಾಧಾನವು ಮೂಡಿತು. ಕರ್ಣನು ತನ್ನ ಶಯ್ಯಾಗೃಹದತ್ತ ಹೊರಟುಬಿಟ್ಟ.

## 27

ಕರ್ಣನ ವಿಚಾರ ಧಾರೆಯಲ್ಲಿ ಅಸತ್ಯವೆಂಬುದಿರಲಿಲ್ಲ. ಹಸ್ತಿನಾಪುರದ ಜೀವನವು ಉತ್ಸಾಹಭರಿತವಾಗಿತ್ತು. ರಥಶಾಲೆ, ಶಸ್ತ್ರಾಗಾರಗಳೆಲ್ಲ ತಮ್ಮ ತಮ್ಮ ಕೆಲಸ ಕಾರ್ಯದಲ್ಲಿ ನಿರತವಾಗಿದ್ದವು. ಹೊರಗೆ ವಲಸೆ ಹೋದ ಕೆಲಸಗಾರರೆಲ್ಲ ಈಗ ಪುನಃ ರಾಜಧಾನಿಗೆ ಮರಳಲಾರಂಭಿಸಿದರು. ಹೆಚ್ಚು ಕಾಲ ಬಾಳುವಂತಹ ಅತಿ ಗಟ್ಟಿಮುಟ್ಟಾದ ರಥಗಳನ್ನು ನಿರ್ಮಿಸುವ ಕಾರ್ಯವು ಭರದಿಂದ ಸಾಗಿತು. ಶಸ್ತ್ರಾಗಾರದಲ್ಲಿ ಖಡ್ಗ, ತೋಮರ, ತ್ರಿಶೂಲ, ವಜ್ರ, ಅಂಕುಶ, ಪರಶು, ಖಟ್ವಾಂಗ, ಶಕ್ತಿ, ಚಕ್ರ, ಪ್ರಯೋಗ ಚಕ್ರ, ಗದೆ, ಬಿಲ್ಲು ಬಾಣ ಮೊದಲಾದವುಗಳನ್ನೆಲ್ಲ ಅಸಂಖ್ಯಾತವಾಗಿ ಸಿದ್ಧಪಡಿಸಲು ಪ್ರಾರಂಭಿಸಿದರು. ಗಜಶಾಲೆ, ಅಶ್ವಶಾಲೆಗಳಲ್ಲಿ ಸುಲಕ್ಷಣಯುಕ್ತ ಪ್ರಾಣಿಗಳನ್ನಾರಿಸಿಕೊಂಡು ಬಂದು ಅವುಗಳಿಗೆ ಸರಿಯಾದ ತರಬೇತಿಯನ್ನೀಯಲಾರಂಭಿಸಿದರು.

ಶಸ್ತ್ರವಿದ್ಯಾ ಪಾರಂಗತರನ್ನಾಗಿ ಮಾಡಿ ಯೋಧರನ್ನು ತಯಾರಿಸಲು ಅಲ್ಲಲ್ಲಿ ಶಿಬಿರಗಳನ್ನು ಪ್ರಾರಂಭಿಸಲಾಯಿತು. ದುರ್ಯೋಧನ ಹಾಗೂ ಕರ್ಣರ ನೇತೃತ್ವದಲ್ಲಿ ರಾಜ್ಯದ ಹದಿನೆಂಟು ಉದ್ಯಮ ಸಂಸ್ಥೆಗಳೂ ಹಗಲಿರುಳೆನ್ನದೆ ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿದವು.

ವೃಷಸೇನನು ದುರ್ಯೋಧನನ ಮಗನೊಂದಿಗೆ ಆಶ್ರಮಕ್ಕೆ ಹೋಗುತ್ತಲಿದ್ದ. ಕರ್ಣ ದುರ್ಯೋಧನರಿಬ್ಬರೂ ರಾಜ್ಯದ ಕಾರುಭಾರುಗಳನ್ನು ನೋಡಿಕೊಳ್ಳುತ್ತಿದ್ದರು. ಉರುಳುತ್ತಿರುವ ಚಕ್ರದಂತೆ ವರುಷಗಳನ್ನು ಎಣಿಸುವುದರಲ್ಲಿಯೂ ಅವರು ತತ್ಪರರಾಗಿದ್ದರು.

ರಾಜಭವನದಲ್ಲಿ ಕುಳಿತುಕೊಂಡಿದ್ದ ಕರ್ಣನು ದುರ್ಯೋಧನನೊಂದಿಗೆ ರಾಜ್ಯದ ಆಗುಹೋಗುಗಳನ್ನು ಕುರಿತು ವಿಚಾರ ವಿನಿಮಯ ಮಾಡುವುದರಲ್ಲಿ ತಲ್ಲೀನನಾಗಿದ್ದ.

"ಮಿತ್ರಾ, ಸುವರ್ಣ ಕೆಲಸಗಾರರು ಆನೆಯ ಮೇಲೆ ಹಾಕುವ ಅಂಬಾರಿ ಹಾಗೂ ಯುದ್ಧ ಸಮಯದಲ್ಲಿ ಬಳಸುವ ಹೌದಃಗಳು ಇವೇ ಮೊದಲಾದವುಗಳನ್ನು ಸರಿಯಾಗಿ ಮಾಡಿಲ್ಲವೇ ?"

"ಯುವರಾಜ, ಕಲೆಯ ಅಭಿಮಾನಿಗಳಾದ ನಿಮ್ಮಂಥ ಯಜಮಾನರು ಸಿಕ್ಕಲ್ಲಿ ಕಲೆಗಾರರಿಗೆ ಹುರುಪು ತಾನೇ ತಾನಾಗಿ ಬರುತ್ತದೆ."

"ಕರ್ಣಾ, ಪ್ರತಿನಿತ್ಯದ ಈ ರಥಶಾಲೆ, ಗಜಶಾಲೆ, ಶಸ್ತ್ರಾಗಾರ ಇವುಗಳ ಮೇಲ್ವಿಚಾರಣೆಯುನ್ನು ನೋಡಿ ನೋಡಿ ಸಾಕಾಗಿ ಹೋಗಿದೆ !"

"ಯುವರಾಜ, ಈಗ ದಿನಗಳು ಚೆನ್ನಾಗಿವೆ. ಮನಸ್ಸಿನ ಬೇಸರವನ್ನು ಕಳೆದುಕೊಳ್ಳಲು ಮೃಗಯಾ ವಿಹಾರಕ್ಕಾಗಿ ಹೊರಟರೆ ದಣಿದ ಮನಸ್ಸಿಗೆ ಸ್ವಲ್ಪ ಹಿತವೆನಿಸಬಹುದು."

"ವಿಚಾರವು ತುಂಬ ಯೋಗ್ಯವಾಗಿದೆ. ನಿಜವಾಗಿಯೂ ನಾವು ಬೇಟೆಗೆ ಹೊರಟುಬಿಡೋಣ."

ಸೇವಕನು ಬಂದು ಶಕುನಿ ಮಹಾರಾಜರು ಆಗಮಿಸುತ್ತಲಿರುವುದಾಗಿ ತಿಳಿಸಿದ.

ಕರ್ಣ-ದುರ್ಯೋಧನರಿಬ್ಬರೂ ಶಕುನಿಯ ಸ್ವಾಗತಕ್ಕಾಗಿ ಎದ್ದು ನಿಂತರು.

ಕರ್ಣನತ್ತ ನೋಡಿ ನಕ್ಕ ಶಕುನಿಯು,

"ದುರ್ಯೋಧನಾ, ನಮಗೆ ಜೂಜಿನ ವಿನಃ ಬೇರೇನೂ ಬರುವುದಿಲ್ಲ. ಅಂದ ಮೇಲೆ ನಮ್ಮ ನಿಮ್ಮ ಭೆಟ್ಟಿಯಾಗುವದಾದರೂ ಹೇಗೆ ?"

ಶಕುನಿಯತ್ತ ಸಾಗಿ ಬಂದ ಕರ್ಣನು,

"ಮಹಾರಾಜ, ತಾವು ಈ ಕರ್ಣನ ಮೇಲೆ ಕೋಪಮಾಡಿಕೊಳ್ಳ ಬೇಡಿರಿ. ಏನೋ ಅಂದು ಸಿಟ್ಟಿನ ಭರದಲ್ಲಿ ನಾನು ಹಾಗೆ ಮಾತನಾಡಿದೆ. ಅದನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ದೊಡ್ಡವರು ಕ್ಷಮಿಸದೆ ಇನ್ನಾರು ಕ್ಷಮಿಸುತ್ತಾರೆ ?"

ಶಕುನಿಯು ಕರ್ಣನ ಹೆಗಲ ಮೇಲೆ ಕೈಯ್ಯನ್ನಿಟ್ಟು,

"ಇಲ್ಲ ಅಂಗರಾಜಾ, ನಾನು ಸಹಜವಾಗಿ ಚೇಷ್ಟೆ ಮಾಡಿದೆ. ನನ್ನ ಮನಸ್ಸಿನಲ್ಲಿ ಅಂಥ ಯಾವ ಭಾವನೆಯೂ ಇಲ್ಲ. ನೀವಿಬ್ಬರೂ ಪಣತೊಟ್ಟು ನಿಂತಿರುವುದರಿಂದಲೇ ಈ ಹಸ್ತಿನಾವತಿಗೆ ಪುನಃ ರಾಜಧಾನಿಯ ಕಳೆಯು ಬರುವಂತಾಗಿದೆ. ಪ್ರಜೆಗಳೆಲ್ಲ ನಿಮ್ಮನ್ನು ಹಾಡಿ ಹೊಗಳುತ್ತಲಿದ್ದಾರೆ. ಪಾಂಡವರ ನೆನಪು ಈಗ ಅವರ ಮನದಿಂದ ದೂರವಾಗಿದೆ."

"ಅಯ್ಯೋ ಪಾಪ ! ಪಾಂಡವರು !" ದುರ್ಯೋಧನನು ವ್ಯಂಗ್ಯವಾಗಿ ನಕ್ಕು "ಈಗ ಅವರು ಯಾವ ಗೊಂಡಾರಣ್ಯವನ್ನು ಸುತ್ತುತ್ತಿದ್ದಾರೆಯೋ !"

"ಯುವರಾಜಾ, ವನವಾಸದಲ್ಲಿರುವ ಪಾಂಡವರು ನಮ್ಮ ರಾಜ್ಯದ ಗಡಿ ಭಾಗವೆಂದೆನಿಸಿದ ದ್ವೈತವನದಲಿದ್ದುಕೊಂಡೇ ಈಗ ಕಾಲಕಳೆಯುತ್ತಲಿದ್ದಾರೆ" ಶಕುನಿಯು ಹೇಳಿದ.

"ದ್ವೈತವನ ? ಮಾವಾ ಈ ವಿಚಾರವು ನಿಮಗೆ ಹೇಗೆ ತಿಳಿಯಿತು ?" ಆಶ್ಚರ್ಯದಿಂದ ವಿಚಾರಿಸಿದ ಕರ್ಣ.

"ಅಂಗರಾಜಾ, ಇಂದು ನಾನು ಧೃತರಾಷ್ಟ್ರ ಮಹಾರಾಜರ ದರ್ಶನಕ್ಕೆಂದು ಹೋಗಿದ್ದೆ. ಅದೇ ಸಮಯಕ್ಕೆ ಸರಿಯಾಗಿ ಅಲ್ಲಿ ಓರ್ವ ಬ್ರಾಹ್ಮಣನು ಬಂದಿದ್ದ. ಅವನು ಪಾಂಡವರ ವೃತ್ತಾಂತವನ್ನೆಲ್ಲ ಮಹಾರಾಜರಲ್ಲಿ ಅರಿಕೆಮಾಡಿಕೊಂಡ. ಪಾಂಡವರ ವನವಾಸದ ಕಥೆಯನ್ನು ಕೇಳಿ ಮಹಾರಾಜರು ತುಂಬ ದುಃಖಗೊಂಡರು,"

"ಹಾಗಾದರೆ ತಂದೆಯವರು ಅವರನ್ನು ಬರಹೇಳಿದರೋ ಹೇಗೆ ?" ಆತುರದಿಂದ ದುರ್ಯೋಧನನು ಕೇಳಿದ.

"ಇಲ್ಲ, ಪ್ರತಿಯಾಗಿ ಅವರು, ಪಾಂಡವರಿಗೆ ಸಂಪತ್ತಿನಲ್ಲಿಯ ಅಲ್ಪಭಾಗವನ್ನೂ ಸಹ ಕೊಡುವುದಿಲ್ಲವೆಂದು ಹೇಳಿದರು."

"ನಿಜವೇ !" ಆನಂದದ ಅತಿರೇಕದಲ್ಲಿ ಉಚ್ಚರಿಸಿದ ದುರ್ಯೋಧನ.

"ಹೌದು ! ಆದರೂ ಪಾಂಡವರ ವಿಷಯವನ್ನು ತಿಳಿದುಕೊಂಡ ಮಹಾರಾಜರು ಚಿಂತಾಕ್ರಾಂತರಾಗಿದ್ದಾರೆ. ಪಾಂಡವರಿಂದ ಕೌರವ ಕುಲ ನಾಶವಾಗಬಹುದೆಂಬ ಭೀತಿ ಅವರಲ್ಲುಂಟಾಗಿದೆ."

"ತಂದೆಯವರ ಈ ಹೆದರಿಕೆ ಹುರುಳಿಲ್ಲದಂಥದು. ಅವರು ತಮ್ಮ ವನವಾಸವನ್ನು ಮುಗಿಸಿ ಬರುವದರೊಳಗಾಗಿ ಹಸ್ತಿನಾವತಿಯ ಸಾಮರ್ಥ್ಯವು ಹತ್ತುಪಟ್ಟು ಹೆಚ್ಚಾಗಿರುತ್ತದೆ."

"ಯುವರಾಜಾ, ನಾವು ಹೇಗಾದರೂ ಬೇಟೆಗೆ ಹೋಗಬೇಕೆಂದಿದ್ದೇವೆ. ಬೇರೆಕಡೆಗೆ ಹೋಗುವುದರ ಬದಲು ಆ ದ್ವೈತವನದತ್ತ ಹೊರಟರೆ........"

"ದ್ವೈತವನ!"

"ಅಲ್ಲಿ ಪಾಂಡವರಿದ್ದಾರೆ. ಸಕಲ ವೈಭವಗಳಿಂದ ನಾವು ಬೇಟೆಯಾಡಲು ಹೋಗೋಣ, ವನವಾಸದಲ್ಲಿದ್ದುಕೊಂಡು ಕಂದಮೂಲಾದಿಗಳನ್ನು ಸೇವಿಸುತ್ತ, ಮೃಗಚರ್ಮಾದಿಗಳನ್ನು ಧಾರಣಮಾಡಿಕೊಂಡು ಜೀವಿಸುತ್ತಿರುವ ಪಾಂಡವರು ನಮ್ಮ ಐಶ್ವರ್ಯಾದಿಗಳನ್ನು ಕಂಡು ಖಂಡಿತವಾಗಿಯೂ ವ್ಯಥೆ ಪಡುತ್ತಾರೆ. ಶತ್ರುಗಳು ತಳಮಳಿಸುತ್ತಿರುವುದನ್ನು ನೋಡುವುದೇ ಒಂದು ತರಹದ ಮೋಜಲ್ಲವೇ ?"

"ನಿಜ ನಿನ್ನ ಮಾತು ಸಂಪೂರ್ಣ ಸತ್ಯ, ಆದರೆ ತಂದೆಯವರು ಈ ವಿಚಾರಕ್ಕೆ ಒಪ್ಪಿಗೆಯನ್ನೀಯಬೇಕಲ್ಲ ?"

ಆಗ ಶಕುನಿಯು ಮಧ್ಯ ಪ್ರವೇಶಮಾಡಿದ.

"ಯುವರಾಜ, ನೀನು ಆ ವಿಚಾರದ ಚಿಂತೆಯನ್ನು ಬಿಟ್ಟುಬಿಡು, ದ್ವೈತ ವನದಲ್ಲಿಯೇ ನಮ್ಮ ಗೋಧನವಿದೆ. ಆದುದರಿಂದ ನಾವು ಸಾಮ್ರಾಟರ ಒಪ್ಪಿಗೆಯನ್ನು ಸುಲಭವಾಗಿ ಪಡೆಯಬಹುದು. ಆ ಕೆಲಸದ ಭಾರವನ್ನು ನಾನು ವಹಿಸಿಕೊಳ್ಳುವೆ."

ಮರುದಿನ ಕರ್ಣ, ದುರ್ಯೋಧನರು ಧೃತರಾಷ್ಟ್ರನನ್ನು ಭೇಟಿ ಮಾಡಿದರು. ಶಕುನಿಯು ಮೊದಲೇ ಉಪಸ್ಥಿತನಾಗಿದ್ದ. ಕುಶಲ ಪ್ರಶ್ನೆಗಳಾದ ನಂತರ, ಪೂರ್ವನಿಯೋಜಿತವಾದ ಯೋಜನೆಯಂತೆ 'ಸಂಗಮ' ಎಂಬ ಗೊಲ್ಲನೊಬ್ಬ ರಾಜದರ್ಶನಕ್ಕಾಗಿ ಬಂದು ಗೋಧನದ ವಿಚಾರಗಳನ್ನೆಲ್ಲ ಧೃತರಾಷ್ಟ್ರನಲ್ಲಿ ಅರಿಕೆ ಮಾಡಿಕೊಂಡ. ಶಕುನಿಯ ಸಂಕೇತವಾದೊಡನೆ ಕರ್ಣನು ಮುಂದೆ ಬಂದು,

"ಮಹಾರಾಜ, ಒಂದು ವಿಜ್ಞಾಪನೆ."

"ಹೇಳು ರಾಧೇಯಾ."

"ರಾಜ್ಯದ ಕಾರುಭಾರದಲ್ಲಿ ತೊಡಗಿ ಬೇಸತ್ತಿರುವ ಯುವರಾಜನ ಮನಸ್ಸಿಗೆ ನೆಮ್ಮದಿಯು ಬೇಕಾಗಿದೆ. ಸದ್ಯದ ಕಾಲವು ಮೃಗಯಾ ವಿಹಾರಕ್ಕೆ ಅನುಕೂಲವಾದುದರಿಂದ ತಮ್ಮ ಅಪ್ಪಣೆಯಾದಲ್ಲಿ ದ್ವೈತವನಕ್ಕೆ ತೆರಳಿ ಅಲ್ಲಿಯ ನಮ್ಮ ಗೋಧನವನ್ನು ನೋಡಿಕೊಂಡು ಬರೋಣವೆ? ಖಿಲಾರಿ, ಹಳ್ಳಿಕಾರು, ಅಮೃತ ಮಹಲ್, ದೇಸಿ, ಮಾವಳ ಮೊದಲಾದ ಜಾತಿವಂತ ಗೋವುಗಳ ಎಣಿಕೆ ಮಾಡಿಕೊಂಡು ಬರಲು ಅನುಕೂಲವಾಗುತ್ತದೆ. ಈ ಕೆಲಸದ ಕಾರ್ಯ ನಿರ್ವಹಣೆಯೂ ಅಗತ್ಯವಾಗಿದೆ. ನಮ್ಮ ಭೇಟಿಯೊಂದಿಗೆ ಈ ಕಾರ್ಯವನ್ನು ನಾವು ಮುಗಿಸಿಕೊಂಡು ಬರಬಹುದಾಗಿದೆ."

"ಬೇಡ ರಾಧೇಯ, ಇದಕ್ಕೆ ನಾನು ಅನುಮತಿಯನ್ನೀಯಲಾರೆ."

"ಯಾಕೆ?" ದುರ್ಯೋಧನನು ಕೇಳಿದ.

"ಅಲ್ಲಿ ಪಾಂಡವರು ವನವಾಸ ಮಾಡಿಕೊಂಡಿದ್ದಾರೆ."

ಆಗ ಶಕುನಿಯು ಹೇಳಿದ,

"ಮಹಾರಾಜ, ಪಾಂಡವರೊಂದಿಗೆ ನಮಗೆ ಕೆಲಸವೇನಿದೆ? ನಾವು ನಮ್ಮ ಬೇಟೆಯಾಡುವುದು ಹಾಗೂ ಗೋಧನವನ್ನು ನೋಡಿಕೊಳ್ಳುವುದು ಈ ಕೆಲಸವನ್ನು ಮುಗಿಸಿಕೊಂಡು ಬರುತ್ತೇವೆ ಅಷ್ಟೆ."

"ಶಕುನಿ, ಬೇಟೆಗೆಂದೇ ಹೋಗುವುದಾದರೆ ಇನ್ನೂ ಅನೇಕ ಸ್ಥಳಗಳಿವೆ. ಆದರೆ ಯಾವ ಸ್ಥಳದಲ್ಲಿ ಪಾಂಡವರಿದ್ದಾರೆಯೋ, ಆ ಸ್ಥಳಕ್ಕೆ ನಾವು ಹೋಗುವುದು ನನ್ನ ಮನಸ್ಸಿಗೇಕೋ ಸರಿಬರುವುದಿಲ್ಲ. ಅಂಥ ವಿಪತ್ತನ್ನು ಸಾಮ್ರಾಟರಾದವರು ತೆಗೆದುಕೊಳ್ಳಬಾರದು.

"ಯಾವ ವಿಪ್ಪತ್ತು ?" ದುರ್ಯೋಧನನು ಕೇಳಿದ, "ವನವಾಸಿಗಳಾದ ಅವರಿಂದ ನಮಗೇನಾಗಬೇಕಾಗಿದೆ ? ಇನ್ನು ಪಾಂಡವರ ವಿಚಾರದಲ್ಲಿ ತಮಗೆ ಚಿಂತೆಯಾಗಿದ್ದಲ್ಲಿ ಅದನ್ನು ಬಿಟ್ಟುಬಿಡಿರಿ. ಶಸ್ತ್ರರಹಿತರಾದವರ ಮೇಲೆ ನಾವು ಎಂದೂ ಕೈಯೆತ್ತುವುದಿಲ್ಲ, ಅದು ನಮ್ಮ ಪದ್ಧತಿ. ನಾವಂತೂ ನಮ್ಮ ಪರಿವಾರದೊಂದಿಗೆ ಹೋಗುತ್ತಲಿದ್ದೇವೆ. ಆ ಪಾಂಡವರನ್ನು ನಾವು ಕಣ್ಣೆತ್ತಿಯೂ ನೋಡುವುದಿಲ್ಲ. ಬೇಟೆಯು ಮುಗಿದ ನಂತರ ಗೋವುಗಳು ಅವುಗಳ ಸಂತಾನ ಮೊದಲಾದವುಗಳನ್ನು ಗಣತಿ ಮಾಡಿಕೊಂಡು ಮರಳಿ ಬರುತ್ತೇವೆ."

"ಹಾಗಿದ್ದ ಪಕ್ಷದಲ್ಲಿ ನೀವು ಹೋಗಬಹುದು." ಧೃತರಾಷ್ಟ್ರನು ಅನುಮತಿಯನ್ನಿತ್ತ.

ಬೇಟೆಗೆ ಹೊರಡುವುದಂತೂ ನಿಶ್ಚಯವಾಯಿತು. ಸೇವಕರು ಅದರ ತಯಾರಿಯಲ್ಲಿ ತೊಡಗಿದರು. ಸಕಲ ರಾಜವೈಭವಗಳೊಂದಿಗೆ ದುರ್ಯೋಧನನ ಘೋಷ ಯಾತ್ರೆಯು ಪ್ರಾರಂಭವಾಯಿತು. ಆತನೊಂದಿಗೆ ಶಕುನಿ, ಕರ್ಣ ಹಾಗೂ ಯುವರಾಜರ ಅಂತಃಪುರದ ಸ್ತ್ರೀಯರು ಭಾಗವಹಿಸಿದರು ಅತ್ಯಂತ ವೈಭವದಿಂದ ದುರ್ಯೋಧನನ ಪರಿವಾರವು ದ್ವೈತವನದತ್ತ ಸಾಗಿತು ಆನೆ, ಕುದುರೆ, ರಥಗಳ ಓಡಾಟಗಳಿಂದಾಗಿ ಕಾಡಿನ ದಾರಿ ಸುಗಮವಾಗಲಾರಂಭಿಸಿತು.

## 28

ದ್ವೈತವನದತ್ತ ಬೇಟೆಗೆಂದು ಹೊರಟ ಕೌರವರ ಸಮಾಚಾರಗಳು ಪ್ರತಿದಿನವೂ ರಾಜಧಾನಿಗೆ ಬಂದು ತಲುಪುತ್ತಿದ್ದವು. ಅದನ್ನು ಕೇಳಿದಾಗೆಲ್ಲ ಧೃತರಾಷ್ಟ್ರನ ಮನಸ್ಸು ಸಮಾಧಾನಗೊಳ್ಳುತ್ತಿತ್ತು. ಕರ್ಣ, ಶಕುನಿಯಿಂದ ಕೂಡಿದ ದುರ್ಯೋಧನನು ಗೋಧನದ ಪರೀಕ್ಷೆಯನ್ನು ಮುಗಿಸಿಕೊಂಡು ವನವಿಹಾರಕ್ಕಾಗಿ ಮುಂದಿನ ಪ್ರಯಾಣವನ್ನಾರಂಭಿಸಿದನು.

ಧೃತರಾಷ್ಟ್ರನ ನೆಮ್ಮದಿಯು ಮಾತ್ರ ಬಹುಕಾಲ ಉಳಿಯಲಿಲ್ಲ. ದ್ವೈತವನದಿಂದ ಬಂದ ಇತ್ತೀಚಿನ ಸಮಾಚಾರದಿಂದಾಗಿ ವಿದುರ, ಭೀಷ್ಮ, ದ್ರೋಣ

ಚಾರ್ಯರೇ ಮೊದಲಾದವರೆಲ್ಲ ಗಾಬರಿಯಾಗಿದ್ದರು. ಅರಣ್ಯವನ್ನು ಪ್ರವೇಶ ಮಾಡಿದ ಕೌರವರ ಮೇಲೆ ಗಂಧರ್ವರು ದಾಳಿಮಾಡಿ ದುರ್ಯೋಧನ ಹಾಗೂ ಆತನ ರಾಣಿವಾಸದವರನ್ನೆಲ್ಲ ಹಿಡಿದುಕೊಂಡು ಹೋಗಿದ್ದರು. ಸುದೈವದಿಂದ ಸಮೀಪದಲ್ಲಿಯೇ ಇದ್ದ ಪಾಂಡವರಿಗೆ ಈ ವಿಚಾರವು ತಿಳಿಯಿತು. ಆಗ ಸಂಕಟದಲ್ಲಿರುವ ಕೌರವರನ್ನು ಬಿಡಿಸಲು ಅರ್ಜುನನು ಧಾವಿಸಿ ಬಂದು ದುರ್ಯೋಧನನ್ನೂ ಆತನ ರಾಣೀವಾಸದವರನ್ನೂ ಬಿಡುಗಡೆ ಮಾಡಿಸಿದನೆಂಬ ವಿಚಾರವು ಈಗ ರಾಜಧಾನಿಯನ್ನು ತಲುಪಿತ್ತು. ಇದರಿಂದಾಗಿ ಧೃತ ರಾಷ್ಟ್ರನು ತುಂಬ ಕುಪಿತನಾಗಿದ್ದ. ಭೀಷ್ಮ, ದ್ರೋಣ, ವಿದುರಾದಿಗಳು ಅರ್ಜುನನ ಪರಾಕ್ರಮವನ್ನು ಬಾಯ್ತುಂಬ ಹೊಗಳಿ ಪಾಂಡವರ ಗುಣಗಾನ ವನ್ನು ಮಾಡಲಾರಂಭಿಸಿದ್ದರು.

ದುರ್ಯೋಧನನ ಆಗಮನವನ್ನೇ ಎಲ್ಲರೂ ನಿರೀಕ್ಷಿಸುತ್ತಿದ್ದರು. ಒಂದು ಸಾಯಂಕಾಲ ಮೃಗಯಾ ವಿಹಾರದಿಂದ ದುರ್ಯೋಧನನು ಮರಳಿ ರಾಜಧಾನಿ ಯನ್ನು ತಲುಪಿದ. ಯುವರಾಜನನ್ನು ರಾಜಗೃಹದಲ್ಲಿ ಬಿಟ್ಟು ಕರ್ಣನು ಸ್ವಗೃಹಕ್ಕೆ ಮರಳಿದ. ಆತನ ಬಿಡಾರದಲ್ಲಿ ಒಂದು ತರಹದ ಚಮತ್ಕಾರ ವಾತಾವರಣವು ನಿರ್ಮಾಣವಾಗಿತ್ತು. ಕರ್ಣನ ಮಕ್ಕಳು, ಅಧಿರಥ ಹಾಗೂ ರಾಧಾತಾಯಿ ಎಲ್ಲರೂ ಆತನ ಕಣ್ಣು ತಪ್ಪಿಸಿ ಅಡ್ಡಾಡುತ್ತಿರುವಂತೆ ಆತನಿ ಗನಿಸತೊಡಗಿತು.

ರಾತ್ರಿ ಏಕಾಂತ ವಾಸದಲ್ಲಿ ವೃಷಾಲಿಯು ಕಂಡಾಗ ಮುಗುಳು ನಗೆ ನಗುತ್ತ ಕರ್ಣನು ವಿಚಾರಿಸಿದ.

"ಇಂದು ಯಾಕೋ ವಾತಾವರಣವೇ ಕೋಪಿಸಿಕೊಂಡಂತಿದೆಯಲ್ಲ!"

"ಇಲ್ಲ, ಅಂಥದೇನೂ ಇಲ್ಲ."

ಕರ್ಣನು ನಗುತ್ತ ಕೇಳಿದ.

"ನಗುತ್ತಿರುವಿರೇಕೆ? ಹೊರಗೆ ಮುಖ ತೋರಿಸಲು ಸಾಧ್ಯವಿಲ್ಲ ದಂತಾಗಿದೆ."

"ಏಕೆ?"

"ತಮ್ಮ ಪರಾಕ್ರಮವು ಎಲ್ಲರಿಗೂ ತಿಳಿದುಹೋಗಿದೆ."

"ವಸೂ, ಜಯಾಪಜಯಗಳು ಒಂದು ವಿಚಾರದಲ್ಲಿ ಮಾತ್ರ ತಮ್ಮ

ಸಾಮರ್ಥ್ಯವನ್ನು ಪಡೆದುಕೊಂಡಿವೆ, ಆದರೆ ಎರಡರಲ್ಲಿಯೂ ಅತಿರಂಜಿತ ಕಥೆಗಳಿರುತ್ತವೆ."

"ನಿಮ್ಮ ವಿಜಯ ಯಾತ್ರೆಯಲ್ಲಿ ನಡೆದುದೆಲ್ಲವೂ ಸುಳ್ಳೇ?"

"ಸುಳ್ಳಲ್ಲ! ಆದರೆ ಅತಿರಂಜಿತ!" ಕರ್ಣನು ವೃಷಾಲಿಯತ್ತ ಸರಿದು, ಅವಳ ಕೈಯನ್ನು ಹಿಡಿದು ಹಾಸಿಗೆಯ ಮೇಲೆ ಕೂಡಿಸುತ್ತ ನುಡಿದ.

"ವಸೂ, ನಾವು ಗೋಧನದ ಎಣಿಕೆಯನ್ನು ಮುಗಿಸಿಕೊಂಡು ದ್ವೈತ ವನದತ್ತ ಸಾಗಿದ್ದೆವು. ಜಲಕ್ರೀಡೆಗಾಗಿ ಪರಿಸರವನ್ನು ಶುದ್ಧಿಗೊಳಿಸಲು ಸೇವಕರೆಲ್ಲ ಮುಂದೆ ಹೋಗಿದ್ದರು. ದುರ್ದೈವದಿಂದ ಗಂಧರ್ವನೊಬ್ಬ ಅದೇ ಸರೋವರದಲ್ಲಿ ಜಲಕ್ರೀಡೆಯಲ್ಲಿ ನಿರತನಾಗಿದ್ದ. ಆ ಗಂಧರ್ವನು ನಮ್ಮ ದೂತರನ್ನು ಹಿಂದಕ್ಕೆ ಕಳಿಸಿದ. ದ್ವೈತವನವು ಕುರುರಾಜ್ಯದ ಅಧೀನ ಭಾಗ ವಾಗಿದ್ದು, ನಮ್ಮ ಭೂಭಾಗದಲ್ಲಿಯೇ ನಮ್ಮ ಸೇವಕರಿಗಾದ ಅವಮಾನದ ವಾರ್ತೆಯನ್ನು ಕೇಳಿ ದುರ್ಯೋಧನನಿಗೆ ಸಹಿಸುವುದಾಗಲಿಲ್ಲ. ಅವನು ಯುದ್ಧಕ್ಕೆ ಸಿದ್ಧನಾದ. ಯುವರಾಜನು ಏನು ಹೇಳಿದರೂ ಕೇಳುವುದೇ ಇಲ್ಲ ಎಂಬ ಮಾತು ಖಚಿತವಾದಾಗ ನಾನೂ ನನ್ನ ಸೈನ್ಯದೊಂದಿಗೆ ಗಂಧರ್ವರ ಮೇಲೆ ಯುದ್ಧಕ್ಕೆ ಹೊರಟೆ.

"ಆಮೇಲೆ ?"

"ಆಮೇಲೇನು! ಗಂಧರ್ವರು ಆಕಾಶ ಯುದ್ಧದಲ್ಲಿ ಮಹಾ ಪ್ರವೀಣರು. ನಾವು ಇನ್ನೂ ಅರಣ್ಯವನ್ನು ಪ್ರವೇಶ ಮಾಡಿರಲಿಲ್ಲ, ನಾಲ್ಕೂ ದಿಕ್ಕಿನಿಂದ ಬಾಣಗಳ ಸುರಿಮಳೆಯಾಗಲಾರಂಭಿಸಿತು. ಆ ಬಾಣಗಳು ವೃಕ್ಷಗಳ ಬದಿಯಿಂದ ಬರುತ್ತಿವೆಯೋ, ಅಥವಾ ಆಕಾಶದಿಂದಲೇ ಪ್ರಯೋಗಿಸಲ್ಪಡುತ್ತಿವೆಯೋ, ಯಾವದೂ ತಿಳಿಯದಂತಾಯಿತು. ನಮ್ಮ ಮುಂಭಾಗದಲ್ಲಂತೂ ಶತ್ರುಗಳು ಕಾಣಿಸುತ್ತಿರಲಿಲ್ಲ. ನಮ್ಮ ಸೈನಿಕರು ಮಾತ್ರ ಗಾಯಾಳುಗಳಾಗಿ ಬೀಳುತ್ತಿದ್ದರು. ಗಂಧರ್ವ ಸೇನೆಯು ನಮ್ಮ ಸೇನೆಯನ್ನೆಲ್ಲ ಮುತ್ತಿಕೊಂಡಿತು. ಸಮಯ ಕಳೆದಂತೆಲ್ಲ ನನ್ನ ರಥದ ಒಂದೊಂದೇ ಭಾಗಗಳು ಶಿಥಿಲವಾಗತೊಡಗಿದವು. ರಥದ ಚಕ್ರಗಳು ಹಾಗೂ ಧ್ವಜದ ಭಾಗಗಳೆಲ್ಲ ಕಳಚಿ ಬೀಳಲಾರಂಭಿಸಿದವು. ಕೊನೆಗೆ ನಾನು ರಥವನ್ನು ತೊರೆದು ವಿಕರ್ಣನ

ರಥದ ಸಹಾಯವನ್ನು ಪಡೆಯಬೇಕಾಯಿತು. ಜೀವದಿಂದ ಪಾರಾಗಿ ಬರ ಬೇಕಾದರೆ ಸಾಕು ಸಾಕಾಯಿತು."

"ಯುವರಾಜರು ?"

"ವಿಕರ್ಣ ಹಾಗೂ ನಾನು ತುಂಬ ಗಾಯಗೊಂಡಿದ್ದೆವು. ಇಬ್ಬರೂ ದಾರಿ ಸಿಕ್ಕತ್ತ ಓಡಿದೆವು. ಇಡೀ ಕೌರವ ಸೇನೆಯು ಭಯಾನಕವಾದ ಅರಣ್ಯ ದಲ್ಲಿ ಸಿಕ್ಕಿಹಾಕಿಕೊಂಡಿತ್ತು. ಯುದ್ಧವು ನಿಂತೊಡನೆ ಒಬ್ಬೊಬ್ಬರಾಗಿ ಸೇರ ಲಾರಂಭಿಸಿದೆವು. ಆಗ ನಮಗೆ ಯುವರಾಜರ ವಿಷಯವು ತಿಳಿದುಬಂದಿತು. ನಾನು ಹತಾಶನಾಗಿ ಓಡುತ್ತಿದ್ದುದನ್ನು ಕಂಡ ಯುವರಾಜರು ತಮ್ಮಲ್ಲಿದ್ದ ಅಲ್ಪ ಸೇನೆಯೊಂದಿಗೆ ಗಂಧರ್ವರನ್ನೆದುರಿಸಿದರು. ದುರಾಕ್ರಮಿಗಳಾದ ಗಂಧರ್ವರು ರಾಣೀವಾಸದವರನ್ನೂ, ಯುವರಾಜರನ್ನೂ, ಸೆರೆ ಹಿಡಿದು ಕೊಂಡು ಹೋದರು. ಈ ಎಲ್ಲ ವಿಚಾರಗಳು ಅಲ್ಲಿಯೇ ವನವಾಸದಲ್ಲಿರುವ ಪಾಂಡವರಿಗೆ ತಿಳಿಯಿತು. ಆಗ ಅರ್ಜುನನು ಬಂದು ದುರ್ಯೋಧನನ್ನು ಬಿಡಿಸಿಕೊಂಡು ಬಂದ. ಸ್ತ್ರೀ ಪರಿವಾರದೊಂದಿಗೆ ಯುವರಾಜರು ಸುಖರೂಪ ದಿಂದ ಮರಳಿ ಬಂದರು."

"ಆದರೆ ರಾಜಧಾನಿಯಲ್ಲಿ ಎಲ್ಲರೂ ನಿಮ್ಮನ್ನೇ ದೂಷಿಸುತ್ತಿರುವರಲ್ಲ!"

ಕರ್ಣನು ಮೇಲೆದ್ದು ನಿಂತಾಗ ಆವನ ಕಣ್ಣೆದುರಿನಲ್ಲಿ ಆ ರಣರಂಗದ ದೃಶ್ಯವೆಲ್ಲ ಕಾಣಿಸತೊಡಗಿತು. ಮುಖದ ಮೇಲೆ ವಿಚಿತ್ರ ಛಾಯೆ ಕಾಣ ಲಾರಂಭಿಸಿತು. ಆತನು ವೃಷಾಲಿಯತ್ತ ನೋಡದೆ ಮಾತನಾಡುತ್ತಲಿದ್ದ.

"ಶೂರತನದ ಅಹಂಕಾರವೇ ನನ್ನ ಜೀವನದ ಮೂಲಸ್ವಭಾವ. ಕಷ್ಟ ಗಳನ್ನು ಸಹಿಸುವ ಸ್ವಭಾವ ನನ್ನದಾದರೂ ನಾನು ಅದನ್ನು ಮೊದಲಿನಿಂದಲೇ ಬೆಳೆಯಿಸಿಕೊಂಡು ಬಂದಿದ್ದೇನೆ. ಯಾವಾಗಲೂ ನಾನು ಮೃತ್ಯುವಿನ ಅವ ಹೇಳನವನ್ನೇ ಮಾಡುವಂಥವನು. ಹೀಗಿದ್ದರೂ ಅಂದಿನ ರಣಭೂಮಿಯಲ್ಲಿ ವಿಚಿತ್ರ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ನಾಲ್ಕೂ ದಿಕ್ಕಿನಿಂದ ಬಾಣಗಳ ಮಳೆ ಸುರಿಯಲಾರಂಭಿಸಿದಾಗ ಏನೂ ತೋಚದಾಯಿತು. ಹಾಗೆಯೇ ಗಂಧರ್ವರ ವಿಜಯೋನ್ಮಾದವು ಕೇಳಬರುತ್ತಿತ್ತು. ಆ ಘೋರಾ ರಣ್ಯದಲ್ಲಿ ಮೃತ್ಯುವಿನ ಸಾಕ್ಷಾತ್ಕಾರವಾದಂತೆನಿಸತೊಡಗಿತು. ನನ್ನ ಶೌರ್ಯ ಪ್ರತಾಪಗಳೆಲ್ಲ ಹೇಳಹೆಸರಿಲ್ಲದಂತಾದವು. ದಾರಿ ಸಿಕ್ಕ ಕಡೆಗೆ ಪಲಾಯನ

ಮಾಡಲಾರಂಭಿಸಿದೆ. ನಾನು ಯಾವ ರಥದ ಆಶ್ರಯುವನ್ನು ಪಡೆದುಕೊಂಡಿದ್ದೆನೋ ಅದು ವಿಕರ್ಣನ ರಥವಾಗಿತ್ತು."

ಕರ್ಣನು ಹಿಂದಿರುಗಿ ನೋಡಿದಾಗ ವೃಷಾಲಿಯು ಕಣ್ಣು ಹನಿಗೂಡಿದ್ದವು. ಅದನ್ನು ಕಂಡ ಕರ್ಣನು,

"ವೃಷಾಲಿ, ನಿನ್ನ ಕಣ್ಣುಗಳಲ್ಲಿ ನೀರು, ಪತಿಗೆ ಈ ಕಣ್ಣೀರುಗಳು ಮೃತ್ಯುವಿನ ಭಯುವನ್ನುಂಟುಮಾಡಿದವು."

ಈ ಮಾತುಗಳಿಂದ ವೃಷಾಲಿ ತನ್ನ ತಲೆಯನ್ನು ಮೇಲೆತ್ತಿದಳು. ಅವಳ ಆ ಕಣ್ಣುಗಳನ್ನೇ ನೋಡುತ್ತ ಕರ್ಣನು ಮತ್ತೆ ಹೇಳಲಾರಂಭಿಸಿದ.

"ಶತ್ರುಗಳು ನಾಲ್ಕು ಬದಿಗೂ ಸುತ್ತುವರಿದು ನಿಂತಾಗ ಸೋಲು ಸಮ್ಮುಖದಲ್ಲಿಯೇ ಬಂದು ನಿಂತಂತೆನಿಸಿತು. ಹಾಗೆಯೇ ಒಂದು ಬದಿಯಲ್ಲಿ ನೀನು ನಿಂತು ಕಣ್ಣೀರುಗರೆಯುವುದನ್ನೂ ಕಂಡೆ. ಆ ನೆನಪಿನಿಂದಾಗಿ ಜೀವನದ ಎಲ್ಲ ಆಸೆಗಳೂ ಮೇಲೆದ್ದು ಬಂದವು. ಪೌರುಷತ್ವದ ಅಹಂಕಾರ, ಸ್ವಾಭಿಮಾನ, ಮೊದಲಾದವುಗಳೆಲ್ಲ ಕ್ಷಣಾರ್ಧದಲ್ಲಿಯೇ ಮರೆತು ಹೋದವು. ಏಕಾಕಿಯಾದ ಜೀವನಿಗೇ ಈ ರೀತಿಯಾದ ಮೇಲೆ ಯಾರಿಗೆ ಸಕಲೈಶ್ವರ್ಯದ ಭೋಗಲಾಲಸೆ ಇರುವದೋ, ಅಂಥವರ ಗತಿ ಏನಾಗಿರಬೇಡ ? ವಸೂ ! ನನ್ನ ಜೀವನದಲ್ಲಿ ನಿನಗಾಗಿ ಎಂಥ ಮಹತ್ವದ ಸ್ಥಾನವಿದೆ ಎಂಬುದರ ಅರಿವು ಆ ಮೃತ್ಯುವಿನ ದವಡೆಯಲ್ಲಿದ್ದಾಗ ಮೊಟ್ಟ ಮೊದಲ ಬಾರಿಗೆ ನನಗುಂಟಾಯಿತು."

ವೃಷಾಲಿಯು ಕರ್ಣನನ್ನು ಬಿಗಿದಪ್ಪಿಕೊಂಡು, ಗದ್ಗದ ಕಂಠದಿಂದ ಹೇಳಿದಳು.

"ನಾಥ, ನನಗೆ ಎಲ್ಲವೂ ಸಿಕ್ಕಿತು, ಎಲ್ಲವೂ ದೊರಕಿತು."

ಹೊರಭಾಗದಲ್ಲಿ ಹಾಲುಚೆಲ್ಲಿದಂತೆ ಬೆಳದಿಂಗಳು ಹಾಸಿತ್ತು.

## 29

ಮರುದಿನ ಸಾಯಂಕಾಲ ವಿಕರ್ಣನು ಕರ್ಣನನ್ನು ಹುಡುಕಿಕೊಂಡು ಬಂದ.

"ಅಂಗರಾಜ. ತಮ್ಮನ್ನು ರಾಜಸಭೆಗೆ ಬರಹೇಳಿದ್ದಾರೆ."

"ಯಾರು ಯುವರಾಜರೇ ?"

"ಇಲ್ಲ ಸಾಮ್ರಾಟರು !"

ಆ ಹೆಸರನ್ನು ಕೇಳಿದೊಡನೆ ಎಲ್ಲ ವಿಷಯಗಳೂ ಆತನ ತಲೆಯಲ್ಲಿ ಸುಳಿಯಲಾರಂಭಿಸಿದವು.

"ಅಲ್ಲಿ ಪಿತಾಮಹರಾದ ಭೀಷ್ಮಾಚಾರ್ಯ, ವಿದುರ, ಹಾಗೂ ಆಚಾರ್ಯ ದ್ರೋಣರು ಇರಬಹುದಲ್ಲವೆ ?"

ವಿಕರ್ಣನು ಖಿನ್ನವಾಗಿ ನಕ್ಕು ಹೇಳಿದ.

"ಅಂಗರಾಜ, ಇಂದು ಕೇವಲ ಅಷ್ಟೇ ಜನರಿರುವುದಿಲ್ಲ, ಪಿತಾಮಹರು ರಾಜಸಭೆಯನ್ನೇ ಕರೆದಿದ್ದಾರೆ."

"ಯಾತಕ್ಕಾಗಿ ?"

"ನಿಮ್ಮ ಪರಾಕ್ರಮದ ಕೌತುಕವನ್ನು ಅರಿತುಕೊಳ್ಳುವದಕ್ಕಾಗಿ ! ಘೋರವಾದ ಆ ರಣರಂಗದಲ್ಲಿ ಯುವರಾಜನೊಬ್ಬನನ್ನೇ ಬಿಟ್ಟು ನೀವು ಓಡಿ ಹೋಗಿರುವಿರಿ."

"ಅದು ಸುಳ್ಳು ವಿಕರ್ಣ, ನೀನೂ ನನ್ನ ಜೊತೆಯಲ್ಲಿಯೇ ಇರಲಿಲ್ಲವೆ? ನಾವು ಗಂಧರ್ವರ ಮೇಲೆ ಯುದ್ಧಕ್ಕೆ ಹೊರಟಾಗ ಯುವರಾಜರು ಹಿಂದಿದ್ದರಲ್ಲವೆ ?"

"ಅದೇನೋ ನಿಜ, ರಾಜಸಭೆಯಲ್ಲಿ ಅವನ್ನೆಲ್ಲ ಯಾರು ಕೇಳುತ್ತಾರೆ. ಪಿತಾಮಹರು ಯುವರಾಜನಿಗೆ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ."

"ಒಟ್ಟಿನಲ್ಲಿ ವಿಷಯವು ಗಂಭೀರವಾದಂತಿದೆಯಲ್ಲವೆ ?"

"ಒಂದು ವೇಳೆ ನೀವು ತಡ ಮಾಡಿದಲ್ಲಿ ಮತ್ತಷ್ಟು ಗಂಭೀರ ಸ್ವರೂಪವನ್ನು ತಾಳಬಹುದು. ನಿಮ್ಮ ಆರೋಗ್ಯವು ಚೆನ್ನಾಗಿಲ್ಲ. ನೀವು ವಿಶ್ರಾಂತಿ ಪಡೆಯುತ್ತಿದ್ದೀರಿ ಎಂದು ಹೇಳಿದಲ್ಲಿ........"

"ತಪ್ಪು ತಿಳುವಳಿಕೆಗಳು ಹುಟ್ಟುವ ಮೊದಲೇ ಅವುಗಳನ್ನು ನಿವಾರಿಸಿ ಕೊಳ್ಳುವದೇ ವಿಹಿತ. ನಾನು ಬರುತ್ತೇನೆ. ಮತ್ತೇನಾದರೂ ವಿಶೇಷ...."

"ಅಂಥದೇನೂ ಇಲ್ಲ, ಅಂಗದೇಶದ ರಾಜ್ಯಾಧಿಪತ್ಯವನ್ನು ತಮ್ಮಿಂದ ಕಿತ್ತುಕೊಳ್ಳಬೇಕು ಎಂಬ ಮಾತುಗಳು ಕೇಳಬರುತ್ತಲಿವೆ."

"ಹಾಗೋ ! ಯುವರಾಜರ ಅಪೇಕ್ಷೆಯಿದ್ದಲ್ಲಿ ಆನಂದದಿಂದ ಆ ರಾಜ್ಯವನ್ನು ಅವರ ಪಾದಕ್ಕೆ ಅರ್ಪಿಸುವೆ. ಒಂದು ವೇಳೆ ಯಾರಾದರೂ ಕಸಿದು

ಕೊಳ್ಳುವೆ ಎಂದು ಹೇಳಿದಲ್ಲಿ ಆ ಮಾತು ಎಂದಿಗೂ ಸರಿಹೋಗಲಾರದು. ಸ್ವಪರಾಕ್ರಮದಿಂದ ನಾನು ಆ ರಾಜ್ಯವನ್ನು ಗೆದ್ದಿದ್ದೇನೆ. ಇರಲಿ, ಏನಾಗುತ್ತದೆಯೋ ನೋಡೋಣ."

ಅನಂತರ ಇಬ್ಬರೂ ಒಟ್ಟಾಗಿಯೇ ರಾಜಭವನದತ್ತ ಹೊರಟರು.

ವಿಕರ್ಣನು ಕೊಟ್ಟ ವರದಿಯಲ್ಲಿ ಯಾವ ಅತಿಶಯೋಕ್ತಿಯೂ ಇರಲಿಲ್ಲ. ಸಭಾಗೃಹವೆಲ್ಲ ತುಂಬಿಹೋಗಿತ್ತು. ಎಲ್ಲರ ಗಮನವೂ ಕರ್ಣನ ಆಗಮನವನ್ನೇ ನಿರೀಕ್ಷಿಸುವುದರಲ್ಲಿತ್ತು. ವಿಕರ್ಣನೊಂದಿಗೆ ಬರುತ್ತಿರುವ ಕರ್ಣನನ್ನು ಕಂಡು ಎಲ್ಲರೂ ಸ್ತಬ್ಧರಾದರು.

ಗಾಂಭೀರ್ಯದ ನಡಿಗೆಯಲ್ಲಿ ಕರ್ಣನು ಬರುತ್ತಲಿದ್ದ. ದಿಟ್ಟವಾದ ಆತನ ನೇತ್ರಗಳು ಅಲ್ಲಿ ಮಿಳಿತರಾದವರನ್ನೆಲ್ಲ ಪರೀಕ್ಷಿಸುತ್ತಲಿದ್ದವು. ಸಾಮ್ರಾಟರಿಗೆ ನಮಿಸುತ್ತಿರುವ ಕರ್ಣನನ್ನು ಕಂಡಾಗ ಭೀಷ್ಮ, ದ್ರೋಣರ ಅಸಮಾಧಾನವು ಹೊರಹೊಮ್ಮಿತು. ದುರ್ಯೋಧನನು ಧೃತರಾಷ್ಟ್ರರ ಸಮೀಪದಲ್ಲಿಯೇ ನಿಂತುಕೊಂಡಿದ್ದ. ಕರ್ಣನತ್ತ ಹೊರಳಿ ನೋಡುವ ಧೈರ್ಯವೂ ಅವನಲ್ಲಿರಲಿಲ್ಲ. ದುರ್ಯೋಧನನ ಹಿಂಭಾಗದಲ್ಲಿ ಶಕುನಿ ಹಾಗೂ ದುಶ್ಯಾಸನರು ಕೆಳಮುಖ ಹಾಕಿಕೊಂಡು ನಿಂತಿದ್ದರು. ಕರ್ಣನ ಆಗಮನಾನಂತರ ಭೀಷ್ಮಾಚಾರ್ಯರು,

"ಸಾಮ್ರಾಟ, ತಮ್ಮ ಆಜ್ಞಾನುಸಾರವಾಗಿ ಕರ್ಣನು ಸಭೆಯಲ್ಲಿ ಉಪಸ್ಥಿತನಾಗಿದ್ದಾನೆ"

ಧೃತರಾಷ್ಟ್ರ ಮಹಾರಾಜನು ತುಂಬ ಭಾರವಾದ ಧ್ವನಿಯಿಂದ "ಆತನ ನಡತೆಯಿಂದಾಗಿ ಕುರುರಾಜ್ಯದ ಮರ್ಯಾದೆಯು ಅವನತಿಯನ್ನು ಕಾಣುವಂತಾಗಿದೆ. ಈ ವಿಚಾರದಲ್ಲಿ ನನಗೇನೂ ಹೇಳಬೇಕೆಂದೆನಿಸುವುದಿಲ್ಲ. ನನ್ನ ಪರವಾಗಿ ತಾವೇ ಆ ವಿಷಯದಲ್ಲಿ ಭಾಗಿಗಳಾಗಬೇಕು."

"ಅದರಲ್ಲಿ ನನಗೂ ಆನಂದವಿಲ್ಲ.'' ಎಂದ ಭೀಷ್ಮರು ''ಏನು ನಡೆದು ಹೋಯಿತೋ ಅದಕ್ಕೆಲ್ಲ ದುರ್ಯೋಧನನ ನಡತೆಯೇ ಕಾರಣ ಎಂದು ನನಗನಿಸುವುದಿಲ್ಲ'' ಎಂದು ಹೇಳಿ ಕರ್ಣನತ್ತ ಕೈ ತೋರಿಸಿ "ಇದಕ್ಕೆಲ್ಲ ಕಾರಣನಾದವನು ಈ ಸೂತಪುತ್ರನೇ" ಎಂದರು.

ಕರ್ಣನು ಭೀಷ್ಮರನ್ನು ನೋಡಿದ. ಕರ್ಣನ ಮುಖದ ಮೇಲಿದ್ದ ಹಾಸ್ಯಭಾವವನ್ನು ಕಂಡು ಭೀಷ್ಮರು ಮತ್ತಷ್ಟು ಸಂತಾಪಗೊಂಡರು.

"ರಾಧೇಯ, ಇದು ದಾಸೀ ಪರಿವಾರವೆಂದು ತಿಳಿಯಬೇಡ. ನೀನಿರು
ವುದು ಕೌರವರ ಸಭೆ. ಇಲ್ಲಿ ನಿನ್ನ ಅಹಂಕಾರವು ನಡೆಯಲಾರದು."

ಕರ್ಣನು ತಲೆ ತಗ್ಗಿಸಿದ. ಭೀಷ್ಮರು ತಮ್ಮ ಮಾತುಗಳನ್ನು ಮುಂದು
ವರೆಸಿದರು.

"ಗೋಧನದ ಎಣಿಕೆಯ ನಿಮಿತ್ತವನ್ನು ಮುಂದಿಟ್ಟಾಗಲೇ ನಾನು
ನಿಮಗೆಲ್ಲ ನನ್ನ ವಿರೋಧವನ್ನು ಸೂಚಿಸಿದೆ. ಆದರೆ ನೀವು ಸಾಮ್ರಾಟರಲ್ಲಿ
ಪ್ರಾರ್ಥನೆ ಸಲ್ಲಿಸಿ ಅವರ ಅಪ್ಪಣೆ ಪಡೆದುಕೊಂಡಿರಿ. ಇರಲಾರದ ಧೈರ್ಯ
ವನ್ನು ತೋರಿಸಲು ಹೋಗಿ ಸ್ವಂತದ ಅವಮಾನಕ್ಕೆ ಕಾರಣೀಭೂತರಾದಿರಿ.
ಇಷ್ಟಾದರೂ ಸಹ ನಿಮಗೆ ನಾಚಿಕೆಯಾಗದಿರುವದನ್ನು ಕಂಡು ಪರಮಾಶ್ಚರ್ಯ
ವೆನಿಸುತ್ತಿದೆ."

"ತಮ್ಮ ಸಂತಾಪವನ್ನು ಹೆಚ್ಚಿಸುವಂತಹ ಆದಾವ ಘಟನೆ ನಮ್ಮಿಂದ
ನಡೆದುಹೋಗಿದೆ ಎಂಬುದನ್ನು ತಿಳಿಯಬಹುದೇ ?"

ಆ ಪ್ರಶ್ನೆ ಭೀಷ್ಮರಿಗೆ ಆಶ್ಚರ್ಯವನ್ನುಂಟುಮಾಡಿತು.

"ನಿಮ್ಮಿಂದ ಯಾವ ಅಪರಾಧವೂ ಘಟಿಸಲಿಲ್ಲ ಎಂದು ನಿನಗನಿಸು
ತ್ತಿದೆಯೇ ? ಧನ್ಯ ! ಧನ್ಯ ! ಕುರುರಾಜ್ಯದ ಯುವರಾಜನು ತನ್ನ ಪರಿವಾರ
ಸಮೇತನಾಗಿ ಗಂಧರ್ವರಿಂದ ಬಾಧಿತನಾಗಿ ಹೋಗುವಂತಾಯಿತಲ್ಲ—ಇದಕ್ಕೂ
ಹೆಚ್ಚಿನ ನಾಚಿಕೆಯು ಬೇರೊಂದಿದೆಯೇ ? ರಾಧೇಯಾ, ಯಾವ ಪಾಂಡವ
ರನ್ನು ನೀವು ಮೊದಲಿನಿಂದ ದ್ವೇಷಿಸುತ್ತ ಬಂದಿರುವಿರೋ, ಯಾರನ್ನು ನೀವು
ಮೋಸಗೊಳಿಸಿ ವನವಾಸಕ್ಕಟ್ಟಿರುವಿರೋ, ಅದೇ ಪಾಂಡವರು ಇಂದು ಯುವ
ರಾಜನ ಸಹಾಯಕ್ಕೆ ಧಾವಿಸಿ ಬರುವುದು, ಮಹಾಧನುರ್ಧಾರಿಯಾದ ಅರ್ಜು
ನನು ಕುರುರಾಜ್ಯದ ಯುವರಾಜನೆಂದು ಕರೆಸಿಕೊಳ್ಳುವ ದುರ್ಯೋಧನನನ್ನು
ಬಿಡಿಸಿ ತರುವದು, ಆ ಪಾಂಡವರ ಹಿರಿದಾದ ಗುಣಕ್ಕೆ ಹಾಗೂ ಮನಸ್ಸಿಗೆ
ಇದೊಂದು ನಿದರ್ಶನ ಎನಿಸುವದಿಲ್ಲವೆ ? ಆದರೆ ನೀವು !"

"ಪಿತಾಮಹರೇ ! ಪಾಂಡವರನ್ನು ಅಷ್ಟೊಂದು ಹೊಗಳಬೇಡಿರಿ, ಅವರು
ಕೌರವರ ದಾಸರು. ಆದುದರಿಂದ ಅವರು ಯುವರಾಜನನ್ನು ಬಿಡಿಸಿ
ತಂದಾಕ್ಷಣ ಅದಕ್ಕೆ ಆಶ್ಚರ್ಯಪಡಬೇಕಾದ ಅವಶ್ಯಕತೆಯೇನಿಲ್ಲ. ಇದು
ಅವರ ಉಪಕಾರವೆಂದೆನಿಸಲಾರದು. ದಾಸರಾದವರು ಒಡೆಯರ ಸೇವೆ

ಮಾಡಬೇಕಾದುದೇ ಅವರ ಧರ್ಮ. ಇನ್ನು ಅವರಿಗೆ ಸಂಧಿ ಪ್ರಾಪ್ತವಾಯಿ ತೆಂದು ಮಾತ್ರ ಹೇಳಬಹುದು."

"ರಾಧೇಯಾ..." ಭೀಷ್ಮರು ಮತ್ತಷ್ಟು ಕೋಪಗೊಂಡರು. ಅವರನ್ನು ಸಮಾಧಾನಪಡಿಸುತ್ತ ಆಚಾರ್ಯ ದ್ರೋಣರು,

"ಪಿತಾಮಹರೇ, ಶಾಂತರಾಗಿರಿ. ಸಜ್ಜನರಾದವರು ನಾಚಿಕೆ ಅವಮಾನ ಗಳನ್ನು ನಂಬುತ್ತಾರೆ, ಗ್ರಹಿಸುತ್ತಾರೆ. ಆದರೆ ತಾವು ಅದನ್ನು ಈ ಅಂಗ ರಾಜನಲ್ಲಿ ಕಾಣುವುದು ಹೇಗೆ ಸಾಧ್ಯ ? ಈ ಕಾರಣದಿಂದಲೇ ಈತನನ್ನು ಸಭೆಗೆ ಕರೆಸಕೂಡದು ಎಂದು ನಾನು ಮೊದಲೇ ಬಿನ್ನವಿಸಿಕೊಂಡಿದ್ದೆ" ಎಂದರು.

"ಸಾಕಷ್ಟು ಕೇಳಿಸಿಕೊಂಡಿದ್ದಾಯಿತು" ಕಿಡಿಕಿಡಿಯಾದ ಕಣ್ಣುಗಳಿಂದ ಕರ್ಣನು"

"ಆಚಾರ್ಯರೇ, ನಾವು ಯಾವ ಅಪರಾಧವನ್ನೂ ಮಾಡಿಲ್ಲ; ಸಾಮ್ರಾಟರ ಆಜ್ಞಾಭಂಗವೂ ನಮ್ಮಿಂದಾಗಿಲ್ಲ. ಪೂರ್ವಯೋಜಿತವಾದ ರೀತಿಯಂತೆ ನಮ್ಮ ಘೋಷಯಾತ್ರೆಯನ್ನು ನಾವು ಪೂರೈಸಿದೆವು. ಬೇಟೆಗಾಗಿ ದ್ವೈತವನವನ್ನು ಪ್ರವೇಶಿಸಿದೆವು. ಪಾಂಡವರನ್ನು ನಾವು ಶೋಧಿಸಲಿಲ್ಲ. ಅವರ ದರ್ಶನವೂ ನಮಗಾಗಲಿಲ್ಲ. ಯುವರಾಜರು ಜಲಕ್ರೀಡೆಗಾಗಿ ಆಗ್ರಹ ಪಡಿಸುತ್ತಿರುವಾಗಲೇ ಪ್ರಕೋಪವನ್ನು ಎದುರಿಸಬೇಕಾಯಿತು."

"ಅನಂತರ, ಅಂಗರಾಜ ? ಮಹಾ ಧನುರ್ಧಾರಿಯಾದ ಕರ್ಣನು ಯುವ ರಾಜರನ್ನು ಏಕಾಂಗಿಯಾಗಿಯೇ ಬಿಟ್ಟು ತನ್ನ ಪ್ರಾಣ ರಕ್ಷಣೆಗಾಗಿ ದಾರಿ ಕಂಡತ್ತ ಓಡಿಹೋದ" ದ್ರೋಣಾಚಾರ್ಯರು ನಗುತ್ತ ಹೇಳಿದರು.

"ಹೌದು, ನಡೆದುದು ಹಾಗೆಯೇ. ಆದರೆ ಅದರಲ್ಲಿ ಸ್ವಲ್ಪ ತಪ್ಪು ಗ್ರಹಿಕೆಯಾಗಿದೆ ಅಷ್ಟೆ. ನಾನು ಹಾಗೂ ವಿಕರ್ಣ ಇಬ್ಬರೂ ಗಂಧರ್ವರನ್ನು ಎದುರಿಸಿದೆವು. ಆಗ ಯುವರಾಜರು ನಮ್ಮೊಂದಿಗಿರಲಿಲ್ಲ. ಆಚಾರ್ಯರೇ, ನಿರ್ಜೀವಿಗಳಾದವರು ಎಂದಾದರೂ ಶತ್ರುಗಳನ್ನೆದುರಿಸುತ್ತಾರೆಯೇ ? ಪ್ರಬಲರಾದ ಗಂಧರ್ವರಿಂದ ನಾವು ಹಿಂದೆ ಸರಿಯುವುದೇ ವಿಹಿತವೆನಿಸಿತು."

"ಹಾಗಾದರೆ ಅಂಗರಾಜಾ, ಯಾವುದು ನಿಮ್ಮಿಂದ ಸಾಧ್ಯವಾಗಲಿಲ್ಲವೋ ಅದನ್ನು ಆ ಶ್ರೇಷ್ಠ ಧನುರ್ಧಾರಿಯಾದ ಅರ್ಜುನನು ಮಾಡಿ ತೋರಿಸಿದ ಎಂದಾಯಿತಲ್ಲವೆ ? ಗಂಧರ್ವರೊಂದಿಗೆ ಯುದ್ಧ ಮಾಡಿ ಅವನು ಯುವರಾಜ

ರನ್ನು ಬಿಡಿಸಿಕೊಂಡು ಬಂದನಲ್ಲವೆ ? ಈ ಮಾತಾದರೂ ಸತ್ಯವೆ ?" ಭೀಷ್ಮರು ಪುನಃ ಪ್ರಶ್ನೆ ಮಾಡಿದರು.

"ಬಿಡಿಸಿಕೊಂಡು ಬಂದುದೇನೋ ನಿಜ, ಆದರೆ ಆತನು ಯುದ್ಧಮಾಡಿ ಬಿಡಿಸಿಕೊಂಡು ಬಂದನೋ ಅಥವಾ ಭಿಕ್ಷೆ ಬೇಡಿದನೋ ಎಂಬ ವಿಷಯುವು ಮಾತ್ರ ನನಗೆ ತಿಳಿಯದು."

"ಅಂಗರಾಜ !"

"ಪಿತಾಮಹ ! ಪಾಂಡವರನ್ನು ಅಷ್ಟೊಂದು ಹೊಗಳಬೇಕಾದುದೇನೂ ಇಲ್ಲ. ನಾವು ಬೇಟೆಗೆ ಹೊರಟ ಗಳಿಗೆಯಲ್ಲಿಯೇ ಆ ಸರೋವರದಲ್ಲಿ ಗಂಧರ್ವನು ಜಲಕ್ರೀಡೆಯಾಡುವುದೆಂದರೇನು ! ಗಂಧರ್ವರು ಯುವರಾಜರನ್ನು ಸೆರೆ ಹಿಡಿದಾಗ ಅರ್ಜುನನು ಬಂದು ಬಿಡಿಸುವದೆಂದರೇನು ! ಇಂಥ ಪರಾಕ್ರಮವು ಅರ್ಜುನನಲ್ಲಿ ಎಂದಿನಿಂದ ಬಂದಿತು ?"

"ಅದು ತಿಳಿಯುವ ವಿಚಾರವಲ್ಲ ಅಂಗರಾಜಾ, ಹೀನ ಕುಲ, ಕ್ಷುದ್ರವಾದ ಮನಸ್ಸು, ಅಹಂಕಾರಗಳಿಂದ ಕೂಡಿದವರಿಗೆ ಅರ್ಜುನನ ನಿಜವಾದ ರೂಪವು ಹೇಗೆ ಕಾಣಿಸಲು ಸಾಧ್ಯ ?"

"ಪಿತಾಮಹ, ನಾನೂ ಆ ಮಾತನ್ನೇ ಹೇಳುತ್ತಿರುವೆ. ಯಾವ ಗಂಧರ್ವರು ಯುವರಾಜರನ್ನು ಹಿಡಿದುಕೊಂಡು ಹೋಗಿದ್ದರೋ, ಆ ಗಂಧರ್ವರ ನಾಯಕನ ಹೆಸರು ಚಿತ್ರರಥ ಎಂದಿದೆ. ಸ್ವರ್ಗವು ಹಾಳಾಗಿದೆಎಂದು ಆತನು ಈ ಭೂಮಿಯ ಮೇಲೆ ತನ್ನ ಪರಿವಾರದೊಂದಿಗೆ ಇಳಿದು ಬಂದಿದ್ದಾನೆಯೆ ? ಚಿತ್ರರಥನು ದಾಳಿ ಮಾಡಿದಾಗ ಕೌರವರ ಸಹಾಯಕ್ಕೆ ಅರ್ಜುನನೇಕೆ ಬರಲಿಲ್ಲ ? ಆಗ ಅವನ ಬಾಹುಬಲವೆಲ್ಲಿ ಹೋಗಿತ್ತು ?"

"ಪಾಂಡವರಿಗೆ ತಮ್ಮ ಪರಾಕ್ರಮವನ್ನು ತೋರಿಸುವ ಅಗತ್ಯತೆಯೇ ಇರಲಿಲ್ಲ." ಭೀಷ್ಮರು ನಕ್ಕು "ರಾಧೇಯಾ, ಆ ಪಾಂಡವರು ತಮ್ಮ ಬಾಹುಬಲದಿಂದ, ಸ್ವಂತ ಪರಾಕ್ರಮದಿಂದ, ರಾಜಸೂಯ ಯಾಗ ಮಾಡಿದರೆಂಬುದನ್ನು ನೀನು ಮರೆಯಬೇಡ."

"ಹೌದು ಪಿತಾಮಹ, ಒಂದು ರಾತ್ರಿಯಲ್ಲಿ ರಾಜ್ಯವನ್ನು ಹಂಚಿಕೊಟ್ಟಂತೆ ಒಂದೇ ರಾತ್ರಿಯಲ್ಲಿ, ಆ ರಾಜ್ಯವು ಬಲಶಾಲಿಯಾಗಲಾರದು.

ಕೃಷ್ಣನ ಚತುರಂಗಬಲದ ಬೆಂಬಲದಿಂದ ಅವರ ಬಾಹುಬಲವು ಸಿದ್ಧವಾಯಿತು. ಕೊನೆಯಪಕ್ಷ ಈ ವಿಷಯವನ್ನಾದರೂ ತಾವು ಮರೆಯಬಾರದು. ನೀವೆ ಆ ಕೃಷ್ಣನಿಗೆ ಅಗ್ರಪೂಜೆಯನ್ನು ಸಲ್ಲಿಸಿದವರಲ್ಲವೆ ?"

ಭೀಷ್ಮರಿಗೆ ಏನು ಉತ್ತರಿಸಬೇಕೆಂಬುದೇ ತೋಚದಂತಾಯಿತು. ಆಗ ದ್ರೋಣಾಚಾರ್ಯರು,

""ಆದರೆ ಅರ್ಜುನನು ಯುವರಾಜರನ್ನು ಬಿಡಿಸಿ ತಂದ ಮಾತಂತೂ ಸತ್ಯವಷ್ಟೆ ?"

"ಹೌದು, ಅರ್ಜುನ ಹಾಗೂ ಚಿತ್ರರಥ ಇವರಿಬ್ಬರಲ್ಲಿದ್ದ ಹಳೆಯ ಮಿತ್ರತ್ವವೇ ಅದಕ್ಕೆ ಕಾರಣ. ಹರ್ಷಭರಿತರಾದ ಅವರಿಬ್ಬರೂ ಒಬ್ಬರನ್ನೊಬ್ಬರು ಆಲಂಗಿಸಿಕೊಂಡುದನ್ನು ನೀವು ನೋಡಲಾರಿರಿ. ಅದನ್ನು ಸ್ವತಃ ಯುವರಾಜರೇ ತಮ್ಮ ಕಣ್ಣಾರೆ ಕಂಡಿದ್ದಾರೆ."

"ಕರ್ಣ, ನಿನಗೆ ಏನು ಹೇಳಬೇಕಾಗಿದೆ" ಧೃತರಾಷ್ಟ್ರನು ಮಧ್ಯದಲ್ಲಿ ಪ್ರಶ್ನೆ ಮಾಡಿದ.

"ಕ್ಷಮೆ ಕೇಳುವೆ ! ನಾನು ಬೇಕಾದಷ್ಟು ಹೇಳಬೇಕಾಗಿದೆ. ಅದನ್ನು ಕೇಳುವವರಾರು ? ಮಹಾರಾಜ, ಏನು ನಡೆದಿದೆಯೋ ಅದರ ಹಿನ್ನೆಲೆಯಲ್ಲಿ ನಿಶ್ಚಿತವಾಗಿಯೂ ಪಾಂಡವರ ಕೈವಾಡವಿದೆ. ಚಿತ್ರರಥನನ್ನು ಮುಂದೆ ಮಾಡಿಕೊಂಡು ಅವರೇ ಈ ಕಾರಸ್ಥಾನವನ್ನು ರಚಿಸಿದ್ದಾರೆ. ವನವಾಸವನ್ನು ಅನುಭವಿಸುತ್ತಿದ್ದರೂ ಅವರ ಮನದಲ್ಲಿ ಅಡಕವಾದ ಸೇಡಿನ ಕಿಡಿ ಎಂಥದು ? ಎಂದು ತೋರಿಸಲು ಈ ಘಟನೆಯೇ ನಿದರ್ಶನವಾಗಿದೆ. ದ್ವೈತವನಕ್ಕೆ ನಾವು ಹೊರಟ ವಿಚಾರವಾದರೂ ಪಾಂಡವರಿಗೆ ಮೊದಲೇ ತಿಳಿದಿರಬಹುದೆನಿಸುತ್ತಿದೆ. ಆ ದಿವ್ಯದೃಷ್ಟಿಯು ಪಾಂಡವರಲ್ಲಿಲ್ಲದಿದ್ದರೂ ಅದನ್ನೊದಗಿಸಿಕೊಡುವ ಜನ ನಮ್ಮ ರಾಜಸಭೆಯಲ್ಲಿಯೇ ಇದ್ದಾರೆ. ಪಾಂಡವರ ಕೃತಿಯಿಂದ ಸಂತಾಪಗೊಳ್ಳುವುದರ ಬದಲಾಗಿ ಅವರನ್ನೇ ಹೊಗಳುತ್ತ ಕುಳಿತಿರುವ ವಯೋವೃದ್ಧರು, ತಪೋವೃದ್ಧರು ನಮ್ಮ ಮೇಲೆ ದೋಷಾರೋಪಗಳನ್ನು ಹೊರಿಸಲು ರಾಜಸಭೆಯನ್ನು ಕೂಡಿಸುತ್ತಾರೆ. ಇದರಿಂದ ಯಾರಿಗೂ ಖೇದವೆನಿಸುವದಿಲ್ಲ, ಯಾರಿಗೂ ಕೆಡಕೆನಿಸುವುದಿಲ್ಲ !"

ಕರ್ಣನ ಈ ಮಾತುಗಳಿಂದ ಸಭೆಯು ರೂಪವೇ ಬದಲಾಗಿ ಹೋಯಿತು.

ದುರ್ಯೋಧನನ ಮುಖದಲ್ಲಿ ಅಭಿಮಾನಪೂರಿತವಾದ ಆನಂದದ ಕಳೆ ಕಾಣುವಂತಾಯಿತು. ಎಲ್ಲವನ್ನೂ ಕೇಳಿದ ಧೃತರಾಷ್ಟ್ರನು,

"ಕರ್ಣಾ, ನೀನು ಹೇಳುವ ಮಾತುಗಳಲ್ಲಿ ಕದಾಚಿತ್ ಸತ್ಯವಿದ್ದರೂ ಇರಬಹುದು. ಆದರೆ ಈಗ ಅನುಭವಿಸಿದ ಅವಮಾನವನ್ನು ತುಂಬಿಕೊಳ್ಳುವದಂತೂ ಅಸಾಧ್ಯವಾದ ಮಾತು"

"ಜಯಾಪಜಯುಗಳನ್ನು ಯಾರೂ ನಿಶ್ಚಯಿಸಲಾರರು. ಗಂಧರ್ವರಿಂದ ನಮಗೆ ಪರಾಜಯುವಾಗಿದೆ. ಆದರೆ ಪಾಂಡವರಿಂದಲ್ಲ, ಈ ವಿಚಾರ ತಿಳಿದವರಾರೂ ನಮಗೆ ದೋಷವನ್ನಿೀಯಲಾರರು. ಒಮ್ಮೆ ಮಹಾ ಯಜ್ಞವನ್ನು ಮಾಡಿ ಪರಾಜಯುದ ಅಪಕೀರ್ತಿಯನ್ನು ತೊಳೆದುಕೊಳ್ಳಬಹುದು."

"ಮಹಾಯಜ್ಞ ! ಯಾವ ಬಲದ ಮೇಲೆ ? ನಿಮ್ಮ ಗಜಶಾಲೆ, ರಥಶಾಲೆ, ಶಸ್ತ್ರಾಗಾರ ಮೊದಲಾದವುಗಳನ್ನು ಸಜ್ಜುಗೊಳಿಸುವದರಲ್ಲಿಯೇ ಕೌರವರ ರಾಜಭಂಡಾರವೆಲ್ಲ ಬರಿದಾಗಿ ಹೋಗಿದೆ. ಯಾರಿಗಾದರೂ ಅದರ ಪರಿವೆ ಇದೆಯೇ !" ಎಂದು ಪ್ರಶ್ನೆಮಾಡಿದ ವಿದುರನು, "ರಾಧೇಯಾ, ಕಲ್ಪನಾ ಸಾಮ್ರಾಜ್ಯದಲ್ಲಿ ವಿಹಾರ ಮಾಡುವದು ಸುಲಭದ ಕೆಲಸ. ಆದರೆ ಬರಿದಾದ ರಾಜಭಂಡಾರವನ್ನಾರು ತುಂಬಬೇಕೆಂಬುದು ಮಾತ್ರ ಬಹು ಕಷ್ಟಸಾಧ್ಯವಾದ ವಿಷಯು. ಅದರ ಅರಿವು ಹಾಗೂ ಸಾಮರ್ಥ್ಯ ಯಾರಲ್ಲಿದೆ ?" ಎಂದು ಕೇಳಿದ.

"ಆ ಸಾಮರ್ಥ್ಯವು ನನ್ನಲ್ಲಿದೆ, ನಾನೊಬ್ಬನೇ ದಿಗ್ವಿಜಯುಗೈದು ಕೌರವರ ಭಂಡಾರಗಳನ್ನು ತುಂಬಿಸಬಲ್ಲೆ,"

"ಯಾವಾಗ ?" ಭೀಷ್ಮರ ಸವಾಲು.

ಕರ್ಣನು ಭೀಷ್ಮರ ದೃಷ್ಟಿಯೊಂದಿಗೆ ತನ್ನ ದೃಷ್ಟಿಯನ್ನು ಒಂದುಗೂಡಿಸಿ, ನುಡಿದ :

"ಪಿತಾಮಹ ! ಪರಾಕ್ರಮದ ಅಭಿಲಾಷೆಯಿಂದಲ್ಲದೆ ಹೋದರೂ ನನ್ನ ಮಿತ್ರನಿಗಂಟಿದ ಈ ಕಲಂಕವನ್ನು ತೊಳೆದುಹಾಕಲು ನಾನು ಬಹುಬೇಗನೇ ಈ ದಿಗ್ವಿಜಯಕ್ಕಾಗಿ ಹೊರಬೀಳುತ್ತೇನೆ. ಪಾಂಡವರ ರಾಜಸೂಯು ಯಾಗವನ್ನು ಮೀರಿಸುವಂತಹ ಯಾಗವನ್ನು ಮಾಡಿಸಿಯೇ ತೋರಿಸುತ್ತೇನೆ. ಆದರೆ ಒಂದೇ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇಂದು ನನ್ನ

ಅವಹೇಳನವನ್ನು ಮಾಡಲು ಯಾವ ರೀತಿಯಲ್ಲಿ ರಾಜಸಭೆಯನ್ನು ಕೂಡಿಸಿದಿರೋ ಹಾಗೆಯೇ ನನ್ನ ಸ್ವಾಗತಕ್ಕಾಗಿಯೂ ರಾಜಸಭೆಯನ್ನು ಕರೆಯಿರಿ. ಇನ್ನೊಮ್ಮೆ ನಾನು ರಾಜಸಭೆಗೆ ಬರುವುದಾದಲ್ಲಿ ಅದು ನನ್ನ ಸನ್ಮಾನ ಸಮಾರಂಭವಾದರೆ ಮಾತ್ರ ಕಾಲಿಡುತ್ತೇನೆ. ತಿಳಿಯಿತೇ? ಇನ್ನು ನಾನು ಬರುವೆ."

"ಕರ್ಣನಿಗೆ ಮಂಗಳವಾಗಲಿ" ಎಂದು ತುಂಬಿದ ಸಭೆಯಲ್ಲಿ ದುರ್ಯೋಧನನು ಆತನನ್ನು ಬಿಗಿದಪ್ಪಿಕೊಂಡನು, ನಂತರ ಇಬ್ಬರೂ ಆ ರಾಜಸಭೆಯಿಂದ ಹೊರಟು ಹೋದರು.

## 30

ಕರ್ಣನ ದಿಗ್ವಿಜಯಾರ್ಥವಾಗಿ ಹಸ್ತಿನಾವತಿಯಲ್ಲಿ ಕೌರವ ದಲವು ಏಕತ್ರಿತವಾಗಲಾರಂಭಿಸಿತು. ಅಶ್ವದಳದ ಓಡಾಟದಿಂದಾಗಿ ರಾಜಮಾರ್ಗಗಳೆಲ್ಲ ಧೂಳಿನಿಂದ ತುಂಬಿಹೋದಂತೆ ಕಾಣಲಾರಂಭಿಸಿದವು. ರಥ ಚಕ್ರಗಳ ನಿನಾದ ಕೇಳಬರಲಾರಂಭಿಸಿತು ನಗಾರಿ, ನೌಬತ್ತು, ಶಂಖಗಳ ನಾದಗಳು ಕೇಳಬರಲಾರಂಭಿಸಿದವು. ಚಕ್ರಧರನು ಚಂಪಾನಗರಿಯಿಂದ ಕರ್ಣನ ಸೇನೆಯನ್ನು ತೆಗೆದುಕೊಂಡು ಬಂದು ಹಸ್ತಿನಾವತಿಯನ್ನು ತಲುಪಿದ. ಹೊರಡುವ ಸಿದ್ಧತೆಗಳೆಲ್ಲ ಪೂರೈಸಿದವು.

ಪ್ರಯಾಣಕ್ಕೆ ಹೊರಡುವ ಮುನ್ನ ಕರ್ಣನು ಧೃತರಾಷ್ಟ್ರ ಮಹಾರಾಜರನ್ನು ಹಾಗೂ ಗಾಂಧಾರಿ ದೇವಿಯನ್ನು ಭೇಟಿ ಮಾಡಿಕೊಂಡು ಬಂದ. ಬ್ರಾಹ್ಮಣರಿಂದ ಆಶೀರ್ವಾದ ಮಂತ್ರಗಳು ಹೇಳಲ್ಪಟ್ಟವು. ಯುವರಾಜನ ಅಪ್ಪಣೆಯನ್ನು ಪಡೆದು ತನ್ನ ಸೇನೆಯೊಂದಿಗೆ ದಿಗ್ವಿಜಯಕ್ಕಾಗಿ ಪಯಣವನ್ನಾರಂಭಿಸಿದ. ಕರ್ಣನ ರಥದ ಸಾರಥ್ಯಕಾರ್ಯವನ್ನು ಚಕ್ರಧರನು ವಹಿಸಿಕೊಂಡಿದ್ದ. ರಾಜಮಾರ್ಗದ ಎಡಬಲಗಳಲ್ಲಿ ನಿಂತುಕೊಂಡಿದ್ದ ಪ್ರಜೆಗಳು ಕರ್ಣನಿಗೆ ಜಯವಾಗಲೆಂದು ಕೂಗುತ್ತಿದ್ದರು. ಕರ್ಣನ ರಥವು ಅವನ ವಾಸಗೃಹವನ್ನು ತಲುಪಿದೊಡನೆ ಆತನು ರಥದಿಂದಿಳಿದು ಅಧಿರಥ(ಅತಿರಥ) ಹಾಗೂ ರಾಧಾತಾಯಿಗೆ ನಮಸ್ಕಾರ ಮಾಡಿ ಅವರ ಆಶೀರ್ವಾದವನ್ನು ಪಡೆದುಕೊಂಡ. ವೃಷಾಲಿಯು ಕರ್ಣನಿಗೆ ಆರತಿಯನ್ನು ಬೆಳಗಿದಳು. ಅನಂತರ

ಕರ್ಣನು ರಥಾರೂಢನಾಗಿ ಹೊರಟುಬಿಟ್ಟ. ಹಸ್ತಿನಾವತಿಯ ಹೊರಭಾಗ ದಲ್ಲಿದ್ದ ಸೇನೆ ಆತನ ಬರುವಿಕೆಗಾಗಿಯೇ ಕಾದು ನಿಂತಿತ್ತು. ಕರ್ಣನ ರಥ ವನ್ನು ಕಂಡೊಡನೆಯೇ ಆನಂದದಿಂದ ಜಯಘೋಷವನ್ನು ಮಾಡಲಾಯಿತು. ಅಸಾಧ್ಯವಾದ ಸೇನಾ ಸಮೂಹದೊಂದಿಗೆ ಕರ್ಣನ ರಥವು ಸಾಗಿತು.

ಮೊಟ್ಟಮೊದಲು ಕರ್ಣನ ಲಕ್ಷ್ಯವು ದ್ರುಪದನತ್ತ ಹೊರಳಿತು. ಅವರಿಬ್ಬರಲ್ಲಿಯೂ ಘೋರ ಯುದ್ಧವಾಗಿ ಕೊನೆಗೆ ದ್ರುಪದನು ಪರಾಜಯ ವನ್ನು ಹೊಂದಿದ. ಆತನಿಂದ ಮುತ್ತು, ರತ್ನ, ವಜ್ರ, ವೈಢೂರ್ಯ ಮೊದಲಾದವುಗಳನ್ನು ಕರಭಾರದ ರೂಪದಲ್ಲಿ ಸ್ವೀಕರಿಸಿ ಮುಂದೆ ಸಾಗಿದ. ದ್ರುಪದನು ಸೋಲನ್ನು ಕಂಡಾ ಪರಿಸರದ ರಾಜರು ತಾವಾಗಿಯೇ ಮುಂದೆ ಬಂದು ತಮ್ಮ ಕರಭಾರವನ್ನೊಪ್ಪಿಸಲಾರಂಭಿಸಿದರು. ಹೀಗಾಗಿ ಹಿಮಾಲಯದ ವರೆಗಿನ ಭಾಗವೆಲ್ಲ ಕರ್ಣನು ವಶಪಡಿಸಿಕೊಂಡ. ನಂತರ ತನ್ನ ಸೇನೆಯನ್ನು ಪೂರ್ವಭಾಗಕ್ಕೆ ಹೊರಡುವಂತೆ ಆಜ್ಞಾಪಿಸಿದ. ಒಂದೊಂದೇ ರಾಜ್ಯಗಳನ್ನು ಗೆದ್ದುಕೊಳ್ಳುತ್ತ ಆತನ ಸೇನೆಯು ಮುಂದಡಿಯನ್ನಿಡುತ್ತಿತ್ತು. ಅಂಗ, ವಂಗ, ಕಲಿಂಗ, ಶುಂಡಿಲ, ಮಗಧ ಮೊದಲಾದ ದೇಶಗಳನ್ನು ಗೆದ್ದು ದಕ್ಷಿಣಾಪಥದಲ್ಲಿ ಕಾಲಿರಿಸಿದ. ದಕ್ಷಿಣದ ರುಕ್ಮಿ ಅವನನ್ನು ಬಲವಾಗಿ ಎದುರಿಸಿದ. ಕೊನೆಗೆ ಕರ್ಣನ ಪರಾಕ್ರಮವನ್ನು ಗಮನಿಸಿದ ಆತನು ಮಧ್ಯದಲ್ಲಿಯೇ ಯುದ್ಧ ವನ್ನು ನಿಲ್ಲಿಸಿ ಕರಭಾರವನ್ನೊಪ್ಪಿಸಿ ಮಿತ್ರತ್ವವನ್ನು ಬೆಳೆಸಿದ.

ಈ ವಿಜಯವಾರ್ತೆಗಳೆಲ್ಲ ಆಗಾಗ ಹಸ್ತಿನಾವತಿಗೆ ಬಂದು ತಲುಪುತ್ತಿದ್ದವು. ನಗರದ ಮಧ್ಯಭಾಗದಲ್ಲಿರುವ ಎತ್ತರವಾದ ಸ್ಥಳದಲ್ಲಿ ನಿಂತು ವಿಜಯ ದುಂದುಭಿಯನ್ನೂದಿ ಕರ್ಣನ ವಿಜಯವಾರ್ತೆಗಳನ್ನು ಬಿತ್ತರಿಸುತ್ತಿದ್ದರು. ದುರ್ಯೋಧನನು ಕರ್ಣನನ್ನು ಸ್ವಾಗತಿಸಲು ಸಿದ್ಧತೆಗಳನ್ನು ಮಾಡ ಲಾರಂಭಿಸಿದ.

ಒಂದು ಮಧ್ಯಾಹ್ನ ಅಂಗರಕ್ಷಕ ದಲದೊಂದಿಗೆ ದುರ್ಯೋಧನನು ಹಸ್ತಿನಾವತಿಯ ಹೊರಭಾಗದಲ್ಲಿ ಬಂದು ನಿಂತುಕೊಂಡ. ವಾಯುವೇಗದಿಂದ ಧಾವಿಸಿ ಬರುತ್ತಲಿರುವ ಕುದುರೆಯ ಸವಾರರು ಯುವರಾಜರಿಗೆ ವಂದನೆ ಗಳನ್ನು ಸಲ್ಲಿಸಿ, ಕರ್ಣನ ರಥ ಕೇವಲ ಅರ್ಧಮೈಲಿನ ಅಂತರದಲ್ಲಿದೆ ಎಂಬು

ದನ್ನು ತಿಳಿಸಿದರು. ಆನಂದಪರವಶನಾದ ದುರ್ಯೋಧನನು ಆ ಸೇವಕರಿಗೆ ತನ್ನ ಕಂಠಾಭರಣಗಳ ಬಹುಮಾನವನ್ನಿತ್ತು ಗೌರವಿಸಿದ.

ದುರ್ಯೋಧನನ ರಥವು ಅಂಗರಕ್ಷಕ ದಳದೊಂದಿಗೆ ಮುಂದೆ ಸರಿಯಿತು. ಆತ ಒಂದು ಎತ್ತರವಾದ ಪ್ರದೇಶದಲ್ಲಿ ನಿಂತು ನೋಡಿದಾಗ ವಿಜಯಿಯಾದ ಕೌರವ ಸೇನೆಯು ಸಮುದ್ರದ ತೆರೆಗಳಂತೆ ಸಾಗಿ ಬರುತ್ತಿರುವುದು ಕಾಣಿಸಿತು. ಆ ಸೇನೆಯ ಮುಂಭಾಗದಲ್ಲಿ ಆನೆಯ ಮೇಲೆ ಕೌರವರ ಧ್ವಜವು ಹೆಮ್ಮೆಯಿಂದ ನಲಿದಾಡುತ್ತಿತ್ತು. ದುರ್ಯೋಧನನ ರಥವು ಇನ್ನಷ್ಟು ಮುಂದು ವರೆದಾಗ 'ಯುವರಾಜ ದುರ್ಯೋಧನರಿಗೆ ಜಯವಾಗಲಿ' ಎಂದು ವಿಜಯೀ ಸೇನೆಯು ಜಯಘೋಷ ಮಾಡಿತು. ಕರ್ಣ-ದುರ್ಯೋಧನರ ರಥಗಳು ಎದಿರುಬದಿರಾಗಿ ನಿಂತಾಗ ಮೊದಲು ಕರ್ಣನು ರಥದಿಂದಿಳಿದು ಬಂದ. ಆಗ ದುರ್ಯೋಧನನು ಮುಂದೆ ಬಂದು ಆತನನ್ನು ಬಿಗಿದಪ್ಪಿಕೊಂಡ. ಸೇನೆಯು ಇಬ್ಬರ ಹೆಸರಿನಿಂದಲೂ ಜಯಘೋಷ ಮಾಡಿತು.

ದುರ್ಯೋಧನನೊಂದಿಗೆ ಕರ್ಣನು ಹಸ್ತಿನಾವತಿಯನ್ನು ಪ್ರವೇಶ ಮಾಡಿದ. ವಿಜಯಿಗಳನ್ನು ಸ್ವಾಗತಿಸುವದರಲ್ಲಿ ಯಾವ ಕುಂದುಕೊರತೆಗಳೂ ಕಾಣಬರುತ್ತಿರಲಿಲ್ಲ. ಹಸ್ತಿನಾವತಿಯೇ ರಾಜಬೀದಿಯಲ್ಲಿದ್ದಂತೆ ಭಾಸವಾಗು ತಿತ್ತು. ಬಂಗಾರದ ಅಂಬಾರಿಗಳಿಂದಲಂಕೃತವಾದ ಆನೆಗಳು, ಸುವರ್ಣ ಕಿರಣ ಗಳಿಂದ ಥಳಥಳಿಸುವ ರಥಗಳು, ಚಿತ್ರ ವಿಚಿತ್ರ ವೇಷಧಾರಿಗಳಾದ ಸವಾರರು, ಶಿರಸ್ತ್ರಾಣ ಹಾಗೂ ಕವಚಧಾರಿಗಳಾದ ವೀರರು, ರಾಜಬೀದಿಯಲ್ಲಿ ಹಾದು ಹೋಗುತ್ತಿರುವುದನ್ನು ನೋಡಿ ಪ್ರಜೆಗಳ ಮನಸ್ಸು ಆನಂದೋನ್ಮಾದ ಸ್ಥಿತಿ ಯನ್ನು ತಲುಪಿತು. ಕೌರವ ಧ್ವಜದ ಮುಂಭಾಗದಲ್ಲಿ ದುರ್ಯೋಧನ ನೊಂದಿಗೆ ಒಂದೇ ರಥದಲ್ಲಿ ಕರ್ಣನು ನಿಂತುಕೊಂಡಿದ್ದ. ಕರಭಾರವ ಭಂಡಾರ ವನ್ನು ಹೊತ್ತ ಬಂಡಿಗಳಿಗೆ ಆರಾರು ಎತ್ತುಗಳನ್ನು ಹೂಡಲಾಗಿತ್ತು. ಜನರು ದುರ್ಯೋಧನ, ಕರ್ಣರ ಮೇಲೆ ದಾರಿಯುದ್ದಕ್ಕೂ ಸುಗಂಧ ದ್ರವ್ಯಗಳನ್ನು ಧಾರೆಯೆರೆಯುತ್ತಿದ್ದರು.

ರಾಜಭವನದ ಹೆಬ್ಬಾಗಿಲಿನಲ್ಲಿ ಸುವಾಸಿನಿಯರು ಕರ್ಣನಿಗೆ ಆರತಿ ಯನ್ನು ಬೆಳಗಿದರು. ಆತನು ಮೊದಲು ಅಂತಃಪುರಕ್ಕೆ ಹೋಗಿ ಗಾಂಧಾರಿ

ಸಹ ಧೃತರಾಷ್ಟ್ರನಿಗೆ ವಂದನೆಗಳನ್ನು ಸಲ್ಲಿಸಿದ. ಆಗ ಧೃತರಾಷ್ಟ್ರನು ಆತನನ್ನು ಸಮೀಪಕ್ಕೆ ಬರಮಾಡಿಕೊಂಡು,

"ರಾಧೇಯಾ, ನಿನ್ನ ಪರಾಕ್ರಮದಿಂದಾಗಿ ಹಸ್ತಿನಾವತಿಗೆ ಪುನಃ ಪ್ರಾಣ ಪ್ರತಿಷ್ಠಾಪನೆಯಾದಂತಾಗಿದೆ. ಈ ಕುರುಡುತನಕ್ಕಾಗಿ ಇಂದು ಮನವು ಹಳಹಳಿಯೆನಿಸತೊಡಗಿದೆ. ನಿನ್ನ ದಿಗ್ವಿಜಯ ಹಾಗೂ ದಿಗ್ವಿಜಯಿಯಾದ ನಿನ್ನ ಹಸ್ತಿನಾಪುರದ ಆಗಮನ ಇವುಗಳನ್ನು ನೋಡಲು ನನಗೆ ಕಣ್ಣುಗಳಿರ ಬೇಕಾಗಿತ್ತೆಂದೆನಿಸತೊಡಗಿದೆ. ರಾಧೇಯಾ, ನಿನ್ನ ಸ್ವಾಗತಕ್ಕಾಗಿ ರಾಜಸಭೆ ಯನ್ನು ಕರೆಯಲಾಗಿದೆ. ಆ ಸಭೆಗೆ ನನ್ನನ್ನು ನೀನೇ ಕರೆದುಕೊಂಡು ಹೋಗಬೇಕು" ಎಂದು ಹೇಳಿದ.

ಸಾಮ್ರಾಟರಿಗೆ ಮುನ್ನಡೆಯಲು ಆಶ್ರಯವನ್ನಿತ್ತ ಕರ್ಣನು ಅವರನ್ನು ರಾಜಸಭೆಯತ್ತ ಕರೆದುಕೊಂಡು ಹೊರಟ.

ಧೃತರಾಷ್ಟ್ರನನ್ನು ಕರೆತರುತ್ತಲಿರುವ ಕರ್ಣನ ಗೌರವಾರ್ಥವಾಗಿ ಸಭಾಸದರೆಲ್ಲ ಎದ್ದುನಿಂತರು. ಕರ್ಣನು ಅತ್ಯಂತ ಭಕ್ತಿಯಿಂದ ಭೀಷ್ಮ, ದ್ರೋಣಾಚಾರ್ಯ, ಕೃಪಾಚಾರ್ಯರಿಗೆ ವಂದನೆಗಳನ್ನು ಸಲ್ಲಿಸಿದ. ಆಗ ಪ್ರಸನ್ನರಾದ ಭೀಷ್ಮರು,

"ರಾಧೇಯಾ, ನಿನ್ನ ಪರಾಕ್ರಮವು ಅಗಾಧವಾದುದು. ನಿನ್ನ ದಿಗ್ವಿಜಯದಿಂದಾಗಿ ಕುರುಕುಲದ ಕೀರ್ತಿಯು ಬೆಳಗುವಂತಾಯಿತು. ನಾನು ನಿನ್ನನ್ನು ಆಶೀರ್ವದಿಸುತ್ತೇನೆ" ಎಂದರು.

ದುರ್ಯೋಧನನು ಬದಿಯಲ್ಲಿದ್ದ ದಾಸಿಯರನ್ನು ನೋಡಿದಾಗ ಅಮೂಲ್ಯ ವಾದ ಮುತ್ತು ರತ್ನಾದಿಗಳಿಂದ ತುಂಬಿದ ತಟ್ಟೆಗಳನ್ನು ಹಿಡಿದು ಅವರು ಮುಂದೆ ಬಂದರು. ದುರ್ಯೋಧನನ ಕಂಠವು ಬಿಗಿದು ಬಂದಿತು. ಅದನ್ನು ಕಂಡ ಕರ್ಣನು ಮುಗುಳುನಗೆಯಿಂದ ಆ ಕಾಣಿಕೆಗಳಿಗೆಲ್ಲ ತನ್ನ ಹಸ್ತ ಸ್ಪರ್ಶ ಮಾಡಿದ ನಂತರ,

"ಹೇ ನೃಪಶ್ರೇಷ್ಠಾ, ಇಂದು ನಿಷ್ಕಂಟಕವಾದ ಈ ಪೃಥ್ವಿಯು ನಿನ್ನ ದಾಗಿದೆ. ಸ್ವರ್ಗವನ್ನನುಭವಿಸುವ ಇಂದ್ರನಂತೆ ಈ ಪೃಥ್ವಿಯನ್ನು ನೀನು ಅನುಭವಿಸು, ಅದರ ಮೇಲೆ ನಿನ್ನ ಅಧಿಕಾರವಿರಲಿ" ಎಂದು ಹೇಳಿದ.

ದುರ್ಯೋಧನನಿಗೆ ತಡೆಯದಂತಾಯಿತು. ಅವನು ಬಹು ಉತ್ಸಾಹ

ದಿಂದ ತುಂಬಿದ ಸಭೆಯಲ್ಲಿಯೇ ಕರ್ಣನನ್ನು ಆಲಿಂಗಿಸಿಕೊಂಡು ರಾಜಸಭಾ ಸದರೆಲ್ಲರಿಗೂ ಕೇಳಿಸುವಂತೆ,

"ಮಿತ್ರಾ, ನೀನು ಸ್ನೇಹಿತನಿದ್ದು ನನ್ನ ಸಹಾಯಕನಾಗಿರುವೆ. ನಿನ್ನಿಂದಾಗಿಯೇ ಇಂದು ನಾನು ಈ ಭಾಗ್ಯದ ದಿನವನ್ನು ಕಾಣುವಂತಾಯಿತು. ನಿನಗೆ ಕಲ್ಯಾಣವಾಗಲಿ, ಇಂದು ನಾನು ಸಾರ್ಥಕ ಜೀವನವನ್ನು ಕಂಡು ಕೊಂಡಿರುವೆ"

ರಾಜಸಭೆಯಲ್ಲಿ ಕರ್ಣನ ಸತ್ಕಾರ ಸಮಾರಂಭವು ಮುಗಿದ ನಂತರ ದುರ್ಯೋಧನನು ಆತನನ್ನು ಮನೆಯವರೆಗೂ ಬಿಟ್ಟುಬರಲು ಹೊರಟನು. ಹೆಬ್ಬಾಗಿಲ್ಲಿನಲ್ಲಿಯೇ ವೃಷಾಲಿಯು ಪತಿಗೆ ವಿಜಯದಾರತಿಯನ್ನು ಬೆಳಗಿದಳು. ಚಕ್ರಧರ ಹಾಗೂ ದ್ಯುಮ ಇವರೂ ಸಹ ಆರತಿಯನ್ನು ಮಾಡಿಸಿಕೊಂಡು ಗೃಹಪ್ರವೇಶ ಮಾಡಿದರು. ಅಧಿರಥ ಹಾಗೂ ರಾಧಾ ತಾಯಿಗೆ ಪರಾಕ್ರಮಿ ಯಾದ ತಮ್ಮ ಮಗನೊಂದಿಗೆ ಯುವರಾಜರೂ ಬಂದಿರುವರೆಂಬುದನ್ನು ಕೇಳಿ ಕೃತಾರ್ಥತೆಯ ಭಾವವು ಮೂಡಿತು.

ಎಷ್ಟೋ ದಿನಗಳಾದ ನಂತರ ಆ ಮನೆಗೆ ಗೃಹಸ್ಥಿಕೆಯ ಲಕ್ಷಣಗಳು ಪ್ರಾಪ್ತವಾಗಿದ್ದವು.

## 31

"ಕರ್ಣನು ದಿಗ್ವಿಜಯದಿಂದ ಮರುಳಿದ ನಂತರ ದುರ್ಯೋಧನನು ರಾಜಸಭೆಯನ್ನು ಕೂಡಿಸಿದನು. ಭೀಷ್ಮ, ದ್ರೋಣ, ವಿದುರ, ಕೃಪಾ ಚಾರ್ಯ ಇವರುಗಳು ಆ ಸಭೆಯಲ್ಲಿ ಉಪಸ್ಥಿತರಿದ್ದರು. ಕೌರವರೆಲ್ಲರನ್ನೂ ಕರೆಯಲಾಗಿತ್ತು. ರಾಜಪುರೋಹಿತರನ್ನು ಬರಮಾಡಿಕೊಳ್ಳಲಾಗಿತ್ತು. ಆ ಸಭೆಯಲ್ಲಿ ದುರ್ಯೋಧನನು ತನ್ನ ಉದ್ದೇಶ್ಯವನ್ನು ಸರ್ವರ ಮುಂದೆ ಮಂಡಿ ಸಿದನು.

"ತಂದೆಯೇ, ಅಂಗರಾಜನಾದ ಕರ್ಣನು ದಿಗ್ವಿಜಯ ಮಾಡಿಕೊಂಡು ಬಂದ ನಂತರ ನಮ್ಮ ಸಾಮ್ರಾಜ್ಯದ ಕೀರ್ತಿಯು ಹೆಚ್ಚಿದಂತಾಗಿದೆ ಯಾವ ನಿಮಿತ್ತದಿಂದ ಕರ್ಣನು ದಿಗ್ವಿಜಯ ಮಾಡಿಕೊಂಡು ಬಂದಿದ್ದಾನೆಯೋ, ಆ ರಾಜಸೂಯ ಯಾಗವನ್ನು ಮಾಡಲು ನಾನು ತುಂಬ ಉತ್ಸುಕನಾಗಿದ್ದೇನೆ."

ಧೃತರಾಷ್ಟ್ರನು ತನ್ನ ಮಗನ ಮಾತಿಗೆ ಒಪ್ಪಿಗೆಯನ್ನಿತ್ತ. ಅನಂತರ ಕರ್ಣನು,

"ಯುವರಾಜ, ರಾಷ್ಟ್ರದ ಭೂಪಾಲಕರೆಲ್ಲ ನಿನ್ನ ಅಂಕಿತದಲ್ಲಿದ್ದಾರೆ. ಆದುದರಿಂದ ಶ್ರೇಷ್ಠ ಬ್ರಾಹ್ಮಣರನ್ನು ಆಮಂತ್ರಿಸಿ ಅವರಿಗೆ ಯಜ್ಞಕ್ಕೆ ಬೇಕಾಗುವ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳಲು ಅಪ್ಪಣೆಯನ್ನು ಕೊಡು. ವೇದ ವೇದಾಂಗಗಳಲ್ಲಿ ಪಾರಂಗತರಾದ ಋತ್ವಿಕರನ್ನು ಆಮಂತ್ರಿಸಿ ಅವರ ಹಸ್ತದಿಂದ ಯಥಾರೀತಿಯಲ್ಲಿ ಯಜ್ಞ ಕಾರ್ಯವನ್ನು ಪ್ರಾರಂಭಿಸು."

ದ್ರೋಣಾಚಾರ್ಯರು,

"ಯುವರಾಜ, ನನಗೆ ಕೆಲವು ವಿಷಯಗಳನ್ನು ತಿಳಿಸಬೇಕಾಗಿದೆ." ಎಂದರು.

"ಆಗಲಿ."

"ಧೃತರಾಷ್ಟ್ರ ಮಹಾರಾಜರು ಸಾಮ್ರಾಟರೆಂದಿರುವಾಗ ರಾಜಸೂಯ ಯಾಗ ಮಾಡುವ ಅಧಿಕಾರ ನಿಮಗೆ ಪ್ರಾಪ್ತವಾಗಲಾರದು."

"ತಂದೆಯವರು ಕುರುಡರು, ಆದುದರಿಂದ ಕತ್ತುವಿನ ಅಧಿಕಾರವು ಅಂಧರಿಗೆ ಬರಲಾರದು. ಆದುದರಿಂದ ಅವರ ಇರುವಿಕೆ ಯನ್ನ ಅಧಿಕಾರಕ್ಕೆ ಪ್ರತಿಬಂಧಕವಾಗಲಾರದು" ಎಂದು ದುರ್ಯೋಧನನು ದ್ರೋಣಾಚಾರ್ಯರನ್ನು ಸಮಾಧಾನಪಡಿಸಲು ಪ್ರಯತ್ನಿಸಿದನು. ಅದನ್ನು ಕಂಡ ಪುರೋಹಿತರು,

"ಯುವರಾಜ, ನೀವು ಹೇಳುವ ಮಾತು ನಿಜ. ಆದರೆ ಒಂದೇ ಕುಲದಲ್ಲಿ ಎರಡು ಸಲ ರಾಜಸೂಯ ಯಾಗವನ್ನು ಮಾಡಲು ಬರುವುದಿಲ್ಲ. ಎಲ್ಲಿಯವರೆಗೆ ನೀವು ಯುಧಿಷ್ಠಿರನನ್ನು ಗೆದ್ದಿಲ್ಲವೋ ಅಲ್ಲಿಯವರೆಗೆ ನಿಮಗೆ ಈ ರಾಜಸೂಯ ಯಾಗದ ಹಕ್ಕು ಪ್ರಾಪ್ತವಾಗಲಾರದು. ಇನ್ನು ಯಾವದಾದರೊಂದು ನಿಮಿತ್ತದಿಂದ ಯುಧಿಷ್ಠಿರನನ್ನು ಪರಾಭವಗೊಳಿಸಿದಲ್ಲಿ ಆಗ ಮಾತ್ರ ನಿಮಗೆ ರಾಜಸೂಯ ಯಾಗದ ಹಕ್ಕು ತಾನೇ ತಾನಾಗಿ ಪ್ರಾಪ್ತವಾಗುವುದು."

"ಯುವರಾಜರಿಗೆ ಯಜ್ಞವನ್ನೇ ಮಾಡುವ ಅಧಿಕಾರವಿಲ್ಲವೆ ?" ಕರ್ಣನು ಪ್ರಶ್ನೆ ಮಾಡಿದ.

"ಹಾಗೇನಿಲ್ಲ, ಯುವರಾಜರಿಂದ ರಾಜಸೂಯ ಯಾಗದಷ್ಟೇ ಮಹತ್ವ ಪೂರಿತವಾದ ವೈಷ್ಣವ ಯಜ್ಞವನ್ನು ಮಾಡಿಸಬಹುದು. ಆದ್ದರಿಂದ ನಿಮಗೆ ಸಾಕಷ್ಟು ಕೀರ್ತಿಯೂ ಲಭಿಸುವುದು. ಅಲ್ಲದೆ ಕರಭಾರವನ್ನೀಯುವ ಭೂಪಾಲಕರಿಗೇನೂ ಕೊರತೆಯಿಲ್ಲ. ಅವರಿಂದ ಕೊಡಲ್ಪಟ್ಟ ಅಪ್ಪಟವಾದ ಚಿನ್ನದಿಂದ ನೇಗಿಲನ್ನು ಮಾಡಿಸಿ ಆ ನೇಗಿಲದಿಂದ ಭೂಮಿಯನ್ನು ಉತ್ತಿದಲ್ಲಿ ರಾಜಸೂಯ ಯಾಗ ಮಾಡಿದಷ್ಟೇ ಪುಣ್ಯವು ಈ ವೈಷ್ಣವ ಯಜ್ಞದಿಂದ ಪ್ರಾಪ್ತವಾಗುವುದು."

ರಾಜಪುರೋಹಿತರು ಸೂಚಿಸಿದ ವೈಷ್ಣವ ಯಾಗವನ್ನೇ ಮಾಡಬೇಕೆಂಬ ವಿಚಾರದಲ್ಲಿ ಎಲ್ಲರೂ ತಮ್ಮ ಸಮ್ಮತಿಯನ್ನು ಸೂಚಿಸಿದರು. ಅಷ್ಟೇ ಅಲ್ಲದೆ ಅದಕ್ಕಾಗಿ ಮಾಡಿಕೊಳ್ಳಬೇಕಾದ ವ್ಯವಸ್ಥೆಗಳ ಬಗ್ಗೆಯೂ ವಿಚಾರ ವಿನಿಮಯಗಳಾದವು.

ಯಜ್ಞ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಲು ಪರಿಣಿತರಾದವರನ್ನು ನಿಯಮಿಸಲಾಯಿತು. ಶೀಘ್ರಗಾಮಿಗಳಾದ ದೂತರನ್ನು ನಾಲ್ಕು ದಿಕ್ಕುಗಳಿಗೂ ಕಳಿಸಿ ಬ್ರಾಹ್ಮಣರಿಗೆ ಆಮಂತ್ರಣವನ್ನೀಯಲಾಯಿತು. ಹಸ್ತಿನಾವತಿಯ ಸುವರ್ಣ ಕೆಲಸಗಾರರು ಬಂಗಾರದ ನೇಗಿಲನ್ನು ಸಿದ್ಧಪಡಿಸಿದರು. ಒಂದು ಸುಮುಹೂರ್ತದಲ್ಲಿ ಆ ನೇಗಿಲಿನಿಂದ ಭೂಮಿಯನ್ನು ಉಳುವ ಶಾಸ್ತ್ರವನ್ನು ಮಾಡಿದರು. ರಾಜ್ಯದ ಶ್ರೇಷ್ಠ ಕುಶಲ ಕರ್ಮಿಗಳು ಯಜ್ಞಶಾಲೆಯನ್ನು ಕಟ್ಟಲು ಪ್ರಾರಂಭಿಸಿದರು. ನಕ್ಷತ್ರ, ಯೋಗ, ಕರಣಗಳನ್ನು ನೋಡಿ ಸುಮುಹೂರ್ತದ ಗಳಿಗೆಯಲ್ಲಿ ದುರ್ಯೋಧನನಿಗೆ ಯಜ್ಞದೀಕ್ಷಾ ವಿಧಿಯನ್ನು ಮಾಡಲಾಯಿತು. ಈ ಆನಂದೋತ್ಸಹವನ್ನು ಕಂಡು ಭೀಷ್ಮ, ದ್ರೋಣ, ಕೃಪಾಚಾರ್ಯ ಹಾಗೂ ಕರ್ಣರೇ ಮೊದಲಾದವರು ತುಂಬ ಸಂತೋಷಪಟ್ಟರು.

"ಈ ಯಜ್ಞ ಕಾರ್ಯವು ಪ್ರಾರಂಭವಾದಾಗ ಎಲ್ಲಿ ನೋಡಿದರಲ್ಲಿ ಆನಂದೋತ್ಸಾಹಗಳು ತುಂಬಿ ತುಳುಕುತ್ತಿರಬೇಕು ಸಮಾಧಾನವಿರಬೇಕು."

"ಈ ಮಿತ್ರನ ಸಹಾಯದಿಂದ ನಾನು ತುಂಬ ಸಂತೋಷಗೊಂಡಿದ್ದೇನೆ."

ಕರ್ಣನ ಮಾತುಗಳನ್ನು ಕೇಳಿದ ದುರ್ಯೋಧನನು, "ನನಗೆ ತುಂಬ ಸಮಾಧಾನವಾಗಿದೆ" ಎಂದ

"ಆ ಮಾತು ನನಗೂ ಗೊತ್ತು. ಆದರೆ ನಾವು ಯಜ್ಞವನ್ನಾಚರಿಸುವಾಗ ಪಾಂಡವರು ಮಾತ್ರ ವನವಾಸಿಗಳಾಗಿದ್ದಾರೆ. ಅವರ ಕರ್ತವ್ಯವೇನೆಂಬುದೇ ತಿಳಿಯದ ವಿಷಯವಾಗಿದೆ. ಈ ಯಜ್ಞಕ್ಕಾಗಿ ನಾವು ಅವರನ್ನು ಕರೆಸಿದಲ್ಲಿ ನಮ್ಮ ಹಿರಿತನವು ಹೆಚ್ಚುತ್ತದೆ."

ಸ್ವಲ್ಪ ಹೊತ್ತು ವಿಚಾರ ಮಾಡಿದ ನಂತರ ಕರ್ಣನ ಅಭಿಪ್ರಾಯವನ್ನು ತಿಳಿದ ದುರ್ಯೋಧನನು ಅವನ ಮಾತಿಗೆ ತನ್ನ ಒಪ್ಪಿಗೆಯನ್ನಿತ್ತ. ಆಗ ದುಶ್ಯಾಸನನು ದೂತನನ್ನು ಕರೆದು ಹೇಳಿದ,

"ಎಲೈ ದೂತನೇ, ಈ ಕ್ಷಣವೇ ನೀನು ದ್ವೈತವನಕ್ಕೆ ಹೋಗಿ ಆ ಪಾಂಡವರನ್ನೂ ಹಾಗೂ ಆ ವನದಲ್ಲಿರುವ ಬ್ರಾಹ್ಮಣರನ್ನೂ ಕಂಡು ಯಥಾಯೋಗ್ಯವಾಗಿ ಯಜ್ಞದ ಆಮಂತ್ರಣವನ್ನಿತ್ತು ಬಾ."

ಯಜ್ಞ ಕಾರ್ಯವನ್ನಾರಂಭಿಸುವ ದಿನಗಳು ಸಮೀಪಿಸುತಿದ್ದವು. ಆಮಂತ್ರಣ ಸ್ವೀಕಾರ ಮಾಡಿದ ಋಷಿ ಮುನಿಗಳು, ವಿದ್ವಾಂಸರು, ಸಾಮಂತ ರಾಜರು, ಸರದಾರರು, ಒಬ್ಬೊಬ್ಬರಾಗಿ ಹಸ್ತಿನಾವತಿಯನ್ನು ಪ್ರವೇಶ ಮಾಡಲಾರಂಭಿಸಿದರು. ದ್ವೈತವನಕ್ಕೆ ಹೋಗಿದ್ದ ದೂತನೂ ಸಹ ಮರಳಿ ಬಂದಿದ್ದ. ಆತನನ್ನು ಕರೆಸಿ ವಿಷಯವೇನೆಂದು ದುರ್ಯೋಧನನು ವಿಚಾರಿಸಿದ.

"ಸೇವಕನೇ, ಪಾಂಡವರು ಯಜ್ಞಕ್ಕಾಗಿ ಬರುವವರಷ್ಟೆ ?"

"ಯುವರಾಜ, ನಾನು ಪಾಂಡವರಿಗೆ ಆಮಂತ್ರಣವನ್ನಿತ್ತೆ. ಯುಧಿಷ್ಠಿರನು ತಾವು ಕೈಕೊಂಡ ಶ್ರೇಷ್ಠವಾದ ಈ ಯಜ್ಞದ ವಿಚಾರವನ್ನೆಲ್ಲ ತಿಳಿದು ತುಂಬ ಸಂತೋಷಪಟ್ಟರು. ತಾನು ಹದಿಮೂರು ವರುಷಗಳ ವ್ರತವನ್ನು ಪಾಲಿಸಬೇಕಾಗಿರುವುದರಿಂದ ತಮಗೆಲ್ಲ ಬರುವದಾಗುವುದಿಲ್ಲವೆಂಬುದನ್ನು ತಿಳಿಸಲು ಆತನು ಹೇಳಿದ."

ಈ ಮಾತಿನಿಂದ ದುರ್ಯೋಧನನಿಗೆ ಅಂತರಂಗದಲ್ಲಿ ಸಮಾಧಾನವಾದರೂ ಅದನ್ನು ತೋರ್ಪಡಿಸದೆ,

"ಪಾಂಡವರೂ ಸಹ ಬಂದಿದ್ದರೆ ಚೆನ್ನಾಗಿರುತ್ತಿತ್ತು" ಎಂದು ನುಡಿದ.

ಕರ್ಣನು ಆ ದೂತನನ್ನೇ ನೋಡುತ್ತಲಿದ್ದ. ಆತನ ಅಸ್ಥಿರಭಾವದ ಮುಖವನ್ನು ಕಂಡು,

"ಅವರು ಏನಾದರೂ ನಿರೂಪ ಕಳಿಸಿದ್ದಾರೆಯೋ ?"

"ಹಾಗೇನೂ"........ದೂತನು ಗಾಬರಿಯಾಗಿದ್ದ,

"ಹೇಳು ! ದೂತ ಕಾರ್ಯದಲ್ಲಿ ಸಂಕೋಚವು ಬೇಡ, ಅವರು ಏನು ಹೇಳಿದ್ದಾರೆಯೋ ? ಅದೆಲ್ಲವನ್ನೂ ನಿರ್ಭಯದಿಂದ ತಿಳಿಸು" ಎಂದು ಕರ್ಣನು ಆಜ್ಞಾಪಿಸಿದ.

ಭೀಷ್ಮ, ದ್ರೋಣ. ವಿದುರರ ಗಮನವೆಲ್ಲ ಆ ದೂತನಲ್ಲಿ ಕೇಂದ್ರೀಕೃತವಾಯಿತು. ಆ ಸೇವಕನು ಕರ್ಣನನ್ನು ನೋಡುತ್ತ ಹೇಳಿದ.

"ಅಂಗರಾಜ, ಯುಧಿಷ್ಠಿರನ ಮನೋಭಾವವನ್ನು ತಿಳಿದುಕೊಂಡ ನಾನು ಆತನಲ್ಲಿ ಏನಾದರೂ ಹೇಳುವದಿದೆಯೋ ? ಎಂದು ಅರಿಕೆ ಮಾಡಿಕೊಂಡೆ. ಆ ವೇಳೆಗೆ ಸರಿಯಾಗಿ ಅಲ್ಲಿದ್ದ ಭೀಮನು ಎದ್ದು ನಿಂತು ನಿರೂಪವನ್ನು ನಾನು ಕಳಿಸುವೆ ಎಂದು ಹೇಳಿದ."

"ಭೀಮನು ಏನೆಂದು ಹೇಳಿ ಕಳುಹಿಸಿದ್ದಾನೆ" ವಿದುರನು ಆತುರದಿಂದ ಕೇಳಿದ,

"ಭೀಮನು, ಯಾವಾಗ ಪ್ರತಿಜ್ಞೆಯ ಹದಿಮೂರು ವರ್ಷಗಳು ಪೂರ್ಣಗೊಳ್ಳುತ್ತವೆಯೋ, ಅಂದು ನರಾಧಿಪನಾದ ಧರ್ಮರಾಜನು. ರಣಯಜ್ಞದಲ್ಲಿ ಸಶಸ್ತ್ರಗಳಿಂದ ಪ್ರದೀಪ್ತವಾದ ಅಗ್ನಿಕುಂಡದಲ್ಲಿ ದುರ್ಯೋಧನನ ಆಹುತಿಯನ್ನು ತೆಗೆದುಕೊಳ್ಳಲು ಸಿದ್ಧನಾಗುತ್ತಾನೆ. ಈ ಕುಂತೀಪುತ್ರರು ಆಗ ಅಲ್ಲಿಗೆ ಬರುತ್ತಾರೆ. ಯಾವಾಗ ಈ ಧರ್ಮಾತ್ಮನಾದ ಯುಧಿಷ್ಠಿರನು, ಧೃತರಾಷ್ಟ್ರನ ಪುತ್ರರೆಲ್ಲ ಕೋಪತಾಪಗಳಿಂದ ಉದ್ದೀಪಗೊಂಡಾಗ ಅವರನ್ನೆಲ್ಲ ಮತ್ತಷ್ಟು ಹೆಚ್ಚಿನ ಕ್ರೋಧಾಗ್ನಿಗೆ ತಳ್ಳಲು, ಅಗ್ನಿಗೆ ಹವಿಸ್ಸನ್ನು ಹಾಕಲು ಈ ಭೀಮನು ಸ್ವತಃ ಅಲ್ಲಿಗೆ ಬರುತ್ತಾನೆ."

ಈ ಸಂದೇಶವನ್ನು ಕೇಳಿದಾಗ ಇಡೀ ಸಭೆ ಸ್ತಬ್ಧಗೊಂಡಿತು. ವಿದುರನಿಗೂ ಸಹ ಏನೂ ತೋಚದಂತಾಯಿತು.

"ದೂತನೇ, ಪಾಂಡವರಲ್ಲಿ ಉಳಿದವರು ಏನಾದರೂ ಹೇಳಿದ್ದಾರೆಯೇ ?" ಭೀಷ್ಮರು ವಿಚಾರಿಸಿದರು.

"ಇಲ್ಲ, ಬೇರೆ ಯಾರೂ ಉತ್ತರಕೊಡಲಿಲ್ಲ. ಕೇವಲ ಭೀಮನು ಮಾತ್ರ ಈ ಸಂದೇಶವನ್ನು ಕಳುಹಿಸಿದ್ದಾನೆ."

"ಹಾಗೆಂದರೆ ಇದರ ಅರ್ಥವು ಭೀಮನ ಮಾತಿಗೆ ಎಲ್ಲರೂ ಸಮ್ಮತಿಯನ್ನಿತ್ತರೆಂದಲ್ಲವೇ ?" ಸಂತಾಪಗೊಂಡ ದುರ್ಯೋಧನನು ನುಡಿದ.

"ಯುವರಾಜ, ಸ್ವಭಾವತಃ ಭೀಮನು ಮುಂಗೋಪಿ. ಆತನ ಮಾತಿಗೆ ಲಕ್ಷ್ಯವನ್ನೀಯದೆ ಕ್ಷಮಿಸಿ ಬಿಡಬೇಕು. ಎಲ್ಲಿ ಯಜ್ಞ ಕಾರ್ಯಗಳು ನಡೆಯುತ್ತವೆಯೋ, ಅಂಥ ಸ್ಥಳದಲ್ಲಿ ಕ್ರೋಧ, ಮದ, ಮತ್ಸರ, ಅವಮಾನಾದಿಗಳಿಗೆ ಸ್ಥಾನವನ್ನೀಯಕೂಡದು" ಎಂದು ಭೀಷ್ಮರು ಸಮಾಧಾನ ಮಾಡಿದರು.

ಕರ್ಣನ ಮುಖದಲ್ಲಿ ಉದ್ವಿಗ್ನತೆ ಕಾಣಿಸುತ್ತಿತ್ತು.

"ಪಿತಾಮಹ, ತಮ್ಮ ಸಲಹೆ ಯೋಗ್ಯವೆಂದಾದಲ್ಲಿ ಶಿಶುಪಾಲನನ್ನು ಕೃಷ್ಣನು ಸಂಹಾರ ಮಾಡಿದಾಗ ತಾವು ಈ ವಿಚಾರವನ್ನೇಕೆ ವ್ಯಕ್ತಪಡಿಸಲಿಲ್ಲ? ಆ ಯಜ್ಞ ಭೂಮಿಯಲ್ಲಿ ಶಿಶುಪಾಲನ ರಕ್ತಸ್ರಾವವಾಗುವಂತೇಕೆ ಮಾಡಿದಿರಿ? ಯಜ್ಞಕ್ಕೆ ನರಬಲಿಯು ಅಗತ್ಯವೆನಿಸಿತ್ತೇ ?"

ಭೀಷ್ಮರು ಏನೂ ಉತ್ತರವನ್ನೀಯಲಿಲ್ಲ. ಭೀಮನ ಆವೇಶದಿಂದ ಕರ್ಣನು ಮತ್ತಷ್ಟು ಕುದಿಯಲಾರಂಭಿಸಿದ.

"ಸಾಮೋಪಚಾರದಿಂದ ನಾವು ಆಮಂತ್ರಣ ಕಳಿಸಿದರೆ ನಮಗೆ ಈ ಸಂದೇಶವೇ ? ವನವಾಸವನ್ನನುಭವಿಸುತ್ತಿದ್ದರೂ ಪಾಂಡವರು ರಣ ಯಜ್ಞದಲ್ಲಿ ಕೌರವರನ್ನು ಆಹುತಿ ತೆಗೆದುಕೊಳ್ಳುವ ಸಂದೇಶವನ್ನು ಕಳಿಸಿದಾಗಲೂ ನಮ್ಮ ರಾಜಸಭೆಯು ಅದನ್ನು ಶಾಂತಚಿತ್ತದಿಂದ ಆಲಿಸಬೇಕೆ ? ಮಿತ್ರ ದುರ್ಯೋಧನಾ, ಇಲ್ಲಿರುವ ಯಾರಿಗೂ ನಿನ್ನ ರಾಜ್ಯದ ಮೌಲ್ಯ ಎಂಥದು ಎಂಬುದರ ಅರಿವೇ ಇಲ್ಲ. ಅವರೆಲ್ಲರ ಚಿಂತೆಯನ್ನು ನೀನು ಬಿಡು. ಈ ಯಜ್ಞವನ್ನು ನೀನು ಆನಂದದಿಂದ ಸಾಂಗಗೊಳಿಸು. ಅನಂತರ ಎಂದು ಯುಧಿಷ್ಠಿರನನ್ನು ಪರಾಭವಗೊಳಿಸಿ ರಾಜಸೂಯ ಯಾಗವನ್ನು ಕೈಗೊಳ್ಳುವಿಯೋ ಅಂದು ನಿನ್ನ ಕುರು ಸಾಮ್ರಾಜ್ಯವು ಸುರಕ್ಷಿತ ಎಂಬುದನ್ನೂ ಸಹ ಅರಿತುಕೋ, ಆದುದರಿಂದ ಇಂದೇ ನಾನು ಪ್ರತಿಜ್ಞೆ ಮಾಡುತ್ತೇನೆ ಕೇಳು."

ರಾಜಸಭೆಯು ಕರ್ಣನ ಪ್ರತಿಜ್ಞೆಯನ್ನು ಕೇಳಲು ಉತ್ಸುಕಗೊಂಡಿತು.

"ಎಲ್ಲಿಯವರೆಗೆ ನಾನು ಅರ್ಜುನನ ಸಂಹಾರವನ್ನು ಮಾಡುವದಿಲ್ಲವೋ ಅಲ್ಲಿಯವರೆಗೆ ಇನ್ನೊಬ್ಬರಿಂದ ನಾನು ಪಾದಪ್ರಕ್ಷಾಲವನ್ನು ಮಾಡಿಸಿಕೊಳ್ಳಲಾರೆ, ಮದ್ಯ ಮಾಂಸಾದಿಗಳನ್ನು ಮುಟ್ಟಲಾರೆ, ಯಾಚಕರಿಗಾಗಿ ಕೊಡಲ್ಪ

ಡುತ್ತಿದ್ದ ನನ್ನ ದಾನಧರ್ಮಗಳು ಇನ್ನು ಮುಂದೆಯೂ ಸಹ ನಿರಾಂತಕವಾಗಿ ಸಾಗುವವು. ಇಂದಿನಿಂದಲೇ ಈ ಪ್ರತಿಜ್ಞೆಯನ್ನು ನಾನು ಪಾಲಿಸುವೆ."

ಅತ್ಯಂತ ಸ್ನೇಹದಿಂದ ದುರ್ಯೋಧನನು ಆತನ ಹಸ್ತಲಾಘವನ್ನು ಮಾಡಿದ. ಆ ಹಸ್ತಸ್ಪರ್ಶದ ಮರ್ಮವನ್ನು ಕರ್ಣನು ಚೆನ್ನಾಗಿ ಅರ್ಥ ಮಾಡಿಕೊಂಡ.

## 32

ದುರ್ಯೋಧನನು ಪ್ರಾರಂಭಿಸಿದ ಯಜ್ಞವು ನಿರ್ವಿಘ್ನವಾಗಿ ಪೂರ್ಣ ಗೊಂಡಿತು. ಯಜ್ಞಕ್ಕಾಗಿ ಆಗಮಿಸಿದ ನರೇಶರಿಗೂ ಬ್ರಾಹ್ಮಣರಿಗೂ ಯಥೋಚಿತ ರೀತಿಯಲ್ಲಿ ಮಾನ ಸನ್ಮಾನಾದಿಗಳನ್ನು ಮಾಡಿ ಅವರನ್ನೆಲ್ಲ ಬೀಳ್ಕೊಡಲಾಯಿತು. ಯಜ್ಞಕಾರ್ಯವೆಲ್ಲ ಮುಗಿದ ನಂತರ ದುರ್ಯೋಧನನು ತನ್ನ ಮಾವನಾದ ಶಕುನಿ ಹಾಗೂ ಕರ್ಣರೊಂದಿಗೆ ರಾಜಪ್ರಸಾದಕ್ಕೆ ಮರಳಿದ.

ಸಾಯಂಕಾಲ ಕರ್ಣನು ತನ್ನ ಗೃಹದಲ್ಲಿ ಅಧಿರಥ, ರಾಧಾತಾಯಿ, ಮೃತ್ಯುಂಜಯ, ವೃಷಕೇತು, ವೃಷಸೇನರೊಂದಿಗೆ ಹರಟೆ ಹೊಡೆಯುತ್ತ ಕುಳಿತಿದ್ದಾಗ, ಚಕ್ರಧರನು ಅಧಿರಥನಿಗೆ ಹೇಳಿದ,

"ಒಂದು ಸಂತೋಷ ಸಮಾಚಾರವನ್ನು ತಮಗೆ ತಿಳಿಸಬೇಕಾಗಿದೆ."

"ಯಾವದು ?"

"ಅಂಗದೇಶದ ರಾಜ್ಯವು ನನಗೆ ದೊರೆಯುವುದರಲ್ಲಿದೆ."

"ಅಂಗದೇಶದ ರಾಜ್ಯವೇ ?" ಎಲ್ಲರೂ ಆಶ್ಚರ್ಯಚಕಿತರಾಗಿ ಕೇಳಿದರು.

"ಹೌದು."

"ಯಾರು ಕೊಡುವವರು ?" ಕರ್ಣನು ಕೇಳಿದ.

"ನೀವೇ."

ಎಲ್ಲರೂ ಚಕ್ರಧರನನ್ನೇ ನೋಡಲಾರಂಭಿಸಿದರು.

"ಇನ್ನು ಮೇಲೆ ಕರ್ಣನು ರಾಜಧಾನಿಯಲ್ಲಿಯೇ ಇರುವವನು. ಇಷ್ಟು ವರುಷಗಳಾದರೂ ಆತನಿಗೆ ತನ್ನ ರಾಜ್ಯದ ಹಾಗೂ ತನ್ನ ಪ್ರಜೆಗಳ

ಯೋಚನೆ ಎಂಬುದೇ ಇಲ್ಲ. ಅಂದ ಮೇಲೆ ಆ ರಾಜ್ಯವು ನನಗೆ ದೊರೆಯ ಬೇಕಲ್ಲ ?"

ಅವನ ಮಾತಿನಿಂದ ಎಲ್ಲರೂ ನಕ್ಕರು.

"ನಾನಿಲ್ಲ ಎಂದರೂ ನನ್ನ ಪತಿಯಿಂದ ನೀನೇ ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳುವುದಿಲ್ಲವೆ ? ಆದರೂ ಸಹ ಮಿತ್ರಾ, ನಿನ್ನ ಮಾತಿನ ಅರ್ಥ ವಾಗಿದೆ, ನನಗೆ ಈಗ ಬಿಡುವಾಗಿದೆ. ನೀನು ಯಾವಾಗ ಹೇಳುತ್ತೀಯೋ ಆಗ ಹೊರಟು ಬಿಡೋಣ."

"ನಾನು ಇಲ್ಲಿಯೇ ಇರುವೆ" ವೃಷಸೇನನು ತನ್ನ ಅಪೇಕ್ಷೆಯನ್ನು ತಿಳಿಸಿದ.

ಕರ್ಣನು ಆ ವೃಷಸೇನನನ್ನೇ ನೋಡಲಾರಂಭಿಸಿದ. ಈಗ ಅವನು ಬೆಳೆದು ದೊಡ್ಡವನಾಗಿದ್ದ. ಅವನನ್ನು ಸಮೀಪಕ್ಕೆ ಬರಮಾಡಿಕೊಂಡು ರಾಧಾತಾಯಿಯು,

"ಇರಲಿ ಮಗೂ, ಅವನೂ ಇರಲಿ."

"ನಾನೆಲ್ಲಿ ಬೇಡವೆಂದಿದ್ದೇನೆ" ಹಿಂದೆ ನಿಂತ ವೃಷಾಲಿಯನ್ನು ನೋಡುತ್ತ ಕರ್ಣನು,

"ನೀನಾದರೂ ಬರುವಿಯಷ್ಟೆ ?"

ಪತಿಯ ಆ ಮಾತಿನಿಂದ ಅವಳು ನಕ್ಕುಬಿಟ್ಟಳು.

ಮರುದಿನವೇ ಕರ್ಣನು ತನ್ನ ಪ್ರಯಾಣದ ವಿಚಾರವನ್ನು ದುರ್ಯೋಧನನ ಮುಂದೆ ಮಂಡಿಸಿದಾಗ ಆತ ತುಂಬ ಗಂಭೀರ ಭಾವದಿಂದ,

"ಗೆಳೆಯ, ನೀನು ಅಂಗದೇಶಕ್ಕೆ ಹೋಗುವುದು ಅವಶ್ಯವಿದೆ ಅದನ್ನು ನಾನೂ ಬಲ್ಲೆ, ಆದರೆ ನೀನು ಅಲ್ಲಿ ಬಹುದಿನ ಇರಲು ಸಾಧ್ಯವಿಲ್ಲ. ಯಾಕೆಂದರೆ ಪಾಂಡವರ ವನವಾಸ ಕಾಲವು ಮುಗಿದ ನಂತರ ಅಜ್ಞಾತದ ಕಾಲಾವಧಿಯಲ್ಲಿ ಅವರನ್ನು ಹುಡುಕಿ ಹಿಡಿಯುವದು ಅತ್ಯವಶ್ಯಪಿದೆ''

''ಯುವರಾಜ, ಚಿಂತಿಸಬೇಡಿರಿ ! ತಾವು ಯಾವಾಗ ಕರೆದರೂ ನಾನು ಬರಲು ಸಿದ್ಧನಾಗಿರುತ್ತೇನೆ.''

ಅಂಗದೇಶಾಭಿಮುಖವಾಗಿ ಕರ್ಣನ ಪ್ರಯಾಣವು ಆರಂಭವಾಯಿತು. ಅವನನ್ನು ಬಿಟ್ಟು ಬರಲು ಬಹು ದೂರದವರೆಗೂ ದುರ್ಯೋಧನನು ತನ್ನ ಪರಿವಾರದೊಂದಿಗೆ ಹೋಗಿ ಮರಳಿದ.

## 30

ಕರ್ಣನ ದರ್ಶನವಾಗದಿರುವುದರಿಂದ ಚಡಪಡಿಸುತ್ತಿದ್ದ ಅಂಗದೇಶದ ನಿವಾಸಿಗಳು ತಮ್ಮ ಒಡೆಯನ ಆಗಮನವಾಗುವದೆಂದು ತಿಳಿದು ಸ್ವಾಗತದ ಭವ್ಯ ಏರ್ಪಾಡುಗಳನ್ನು ಮಾಡಿದರು. ತನ್ನ ಪ್ರಜೆಗಳ ಆದರ, ಪ್ರೀತಿ ಮೊದಲಾದುವುಗಳನ್ನು ಕಂಡು ಕರ್ಣನ ಹೃದಯವು ತುಂಬಿಬಂದಿತು. ಸುಖ ಶಾಂತಿಗಳಿಂದ ಕೂಡಿದ ತನ್ನ ಪ್ರಜೆಗಳ ಮಧ್ಯದಲ್ಲಿ ವೃಷಾಲಿಯೊಡನೆ ಕೂಡಿ ಕೊಂಡು ಕರ್ಣನು ಸುಖ ಜೀವನ ನಡೆಸುತ್ತಲಿದ್ದ.

ಒಂದು ದಿನ ರಾತ್ರಿ ಆತನಿಗೆ ಆಕಸ್ಮಿಕವಾಗಿ ಎಚ್ಚರವಾಯಿತು. ಭಯಂಕರ ಶಬ್ದವು ಕೇಳಬಂದಿತು. ಕಣ್ಣು ಬಿಟ್ಟು ನೋಡಿದ. ಸುವರ್ಣ ಮಯವಾದ ಆತನ ಅಂತಃಪುರವು ಪ್ರಕಾಶಮಾನವಾಗಿತ್ತು. ಆತನ ಪಕ್ಕದಲ್ಲಿ ವೃಷಾಲಿಯು ಶಾಂತವಾಗಿ ನಿದ್ರಿಸುತ್ತಿದ್ದಳು. ಆ ಭಯಂಕರವಾದ ಶಬ್ದ, ಹಾಗೂ ಸೂರ್ಯಪ್ರಕಾಶದಂತಹ ಬೆಳಕು, ಇವುಗಳನ್ನು ಕಂಡ ಅನುಭವ ವಾದಾಗಲೂ ಆತನ ಮನಸ್ಸು ವಿಚಲಿತವಾಗಿರಲಿಲ್ಲ. ಮತ್ತೆ ಆತನು ಕಣ್ಣನ್ನು ಮುಚ್ಚಿದಾಗ ಆ ಮಹಲಿನಲ್ಲಿ ತೇಜಃಪುಂಜವಾದ ಒಂದು ಆಕೃತಿಯು ನಿಂತಂತೆ ಕಾಣತೊಡಗಿತು. ಬಂಗಾರದ ವರ್ಣದಿಂದ ಕೂಡಿದಂತಹ ಆಕೃತಿಯಾಗಿ ಅದು ತೋರುತ್ತಿತ್ತು. ಕೆಲಸಮಯದ ಅನಂತರ ಪಾತಾಳ ಲೋಕದಿಂದ ಹೊರಬರುವಂತಹ ಒಂದು ಧ್ವನಿಯು ಕೇಳಬರಲಾರಂಭಿಸಿತು. ಆ ರೂಪ ದಲ್ಲಿಯೇ ತೇಜವು ಅಡಕವಾಗಿತ್ತು. ತನಗರಿವಿಲ್ಲದೆ ಕರ್ಣನು ಎದ್ದು ಕುಳಿತು ಕೊಂಡ. ಗಂಭೀರ ರೂಪದ ಒಂದು ಶಬ್ದವು ಕೇಳಿಸಿತು.

"ಕರ್ಣಾ. ನಾನು ಬಂದಿರುವೆ."

"ತಾವು ಯಾರು ?"

"ಪ್ರತಿ ದಿನವೂ ನೀನು ಯಾರನ್ನು ಪೂಜಿಸುತ್ತಿರುವೆಯೋ, ಯಾರ ಉಪಾಸನೆಯನ್ನು ಮಾಡುತ್ತಿರುವೆಯೋ, ಯಾರ ತೇಜಸ್ಸಿನಿಂದ ಸದಾ ನಿನ್ನ ಮನಸ್ಸು ತುಂಬಿಕೊಂಡಿರುತ್ತದೆಯೋ, ಆ ಸೂರ್ಯದೇವನೇ ನಾನು,"

ತನ್ನ ಆರಾಧ್ಯದೇವತೆಯ ದರ್ಶನದಿಂದಾಗಿ ಕರ್ಣನ ಮನಸ್ಸು ಚೇತರಿಸಿ ಕೊಂಡಿತು, ಓಡಿಹೋಗಿ ಆ ಪಾದ ಕಮಲಗಳನ್ನು ಅಪ್ಪಿಕೊಳ್ಳಬೇಕೆಂದೆನಿಸ ತೊಡಗಿತು. ಆದರೆ, ಆ ತೇಜಸ್ಸನ್ನು ಮುಟ್ಟುವ ಧೈರ್ಯವು ಮಾತ್ರ ಕರ್ಣನಿ

ಗಾಗಲಿಲ್ಲ. ಆದುದರಿಂದ ಆತನು ಅತ್ಯಂತ ಭಕ್ತಿಭಾವದಿಂದ ಆ ದೇವತೆಗೆ ಕೈಮುಗಿದು ಪ್ರಾರ್ಥನೆ ಮಾಡತೊಡಗಿದ.

ಆ ಪ್ರಕಾಶವು ಮಾತನಾಡುತ್ತಿತ್ತು. "ಕಲ್ಯಾಣವಾಗಲಿ, ಕರ್ಣ" ಸೂರ್ಯದೇವನು ಆಶೀರ್ವದಿಸಿದ. "ಇಂದು ವಿಶಿಷ್ಟವಾದ ಉದ್ದೇಶವನ್ನಿಟ್ಟುಕೊಂಡು ಬಂದಿದ್ದೇನೆ."

"ಅಪ್ಪಣೆ ಪ್ರಭು."

"ಇನ್ನು ಬಹು ಬೇಗನೆ ಪಾಂಡವರ ವನವಾಸವು ಮುಗಿಯುವುದು. ಅವರ ಅಜ್ಞಾತವಾಸದ ಅವಧಿಯು ಮುಗಿದ ನಂತರ ಅವರು ಮತ್ತೆ ಹೊರ ಬರುವರು. ವರ್ಷಾಋತುವಿನಲ್ಲಿ ಕ್ಷುಧೆಯಿಂದ ವ್ಯಾಕುಲವಾದ ಮೃಗೇಂದ್ರನಂತೆ ಪಾಂಡವರು ಈ ಪೃಥ್ವಿಯನ್ನು ಪಾದಾಕ್ರಾಂತ ಮಾಡಿಕೊಳ್ಳಲು ಹೊರ ಬೀಳುವರು. ಆ ಪಾಂಡವರ ವಿಜಯಕ್ಕಾಗಿಯೇ ನಾಳೆ ನಿನ್ನಲ್ಲಿ ಇಂದ್ರನು ಬರಲಿರುವನು."

"ದೇವಲೋಕದ ಇಂದ್ರನು, ನನ್ನ ಕಡೆಗೆ!"

"ಹೌದು, ಅದೂ ಸಹ ಯಾಚಕನಾಗಿ!"

"ಇಂದ್ರದೇವನಿಗೆ ಪಾಂಡವರ ವಿಷಯದಲ್ಲಿ ಕಷ್ಟಪಡುವಂತಹದೇನಿದೆ?"

"ಕಾರಣವಿದೆ. ಹೇಗೆ ನೀನು ನನ್ನ ಭಕ್ತನೋ, ಹಾಗೆಯೇ ಅರ್ಜನನು ಇಂದ್ರನ ಭಕ್ತ."

"ಯಾಚಕನಾಗಿ ದೇವೇಂದ್ರನು ನನ್ನಲ್ಲಿಗೆ ಬರುವುದಕ್ಕಿಂತ ಈ ಜೀವನದಲ್ಲಿ ಹೆಚ್ಚಿನದೇನಿದೆ? ನಾನು ಅದನ್ನು ನನ್ನ ಮಹಾಭಾಗ್ಯವೆಂದು ತಿಳಿಯುವೆ, ನನ್ನ ಬಹು ದಿನದ ತಪಸ್ಸಿನ ಫಲವೆಂದು ಗ್ರಹಿಸುವೆ. ಆದರೂ ದೇವೇಂದ್ರನಂಥವನು ಒಂದು ವೇಳೆ ಯಾಚಕನಾಗಿ ಬಂದಲ್ಲಿ ಅವನನ್ನು ತೃಪ್ತಿಪಡಿಸುವ ಸಾಮರ್ಥ್ಯವು ನನ್ನಲ್ಲಿದೆಯೇ? ಅಂಥದೇನಿದೆ ನನ್ನಲ್ಲಿ! ಅದನ್ನು ಪಡೆಯಲು ದೇವೇದ್ರನು ಸ್ವರ್ಗವನ್ನು ತೊರೆದು ನನ್ನಲ್ಲಿ ಯಾಚನೆಗಾಗಿ ಬರುವಂತಹದು."

"ನಿನ್ನ ಕವಚ ಕುಂಡಲಗಳು"

"ಹಾಗೆಂದರೇನು?"

"ನಿನ್ನ ಕವಚ ಕುಂಡಲಗಳನ್ನು ಪಡೆಯುವುದಕ್ಕಾಗಿಯೇ ಇಂದ್ರನು ಬರುತ್ತಾನೆ. ನಿನ್ನ ಶರೀರದಲ್ಲಿ ಎಲ್ಲಿಯವರೆಗೆ ಈ ಕವಚ ಕುಂಡಲಗಳಿವೆಯೋ, ಅಲ್ಲಿಯವರೆಗೆ ನಿನಗೆ ಪರಾಜಯವೆಂಬುದೇ ಇಲ್ಲ. ಈ ವಿಷಯವನ್ನು ಇಂದ್ರನು ತಿಳಿದುಕೊಂಡಿದ್ದಾನೆ. ನಾಳೆ ಕೌರವ-ಪಾಂಡವರಲ್ಲಿ ಯುದ್ಧವು ಪ್ರಾರಂಭವಾದಲ್ಲಿ ಪಾಂಡವರಿಗೆ ಜಯಪ್ರಾಪ್ತಿಯಾಗುವುದಾದರೂ ಹೇಗೆ? ಕರ್ಣ, ಈ ಎರಡೂ ರತ್ನ ಕುಂಡಲಗಳು ಅಮೃತದಿಂದ ಹುಟ್ಟಿವೆ. ಒಂದು ವೇಳೆ ನಿನಗೆ ಪ್ರಾಣವು ಪ್ರಿಯವೆಂದೆನಿಸಿದಾದಲ್ಲಿ ನೀನು ಅವುಗಳನ್ನು ಚೆನ್ನಾಗಿ ರಕ್ಷಿಸಿಕೊಂಡು ಬಾ."

ಕರ್ಣನಿಗೆ ಏನೂ ತೋಚಲಿಲ್ಲ, ಉತ್ತರಕೊಡಲೂ ಬರಲಿಲ್ಲ. ಆತನ ಪರಿಸ್ಥಿತಿಯನ್ನು ಕಂಡ ಸೂರ್ಯದೇವನು,

"ಕರ್ಣ, ನೀನು ಯಾವ ಯಾಚಕರಿಗೂ ಅವರು ಕೇಳಿದುದನ್ನು ಕೊಡದೆ ಕಳಿಸಿದುದಿಲ್ಲ. ಇದನ್ನು ಎಲ್ಲರೂ ಬಲ್ಲರು. ನಿನ್ನ ದಾನದಿಂದ ಯಾಚಕರು ತೃಪ್ತರಾಗಿಯೇ ಮರಳುತ್ತಾರೆ. ಹೀಗಿದ್ದರೂ ಎಲ್ಲದಕ್ಕೂ ಒಂದು ಮಿತಿ ಇದೆ, ಧರ್ಮವಿದೆ. ಕಪಟತನದಿಂದ ಬಂದವರಿಗೆ ಅವರು ಕೇಳಿದುದನ್ನು ಕೊಡುವುದು ದಾನಿಯ ಲಕ್ಷಣವೆಂದೆನಿಸಲಾರದು. ಅದನ್ನು ಅವಿವೇಕವೆಂದೂ ಕರೆಯುವುದುಂಟು."

"ದೇವಾ, ನಾನು ತಮ್ಮನ್ನು ಹೇಗೆ ಅವಮಾನ ಪಡಿಸಲು ಸಾಧ್ಯ? ತಾವು ನನ್ನ ಕಲ್ಯಾಣವನ್ನು ಚಿಂತಿಸುವವರು. ಅದೇ ನನ್ನ ಭಾಗ್ಯವಾಗಿರುವದು. ಆದರೂ...."

"ಕರ್ಣ, ಸಂಕೋಚಪಟ್ಟುಕೊಳ್ಳಬೇಡ. ಮನದ ದುಗುಡವನ್ನು ಹಗುರ ಮಾಡಿಕೋ."

"ದೇವಾ, ತಾವು ತಮ್ಮ ಪ್ರಕಾಶದಿಂದ ಜಗತ್ತನ್ನೇ ಬೆಳಗುತ್ತೀರಿ. ಆ ಬೆಳಕಿನಲ್ಲಿ ಪುಣ್ಯಕರ್ಮಗಳು ನಡೆಯುವಂತೆ ಪಾಪಕರ್ಮಗಳೂ ಘಟಿಸುತ್ತವೆ. ಹೀಗೆ ಪಾಪಕರ್ಮಗಳು ನಡೆಯುವುವವೆಂದು ತಾವು ತಮ್ಮ ಪ್ರಕಾಶವನ್ನು ತಡೆದು ನಿಲ್ಲಿಸುವಿರಾ? ಯಾಚಕರೆಂದು ಬಂದವರಿಗೆ ದಾನ ಕೊಡುವುದಷ್ಟೇ ನನ್ನ ಕರ್ತವ್ಯವಾಗಿದೆ. ಅವರಾರು? ಕೊಟ್ಟ ದಾನವನ್ನು ಯಾತಕ್ಕಾಗಿ ಉಪಯೋಗಿಸುವರು? ಎಂಬ ವಿಚಾರಗಳನ್ನು ಮಾಡುವ ಅಧಿಕಾರವೇ

ನನ್ನದಲ್ಲ. ಅಷ್ಟೇ ಅಲ್ಲ, ಅದು ನನ್ನ ಧರ್ಮವೂ ಅಲ್ಲ ಎಂದು ನಾನು ತಿಳಿದಿದ್ದೇನೆ."

"ನಿನ್ನ ಮಾತಿನಿಂದ ನಾನು ಸಂತುಷ್ಟನಾಗಿರುವೆ. ಒಂದು ಕ್ಷಣ ನೀನು ನನ್ನ ದೈವತ್ವವನ್ನು ಬದಿಗಿಟ್ಟು ವಿಚಾರ ಮಾಡು. ನಾನಿರುವುದು ಆಕಾಶದಲ್ಲಿ ಕರ್ಮ ಕಾರ್ಯಗಳೆಲ್ಲ ನಡೆಯುವುದು ಭೂಲೋಕದಲ್ಲಿ. ಆದುದರಿಂದ ಪಾಪ ಪುಣ್ಯಗಳ ಯಾವ ಸ್ಪರ್ಶವೂ ನನಗುಂಟುವದಿಲ್ಲ. ಹೀಗಿದ್ದರೂ ಯಾರಾದರೂ ನನ್ನ ತೇಜಸ್ಸನ್ನು ಕೇಳಿದಲ್ಲಿ ನಾನೆಂದೂ ಕೊಡಲಾರೆ. ಒಂದು ವೇಳೆ ನಾನು ಹಾಗೆ ನಡೆದುಕೊಂಡಲ್ಲಿ ನನ್ನನ್ನು ಸೂರ್ಯದೇವನೆಂದು ಯಾರೂ ಗುರುತಿಸಲಾರರು. ಹೇಗೆ ನಾನು ತೇಜಸ್ಸಿಗೆ ಬದ್ಧನಾಗಿರುವೆನೋ, ಹಾಗೆಯೇ ನೀನು ಈ ಕವಚಕುಂಡಲಗಳಿಗೆ ಬದ್ಧನಾಗಿರುವೆ. ಎಲ್ಲಿಯವರೆಗೆ ನಿನ್ನ ದೇಹದಲ್ಲಿ ಈ ಕವಚ ಕುಂಡಲಗಳಿವೆಯೋ, ಅಲ್ಲಿಯವರೆಗೆ ನೀನು ವಿಶಾಖಾ ನಕ್ಷತ್ರದ ಎರಡು ತಾರೆಗಳ ಮಧ್ಯೆ ಶೋಭಿಸುವ ಚಂದ್ರನಂತೆ ತೋರುವಿ. ಈ ಕಲಚ ಕುಂಡಲಗಳನ್ನು ದಾನವಾಗಿ ಕೊಟ್ಟಲ್ಲಿ ನಿನಗುಳಿಯುವುದು ಕೇವಲ ಕೀರ್ತಿಯು ಮಾತ್ರ ಎಂಬುದನ್ನು ತಿಳಿದುಕೋ. ಆಗ ಜೀವ ನಿನ್ನ ಕೈಯಲ್ಲಿಲ್ಲವೆಂಬುದನ್ನೂ ನೆನಪಿನಲ್ಲಿಡು."

"ಸಾಮಾನ್ಯವಾದ ಬಾಳಿಗಿಂತ ಕೀರ್ತಿರೂಪವಾದ ಮರಣವನ್ನೇ ನಾನು ಹೆಚ್ಚು ಅಪೇಕ್ಷಿಸುತ್ತೇನೆ."

"ಈ ಕೀರ್ತಿಯು ಅಂಹಕಾರವನ್ನು ಜೀವಿತ ಕಾಲದಲ್ಲಿ ಮಾತ್ರ ಉಪ ಭೋಗಿಸಲು ಸಾಧ್ಯ. ಕರ್ಣಾ, ನಿಷ್ಣಾತನಾದ ಮಾನವನು ತಾನು ಜೀವಿಸಿರು ವಷ್ಟು ಕಾಲ ಐಶ್ವರ್ಯ, ಸ್ನೇಹ, ಪ್ರೇಮಗಳನ್ನು ಉಪಭೋಗಿಸುವನು. ಮೃತ್ಯುವಿನ ನಂತರ ಕೀರ್ತಿಯು ಉಳಿಯುತ್ತದೆ. ಆದರೆ ಅದನ್ನು ಅನುಭವಿಸಲು ಬರುವದಿಲ್ಲ."

"ನಿಸ್ತೇಜವಾದ ಜೀವನದ ಭೋಗಕ್ಕಿಂತ ಮರಣೋತ್ತರ ಲಭಿಸುವ ಉದಾತ್ತವಾದ ಕೀರ್ತಿಯನ್ನೇ ನಾನು ಅಪೇಕ್ಷಿಸುವೆ. ಅಂಥ ಜೀವನವೇ ನನಗೆ ಅಪೇಕ್ಷಣೀಯ. ನನ್ನ ಕಲ್ಯಾಣಕ್ಕಾಗಿ ತಾವು ದಯಮಾಡಿಸಿದಿರಿ. ನನ್ನನ್ನು ಎಚ್ಚರಿಸಿರುವಿರಿ. ನಾನು ಅದನ್ನೆಂದೂ ಮರೆಯಲಾರೆ. ಸಾಮಾನ್ಯ ಜೀವಿಯಾದ ನನ್ನನ್ನು ಹಾಗೂ ನನ್ನ ಹಿತವನ್ನು ರಕ್ಷಿಸುವುದಕ್ಕಾಗಿ

ಸಾಕ್ಷಾತ್ ಸೂರ್ಯನಾರಾಯಣನೇ ದಯಮಾಡಿಸಿದ ಎಂದ ಮೇಲೆ, ನನ್ನ ಭಾಗ್ಯದ ಮುಂದೆ ಬೇರೆಯವರ ಭಾಗ್ಯ ಉಂಟೇ! ಇನ್ನು ನನ್ನ ಯಶಸ್ಸು ಸಾಮಾನ್ಯ ಮಾನವನೊಬ್ಬನಿಂದ ಹರಣವಾಗುವದಕ್ಕಿಂತ ದೇವ ದೇವನಾದ ಇಂದ್ರನಿಂದ ಅಂಥ ಕೆಲಸವಾಗುವುದಾದರೆ ನನ್ನಂಥ ಭಾಗ್ಯವಂತರು ಬೇರಾರೂ ಇಲ್ಲ ಎಂದು ಭಾವಿಸುವೆ."

"ಕರ್ಣಾ, ನನಗೆ ತಡೆದುಕೊಳ್ಳುವದಾಗಲಿಲ್ಲ, ಆದುದರಿಂದಲೇ ನಾನು ಇಲ್ಲಿಯವರೆಗೆ ಬರಬೇಕಾಯಿತು, ನನಗನಿಸಿದುದನ್ನು ತಿಳಿಸಿರುವೆ. ಅದನ್ನು ಸ್ವೀಕರಿಸುವದು ಅಥವಾ ಬಿಡುವದು ನಿನಗೆ ಸೇರಿದ ವಿಷಯ."

ಆ ಮಾತುಗಳಿಂದ ಕರ್ಣನ ಮನಸ್ಸು ವ್ಯಾಕುಲಗೊಂಡಿತು.

"ದೇವಾ, ಕ್ಷಮಿಸಬೇಕು. ತಾವು ಕೋಪಿಸಿಕೊಳ್ಳಬಾರದು. ನಾನು ನಿಮ್ಮ ಭಕ್ತ, ಪ್ರತಿದಿನವೂ ನಾನು ಸರ್ವಸ್ವವನ್ನೆಲ್ಲ ತಮ್ಮ ಪಾದಾರವಿಂದದಲ್ಲಿ ಅರ್ಪಿಸುತ್ತಿರುವೆ. ತಮ್ಮ ಪ್ರೇಮದ ಅಭಾವವಾದಲ್ಲಿ ಅದನ್ನು ನಾನೆಂತು ಸಹಿಸಿಕೊಳ್ಳಬಲ್ಲೆ. ಪರಮೇಶ್ವರಾ, ಸಾಕ್ಷಾತ್ ತೇಜವೇ ತಮ್ಮ ರೂಪವಾಗಿದೆ. ತಮಗೆ ನಾನು ಬೇಕಾದವನು ಎಂದಾದಲ್ಲಿ ನನ್ನ ವ್ರತ ನಿಯಮದಿಂದ ನನ್ನನ್ನು ತಾವು ಪರಾವರ್ತನನ್ನಾಗಿ ಮಾಡಬೇಡಿರಿ. ಇದೇ ನನ್ನ ಪ್ರಾರ್ಥನೆ."

"ಹಾಗೇಯೇ ಆಗಲಿ. ನಾನು ನಿನ್ನ ವ್ರತ ಭಂಗವನ್ನು ಮಾಡಲಾರೆ. ನಿನ್ನಮೇಲೆ ಕೋಪವನ್ನೂ ತಾಳಲಾರೆ, ಆದರ ಬದಲಾಗಿ ನನ್ನ ಮನಸ್ಸಿನಲ್ಲಿ ನಿನ್ನ ಈ ನಿರ್ಣಯದಿಂದಾಗಿ ವಿಶೇಷ ವಾತ್ಸಲ್ಯವು ಮೂಡಿದೆ. ನಿನ್ನ ಹಿತಕ್ಕಾಗಿಯೇ ಒಂದು ಮಾತನ್ನು ಹೇಳುವೆ. ಅದನ್ನು ನೀನು ನಡೆಸಿಯೇ ತೀರಬೇಕು."

"ಮಹದಾಜ್ಞೆ, ಪ್ರಭು."

"ಇಂದ್ರನ ಆಗಮನವಾದೊಡನೆ ನೀನು ನಿನ್ನ ಕವಚ ಕುಂಡಲಗಳನ್ನು ಆತನಿಗೆ ಸಮರ್ಪಿಸುವಿ. ಇದರಲ್ಲಿ ಯಾವ ಸಂಶಯವೂ ಇಲ್ಲ. ಆಗ ನೀನು ಆ ಇಂದ್ರನಿಂದ ಒಂದು ಅಮೋಘವಾದ ವರವನ್ನು ಪಡೆದುಕೋ. ಪ್ರಸಂಗ ಬಂದಾಗ ಆ ವರದಿಂದ ನಿನ್ನ ರಕ್ಷಣೆಯಾಗಬಹುದು."

"ಭಗವನ್, ಇಂದ್ರನಿಂದ ನಾನು ಶಕ್ತಿಯನ್ನು ಪಡೆದುಕೊಳ್ಳಬೇಕೆ ?"

"ಕರ್ಣಾ, ಇನ್ನು ವಿರೋಧ ಮಾಡಬೇಡ. ಇದು ನನ್ನ ಆಜ್ಞೆ ಎಂದು ತಿಳಿದುಕೋ."

"ತಮ್ಮ ಇಚ್ಛೆಯಂತಾಗಲಿ, ದಾನಿಯಾದ ಈ ಕರ್ಣನ ಜೀವನದಲ್ಲಿ ದೈವಾಜ್ಞೆಯಿಂದ ಯಾಚನೆಯ ಕಲಂಕವು ಅಂಟುವದಾದಲ್ಲಿ ಅದು ಚಂದ್ರನ ಕಲಂಕದಂತೆ ಶೋಭಾಯಮಾನವಾಗಿಯೇ ಪರಿವರ್ತಿಸಲಿ. ಅದರಿಂದಲೂ ಸಹ ನಾನು ಸಮಾಧಾನವನ್ನು ಪಡುವೆ."

ಕರ್ಣನು ಸೂರ್ಯದೇವನಿಗೆ ಸಾಷ್ಟಾಂಗಪೂರ್ವಕ ನಮಸ್ಕಾರ ಮಾಡಿದ. ಆ ಗಂಭೀರ ನಾದವು ಕಡಿಮೆಯಾಗುತ್ತ ಹೋಗಿ ಕೊನೆಗೆ ಇಲ್ಲದಂತಾಯಿತು. ಸುವರ್ಣಮಯ ಪ್ರಕಾಶವು ಮರೆಯಾಗಿ ಹೋಯಿತು. ಬೆಳಗಿನ ಕಿರಣಗಳು ಗವಾಕ್ಷದಿಂದ ತೂರಿ ಬಂದು ರಾಜಮಹಲಿನಲ್ಲಿ ಬೆಳಕನ್ನು ಚಲ್ಲತೊಡಗಿದವು. ಕರ್ಣನ ದೃಷ್ಟಿಯು ವೃಷಾಲಿಯತ್ತ ಹೊರಳಿತು. ಅವಳು ಸುಖ ನಿದ್ರೆಯಲ್ಲಿದ್ದಳು. ನಡೆದುದೆಲ್ಲವೂ ಸ್ವಪ್ನವೇ? ಅಥವಾ ದೃಷ್ಟಾಂತವೆ? ಎಂಬುದನ್ನೇ ಆತನು ಯೋಚಿಸುತ್ತಲಿದ್ದ.

## 34

ಅಂದು ನಸುಕಿನಲ್ಲಿ ಕಂಡ ಅನುಭವವನ್ನೇ ಕುರಿತು ಕರ್ಣನ ಮನಸ್ಸು ಚಿಂತಿಸುತ್ತಲಿತ್ತು. ಸೂರ್ಯೋಪಾಸನೆಯ ಕಾಲ ಸಮೀಪಿಸಿದೊಡನೆ ತನ್ನ ರಥ ಸಿದ್ಧಪಡಿಸುವಂತೆ ಹೇಳಿದ, ಸಿಲುಗನ್ನಡಿಯ ಮುಂದೆ ಬಂದು ನಿಂತಾಗ ಹಿಂಬದಿಯಲ್ಲಿ ಬರುತ್ತಿರುವ ವೃಷಾಲಿಯ ರೂಪವು ಕಾಣಿಸಿತು. ಹೊರಳಿ ಅವಳನ್ನೇ ನೋಡಲಾರಂಭಿಸಿದ.

"ಏನು ಹೀಗೆ ನೋಡುತ್ತೀರಿ"

"ನಿನ್ನ ರೂಪ."

"ಅದರಲ್ಲಿ ಹೊಸದೇನಿದೆ ?"

"ವೃಷಾಲೀ, ದಿನ ನಿತ್ಯವೂ ನಮ್ಮ ರೂಪವನ್ನು ನಾವೇ ನೋಡಿಕೊಳ್ಳುತ್ತಿದ್ದರೂ ಸಹ ಒಂದು ದಿನವೂ ಅದರ ವಿಷಯದಲ್ಲಿ ಬೇಸರ ಬರುವುದಿಲ್ಲ. ಅದು ಮತ್ತಷ್ಟು ಮೋಹಕತೆಯನ್ನೇ ಹೆಚ್ಚಿಸುತ್ತದೆ. ಇಂದು ಕಳೆದುಕೊಂಡ ರೂಪವನ್ನೇ ನಾವು ನಾಳೆ ನೋಡಲು ಸಾಧ್ಯವೇ ?"

"ಅಂಥದೇನನ್ನು ಕಳೆದುಕೊಂಡಿರಿ."

"ಏನೂ ಕಳೆದುಕೊಂಡಿಲ್ಲ. ನಮ್ಮ ಪ್ರತಿದಿನದ ಬೆಳವಣಿಗೆಯೊಂದಿಗೆ

ವಾರ್ಧಕ್ಯವೂ ಸಹ ನಮ್ಮನ್ನು ತನ್ನೆಡೆಗೆ ಸೆಳೆಯುತ್ತಿರುತ್ತದೆ. ಆದುದರಿಂದ ದಿನಗಳೆದಂತೆಲ್ಲ ನಮ್ಮ ಬಲವೂ ಕಡಿಮೆಯಾಗುತ್ತದೆ. ದೇಹದ ಬಲದೊಂದಿಗೆ ಮನಸ್ಸಿನ ಬಲವೂ ಕುಸಿಯುತ್ತ ಹೋಗುತ್ತದೆ. ಹೀಗಿದ್ದರೂ ಕನ್ನಡಿಯಲ್ಲಿ ಆ ಮೋಹಕ ರೂಪವನ್ನೇ ಕಾಣುತ್ತೇವೆ. ಈ ಮಾನವ ರೂಪಿಗಾಗಿಯೇ ನಾವು ಇಷ್ಟೊಂದು ಮೋಹಿತರಾದಲ್ಲಿ ಆ ದೇವತೆಗಳ ರಾಜನೆಂದು ಕರೆಸಿ ಕೊಳ್ಳುವ ದೇವೇಂದ್ರನ ರೂಪವು ಹೇಗಿರಲಿಕ್ಕಿಲ್ಲ !"

"ಯಾಕೋ ಇಂದು ನಿಮ್ಮ ಮನಸ್ಸು ಸ್ಥಿಮಿತದಲ್ಲಿಲ್ಲ ಎಂದೆನಿಸುತ್ತಿದೆ."

"ಯಾಕೆ ?"

"ಬೆಳಗಿನಿಂದಲೂ ಒಂದು ತೆರನಾಗಿದ್ದೀರಿ. ಯಾವದರಲ್ಲಿಯೂ ನಿಮ್ಮ ಲಕ್ಷ್ಯವು ಸರಿಯಾಗಿಲ್ಲ. ನಿತ್ಯದ ಸೂರ್ಯೋಪಾಸನೆಗೆ ಸಾಕಷ್ಟು ಸಮಯ ವಿದ್ದರೂ ನೀವು ಮುಂಚಿತವಾಗಿಯೇ ರಥವನ್ನು ಸಿದ್ಧಪಡಿಸುವಂತೆ ಆಜ್ಞೆ ಮಾಡಿದೀರಿ." ಇದನ್ನೆಲ್ಲ ಗಮನಿಸಿದರೆ ಪೂಜೆಗಾಗಿ ನಿಮ್ಮ ಮನಸ್ಸು ಅಧೀರವಾದಂತೆನಿಸುತ್ತದೆ."

"ನಿಜ" ಸ್ಮಿತವದನನಾದ ಕರ್ಣನು,

"ವಸೂ, ಈ ಪೂಜಾಕಾಲದ ಅವಧಿಯಂತಹ ಭಾಗ್ಯಶಾಲಿಯಾದ ಕ್ಷಣವು ಬೇರೊಂದಿಲ್ಲ. ದೇವದರ್ಶನದ ಲಾಭವನ್ನು ಯಾರಾದರೂ ತಪ್ಪಿಸಿ ಕೊಳ್ಳುತ್ತಾರೆಯೆ ?"

"ದೇವದರ್ಶನ !"

ತನ್ನನ್ನೇ ತಾನು ಸಂಬಾಳಿಸಿಕೊಂಡು ಕರ್ಣನು ಹೇಳಿದ.

"ಹೌದು, ನದಿಯ ಪಾತ್ರದಲ್ಲಿ ನಿಂತುಕೊಂಡು ಸೂರ್ಯೋಪಾಸನೆ ಯಲ್ಲಿ ನಿರತನಾದಾಗ ಆ ಸೂರ್ಯಕಿರಣಗಳ ಸ್ನಾನದಿಂದಾಗಿ ನನ್ನ ಸಮಗ್ರ ದೇಹವನ್ನೆಲ್ಲ ದಿವ್ಯ ತೇಜವು ಆವರಿಸಿದಂತಹ ಅನುಭವವಾಗುತ್ತದೆ. ಜ್ಞಾತಾ ಜ್ಞಾತಗಳನ್ನೆಲ್ಲ ಮರೆತು ಆ ಮಹಾಚೈತನ್ಯ ರೂಪಿಯ ದರ್ಶನ ಪಡೆಯುವ ದೆಂದರೆ ಪರಮೇಶ್ವರನ ಸಾಕ್ಷಾತ್ಕಾರವನ್ನು ಹೊಂದಿದಂತಲ್ಲವೆ? ಆ ಗಳಿಗೆಗಾಗಿ ಈ ಜೀವ ಹಾತೊರೆಯುವಂತಾದಲ್ಲಿ ಅದಕ್ಕೆ ಆಶ್ಚರ್ಯಪಡುವಂಥ ಕಾರಣ ವಾದರೂ ಏಕೆ ?"

ವೃಷಾಲಿಯನ್ನು ಕಳುಹಿಸಿದ ಕರ್ಣನು ಸೂರ್ಯೋಪಾಸನೆಯ ನಿಮಿತ್ತ ಗಂಗಾ ನದಿಯತ್ತ ಹೊರಟುಬಿಟ್ಟ.

ನಿತ್ಯದ ಪದ್ಧತಿಯಂತೆ ರಥವನ್ನು ಮರದ ನೆರಳಿನಲ್ಲಿ ನಿಲ್ಲಿಸಲಾಯಿತು. ರಥ ಹಾಗೂ ಸಾರಥಿಯನ್ನು ಅಲ್ಲಿಯೇ ಬಿಟ್ಟು ಕರ್ಣನು ನದಿಯ ಪಾತ್ರದತ್ತ ಹೊರಟ

ಪ್ರವಾಹದ ಎರಡೂ ದಂಡೆಗಳ ಮೇಲೆ ವಿಶಾಲವಾದ ಮರಳಿನ ರಾಶಿಯು ಹಾಸಿದಂತಿತ್ತು. ಆ ಮರಳು ಹಾಸಿಗೆಯ ಮಧ್ಯದಲ್ಲಿ ಹರಿವ ನೀರಿನ ಪ್ರವಾಹವು ಕಣ್ಣಿಗೆ ಆನಂದವನ್ನುಂಟುಮಾಡುತ್ತಿತ್ತು. ನಡೆಯುವಾಗ ಕಾಲು ಸಪ್ಪಳಗೊಂಡಂತೆನಿಸುತ್ತಿತ್ತು. ಪ್ರವಾಹದ ಪಾತ್ರವನ್ನು ಕರ್ಣನು ಸಮೀಪಿಸಿದ. ತನ್ನ ಉತ್ತರೀಯ ವಸ್ತ್ರಾದಿಗಳನ್ನು ದಂಡೆಯ ಮೇಲಿಟ್ಟ. ಪಾದತ್ರಾಣಗಳನ್ನು ದೂರ ಬಿಟ್ಟು ಮುನ್ನಡೆದಾಗ ಅಂಗಾಲಿಗೆ ಚುರುಕು ತಾಗಿದ ಅನುಭವವಾಯಿತು. ಮರುಕ್ಷಣ ನದಿಯ ನೀರಿನಲ್ಲಿ ಕಾಲಿಟ್ಟಾಗ ಅಡಿಯಿಂದ ಮುಡಿಯವರೆಗೆ ತಂಪೇರಿದಂತಾಗಿ ಮನಸ್ಸು ಉಲ್ಲಾಸಗೊಂಡಿತು. ಪ್ರವಾಹದಲ್ಲಿ ಮುನ್ನುಗ್ಗಿದಂತೆಲ್ಲ ಶರೀರದ ಭಾಗವೆಲ್ಲ ಆ ಪ್ರವಾಹದಲ್ಲಿ ಲೀನವಾಗಿಹೋದಂತೆನಿಸತೊಡಗಿತು. ತನ್ನ ಕಟಿ ಭಾಗದವರೆಗೆ ಪ್ರವಾಹವು ಬಂದಾಗ ಕ್ಷಣಹೊತ್ತು ಕರ್ಣನು ಅಲ್ಲಿಯೇ ನಿಂತುಕೊಂಡ. ಜಲಾಭಿಮಾನಿ ದೇವತೆಗಳಿಗೆ ನಮಿಸಿ ಮುಳುಗು ಹಾಕಿದ. ಆತನ ಕೈಗಳು ಹರಿವ ಪ್ರವಾಹದಂತೆ ರಭಸದಿಂದ ನೀರ ಮೇಲಾಡುತ್ತಿದ್ದವು. ಬಹುದೂರದವರೆಗೆ ಈಜುತ್ತ ಹೋಗಿ ಪುನಃ ಮೊದಲಿನ ಸ್ಥಾನಕ್ಕೆ ಮರಳಿಬಂದು ಮುಖದ ಮೇಲೆ ಬಿದ್ದ ಕೂದಲುಗಳನ್ನೆಲ್ಲ ಹಿಂದಕ್ಕೆ ಸರಿಸಿ ನಡು ಪ್ರವಾಹದಲ್ಲಿ ನಿಂತುಕೊಂಡ. ಆತನ ಮೇಲಿರುವ ಜಲಬಿಂದುಗಳು ಸೂರ್ಯ ಕಿರಣಗಳ ಪ್ರಕಾಶದಿಂದ ಫಳಫಳನೆ ಹೊಳೆಯಲಾರಂಭಿಸಿದವು. ತನ್ನೆರಡೂ ಕೈಗಳನ್ನು ಜೋಡಿಸಿ ಸೂರ್ಯ ನಾರಾಯಣನನ್ನು ಕುರಿತು ಪ್ರಾರ್ಥನೆಯನ್ನಾರಂಭಿಸಿದ. ನಿತ್ಯದ ಪೂಜಾ ವಿಧಾನವು ಕ್ರಮವಾಗಿ ಆರಂಭವಾಯಿತು. ಮೆಟ್ಟಿಲು ಮೆಟ್ಟಿಲಾಗಿ ಮೇಲೇರುತ್ತ ಸಾಗಿದ. ಭಕ್ತನ ಚಿಂತನಾ ಕ್ರಮವು ಕೊನೆಗೆ ಏಕಾಗ್ರತೆಯ ಹಂತವನ್ನು ತಲುಪಿತು.

ಅಪರಾಹ್ನ ಕಾಲ ಸಮೀಪಿಸಿದಾಗ ಕರ್ಣನ ಪೂಜಾ ವಿಧಾನವು ಒಂದು

ಹಂತಕ್ಕೆ ತಲುಪಿತು. ಬಿಸಿಲಿನ ತಾಪದಿಂದಾಗಿ ತಲೆಗೂದಲುಗಳು ಒಣಗಿ ಹೋಗಿದ್ದವು. ಆತನು ಬಾಗಿ ಎರಡೂ ಕೈಗಳಲ್ಲಿ ಗಂಗಾ ಜಲವನ್ನು ತುಂಬಿ ಕೊಂಡಾಗ ಮನವು ಅಧೀರವಾದಂತೆನಿಸಿತು.

"ಯಾರಾದರೂ ಯಾಚಕರಿದ್ದಾರೆಯೆ ?"

"ಇದ್ದಾರೆ." ಹಿಂದಿನಿಂದ ಒಂದು ಧ್ವನಿಯು ಕೇಳಬಂದಿತು.

"ಯಾಚಕರಿಗೆ ಸ್ವಾಗತ ಬಯಸುವೆ, ತಮಗೇನು ಬೇಕಾಗಿದೆ ?

"ದಾನ."

"ನನ್ನ ಪೌರುಷ ಹಾಗೂ ಧರ್ಮದ ಹೊರತಾಗಿ ತಮಗೆ ಬೇಕಾದುದ ನ್ನೆಲ್ಲ ಕೇಳಬಹುದು. ತಮ್ಮ ಅಪೇಕ್ಷೆಯನ್ನು ಪೂರೈಸಲು ನಾನು ಸಿದ್ಧ ನಾಗಿರುವೆ. ಈ ಸೂರ್ಯದೇವನ ಸಾಕ್ಷಿಯಾಗಿ ತಮ್ಮ ಮನೋಬಯಕೆ ಯನ್ನು ನಾನು ಪೂರ್ಣಗೊಳಿಸುವೆ."

ಕರ್ಣನು ತನ್ನ ಬೊಗಸೆಗಳಲ್ಲಿ ಹಿಡಿದಿದ್ದ ಜಲವನ್ನು ಪ್ರವಾಹದಲ್ಲಿ ಹರಿಬಿಟ್ಟು ಯಾಚಕನ ದರ್ಶನಾಪೇಕ್ಷೆಗಾಗಿ ಹಿಂದಿರುಗಿದ.

ಇಂದ್ರನಿಗೆ ನಮಿಸಬೇಕೆಂದಿದ್ದ ಅವನ ಕೈಗಳು ಹಾಗೆಯೇ ನಿಂತು ಹೋದವು. ಓರ್ವ ವೃದ್ಧ ಬ್ರಾಹ್ಮಣನು ನಿಂತುಕೊಂಡಿದ್ದ. ಆತನ ಬಡಕಲು ದೇಹ, ಮೈಮೇಲೆ ಹೊದ್ದಿದ್ದ ಜೀರ್ಣ ವಸ್ತ್ರಗಳು, ಆತನ ಪರಿಸ್ಥಿತಿಯನ್ನು ಎತ್ತಿ ತೋರಿಸುತ್ತಿದ್ದವು. ಆ ರೂಪವನ್ನು ಕಂಡ ಕರ್ಣನು ಆಶ್ಚರ್ಯಚಕಿತ ನಾದ. ಅಕ್ಕಪಕ್ಕದಲ್ಲಿ ನೋಡಿದ. ಬೇರೆ ಯಾರೂ ಇರಲಿಲ್ಲ.

"ಅಂಗರಾಜನಿಗೆ ಜಯವಾಗಲಿ."

ಆ ಬ್ರಾಹ್ಮಣನನ್ನು ಮತ್ತೊಂದು ಸಲ ದಿಟ್ಟಿಸಿ ನೋಡಿದ ನಂತರ ಕೈ ಮುಗಿದು ಕೇಳಿದ.

"ಎಲೈ ವಿಪ್ರೋತ್ತಮನೇ, ಸಾಲಂಕೃತ ಸರ್ವಾಭರಣಗಳಿಂದ ಯುಕ್ತ ಳಾದ ಸ್ತ್ರೀ ಅಥವಾ ಅತ್ಯುತ್ತಮವಾದ ಗೋಸಂಪತ್ತು, ಇವುಗಳಲ್ಲಿ ನಿನಗಾವುದು ಬೇಕು ?"

ಬ್ರಾಹ್ಮಣನು ನಕ್ಕುಬಿಟ್ಟ.

"ಅಂಗರಾಜ, ಈಗಾಗಲೇ ನೀವು ದಾನವನ್ನು ಕೊಟ್ಟುಬಿಟ್ಟಿದ್ದೀರಿ. ಇನ್ನು ನಡೆಯಬೇಕಾದುದು ಆ ದಾನದ ಸಂಕಲ್ಪ ಹಾಗೂ ಅವುಗಳನ್ನು

ನಿಮ್ಮ ಹಸ್ತದಿಂದ ಸ್ವೀಕರಿಸುವ ಕಾರ್ಯಗಳು ಮಾತ್ರ ಉಳಿದುಕೊಂಡಿವೆ."

"ನಿರ್ಭಯ ಮನಸ್ಸಿನಿಂದ ತಾವು ತಮ್ಮ ಮನದಿಂಗಿತವನ್ನು ತಿಳಿಸಿರಿ. ಯಾವುದು ತಮಗೆ ಅಪೇಕ್ಷಿತವೋ ಅದನ್ನು ನಾನು ಅವಶ್ಯವಾಗಿ ಕೊಡುವೆ. ದಾನಿಯಾದ ಈ ಕರ್ಣನ ವಿಚಾರದಲ್ಲಿ ಸ್ವಲ್ಪವೂ ಸಂಶಯವನ್ನು ತಾಳ ಬೇಡಿರಿ."

"ಅಂಗರಾಜ, ಎಲ್ಲ ದಾನಗಳೂ ಆನಂದಪ್ರದವಾಗಿರುವುದಿಲ್ಲ. ಕೆಲವು ಕ್ಲೇಶದಾಯಕ ಎಂದೆನಿಸುವ ದಾನಗಳೂ ಉಂಟು"

"ಅಂಥ ದಾನದಿಂದ ತಾವು ತೃಪ್ತರಾಗುವಿರಲ್ಲವೆ ? ಅಂದ ಮೇಲೆ ನನ್ನ ದಾತೃತ್ವದ ಚಿಂತೆಯನ್ನು ಮಾಡಬೇಡಿರಿ. ತಮ್ಮ ಸಲುವಾಗಿ ನಾನು ಎಂಥ ಯಾತನೆಯನ್ನನುಭವಿಸಲೂ ಸಿದ್ಧನಾಗಿರುವೆ, ಅದರಲ್ಲಿಯೇ ನನಗೆ ಮಹದಾನಂದವಿದೆ"

ನಿರ್ಭಯದಿಂದ ಕೂಡಿದ ಕರ್ಣನ ವಾಣಿಯಿಂದ ಯಾಚಕನು ಸಂಕೋಚ ಪಡಲಾರಂಭಿಸಿದ. ಅಪೇಕ್ಷಿತವಾದ ಪದಾರ್ಥಗಳನ್ನು ಕೇಳುವ ಬಲವು ಆ ಬ್ರಾಹ್ಮಣನಲ್ಲಿ ಕುಸಿಯತೊಡಗಿದಂತೆ ಭಾಸವಾಯಿತು. ಆ ವೃದ್ಧನ ಅವಸ್ಥೆಯನ್ನು ಕಂಡು ಅಂತರಂಗದಲ್ಲಿಯೇ ಕರ್ಣನ ಮನಸ್ಸು ತೃಪ್ತಿಹೊಂದಿತು. ಆ ಬ್ರಾಹ್ಮಣನಿಂದ ದಾನ ಸ್ವೀಕಾರ ಮಾಡಿಕೊಳ್ಳುವ ಮಂತ್ರಗಳನ್ನು ಕೇಳಲು ಆತನ ಮನವು ಉತ್ಸುಕವಾಯಿತು.

"ಅಂಗರಾಜ ! ನನಗೆ.......ನಿಮ್ಮ ಕವಚ ಕುಂಡಲಗಳು ಬೇಕಾಗಿವೆ."

"ಕೊಟ್ಟೆ" ಆ ಕ್ಷಣವೇ ಕರ್ಣನು ಉತ್ತರಿಸಿದ.

ಬ್ರಾಹ್ಮಣನ ಮುಖವು ಅರಳಿತು. ಆದರೆ ಅದು ಬಹು ಹೊತ್ತು ನಿಲ್ಲಲಿಲ್ಲ. ಕರ್ಣನ ಮುಖದಲ್ಲಿ ಹಾಸ್ಯದೊಂದಿಗೆ ಕಣ್ಣಾಲಿಗಳು ಹನಿ ಗೂಡಿದವು. ಆತನ ಸ್ಥಿತಿಯನ್ನು ಕಂಡ ಬ್ರಾಹ್ಮಣನು,

"ಮಹಾರಾಜ, ದಾನವಿತ್ತ ಬಗ್ಗೆ ವ್ಯಥೆಯಾಗುತ್ತಿದೆಯೇ ?"

ಕರ್ಣನು ತನ್ನ ಕಣ್ಣುಗಳನ್ನೊರೆಸಿಕೊಂಡು ಹೇಳಿದ.

"ಈ ಕರ್ಣನಿಗೆ ದಾನವಿತ್ತ ಬಗ್ಗೆ ಎಂದಿಗೂ ದುಃಖವಿಲ್ಲ. ಆದರೆ ಯಾಚನೆಯಂತಹ ಕಾರ್ಯ ಬೇರೊಂದಿಲ್ಲ ಎಂದೆನಿಸಿತು. ಬಡತನವೆಂಬುದು

ತುಂಬ ಕಷ್ಟದ ಸಹಿಷ್ಣುತೆ ಎಂದು ಕೇಳಿದ್ದೆ. ಆದರೆ ಸ್ವರ್ಗಾಧಿಪತಿಯಾದ ದೇವೇಂದ್ರನೂ ಯಾಚನೆಗಾಗಿ ದರಿದ್ರ ಬ್ರಾಹ್ಮಣನ ವೇಷ ಧರಿಸಬೇಕಾದ ಪ್ರಸಂಗವು ಬಂದಿತಲ್ಲ; ಎಂದು ಮನವು ವಿಹ್ವಲಗೊಂಡಿತು."

"ನನ್ನನ್ನು ಗುರುತಿಸಿದೆಯಲ್ಲ !"

"ತಾವು ಕವಚ ಕುಂಡಲಗಳನ್ನು ಕೇಳಲು ಬರುವ ವಿಚಾರವು ನನಗೆ ಮೊದಲೇ ತಿಳಿದು ಬಂದಿತ್ತು. ತಮ್ಮ ದರ್ಶನಕ್ಕಾಗಿಯೇ ನನ್ನ ಮನಸ್ಸು ಹಾತೊರೆಯುತ್ತಿತ್ತು."

"ಇದನ್ನು ನಿನಗೆ ಹೇಳಿದವರಾರು ?"

"ತಮಗೆ ಅರ್ಜುನ ಹೇಗೆ ಪ್ರಿಯನೋ ಹಾಗೆ ಸೂರ್ಯದೇವನಿಗೆ ನಾನು ಪ್ರಿಯ "

ವಿಪ್ರವೇಷದಲ್ಲಿದ್ದ ಇಂದ್ರನ ಮುಖದ ಮೇಲೆ ಹಾಸ್ಯವು ಪ್ರಕಟವಾಯಿತು. ಕರ್ಣನ ಲಕ್ಷ್ಯವು ಇಂದ್ರನ ಪಾದಗಳ ಮೇಲಿತ್ತು. ಬ್ರಾಹ್ಮಣನು ಹೊತ್ತ ವಸ್ತ್ರಗಳು ಪೀತಾಂಬರಗಳಾಗಿ ಮಾರ್ಪಟ್ಟವು. ಕರ್ಣನು ಪಾದದಿಂದ ಶಿರೋಭಾಗದವರೆಗೆ ನಿಧಾನವಾಗಿ ತನ್ನ ನೋಟವನ್ನು ಬೀರಿದ. ಹಿರಣ್ಯರೂಪಿಯೂ, ದೀರ್ಘ ಬಾಹುಗಳಿಂದ ಕೂಡಿದವನೂ ಆದ ಇಂದ್ರನ ರೂಪವನ್ನು ಕಂಡು ಕರ್ಣನ ಮನಸ್ಸು ಆನಂದ ಸಾಗರದಲ್ಲಿ ಮುಳುಗಿತು. ಆಕಾಶದಲ್ಲಿ ಕಪ್ಪುಮೋಡವೊಂದು ಅವರಿಬ್ಬರಿಗೂ ನೆರಳಾಗಿ ನಿಂತುಕೊಂಡಂತೆ ನಿಸಿತು. ಅತ್ಯಂತ ಆದರ ಭಾವದಿಂದ ದೇವೇಂದ್ರನಿಗೆ ಕರ್ಣನು ಸಾಷ್ಟಾಂಗ ನಮಸ್ಕಾರವನ್ನು ಮಾಡಿದ.

"ರಾಧೇಯಾ, ನಿನಗೆ ಕಲ್ಯಾಣವಾಗಲಿ, ಕವಚ ಕುಂಡಲಗಳನ್ನು ಕೊಡುವಿಯಷ್ಟೇ ?"

ಕರ್ಣನು ಒಂದು ಸಲ ತನ್ನ ಮೈ ಮೇಲಿರುವ ಕರ್ಣ ಕುಂಡಲಗಳನ್ನು ಮುಟ್ಟಿನೋಡಿದ, ಆತ ಇನ್ನೂ ಪ್ರವಾಹದಲ್ಲಿಯೇ ನಿಂತುಕೊಂಡಿದ್ದ. ಆತನ ವಸ್ತ್ರಗಳು ದಂಡೆಯ ಮೇಲಿದ್ದವು. ಸಾರಥಿ, ರಥ, ಹಾಗೂ ಶಸ್ತ್ರಾಸ್ತ್ರ ಮೊದಲಾದವುಗಳೆಲ್ಲ ಮರದ ನೆರಳಿನಲ್ಲಿಯೇ ಇದ್ದವು. ಕರ್ಣನಿಗಿರುವ ತೊಂದರೆಯನ್ನು ದೇವೇಂದ್ರನು ಗ್ರಹಿಸಿದ. ಆತನು ತನ್ನ ಬಲಗೈಯನ್ನು ಮುಂದೆ ಮಾಡಿದ. ಆ ಕೈಯ್ಯಲ್ಲಿ ಹರಿತವಾದ ಒಂದು ಅಸ್ತ್ರವಿತ್ತು. ಅದನ್ನು ಕೈಗೆತ್ತಿಕೊಂಡ ಕರ್ಣನು; ಅದನ್ನೆ ನೋಡುತ್ತಲಿದ್ದ

"ಕರ್ಣ, ಏನು ವಿಚಾರ ಮಾಡುತ್ತಿರುವೆ ?"

"ದೇವಾ ನಾನೊಬ್ಬ ಸಾಮಾನ್ಯ ಜೀವಿ, ಸೂತ ಕುಲದಲ್ಲಿ ಬೆಳೆದವನು. ಪೂರ್ವಜನ್ಮದ ಗುರುತಿಗಾಗಿ ಈ ಕವಚ ಕುಂಡಲಗಳು ನನ್ನಲ್ಲಿ ಉಳಿದು ಕೊಂಡು ಬಂದಿವೆ. ಇಂದು ಆ ಗುರುತೂ ಸಹ ಇಲ್ಲದಂತಾಗುತ್ತದೆ ಎಂಬ ವ್ಯಥೆ ನನಗೆ ತಿಲಮಾತ್ರವೂ ಇಲ್ಲ. ಆದರೆ ಅವುಗಳನ್ನು ಕಳಚಿದ ಅನಂತರ ನನ್ನ ಈ ದೇಹ ವಿರೂಪಗೊಳ್ಳಬಹುದೆ? ಎಂಬ ಚಿಂತೆಯು ಮಾತ್ರ ಕಾಡುತ್ತ ಲಿದೆ. ತಾವು ಸಾಪೇಕ್ಷಿತ ಸೌಂದರ್ಯದ ಅಧಿದೇವತೆ ಎಂದು ಕರೆಸಿಕೊಳ್ಳುವಿರಿ. ಸುದೈವದಿಂದ ಪ್ರತ್ಯಕ್ಷರೂಪಿನಲ್ಲಿ ಸಂದರ್ಶನವಿತ್ತಿರುವಿರಿ. ಈ ದಾನದಿಂದ ನಾನು ವಿರೂಪಿಯಾಗಬಾರದು ಎಂದೆನ್ನಿಸುತ್ತಿದೆ."

"ತಥಾಸ್ತು ! ಕರ್ಣ ನಿನ್ನ ಅಪೇಕ್ಷೆಯಂತೆಯೇ ಆಗಲಿ. ಆ ವಿಷಯದಲ್ಲಿ ನೀನು ನಿಶ್ಚಿಂತನಾಗಿರು."

ಕರ್ಣನು ಇಂದ್ರನಿಂದ ಕೊಡಲ್ಪಟ್ಟ ಅಸ್ತ್ರದಿಂದ ತನ್ನ ಕರ್ಣ ಕುಂಡಲ ಗಳನ್ನು ಬಿಡಿಸಲಾರಂಭಿಸಿದ. ಆತನ ಮುಖದ ಮೇಲೆ ನೋವಿನ ಛಾಯೆ ಯಾಗಲೀ ಅಥವಾ ಅಳುಕಾಗಲೀ ಸ್ವಲ್ಪವೂ ಕಾಣಿಸುತ್ತಿರಲಿಲ್ಲ. ಎಂದಿನಂತೆ ಆ ಸಮಯದಲ್ಲಿಯೂ ಸಹ ಕರ್ಣನ ಮುಖವು ಮಂದಸ್ಮಿತವಾಗಿಯೇ ಇತ್ತು. ಕವಚ ಕಿತ್ತು ತೆಗೆದಂತೆಲ್ಲ ಮರುಕ್ಷಣದಲ್ಲಿಯೇ ಆ ಭಾಗವೆಲ್ಲ ಮೊದಲಿನಂತಾಗು ತಿತ್ತು. ಕವಚಕುಂಡಲಗಳನ್ನು ಸಂಪೂರ್ಣವಾಗಿ ದೇಹದಿಂದ ಬಿಡಿಸಿದನಂತರ ಅವುಗಳನ್ನು ಕೈಯಲ್ಲಿ ಹಿಡಿದು ಮುಂದೆ ಚಾಚಿದಾಗ ಇಂದ್ರನು ತನ್ನೆರಡೂ ಕೈಗಳನ್ನು ಮುಂದೆ ಮಾಡಿದ ಆಗ ದೇವರಾಜನ ಕೈಗಳಲ್ಲಿ ಕರ್ಣಕುಂಡಲ ಗಳೊಡನೆ ಆತನಿಂದ ಕೊಡಲ್ಪಟ್ಟ ಅಸ್ತ್ರವನ್ನೂ ಸಹ ಇಡಲಾಯಿತು. ಮರು ಕ್ಷಣದಲ್ಲಿ ನೋಡ ನೋಡುತ್ತಿರುವಂತೆ ಅವುಗಳೆಲ್ಲ ಅಂತರ್ಧಾನ ಹೊಂದಿದವು. ಕರ್ಣನು ಆ ಭರಿಗೈಯನ್ನೇ ಸ್ವಲ್ಪ ಹೊತ್ತು ನೋಡುತ್ತಲಿದ್ದ. ಆತನ ಕಣ್ಣುಗಳಿಂದ ಎರಡು ಹನಿಗಳು ಉದುರಿದವು.

"ದಾನದ ಬಗ್ಗೆ ವ್ಯಥೆ ಎನಿಸಿತೆ ?" ಇಂದ್ರನು ಪ್ರಶ್ನೆ ಮಾಡಿದ.

"ಇಲ್ಲ, ದುಃಖವು ದಾನದ ನಿಮಿತ್ತವಾಗಿಲ್ಲ. ನನ್ನ ದೌರ್ಭಾಗ್ಯಕ್ಕಾಗಿ ವ್ಯಥೆಪಡುತ್ತಲಿರುವೆ."

"ದೌರ್ಭಾಗ್ಯವೇತರದು !" ಇಂದ್ರನು ಆಶ್ಚರ್ಯದಿಂದ ಪ್ರಶ್ನೆ ಮಾಡಿದ.

"ನನ್ನ ಕವಚಕುಂಡಲಗಳನ್ನು ನಿಮ್ಮ ಕೈಯಲ್ಲಿಡುವಂತಾಯಿತಲ್ಲ ಎಂದು ನನಗೆ ಹೆಮ್ಮೆ ಎನಿಸಿದೆ, ಅಭಿಮಾನವೆನಿಸಿದೆ. ಮಾನವ ಜೀವಿಗೆ ಇದಕ್ಕಿಂತಲೂ ಹೆಚ್ಚಿನ ಸಾರ್ಥಕ್ಯವೆಂಬುದು ಬೇರೊಂದಿಲ್ಲ. ಅಂಥದೇನಾದರೂ ಇದ್ದಲ್ಲಿ ಅದು ಪರಮೇಶ್ವರನ ಪಾದಾರವಿಂದಗಳನ್ನು ಕೂಡಿಕೊಳ್ಳುವದು. ತಾವು ಕೇವಲ ನನ್ನ ಕವಚ ಕುಂಡಲಗಳನ್ನು ಮಾತ್ರ ಕೇಳಿದಿರಿ, ಆದರೆ ನನ್ನನ್ನು ಕೇಳಲಿಲ್ಲ. ಆ ಕವಚಕುಂಡಲಗಳನು ಹೇಗೆ ಪರಮಾತ್ಮನಿಂದ ವರದಾನವಾಗಿ ಬಂದಿದ್ದಾವೋ ಹಾಗೆಯೇ ಈ ದೇಹವೂ ಸಹ ಆ ಮಹಾನು ಭಾವನ ವರಪ್ರಸಾದದಿಂದಲೇ ಪ್ರಾಪ್ತವಾಗಿದೆ. ಆದುದರಿಂದ ಈ ದೇಹ ದಲ್ಲಿರುವ ಆತ್ಮದೊಂದಿಗೆ ಈ ದಾನಕಾರ್ಯವು ನಡೆದಿದ್ದಲ್ಲಿ ಎಷ್ಟು ಚನ್ನಾಗಿರು ತ್ತಿತ್ತು. ಹಾಗಾಗಲಿಲ್ಲವಲ್ಲ; ಎಂದು ವ್ಯಥೆಪಡುತ್ತಿದ್ದೇನೆ. ನಾನು ನನ್ನ ಸರ್ವಸ್ವವನ್ನೆಲ್ಲ ತಮ್ಮ ಪಾದಾರವಿಂದದಲ್ಲಿ ಅರ್ಪಿಸಲು ಸಿದ್ಧನಾಗಿದ್ದೇನೆ."

ಅರ್ಜುನನ ರಕ್ಷಣೆಗಾಗಿ ಕರ್ಣನಿಂದ ಕವಚಕುಂಡಲಗಳನ್ನು ಪಡೆಯಲು ಬಂದ ದೇವೇಂದ್ರನಿಗೆ ಆತನ ನಿರ್ಮಲವಾದ ಮನಸ್ಸನ್ನು ಕಂಡು ತುಂಬ ಸಂತೋಷವಾಯಿತು. ಕರ್ಣನನ್ನು ಬಹು ಆನಂದದಿಂದ ಅಪ್ಪಿಕೊಂಡ ದೇವೇಂದ್ರನು—

"ರಾಧೇಯಾ, ನಿನ್ನ ನಿರ್ಮಲವಾದ ಮನಸ್ಸನ್ನು ಕಂಡು ನನಗೆ ಪರಮಾನಂದವಾಗಿದೆ. ನೀನು ಏನು ಬೇಕಾದರೂ ಕೇಳು ನಾನು ಕೊಡಲು ಸಿದ್ಧನಾಗಿರುವೆ."

ಕರ್ಣನಿಗೆ ತಾನು ಸೂರ್ಯದೇವನಿಗಿತ್ತ ವಚನವು ಸ್ಮರಣೆಗೆ ಬಂದಿತು. ಆದರೂ ಕೇಳಲು ಆತನ ಮನಸ್ಸು ಸಂಕೋಚಪಡುತ್ತಲಿತ್ತು.

"ಕೇಳು ರಾಧೇಯಾ, ಏನು ಬೇಕೋ ಕೇಳು."

"ದೇವಾ, ನಿಮ್ಮ ಅನುಗ್ರಹದಿಂದಲೇ ಮಳೆಯಾಗುತ್ತದೆ. ಆ ಮಳೆ ಬಿದ್ದ ಭೂಮಿಗೆ ತಂಪನ್ನೆರಚುತ್ತದೆ. ಆದುದರಿಂದ ಧನ-ಧಾನ್ಯಗಳ ಸಮೃದ್ಧಿ ಯಾಗುತ್ತದೆ. ತಮ್ಮ ಅನುಗ್ರಹವಾದರೆ ಯಾವದು ಅಸಾಧ್ಯ. ತಾವು ಕವಚ ಕುಂಡಲಗಳನ್ನು ಕೇಳಬಂದಾಗ ತಮ್ಮಿಂದ ಒಂದು ಶಕ್ತಿಯನ್ನು ಪಡೆದುಕೊಳ್ಳ ಬೇಕೆಂದು ನಾನು ವಚನಬದ್ಧನಾಗಿರುವೆ. ಆದರೆ ತಮ್ಮ ದರ್ಶನಮಾತ್ರದಿಂದ ನಾನು ಎಲ್ಲವನ್ನೂ ಅರ್ಪಿಸಿದಂತಾಗಿದೆ. ಹೀಗಾಗಿಕೇಳುವ ಅಧಿಕಾರವೂ

ನನ್ನಲ್ಲಿಲ್ಲ. ತಮ್ಮ ಅನುಗ್ರಹವಿದ್ದಲ್ಲಿ ಶತ್ರುಗಳನ್ನು ನಾಶಪಡಿಸುವಂತಹ ಅಮೋಘವಾದ ಶಕ್ತಿಯನ್ನು ಮಾತ್ರ ನನಗೆ ದಯಪಾಲಿಸಿರಿ. ಅದರಿಂದ ಬಲಾಢ್ಯನಾದ ಶತ್ರುವಿನಿಂದ ನನಗೆ ರಕ್ಷಣೆಯು ದೊರೆಯುವಂತಾಗಲಿ. ಪ್ರಬಲ ಶತ್ರುವನ್ನು ನಾಶಪಡಿಸುವ ಶಕ್ತಿಯು ನನಗೆ ಬರುವಂತಾಗಲಿ,"

"ತಥಾಸ್ತು; ನಿನ್ನ ಅಪೇಕ್ಷೆಯು ಪೂರ್ಣವಾಗಲಿ. ಇಂದು ನಾನು ನಿನಗೆ ನನ್ನ ವಾಸವೀ ಶಕ್ತಿಯನ್ನು ಕೊಡುತ್ತಲಿದ್ದೇನೆ. ಆದರೆ ಈ ಶಕ್ತಿಯನ್ನು ನೀನು ಒಂದೇ ಒಂದು ಸಲ ಪ್ರಯೋಗ ಮಾಡಬಹುದು. ಅನಂತರ ಆ ಶಸ್ತ್ರಾಯುಧವು ಪುನಃ ಮರಳಿ ನನ್ನಲ್ಲಿಗೆ ಬರುತ್ತದೆ. ನಿನ್ನ ಸ್ವಾರ್ಥಕ್ಕಾಗಿ ಈ ಶಕ್ತಿಯನ್ನು ಬಳಿಸಬೇಡ."

ಕರ್ಣನು ವಾಸವೀ ಶಕ್ತಿಯನ್ನು ಸ್ವೀಕಾರಮಾಡಿ ಇಂದ್ರನಿಗೆ ಬಹು ಭಕ್ತಿಯಿಂದ ನಮಸ್ಕಾರ ಮಾಡಿದ. ಆಶೀರ್ವದಿಸುವುದಕ್ಕಾಗಿ ದೇವೇಂದ್ರನು ಕೈಯನ್ನೆತ್ತಿದಾಗ ತಲೆಬಾಗಿಸಿದ. ಪುನಃ ಆ ದೇವದರ್ಶನದ ಲಾಭವನ್ನು ಪಡೆಯಲು ಮುಖವನ್ನು ಮೇಲೆತ್ತಿದಾಗ ಆ ದಿವ್ಯ ರೂಪವು ಕಾಣದಂತಾಗಿತ್ತು. ತನ್ನ ಉತ್ತರೀಯವನ್ನು ಹೊದೆದುಕೊಳ್ಳುವಾಗ ಎದೆಯ ಮೇಲೆ ಕೈಯಾಡಿಸಿಕೊಂಡು ನೋಡಿದ. ಅದೇ ಶರೀರವಿದ್ದರೂ ಸಹ ಯಾವದೋ ಒಂದು ತೇಜಸ್ಸು ಮಾಯವಾದಂತೆನಿಸಿತು.

ಕರ್ಣನು ರಾಜಗೃಹಕ್ಕೆ ಮರಳಿದ. ಆತನ ಮುಖವು ಆನಂದದಿಂದ ಅರಳಿರುವುದನ್ನು ವೃಷಾಲಿಯು ಕಂಡುಕೊಂಡಳು. ಆದರೂ ಅವಳಿಗೆ ಏನೋ ಸಮಾಧಾನವೆನಿಸಲಿಲ್ಲ. ಕರ್ಣನ ಗಮನಕ್ಕೂ ಆ ವಿಚಾರವು ಬಂದಿತು. ಅವಳನ್ನು ತನ್ನ ಸಮೀಪಕ್ಕೆ ಬರಮಾಡಿಕೊಂಡು—

"ವಸೂ, ಏನು ನೋಡುತ್ತಿರುವೆ ?"

"ಏನೂ ಇಲ್ಲ."

"ಹೇಳಬಾರದೇ ?"

"ಸೂರ್ಯೋಪಾಸನೆಯಿಂದ ಮರಳಿದ ನಂತರ ತಮ್ಮ ಮುಖದಲ್ಲಿ ಆನಂದದ ಛಾಯೆಯು ಕಂಡುಬಂದರೂ........"

"ರೂಪದಲ್ಲಿ ಯಾವುದೋ ಬದಲಾವಣೆಯಾದಂತೆನಿಸುತ್ತದೆಯಲ್ಲವೇ?"

ಅವಳು ಹೌದೆಂದು ತಲೆಯಲ್ಲಾಡಿಸಿದಳು.

"ವೃಷಾಲಿ, ನಾನು ಹೇಳಿದಲ್ಲಿ ನೀನು ಅದನ್ನು ಸತ್ಯವೆಂದು ನಂಬಲಾರೆ. ಸಾಕ್ಷಾತ್ ದೇವೇಂದ್ರನೇ ನನ್ನಲ್ಲಿ ಯಾಚಕನಾಗಿ ಬಂದಿದ್ದ."

"ದೇವೇಂದ್ರ ?"

"ಹೌದು."

"ಆ ದೇವನು ಏನು ಕೇಳಿದ ?" ಆಶ್ಚರ್ಯದಿಂದ ವಿಚಾರಿಸಿದಳು.

"ನನ್ನ ಕವಚ ಕುಂಡಲಗಳು."

ವೃಷಾಲಿಯ ಮುಖವು ಗಾಭರಿಗೊಂಡಿತು. ಕರ್ಣನಲ್ಲಾದ ಬದಲಾವಣೆಗಳ ಕಾರಣವನ್ನು ಆ ಕ್ಷಣವೇ ಅವಳು ಗುರುತಿಸಿಕೊಂಡಳು. ಶರೀರ ಕಾಂತಿಗಿಂತ ಹೆಚ್ಚಾಗಿ ಶೋಭಿಸುತ್ತಿದ್ದ ಕವಚ ಕುಂಡಲಗಳು ಮೊದಲಿನಂತಿದ್ದರೂ ಸಹ ಅವುಗಳಲ್ಲಡಕವಾದ ತೇಜವು ಮಾತ್ರ ಇಲ್ಲದಂತಾಗಿತ್ತು.

"ಅವುಗಳನ್ನು ತಾವು ಕೊಟ್ಟುಬಿಟ್ಟಿರಾ ?"

"ಕರ್ಣನು ತನ್ನ ಜೀವನದಲ್ಲಿ ಈವರೆಗೆ ಯಾವ ಯಾಚಕರನ್ನೂ ನಿರಾಶರಾಗಿ ಕಳಿಸಿದುದಿಲ್ಲ. ಹಾಗಿರುವಲ್ಲಿ ಇಂದು ಬಂದವರಂತೂ ದೇವ ದೇವೇಂದ್ರ. ಅವರಿಗೆ ನಾನು ಇಲ್ಲ ಎಂದು ಹೇಳಲು ಸಾಧ್ಯವೇ ?"

ಬಹು ದುಃಖದಿಂದ ಅವಳು ತನ್ನ ಪತಿಯನ್ನು ನೋಡಿದಳು.

"ನಿಮ್ಮ ಕವಚ ಕುಂಡಲಗಳನ್ನು ಕಿತ್ತುಕೊಳ್ಳುವಂತೆ ನೀವು ದೇವೇಂದ್ರನಿಗೆ ಮಾಡಿದುದಾದರೂ ಏನು ?"

"ವೃಷಾಲಿ, ದೇವತೆಗಳಿಗೂ ತಮ್ಮ ಅಧಿಕಾರ ಹಾಗೂ ಶಕ್ತಿಯ ಅಹಂಕಾರವಿರುತ್ತದೆ. ಯಾವದು ದೇವತೆಗಳಲ್ಲಿರಬೇಕಾದುದೋ ಅಂಥ ಶಕ್ತಿ ಮನುಷ್ಯರಲ್ಲಿ ಇರುವಂತಾದಲ್ಲಿ ಅದನ್ನು ಅವರು ಹೇಗೆ ಸಹಿಸಿಕೊಳ್ಳುತ್ತಾರೆ ? ಕದಾಚಿತ್ ಅದಕ್ಕಾಗಿಯೇ........"

"ನೀವು ಇಂದ್ರನನ್ನು ಕೇಳಲಿಲ್ಲವೇ ?"

"ದಾನ ಕೊಡುವುದು ಮಾತ್ರ ನನಗೆ ಗೊತ್ತು, ಯಾಚಕರಿಗೆ ನಾನು ಎಂದೂ ಕಾರಣಗಳನ್ನು ಕೇಳಿದವನಲ್ಲ."

ವಿಶಾಲವಾದ ಕರ್ಣನ ಎದೆಯ ಮೇಲೆ ಅವಳು ಕೈಯಾಡಿಸಿದಳು. ಅವಳ ಕಂಠವು ಬಿಗಿದು ಬಂದಿತು. ಕಣ್ಣುಗಳು ಹನಿಗೂಡಿದವು. ತುಂಬ ದುಃಖಿ

ತಳಾಗಿ ಪತಿಯನ್ನು ನೋಡಿದಾಗ ಅವನು ಬಹು ವಾತ್ಸಲ್ಯದಿಂದ ಅವಳನ್ನು ಚುಂಬಿಸಿ,

"ವಸೂ, ನೀನು ಅಳುತ್ತಿರುವೆಯಾ ? ನನ್ನ ಕವಚ ಕುಂಡಲಗಳು ಹೋದವೆಂದೇ ? ಮನುಷ್ಯನು ತನ್ನ ಬಾಹುಬಲದಿಂದ ಪರಾಕ್ರಮವನ್ನು ಬೆಳೆಸಿಕೊಳ್ಳಬೇಕು. ಅದಕ್ಕಾಗಿ ದೈವೀಲಾಭವನ್ನು ಅಪೇಕ್ಷಿಸಬಾರದು. ಕವಚ ಕುಂಡಲಗಳು ಹೋದ ಬಗ್ಗೆ ನಿನಗೆ ಆನಂದವೆನಿಸಬೇಕಾಗಿತ್ತು.

"ಆನಂದವೆ ?"

"ಹೌದು, ನಿನಗೆ ನೆನಪಿದೆಯೋ ? ಒಂದು ನಡುರಾತ್ರಿಯಲ್ಲಿ ನಾನು ಎಚ್ಚರಗೊಂಡಿದ್ದೆ. ಆಗ ನೀನು ಎಚ್ಚರಿರುವುದು ನನ್ನ ಗಮನಕ್ಕೆ ಬಂದಿತು. ಯಾವದೋ ಭಯಂಕರವಾದ ಸ್ವಪ್ನದಿಂದ ನೀನು ಎಚ್ಚರಗೊಂಡಿದ್ದೆ. ಭಯಭೀತಳಾಗಿದ್ದ ನೀನು ನಾನು ಎಚ್ಚರವಾಗುವುದನ್ನೇ ಕಾಯುತ್ತಲಿದ್ದೆ. ಆಗ ನಾನು ಹೇಳಿದೆ, ನಾನು ಹತ್ತಿರ ವಿರುವಾಗ ನಿನಗೆಂಥ ಭಯ, ಹಾಗೆ ಭಯವಾದಲ್ಲಿ ನನ್ನ ಹತ್ತಿರವೇಕೆ ಬರಲಿಲ್ಲ ಎಂದು ಕೇಳಿದ್ದೆ. ಆಗ ನೀನು ಏನು ಹೇಳಿದೆ ಎಂಬುದರ ನೆನಪಿದೆಯೆ ?"

"ಏನು ಹೇಳಿದೆ ?"

"ರಾತ್ರಿಯ ಹೊತ್ತು ಆಕಸ್ಮಿಕವಾಗಿ ನನಗೆ ಎಚ್ಚರವಾದಾಗ ನಿಮ್ಮ ಹತ್ತಿರ ಬರಲು ಅಪೇಕ್ಷೆಯಾಗುತ್ತದೆ. ಆದರೆ ನಿಮ್ಮನ್ನು ಅಪ್ಪಿಕೊಳ್ಳುವ ಧೈರ್ಯವೇ ಆಗುವುದಿಲ್ಲ. ಯಾಕೆಂದರೆ ಆ ಕಗ್ಗತ್ತಲೆಯಲ್ಲಿಯೂ ನಿಮ್ಮ ಕವಚ ಕುಂಡಲಗಳು ವಿಚಿತ್ರ ತೇಜಸ್ಸಿನಿಂದ ಹೊಳೆಯುತ್ತಿರುತ್ತವೆ. ಅವನ್ನು ಕಂಡಾಗ ನನಗೆ ಹೆದರಿಕೆಯಾಗುತ್ತದೆ. ವಸೂ, ಇನ್ನು ಮೇಲೆ ಆ ಹೆದರಿಕೆಗೆ ಅವಕಾಶವೇ ಇಲ್ಲವಲ್ಲ."

ವೃಷಾಲಿಯನ್ನು ತನ್ನ ಬಾಹುಪಾಶದಲ್ಲಿ ಬಿಗಿದುಕೊಂಡಿದ್ದ ಕರ್ಣನು,

"ನಿನಗಷ್ಟೇ ಏಕೆ ಇನ್ನು ಶತ್ರುಗಳೂ ತಮ್ಮ ಮನಸದಲ್ಲಿ ಯಾವ ಭಯವನ್ನೂ ತಾಳದೆ ನನ್ನೊಂದಿಗೆ ಯುದ್ಧ ಮಾಡಬಹುದು" ಎಂದ.

## 35

ದುರ್ಯೋಧನನ ಕರೆಯ ಮೇರೆಗೆ ಕರ್ಣನು ಹಸ್ತಿನಾವತಿಗೆ ಬಂದಿಳಿದ. ಆತನು ಯುವರಾಜನನ್ನು ಕಾಣಲು ಅರಮನೆಗೆ ಹೋದಾಗ ಶಕುನಿ, ದುಶ್ಯಾಸನರೊಂದಿಗೆ ಆಪ್ತಾಲೋಚನೆಯಲ್ಲಿ ತೊಡಗಿದ್ದ. ಕರ್ಣನ ಆಗಮನದಿಂದ ದುರ್ಯೋಧನ ಹಾಗೂ ಎಲ್ಲರೂ ಸಂತೋಷಪಟ್ಟರು.

"ಕರ್ಣ, ಇಷ್ಟೊಂದು ಅವಸರದಿಂದ ನಿನ್ನನ್ನು ಕರೆಸಿದ ಕಾರಣವೇನು ಎಂಬುದನ್ನು ತಿಳಿದುಕೊಂಡಿರುವೆಯಾ ?"

"ಇಲ್ಲ."

"ವಿರಾಟ ನಗರದಲ್ಲಿ ಕೀಚಕನ ಸಂಹಾರವಾಗಿದೆ; ಎಂಬ ನಿಶ್ಚಿತ ವಾರ್ತೆಯು ತಲುಪಿದೆ.''

''ಸಂಹಾರ ?''

''ಹೌದು, ಅದೂ ಸಹ ಅತ್ಯಂತ ಹೀನಸ್ಥಿತಿಯಲ್ಲಿ ಮಾಡಲಾಗಿದೆ. ಈ ಕಾರ್ಯ ಗಂಧರ್ವರಿಂದಾಗಿದೆ ಎನ್ನುತ್ತಾರೆ. ವಿರಾಟನ ಸಂಗೀತ, ನೃತ್ಯಶಾಲೆಯಲ್ಲಿ ತುಂಡುತುಂಡಾದ ಕೀಚಕನ ದೇಹದ ಭಾಗಗಳು ದೊರಕಿವೆಯಂತೆ ! ಅರಮನೆಯಲ್ಲಿ 'ಸೈರಂಧ್ರಿ' ಎಂಬ ಹೆಸರಿನ ರೂಪಸಂಪನ್ನಳಾದ ಸೇವಕಿಯೊಬ್ಬಳಿರುವಳಂತೆ. ಕೀಚಕನು ಅವಳ ಮೇಲೆ ಬಲಾತ್ಕಾರ ಮಾಡಲು ಯತ್ನಿಸಿದನಂತೆ. ಆಗ ಅವಳನ್ನು ರಕ್ಷಿಸಲು ಬಂದ ಗಂಧರ್ವರು ಕೀಚಕನ ವಧೆ ಮಾಡಿದರೆಂದು ನಮ್ಮ ಗುಪ್ತಚಾರರು ವರದಿ ಮಾಡಿದ್ದಾರೆ.''

ಕರ್ಣನು ತನ್ನ ವಿಚಾರದಲ್ಲಿಯೇ ತಲ್ಲೀನನಾದುದರಿಂದ ಅವನು ಏನೂ ಮಾತನಾಡಲಿಲ್ಲ. ಅದನ್ನರಿತ ದುಶ್ಯಾಸನನು,

''ಅಂಗರಾಜ, ನೀವು ಏನೂ ಮಾತನಾಡಲಿಲ್ಲವೇಕೆ ?''

''ಇಲ್ಲ, ನಾನು ವಿಚಾರದಲ್ಲಿ ಸಿಲುಕಿದ್ದೆ. ಗಂಧರ್ವರಿಂದ ಇಂಥ ಅಮಾನುಷ ಕೃತಿಗಳು ನಡೆಯುವುದಿಲ್ಲ. ಈ ಸಾಮರ್ಥ್ಯವಿರುವುದು ಕೇವಲ ಒಬ್ಬನಲ್ಲಿ ಮಾತ್ರ.''

''ಯಾರು ಅಂಥ ಬಲಶಾಲಿಯಾದವರು ?''

"ಭೀಮ" ಕರ್ಣನಿಂದ ಆ ಶಬ್ದವು ಹೊರಬಿದ್ದೊಡನೆ ಎಲ್ಲರೂ ಅವನನ್ನೇ ನೋಡಲಾರಂಭಿಸಿದರು.

"ಯುವರಾಜ, ಅಜ್ಞಾತವಾಸದಲ್ಲಿರುವ ಪಾಂಡವರನ್ನು ಹುಡುಕಲು ನೀವು ಯತ್ನಿಸುತ್ತಿರುವಿರಲ್ಲವೆ ? ವಿರಾಟನ ಮನೆಯೇ ಅವರಿಗೆ ವಾಸಸ್ಥಾನವೆನಿಸಿದೆ."

"ಈ ವಿಚಾರವನ್ನೇ ನಾವು ಮಾಡುತ್ತಲಿದ್ದೆವು" ದುರ್ಯೋಧನನು ಹೇಳಿದ.

"ಯಾವ ವಿಚಾರ ?"

"ಪಾಂಡವರ ಚಿಂತೆ ಮಾಡಬೇಕಾದುದಿಲ್ಲ. ಅವರ ಶೋಧನೆಗಾಗಿ ಕಳಿಸಿದ ದೂತರು ಮರಳಿ ಬಂದಿದ್ದಾರೆ. ಅವರ ಸುಳಿವೇ ಎಲ್ಲಿಯೂ ಸಿಗದಂತಾಗಿದೆ. ನಿಸ್ಸಂಶಯವಾಗಿ ಅವರು ಮೃತರಾಗಿದ್ದಾರೆ."

"ಸಾವು! ಪಾಂಡವರನ್ನು ಅಷ್ಟೊಂದು ಸುಲಭವಾಗಿ ಸ್ವೀಕರಿಸಲಾರದು. ನಿಮ್ಮ ಗುಪ್ತಚಾರ ದಳದಲ್ಲಿ ಅತ್ಯಂತ ಚಾಣಾಕ್ಷನಾದವನನ್ನು ಕರೆಯಿಸಿ ಆತನಿಗೆ ಸಾಕಷ್ಟು ದ್ರವ್ಯವನ್ನು ಕೊಟ್ಟು ಕಳುಹಿಸಿರಿ. ಪಾಂಡವರ ಅಜ್ಞಾತವಾಸದ ಅವಧಿಯು ಮುಗಿದೊಡನೆ ಖಂಡಿತವಾಗಿಯೂ ಅವರು ಯುದ್ಧಕ್ಕಾಗಿ ಹೊರಬೀಳುತ್ತಾರೆ"

"ಆಗಲಿ, ಈ ಕ್ಷಣವೇ ಗುಪ್ತಚಾರ ದಳಕ್ಕೆ ಅಜ್ಞೆಮಾಡುತ್ತೇನೆ. ರಾಧೇಯಾ, ನಮ್ಮ ರಾಜಧಾನಿಗೆ ತ್ರಿಗರ್ತ ರಾಜನಾದ ಸುಶರ್ಮನು ಬಂದಿದ್ದಾನೆ. ಕೀಚಕನ ವಧೆಯಾಗಿರುವದರಿಂದ ವಿರಾಟರಾಜನು ಈಗ ನಿರಾಶ್ರಿತನಾಗಿದ್ದಾನೆ. ಆದುದರಿಂದ ವಿರಾಟನ ರಾಜ್ಯದ ಮೇಲೆ ದಾಳಿ ಮಾಡಬೇಕೆಂಬುದು ತ್ರಿಗರ್ತ ರಾಜನ ಅಭಿಪ್ರಾಯವಾಗಿದೆ. ಈ ದಂಡಯಾತ್ರೆಯಿಂದ ರಾಜಧನದೊಂದಿಗೆ ನಮಗೆ ಗೋಧನವೂ ಕೈವಶವಾಗುತ್ತದೆ ವಿರಾಟನು ಶರಣು ಬಂದಲ್ಲಿ ನಮ್ಮ ಬಲವು ಹೆಚ್ಚಿದಂತಾಗುತ್ತದೆ."

ದುರ್ಯೋಧನನ ಮಾತಿಗೆ ಕರ್ಣನು ತನ್ನ ಒಪ್ಪಿಗೆಯನ್ನಿತ್ತ. ಅನಂತರ ಭೀಷ್ಮ, ದ್ರೋಣರೊಂದಿಗೆ ಕೌರವ ಸೇನೆಯು ವಿರಾಟ ನಗರದ ಮೇಲೆ ದಂಡೆತ್ತಿ ಹೊರಟಿತು. ಕೌರವರು ತಮ್ಮ ಸೇನೆಯನ್ನು ಎರಡು ಭಾಗವನ್ನಾಗಿ

ಮಾಡಿದರು. ಅದರಲ್ಲಿ ಒಂದು ಭಾಗವನ್ನು ಸುಶರ್ಮನ ನೇತೃತ್ವದಲ್ಲಿ ಗೋಧನ ಅಪಹರಿಸಬೇಕೆಂದು ನಿಶ್ಚಯಿಸಿದರು. ಇನ್ನೊಂದು ತಂಡವು ಅಪಹರಿಸಿದ ಗೋಧನವನ್ನು ಓಡಿಸಿಕೊಂಡು ಹೋಗಬೇಕೆಂಬುದಾಗಿ ನಿರ್ಧಾರ ಮಾಡಲಾಯಿತು.

ಪೂರ್ವನಿರ್ಧಾರದಂತೆ ಸುಶರ್ಮನು ಗೋಪಾಲಕರನ್ನು ಹೊಡೆದೋಡಿಸಿ ವಿರಾಟನ ಗೋಧನವನ್ನು ಹೊಡೆದುಕೊಂಡು ಬಂದ. ಕೌರವ ಸೇನೆಯು ತನ್ನ ಗೋಧನವನ್ನೆಲ್ಲ ಹೊಡೆದುಕೊಂಡು ಹೊರಟಿದೆ ಎಂಬ ವಾರ್ತೆಯನ್ನು ಕೇಳಿ ವಿರಾಟನು ಹತಬಲನಾದ. ಅವನು ತನ್ನ ಕೈಗೆ ಸಿಕ್ಕಷ್ಟು ಸೇನೆಯನ್ನು ಕೂಡಿಸಿಕೊಂಡು, ಕೌರವರನ್ನೆದುರಿಸಲು ಸಿದ್ಧನಾದ. ಆದರೆ ಸುಶರ್ಮನು ಆತನನ್ನು ಸೋಲಿಸಿ ಸೆರೆಹಿಡಿದ, ನಂತರ ಕೌರವ ಸೇನೆಯ ಇನ್ನೊಂದು ಭಾಗವು ಮುಂದೆ ಬಂದಿತು. ಅದೆಲ್ಲವನ್ನೂ ಕಂಡ ವಿರಾಟ ಪುತ್ರನಿಗೆ ಏನೂ ತೋಚದಂತಾಯಿತು. ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ವಿರಾಟನ ಕುಟುಂಬವನ್ನು ಕಂಡು ಅಜ್ಞಾತವಾಸದಲ್ಲಿದ್ದ ಪಾಂಡವರು ಪ್ರಕಟರಾದರು. ಯುದ್ಧದಲ್ಲಿ ಪಾಂಡವರು ಕೌರವರನ್ನು ಸೋಲಿಸಿದರು ವಿರಾಟನನ್ನು ಬಿಡಿಸಿಕೊಂಡು ಬಂದರು, ಆ ಯುದ್ಧದಲ್ಲಿ ಅರ್ಜುನನು ಕರ್ಣನನ್ನೂ ಭೀಷ್ಮರನ್ನೂ ದ್ರೋಣರನ್ನೂ ಪರಾಭವಗೊಳಿಸಿದನು.

ಪಾಂಡವರು ಪ್ರಕಟವಾದುದನ್ನು ಕೇಳಿದಾಗ ಕರ್ಣನು ದುರ್ಯೋಧನನಿಗೆ ಹಿಂದಿರುಗುವಂತೆ ಸಲಹೆ ಮಾಡಿದ.

"ಯುವರಾಜ, ಪಾಂಡವರು ಹೊರಬಿದ್ದಿದ್ದಾರೆ. ಈ ಯುದ್ಧದಲ್ಲಿಯೇ ಜಯಾಪಜಯಗಳ ನಿರ್ಣಯವನ್ನು ಮಾಡುವುದಕ್ಕಿಂತ ಮುಂದಿನ ಯುದ್ಧಕ್ಕಾಗಿ ನಮ್ಮ ಸಿದ್ಧತೆ ಮಾಡಿಕೊಳ್ಳುವುದು ವಿಹಿತ."

ಕರ್ಣನ ಮಾತನ್ನು ದುರ್ಯೋಧನನು ಒಪ್ಪಿಕೊಂಡ. ಸೋತ ಚಿಂತೆಯಲ್ಲಿ ಕೌರವ ಸೇನೆಯು ಹಸ್ತಿನಾಪುರದ ದಾರಿಯನ್ನು, ತುಳಿಯಲಾರಂಭಿಸಿತು.

## 36

ಅಜ್ಞಾತವಾಸದಿಂದ ಪಾಂಡವರು ಹೊರಬಿದ್ದನಂತರ ರಾಜತಂತ್ರಗಳು ಭರದಿಂದ ಪ್ರಾರಂಭವಾದವು. ದ್ರುಪದನ ಪುರೋಹಿತರು ಕೌರವ ಸಭೆಗೆ ಬಂದು ಎರಡೂ ಪಂಗಡಗಳಲ್ಲಿ ಒಪ್ಪಂದದ ಸೂಚನೆಗಳನ್ನು ಮಂಡಿಸಿದರು. ಪಾಂಡವರು ಮಂಡಿಸಿದ ಅರ್ಧ ರಾಜ್ಯದ ಬೇಡಿಕೆಗೆ ಕರ್ಣ, ದುರ್ಯೋಧನರಿಬ್ಬರೂ ತಮ್ಮ ಒಪ್ಪಿಗೆಯನ್ನೀಯಲಿಲ್ಲ. ಇದರಿಂದಾಗಿ ಪಾಂಡವರ ಸಂತಾಪವು ಬೆಳೆಯಲಾರಂಭಿಸಿತು. ಆಗ ಧೃತರಾಷ್ಟ್ರನು ಸಂಜಯನನ್ನು ಕಳುಹಿಸಿ ಇಬ್ಬರಿಗೂ ಸಮಾಧಾನವಾಗುವಂತೆ ಪ್ರಯತ್ನವನ್ನು ನಡೆಸಿದ. ಆ ಕಾರ್ಯವೂ ಫಲಪ್ರದವಾಗಲಿಲ್ಲ. ಒಂದು ದಿನ ಕೃಷ್ಣನು ಸಂಧಾನದ ದೂತನಾಗಿ ಹಸ್ತಿನಾಪುರಕ್ಕೆ ಬರುವನೆಂಬ ಮಾತು ಕೇಳಬರಲಾರಂಭಿಸಿತು. ಭೀಷ್ಮ, ದ್ರೋಣ, ಮೊದಲಾದವರು ಈ ವಾರ್ತೆಯಿಂದ ಸಂತೋಷಪಟ್ಟರು ಕೃಷ್ಣನ ಭೇಟಿಯಿಂದ ಯಾವುದಾದರೂ ಮಾರ್ಗವು ತೋಚಿದಲ್ಲಿ ಯುದ್ಧವು ನಿಲ್ಲಬಹುದು ಎಂಬ ಆಶೆಯು ಧೃತರಾಷ್ಟ್ರನಲ್ಲಿಯೂ ಮೂಡಿತು. ಆದುದರಿಂದ ಕೃಷ್ಣನ ಆಗಮನಕ್ಕಾಗಿ, ಆತನ ಸ್ವಾಗತಕ್ಕಾಗಿ ಸಕಲ ಸಿದ್ಧತೆಗಳಾಗತೊಡಗಿದವು

ಹಸ್ತಿನಾವತಿಯ ರಾಜಬೀದಿಗಳೆಲ್ಲ ಚಿತ್ರವಿಚಿತ್ರವಾದ ತಳಿರು ತೋರಣಗಳಿಂದ ಅನೇಕ ತರಹದ ರಂಗವಲ್ಲಿಗಳಿಂದ ಅಲಂಕಾರ ಮಾಡಲ್ಪಟ್ಟವು. ಕೃಷ್ಣನ ರಥವು ಹಸ್ತನಾವತಿಯ ಗಡಿಯನ್ನು ಪ್ರವೇಶ ಮಾಡಿತು. ಪ್ರಜೆಗಳೆಲ್ಲರೂ ಕೃಷ್ಣನ ಹೆಸರಿನಿಂದ ಜಯ ಜಯಕಾರ ಮಾಡಲಾರಂಭಿಸಿದರು. ಭೀಷ್ಮ, ವಿದುರಾದಿಗಳು ಆತನಿಗೆ ಆದರದ ಸ್ವಾಗತವನ್ನು ಕೋರಿದರು. ಅತ್ಯಂತ ವೈಭವಯುಕ್ತವಾದ ಸ್ವಾಗತವನ್ನು ಸ್ವೀಕರಿಸಿದ ಕೃಷ್ಣನು ಕೌರವ ಹಿರಿಯರೊಂದಿಗೆ ರಾಜಸಭೆಗೆ ದಯಮಾಡಿಸಿದನು. ಮಹಾದ್ವಾರದಲ್ಲಿಯೇ ದುರ್ಯೋಧನನು ಮುಂದೆ ಬಂದು ಆತನಿಗೆ ಸ್ವಾಗತ ಕೋರಿದನು. ಧೃತರಾಷ್ಟ್ರನನ್ನು ಭೇಟಿಯಾಗಿ ಮರಳುತ್ತಲಿದ್ದ ಕೃಷ್ಣನನ್ನು ಕಂಡು ದುರ್ಯೋಧನನು ಆತನಿಗೆ ತನ್ನ ಅತಿಥ್ಯವನ್ನು ಸ್ವೀಕರಿಸಬೇಕೆಂದು ಪ್ರಾರ್ಥನ ಸಲ್ಲಿಸಿದನು. ಆದರೆ ಕೃಷ್ಣನು ನೇರವಾಗಿ ವಿದುರನ ಬಿಡಾರಕ್ಕೆ ಹೊರಟು ಹೋದನು.

ಕೃಷ್ಣನು ತನ್ನ ಅತಿಥ್ಯವನ್ನು ನಿರಾಕರಿಸಿ ವಿದುರನ ಮನೆಗೆ ಹೋದುದರಿಂದ ಸಂತಾಪಗೊಂಡ ದುರ್ಯೋಧನನು,

"ಮಿತ್ರಾ ನೋಡಿದೆಯಾ, ತಂದೆಯವರು ಕೃಷ್ಣನಿಗೆ ಯಾವ ಪ್ರಮಾಣದಲ್ಲಿ ಸ್ವಾಗತವನ್ನು ಏರ್ಪಡಿಸಿದರು. ಆದರೆ ಆ ಕೃಷ್ಣನು ಮಾತ್ರ ನನ್ನ ಬೇಡಿಕೆಯನ್ನು ಲೆಕ್ಕಿಸದೆ ಹೊರಟುಹೋದ."

ಕರ್ಣನು ಆತನಿಗೆ ಶಾಂತನಾಗಿರಲು ಸಲಹೆಯಿತ್ತ.

"ಯುವರಾಜ, ಕೃಷ್ಣನು ಹೇಳಿದುದರಲ್ಲಿ ತಪ್ಪೇನಿಲ್ಲ. ಆತನು ದೂತನಾಗಿ ಬಂದಿದ್ದಾನೆ. ದೂತ ಕಾರ್ಯ ಮುಗಿಯದ ಹೊರತು ಯಾವದೇ ಆತಿಥ್ಯವನ್ನು ಸ್ವೀಕರಿಸುವುದು ವಿಹಿತವಲ್ಲ. ಅದು ದೂತ ಧರ್ಮವೆಂದೆನಿಸಲಾರದು! ಮಿತ್ರಾ, ಈ ಸಮಯದಲ್ಲಿ ಅಂಥ ವಿಚಾರಗಳಿಗೆ ಗಮನವೀಯುವದನ್ನು ಬಿಟ್ಟು, ನಾಳೆ ಕೃಷ್ಣನು ಏನು ಹೇಳುತ್ತಾನೋ ಅದೆಲ್ಲವನ್ನೂ ನಾವು ಮನ್ನಿಸಬೇಕೋ ಬೇಡವೋ ಎಂಬ ಬಗ್ಗೆ ವಿಚಾರ ಮಾಡು."

"ಅದರಲ್ಲಿ ವಿಚಾರ ಮಾಡುವಂಥದೇನಿದೆ? ಕೃಷ್ಣನ ಸಲಹೆ ಸೂಚನೆಗಳು ಒಪ್ಪಿಗೆಯಾದಲ್ಲಿ ಅವುಗಳನ್ನು ಮಾಡೋಣ, ಇಲ್ಲದಿದ್ದಲ್ಲಿ........"

"ಇಲ್ಲದಿದ್ದರೆ?" ಕರ್ಣನು ಬೇಕೆಂದೇ ಪ್ರಶ್ನೆ ಮಾಡಿದ.

"ಇಲ್ಲದಿದ್ದರೆ ಕೃಷ್ಣನನ್ನೇ ಹಿಡಿದಿಟ್ಟುಬಿಡೋಣ, ಈ ಸಲ ಅವನು ಕೌರವ ಸಭೆಯಿಂದ ಎಂದೂ ಪಾರಾಗಿ ಹೋಗಲಾರ."

ಕರ್ಣನ ಮುಖದಲ್ಲಿ ಭೀತಿಯ ಚಿಹ್ನೆಗಳು ಕಾಣಿಸಿಕೊಂಡವು. ಆದರೆ ದುರ್ಯೋಧನನು ಮಾತ್ರ ಕರ್ಣನಿಂದ ಬರಬಹುದಾದ ಉತ್ತರವನ್ನು ನಿರೀಕ್ಷಿಸದೆ ಹೊರಟುಬಿಟ್ಟ.

## 37

ವಿದುರನ ಮನೆಗೆ ಅಂದು ವಿಶೇಷ ಕಳೆ ಬಂದಂತಾಗಿತ್ತು. ಆತನ ಮನೆಯ ಮುಂಭಾಗದಲ್ಲಿ ಸುಲಕ್ಷಣವಾದ ಕೃಷ್ಣನ ರಥವು ನಿಂತುಕೊಂಡಿತ್ತು. ಕೃಷ್ಣನೊಂದಿಗೆ ಆಗಮಿಸಿದ್ದ ಸಾತ್ಯಕಿ ಮೊದಲಾದವರ ಆದರಾತಿಥ್ಯದಲ್ಲಿ ವಿದುರನು ನಿರತನಾಗಿದ್ದ. ತನ್ನ ನಿತ್ಯದ ಆಹ್ನೀಕಗಳನ್ನು ಮುಗಿಸಿಕೊಂಡ ಕೃಷ್ಣನು ಕೌರವ ಸಭೆಗೆ ಹೊರಡಲು ಸಿದ್ಧನಾದ. ಆ ಸಮಯಕ್ಕೆ ಸರಿಯಾಗಿ

ದುರ್ಯೋಧನನು ಕರ್ಣ, ಶಕುನಿ ಇವರೊಂದಿಗೆ ವಿದುರನ ಮನೆಗೆ ಬಂದು ಕೃಷ್ಣದರ್ಶನ ಪಡೆದುಕೊಂಡರು. ಕೃಷ್ಣನು ಎಲ್ಲರನ್ನೂ ಆತ್ಮೀಯತೆಯಿಂದ ಆದರಿಸಿ ಅವರನ್ನು ಮಾತನಾಡಿಸಿದ.

"ದುರ್ಯೋಧನಾ, ನಿನ್ನ ಆತಿಥ್ಯವನ್ನು ಸ್ವೀಕರಿಸಲಿಲ್ಲ ಎಂದು ಕೋಪಿಸಿ ಕೊಂಡಿಲ್ಲವಷ್ಟೆ ?"

"ಕೋಪಿಸಿಕೊಳ್ಳುವಂಥದೇನೂ ಇಲ್ಲ"ಎಂದು ವಿದುರನತ್ತ ನೋಡುತ್ತ ದುರ್ಯೋಧನನು "ಚಿಕ್ಕಪ್ಪನ ಮನೆಯ ಆತಿಥ್ಯವನ್ನು ನಾನು ನನ್ನ ಮನೆಯ ದೆಂದೇ ಭಾವಿಸುವೆ. ಆದರಲ್ಲಿ ನಿಮಗೆ ಯಾವ ತೊಂದರೆಯೂ ಆಗಿಲ್ಲವಷ್ಟೆ ?"

ಬಹು ಕೌತುಕದಿಂದ ದುರ್ಯೋಧನನ್ನು ನೋಡಿದ ಕೃಷ್ಣನು, "ಯುವ ರಾಜ, ಎಲ್ಲಿ ಪ್ರೀತಿ, ಪ್ರೇಮ, ವಿಶ್ವಾಸ, ಸ್ನೇಹ ಇವುಗಳಿರುತ್ತವೆಯೋ ಅಲ್ಲಿ ಯಾವ ತರಹದ ಸಂಕೋಚಗಳಿಗೂ ಅವಕಾಶವೇ ಇರುವುದಿಲ್ಲ. ಅಂಗರಾಜ ಕ್ಷೇಮವಷ್ಟೆ ?"

"ತಮ್ಮ ಕೃಪೆ."

"ಅಂಗರಾಜ, ನಿಮ್ಮ ವೃಷಸೇನನೆಲ್ಲಿ ? ನನಗೆ ಯಾವಾಗಲೂ ಅವನ ನೆನಪಾಗುತ್ತದೆ."

"ಅದು ಆತನ ಮಹಾಭಾಗ್ಯ ! ವೃಷಸೇನನು ಇಲ್ಲಿಯೇ ಇದ್ದಾನೆ. ಸಾಯಂಕಾಲ ತಮ್ಮ ದರ್ಶನ ಪಡೆಯಲು ಬರುತ್ತಾನೆ."

"ಮಹಾರಾಜ, ಭೀಷ್ಮಾದಿ ಕೌರವರು ತಂದೆಯವರೊಡನೆ ಕೌರವ ಸಭೆ ಯಲ್ಲಿ ಉಪಸ್ಥಿತರಾಗಿದ್ದಾರೆ. ಸ್ವರ್ಗದ ದೇವತೆಗಳು ದೇವೇಂದ್ರನ ಬರುವಿಕೆ ಗಾಗಿ ಹೇಗೆ ನಿರೀಕ್ಷೆ ಮಾಡುತ್ತಿರುತ್ತಾರೆಯೋ ಹಾಗೆ ತಮ್ಮ ಆಗಮನವನ್ನು ನಿರೀಕ್ಷಿಸುತ್ತಲಿದ್ದಾರೆ" ಎಂದು ದುರ್ಯೋಧನನು ಕೃಷ್ಣನಿಗೆ ಅರಿಕೆ ಮಾಡಿ ಕೊಂಡನು.

ತನ್ನ ಉತ್ತರೀಯ ವಸ್ತ್ರಾದಿಗಳನ್ನು ಸರಿಮಾಡಿಕೊಂಡ ಕೃಷ್ಣನು ಹೊರಡಲುದ್ಯುಕ್ತನಾಗಿ ವಿದುರನಿಗೆ ಹೇಳಿದ.

"ಸಭೆಯನ್ನು ಕಾಯಿಸುವುದು ಧರ್ಮವಲ್ಲ, ನಡೆ ಹೋಗೋಣ."

ವಿದುರನೊಂದಿಗೆ ಕೃಷ್ಣನು ಹೊರಬಂದಾಗ ಶುಭ್ರವಾದ ಕುದುರೆಗಳನ್ನು ಹೂಡಿದ ರಥವು ದ್ವಾರದಲ್ಲಿ ಸಿದ್ಧವಾಗಿ ನಿಂತಿತ್ತು. ವಿದುರನೊಂದಿಗೆ ರಥ

ವನ್ನೇರಿದ ಕೃಷ್ಣನು ರಾಜಸಭೆಯತ್ತ ಸಾಗಿದ. ಆತನ ರಥದ ಹಿಂದೆ ದುರ್ಯೋಧನ ಹಾಗೂ ಕರ್ಣನ ರಥಗಳಿದ್ದವು. ಅನಂತರದಲ್ಲಿ ಸಾತ್ಯಕಿ ಹಾಗೂ ಕೃತವರ್ಮರು ತಮ್ಮ ಗಜ ಹಾಗೂ ಅಶ್ವದಳದೊಂದಿಗೆ ಹೊರ ಟಿದ್ದರು.

ಕೃಷ್ಣನ ರಥದ ಹಿಂಬದಿಯಲ್ಲಿ ಯಾದವ ವೀರರ ತಂಡವಿತ್ತು. ರಾಜ ಧಾನಿಯ ಪ್ರಜೆಗಳ ಆನಂದವನ್ನನುಭವಿಸುತ್ತ ನಗರದ ವೈಭವಗಳನ್ನಾಲಿ ಸುತ್ತ ಸಾಗಿದ ಕೃಷ್ಣನ ರಥವು ಸಭಾಭವನದ ಹೆಬ್ಬಾಗಿಲಿನ ಮುಂದೆ ಬಂದು ನಿಂತಿತು. ಆಗ ಮಂಗಳವಾದ್ಯಗಳು ಮೊಳಗಿದವು. ಕೃಷ್ಣನ ಆಗಮನವನ್ನು ಸೂಚಿಸುವಂತಹ ಮಂಗಳ ವಾದ್ಯಗಳ ಧ್ವನಿಯನ್ನು ಕೇಳಿದ ಎಲ್ಲ ರಾಜರುಗಳು ರೋಮಾಂಚಿತರಾದರು. ವಿದುರ ಹಾಗೂ ಸಾತ್ಯಕಿ ಇವರನ್ನು ಎಡಬಲಗಳಲ್ಲಿ ಟ್ಟುಕೊಂಡು ಕೃಷ್ಣನು ಸಭಾಗೃಹವನ್ನು ಪ್ರವೇಶಮಾಡಿದ. ಮುಂಭಾಗ ದಲ್ಲಿ ಕರ್ಣ ದುರ್ಯೋಧನರಿದ್ದರು. ಕೃಷ್ಣನ ಹಿಂಭಾಗದಲ್ಲಿ ಕೃತವರ್ಮ ಹಾಗೂ ವೃಷ್ಣಿ ವೀರರಿದ್ದರು.

ಕೃಷ್ಣನು ಬಂದ ಸಮಾಚಾರವನ್ನು ಕೇಳಿ ಧೃತರಾಷ್ಟ್ರ ಮಹಾರಾಜನು ಎದ್ದುನಿಂತ. ಅದನ್ನು ಕಂಡ ಉಳಿದೆಲ್ಲ ರಾಜರುಗಳೂ ತಮ್ಮ ಆಸನದಿಂದ ಎದ್ದುನಿಂತರು. ಅಷ್ಟಕೋನಾಕೃತಿಯ ಸಿಂಹಾಸನವನ್ನು ಕೃಷ್ಣನಿಗೆಂದು ಇಡಲಾಗಿತ್ತು. ಆ ಆಸನದಲ್ಲಿ ಕೃಷ್ಣನು ವಿರಾಜಮಾನವಾದ ಮೇಲೆ ಸಭಾ ಭವನದಲ್ಲಿದ್ದವರೆಲ್ಲ ತಮ್ಮ ತಮ್ಮ ಆಸನದಲ್ಲಿ ಕುಳಿತುಕೊಂಡರು. ಎಲ್ಲರ ಲಕ್ಷ್ಯವೂ ಕೃಷ್ಣನಲ್ಲಿಯೇ ಕೇಂದ್ರೀಕೃತವಾಗಿತ್ತು. ಅವನು ಪೀತಾಂಬರ ವನ್ನುಟ್ಟು ಹಣೆಯಲ್ಲಿ ಕಸ್ತೂರಿತಿಲಕವನ್ನಿಟ್ಟಿದ್ದ. ಆತನ ಮೈ ಕಾಂತಿಯು ಅಗಸಿಯ ಹೂವಿನಂತಿತ್ತು. ರಾಜಸಭೆಯಲ್ಲಿ ಶಾಂತತೆಯು ಪಸರಿಸಿತು. ಆಗ ಕೃಷ್ಣನು ಎದ್ದುನಿಂತು, ಧೃತರಾಷ್ಟ್ರನನ್ನು ನೋಡಿ ಮಾತನಾಡಲಾರಂಭಿ ಸಿದನು.

"ಎಲೈ ಭಾರತಾ, ಇಂದು ಈ ಸಭೆಗೆ ನಾನು ದ್ವಾರಕಾಧೀಶನಾಗಿ ಬಂದಿಲ್ಲ. ಪಾಂಡವರ ಪ್ರತಿನಿಧಿಯಾಗಿ, ಅವರ ದೂತನಾಗಿ ಇಲ್ಲಿಯವರೆಗೆ ಬಂದಿದ್ದೇನೆ.

ಪಾಂಡವರ ಅಜ್ಞಾತವಾಸವು ಮುಗಿದಿದೆ. ಅವರು ವಿರಾಟನಗರದಲ್ಲಿ

ಪ್ರಕಟವಾಗಿದ್ದಾರೆ. ನನಗಿಂತಲೂ ಮೊದಲು ದ್ರುಪದ ಪುರೋಹಿತರು ಈ ರಾಜ ಸಭೆಗೆ ಪಾಂಡವರ ದೂತರೆಂದು ಬಂದು ಹೋಗಿದ್ದಾರೆ. ಅದೇ ರೀತಿಯಲ್ಲಿ ಕೌರವರು ಪಾಂಡವರಲ್ಲಿಗೆ ಸಂಜಯನನ್ನು ತಮ್ಮ ದೂತಕಾರ್ಯಕ್ಕಾಗಿ ಕಳುಹಿಸಿದ್ದುಂಟು. ಆದರೆ ಆ ಎಲ್ಲ ಪ್ರಯತ್ನಗಳೂ ಫಲಕಾರಿಯಾಗಲಿಲ್ಲ. ಅದನ್ನೆಲ್ಲ ತಿಳಿದುಕೊಂಡ ನಂತರ ನನ್ನ ಮನಸ್ಸು ಸುಮ್ಮನಿರದೆ ಮುಂದಾಗಬಹುದಾದ ಅನರ್ಥಗಳನ್ನು ಸಾಧ್ಯವಿದ್ದ ಮಟ್ಟಿಗಾದರೂ ತಪ್ಪಿಸಲು ಪ್ರಯತ್ನಿಸಬೇಕೆಂದು ಭಾವಿಸಿ ನಾನು ಇಲ್ಲಿಯವರೆಗೂ ಬಂದಿದ್ದೇನೆ."

"ಒಂದು ಕಾಲದಲ್ಲಿ ಪಾಂಡುರಾಜನೂ ಈ ರಾಜ್ಯವನ್ನು ವಿಸ್ತರಿಸಲು ಕಾರಣನಾಗಿದ್ದಾನೆ. ಇಂದು ಆತನ ಮಕ್ಕಳಾದ ಪಾಂಡವರು ವನವಾಸವನ್ನ ಅನುಭವಿಸಿದರು. ನೀವು ರಾಜವೈಭವಗಳನ್ನನುಭವಿಸುತ್ತ ಬಂದಿರಿ. ಇದು ಸರ್ವಥಾ ಯೋಗ್ಯವೆಂದೆನಿಸಲಾರದು. ಅವರ ಪಾಲು ಅವರಿಗೆ ದೊರೆತು, ತಮ್ಮ ಅಧಿಕಾರ ಸಂಪತ್ತಿನಿಂದ ಅವರು ಬಾಳುವಂತಾಗಬೇಕು"

"ಅಧಿಕಾರ!" ದುರ್ಯೋಧನನು ಎದ್ದುನಿಂತು, "ಅಧಿಕಾರವೇತರದು? ಒಂದೇ ಮಾತನ್ನು ಅನೇಕ ಸಲ ಹೇಳುತ್ತ ಹೋದರೆ ಆ ಮಾತಿನಲ್ಲಿ ಸತ್ಯವಿರಬಹುದೆಂಬ ತಪ್ಪು ಕಲ್ಪನೆಗೆ ಅವಕಾಶವಾಗುತ್ತದೆ. ಈ ರಾಜ್ಯವು ಕೌರವರದು, ಧೃತರಾಷ್ಟ್ರ ಮಹಾರಾಜರೇ ಈ ರಾಜ್ಯದ ಏಕಮೇವ ವಾರಸುದಾರರು,"

"ಆದರೆ ಅವರು ಕುರುಡರು" ಕೃಷ್ಣನು ಉತ್ತರಿಸಿದ.

"ಕುರುಡರೆಂದ ಮಾತ್ರಕ್ಕೆ ರಾಜ್ಯದ ಹಕ್ಕುಬಾಧ್ಯತೆಗಳು ನಾಶವಾಗಲಾರವು. ಹಾಗೇನಾದರೂ ಇದ್ದಿದ್ದರೆ ಯಾವ ರಾಜ್ಯವನ್ನು ಪಾಂಡುರಾಜನು ತಮ್ಮದನ್ನಾಗಿ ಮಾಡಿಕೊಂಡಿದ್ದನೋ ಅಂಥ ರಾಜ್ಯವನ್ನು ಅಂಥನಿಗೊಪ್ಪಿಸಿ ತಾನು ವನವಾಸ ಅನುಭವಿಸಲು ಹೋಗುತ್ತಿರಲಿಲ್ಲ. ಕೃಷ್ಣಾ, ವಿನಯದಿಂದ ಹೇಳಬೇಕೆಂದೆನಿಸುತ್ತದೆ. ಗೋಕುಲದಲ್ಲಿ ನಂದರನ್ನು ಆರಿಸುವ ಪದ್ಧತಿಯಂತೆ ರಾಜ್ಯದ ವಾರಸುದಾರರನ್ನು ಆರಿಸಲಾಗುವುದಿಲ್ಲ ನೂರು ಜನ ಕೌರವರಿದ್ದರೂ ರಾಜ್ಯದ ನೂರು ಭಾಗಗಳನ್ನು ಮಾಡಲಾಗುವುದಿಲ್ಲ, ಅದು ಯಾವಾಗಲೂ ಅಖಂಡವಾಗಿರುತ್ತದೆ.

"ಪಂಚಪಾಂಡವರು" ದುರ್ಯೋಧನನು ನಕ್ಕು "ಕೃಷ್ಣಾ, ಈ ರಾಜಸಭೆಯಲ್ಲಿ ಅನೇಕರಿಗೆ ನಿನ್ನ ಸಾಮರ್ಥ್ಯದ ವಿಚಾರವನ್ನು ಕುರಿತು ಕೌತುಕವಿದೆ

ಅವರೆಲ್ಲರೂ ನಿನ್ನನ್ನು ದೈವೀಗುಣ ಸಂಪನ್ನನೆಂದು ಭಾವಿಸಿದ್ದಾರೆ. ಆದುದ ರಿಂದ ಕೊನೆಯ ಪಕ್ಷ ನೀನಾದರೂ ಅಂಥ ಅಸತ್ಯದ ಪತವನ್ನು ಹಿಡಿಯಬಾರ ದಾಗಿತ್ತು. ಬಹಳವಾದರೆ ಅವರು ಐದು ಜನರು ಕೌಂತೇಯರಾಗಿರಬಹುದೇ ವಿನಃ ಪಾಂಡವರಲ್ಲ. ಕೊನೆಯ ಪಕ್ಷ ಈ ಸಭೆಯಲ್ಲಾದರೂ ನನಗೆ ಆ ಮಾತಿನ ಉಚ್ಚಾರವನ್ನು ಮಾಡಗೊಡಬೇಡ."

ಕೃಷ್ಣನ ಸಂತಾಪವು ಹೆಚ್ಚಿತು. ದುರ್ಯೋಧನನ ದೃಷ್ಟಿಯು ಧೃತ ರಾಷ್ಟ್ರನತ್ತ ಹರಿಯುವಂತೆ ಮಾಡಿ ಆತನು ಹೇಳಿದ,

"ಹೇ ಭಾರತಾ, ನಾನು ಇಲ್ಲಿ ವಾದವಿವಾದಗಳನ್ನು ಮಾಡಲು ಬಂದವ ನಲ್ಲ. ಧರ್ಮಾಚರಣೆಯಲ್ಲಿ ನಿರತರಾದ ಆ ಪಾಂಡವರನ್ನು ನಿನ್ನ ಮಕ್ಕಳು ಯಾವಾಗಲೂ ದ್ವೇಷಿಸುತ್ತಲೇ ಬಂದಿದ್ದಾರೆ. ವಿಶ್ವಾಸದಿಂದ ಬಂದವರನ್ನು ಅರಗಿನ ಮನೆಯಲ್ಲಿ ಹಾಕಿ ಸುಡಲು ಪ್ರಯತ್ನಿಸಿದ್ದಾರೆ. ಮುಂದೆ ನೀವೇ ಅವ ರಿಗೆ ಖಾಂಡವಪ್ರಸ್ಥದ ರಾಜ್ಯವನ್ನಿತ್ತಿರಿ. ಅದನ್ನು ಅವರು ತಮ್ಮ ಬಾಹುಬಲ ದಿಂದ ಬೆಳೆಸಿದರು. ಕೀರ್ತಿ ತರುವಂತೆ ಮಾಡಿದರು. ಬೆಳೆಯುತ್ತಿರುವ ಆ ಪಾಂಡವರ ಏಳಿಗೆಯನ್ನು ಕಂಡು ನಿನ್ನ ಪುತ್ರರಿಗೆ ಸಹನೆಯಾಗದಂತಾಯಿತು ಆಗ ಅವರು ಕಪಟ ದ್ಯೂತವನ್ನೇರ್ಪಡಿಸಿದರು. ಅಷ್ಟೇ ಅಲ್ಲ, ಪಾಂಚಾಲಿ ಯನ್ನು ಸಭೆಗೆ ಕರೆಯಿಸಿ ಅವಳಿಗೆ ಮಾಡಬಾರದ ಅವಮಾನಗಳನ್ನು ಮಾಡಿ ದರು. ಪಾಂಡವರನ್ನು ವನವಾಸಕ್ಕೆ ಕಳುಹಿಸಿದರು. ಅದೆಲ್ಲವನ್ನೂ ಅವರು ಸಹಿಸಿಕೊಂಡು ಬಂದರು. ಪ್ರತಿಜ್ಞೆಗನುಸಾರವಾಗಿ ವನವಾಸ, ಅಜ್ಞಾತವಾಸ ಗಳನ್ನು ಮುಗಿಸಿದರು. ಎಲೈ ರಾಜನೇ, ಅವರಿಗೆ ಧರ್ಮದಲ್ಲಿ ಬಲವಾದ ನಂಬಿಕೆ ಇದೆ ಅವರು ನಿನಗೆ ಬಹು ನಮ್ರತೆಯಿಂದ ವಂದನೆಗಳನ್ನು ಸಲ್ಲಿಸಿ, ವಿನಯ ದಿಂದ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ನಮಗೆ ರಾಜ್ಯ ಬೇಡ, ವೈಭವ ಬೇಡ, ನಾವು ನಮ್ಮ ಬಾಹುಬಲದಿಂದ ಅದನ್ನು ಪಡೆದುಕೊಳ್ಳುತ್ತೇವೆ. ಆದರೂ ನಮಗೆ ನಮ್ಮ ಪೂರ್ವಜರಿಂದ ಬಂದ ಬಳುವಳಿ ಎಂದು ಭಾವಿಸಿ ಐದೇ ಐದು ಹಳ್ಳಿಗಳನ್ನು ಮಾತ್ರ ತಾವು ದಯಪಾಲಿಸಿರಿ ಎಂದು ಕೇಳಿಕೊಂಡಿದ್ದಾರೆ. ಧೃತರಾಷ್ಟ್ರನೇ, ಅವರ ವಿನಯಶೀಲತೆ ಹಾಗೂ ಧರ್ಮಬುದ್ಧಿ ಇವುಗಳನ್ನು ಎಷ್ಟು ಹೊಗಳಿದರೂ ಕಡಿಮೆ ಎಂದೆನಿಸುತ್ತದೆ."

"ಪಾಂಡವರು ತಮ್ಮ ಪಿತ್ರಾರ್ಜಿತ ಹಕ್ಕು ಎಂದು ಹಳ್ಳಿಗಳನ್ನು ಕೇಳು

ತ್ತಿದ್ದಾರೆ. ಆದರಲ್ಲಿ ಧರ್ಮಬುದ್ಧಿ ಏನು ಬಂತು. ಬದಲಾಗಿ ಅದರಲ್ಲಿ ಕಪಟತನವಿದೆ. ಪಾಲು ಎಂದೊಡನೆ ಹಕ್ಕು ತಾನಾಗಿಯೇ ಉದ್ಭವವಾಗುತ್ತದೆ. ಹಕ್ಕು ಎಂದೊಡನೆ ಅಧಿಕಾರ; ಕೃಷ್ಣಾ, ಪ್ರತಿನಿಧಿಯಾಗಿ ಬಂದ ದೂತರು ಒಂದೇ ನಿಟ್ಟಿನ ವಿಚಾರವನ್ನು ಮಂಡಿಸಬಾರದು. ನಾವು ನಿನ್ನನ್ನು ಸ್ವಾಗತಿಸಿದರೂ ನೀನು ಮಾತ್ರ ಒಂದೇ ಸಮನಾಗಿ ನಮ್ಮನ್ನು ನಿಂದಿಸುತ್ತಲಿರುವಿ. ಕಾರಣ ಪಾಂಡವರ ಮೇಲೆ ನಿನ್ನ ಅಂತಃಕರಣವಿದೆ. ಆದುದರಿಂದ ಯಾವಾಗಲೂ ನಾವು ದ್ವೇಷಿಗಳಾಗಿಯೇ ನಿನಗೆ ಕಾಣುತ್ತ ಬಂದಿದ್ದೇವೆ.

"ತುಂಬಿದ ಸಭೆಯಲ್ಲಿ ನಾವು ದ್ಯೂತವನ್ನಾಡಿದ್ದೇವೆ! ಆದರಲ್ಲಿ ಪಾಂಡವರು ಸೋತಿದ್ದಾರೆ. ಅದು ನಮ್ಮ ಅಪರಾಧವೆ? ವೈಷ್ಣವ ಯಜ್ಞವನ್ನು ಆಚರಿಸುವಾಗ ನಾವು ಅವರ ವೈರವನ್ನು ಮರೆತು ಆಮಂತ್ರಣವನ್ನು ಕಳುಹಿಸಿದೆವು. ಆ ವೇಳೆಯಲ್ಲಿ ಭೀಮನು ಏನು ಹೇಳಿ ಕಳುಹಿಸಿದ ಎಂಬುದು ನಿನಗೆ ಗೊತ್ತಿದೆಯೇ? ಕೌರವರನ್ನೆಲ್ಲ ಆಹುತಿ ತೆಗೆದುಕೊಂಡಾಗಲೇ ಪಾಂಡವರು ಹಸ್ತಿನಾವತಿಗೆ ಕಾಲಿಡುತ್ತಾರೆ. ಇದು ಅವನಿಂದ ಬಂದ ಆದೇಶವಾಗಿತ್ತು. ವಿನಯಶೀಲರೂ, ಧರ್ಮನಿಷ್ಠರೂ, ವನವಾಸಿಗಳೂ ಆದ ಪಾಂಡವರ ನಮ್ರಭಾಷೆ ಇದು. ಕೃಷ್ಣಾ, ಕಠಿಣವಾದ ಮಾತುಗಳಿಗಾಗಲೀ ಅಥವಾ ಕೃತಿಗಾಗಲೀ ನಾನು ಹೆದರುವದಿಲ್ಲ. ಯುದ್ಧದ ಮಾತುಗಳನ್ನು ಅವರೇ ಆಡುತ್ತಲಿದ್ದಾರೆ. ಅಂದ ಮೇಲೆ ಅವರ ಇಚ್ಛೆಯೇ ಪೂರ್ಣವಾಗಲಿ"

"ಅದರ ಪರಿಣಾಮವೇನಾದೀತು ಎಂಬ ಬಗ್ಗೆ ಯೋಚನೆ ಇದೆಯೇ?" ಕೃಷ್ಣನು ಕೇಳಿದ.

"ಪರಿಣಾಮವೆಂಥದು! ಬಹಳವಾದರೆ ಯುದ್ಧದಲ್ಲಿ ನಾವು ಸಾಯಬಹುದು! ಅಷ್ಟೆ ಅಲ್ಲವೆ? ಕ್ಷತ್ರಿಯರಿಗೆ ಅದಕ್ಕಿಂತ ಹೆಚ್ಚಿನ ಶ್ರೇಷ್ಠ ಮರಣವು ಬೇರೊಂದಿಲ್ಲ. ನಾವು ಯುದ್ಧದಲ್ಲಿ ಶಸ್ತ್ರದಿಂದ ಸಾವನ್ನಪ್ಪಿದರೆ ನೇರವಾಗಿ ಸ್ವರ್ಗವನ್ನು ತಲುಪುವೆವು. ಕೃಷ್ಣಾ, ನನ್ನ ತಂದೆಯಿಂದ ಪ್ರಾಪ್ತವಾದ ಈ ರಾಜ್ಯವನ್ನು ನಾಸಿರುವವರೆಗೆ ಯಾರಿಗೂ ಮರಳಿ ಕೊಡಲಾರೆ. ಎಲ್ಲಿಯವರೆಗೆ ಧೃತರಾಷ್ಟ್ರ ಮಹಾರಾಜರು ಬದುಕಿರುವರೋ ಅಲ್ಲಿಯವರೆಗೆ

ನಾನಾಗಲೀ ಅಥವಾ ಪಾಂಡವರಾಗಲಿ ಇವರಲ್ಲೊಬ್ಬರು ಕ್ಷತ್ರಿಯ ಧರ್ಮ ವನ್ನು ತೊರೆದು ಭಿಕ್ಷಾನ್ನದಿಂದಲೇ ಜೀವಿಸಬೇಕಾಗುವುದು.

"ಕೃಷ್ಣಾ, ನಾನು ಸಣ್ಣವನಾದುದರಿಂದ ಪರಾಧೀನನಾಗಿ ಎಂದೂ ಕೊಡದಿರುವ ರಾಜ್ಯವನ್ನು ಪಾಂಡವರಿಗೆ ಕೊಟ್ಟಿದ್ದೆ. ಆದರೆ ಇಂದು ಮತ್ತೆ ಅಂಥ ಅಪರಾಧವನ್ನು ನಾನು ಮಾಡಲಾರೆ. ಇನ್ನೊಂದು ಸಲ ಈರಾಜ್ಯವು ಪಾಂಡವರಿಗೆ ದೊರೆಯಲಾರದು. ಆ ಪಾಂಡವರಿಗೆ ನನ್ನ ಒಂದೇ ಒಂದು ಮಾತನ್ನು ತಿಳಿಸು. ನಾನು ಜೀವಂತನಾಗಿರುವವರೆಗೂ ಐದು ಹಳ್ಳಿಗಳಲ್ಲಿ ಸೂಜಿಯ ಮೊನೆಯ ಮುಂದಿರುವಷ್ಟು ಮಣ್ಣನ್ನೂ ಸಹ ಕೊಡಲಾರೆ. ಈ ಮಾತನ್ನು ಅವರಿಗೆ ಸ್ಪಷ್ಟವಾಗಿ ಹೇಳು."

ದುರ್ಯೋಧನನ ಈ ಮಾತುಗಳಿಂದ ಸಂತಾಪಗೊಂಡ ಕೃಷ್ಣನು ಧೃತ-ರಾಷ್ಟ್ರನನ್ನು ಕುರಿತು,

"ಎಲೈ ಸಾಮ್ರಾಟನೇ, ನಿನ್ನ ಮಗನು ಸಾರಿದ ನಿರ್ಣಯವನ್ನು ನೀನು ಕೇಳಿಸಿಕೊಂಡಿರುವೆಯಷ್ಟೆ ? ಇನ್ನು ಅದೃಷ್ಟದಲ್ಲಿರುವ ವಿನಾಶವನ್ನು ತಡೆಯಲು ಒಂದೇ ಒಂದು ಮಾರ್ಗವು ಉಳಿದಿದೆ."

ಧೃತರಾಷ್ಟ್ರನು ಆತುರದಿಂದ ಕೇಳಿದ "ಯಾವುದು ?"

ದುರ್ಯೋಧನನನ್ನು ತೋರಿಸುತ್ತ ಸ್ಪಷ್ಟವಾದ ಶಬ್ದಗಳಿಂದ ಹೇಳಿದ,

"ಈ ದುರ್ಮಾರ್ಗಿಯಾದ ದುರ್ಯೋಧನ ಹಾಗೂ ಅವನ ಸಲಹೆಗಾರ ರಾದ ಶಕುನಿ, ಕರ್ಣ, ದುಶ್ಯಾಸನ ಇವರುಗಳನ್ನು ಬಂಧಿಸಿ ಪಾಂಡವರ ಸ್ವಾಧೀನಕ್ಕೊಪ್ಪಿಸು."

ಕೃಷ್ಣನ ಈ ಮಾತುಗಳನ್ನು ಕೇಳಿ ದುರ್ಯೋಧನನು ಚಕಿತನಾದ. ದುಶ್ಯಾಸನನು ದ್ವೇಷದಿಂದ ಘರ್ಜಿಸಿದ.

"ಅದನ್ನೇ ಯುವರಾಜರು ನಿಮಗೆ ಮಾಡಿದರೆ ?"

ಕೃಷ್ಣನ ನಗುವಿನಿಂದ ಸಭಾಗೃಹವೆಲ್ಲ ತುಂಬಿಹೋಯಿತು. ತನ್ನ ತೀಕ್ಷ್ಣವಾದ ನೋಟವನ್ನು ಆ ಸಭಾಗೃಹದ ತುಂಬೆಲ್ಲ ಹೊರಳಿಸಿ ಕೃಷ್ಣನು ಹೇಳಿದ.

"ದುಶ್ಯಾಸನ, ದುರ್ಯೋಧನನಿಗೆ ಅವಶ್ಯವಾಗಿ ಹಾಗೆ ಮಾಡಲು ಹೇಳು. ಮೂರ್ಖಾ, ಯಾರು ಒಪ್ಪಂದಕ್ಕಾಗಿ ದೂತರಾಗಿ ಬಂದಿರು

ತ್ತಾರೋ ಅವರು ಎಂದೂ ಅಸಹಾಯಕರಾಗಿ ಮುಂಜಾಗರೂಕತೆಯ ಅರಿವಿಲ್ಲದೆ ಶತ್ರುಗಳ ಗುಂಪಿನಲ್ಲಿ ಕಾಲಿರಿಸುವುದಿಲ್ಲ" ಎಂದು ಹೇಳಿ, ಬಹು ತುಚ್ಛಸ್ವರದಲ್ಲಿ ಅಬಲೆಯ ವಸ್ತ್ರವನ್ನು ಮುಟ್ಟಿದಂತಲ್ಲ ಈ ಕೆಲಸ."

"ಎಂಥ ಬಲ." ದುರ್ಯೋಧನನು ಆರ್ಭಟಿಸಿದ.

"ಬಲ ! ನನ್ನ ಬಲ ! ದುರ್ಯೋಧನಾ, ಈ ಒಪ್ಪಂದಕ್ಕೆ ಹೊರಡುವ ಮುನ್ನ ನಾನು ಚತುರಂಗಬಲವನ್ನು ಹಸ್ತಿನಾವತಿಯ ಗಡಿಯಲ್ಲಿರಿಸಿ ಬಂದಿದ್ದೇನೆ. ಈ ರಾಜಸಭೆಯಲ್ಲಿ ಕೃತವರ್ಮ, ಸಾತ್ಯಕಿ ನನ್ನ ಪಕ್ಕದಲ್ಲಿದ್ದಾರೆ. ಅಷ್ಟೇ ಅಲ್ಲ, ನನ್ನೊಂದಿಗೆ ಸಾವಿರಾರು ವೃಷ್ಣಿವೀರರು ತಮ್ಮ ಬಾಹುಬಲದ ಪ್ರತಾಪ ತೋರಿಸಲು ಕಾತುರರಾಗಿದ್ದಾರೆ. ನನ್ನನ್ನು ಬಂಧಿಸಲು ಅವಶ್ಯವಾಗಿ ಪ್ರಯತ್ನಿಸು. ಮುಂದೆ ನಡೆಯಬೇಕಾದ ಯುದ್ಧವು ಇಂದೇ ಈ ಕ್ಷಣದಲ್ಲಿಯೇ ನಡೆಯುವಂತಾಗಲಿ. ಅಪರಿಮಿತ ವಿನಾಶವನ್ನು ಹೊಂದದೆ ಕ್ಷಣಮಾತ್ರದಲ್ಲಿ ಅದು ಮುಗಿದುಹೋಗುತ್ತದೆ."

ಕೃಷ್ಣನು ತೋರಿಸಿದ ಶಕ್ತಿಯ ವಿರಾಟರೂಪವನ್ನು ಕಂಡು ದುರ್ಯೋಧನನು ಕ್ಷಣಕಾಲ ತಬ್ಬಿಬ್ಬಾಗಿಹೋದ ಸಂತಾಪಗೊಂಡು ಅಪಮಾನಿತನಾದ ಅವನು ಮುಂದೇನಾಗುವುದೆಂಬ ಯೋಚನೆಯನ್ನೇ ಮಾಡದೆ ಸಭಾಗೃಹವನ್ನು ತೊರೆದು ಹೊರಟುಹೋದ, ಅವನನ್ನನುಸರಿಸಿ ಕರ್ಣ, ಶಕುನಿ ದುಶ್ಶಾಸನರೂ ಹೊರಟು ಬಿಟ್ಟರು.

ಸಭೆಯು ನಿಶ್ಶಬ್ದವಾಗಿತ್ತು. ಕೃಷ್ಣನು ಶಾಂತಸ್ವರದಲ್ಲಿ ಹೇಳಿದ.

"ಹೇ ಭಾರತಾ, ನಿನ್ನ ಮಗನು ಸಭಾತ್ಯಾಗ ಮಾಡಿದ್ದಾನೆ. ಅದನ್ನು ನಾನು ಅಪಮಾನವೆಂದು ಗ್ರಹಿಸಲಾರೆ. ಯುದ್ಧವಂತೂ ನಿಶ್ಚಿತ ಎಂದು ತೋರತೊಡಗಿದೆ. ಈ ಅವಿವೇಕದಿಂದ ನಿನ್ನ ಮಗನನ್ನು ಎಚ್ಚರಿಸಲು ಬರುವಂತಿದ್ದರೆ ನೋಡು. ಇಂದು ನಾನು ವಿದುರನ ಮನೆಯಲ್ಲಿಯೇ ಇರುತ್ತೇನೆ. ಸಾಮೋಪಚಾರದಿಂದ ಇದು ಸಾಧ್ಯವಾದರೆ ನನಗೆ ಸಂತೋಷವಾಗುತ್ತದೆ. ಅದಿಲ್ಲ ಎಂದಾದರೆ ಯುದ್ಧವು ನಿಶ್ಚಿತ ಎಂದು ನಾನು ಮರಳುವೆ."

ಕೃಷ್ಣನು ಸಭೆಯಿಂದ ಹೊರಗೆ ಹೊರಟನು, ವಿದುರ, ಸಾತ್ಯಕಿ, ಕೃತವರ್ಮ ಅವನನ್ನನುಸರಿಸಿದರು. ಕೃಷ್ಣನ ನಿರ್ಗಮನಾನಂತರ ಸಭೆಯಲ್ಲಿ ಗಲಿಬಿಲಿಯು ಆರಂಭವಾಯಿತು.

## 38

ಕೃಷ್ಣನನ್ನು ಸ್ವಗೃಹಕ್ಕೆ ಮುಟ್ಟಿಸಿದ ವಿದುರನು ಪುನಃ ಮರಳಿ ರಾಜಭವನಕ್ಕೆ ಬಂದಾಗ ಧೃತರಾಷ್ಟ್ರನ ಮಹಲಿನಲ್ಲಿ ಭೀಷ್ಮರಿದ್ದುದು ಕಂಡು ಬಂದಿತು. ರಾಜಮಾತೆಯಾದ ಗಾಂಧಾರಿಯೂ ಧೃತರಾಷ್ಟ್ರನಿಂದ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದಳು. ವಿದುರನು ಬಂದಿರುವನೆಂಬ ಸಮಾಚಾರವು ತಿಳಿದಾಗ ಧೃತರಾಷ್ಟ್ರನು.

"ವಿದುರಾ, ಆ ದುರ್ಯೋಧನನಿಗೆ ತಿಳಿಸಿ ಹೇಳಬೇಕು. ಆ ಕಾರ್ಯವೂ ಸಹ ಅತಿ ಶೀಘ್ರದಲ್ಲಿಯೇ ಆಗಬೇಕು. ಆದುದರಿಂದ ನೀನು ಈಗಲೇ ಹೋಗಿ ಯುವರಾಜನನ್ನು ಕರೆದುಕೊಂಡು ಬಾ. ಕೃಷ್ಣನ ಮನಸ್ಸಿನಲ್ಲಿ ಬೇರೆ ಯಾವ ವಿಚಾರವೂ ಇಲ್ಲವಷ್ಟೆ ?" ಎಂದ.

"ಕೃಷ್ಣನ ಮನಸ್ಸು ಸ್ಫಟಿಕದಂತೆ ನಿರ್ಮಲವಾಗಿದೆ. ಆತನ ಮಾನದಲ್ಲಿ ಯಾವದೇ ತರಹದ ವೈರಭಾವವೂ ಇಲ್ಲ. ಆದರೆ ನಡೆದ ಘಟನೆಗಳ ಬಗ್ಗೆ ಆತನಿಗೆ ತುಂಬ ವ್ಯಥೆಯಾಗಿದೆ. ಅಣ್ಣಾ, ಇದೆಲ್ಲ ನನಗೂ ಸರಿಕಾಣುವುದಿಲ್ಲ. ಮಾತನಾಡಿದಂತೆ ಯುದ್ಧವಾದಲ್ಲಿ ಅದೇನು ಸುಲಭದ ಕೆಲಸವಲ್ಲ. ಯಾವ ಭಾಗಕ್ಕೆ ಕೃಷ್ಣನ ನೇತೃತ್ವವಿದೆಯೋ, ಪಾಂಡವರಂಥ ಧರ್ಮನಿಷ್ಠ ಪರಾಕ್ರಮಿಗಳಿದ್ದಾರೆಯೋ ಅಲ್ಲಿ ವಿಶೇಷವಾಗಿ ಜಯವೂ ಅದೇಭಾಗವನ್ನು ಅವಲಂಭಿಸುತ್ತದೆ. ಆದುದರಿಂದ ನೀನು ನಿನ್ನ ಮಗನಿಗೆ ತಿಳಿಸಿ ಹೇಳು. ಅವನನ್ನು ಎಚ್ಚರಿಸು. ಇದೇ ನನ್ನ ಅಭಿಪ್ರಾಯ."

"ಅದು ನನಗೂ ಗೊತ್ತು. ಆದುದರಿಂದಲೇ ನಾನು ಹೇಳುತ್ತಿರುವೆ. ನೀನು ಮೊದಲು ಹೋಗಿ ಆ ದುರ್ಯೋಧನನನ್ನು ಇಲ್ಲಿಗೆ ಕರೆದುಕೊಂಡು ಬಾ."

ವಿದುರನು ಹೋದನೆಂಬುದನ್ನು ತಿಳಿದ ಗಾಂಧಾರಿಯು ದೀರ್ಘ ನಿಟ್ಟುಸಿರನ್ನು ಬಿಟ್ಟು ಹೇಳಿದಳು.

"ಪಿತಾಮಹ, ನೀವೇ ಆತನಿಗೆ ಹೇಳಿ ತಡೆಹಿಡಿಯಬಹುದಾಗಿತ್ತು. ಅದು ನಿಮ್ಮ ಅಧಿಕಾರವಾಗಿತ್ತು."

"ವಯಸ್ಸಿನ ಮರ್ಯಾದೆಯನ್ನು ಸಜ್ಜನರಾದವರು ಮಾತ್ರ ಅರ್ಥ ಮಾಡಿಕೊಳ್ಳುತ್ತಾರೆ. ಇನ್ನು ಬಲಪ್ರಯೋಗದ ವಿಷಯ. ಆ ಅಧಿಕಾರವನ್ನು

ನಡೆಸಬೇಕೆಂದರೆ, ಈ ಸಭೆಯಲ್ಲಿ ಎಂದೋ ಅದನ್ನು ಕಳೆದುಕೊಂಡಿದ್ದೇನೆ. ಅಂಥ ಸಾಮ್ರಾಟರಿಗೆ ಯುವರಾಜನ ಮೇಲೆ ಕುರುಡುಪ್ರೇಮ. ಆದುದರಿಂದ ಅವರಿಗೆ ಯುವರಾಜನ ದೋಷಗಳೇ ಕಾಣಬರುವುದಿಲ್ಲ.''

''ಪಿತಾಮಹರೇ, ನೀವು ನನ್ನ ಮೇಲೆ ಕೋಪಿಸಿಕೊಳ್ಳಬೇಡಿರಿ ನನ್ನ ಈ ಕುರುಡು ಕಣ್ಣಿಗೆ ಎಷ್ಟು ಕಾಣಬರುತ್ತದೆಯೋ ಅಷ್ಟನ್ನೇ ನಾನು ಮಾಡಬಹುದು. ಅದೇ ನನ್ನ ಸೀಮೆ.''

ಅದೇ ಸಮಯಕ್ಕೆ ಸರಿಯಾಗಿ ಕರ್ಣನೊಂದಿಗೆ ದುರ್ಯೋಧನನು ಅಲ್ಲಿಗೆ ಬಂದ. ಅವರಿಬ್ಬರ ಹಿಂದೆ ವಿದುರನು ಬರುತ್ತಲಿದ್ದ. ಅದನ್ನು ಕೇಳಿ ತಿಳಿದುಕೊಂಡ ಧೃತರಾಷ್ಟ್ರನು,

''ಮಗೂ ದುರ್ಯೋಧನಾ, ನಿನ್ನ ಸಿಟ್ಟು ಒಳ್ಳೆಯದಲ್ಲ, ಅದರಿಂದ ಅನಾಹುತನಾಗಬಹುದು. ಆದುದರಿಂದ ಅದನ್ನು ಬಿಟ್ಟುಬಿಡು. ನಿನ್ನ ತಾಯಿ ಏನು ಹೇಳುತ್ತಾಳೋ ಕೇಳು''

ದುರ್ಯೋಧನನ ಕಣ್ಣುಗಳು ಕೆಂಡದಂತಾದವು. ಕರ್ಣನು ಗಾಂಧಾರಿ ಯತ್ತ ನೋಡಿದಾಗ ಅವಳು ನೀಲಿ ರೇಶಿಮೆಯ ವಸ್ತ್ರವನ್ನುಟ್ಟುಕೊಂಡು ಕಣ್ಣಿಗೆ ಕಪ್ಪು ಬಟೆಯನ್ನು ಕಟ್ಟಿಕೊಂಡಿದ್ದಳು. ವಿಶಾಲವಾದ ಹಣೆ, ನೀಳವಾದ ನಾಸಿಕ, ಇವುಗಳಿಂದ ಅವಳ ಸೌಂದರ್ಯವು ಎದ್ದು ತೋರು ತ್ತಿತ್ತು. ಅವಳು ತನ್ನ ಕೈ ಮುಂದೆ ಮಾಡಿ ಮಾತನಾಡಲಾರಂಭಿಸಿದಳು.

''ದುರ್ಯೋಧನಾ, ನಾನು ಇಂದಿನವರೆಗೆ ನಿನಗೆ ಏನನ್ನೂ ಹೇಳಿಲ್ಲ. ನಿನ್ನ ತಂದೆಯು ಅಂತಃಕರಣದಿಂದಾಗಿ ನನಗಿಂತ ಅವರ ಮೇಲೆ ನನ್ನ ಪ್ರೇಮವು ವಿಶೇಷವಾಗಿದೆ. ನೀನು ನನ್ನ ಮಗನೆಂದು ನಾನು ಈ ಮಾತನ್ನು ಹೇಳುತ್ತ ಲಿಲ್ಲ. ನಿನ್ನನ್ನು ಬೆಳೆಸಿದ್ದು ಯುವರಾಜನಾಗಿಯೇ. ಯಾವ ರಾಜ್ಯದ ಹಿತವನ್ನು ಮನದಲ್ಲಿಟ್ಟು ನಿನ್ನನ್ನು ಬೆಳೆಸಿದರೋ, ಅದೇ ಸಾಮ್ರಾಜ್ಯವು ಇಂದು ನೀನು ಮಾಡಿಕೊಂಡ ನಿರ್ಣಯದಿಂದಾಗಿ ಸಂಕಟದಲ್ಲಿ ಸಿಲುಕಿಕೊಳ್ಳು ವಂತಾಗಿದೆ.''

''ತಾಯೀ, ನೀನು ಏನನ್ನು ಅಪೇಕ್ಷಿಸುವೆ ?''

''ಮಗೂ ! ಅರ್ಜುನ, ಅಜಿಂಕ್ಯ ಎಂಬ ಮಾತನ್ನು ಭೀಷ್ಮ, ವಿದುರರು ಖಚಿತವಾಗಿ ನಂಬಿದ್ದಾರೆ. ನೀನು ಯುದ್ಧವನ್ನು ಕೈಕೊಂಡಲ್ಲಿ ನಿಶ್ಚಯ

ವಾಗಿಯೂ ಸೋಲನ್ನು ಅನುಭವಿಸುವೆ. ಆದುದರಿಂದ ಭೀಷ್ಮ, ದ್ರೋಣ, ವಿದುರ, ಕೃಪಾಚಾರ್ಯ ಮೊದಲಾದ ಹಿರಿಯರು ಹೇಳುವ ಮಾತನ್ನು ಕೇಳು. ನಿನ್ನ ತಂದೆ ಹಾಗೂ ಈ ಹಿರಿಯರು ಗೃಹಕಲಹದ ಭೀತಿಯಿಂದ ಅವರಿಗೆ ಸಲ್ಲಬೇಕಾದ ಭಾಗವನ್ನಿತ್ತಿದ್ದಾರೆ. ಇದು ನಿನಗೂ ಗೊತ್ತಿದೆ. ಪಾಂಡುಪುತ್ರರ ಅರ್ಧ ರಾಜ್ಯವನ್ನು ನೀನು ಅವರಿಗೆ ಮರಳಿ ಕೊಡು. ಉಳಿದರ್ಧ ರಾಜ್ಯದಲ್ಲಿ ನೀನು ಸುಖವಾಗಿ ರಾಜ್ಯಭಾರ ಮಾಡಿಕೊಂಡಿರು."

ತಾಯಿಯ ಮಾತಿನಿಂದ ದುರ್ಯೋಧನನಿಗೆ ತುಂಬಾ ಬೇಸರವೆನಿಸಿತು.

"ತಾಯೀ, ಕೊನೆಯ ಪಕ್ಷ ನೀನಾದರೂ ಈ ತರಹದ ಆಜ್ಞೆಯನ್ನು ಮಾಡಲಾರೆ ಎಂದು ತಿಳಿದುಕೊಂಡಿದ್ದೆ. ಆದರೆ ತನ್ನ ಕಣ್ಣಿಗೆ ಪಟ್ಟಿಯನ್ನು ಕಟ್ಟಿಕೊಂಡು ಅಂಧನೊಂದಿಗೆ ವಿವಾಹವಾದ ನೀನು ಇಂಥ ಸಲಹೆಯನ್ನು ಕೊಡುವದೆ ? ಅಮ್ಮ, ನಿನ್ನಂತೆ ಎಲ್ಲರೂ ಒಂದಿಲ್ಲೊಂದು ಪಟ್ಟಿಯನ್ನು ಕಟ್ಟಿಕೊಂಡಿರುತ್ತಾರೆಯೇ ?"

"ಹಾಗಾದರೆ ನೀನು ಕಣ್ಣುಪಟ್ಟಿಯನ್ನು ಕಟ್ಟಿಕೊಂಡಿರುವೆಯಾ ?" ವಿದುರನು ಕೇಳಿದ.

"ಹೌದು, ನಾನು ಯುವರಾಜನೆಂದು ಬೆಳೆದವನು. ರಾಜನಿಷ್ಠೆಯೇ ನನ್ನ ಕಣ್ಣಿಗೆ ಕಟ್ಟಿದ ಪಟ್ಟಿ ! ಇಂದು ಯಾವದು ನಡೆಯಿತೋ ಅದಕ್ಕಾಗಿ ನೀನು ನನ್ನನ್ನು ದೂಷಿಸಬೇಡ. ಸಾಮ್ರಾಜ್ಯಕ್ಕಿಂತ ತಮ್ಮ ಸ್ವಪ್ರತಿಷ್ಠೆಯೇ ಯಾರಿಗೆ ಹೆಚ್ಚೆನಿಸಿತೋ ಅಂಥ ವಿದುರ, ಭೀಷ್ಮ ಹಾಗೂ ಆಚಾರ್ಯರಿಗೆ ಆ ದೋಷವನ್ನು ಕೊಡು. ಗೃಹಕಲದ ಭೀತಿಯನ್ನು ಮುಂದೆ ಮಾಡಿ ಸ್ವಂತದ ಅಭಿಪ್ರಾಯದಿಂದ ಪಾಂಡವರಿಗೆ ಖಾಂಡವಪ್ರಸ್ಥ ರಾಜ್ಯವನ್ನು ಕೊಟ್ಟಿದ್ದಾರೆ. ಒಂದೇ ಸಾಮ್ರಾಜ್ಯದ ಬಲವಾದ ಬಿಗಿಯನ್ನು ಸಡಿಲಿಸಿ ಛಿದ್ರಗೊಳಿಸಿದವರು ಇವರೆ.''

"ಯುವರಾಜ, ಕೇವಲ ಉದಾತ್ತ ಭಾವನೆಯನ್ನಿಟ್ಟುಕೊಂಡು ವಾಸ್ತವಜಗತ್ತಿನಲ್ಲಿ ಬದುಕುವುದು ಸಾಧ್ಯವಿಲ್ಲ" ಎಂದು ಹೇಳಿದ ವಿದುರನು "ಇನ್ನೂ ಸಮಯ ಮಿಂಚಿಲ್ಲ. ಭಗವಾನ್ ಕೃಷ್ಣನು ನಿಮ್ಮ ದಾರಿ ಕಾಯುತ್ತಿದ್ದಾನೆ. ಪಾಂಡವರು ಈಗ ರಾಜ್ಯವನ್ನೇನೂ ಕೇಳುತ್ತಲಿಲ್ಲ. ಅವರು ಕೇವಲ ಐದು ಹಳ್ಳಿಗಳನ್ನು ಮಾತ್ರ ಅಪೇಕ್ಷಿಸುತ್ತಿದ್ದಾರೆ."

"ಯಾಚಕರಾಗಿ ಅವರು ಈ ಬೇಡಿಕೆಯನ್ನು ಮುಂದಿಟ್ಟಿಲ್ಲ. ಚಿಕ್ಕಪ್ಪ, ಒಡಹುಟ್ಟಿದವರೆಂಬ ಹಕ್ಕಿನಿಂದ ಅವರು ತಮ್ಮ ಬೇಡಿಕೆಯನ್ನಿಟ್ಟಿದ್ದಾರೆ. ಅದೂ ಸಹ ಕೌರವ ಸಾಮ್ರಾಜ್ಯದ ವಾರಸುದಾರರೆಂದು ತಿಳಿದು ತಮ್ಮ ಬೇಡಿಕೆಯನ್ನು ಸಲ್ಲಿಸಿದ್ದಾರೆ. ಒಂದು ಸಲ ತಪ್ಪುಮಾಡಿದುದರ ಫಲವಾಗಿಯೇ ಅವರು ರಾಜಸೂಯ ಯಾಗದವರೆಗೂ ಹೋದುದುಂಟು. ನಿಮಗೆಲ್ಲ ಮತ್ತೆ ಅದನ್ನೇ ನೋಡುವ ಆಸೆ ಇರಬಹುದು. ಆದರೆ ನನ್ನಿಂದ ಮಾತ್ರ ಅದು ಸಾಧ್ಯವಿಲ್ಲ."

"ಮಗೂ, ದುರ್ಯೋಧನ! ಪಾಂಡುರಾಜನು ಅತ್ಯಂತ ಪರಾಕ್ರಮದಿಂದ ಈ ರಾಜ್ಯವನ್ನು ವಿಸ್ತರಿಸಿದ. ನನ್ನಿಂದ ಅಶ್ವಮೇಧ ಯಾಗವನ್ನು ಮಾಡಿಸಿದ. ಆ ಪುಣ್ಯ ಪ್ರಭಾವವೇ ಈ ಸಾಮ್ರಾಜ್ಯವೆನಿಸಿದೆ." ಧೃತರಾಷ್ಟ್ರನು ತುಂಬ ಅಂಗಲಾಚಿ ಹೇಳಿದ.

"ತಂದೆ, ನೀವು ತುಂಬ ಸತ್ಯವನ್ನೇ ನುಡಿದಿರಿ. ನಮ್ಮ ದೊಡ್ಡಪ್ಪನು ಅಂಥ ಪರಾಕ್ರಮವನ್ನು ಮಾಡಿದಲ್ಲಿ ಈ ಭೀಷ್ಮ, ವಿದುರರಿಗೇಕೆ ಆ ಯಜ್ಞಾಧಿಕಾರವನ್ನು ಕೊಡಲಿಲ್ಲ? ಈ ಕರ್ಣನೂ ದಿಗ್ವಿಜಯವನ್ನು ಗೈದು ರಾಜ್ಯದ ಕೀರ್ತಿಯನ್ನು ಹೆಚ್ಚಿಸಲಿಲ್ಲವೆ? ಹಾಗೆಂದು ಅವನಿಗೇಕೆ ಯಜ್ಞಾಧಿಕಾರವನ್ನು ಕೊಡಲಿಲ್ಲ?"

"ಹುಚ್ಚಾ, ಈ ರಾಧೇಯನೊಂದಿಗೆ ಆ ಪಾಂಡುಪುತ್ರರನ್ನು ಹೋಲಿಸಬೇಡ" ವಿದುರನು ಸಂಕಟಪಡುತ್ತ ನುಡಿದ.

"ಚಿಕ್ಕಪ್ಪ ಪಾಂಡುಪುತ್ರರಾರು? ನಾನು ಇಲ್ಲಿಯವರೆಗೂ ಸಂಯಮದಿಂದಿದ್ದೆ. ಅದನ್ನು ಸಾಕಷ್ಟು ನಡೆಸಿಕೊಂಡೂ ಬಂದೆ. ಅವರು ನಿಜವಾಗಿಯೂ ಪಾಂಡುಪುತ್ರರಾಗಿದ್ದಲ್ಲಿ ಅಂಥವರಿಗೆ ಆತ್ಮೀಯ ಸ್ವಾಗತ ನನ್ನೀಯುತ್ತಿದ್ದೆ. ಅವರಂತೂ ಪಾಂಡುಪುತ್ರರಲ್ಲವೇ ಅಲ್ಲ. ಅಷ್ಟೇ ಏಕೆ ಒಬ್ಬ ತಂದೆಯಿಂದ ಜನಿಸಿದವರಂತೂ ಅಲ್ಲವೇ ಅಲ್ಲ. ಹೀಗಿರುವಾಗ ಅವರು ಈ ರಾಜ್ಯದ ಹಕ್ಕುದಾರರು ಹೇಗಾಗುತ್ತಾರೆ?"

"ದುರ್ಯೋಧನಾ" ಸಂತಾಪದಿಂದ ಕೂಗಿಕೊಂಡಳು ಗಾಂಧಾರಿ.

"ಕ್ಷಮಿಸು ತಾಯೀ! ಈ ಚಿಕ್ಕಪ್ಪನ ಅಜ್ಞಾನದಿಂದಾಗಿಯೇ ನಾನು ಅದನ್ನು ಬಹಿರಂಗಪಡಿಸಬೇಕಾಯಿತು."

"ನೀತಿಯ ಮರ್ಯಾದೆಯನ್ನೇ ಪಾಲಿಸಲು ಬರಲಾರದಂಥವರು ಜ್ಞಾನ ಅಜ್ಞಾನದ ಮಾತನ್ನಾಡುವದೆ ?"

"ಕಾಕಾ, ನಾನು ಮಾತನಾಡಿದ್ದರಲ್ಲಿ ಕಟುತನವಿರಬಹುದು, ಆದರೆ ಅದು ಸತ್ಯ. ಆ ಮಾತನ್ನು ನೀವು ಒಪ್ಪಲೇಬೇಕು. ಸ್ಪಷ್ಟೋಕ್ತಿಯನ್ನಾಡುವುದರಲ್ಲಿ ನೀವು ತುಂಬ ಹೆಸರುವಾಸಿಯಾಗಿರುವಿರಿ. ಸತ್ಯದಿಂದ ಕೂಡಿದ ಮಾತುಗಳು ಅಂತಃಕರಣವನ್ನು ಹಿಂಡುತ್ತವೆ."

"ಅನ್ನು ದುರ್ಯೋಧನ, ಅನ್ನು. ನಿನಗೆ ಬೇಡ ಎಂದೆನ್ನುವವರು ಯಾರು."

ಕರ್ಣನು ಮುಂದೆ ಬಂದು ದುರ್ಯೋಧನನ ಹೆಗಲ ಮೇಲೆ ಕೈಯನ್ನಿಡುತ್ತ ಹೇಳಿದ.

"ಯುವರಾಜ, ಶಾಂತರಾಗಿ,"

ಕರ್ಣನ ಸ್ಪರ್ಶದಿಂದಾಗಿ ದುರ್ಯೋಧನನು ಮತ್ತಷ್ಟು ಕುಪಿತನಾಗಿ ಮಾತನಾಡಲಾರಂಭಿಸಿದ.

"ರಾಧೇಯಾ, ಯಾರಿಗೆ ಸ್ವತಃ ನೀತಿಯ ಬಂಧನವನ್ನು ಪಾಲಿಸಲು ಬರುವದಿಲ್ಲವೋ, ಅಂಥವರು ಕೊನೆಯ ಪಕ್ಷ ಇನ್ನೊಬ್ಬರಿಗಾದರೂ ನೀತಿಯ ಮಾತುಗಳನ್ನು ಹೇಳಲು ಬರಬಾರದು."

"ಯುವರಾಜ" ವಿದುರ ತುಂಬ ಕೋಪದಿಂದ ಕೂಗಿಕೊಂಡ.

"ಸುಮ್ಮನೆ ಕೂಡಿರಿ. ಚಿಕ್ಕಪ್ಪ ಪಾಂಡವರು ವನವಾಸಿಗಳಾದರು, ಅಜ್ಞಾತವಾಸಕ್ಕೆ ಹೋದರು. ಆಗ ಮಾತಾ ಕುಂತಿ ಈ ಹದಿಮೂರು ವರ್ಷಗಳ ಕಾಲ ನಿಮ್ಮಲ್ಲೇ ಏಕಿರಬೇಕಾಗಿತ್ತು ?"

ವಿದುರನ ಮುಖವು ಬಿಳುಪಿಟ್ಟುಕೊಂಡಿತು. ತನ್ನೆರಡು ಕೈಗಳನ್ನೂ ಕಿವಿಯ ಮೇಲಿಟ್ಟುಕೊಂಡಾಗಲೂ ಸಹ ದುರ್ಯೋಧನನ ಮಾತುಗಳು ಕೇಳಬರುತ್ತಿದ್ದವು.

"ನೀತಿಯ ಮಾತುಗಳನ್ನಾಡುವವರಿಗೆ ಈ ನಿಯಮದ ಬಂಧನವಿಲ್ಲ ಎಂದು ತೋರುವದು."

"ದುರ್ಯೋಧನ, ನೀನು ಎಷ್ಟು ಜನರನ್ನು ನೋಯಿಸಬೇಕೆಂದಿರುವಿ. ನಿನ್ನ ಹಟದ ಸ್ವಭಾವದಿಂದಾಗಿ ಒಂದು ವೇಳೆ ಯುದ್ಧವನ್ನೇ ಆರಂಭಿಸಿದಲ್ಲಿ

ಪಾಂಡವರ ಹಿತವನ್ನೇ ಯಾವಾಗಲೂ ಚಿಂತಿಸುವ ಈ ಭೀಷ್ಮ, ದ್ರೋಣ ಕೃಪ ಇವರು ನಿನ್ನ ಪಕ್ಷಕ್ಕೆ ನಿಲ್ಲುತ್ತಾರೆಯೇ ? ಒಂದು ವೇಳೆ ನಿನ್ನ ಅನ್ನದ ಋಣದಿಂದ ಒಪ್ಪಿದರೂ ಕೌರವ ಪಕ್ಷದಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಳ್ಳು ತ್ತಾರೆ. ಆದರೆ ಆ ಯುಧಿಷ್ಠಿರನ ಕಡೆಗೆ ಕೋಪದಿಂದ ನೋಡುವ ಧೈರ್ಯ ವನ್ನು ಅವರು ಯಾರೂ ಮಾಡಲಾರರು."

"ತಾಯೀ, ಹಾಗೆಂದ ಮಾತ್ರಕ್ಕೆ ನಾನು ಪಾಂಡವರಿಗೆ ಅರ್ಧ ರಾಜ್ಯ ವನ್ನು ಕೊಡಬೇಕೇ ? ಇಲ್ಲ, ಅದು ನನ್ನ ಕೈಯಿಂದ ಎಂದೂ ಸಾಧ್ಯವಾಗು ವುದಿಲ್ಲ."

ಹತಾಶರಾದ ಭೀಷ್ಮರು,

"ಯುವರಾಜಾ ! ಯುಧಿಷ್ಠಿರ, ಭೀಮ, ಅರ್ಜುನ, ನಕುಲ, ಸಹದೇವ ಇವರನ್ನು ಪಾಂಡವರೆಂದೇ ಗುರುತಿಸುತ್ತಾರೆ; ಇರಬಾರದ ದುರಭಿಮಾನವನ್ನು ಹೊಂದಿ ನೀನು ಕುಲಕ್ಷಯಕ್ಕೆ ಕಾರಣೀಭೂತನಾಗಬೇಡ. ಅದು ವಿಹಿತ ವಲ್ಲ."

"ಪಿತಾಮಹ, ನೀವು ಈ ಮಾತನ್ನು ಹೇಳುವಿರಾ ? ಆಶ್ಚರ್ಯವೆನ್ನಿಸು ತ್ತದೆ. ನೀವು ಯಾವ ಮಹತ್ಕಾರ್ಯಕ್ಕಾಗಿ ಕುರು ರಾಜ್ಯದ ಮೇಲಿನ ಹಕ್ಕನ್ನು ಬಿಟ್ಟು ಬಿಟ್ಟಿರಿ ಎಂಬುದನ್ನಾದರೂ ತಿಳಿಸುತ್ತೀರಾ ? ಪೂಜ್ಯರೇ, ಪ್ರತಿಷ್ಠೆಯು ಆಕಾಶದಲ್ಲಿ ಸಣ್ಣದು, ದೊಡ್ಡದು ಎಂಬುದೇನೂ ಇಲ್ಲ. ಅದು ಕೇವಲ ತೇಜಸ್ವಿಯಾಗಿರಬೇಕು ಅಷ್ಟೇ."

"ಮಗೂ, ಕೊನೆಗೆ ಈ ವಯಸ್ಸಿನ ಅನುಭವಕ್ಕಾದರೂ ಬೆಲೆ ಕೊಡು. ನಾನು ಸತ್ಯವನ್ನೇ ನುಡಿಯುವೆ. ಕೃಷ್ಣನಿಗೆ ಪರಾಜಯವಾಗಲಾರದು."

"ಅದು ನನಗೂ ಗೊತ್ತಿದೆ."

"ಅದರೂ ನೀನು ನಿನ್ನ ಹಟವನ್ನು ಬಿಡುವುದಿಲ್ಲವೆ ?"

"ಹೌದು ! ನಾಳೆ ಪಾಂಡವರು ಯುದ್ಧದಲ್ಲಿ ಗೆದ್ದರೂ ಲೋಕವು ಕೃಷ್ಣನೇ ಅದನ್ನು ಗೆದ್ದ ಎಂದು ಹೇಳಿಕೊಳ್ಳುವದು. ಅಷ್ಟೇ ಅಲ್ಲದೆ ಸಿಮ್ಮ್ರ ಜ್ಞೈವೀಗುಣ ಸಂಪನ್ನನಾದ ಕೃಷ್ಣನೊಂದಿಗೆ ನಾವು ಯುದ್ಧ ಮಾಡಿದೆವೆಂಬ ಮಾತಿನಲ್ಲಿಯೇ ನನಗೆ ಸಮಾಧಾನವಿದೆ."

"ಆದರೆ ಪಾಂಡವರ ಸ್ಪರ್ಧೆ."

"ಪಿತಾಮಹ, ಹುಲ್ಲು ಸಮಪ್ರಮಾಣದಲ್ಲಿಯೇ ಬೆಳೆಯುತ್ತದೆ. ತಾಲ ವೃಕ್ಷಗಳು ಆಕಾಶವನ್ನು ಚುಂಬಿಸುವ ಸ್ಪರ್ಧೆಯಲ್ಲಿಯೇ ಮೇಲೇಳುತ್ತವೆ. ಹೀಗಿರುವಾಗ ಪಾಂಡವರಿಗೆ ಯಾವುದು ಸಾಧ್ಯವೋ ಅದು ಶತ ಕೌರವರಿಗೇಕೆ ಸಾಧ್ಯವಿಲ್ಲ ?"

ಗಾಂಧಾರಿ ದೀರ್ಘ ಉಸಿರೆಳೆದಳು.

"ರಾಧೇಯಾ, ನಿನ್ನದೂ ಇದೇ ವಿಚಾರವೆ ?"

"ರಾಜಮಾತೇ, ಯುವರಾಜರ ಮಾತಿನಲ್ಲಿ ಸತ್ಯತೆ ಇದೆ. ಆದುದರಿಂದ ನನ್ನ ಮತವು ಅವರಿಗೆ ಪೂರಕವಾಗಿದೆ."

ಧೃತರಾಷ್ಟ್ರನು ಹೇಳಿದ,

"ಕೃಷ್ಣನು ಹೇಳಿದ ಮಾತಿನಲ್ಲಿ ಸತ್ಯವಿದೆ, ಸರ್ವನಾಶವೆನಿಸಿದ ಯುದ್ಧವು ನಿಶ್ಚಿತ."

"ತಂದೆಯೇ, ನೀವು ಚಿಂತಿಸಬೇಡಿರಿ ! ಒಂದು ವೇಳೆ ಆ ಪಾಂಡವರು ರಣರಂಗದಲ್ಲಿ ನಮ್ಮನ್ನು ಪರಾಭವಗೊಳಿಸಿದಲ್ಲಿ ಅವರು ನಿಮಗೆ ಸಮಾಧಾನ ಹೇಳಲು ಬಂದೇ ಬರುತ್ತಾರೆ. ಕಣ್ಣೀರುಗರೆದು ನಿಮ್ಮನ್ನೇ ಅವರು ಸಾಮ್ರಾಟರೆಂದು ಗೌರವಿಸುತ್ತಾರೆ."

"ಮಾತನಾಡಬೇಡ, ಒಂದು ಶಬ್ದವನ್ನೂ ಮಾತನಾಡಬೇಡ. ಆ ತರಹದ ಸಮಾಧಾನವನ್ನು ನಾನು ಧಿಕ್ಕರಿಸುವೆ. ಒಂದು ವೇಳೆ ಹಾಗೇನಾದರೂ ಘಟಿಸಿದಲ್ಲಿ ಗೊಂಡಾರಣ್ಯದ ಆಶ್ರಯವನ್ನು ಪಡೆಯುವೆ. ಹಾಗೆ ಜೀವಿಸುವುದಕ್ಕಿಂತ ಅರಣ್ಯಜೀವನವನ್ನು ಆನಂದದಿಂದ ಸ್ವೀಕರಿಸುವೆ." ಎಂದು ನುಡಿದ ಧೃತರಾಷ್ಟ್ರನು ಅತೀ ತುಚ್ಛತೆಯಿಂದ ದುರ್ಯೋಧನನತ್ತ ನೋಡಿ,

"ಹೋಗು ! ಆ ಕೃಷ್ಣನಿದ್ದಲ್ಲಿಗೆ ಹೋಗಿ ಹೇಳು. ಯುದ್ಧವು ನಿಶ್ಚಿತ. ಇದೇ ನನ್ನ ಕೊನೆಯ ಮಾತು."

ವಿದುರನು ರಾಜಸಭೆಯಿಂದ ಹೊರಟುಹೋದ ಅನಂತರ ದುರ್ಯೋಧನನು ಧೃತರಾಷ್ಟ್ರನಿಗೆ ನಮಿಸಿ, ಗಾಂಧಾರಿಯ ಚರಣ ಸ್ಪರ್ಶ ಮಾಡಿದ.

ನಂತರ ಗಾಂಧಾರಿಯು ಕರ್ಣ, ದುರ್ಯೋಧನರಿಬ್ಬರನ್ನೂ ಕುರಿತು ಹೇಳಿದಳು,

"ರಾಧೇಯಾ, ನಿನ್ನ ಅಹಂಕಾರದ ಸಹವಾಸದಿಂದ ನನ್ನ ಮಗನು ಯಾವ ಅವಸ್ಥೆಯನ್ನು ಹೊಂದಬಲ್ಲನೆಂಬುದನ್ನಾದರೂ ಯೋಚಿಸಿರುವೆಯಾ? ಒಂದು ಸಲವಾದರೂ ಕಣ್ಣುಮುಚ್ಚಿ ಒಳ್ಳೆಯ ಕನಸನ್ನು ಕಾಣಬಾರದೆ ?"

ರಾಜಮಾತೆಯ ನುಡಿಗಳನ್ನು ಕೇಳಿದ ಕರ್ಣನು.

"ರಾಜಮಾತೇ, ಈ ಜೀವನದಲ್ಲಿ ಕರ್ಣನು ಎಂದೂ ಭೀತಿಯನ್ನು ಅನುಭವಿಸಿಲ್ಲ. ಹಾಗೆಯೇ ನಡೆದುದನ್ನೆಲ್ಲ ಕಣ್ಣು ಮುಚ್ಚಿ ನೋಡಿಕೊಂಡು ಕುಳಿತವನೂ ಅಲ್ಲ. ಆಗಲಿ ಬರುವೆ ಆಶೀರ್ವದಿಸಿರಿ."

ಕರ್ಣನು ದುರ್ಯೋಧನನ ಮಹಲಿನಿಂದ ಹೊರಬಿದ್ದನಂತರ ಗಾಂಧಾರಿಯು ತಾನು ನಿಂತ ಆಸನದಿಂದ ಕುಸಿದು ಬಿದ್ದಳು. ಅವಳ ಕಂಠವು ತುಂಬಿಬಂದಿತ್ತು. ಅದನ್ನು ಕೇಳಿಸಿಕೊಂಡ ಧೃತರಾಷ್ಟ್ರನು,

"ದುರ್ಯೋಧನ ಮಾತೆ ! ಅಳಬೇಡ, ನನ್ನ ದಣಿದ ಮನಸ್ಸಿಗೆ ನಿನ್ನ ಈ ಅಳುವಿನ ಧ್ವನಿ ಕೇಳಿದಾಗ ಅದು ಮತ್ತಷ್ಟು ವಿಚಲಿತಗೊಂಡು ಸೋತು ಹೋದಂತಾಗುತ್ತದೆ."

"ನಾಥಾ ! ಹೊತ್ತು ಮೀರಿಲ್ಲ. ಆ ದುರ್ಯೋಧನನು ತನಗೆ ಬೇಕಾದ್ದು ಮಾಡಿಕೊಳ್ಳಲಿ, ನಾವು ಪಾಂಡವರ ಹತ್ತಿರ ಹೋಗೋಣ."

"ಇಲ್ಲ, ಗಾಂಧಾರಿ ಅದಾಗುವಂತಿಲ್ಲ.'' ನಿರಾಶನಾದ ಧೃತರಾಷ್ಟ್ರನು,

"ನಾನು ಅವನನ್ನು ಬಿಡುವಂತಿಲ್ಲ, ಆತನ ತಂದೆ ನಾನಲ್ಲವೆ !''

ದುರ್ಯೋಧನನ ನಿರೂಪವನ್ನು ಪಡೆದು ಮನೆಗೆ ಮರಳಿದ ಕರ್ಣನನ್ನು ಅಧಿರಥನು ಪ್ರಶ್ನೆ ಮಾಡಿದ,

"ಕರ್ಣಾ, ದೂತಕಾರ್ಯಕ್ಕಾಗಿ ಬಂದ ಕೃಷ್ಣನ ಕೆಲಸವು ಯಶಸ್ವಿಯಾಯಿತೇ ?''

''ಕೃಷ್ಣನು ಬಂದು ಹೋದ.''

''ಏನಾಯಿತು ? ನಿಶ್ಚಯವಾದುದೇನು ?''

''ಯುದ್ಧ ; ಸರ್ವನಾಶವಾಗುವ ಯುದ್ಧ !''

ಅಧಿರಥನತ್ತ ನೋಡುವ ಧೈರ್ಯವೂ ಕರ್ಣನಿಗಿರಲಿಲ್ಲ. ಆತನು ಮುಖ ಕೆಳಗೆ ಹಾಕಿಕೊಂಡು ಮೇಲುಪ್ಪರಿಗೆಯ ಮೆಟ್ಟಲನ್ನೇರಲಾರಂಭಿಸಿದ.

## 37

ಬೆಳಗಿನ ಜಾವದಲ್ಲಿ ಕರ್ಣನು ಹೊರಹೊರಡುವುದಲ್ಲಿದ್ದ. ಅದನ್ನು ಕಂಡ ವೃಷಸೇನನು ತಂದೆಯ ಸಮೀಪಕ್ಕೆ ಬಂದು,

''ತಂದೆಯೇ, ತಾವು ಕೃಷ್ಣ ಮಹಾರಾಜನನ್ನು ಕಳಿಸಲು ಹೊರಡುವಿರಷ್ಟೆ ?'' ಎಂದು ಕೇಳಿದ.

''ಹೌದು ಮಗೂ.''

''ತಮ್ಮ ಅಪ್ಪಣೆಯಾದರೆ ?''

''ಅಗತ್ಯವಾಗಿ ಬಾ, ರಥವು ಸಿದ್ಧವಾಗಿದೆಯಲ್ಲವೆ ?''

''ಅಹುದು, ಚಕ್ರಧರನು ತಮ್ಮ ಮಾರ್ಗ ಸಿರೀಕ್ಷೆಯಲ್ಲಿದ್ದಾನೆ.''

''ಹಾಗಾದರೆ ನೀನು ಕುದುರೆಯ ಸವಾರಿ ಮಾಡಿ ಹಸ್ತಿನಾವತಿಯ ಸೀಮೆಯ ಸಮೀಪದಲ್ಲಿರು. ನಾನು ವಿದುರನ ಮನೆಗೆ ಹೋಗಿ ದ್ವಾರಕಾಧೀಶರೊಂದಿಗೆ ಬರುತ್ತೇನೆ.''

''ತಮ್ಮ ಅಪ್ಪಣೆಯಂತೆ ನಡೆಯುವೆ.''

ವೃಷಸೇನನು ತನ್ನ ಕಂಠೀಹಾರವನ್ನು ತೆಗೆದುಕೊಂಡ, ಅದು ಅಮೂಲ್ಯವಾದ ಮುತ್ತುಗಳಿಂದ ಮಾಡಿದುದಾಗಿತ್ತು. ಅದರ ಶುಭ್ರತೆಯಲ್ಲಿಯೂ ನೀಲವರ್ಣವು ಎದ್ದು ತೋರುತ್ತಿತ್ತು. ಅದನ್ನು ಕರ್ಣನಿಗೆ ತೋರಿಸುತ್ತ ವೃಷಸೇನನು ಹೇಳಿದ,

''ಕೃಷ್ಣ ಮಹಾರಾಜರು ನಿನ್ನೆ ನನಗೆ ಈ ಕಂಠೀಹಾರವನ್ನು ಕೊಟ್ಟರು. ತಾವು ಹೇಳಿದಂತೆ ನಾನು ನಿನ್ನೆ ಅವರನ್ನು ಕಾಣಲು ಹೋಗಿದ್ದೆ."

ಕರ್ಣನು ಆ ಅಮೂಲ್ಯವಾದ ಹಾರವನ್ನು ನೋಡುತ್ತಿದ್ದಂತೆ ವೃಷಸೇನನು ತನ್ನ ಅನುಭವವನ್ನು ಹೇಳುತ್ತಲಿದ್ದ,

"ಅವರು ತಮ್ಮ ಕೊರಳಲ್ಲಿರುವ ಹಾರವನ್ನು ನನ್ನ ಕೊರಳಲ್ಲಿ ಹಾಕುತ್ತ ಹೇಳಿದರು. ವಸೂ ಇವು ಜಾತಿವಂತ ಮುತ್ತುಗಳು, ಆಳವಾದ ಸಮುದ್ರದ ತಳದಲ್ಲಿ ಇವು ಬೆಳೆದಿವೆ. ಇಂಥ ಮುತ್ತು ಸಿಗುವುದು ಅಪರೂಪ."

ವೃಷಸೇನನು ಮಧ್ಯದಲ್ಲಿಯೇ ನಕ್ಕ.

"ಯಾಕೆ" ಎಂದು ವಿಚಾರಿಸಿದ ಕರ್ಣ.

"ಕೃಷ್ಣ ಮಹಾರಾಜರು ಈ ಮುತ್ತುಗಳು ನಿನ್ನಂತೆಯೇ ತುಂಬ ತೇಜಸ್ವಿಯಾಗಿವೆ ಎಂದರು. ಅಂದು ಅಲ್ಲಿ ರಾಜಮಾತೆಯಾದ ಕುಂತಿಯೂ ಇದ್ದಳು. ನಾನು ಅವರನ್ನು ವಂದಿಸುವಾಗ ಅವರು ನನ್ನನ್ನು ಬಹು ಆದರದಿಂದ ಬರಮಾಡಿಕೊಂಡು ಮೈಮೇಲೆಲ್ಲ ಕೈಯಾಡಿಸಿ ಮುದ್ದು ಕೊಟ್ಟರು."

"ದೊಡ್ಡವರ ಮನಸ್ಸೂ ದೊಡ್ಡದಾಗಿರುತ್ತದೆ. ಮಗೂ ! ಇದು ಸಾಮಾನ್ಯ ಮುತ್ತಿನ ಹಾರವಲ್ಲ, ಮಹಾಪುರುಷನೊಬ್ಬನ ಆಶೀರ್ವಾದವೇ ಈ ಮುತ್ತಿನ ಮಾಲಿಕೆಯ ರೂಪದಲ್ಲಿದೆ, ಅತ್ಯಂತ ಶ್ರದ್ಧೆಯಿಂದ ಇದನ್ನು ಧರಿಸು. ನಡೆ ಹೋಗೋಣ."

ವೃಷಸೇನನು ಆ ಮಹಾನಗರದ ಹೆಬ್ಬಾಗಿಲನ್ನು ದಾಟಿ ಬಂದಾಗ ಹಸ್ತಿನಾವತಿಯ ನಾಗರೀಕರಿಂದ ಆ ಭಾಗವೆಲ್ಲ ತುಂಬಿ ಹೋಗಿತ್ತು. ಎಲ್ಲರೂ ಕೃಷ್ಣನ ಮಾರ್ಗ ನಿರೀಕ್ಷಣೆಯಲ್ಲಿದ್ದರು. ಅಲ್ಪಾವಧಿಯಲ್ಲಿಯೇ ಕಹಳೆನಿನಾದವು ಕೇಳಬರಲಾರಂಭಿಸಿತು. ಸವಾರರ ಹಿನ್ನೆಲೆಯಲ್ಲಿ ಒಂದೊಂದೇ ರಥಗಳು ಬರಲಾರಂಭಿಸಿದವು. ಭೀಷ್ಮ, ವಿದುರ, ಕೃತವರ್ಮರ ರಥಗಳಾದ ಅನಂತರ ಕೃಷ್ಣನ ಸುವರ್ಣ ರಥವು ಕಾಣಿಸಿತು. ಆ ರಥದ ಹಿಂಭಾಗದಲ್ಲಿ ಕರ್ಣನ ರಥವು ಬರುತ್ತಿತ್ತು. ಪ್ರಜೆಗಳೆಲ್ಲ ಕೃಷ್ಣನ ಜಯ ಜಯಕಾರ ಮಾಡ ಲಾರಂಭಿಸಿದರು. ಕೃಷ್ಣನು ತನ್ನ ರಥವನ್ನು ನಿಲ್ಲಿಸಿ ಎಲ್ಲರಿಗೂ ದರ್ಶನ ವನ್ನಿತ್ತನು. ಸಮೀಪದಲ್ಲಿರುವ ವೃಷಸೇನನತ್ತ ಆತನ ದೃಷ್ಟಿಯು ಹರಿದಾಗ ಆತನು ಬಹು ಭಕ್ತಿಭಾವದಿಂದ ವಂದಿಸಿದನು. ಆಗ ಕೃಷ್ಣನು ವೃಷಸೇನ ನನ್ನು ಸಮೀಪಕ್ಕೆ ಕರೆದು ಬಹು ವಾತ್ಸಲ್ಯದಿಂದ ಆತನ ಮೈದಡವಿದ ಅನಂತರ ಭೀಷ್ಮ, ವಿದುರಾದಿಗಳಿಂದ ನಿರೂಪವನ್ನು ಪಡೆದು ರಥಾರೂಢನಾಗಿ ಹೊರಡುವ ಸಮಯದಲ್ಲಿ ಕರ್ಣನನ್ನು ಕೂಗಿ,

"ಅಂಗರಾಜ, ನೀವು ಸ್ವಲ್ಪ ಸಮಯ ನನ್ನೊಂದಿಗೆ ಬರಬೇಕೆನಿಸುತ್ತದೆ"

"ತಮ್ಮ ಅಪ್ಪಣೆ"

ಕೃಷ್ಣನು ತನ್ನ ಸಾರಥಿ ದಾರುಕನತ್ತ ನೋಡಿದ. ಸೂಕ್ಷ್ಮಮತಿಯಾದ ದಾರುಕನು ರಥದಿಂದಿಳಿದಾಗ ಕೃಷ್ಣನು ಸಾರಥಿಯ ಸ್ಥಾನವನ್ನಲಂಕರಿಸಿದ.

"ಕರ್ಣಾ, ರಥವನ್ನು ಹತ್ತು."

"ತಾವು ಸಾರಥ್ಯ ಮಾಡುವದೇ ?"

"ಹೌದು, ಇಂದು ನಿನ್ನ ಸಾರಥ್ಯ ಕಾರ್ಯ ಮಾಡಬೇಕೆಂದೆನಿಸಿದೆ. ಸಂಕೋಚಪಡಬೇಡ, ಬೇಕಾದರೆ ಇದು ನನ್ನ ಅಜ್ಞೆ ಎಂದು ಭಾವಿಸು."

ಕರ್ಣನು ರಥಾರೂಢನಾದ. ಕೃಷ್ಣನ ದಳವು ಆ ರಥದ ಹಿಂದೆ ಹಾಗೂ ಮುಂದೆ ಧಾವಿಸುತ್ತಲಿತ್ತು. ರಥವು ವೇಗದಿಂದ ಧಾವಿಸಿದಂತೆಲ್ಲ ಆಕಾಶದಲ್ಲಿ ಧೂಳು ತುಂಬಿಕೊಂಡಿತು. ಹಸ್ತಿನಾವತಿಯು ಹಿಂದುಳಿದಂತೆಲ್ಲ ಮುಂದೆ ಸ್ವಲ್ಪ ಸಮಯದಲ್ಲಿ ಅದು ಪೂರ್ಣವಾಗಿ ಕಾಣಿಸದಂತಾಯಿತು. ಕರ್ಣನು ಕೃಷ್ಣನ ಸಾರಥ್ಯ ಕಾರ್ಯವನ್ನು ತುಂಬ ಮನಸ್ಸಿಟ್ಟು ನೋಡುತ್ತಲಿದ್ದ. ರಥಕ್ಕೆ ಜೋಡಿಸಿದ ಕಿರುಗಂಟೆಗಳು ಸುಮಧುರ ನಾದಗೈಯುತ್ತಿದ್ದವು ಅತಿ ಶುಭ್ರವಾದ ಜಾತಿವಂತ ಕುದುರೆಗಳು ಒಂದೇ ಗತಿಯಲ್ಲಿ ಧಾವಿಸುತ್ತಲಿದ್ದವು. ರಥವು ವಿಶಾಲವಾದ ಬಯಲನ್ನು ಪ್ರವೇಶಮಾಡಿತು. ನಾಲ್ಕೂ ದಿಕ್ಕಿನಲ್ಲಿ ಭೂಮಿಯು ಕಪ್ಪಾಗಿ ಹಾಸಿದ ನೆಲವಾಗಿ ಕಾಣಬರುತ್ತಿತ್ತು. ಆಕಸ್ಮಿಕವಾಗಿ ಕೃಷ್ಣನು ಹಿಂದಿರುಗಿ ನೋಡಿದ. ಹಿಂದೆ ಬರುತ್ತಿದ್ದ ಆತನ ಸೇನಾಪಥವು ಬಹು ಹಿಂದುಳಿದುಕೊಂಡಂತೆನಿಸಿತು. ನಗೆಮುಖದಿಂದ ಮುಂದೆ ನೋಡಿದಾಗ ರಥದೊಂದಿಗೆ ಬರುತ್ತಿದ್ದ ಸಾತ್ಯಕಿ ತನ್ನ ಕುದುರೆಯನ್ನು ಮುಂದೋಡಿಸಿದ. ಆತನೊಂದಿಗೆ ಅವನ ದಳವೂ ಮುಂದೆ ಹೋಯಿತು. ಕೆಲವೇ ಕ್ಷಣಗಳಲ್ಲಿ ಕೇವಲ ಕೃಷ್ಣ ಹಾಗೂ ಕರ್ಣನ ರಥಗಳು ಮಾತ್ರ ಕಾಣುವಂತಾದವು. ರಥದ ಓಟವು ಮಂದಗತಿಯಿಂದ ಸಾಗಿತು. ಮುಂದೆ ಸ್ವಲ್ಪ ಹೊತ್ತಿನಲ್ಲಿ ಅದು ನಿಂತುಹೋಯಿತು. ಕೃಷ್ಣನು ತನ್ನ ಕೈಯಲ್ಲಿದ್ದ ಲಗಾಮುಗಳನ್ನು ರಥದ ದಂಡಕ್ಕೆ ಕಟ್ಟಿ ಕರ್ಣನತ್ತ ಹೊರಳಿದ.

"ಅಂಗರಾಜ, ಯುದ್ಧವು ನಿಶ್ಚಿತ ಎಂಬ ಮಾತು ತಿಳಿದಿದೆಯಷ್ಟೆ ?"

"ಹೌದು, ತಮ್ಮ ಸಂಧಾನವು ವಿಫಲವಾದುದಕ್ಕೆ ಕೆಡಕೆನಿಸಿದೆ. ಯುದ್ಧವು ಶತಸ್ಸಿದ್ಧ ಎಂಬ ಮಾತನ್ನು ತಿಳಿದು ಸಂತೋಷವಾಗಿದೆ."

"ಆ ವಿಷಯ ನನಗೂ ಗೊತ್ತು. ಕರ್ಣ, ಇನ್ನು ಭೇಟಿಯಾಗುವದು ರಣರಂಗದಲ್ಲಿಯೇ, ಅದೂ ಶತ್ರುವಿನ ರೂಪದಲ್ಲಿ. ಆದಕ್ಕೆ ಮೊದಲು ಒಂದು ಸಲ ಭೇಟಿಯಾಗಬೇಕು, ಮಾತನಾಡಬೇಕು ಎಂದೆನಿಸಿದುದರಿಂದ ಆಗ್ರಹಪೂರ್ವಕ ನಿನ್ನನ್ನು ಕರೆತಂದಿದ್ದೇನೆ."

"ತಮ್ಮ ಕೃಪೆ."

"ಕರ್ಣ, ಯುದ್ಧದಲ್ಲಿ ಕೌರವರು ವಿಜಯಿಗಳಾಗಬಹುದೇ ?"

"ಜಯಾಪಜಯಗಳು ದೈವಾಧೀನ."

"ನನಗೆ ಸರಿಯಾದ ಅಥವಾ ನಿಜವಾದ ಉತ್ತರಬೇಕಾಗಿದೆ."

"ತಮಗೆ ಗೊತ್ತಿದ್ದರೂ ಆ ವಿಚಾರವನ್ನು ನನ್ನ ಮುಖದಿಂದ ಹೊರಡಿಸುವುದರಲ್ಲಿ ಪ್ರಯೋಜನವೇನು ?"

"ಆದರೂ ನೀವು ಯುದ್ಧವನ್ನೇ ನಂಬುವಿರಾ ?"

"ಕ್ಷಮಿಸಬೇಕು, ಸೋಲುವೆನೆಂಬ ಹೆದರಿಕೆಯಿಂದ ನಾನು ಸತ್ಯಕ್ಕೆ ಎಂದೂ ಬೆನ್ನು ಕೊಟ್ಟವನಲ್ಲ."

"ಕೆಲ ಸಮಯದಲ್ಲಿ ಸತ್ಯವೂ ವಿದ್ರೂಪವಾಗಿರುತ್ತದೆ. ಅದನ್ನು ಹೊರಳಿ, ಮರಳಿ ನೋಡುವುದೂ ಬಹು ಕಷ್ಟ ಸಾಧ್ಯವೆನಿಸುತ್ತದೆ."

"ತಮ್ಮ ಅನುಗ್ರಹದಿಂದ ಆ ಬಲವು ನನ್ನಲ್ಲಿದೆ."

ಆಗ ಕೃಷ್ಣನು ನಕ್ಕು ಕರ್ಣನನ್ನೇ ನೋಡುತ್ತ,

"ಕರ್ಣ, ನೀನಾರು ಎಂಬುದು ನಿನಗೆ ಗೊತ್ತೇ ?"

"ನಾನು ಸೂತಪುತ್ರ !"

"ಅಲ್ಲ,

"ಅಧಿರಥನ ಮಗ ಕರ್ಣನೆಂದೇ ಪ್ರತೀತಿ."

"ಅದು ಶುದ್ಧ ಸುಳ್ಳು."

"ಓ, ಹುಟ್ಟಿದೊಡನೆ ತಾಯಿ ನನ್ನನ್ನು ಬಿಸಾಡಿದಳು. ನನ್ನ ಕವಚ ಕುಂಡಲಗಳೇ ಕುಲಕ್ಕೆ ಸಾಕ್ಷಿಯಾದವುಗಳಾದವು "

"ಯಾವ ಕುಲ ?"

"ಮಾಧವಾ ! ಯಾವ ಶಂಕೆಯಿಂದ ನಾನು ಜೀವನಪಿಡೀ ಒದ್ದಾಡಿದ್ದೇನೆಯೋ ಆ ವಿಷಯವನ್ನೇ ತಾವು ಮತ್ತೆ ಮತ್ತೆ ಕೇಳುತ್ತಿರುವಿರಿ. ನನ್ನ ಆಯುಷ್ಯದುದ್ದಕ್ಕೂ ನಾನಾರು ? ಎಲ್ಲಿಂದ ಬಂದೆ ? ಈ ರೀತಿಯಾಗಿ ನನ್ನನ್ನು ತೊರೆದುಬಿಡಲು ಕಾರಣವೇನು ? ಇವೇ ಮೊದಲಾದ ವಿಚಾರಗಳು ಅರೆಕ್ಷಣವೂ ನನ್ನಿಂದ ದೂರವಾಗಿಲ್ಲ. ನನ್ನ ತಪಸ್ಸು, ಜ್ಞಾನ ಇವುಗಳಿಂದ ಈವರೆಗೆ ನನಗೆ ಯಾವ ಉತ್ತರವೂ ಲಭಿಸದೆ ಹೋಗಿದೆ. ಇನ್ನು ಬೇರೆ

ಯಾರಾದರೂ ನನಗೆ ಅದನ್ನು ತಿಳಿಸಿ ಹೇಳುವರೆಂಬ ನಂಬಿಕೆಯೂ ನನಸ್ಸಿಲ್ಲ ದಾಗಿದೆ."

"ಹೇಳುವವರು ಸಿಗುತ್ತಾರೆ. ಆದರೆ ಕೇಳುವ ಧೈರ್ಯ ಮಾತ್ರ ಬೇಕು."

''ಕೃಷ್ಣಾ, ನಿನಗೆ ನನ್ನ ಜನ್ಮವೃತ್ತಾಂತದ ರಹಸ್ಯವು ತಿಳಿದಿದೆಯೇ?''

ಹೌದು ಎನ್ನುವಂತೆ ಆತನು ತಲೆಯನ್ನಲ್ಲಾಡಿಸಿದ. ಅದನ್ನು ಕಂಡು ಕರ್ಣನ ಶರೀರವು ರೋಮಾಂಚನಗೊಂಡಿತು. ರಥದ ಕುದುರೆಗಳು ಬಹು ಮಂದಗತಿಯಿಂದ ಒಂದೊಂದೇ ಹೆಜ್ಜೆಗಳನ್ನಿಡುತ್ತಿದ್ದವು. ರಥದ ಗಂಟೆಗಳು ''ಕಿಣ್ ಕಿಣ್'' ಎಂದು ಮಧುರ ನಾದ ಗೈಯುತ್ತಿದ್ದವು.

ಕರ್ಣನು ತುಂಬ ಅಧೀರನಾಗಿದ್ದ.

''ಹೇಳು ಮಧುಸೂದನಾ ! ಹೇಳು. ನನ್ನ ಯಾವ ಅಪರಾಧಕ್ಕಾಗಿ ನನ್ನ ತಾಯಿ ನನ್ನನ್ನು ಹೀಗೆ ಬಿಸಾಡಿದಳು ?''

''ಕರ್ಣಾ, ನಾನು ಹೇಳುವದನ್ನು ದೃಢವಾದ ಮನಸ್ಸಿನಿಂದ ಕೇಳು. ನೀನು ಕೌಂತೇಯನಿರುವಿ !''

''ನಾನು! ಕೌಂತೇಯ !! ಮಹಾರಾಜ, ವಿನೋದಕ್ಕೂ ಒಂದು ಮಿತಿ ಇದೆ'' ಕರ್ಣನು ನಕ್ಕು ಹೇಳಿದ.

''ಇಲ್ಲ ಕರ್ಣ, ವಿನೋದಕ್ಕಾಗಿ ನಾನು ಈ ಮಾತನ್ನಾಡಲಿಲ್ಲ. ಸತ್ಯವಾಗಿಯೂ ನೀನು ಕೌಂತೇಯನಿರುವಿ. ಮಾತಾ ಕುಂತೀ ದೇವಿಯು ಕೌಮಾರಾ ವಸ್ಥೆಯಲ್ಲಿರುವಾಗ ಅವಳಿಗೆ ಪ್ರಾಪ್ತವಾದ ಸೂರ್ಯದೇವನ ವರಪ್ರಸಾದದಿಂದ ನೀನು ಹುಟ್ಟಿರುವೆ. ಕರ್ಣಾ, ಯಾರು ವಿವಾಹಪೂರ್ವದಲ್ಲಿ ಜನಿಸುವರೋ ಅವರನ್ನು **"ಕಾನೀನ"** ಎಂದು ಕರೆಯುವರು. ವಿವಾಹಾ ನಂತರದಲ್ಲಿ ಜಾರತ್ವದಿಂದ ಹುಟ್ಟಿದವರನ್ನು ''ಕುಂಡ'' ಎಂದು ಕರೆಯುವರು. ಪತಿಯು ಮರಣ ನಂತರ ಹುಟ್ಟಿದವರನ್ನು ''ಗೋಲಕ''ರೆಂದು ಗುರುತಿಸ ಲಾಗುವುದು. ಶಾಸ್ತ್ರಾನು ಸಾರವಾಗಿ ಯಾವ ಪುರುಷನೊಂದಿಗೆ ಆ ಕನ್ಯೆಯು ಲಗ್ನವಾಗಿರುತ್ತದೆಯೋ ಆ ಕನ್ಯೆಯ ಪುತ್ರರೂ ಆತನ ಮಕ್ಕಳೆಂದೇ ಗ್ರಹಿಸ ಲಾಗುವುದು. ಆದುದರಿಂದ ನೀನೂ ಪಾಂಡವನಾಗುತ್ತೀ, ಸೂರ್ಯದೇವನ ಅಥವಾ ಅಧಿರಥನ ಮಗನಾಗುವುದಿಲ್ಲ.''

ಭೂಮಿಯು ಅತೀ ವೇಗದಿಂದ ಹಿಂದಕ್ಕೆ ಸರಿಯುತ್ತಿರುವಂತೆ ಕರ್ಣನಿಗೆ ಭಾಸವಾಯಿತು, ರಥವು ಕುಸಿದಂತೆನಿಸತೊಡಗಿತು. ಮುಖದ ತುಂಬೆಲ್ಲ ಬೆವರು ಹನಿಗಳು ಕಾಣಲಾರಂಭಿಸಿದವು, ದೇಹವೆಲ್ಲ ನಡುಗಲಾರಂಭಿಸಿತು.

"ನಾನು ರಾಧೇಯನಲ್ಲ !....ಸೂತ ಪುತ್ರನಲ್ಲ !....ವಸುಸೇನನಲ್ಲ !

"ಕರ್ಣ....ಕೌಂತೇಯ....ಪಾಂಡುಪುತ್ರ."

"ಕರ್ಣಾ, ಸಾವರಿಸಿಕೋ" ಕೃಷ್ಣನ ಆ ಶಬ್ದದಿಂದ ಆತನು ಎಚ್ಚರಗೊಂಡು ಆತನನ್ನೇ ನೋಡಲಾರಂಭಿಸಿದನು.

"ನೀನು ಕೇವಲ ಕೌಂತೇಯನಷ್ಟೇ ಅಲ್ಲ. ಜೇಷ್ಠನಿದ್ದು, ಶ್ರೇಷ್ಠ ಪಾಂಡವನಾಗಿರುವಿ. ಧರ್ಮಶಾಸ್ತ್ರಾನುಸಾರ ಪಾಂಡುವಿನ ರಾಜ್ಯಕ್ಕೆ ನೀನೇ ವಾರಸುದಾರನಾಗಿರುವಿರಿ."

"ಹಾಗೂ"

"ಕರ್ಣಾ, ನಿನ್ನ ಭಾಗ್ಯ ಬಹು ದೊಡ್ಡದು. ನಿನ್ನ ತಂದೆಯ ಪಕ್ಷದಲ್ಲಿ ಪಾರ್ಥನಿದ್ದಾನೆ. ಮಾತೃಪಕ್ಷದಲ್ಲಿ ವೃಷ್ಣಿ ಇದ್ದಾನೆ. ನಿನ್ನ ಸ್ಥಾನವು ಕೌರವರಲ್ಲಲ್ಲ"

"ನನ್ನ ಸ್ಥಾನ !" ಎಚ್ಚರಗೊಂಡ ಕರ್ಣನು ನಿಧಾನವಾಗಿ ನುಡಿದ.

"ಹೌದು, ನಿನ್ನ ಸ್ಥಾನವು ಪಾಂಡವರ ಕಡೆಗಿದೆ. ಮರ್ಯಾದೆ, ಗೌರವ ಎಲ್ಲದರಲ್ಲಿಯೂ ನೀನು ಜೇಷ್ಠ ಪಾಂಡವನಿರುವಿ. ಆದುದರಿಂದ ಹೇ ಕೌಂತೇಯ, ನೀನು ನನ್ನೊಂದಿಗೆ ಪಾಂಡವರತ್ತ ನಡೆ. ಧರ್ಮನಿಷ್ಠರಾದ ಆ ಐದು ಜನ ಪಾಂಡವರ ವೀರಬಾಹುಗಳು ನಿನ್ನ ಚರಣಾರವಿಂದಗಳನ್ನು ಆನಂದದಿಂದ ಅಪ್ಪಿಕೊಳ್ಳುವವು. ಎಲ್ಲ ಪಾಂಡುಪುತ್ರರು ಹಾಗೂ ಅವರಿಗೆ ಸಹಾಯಕರಾದ ರಾಜರು ನಿನಗೆ ತಲೆಬಾಗುವರು. ಹಾಗೂ ದ್ರೌಪದಿಯು ನಿನ್ನನ್ನು ಆರನೆಯ ಪತಿ ಎಂದು ಸ್ವೀಕರಿಸುವಳು. ಅಷ್ಟೇ ಅಲ್ಲ ; ಯಾದವ ಕುಲದ ಹಿರಿಯನೆಂದು ನಾನೂ ನಿನ್ನನ್ನು ಅನುಸರಿಸುತ್ತೇನೆ."

"ಇದಕ್ಕಾಗಿಯೇ ತಾವು ನನ್ನನ್ನು ಸಂಗಡ ಕರೆದುಕೊಂಡು ಬಂದಿರುವಿರಾ ?"

"ಯುದ್ಧವು ನಿಶ್ಚಿತ ಎಂದು ತಿಳಿದು ಬಂದಾಗ, ಸತ್ಯದ ಹಿಂದಿರುವ ಆ ಭಯಾನಕ ರೂಪವು ನನಗೆ ಕಾಣಿಸಿತು. ಕರ್ಣ, ನೀನು ಬರೀ ಯೋಧನಷ್ಟೇ ಅಲ್ಲ, ವೇದ ವಿದ್ಯಾಪಾರಂಗತನಿರುವಿ. ನಾಳೆ ರಣಾಂಗಣದಲ್ಲಿ ನಿಂತಾಗ ನೀನು ನಿನ್ನ ಸೋದರರ ವಧೆಗಾಗಿಯೇ ಪ್ರಯತ್ನಿಸಬೇಕಾಗುತ್ತದೆ. ಅಕಸ್ಮಾತ್ ನಿನ್ನ ಕೈಯಿಂದಲೇ ನಿನ್ನ ಸೋದರರು ಮೃತಪಟ್ಟರೆ, ಜ್ಯೇಷ್ಠ ಸೋದರನಿಂದ ಕಿರಿಯ ಸೋದರರ ಸಂಹಾರವಾದಂತಾಗುತ್ತದೆ. ಅದು ಪುತ್ರಹತ್ಯಾ ದೋಷಕ್ಕೆ ಸಮಾನವಾದ ಮಹಾ ಪಾಪವೆಂದೆನ್ನಿಸಿಕೊಳ್ಳುತ್ತದೆ. ನಿನ್ನ ಕೈಯಿಂದಲೇ ಕುಲಕ್ಷಯವಾಗಬಾರದು. ಈ ಎಲ್ಲ ಕಾರಣಗಳಿಂದ ನಿನಗೆ ನಿನ್ನ ಜನ್ಮ ರಹಸ್ಯವನ್ನು ತಿಳಿಸಬೇಕಾಯಿತು. ಕರ್ಣ, ನಿನ್ನಂತಹ ಚಾರಿತ್ರ್ಯಸಂಪನ್ನರು, ದಾನಶೀಲಪುರುಷರಿಗೆ...."

"ದಾನಶೀಲ ! ನಾನು ? ಇಲ್ಲ ಕೃಷ್ಣ, ಅಂಥ ದೊಡ್ಡಸ್ತಿಕೆಯ ಮಾತನಾಡಬೇಡ. ಮಧುಸೂದನಾ ; ಕಂಸ, ಜರಾಸಂಧರಂಥ ಸಾಮ್ರಾಟರ ಸಂಹಾರವನ್ನು ನೀನು ಮಾಡಿರುವೆ. ನಿನ್ನ ಪರಾಕ್ರಮದಿಂದ, ನಿನ್ನ ಆದೇಶದಿಂದ ಅನ್ಯಾಯದ ರಾಜ್ಯಗಳೆಲ್ಲ ಉರುಳಿ ಹೋದವು. ಆದರೆ ನೀನು ಅಂಥ ರಾಜ್ಯಗಳನ್ನಾಗಲೀ ಅಥವಾ ಅವುಗಳ ವೈಭವವನ್ನಾಗಲೀ ಅನುಭವಿಸದೆ ಅವುಗಳನ್ನೆಲ್ಲ ಯೋಗ್ಯರಾದಂಥವರಿಗೆ ಹಂಚಿಬಿಟ್ಟಿರುವಿ. ನಿನ್ನ ದಾನದ ಮುಂದೆ ನನ್ನದೆಂಥ ದಾನ ! ಇದು ಕೇವಲ ಸ್ವಾರ್ಥಕ್ಕಾಗಿ ಮಾಡುವ ಒಂದು ಸಾಧನೆ ಮಾತ್ರ, ಅಷ್ಟೆ"

"ಸ್ವಾರ್ಥ !"

"ಹೌದು ಸ್ವಾರ್ಥ, ಕೃಷ್ಣಾ ನನ್ನ ರಹಸ್ಯವನ್ನು ನೀನು ತಿಳಿಸಿದೆ. ಹಾಗೆಯೇ ನನ್ನ ಸ್ವಭಾವದ ರಹಸ್ಯವನ್ನು ತಿಳಿಸಲು ನನಗೆ ಅವಕಾಶವನ್ನು ಕೊಡು. ಯಾವನು ಸೂತಕುಲದಲ್ಲಿ ಬೆಳೆದು, ಪುರುಷಾರ್ಥ, ಪರಾಕ್ರಮ ಇವುಗಳ ನೆಪದಿಂದ ಯಾವಾಗಲೂ ನಮಸ್ಕಾರ ಮಾಡಿಸಿಕೊಳ್ಳುತ್ತ ಬಂದಿರುವನೋ, ಅಂಥವನು ಬೇರೆ ಏನನ್ನು ಮಾಡಬಲ್ಲ ? ತನ್ನ ಜೀವನದ ಪೊಳ್ಳನ್ನು ತುಂಬಿಕೊಳ್ಳಲು ಚಾರಿತ್ರ್ಯವನ್ನು ರಕ್ಷಿಸಿಕೊಳ್ಳಲು ಈ ತರಹದಲ್ಲಿ ನಡೆದುಕೊಳ್ಳುವುದು ಅತ್ಯಾವಶ್ಯಕವಾಗಿತ್ತು. ತಪಶ್ಚರ್ಯದಿಂದ ಬ್ರಹ್ಮಾಸ್ತ್ರವನ್ನಪೇಕ್ಷಿಸಿದೆ. ಕೀರ್ತಿಗಾಗಿ ದಾತೃತ್ವವನ್ನವಲಂಬಿಸಿದೆ."

ಖಿನ್ನನಾಗಿ ನಕ್ಕ ಕರ್ಣನು,

"ಕರ್ಣಾ, ಇವು ನಿನ್ನ ಜೀವನವನ್ನು ಬೆಳಗಿಸುವ ಸಾಧನಗಳಾದವು. ಇಂದು ನೀನು ಸತ್ಯ ಹಾಗೂ ಅಸತ್ಯವನ್ನು ತೂಗಿ ನೋಡಿ, ವಿಚಾರಮಾಡಿ, ನಿರ್ಣಯವನ್ನು ಸ್ವೀಕರಿಸಬೇಕು."

ಖಿನ್ನವಾಗಿ ನಕ್ಕ ಕರ್ಣನು,

"ಕೃಷ್ಣಾ, ಯಾವುದನ್ನು ನಾವು ತಿಳಿದುಕೊಳ್ಳುತ್ತೇವೆಯೋ ಅದನ್ನೇ ಸತ್ಯ ಎಂದು ನಂಬುತ್ತೇವೆ. ಯಾವುದು ನಮಗೆ ತಿಳಿದಿರುವುದಿಲ್ಲವೋ ಅಂಥದನ್ನು ಅಸತ್ಯವೆಂದು ಗ್ರಹಿಸುತ್ತೇವೆ. ಕೆಲವು ಸಂದರ್ಭಗಳಲ್ಲಿ ನಾವು ಅಸತ್ಯವನ್ನು ನುಡಿದಾಗಲೂ ಕಾಲಾಂತರದಲ್ಲಿ ಅದು ಸತ್ಯದ ರೂಪವನ್ನು ತಾಳಬಹುದು. ಭಗವಾನ್ ಪರಶುರಾಮರು, ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕು ಎಂದು ತಿಳಿದು ನಾನು ಅವರಿಗೆ ಭೃಗುಕುಲೋತ್ಪನ್ನ ಬ್ರಾಹ್ಮಣನೆಂದು ಹೇಳಿದ್ದೆ. ಅಂದು ಆ ಭೃಗು ಕುಲದ ನೆನಪು ಯಾಕೆ ಬಂತೋ ನನಗೆ ತಿಳಿಯದು.ಪೃಥ್ವಿಯ ಮೇಲೆ ಮೊಟ್ಟಮೊದಲು ಅಗ್ನಿಯನ್ನು ನಿರ್ಮಿಸಿದ ಆ ಭೃಗು ಮುನಿಯೇ ಇಂದು ನನ್ನಿಂದ ರಣಕುಂಡವನ್ನು ಹೊತ್ತಿಸುತ್ತಾನೆಯೋ ಏನೋ, ಅಂದು ನುಡಿದ ಅಸತ್ಯದ ಮಾತು ಇಂದು ಸತ್ಯದ ರೂಪವನ್ನೇ ತಾಳುತ್ತಲಿದೆ" ಎಂದ.

"ರಣಕುಂಡವನ್ನು ಹೊತ್ತಿಸುವುದು ಅಥವಾ ಬಿಡುವುದು ಇಂದು ನಿನ್ನ ಕೈಯ್ಯಲ್ಲಿದೆ."

"ನನ್ನ ಕೈಯ್ಯಲ್ಲಿ ?"

"ಹೌದು, ನೀನು ಪಾಂಡವರನ್ನು ಕೂಡಿಕೊಂಡಲ್ಲಿ ಯುದ್ಧಕ್ಕೆ ನಿಲ್ಲುವ ಧೈರ್ಯವು ದುರ್ಯೋಧನಾದಿಗಳಲ್ಲಿ ಉಳಿಯಲಾರದು."

"ಇಲ್ಲ ಕೃಷ್ಣಾ, ಆ ಸಾಹಸವು ಮಾತ್ರ ನನ್ನ ಕೈಯಿಂದ ಆಗಲಾರದು."

"ಕರ್ಣಾ, ನನ್ನ ಮಾತನ್ನು ಕೇಳು. ಇನ್ನೂ ಸಮಯವು ಮಿಂಚಿ ಹೋಗಿಲ್ಲ."

"ಇಲ್ಲ ಕೃಷ್ಣಾ, ಆ ಕಾಲವು ಎಂದೋ ಹೊರಟು ಹೋಯಿತು. ಶಸ್ತ್ರ ಸ್ಪರ್ಧಾ ಸಮಯ ಕಾಲದಲ್ಲಿ ಯಾವಾಗ ನನ್ನ ಅಪಮಾನವಾಯಿತೋ, ಕೃಪಾಚಾರ್ಯರು ನನ್ನ ಕುಲವನ್ನರಿತುಕೊಳ್ಳಲು ಯಾವಾಗ ಪ್ರಯತ್ನ

ಮಾಡಿದರೋ, ಅಂದೇ ಆ ಕುಂತೀ ದೇವಿಯು ಬಂದು ಹೇಳಬೇಕಾಗಿತ್ತು. ತುಂಬಿದ ಸಭೆಯಲ್ಲಿ ದ್ರೌಪದಿಯು ನನ್ನನ್ನು ಸೂತಪುತ್ರನೆಂದು ಮೂದಲಿಸಿದಾಗ ಅಂದೇ ನೀನು ಈ ರಹಸ್ಯವನ್ನು ಹೊರಗೆಡುಹಬೇಕಾಗಿತ್ತು. ಅದು ಸರಿಯಾದ ಸಮಯವಾಗಿತ್ತು."

"ಆಗಲಿ, ಈಗಲಾದರೂ ಸಹ ಏನೂ ಕೆಟ್ಟಿಲ್ಲ."

"ನೀವು ಹಾಗೆ ಭಾವಿಸುವಿರಿ. ಪಾಂಡವಹಿತವನ್ನು ಬಯಸುವದರಲ್ಲಿ ನೀವು ದುರ್ಯೋಧನನ ಕಡೆಗೆ ನಿರ್ಲಕ್ಷ್ಯ ಮಾಡಿದಿರಿ."

"ಅವನ ಕಡೆಗೆ ನೋಡುವ ಕಾರಣವೇನಿದೆ ?"

"ಏನೂ ಇಲ್ಲದಿರಬಹುದು. ಆದರೆ ನನಗೆ ಮಾತ್ರ ಹಾಗೆ ನಡೆಯಲು ಬರುವಂತಿಲ್ಲ. ಬಾಲ್ಯದಿಂದಲೂ ನನಗೆ ಅವನ ಸ್ನೇಹವು ಲಭಿಸಿದೆ. ಆ ಮಿತ್ರತ್ವದಲ್ಲಿ ಯಾವ ನ್ಯೂನತೆಯೂ ಕಂಡು ಬಂದಿಲ್ಲ. ಆ ಶಸ್ತ್ರಸ್ಪರ್ಧೆಯ ಕಾಲದಲ್ಲಿ ತನ್ನ ತಾಯಿಯು ಮಾಡಬೇಕಾದ ಕಾರ್ಯವನ್ನೇ ಅವನು ಮಾಡಿದ್ದಾನೆ. ನನ್ನ ಮರ್ಯಾದೆಯನ್ನುಳಿಸುವದಕ್ಕಾಗಿಯೇ ಅಂಗದೇಶಾಧಿಪತ್ಯವನ್ನು ನನಗೆ ಧಾರೆಯೆರೆದು ಕೊಟ್ಟಿದ್ದಾನೆ. ದ್ರೌಪದಿಯ ಸ್ವಯಂವರ ಕಾಲದಲ್ಲಿಯೂ ಅವನು ನನ್ನ ಪಕ್ಷವನ್ನೇ ಹಿಡಿದಿದ್ದಾನೆ. ಮಹಾರಾಜ, ಘೋಷಯಾತ್ರೆಯಲ್ಲಿ ನಾನು ಪರಾಜಿತನಾದೆ. ವಿರಾಟನಗರದಲ್ಲಿ ಅರ್ಜುನನಿಂದ ಪರಾಜಿತನಾದೆ. ಇದೆಲ್ಲವನ್ನೂ ತಿಳಿದುಕೊಂಡಾಗಲೂ ನನ್ನ ಮೇಲಿನ ಅಭಿಮಾನವು ಮಾತ್ರ ಅವನಿಗೆ ಕಡಿಮೆಯಾಗಿಲ್ಲ, ಜಯಾಪಜಯಗಳ ಪರಿವೆಯನ್ನರಿಯದ ಮಿತ್ರನೆಂದರೆ ಅವನೊಬ್ಬನೆ. ನಾಳಿನ ರಣಯಜ್ಞವನ್ನು ನನ್ನ ದಿಗ್ವಿಜಯಕ್ಕಾಗಿಯೇ ಹಮ್ಮಿಕೊಂಡಿದ್ದಾನೆ. ಅಂಥ ನನ್ನ ಗೆಳೆಯನನ್ನು ಕಳೆದುಕೊಳ್ಳಲು ಹೇಗೆ ಸಾಧ್ಯ ! ಯಾವ ಮೋಹಕ್ಕಾಗಿ ನಾನು ಈ ಸಾಹಸವನ್ನು ಮಾಡಲಿ ?"

"ಕರ್ಣ, ಕಾಲ್ಪನಿಕ ಮೋಹಕ್ಕೋಸ್ಕರ ಸತ್ಯವನ್ನು ಮರೆಯಬಾರದು."

"ನಾನು ನಿಜವಾಗಿ ನೋಡುವದೇ ಸತ್ಯವನ್ನು, ನಾನು ಕೌಂತೇಯನಿರಬಹುದು. ಬೆಳೆದುದು ಮಾತ್ರ ರಾಧಾತಾಯಿಯ ಒಡಲಿನಲ್ಲಿ, ಅಧಿರಥನ ಪ್ರೇಮಪಾಶದಲ್ಲಿ. ಆ ಸೂತಕುಲವೇ ನನ್ನ ಸಂಸ್ಕಾರದ ತವರು. ಆ

ಸೂತಕುಲದ ಕನ್ಯೆಯೊಂದಿಗೆ ನಾನು ಸಂಸಾರ ಮಾಡಿದೆ. ಕ್ಷತ್ರಿಯರ ಸಂಸ್ಕಾರಗಳು ನನಗೆ ಎಂದೂ ಲಭಿಸಲಿಲ್ಲ, ಈ ಘಟನೆಗಳೆಲ್ಲ ನನ್ನ ಜೀವನ ದುದ್ದಕ್ಕೂ ನೆನಪಿನಲ್ಲಿರುತ್ತವೆ. ಈಗ ಕೊನೆಯ ಗಳಿಗೆಯಲ್ಲಿ ಆ ಎಲ್ಲ ಬಂಧನಗಳನ್ನೂ ಕಡಿದೊಗೆದು ನನಗೆ ಕ್ಷತ್ರಿಯ ಸಂಸ್ಕಾರವನ್ನು ಪಾಲಿಸಲು ಸಾಧ್ಯವಾಗುವದೇ ? ಅದನ್ನೇ ವಿಚಾರ ಮಾಡುತ್ತಲಿರುವೆ."

"ಯಾವ ಸಂಸ್ಕಾರ, ಎಂಥ ವಿಚಾರ ?''

''ಕ್ಷತ್ರಿಯರು ಎಂದೂ ತನ್ನ ಮಿತ್ರರಿಗೆ ಮೋಸ ಮಾಡುವುದಿಲ್ಲ ಎಂದು ಅನ್ನುತ್ತಾರೆ. ಆ ವಿಶ್ವಾಸವನ್ನು ರಕ್ಷಿಸಿಕೊಂಡು ಬರುವದರಲ್ಲಿಯೇ ನನ್ನ ಅಂತ್ಯವಾಗಲಿ.''

ತೇಜಸ್ವಿಯಾದ ಕರ್ಣನ ಮನೋದಾರ್ಢ್ಯವನ್ನು ಕಂಡು ಕೃಷ್ಣನ ಹೃದಯವು ತುಂಬಿ ಬಂದಿತು.

"ಕೃಷ್ಣಾ, ನನ್ನದೊಂದು ಪ್ರಾರ್ಥನೆ ಇದೆ."

"ಹೇಳು."

"ದಯಮಾಡಿ ಈ ರಹಸ್ಯವನ್ನು ಹೊರಗೆಡಹಬೇಡ. ಆ ಯುಧಿಷ್ಠಿರ ನಿಗೆ ಈ ವಿಷಯವನ್ನು ತಿಳಿಸಬೇಡ. ಅವನು ಮಹಾ ಧರ್ಮನಿಷ್ಠ. ಭಾವನಾಶೀಲನಾದ ಆ ನನ್ನ ಬಂಧುವಿಗೆ ನನ್ನ ಹಾಗೂ ಆತನ ಸಂಬಂಧ ವೇನೆಂಬುದು ತಿಳಿದುಬಂದಲ್ಲಿ, ನನಗಾಗಿ ಆತನು ಎಲ್ಲ ಸಂಕಟವನ್ನೂ ಸ್ವೀಕರಿಸಿ ಕೃತಹಸ್ತನಾಗಿ ನನ್ನನ್ನು ದೈವದ ಅಧೀನನನ್ನಾಗಿ ಮಾಡಿ ಆನಂದ ದಿಂದ ತಾನು ವನವಾಸಿಯಾಗಿ ಹೋಗಬಹುದು."

"ಕರ್ಣಾ, ಈ ನಿನ್ನ ಅಪೇಕ್ಷೆಯನ್ನು ನಾನು ಆಜ್ಞೆ ಎಂದು ತಿಳಿದು ಪಾಲಿಸುವೆ ಉದಾತ್ತ ರೂಪಿಯಾದ ಈ ನಿನ್ನ ದರ್ಶನದಿಂದ ನನಗೆ ಆ ಅಧಿಕಾರವು ದೊರೆತಂತಾಗಿದೆ."

ಕರ್ಣನು ಹೇಳಿದ,

"ರಥವನ್ನು ನಿಲ್ಲಿಸಿರಿ ! ಎಲ್ಲಿಯವರೆಗೆ ನನ್ನ ವಿವೇಕ, ಹಾಗೂ ವಿಚಾರ ಗಳು ನನ್ನ ಅಂಕಿತದಲ್ಲಿವೆಯೋ ಆ ಅವಧಿಯೊಳಗಾಗಿಯೇ ನಾನು ತಮ್ಮ ರಥದಿಂದ ಇಳಿದು ಬಿಡುವೆ."

ಕೃಷ್ಣನು ರಥವನ್ನು ನಿಲ್ಲಿಸಿದೊಡನೆ ಕರ್ಣನು ಕೆಳಗಿಳಿದ.

"ಕರ್ಣ, ಮರದ ನೆರಳನ್ನಾದರೂ ನೋಡಿ ರಥವನ್ನು ನಿಲ್ಲಿಸುತ್ತಿದ್ದೆ."

"ನೆರಳು ಬಿಸಿಲಿನ ಪ್ರಕಾಶದಲ್ಲಿ ದೈವವನ್ನೂ ಅನುಭವಿಸುವುದೂ ಒಂದು ಯೋಗವೆಂದೇ ಹೇಳಬಹುದು. ಆ ಅರ್ಜುನನು ಇಂದ್ರನ ಭಕ್ತನಲ್ಲವೆ? ಆತನಿಗೆ ಜೀವನದಲ್ಲಿ ನಿಮ್ಮ ಅನುಗ್ರಹ ಲಭಿಸಿತು. ನಾನು ಸೂರ್ಯನ ಭಕ್ತ. ಬಿಸಿಲಿನಲ್ಲಿ ಹುರುಪಳಿಸಿ ಹೋಗುವದೊಂದೇ ನನಗುಳಿದಿರುವ ಮಾರ್ಗ, ಹೀಗಿರುವಾಗ ನೆರಳಿನ ಪ್ರಶ್ನೆಯೇ ಬರುವುದಿಲ್ಲ."

"ಕರ್ಣ, ನಿನ್ನ ಈ ಮೋಹಕ ರೂಪವನ್ನು ನಾನೆಂದೂ ಮರೆಯಲಾರೆ. ಇನ್ನು ನಮ್ಮಿಬ್ಬರ ಭೇಟಿಯಾಗುವುದು ರಣರಂಗದಲ್ಲಿಯೇ. ಆದುದರಿಂದ ನಿನಗೆ ಏನಾದರೂ ಕೇಳಬೇಕೆಂಬ ಇಚ್ಛೆ ಇದೆಯೇ?"

ದೀರ್ಘ ಶ್ವಾಸವನ್ನು ಬಿಟ್ಟ ಕರ್ಣನು,

"ಯುದ್ಧಭೂಮಿಯಲ್ಲಿ ನೀವು ಅರ್ಜುನನ ಸಾರಥ್ಯಕರ್ಮವನ್ನು ಮಾಡುತ್ತಾ ಯಾವಾಗ ನನ್ನ ಎದುರಿನಲ್ಲಿ ಬರುವಿರೋ ಆಗ ನನಗೆ ನನ್ನ ಧನುಸ್ಸಿಗೆ ಹೆದೆಯೇರಿಸುವ ಬಲವನ್ನು ಮಾತ್ರ ಅನುಗ್ರಹಿಸಬೇಕು"

"ಮತ್ತೇ?"

ಕೃಷ್ಣನ ದೃಷ್ಟಿಯನ್ನು ತಪ್ಪಿಸಿಕೊಳ್ಳುತ್ತ,

"ಆಪ್ತರಾದ ಸ್ವಕೀಯರು ನನ್ನಿಂದ ಹತರಾಗಬಾರದು." ಸ್ವಲ್ಪ ಹೊತ್ತು ನಿಧಾನಿಸಿ "ಇನ್ನು ಒಂದೇ ಒಂದು ಅಪೇಕ್ಷೆ ಇದೆ."

"ಯಾವದು ಆ ಅಪೇಕ್ಷೆ?"

"ಎಂದಾದರೊಮ್ಮೆ ತಮ್ಮ ಕೊಳಲ ಧ್ವನಿಯನ್ನು ಮತ್ತೆ ಕೇಳುವ ಅವಕಾಶವು ದೊರೆಯಬಹುದೇ? ಮನವು ಹಾತೊರೆಯುತ್ತಿದೆ. ಆದರೆ ಅದು ಇನ್ನು ಸಾಧ್ಯವಿಲ್ಲ ಎಂದೆನಿಸತೊಡಗಿದೆ."

"ಖಂಡಿತವಾಗಿಯೂ ನಿನಗೆ ಆ ಕೊಳಲ ನಾದವನ್ನು ಕೇಳಿಸುವೆ. ಆದರೆ ಆ ನಾದವು ಕೃತಾರ್ಥ ಭಾವವನ್ನು ಸೂಚಿಸುವಂತಹದಾಗಿರುತ್ತದೆ."

ಕುದುರೆಯ ಕಾಲು ಸಪ್ಪಳವು ಕೇಳಬರಲಾರಂಭಿಸಿದುದರಿಂದ ಇಬ್ಬರೂ ಎಚ್ಚರಗೊಂಡರು. ದೂರದಲ್ಲಿದ್ದ ಕೃಷ್ಣನ ದಳವು ಈಗ ಆತನನ್ನು ಸಮೀಪಿಸುತ್ತಲಿತ್ತು. ಏನೂ ಮಾತನಾಡದೆ ಕೃಷ್ಣನು ಕರ್ಣನನ್ನು ಬಿಗಿದಪ್ಪಿಕೊಂಡ. ದಾರುಕನು ಸಾರಥಿಯ ಸ್ಥಾನವನ್ನಲಂಕರಿಸಿದ. ಇನ್ನೂ ರಥದಲ್ಲಿ ಆತನು ಕೂತಿರಲಿಲ್ಲ. ಆಗಲೇ ದಾರುಕನಿಗೆ ಕೃಷ್ಣನು ಹೇಳಿದ.

"ಎಷ್ಟು ವೇಗದಲ್ಲಿ ರಥವನ್ನು ಓಡಿಸಲು ಸಾಧ್ಯವೋ ಅಷ್ಟು ವೇಗದ ಉಪಯೋಗವನ್ನು ಬಳಸು."

ಕೃಷ್ಣನ ರಥವು ಆತನ ದಳದೊಂದಿಗೆ ಕಾಣಿಸದಂತಾಯಿತು. ಆ ಸಮೂಹದೊಂದಿಗೆ ಬಂದಿದ್ದ ಕರ್ಣನ ರಥವು ಮಾತ್ರ ಏಕಾಂಗಿಯಾಗಿ ನಿಂತು ಕೊಂಡಿತ್ತು.

ಚಕ್ರಧರನು ಕರ್ಣನ ಬರುವಿಕೆಗಾಗಿಯೇ ಕಾದುಕೊಂಡಿದ್ದ.

## 40

ನಡು ಮಧ್ಯಾಹ್ನದಲ್ಲಿ ಕರ್ಣನ ರಥವು ಹಸ್ತಿನಾವತಿಯ ಮಾರ್ಗವಾಗಿ ಧಾವಿಸುತ್ತಲಿತ್ತು. ಸುತ್ತುಮುತ್ತಲಿನ ಭೂಮಿಯು ಬಿಸಿಲಿನ ತಾಪದಿಂದ ಹುರುಪಳಿಸಲಾರಂಭಿಸಿತ್ತು. ಚಕ್ರಧರನು ಸಾರಥ್ಯ ಕರ್ಮವನ್ನು ನಿರ್ವಹಿಸುತ್ತಲಿದ್ದ. ಕರ್ಣನು ತನ್ನ ವಿಚಾರದಲ್ಲಿ ತಾನು ಮುಳುಗಿ ಹೋಗಿದ್ದ. ಅನೇಕ ಸಲ ಚಕ್ರಧರನು ಕೂಗಿಕೊಳ್ಳುತ್ತಲಿದ್ದ.

"ಅಂಗರಾಜ,"

"ಏನು ?"

"ಅಲ್ಲಿ ನೋಡು."

ಕರ್ಣನಿಗೆ ಎದುರಾಗಿ ಒಂದು ರಥವು ಧಾವಿಸಿಬರುತ್ತಲಿತ್ತು. ಸೂರ್ಯ ಕಿರಣಗಳ ಪ್ರಕಾಶದಿಂದ ಆ ಸುವರ್ಣ ರಥವು ಫಳಫಳನೆ ಹೊಳೆಯುತ್ತಲಿತ್ತು. ದಿಟ್ಟಿಸಿ ನೋಡಿದ,

"ಯುವರಾಜನ ರಥವೆಂದು ತೋರುವುದಲ್ಲವೆ ?"

ಚಕ್ರಧರನು ಚಾಬೂಕವನ್ನೆತ್ತಿದಾಗ ರಥದ ಓಟವು ಮತ್ತಷ್ಟು ಹೆಚ್ಚಿತು, ಎರಡೂ ರಥಗಳು ಎದುರು ಬದಿರಾಗಿ ನಿಂತುಕೊಂಡವು. ಕರ್ಣನತ್ತ ಸಾಗಿ ಬರುತ್ತಿದ್ದ ದುರ್ಯೋಧನನ ಮುಖ ಸಪ್ಪೆಯಾಗಿತ್ತು. ಅವನ್ನು ಕಂಡು ಕರ್ಣನು ಮನದಲ್ಲೆ ನಕ್ಕು ದುರ್ಯೋಧನನನ್ನು ಪ್ರಶ್ನೆ ಮಾಡಿದ.

"ಯುವರಾಜ, ಇಷ್ಟೊಂದು ಚಿಂತೆ ಮಾಡುವ ಕಾರಣವೇನಿಲ್ಲ. ಕೃಷ್ಣನು ನನ್ನನ್ನು ಓಡಿಸಿಕೊಂಡು ಹೋಗುತ್ತಿಲ್ಲಲ್ಲಿ."

ದುರ್ಯೋಧನನು ಕರ್ಣನ ಮುಂಗೈಗಳನ್ನು ಹಿಡಿದುಕೊಂಡು ಹೇಳಿದ,

"ಮನುಷ್ಯರನ್ನು ಓಡಿಸಿಕೊಂಡು ಹೋದರೆ ಅವರನ್ನು ಪುನಃ ಮರಳಿ ಕರೆತರಬಹುದು. ಆದರೆ ಮೃತ್ಯು ಯಾರನ್ನು ಕರೆದೊಯ್ಯುತ್ತದೆಯೋ ಅಂಥವರು ಇನ್ನೊಮ್ಮೆ ಮರಳಿ ದೊರೆಯಲಾರರು."

"ಮೃತ್ಯು! ಮಿತ್ರಾ...."

ದುರ್ಯೋಧನನ ಕಣ್ಣುಗಳು ಹಸಿಗೂಡಿದ್ದವು. ಅವನ ಉಸಿರು ತಡೆಗಟ್ಟುತ್ತಿತ್ತು. ತನ್ನೆಲ್ಲ ಬಲವನ್ನು ಒಕ್ಕೂಡಿಸಿಕೊಂಡು ಆತನು ಹೇಳಿದ,

"ನಿಮ್ಮ ತಂದೆ ಅಧಿರಥನ ಕಾಲವಾಯಿತು."

"ಸಾಧ್ಯವಿಲ್ಲ? ಇಂದು ಬೆಳಗಿನಲ್ಲಿಯೇ ನಾನು ಅವರನ್ನು ನೋಡಿ ಕೊಂಡು ಬಂದಿರುವೆ."

"ಮಿತ್ರಾ, ಅಪಘಾತದಿಂದ ಆತನು ಮರಣ ಹೊಂದಿದ."

"ಅಪಘಾತ?"

"ಈ ಕಡೆಗೆ ನೀವೆಲ್ಲ ಬಂದನಂತರ ಅಧಿರಥನು ರಥಶಾಲೆಯತ್ತ ಹೋದ. ಅಲ್ಲಿ ಒಂದು ರಥವು ಸಿದ್ಧವಾಗಿತ್ತು. ಅದರ ಪರೀಕ್ಷೆಯನ್ನಾರಂಭಿಸಿದಾಗ"

ಕರ್ಣನು ನಿಂತಲ್ಲಿಯೇ ಕುಸಿದು ಬಿಟ್ಟ.

"ಬೇಡ ಯುವರಾಜ, ಮುಂದೆ ನಡೆದುದೆಲ್ಲವೂ ನನಗೆ ಕಾಣಿಸುತ್ತಿದೆ. ತಂದೆ ರಥಾರೂಢರಾದ ನಂತರ ರಥದ ಗಾಲಿಗಳ ಕೀಲುಗಳನ್ನು ಕಳಚಿಬಿಡು ವಂತೆ ಅವರು ಆಜ್ಞಾಪಿಸಿದರು. ನಾಗಾಲೋಟದಲ್ಲಿ ರಥವು ಧಾವಿಸಲಾರಂಭಿ ಸಿತು. ಆಕಸ್ಮಿಕವಾಗಿ ರಥದ ಗಾಲಿಯು ಹೊರಬಂದು ಸಂಪೂರ್ಣವಾಗಿ ಚಕ್ರವು ಕಳಚಿಕೊಂಡಿತು, ಅಥವಾ ಕುಸಿಯಿತು. ಅದರ ಅಡಿಯಲ್ಲಿ ನಮ್ಮ ತಂದೆಯವರು ಸಿಕ್ಕಿಕೊಂಡಿದ್ದರು. ಒಂಟಿ ಗಾಲಿಯ ರಥವನ್ನೇ ಬಹು ದೂರದವರೆಗೆ ಕುದುರೆಗಳು ಎಳೆದುಕೊಂಡು ಹೋಗಿದ್ದವು. ರಥವು ನಿಂತು ಕೊಂಡಾಗ ತಂದೆಯವರ ಪ್ರಾಣಪಕ್ಷಿಯು ಹಾರಿಹೋಗಿತ್ತು. ಇದನ್ನೇ ಹೇಳಬೇಕಾಗಿತ್ತಲ್ಲವೆ?"

"ಹೌದು" ಆಶ್ಚರ್ಯಚಕಿತನಾಗಿ "ಮಿತ್ರಾ ನಿನಗೆ ಇದೆಲ್ಲಾ ಹೇಗೆ ತಿಳಿಯಿತು. ಯಾರು ನಿನಗೆ ಹೇಳಿದರು" ಎಂದ ದುರ್ಯೋಧನ.

"ತಂದೆಯವರ ರಥಪರೀಕ್ಷೆಯ ವಿಧಾನವು ನನಗೆ ತಿಳಿಯದಿರು ತ್ತದೆಯೇ? ನವುತೂಕದ ರಥವನ್ನು ಸಿದ್ಧಗೊಳಿಸುವದು ಅವರಿಗೆ ಕೈವಶ

ವಾದ ಕಲೆಯಾಗಿತ್ತು. ರಥದ ಪರೀಕ್ಷಾ ವಿಧಾನ ಇಷ್ಟೇ ಎಂದು ಅವರು ಸುಮ್ಮನಿರುತ್ತಿರಲಿಲ್ಲ. ಸುಸಜ್ಜಿತವಾದ. ಸಮತೂಕದಿಂದ ಕೂಡಿದ ರಥವನ್ನು ಬಲಶಾಲಿಗಳಾದ ಅಶ್ವಗಳು ಎಳೆಯುತ್ತಿರುವಾಗಲೂ ರಥಚಕ್ರಗಳು ದೈವಗತಿಯಿಂದ ತಿರುಗುತ್ತವೆ ಎಂದು ಅವರು ನಂಬುತ್ತಿದ್ದರು. ಜೀವನದ ರಥವಾದರೂ ಹೀಗೆಯೇ ಇರುತ್ತದೆ. ವಿದ್ಯೆ, ವ್ಯಾಸಂಗ ಹಾಗೂ ಅನುಭವಗಳಿಂದಲೇ ಸಿದ್ಧಗೊಳ್ಳುತ್ತದೆ. ಅಹಂಕಾರವಶದಿಂದ ಎಂದಾದರೊಮ್ಮೆ ಸಂಯಮದ ಕುಣಿಗಳನ್ನು ತೆಗೆದು ಬಿಸಾಡಿದಾಗ ವಿಪತ್ತನ್ನೆದುರಿಸಿಯೇ ತೀರಬೇಕಾಗುತ್ತದೆ. ಆಗ ಸಾಮಾನ್ಯ ಪೆಟ್ಟಾದರೂ ಕೆಲವೊಂದು ಸಲ ಪ್ರಾಣವನ್ನೇ ಕಳೆದುಕೊಳ್ಳಬೇಕಾಗುತ್ತದೆ."

ಆ ಧಕ್ಕೆಯಿಂದ ಬಹು ಹೊತ್ತಿನ ಮೇಲೆ ಕರ್ಣನ ಮನಸ್ಸು ಒಂದು ಹಂತಕ್ಕೆ ಮುಟ್ಟಿದಂತಾಯಿತು. ಅವನು ವಿಚಾರ ಮಾಡಿದ.

"ತಂದೆ ಎಲ್ಲಿದ್ದಾರೆ ?"

"ನದಿಯ ದಂಡೆಗೆ ತೆಗೆದುಕೊಂಡು ಹೋಗಿದ್ದಾರೆ. ಎಲ್ಲರೂ ನಿನ್ನ ಮಾರ್ಗ ಸಿರೀಕ್ಷಣೆಯಲ್ಲಿದ್ದಾರೆ........ನಡೆ."

ದುರ್ಯೋಧನನ ಸಹಾಯದಿಂದ ಕರ್ಣನು ರಥದಲ್ಲಿ ಕುಳಿತುಕೊಂಡ. ದೇಹಶಕ್ತಿಯು ಕುಂದಿಹೋಗಿತ್ತು. ಅಧಿರಥನ ನೆನಪು ಆತನನ್ನು ಎತ್ತಿ ಎತ್ತಿ ಹಾಕುತ್ತಲಿತ್ತು. ಬಹು ಕಷ್ಟದಿಂದ ಹಿಡಿದಿಟ್ಟಿದ್ದ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಲಿತ್ತು. ಆತನ ಬೆನ್ನ ಮೇಲೆ ದುರ್ಯೋಧನನು ಕೈಯಾಡಿಸುತ್ತಿದ್ದ. ಅದರಿಂದಾಗಿ ಆ ಪ್ರವಾಹವನ್ನು ತಡೆಹಿಡಿಯುವ ಬದಲು ಮತ್ತಷ್ಟು ರಭಸದಿಂದ ಹೊರಬರುತ್ತಲಿತ್ತು.

ಕ್ರಿಯಾ ಕರ್ಮಗಳನ್ನೆಲ್ಲ ಮುಗಿಸಿದ ಅನಂತರ ಎಲ್ಲರೂ ಹಿಂದಿರುಗಿ ಬಂದರು. ಅದೇ ಹಿಂದಿನ ಮನೆ, ಮನೆಯಲ್ಲಿದ್ದ ಜನರೂ ಅವರೇ. ಹೀಗಿದ್ದರೂ ಒಂದು ಜೀವವು ಮಾತ್ರ ಅಲ್ಲಿ ಇರದೇ ಹೋದುದರಿಂದ ಇಡೀ ಕುಟುಂಬವೇ ಶೂನ್ಯವನ್ನಪ್ಪಿದಂತೆ ತೋರುತ್ತಿತ್ತು. ಕಣ್ಣೀರಿಡುತ್ತಿದ್ದ ದ್ಯುಮನನ್ನು ಸಮಾಧಾನ ಪಡಿಸಲು ಮುಂದೆ ಸರಿದ.

ಕರ್ಣನು, ಸಾಧ್ಯವಾದಷ್ಟು ಮನಸ್ಸನ್ನು ಕಠೋರ ಮಾಡಿಕೊಂಡೇ ಗೃಹಪ್ರವೇಶ ಮಾಡಿದ. ಒಳಭಾಗದಲ್ಲಿ ರಾಧಾತಾಯಿ ಒಂದು ಮೂಲೆಯಲ್ಲಿ

35

ಮೊಳಕಾಲು ಮಧ್ಯೆ ತಲೆ ಹಾಕಿಕೊಂಡು ಕುಳಿತಿದ್ದಳು. ಕರ್ಣನು ಬಂದೊಡನೆ ವೃಷಾಲೀ ಹಾಗೂ ಉಳಿದ ಸ್ತ್ರೀಯರೆಲ್ಲ ಎದ್ದು ನಿಂತರು. ಬಿಳಿಯ ವಸ್ತ್ರಗಳನ್ನುಟ್ಟಿದ್ದ ಕರ್ಣನು ನೇರವಾಗಿ ತಾಯಿಯ ಹತ್ತಿರ ಹೋಗಿ ನಿಂತ. ಮೊಳಕಾಲು ಸಂದಿನಿಂದ ರಾಧಾತಾಯಿ ತಲೆಯನ್ನು ಮೇಲೆತ್ತಿದಳು. ಅವಳ ದೃಷ್ಟಿಯು ಕರ್ಣನ ಮೇಲೆ ಸ್ಥಿರಗೊಂಡಿತು.

ತಾಯಿಯ ದರ್ಶನದಿಂದ ಅವನ ಮನಸ್ಸು ವಿಹ್ವಲಗೊಂಡಿತು. ಆ ರೂಪದಲ್ಲಿ ಅದೆಂಥ ಬದಲಾವಣೆ! ಹಣೆಯಮೇಲಿನ ಒಂದು ಕುಂಕುಮದ ಬೊಟ್ಟು ಇಲ್ಲವಾದರೆ ಅದೆಷ್ಟು ತೇಜಹೀನವಾಗಿ ತೋರುತ್ತಿದೆ. ಆ ಕಣ್ಣುಗಳಲ್ಲಿಯ ತೇಜವೂ ಅಳಿಸಿಹೋದಂತೆನಿಸಿದೆ. ಆ ದರ್ಶನದಿಂದ ಕರ್ಣನ ಕಾಲಕೆಳಗಿರುವ ಭೂಮಿಯು ಕುಸಿದು ಹೋದಂತೆನಿಸಿತು. ನಿಧಾನವಾಗಿ ಆತ ಕುಳಿತುಕೊಂಡ; ಏನೂ ಹೇಳದೆ ಆತ ರಾಧಾತಾಯಿಯನ್ನು ಅಪ್ಪಿಕೊಂಡ.

## 41

ಕುರುಕ್ಷೇತ್ರದ ನೆಲವನ್ನು ಯುದ್ಧಭೂಮಿ ಎಂದು ನಿಶ್ಚಯಿಸಿ ಕೌರವರ ಸೇನಾ ದಳಗಳನ್ನೆಲ್ಲ ಅಲ್ಲಿ ಒಟ್ಟುಗೂಡಿಸಲು ಪ್ರಾರಂಭಿಸಿದರು. ಕೌರವರ ಪಕ್ಷವನ್ನು ವಹಿಸಿದ ಅನೇಕ ರಾಜರುಗಳು ತಮ್ಮ ತಮ್ಮ ಸೇನೆಗಳೊಡನೆ ಒಬ್ಬೊಬ್ಬರಾಗಿ ಬರಲಾರಂಭಿಸಿದರು. ಕುರು ಪಾಂಡವ ಪಕ್ಷಗಳೆರಡರಲ್ಲಿಯೂ ಅತಿ ಚುರುಕಿನ ಚಟುವಟಿಕೆಗಳು ಆರಂಭವಾದವು. ಎರಡೂ ಪಕ್ಷದವರಿಂದ ಕುರುಕ್ಷೇತ್ರದ ಭೂಭಾಗವೆಲ್ಲ ಭವ್ಯ ಶಿಬಿರಗಳಿಂದ ತುಂಬಿಹೋಯಿತು, ಕುರುಕ್ಷೇತ್ರಕ್ಕಾಗಿ ಹೊರಟ ಪಾಂಡವರ ಚತುರಂಗಬಲದ ಕೆಲವು ಸೇನಾಭಾಗವು ಹಸ್ತಿನಾವತಿಯ ನದಿಯ ಆಚೆ ದಡದಲ್ಲಿ ತನ್ನ ಬಿಡಾರವನ್ನು ಮಾಡಿತ್ತು. ಆ ಸೈನ್ಯದ ಇತಿಮಿತಿಗಳನ್ನರಿತುಕೊಂಡು ಕರ್ಣ ದುರ್ಯೋಧನಾದಿಗಳು ಅದಕ್ಕೆ ಸರಿಹೊಂದುವಂತಹ ರೀತಿಯಲ್ಲಿ ತಮ್ಮ ಸೇನಾ ಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿದರು. ಕರ್ಣನ ಮಕ್ಕಳಾದ ಮೃತ್ಯುಂಜಯ, ವೃಷಕೇತು, ವೃಷಸೇನ ಹಾಗೂ ಅವನ ಸೋದರನಾದ ದ್ರುಮ ಇವರೆಲ್ಲರೂ ಈ ಮೊದಲೇ ತಮ್ಮ ತಮ್ಮ ಸೇನೆಗಳೊಂದಿಗೆ ಕುರುಕ್ಷೇತ್ರಕ್ಕೆ ಪ್ರಯಾಣ ಮಾಡಿದ್ದರು.

ಅಂದು ಕಗ್ಗತ್ತಲಿನ ರಾತ್ರಿಯಲ್ಲಿ ರಾಧಾತಾಯಿ ಮನೆಯಿಂದ ಹೊರ ಹೋಗುತ್ತಿದ್ದುದನ್ನು ಕಂಡ ಕರ್ಣನು ಚಕಿತನಾದ. ಅಧಿರಥನು ಹೋದಂದಿನಿಂದ ಅವಳು ತನ್ನ ಕೋಣೆಯಿಂದ ಎಂದೂ ಹೊರಬಂದವಳಲ್ಲ. ಇಂದು ಇದ್ದಕ್ಕಿದ್ದಂತೆ ಹೀಗೆ ಹೊರಟ ಅವಳನ್ನು ಕಂಡು ಕರ್ಣನು ಮುಂದೆ ಬಂದು ನಿಂತ.

"ತಾಯೀ ಹೊರಗೆ ಹೋಗಬೇಕಾಗಿದೆಯೇ ?"

''ಹೌದು ! ನದಿಯ ಪೂಜೆ ಮಾಡಬೇಕಾಗಿದೆ.''

''ನಾನು ಸಂಗಡ ಬರಲೇ ?''

"ಬೇಡ, ಕೆಲವು ವ್ರತಾಚರಣೆಗಳನ್ನು ಏಕಾಂತದಲ್ಲಿಯೇ ಆಚರಿಸಬೇಕಾಗುತ್ತದೆ.''

ಕರ್ಣನತ್ತ ಹೊರಳಿಯೂ ನೋಡದೆ ಅವಳು ದಾಸಿಯೊಂದಿಗೆ ನದಿಯ ದಡಕ್ಕೆ ಬಂದು ತಲುಪಿದಳು. ಕತ್ತಲಾಗಿದ್ದರೂ ನಕ್ಷತ್ರಗಳ ಪ್ರಕಾಶವಿತ್ತು. ಆ ನದಿಯ ದಂಡೆಯಲ್ಲಿ ಒಂದು ನೌಕೆಯನ್ನಿಡಲಾಗಿತ್ತು. ಇನ್ನೊಂದು ದಡದಲ್ಲಿ ಪಾಂಡವ ಶಿಬಿರದ ಬಿಡಾರವಿದ್ದು ಅಲ್ಲಿ ಸಾವಿರಾರು ಹಿಲಾಲುಗಳು ಉರಿಯುತ್ತಿದ್ದವು. ಅದನ್ನು ಕಂಡ ರಾಧಾತಾಯಿಯು,

''ಇದೇ ಆ ನೌಕೆಯಲ್ಲವೆ ?''

''ಹೌದು.''

''ಹಾಗಾದರೆ ನಡೆ.''

ಇಬ್ಬರೂ ಆ ನೌಕೆಯನ್ನೇರಿದೊಡನೆ ಅದು ನಿಧಾನವಾಗಿ ಚಲಿಸಲಾರಂಭಿಸಿತು.

* * *

ಶಿಬಿರದಲ್ಲಿ ಕೃಷ್ಣನೊಬ್ಬನೇ ಕುಳಿತುಕೊಂಡಿದ್ದ. ವಾತಾವರಣವು ಪ್ರಶಾಂತವಾಗಿತ್ತು. ಭಾವೀ ಯುದ್ಧವನ್ನು ಕುರಿತು ಚರ್ಚೆಗೈಯುತ್ತ ಆತನು ಆಗಾಗ ಅತ್ತಿಂದಿತ್ತ, ಇತ್ತಿಂದತ್ತ ಶತಪಥ ಹಾಕುತ್ತಲಿದ್ದ. ಅದೇ ಸಮಯದಲ್ಲಿ ಓರ್ವ ಸೇವಕನು ಬಂದು,

''ತಮ್ಮ ದರ್ಶನಾರ್ಥಿಯಾಗಿ ಓರ್ವವೃದ್ಧ ಮಹಿಳೆಯು ಬಂದಿದ್ದಾಳೆ.'

"ಈ ಸಮಯದಲ್ಲಿ ?"

"ಹೌದು ಅವಶ್ಯವಾಗಿ ತಮ್ಮ ಭೇಟಿಯಾಗಬೇಕಂತೆ, ಅವಳು ತುಂಬ ಆಗ್ರಹಪಡಿಸುತ್ತಿದ್ದಾಳೆ."

"ಅವಳನ್ನು ಒಳಗೆ ಕಳಿಸಿರಿ."

ಇಂಥ ರಾತ್ರಿಯ ಕಾಲದಲ್ಲಿ ನನ್ನನ್ನು ಕಾಣಲು ಯಾರು ಬಂದಿರ ಬಹುದು ? ವಿದುರ ಹಾಗೂ ಕುಂತಿ ಇವರುಗಳು ನಿನ್ನೆಯೇ ಶಿಬಿರಕ್ಕೆ ಬಂದು ಭೇಟಿ ಕೊಟ್ಟು ಹೋಗಿದ್ದಾರೆ. ಪುನಃ ಈ ವೇಳೆಗೆ ಅವರು ಬರಲಾರರು. ಹೀಗೆ ಕೃಷ್ಣನು ವಿಚಾರದಲ್ಲಿ ತೊಡಗಿರುವಾಗ ರಾಧಾತಾಯಿಯು ಶಿಬಿರವನ್ನು ಪ್ರವೇಶ ಮಾಡಿದಳು.

ಕೃಷ್ಣನನ್ನು ರಾಧಾತಾಯಿ ಎಂದೂ ಸಮೀಪದಿಂದ ನೋಡಿದವಳಲ್ಲ. ಒಳಬಂದ ಅವಳು ಬಹು ನಮ್ರತೆಯಿಂದ ಆತನಿಗೆ ನಮಸ್ಕಾರ ಮಾಡಿದಳು. ಆ ಹಿರಿಯಳಿಗೆ ಪ್ರತಿವಂದಿಸಲು ಕೈಮುಗಿದುಕೊಂಡಿದ್ದ ಕೃಷ್ಣನು ಹೇಳಿದ.

"ತಾಯಿಯಾದವರು ಆಶೀರ್ವಾದ ಮಾಡಬೇಕೇ ವಿನಃ ನಮಸ್ಕಾರ ಮಾಡಬಾರದು."

"ಕೃಷ್ಣ ಮಹಾರಾಜ, ತಾವು ರಾಜರೆಂದು ನಮಸ್ಕರಿಸಲಿಲ್ಲ. ಗುಣ ದಿಂದ ತಾವು ದೊಡ್ಡವರು. ಆದುದರಿಂದ ಅದು ನನ್ನ ಧರ್ಮವೆಂದು ತಿಳಿದು ತಮಗೆ ವಂದಿಸಿದೆ."

"ಮಾತೇ ನೀವಾರು ? ನಿಮ್ಮ ಪರಿಚಯ ?"

"ಸಾಮಾನ್ಯರ ಪರಿಚಯವೇಕೆ ? ನಾನೊರ್ವ ಮಾತೆ. ಜೀವಿತ ಕಾಲದಲ್ಲಿ ಸ್ತ್ರೀಯರಿಗೆ ಪತಿಯು ಆಶ್ರಯವಿರುತ್ತದೆ. ದುರ್ದೈವದಿಂದ ಇತ್ತೀಚೆಗೆ ನಾನು ಅದನ್ನು ಕಳೆದುಕೊಂಡಿರುವೆ. ಬಾಲ್ಯದಲ್ಲಿಯೇ ವಿವಾಹಿತ ಳಾದೆ. ತಾರುಣ್ಯ ಲಭಿಸಿತು. ಆದರೆ ನನ್ನ ಉಡಿ ತುಂಬಲಿಲ್ಲ. ಪುತ್ರ ಪ್ರಾಪ್ತಿಗಾಗಿ ಪೂಜೆ, ಅರ್ಚನೆ, ಉಪವಾಸ, ವ್ರತ, ನಿಯಮ ಮೊದಲಾದುವು ಗಳನ್ನು ಮಾಡಿದೆ. ಅದರಿಂದ ಯಾವ ಫಲವೂ ದೊರೆಯಲಿಲ್ಲ. ಒಂದು ದಿನ ನಸುಕಿನಲ್ಲಿ ಪತಿಪತ್ನಿಗಳಿಬ್ಬರೂ ನದಿಯ ಸ್ನಾನಕ್ಕೆಂದು ಹೋಗಿದ್ದೆವು. ಆಗ ನದಿಯ ಪ್ರವಾಹದ ಗುಂಟ ತೇಲಿ ಹೋಗುತ್ತಿರುವ ಒಂದು ಪೆಟ್ಟಿಗೆಯು ನಮಗೆ ಕಾಣಿಸಿತು. ಆ ಪೆಟ್ಟಿಗೆಯ ರಕ್ಷಣಾರ್ಥವಾಗಿ ಕಂಕಣ ರೂಪದಲ್ಲಿ

ಹುಲ್ಲನ್ನು ಹೆಣೆಯಲಾಗಿತ್ತು. ಕುಂಕುಮದಿಂದ ಅದನ್ನು ಪೂಜೆ ಮಾಡಿದ್ದರು. ಬಹು ಕುತೂಹಲದಿಂದ ನಾನು ಆ ಪೆಟ್ಟಿಗೆಯನ್ನು ಹಿಡಿದುಕೊಂಡೆ. ಅದರಲ್ಲಿ ಆಗ ತಾನೇ ಜನನವಾದ ಒಂದು ಶಿಶು ಕಾಣಬಂದಿತು. ಪುತ್ರಹೀನರಾದ ನಮಗೆ ಈ ಮಗು ಪರಮೇಶ್ವರನಿತ್ತ ಪ್ರಸಾದ ಎಂಬ ಭಾವನೆ ಮೂಡಿತು.''

"ಮುಂದೇನಾಯಿತು" ಕೃಷ್ಣನು ವಿಚಾರಿಸಿದ,

"ನಾವು ಅಂದುಕೊಂಡಂತೆ ಆ ಮಗು ವರವಾಗಿಯೇ ಪರಿಣಮಿಸಿದ. ಅವನ ಆಗಮನದಿಂದಾಗಿ ನಮ್ಮ ಮನೆಯಲ್ಲಿ ಆನಂದದ ಹೊಳೆ ಹರಿಯುವಂತಾಯಿತು. ಜೀವನದಲ್ಲಿಯ ದುಃಖವು ಮಾಯವಾದಂತೆನಿಸತೊಡಗಿತು. ಆತನು ನಮ್ಮ ಮನೆಗೆ ಕಾಲಿಟ್ಟ ಅನಂತರ ನನಗೂ ಮಕ್ಕಳಾದವು. ಆತ ತುಂಬ ಗುಣಸಂಪನ್ನ, ವಿದ್ಯಾ ವ್ಯಾಸಂಗಿಯಾಗಿ ಕೀರ್ತಿಯನ್ನು ಗಳಿಸಿದ. ಜ್ಞಾನಿಯಾಗಿ, ವೀರನಾಗಿ, ಮಹಾಯೋಧನಾಗಿ, ದಾನಿ ಎಂದು ಅವನ ಕೀರ್ತಿಯು ಮೂರು ಲೋಕದಲ್ಲಿಯೂ ಪಸರಿಸಿತು."

"ದಾನಿ !" ಕೃಷ್ಣನು ಸಾವರಿಸಿಕೊಂಡು "ಮಾತೆ ನೀವು ಯಾರ ವಿಷಯದಲ್ಲಿ ಈ ಮಾತುಗಳನ್ನು ಹೇಳುತ್ತಿರುವಿರಿ ? ನೀವಾರು ?"

"ನಾನು ರಾಧಾ ; ಮಹಾರಥಿ ಕರ್ಣನ ತಾಯಿ."

"ತಾಯೀ, ನಿಮಗೇನು ಬೇಕಾಗಿದೆ ?"

ರಾಧಾತಾಯಿಯು ನಕ್ಕು,

"ಮಹಾರಾಜಾ, ಯಾವನ ತಾಯಿಯ ಹಣೆಯ ಸೌಭಾಗ್ಯವು ಅಳಿಸಿ ಹೋಗಿದೆಯೋ, ಅವಳ ಮಗನು ನಾಳೆ ರಣರಂಗಕ್ಕೆ ಹೊರಟು ನಿಂತಿದ್ದಾನೆ. ಆ ತಾಯಿ ಇನ್ನೇನು ಬೇಡಿಕೊಂಡಾಳು ? ನನಗೆ ನನ್ನ ಮಗನು ಬೇಕಾಗಿದ್ದಾನೆ. ಅದೂ ಸುರಕ್ಷಿತವಾದ ರೀತಿಯಲ್ಲಿ."

"ಅದಕ್ಕಾಗಿಯೇ ನೀವು ನನ್ನ ಹತ್ತಿರ ಬಂದಿರುವಿರಾ ?"

"ಇಲ್ಲವೆಂದರೆ ಬೇರೆಲ್ಲಿಗೆ ಹೋಗಲಿ. ಕೃಷ್ಣಾ, ನನ್ನ ಮಗನ ಮುಖದಿಂದ ಅನೇಕ ಸಲ, ನಿಮ್ಮ ಗುಣಗಾನಗಳನ್ನು ಕೇಳಿದ್ದೇನೆ. ನಿಮ್ಮ ಸ್ನೇಹಭಾವನ ವಿಚಾರವಾಗಿ ಆತನು ಸಾಕಷ್ಟು ವರ್ಣಿಸಿದ್ದಾನೆ. ಕರ್ಣನಂತೂ "ಪಾಂಡವರ ಸರ್ವಸ್ವ ಶಕ್ತಿಯೆಲ್ಲ ಕೃಷ್ಣನಲ್ಲಿದೆ" ಎಂದು ಅನೇಕ ಸಲ

ಹೇಳಿದ್ದಾನೆ. ನಿನ್ನ ಅನುಗ್ರಹವಾದಲ್ಲಿ ನನ್ನ ಮಗನೂ ಸುರಕ್ಷಿತವಾಗಿ ಉಳಿಯಬಲ್ಲ, ಈ ವಿಚಾರದಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ."

"ಇಲ್ಲ ತಾಯೀ, ಆ ಮಾತು ಈಗ ನನ್ನ ಕೈಯ್ಯಲಿಲ್ಲ."

"ಹಾಗಾದರೆ ಬೇರೆ ಯಾರ ಕೈಯ್ಯಲ್ಲಿದೆ !"

"ನೀಯತಿಯ ಕೈಯ್ಯಲ್ಲಿದೆ ! ಕಾಲನ ಕೈಯ್ಯಲ್ಲಿದೆ !"

ರಾಧಾತಾಯಿಯ ಮುಖದಲ್ಲಿ ಪ್ರಕಟವಾದ ಹಾಸ್ಯವನ್ನು ಕಂಡು ಕೃಷ್ಣನಿಗೆ ಸೋಜಿಗವೆನಿಸಿತು. ಅವನು ಕೇಳಿದ,

"ಸುಳ್ಳೆನಿಸುತ್ತಿದೆಯೇ ?"

"ಇಲ್ಲ."

"ಹಾಗಾದರೆ ನಕ್ಕುದೇಕೆ ?"

"ಮಹಾರಾಜ, ನನ್ನ ಮಗ ಕರ್ಣನೊಬ್ಬ ಸಾಮಾನ್ಯ ಮನುಷ್ಯ. ಸೂತಕುಲದಲ್ಲಿ ಬೆಳೆದವನು. ಆದರೂ ಅವನ ದಾನದ ಕೀರ್ತಿಯು ತುಂಬ ಹಿರಿದಾದುದು. ಯಾವ ಯಾಚಕನೂ ಅವನಲ್ಲಿ ಬಂದು ನಿರಾಶನಾಗಿ ಹೋಗಲಿಲ್ಲ. ಪಾಂಡವರ ವಿಜಯಕ್ಕಾಗಿ ಸಾಕ್ಷಾತ್ ಇಂದ್ರನೇ ಬಂದು ಆತನಿಂದ ಕವಚ ಕುಂಡಲಗಳನ್ನು ಪಡೆದುಕೊಂಡುಹೋದ. ಮುಂದಾಗಬಹುದಾದ ಪರಾಜಯುವನ್ನು ಲೆಕ್ಕಿಸದೆ ಕೊಟ್ಟ ವಚನಕ್ಕೆ ಭಂಗಬಾರದ ರೀತಿಯಲ್ಲಿ ಕರ್ಣನು ತನ್ನ ಕವಚ ಕುಂಡಲಗಳನ್ನು ದಾನವಾಗಿ ಇಂದ್ರನಿಗೆ ಸಮರ್ಪಿಸಿದ. ಇದೊಂದು ಸಾಮಾನ್ಯ ಮಾನವನ ಕಥೆಯಾಗಿದೆ. ಆದರೆ ತಾವು ದೈವೀಗುಣ ಸಂಪನ್ನರು. ಇಂದು ತಾವೇ ಕುಳಿತುಕೊಂಡು ಕಾಲ, ನಿಯತಿ ಎಂಬ ವಿಚಾರಗಳಲ್ಲಿ ವಿಶ್ವಾಸವನ್ನು ತೋರಿಸುತ್ತಲಿರುವಿರಿ."

ಕೃಷ್ಣನಿಗೆ ಏನು ಹೇಳಬೇಕೆಂಬುದೇ ತೋಚದಂತಾಯಿತು. ಆತನ ಪ್ರಸನ್ನ ಮುದ್ರೆಯಲ್ಲಿಯೂ ಬದಲಾವಣೆ ಕಂಡಿತು. ವ್ಯಥಿತನಾದ ಕೃಷ್ಣನು,

"ತಾಯೀ, ನನಗೆ ನಿಮ್ಮ ಭಾವನೆಗಳ ಅರ್ಥವಾಗುತ್ತಿದೆ. ಕರ್ಣನ ವಿಚಾರವಾಗಿ ನನ್ನಲ್ಲಿಯೂ ಪ್ರೀತಿ ಇದೆ."

"ಬೇಡ ಕೃಷ್ಣ, ನಮ್ಮ ಸಲುವಾಗಿ ನೀನು ಚಿಂತಿಸಬೇಡ, ನಾನು ಆ ದಾನಿಯಾದ ಕರ್ಣನ ತಾಯಿಯಾಗಿರುವೆ. ಯಾರಿಗೆ ದಾನ ಕೊಡುವಾಗ ದುಃಖವಾಗುತ್ತದೆಯೋ ಅಂಥವರ ದಾನವು ಎಂಥ ಮಹತ್ವದ್ದಾಗಿದ್ದರೂ

ಯಾಚಕರಾದವರು ಅದನ್ನು ಸ್ವೀಕರಿಸಬಾರದು. ಈ ಮಾತುಗಳನ್ನು ಅನೇಕ ಸಲ ಆತನು ಹೇಳುತ್ತಿದ್ದ. ನೀನು ನಮ್ಮ ಸಲುವಾಗಿ ವ್ಯಥೆಪಡಬೇಡ. ಬದಲಾಗಿ ದೈವದಲ್ಲಿ ಏನು ಬರೆದಿದೆಯೋ ಅದನ್ನೇ ನಾವು ಆನಂದದಿಂದ ಸಹನೆ ಮಾಡುತ್ತೇವೆ, ಅನುಭವಿಸುತ್ತೇವೆ."

"ತಾಯೀ ಕೋಪಿಸಿಕೊಂಡೆಯಾ ?"

"ಇಲ್ಲ ಕೃಷ್ಣಾ, ನಾನು ಕೋಪಿಸಿಕೊಂಡಿಲ್ಲ. ಅದು ನಮ್ಮ ಅಧಿಕಾರವೂ ಅಲ್ಲ, ನಾನು ಬರುತ್ತೇನೆ "

ರಾಧಾತಾಯಿ ಬಲವನ್ನೆಲ್ಲ ಕಳೆದುಕೊಂಡಂತೆ ಕಾಣುತ್ತಿದ್ದಳು. ಭಾರವಾದ ಹೆಜ್ಜೆಗಳನ್ನಿಡುತ್ತ, ಸೋತ ಮನಸ್ಸಿನಿಂದ ಅವಳು ಆ ನೌಕೆಯಲ್ಲಿ ಕುಳಿತುಕೊಂಡಳು. ಪಾಂಡವ ಶಿಬಿರದಲ್ಲಿ ಹೊತ್ತಿಸಲಾದ ದೀವಟಿಗೆಗಳು ಅಗ್ನಿಕುಂಡದಂತೆ ಕಾಣಬರುತ್ತಿದ್ದವು.

ದಂಡೆಯನ್ನು ಬಿಟ್ಟ ಆ ನೌಕೆ ನಿಧಾನವಾಗಿ ಮುಂದೆ ಸರಿಯುತ್ತಲಿತ್ತು.

## 42

ಕರ್ಣನು ನಸುಕಿನ ವೇಳೆಯಲ್ಲಿಯೇ ರಥಶಾಲೆಯತ್ತ ಹೊರಟಿದ್ದ. ಆದುದರಿಂದ ಆತನ ರಥವನ್ನು ಸಿದ್ಧಗೊಳಿಸಲಾಗಿತ್ತು. ತಂಪಾದ ಗಾಳಿಯು ಚಲಿಸುತ್ತಿತ್ತು. ಬಹುದೂರದವರೆಗೆ ನದಿಯ ಪ್ರವಾಹವು ಕಾಣಬರುತ್ತಿತ್ತು. ಮುಂಜಾವಿನ ಮುಂಬೆಳಕಿನಲ್ಲಿ ಕರ್ಣನು ತನ್ನ ರಥವನ್ನು ವೀಕ್ಷಿಸುತ್ತಲಿದ್ದ ! ಕೆಲಸಗಾರರು ಆ ರಥದ ಕೊನೆಯ ಹಂತದ ಕೆಲಸ ಮುಗಿಸುವುದರಲ್ಲಿ ತಲ್ಲೀನರಾಗಿದ್ದರು. ಅದನ್ನು ಕಂಡ ಕರ್ಣನು,

"ಎಲ್ಲ ರೀತಿಯಿಂದಲೂ ರಥವನ್ನು ಪರೀಕ್ಷಿಸಲಾಗಿದೆಯೇ !"

"ಹೌದು, ನಿನ್ನೆಯೇ ಅದೆಲ್ಲ ಕಾರ್ಯವು ಮುಗಿದಿದೆ"

"ತಂದೆಯವರ ಪರೀಕ್ಷಾ ಪದ್ಧತಿಯೇ ಬೇರೆಯಾಗಿತ್ತು."

"ಆ ಕಲೆಯು ಅವರಿಗೆ ಮಾತ್ರ ಕರಗತವಾಗಿತ್ತು. ಆದರೂ ಆ ಘಾತವು ಹೇಗೆ ಸಂಭವಿಸಿತೆಂಬುದೇ ತಿಳಿಯದಾಗಿದೆ." ಕೆಲಸಗಾರನೊಬ್ಬ ಹೇಳಿದ. ಸ್ವಲ್ಪ ಸಮಯದ ನಂತರ ಆ ಎಲ್ಲ ಕೆಲಸಗಾರರು ಬೇರೊಂದು ಕಡೆಗೆ

ಹೊರಟು ಹೋದರು. ಕರ್ಣನೊಬ್ಬನೇ ರಥದ ಮುಂದೆ ನಿಂತುಕೊಂಡಿದ್ದ. ಕಪ್ಪು ಕುದುರೆಗಳು ಆಗಾಗ "ಫರ್‌ಫರ್" ಎಂದು ಶಬ್ದ ಮಾಡುತ್ತಿದ್ದವು.

ಹಿಂದಿನಿಂದ ಯಾರೋ ಬರುತ್ತಿರುವಂತೆನಿಸಿತು. ಹೊರಳಿ ನೋಡಿದಾಗ ಸಾಕು ತಾಯಿಯಾದ ರಾಧಾತಾಯಿ ನಿಂತುಕೊಂಡಿದ್ದಳು.

"ತಾಯೀ ನೀನು, ಅದು ಒಬ್ಬಂಟಿಗಳಾಗಿ ?"

"ಬೇರೆಯುವರು ಯಾತಕ್ಕೆ ಬೇಕು ? ಪೂಜೆಮುಗಿಯಿತು. ನಂತರ ನಿನ್ನನ್ನು ವಿಚಾರಿಸಿದೆ. ನೀನು ರಥಶಾಲೆಗೆ ಹೋಗಿರುವುದಾಗಿ ಹೇಳಿದರು."

"ಇಷ್ಟು ದೂರ ನಡದುಕೊಂಡು ಬಂದೆಯಾ ?"

ಅವಳು ಪ್ರಸನ್ನ ಚಿತ್ತಳಾಗಿದ್ದಳು.

"ಎಷ್ಟೊಂದು ಕಾಳಜಿ ತೆಗೆದುಕೊಳ್ಳುವೆಯಲ್ಲ ಮಗೂ. ಅಂಗರಾಜ, ನಾನು ನಿನ್ನ ತಾಯಿಯಾಗುವುದಕ್ಕಿಂತ ಮೊದಲು ಸೂತಕನ್ಯೆಯಾಗಿದ್ದೆ."

ರಥವನ್ನೇ ನೋಡುತ್ತ ಕರ್ಣನು ಅಭಿಮಾನದ ಧ್ವನಿಯಲ್ಲಿಯೇ ನುಡಿದ.

"ನೋಡುತಾಯೀ ! ಈ ರಥ ಹೇಗೆ ಕಾಣಿಸುತ್ತಿದೆ ನೋಡು."

"ಚೆನ್ನಾಗಿದೆ, ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಸಾರಥ್ಯ ಕರ್ಮ ಹಾಗೂ ರಥದ ಪರೀಕ್ಷೆ ಇವು ನಮ್ಮ ಕುಲಧರ್ಮವೆಂದೆನಿಸಿವೆ."

ರಾಧಾತಾಯಿ ರಥಶಾಲೆಯತ್ತ ನಡೆದಳು. ಆಗ ಕರ್ಣನೂ ಅವಳನ್ನನು ಸರಿಸಿ ಹೊರಟ. ಕಾರ್ಯಾಗಾರದ ಭವ್ಯ ದ್ವಾರವನ್ನು ಅವಳು ಪ್ರವೇಶ ಮಾಡಿದಳು. ವಿಶಾಲವಾದ ಬೈಲಿನಲ್ಲಿ ಸಿದ್ಧಪಡಿಸಿ ನಿಲ್ಲಿಸಲಾದ ರಥಗಳನ್ನು ಪರೀಕ್ಷಿಸುವುದರಲ್ಲಿ ಕೆಲಸಗಾರರು ತೊಡಗಿದ್ದರು. ಅದನ್ನೆಲ್ಲ ನೋಡಿದ ಅವಳು.

"ಇವರು ಈ ರಥಶಾಲೆಯ ಮುಖ್ಯಾಧಿಕಾರಿಗಳೆಂದು ಕೆಲಸ ಮಾಡುತ್ತಿದ್ದಾಗ ನಾನು ಒಂದು ದಿನವೂ ಈ ಕಾರ್ಯಾಗಾರಕ್ಕೆ ಬಂದವಳಲ್ಲ" ಎಂದು ಹೇಳುತ್ತಿರುವಾಗ ಅವಳ ಗಮನವು ಎತ್ತರವಾದ ಒಂದು ಭಾಗದಲ್ಲಿರಿಸಿದ ಬೆಳ್ಳಿಯ ಆಸನದತ್ತ ಹರಿಯಿತು. ಆ ಪೀಠವನ್ನು ತೋರಿಸುತ್ತ.

"ಈ ಆಸನ ?"

"ತಂದೆಯುವರದು ! ಮಹತ್ವದ ಕೆಲಸಕಾರ್ಯಗಳಿಲ್ಲದಾಗ ಅವರು ಈ

ಆಸನದಲ್ಲಿ ಬಂದು ಕುಳಿತುಕೊಳ್ಳುತ್ತಿದ್ದರು. ಈ ಸ್ಥಳದಿಂದ ರಥಶಾಲೆಯಲ್ಲಿ ನಡೆಯುವ ಪ್ರತಿಯೊಂದು ಕೆಲಸಕಾರ್ಯಗಳೂ ಅವರಿಗೆ ಕಾಣಿಸುತ್ತಿದ್ದವು. ಇಂದು ಈ ಆಸನವು ಬರಿದಾಗಿದೆ. ಇನ್ನು ಸಮೀಪದಲ್ಲಿ ಈ ಆಸನದ ಮೇಲೆ ಕೂಡುವಂಥವರು ದೊರೆಯುವರೆಂಬ ನಂಬಿಕೆಯೂ ಇಲ್ಲದಂತಾಗಿದೆ. ತಂದೆಯವರ ರಥಪರೀಕ್ಷೆಯ ವಿಧಾನವೇ ಬೇರೆಯಾಗಿತ್ತು."

ದೀರ್ಘವಾದ ನಿಟ್ಟುಸಿರನ್ನು ಬಿಟ್ಟು ರಾಧಾತಾಯಿಯು ಆ ಪೀಠದತ್ತ ಸಾಗಿದಳು, ಅದರ ಮೇಲೆ ಮೃದುವಾಗಿ ಕೈಯಾಡಿಸಿದಳು.

"ಮಾನವರು ಹೊರಟು ಹೋಗುವುದು ವಿಧಿ ನಿಯಮ. ಅನಂತರ ಉಳಿಯುವುದು ಇಂಥ ಆಸನಗಳು ಮಾತ್ರ. ಆ ಪೀಠಗಳು ಬರಿದಾಗಿ ಉಳಿಯುವುದರಲ್ಲಿಯೇ ಆ ಮಹಾನ್ ವ್ಯಕ್ತಿಯ ಜೀವನದ ಅರ್ಥವು ಅಡಕವಾಗಿರುವದು ; ಕರ್ಣ, ಮನುಷ್ಯರಾದವರು ಎಷ್ಟು ಕೀರ್ತಿವಂತರಾಗಬೇಕೆಂದರೆ ಅವರು ಗತಿಸಿಹೋದ ಅನಂತರವೂ ಅವರ ಆಸನ ಅಥವಾ ಪೀಠಗಳು ಬಹುಕಾಲದವರೆಗೆ ಬರಿದಾಗಿಯೇ ಉಳಿಯುವಂತಾಗಿರಬೇಕು. ಅದನ್ನು ತುಂಬುವ ಧೈರ್ಯ ಯಾರಿಗೂ ಬಂದಿರಬಾರದು.''

ರಾಧಾತಾಯಿ ಸ್ವಲ್ಪ ಹೊತ್ತಿನ ನಂತರ ಆ ರಥಶಾಲೆಯಿಂದ ನಿಧಾನವಾಗಿ ಹೊರಹೊರಟಳು. ಹೊರಭಾಗದಲ್ಲಿ ಪೂರ್ಣ ಸಿದ್ಧಗೊಳಿಸಲಾಗಿದ್ದ ರಥವನ್ನೇ ಅವಳು ನೋಡುತ್ತಲಿದ್ದಳು. ಅವಳನ್ನು ಸಮೀಪಿಸಿದ ಕರ್ಣನು,

"ತಾಯೀ, ನಿನ್ನ ಕಣ್ಣುಗಳಲ್ಲಿ ನೀರು ?''

ಕಣ್ಣೀರನ್ನೊರೆಸಿಕೊಂಡು ಅವಳು, ನಗಲು ಪ್ರಯತ್ನಿಸಿದಳು.

"ಯಾರೋ ಹೇಳಿದಂತಹ ಒಂದು ಮಾತು ನೆನಪಾಯಿತು. ದುಃಖವನ್ನನುಭವಿಸುವಾಗ ಮಾತ್ರ ಕಣ್ಣೀರು ಕಾಣುತ್ತದೆ ಎಂದು ಹೇಳುವುದುಂಟು. ಆದರೆ ಅದು ಸುಳ್ಳೆನ್ನಿಸುತ್ತಿದೆ. ಆನಂದದ ಸಮಯದಲ್ಲಿಯೂ ಅಂಥ ಅನುಭವವಾಗುವುದುಂಟು."

"ಆನಂದವೇ, ಎಂಥ ಆನಂದ?"

"ನಿನ್ನ ಈ ರಥವನ್ನು ನೋಡು ! ನಾಳೆ ನೀನು ಯುವರಾಜನೊಂದಿಗೆ ಈ ಸುವರ್ಣ ರಥದಲ್ಲಿ ಹೊರಡುವಿ. ಭೀಷ್ಮ , ದ್ರೋಣ, ಇವರ ಸಾಲಿನಲ್ಲಿಯೇ

ರಣಾಂಗಣದಲ್ಲಿ ನಿಂತುಕೊಳ್ಳುವಿ. ಸೂತಕುಲದಲ್ಲಿಯೇ ಬೆಳೆದವರಿಗೆ ಇದಕ್ಕಿಂತ ಬೇರೆ ಭಾಗ್ಯವಿದೆಯೇ ? ಕರ್ಣಾ, ಸ್ವಲ್ಪ ಬಾಗು ಮಗೂ."

ತಾಯಿಯ ಮಾತಿನಂತೆ ಕರ್ಣನು ಸ್ವಲ್ಪ ಮುಂದೆ ಬಗ್ಗಿದ. ನಡುಗುವ ಆವಳ ಕೈಗಳು ಆತನ ಗಲ್ಲದ ಮೇಲಾಡುತ್ತಲಿದ್ದವು. ರಾಧಾತಾಯಿಯ ಈ ಕೃತ್ಯವು ಕರ್ಣನಿಗೆ ಆಶ್ಚರ್ಯವೆನ್ನಿಸತೊಡಗಿತು.

"ತಾಯೀ, ಹೀಗೇಕೆ ಮಾಡುತ್ತಿರುವಿರಿ ?"

"ನಿನ್ನ ರೂಪವನ್ನು ಕಣ್ಣಲ್ಲಿ ತುಂಬಿಕೊಳ್ಳುವೆ, ಕರ್ಣಾ, ನಾನು ನಿನ್ನ ನಿರೂಪವನ್ನು ಪಡೆದುಕೊಳ್ಳಲು ಬಂದಿದ್ದೇನೆ."

"ಎಂಥ ನಿರೂಪ ?" ಗಾಬರಿಯಿಂದ ಕೇಳಿದ ಕರ್ಣ.

"ಮಗೂ, ದುಃಖದ ದಿನಗಳ ಅನಂತರ ಸುಖದ ದಿನಗಳು ಬಂದಲ್ಲಿ ಆದರಿಂದ ಆನಂದವೆನ್ನಿಸುತ್ತದೆ. ಆದರೆ ಸುಖದ ಅನಂತರ ದುಃಖವು ಪ್ರಾಪ್ತವಾದಲ್ಲಿ ಅದನ್ನು ಸಹಿಸುವುದು ಅಸಾಧ್ಯವೆನ್ನಿಸುತ್ತದೆ. ನಿನ್ನ ಬರುವಿನಿಂದಾಗಿ ಸಮಾಧಾನ ಹಾಗೂ ಆನಂದಗಳೆರಡನ್ನೂ ಸಂಪೂರ್ಣವಾಗಿ ಅನುಭವಿಸಿದೆ. ನಾಳೆ ನೀನು ರಣಾಂಗಣಕ್ಕೆ ಹೊರಡುವಿ. ಅದರ ಭವಿತವ್ಯವನ್ನಾರು ಬಲ್ಲರು! ಕದಾಚಿತ್ ಸುಖರೂಪದಿಂದ ಮರಳಿ ಬರಬಹುದು ಅಥವಾ ಹಾಗಾಗದೆಯೂ ಇರಬಹುದು. ಒಂದು ವೇಳೆ ನೀನು ಮರಳಿ ಬಾರದೇ ಹೋದರೆ........ಆ ದುಃಖವನ್ನು ಸಹಿಸುವ ಶಕ್ತಿಯು ಮಾತ್ರ ಈಗ ನನ್ನಲ್ಲಿ ಉಳಿದಿಲ್ಲ."

ಕರ್ಣನ ಕಣ್ಣೀರನ್ನು ಕಂಡು ಅವಳು ಆತನನ್ನು ಸಮೀಪಕ್ಕೆಳೆದು ಕೊಂಡು,

"ನೀನು ವೀರನಿರುವಿ, ಜ್ಞಾನಿಯಾಗಿರುವೆ, ತ್ಯಾಗದ ಮಹತಿಯನ್ನು ಚೆನ್ನಾಗಿ ತಿಳಿದುಕೊಂಡಿರುವೆ. ಈಗ ನಾನು ಬದುಕುವುದರಲ್ಲಿ ಅರ್ಥವಿಲ್ಲ. ಎಲ್ಲ ಕರ್ತವ್ಯಗಳೂ ಮುಗಿದಿವೆ. ಬರಲಿರುವ ಅಕಲ್ಪಿತ ದುಃಖದಲ್ಲಿ ಸಿಕ್ಕಿಕೊಳ್ಳುವುದಕ್ಕಿಂತ ಒಂದಲ್ಲ ಒಂದು ದಿನ ನೀನು ಯಾವ ಸ್ಥಳಕ್ಕೆ ಹೋಗುವಿಯೋ ಆ ಸ್ಥಳಕ್ಕೆ ನಿನಗಿಂತಲೂ ಮುಂಚಿತವಾಗಿ ಹೋಗಿ ನಿನ್ನ ಸ್ವಾಗತಕ್ಕಾಗಿ ಕಾಯಬೇಕೆಂದೆನಿಸಿದೆ. ನಿನ್ನ ತಂದೆಗೂ ಈಗ ಅಲ್ಲಿ ಒಬ್ಬಂಟಿಗ ರೆಂದೆನಿಸಿಸುತ್ತಿರಬಹುದಲ್ಲವೆ ? " ಎಂದಳು.

"ನಿನ್ನ ವಿಚಾರವೇನು ? ಏನು ಮಾಡಬೇಕೆಂದಿರುವಿ ? "

"ಮಗೂ, ಹೀಗೆ ಹೆದರಬೇಡ, ಯಾವ ನದಿಯು ಪ್ರವಾಹಗಳು

ನಿನ್ನನ್ನು ಸುಖರೂಪವಾಗಿ ನನ್ನ ಕೈಯಲ್ಲಿರಿಸಿದವೋ, ಆ ಅಲೆಗಳು ನನಗೆ ಚಿರಶಾಂತಿಯನ್ನೀಯಬಲ್ಲವು. ನಾವು ನದಿಯನ್ನು "ಮಾತಾ" ಎಂದು ಕರೆಯುತ್ತೇವೆ. ಅದೇನು ಹುಡುಗಾಟದ ಮಾತೇ ! ಅವಳು ಅಗತ್ಯವಾಗಿ ನನ್ನನ್ನು ರಕ್ಷಿಸುತ್ತಾಳೆ. ನಾನು ಬರುತ್ತೇನೆ, "ವಸೂ". ಹೆಂಡತಿಯನ್ನು ಚೆನ್ನಾಗಿ ನೋಡಿಕೋ "

ಕರ್ಣನು ಮೊಣಕಾಲೂರಿ ಅವಳ ಚರಣಾವಿಂದಗಳಲ್ಲಿ ತಲೆಯನ್ನಿಟ್ಟು ಕಣ್ಣೀರಿನಿಂದ ಅವಳ ಪಾದಗಳನ್ನು ತೊಳೆಯುತ್ತ ಹೇಳಿದ,

"ತಾಯೀ ಆಶೀರ್ವದಿಸು."

"ನಾನೆಂಥ ಆಶೀರ್ವಾದ ಮಾಡಲಿ ? ಮಗೂ ನನ್ನ ಪ್ರತಿಯೊಂದು ಶ್ವಾಸಗಳೂ ನಿನಗಾಗಿಯೇ ಬಿಡಲ್ಪಟ್ಟ ಆಶೀರ್ವಾದಗಳಾಗಿವೆ."

"ಜಯದ ಆಕಾಂಕ್ಷೆಯು ನನ್ನ ಮನದಲ್ಲಿ ಸ್ವಲ್ಪವೂ ಇಲ್ಲ. ಆದರೂ ತಾಯೀ, ಒಂದು ಆಶೀರ್ವಾದವನ್ನು ಕೊಟ್ಟು ಹೋಗು. ನೀನು ಎಷ್ಟು ಸಹಜವಾಗಿ ಮೃತ್ಯುವನ್ನೆದುರಿಸುವಿಯೋ, ಆ ಬಲ ನನಗೂ ಬರುವಂತಾಗಲಿ ಮೃತ್ಯುವಿನ ಭಯವು ಸಮೀಪಕ್ಕೆ ಬಾರದಿರಲಿ."

ಕರ್ಣನು ಮೇಲೆದ್ದಾಗ ಆತನ ಹನಿದುಂಬಿದ ಕಣ್ಣುಗಳನ್ನು ಅವಳು ತನ್ನ ಕೈಯಿಂದ ಒರೆಸಿದಳು. ಮುಖದಲ್ಲಿ ಹಾಸ್ಯವು ಕಾಣಿಸಿತು. ಅವಳು ಒಂದು ಶಬ್ದವನ್ನೂ ಉಚ್ಚರಿಸದೆ ನದಿಯ ಪ್ರವಾಹದತ್ತ ಹೊರಟುಬಿಟ್ಟಳು. ನಿಮಿಷ ನಿಮಿಷಕ್ಕೂ ದೂರಾಗುತ್ತಿದ್ದಳು. ಅವಳನ್ನು ನೋಡುತ್ತಿದ್ದಂತೆಲ್ಲ ತಾನು ಓಡಿಹೋಗಿ ಅವಳನ್ನು ಹಿಡಿದು ಮರಳಿ ಕರೆತರಬಾರದೇಕೆ ? ಎಂದು ಕರ್ಣನಿಗನ್ನಿಸತೊಡಗಿತು. ಆದರೆ ಹಾಗೆ ಮಾಡುವ ಧೈರ್ಯವು ಮಾತ್ರ ಅವನಿಂದ ದೂರಾಗಿ ಹೋಗಿತ್ತು. ನೋಡ ನೋಡುತ್ತಿದ್ದಂತೆ ರಾಧಾತಾಯಿ ಕಾಣದಂತಾದಳು.

ರಥದ ಆರ್ಭಟವು ಕರ್ಣನನ್ನು ಎಚ್ಚರಿಸಿತು. ವಾಯು ವೇಗದಿಂದ ದುರ್ಯೋಧನನ ರಥವು ಬಂದು ಕರ್ಣನ ಸಮೀಪದಲ್ಲಿಯೇ ನಿಂತಿತು. ದುರ್ಯೋಧನನು ತುಂಬ ಆನಂದದಿಂದಿರುವಂತೆ ತೋರಿದ. ಆದರೆ ಕರ್ಣನ ಕಣ್ಣುಗಳಲ್ಲಿ ಅಶ್ರುಧಾರೆಗಳು ಇನ್ನೂ ಇಳಿಯುತ್ತಲಿದ್ದವು. ಗಾಯಗೊಂಡವ ರಂತಿದ್ದ ಆತನ ಮುಖವನ್ನು ಕಂಡು ದುರ್ಯೋಧನನು ಕಾತುರನಾಗಿ ವಿಚಾರ ಮಾಡಿದ,

"ಮಿತ್ರಾ, ನಿನ್ನ ಕಣ್ಣುಗಳಲ್ಲಿ ನೀರು ! ಏನಾಗಿದೆ ?"

ಕರ್ಣನು ವ್ಯಂಗವಾಗಿ ನಕ್ಕು ಕಣ್ಣುಗಳನ್ನೊರೆಸಿಕೊಳ್ಳದೆ ಹೇಳಿದ,

"ದುಃಖದ ಸಮಯದಲ್ಲಿ ಮಾತ್ರ ಕಣ್ಣೀರು ಕಾಣಬರುವುದೆಂದೇನೂ ಅಲ್ಲ, ಆನಂದದ ಸಮಯದಲ್ಲಿಯೂ ನಾವು ಅಶ್ರುಗಳನ್ನು ಕಾಣಬಹುದು."

"ಆನಂದ ?"

"ಇದಕ್ಕಿಂತ ಆನಂದವಾದಗಳಿಗೆ ಯಾವದು ? ಸೂತಕುಲದಲ್ಲಿ ನಾನು ಬೆಳೆದೆ. ನನಗೆ ನಿಮ್ಮ ಗೆಳೆತನ ಲಭಿಸಿತು, ಅಂಗದೇಶದ ರಾಜ್ಯಾಧಿಪತ್ಯ ದೊರೆಯಿತು. ಇದಕ್ಕೂ ಹೆಚ್ಚಿನ ಭಾಗ್ಯ ಯಾವುದು ?"

"ಗೆಳೆಯಾ, ನಿನಗೆ ಸಂತೋಷದ ಸಂಗತಿಯನ್ನು ತಿಳಿಸುವದಕ್ಕಾಗಿಯೇ ನಾನು ನಿನ್ನ ಮನೆಯ ವರೆಗೂ ಹೋಗಿದ್ದೆ. ಆಗ ನೀನು ಇಲ್ಲಿರುವದಾಗಿ ತಿಳಿಯಿತು. ಹಾಗೆಯೇ ನೇರವಾಗಿ ಇಲ್ಲಿಗೆ ಬಂದಿರುವೆ."

"ಆನಂದದ ವಿಚಾರವೆಂಥದು ?"

"ಶಲ್ಯ ರಾಜನು ತನ್ನ ಅಪರಿಮಿತವಾದ ಸೇನೆಯೊಂದಿಗೆ ಪಾಂಡವರನ್ನು ಕೂಡಿಕೊಳ್ಳಲು ಹೊರಟಿದ್ದ. ಆದರೆ ನಾನು ಅವನನ್ನು ನಮ್ಮ ಕಡೆಗೆ ಬರುವಂತೆ ಮಾಡಿದ್ದೇನೆ."

"ಅವನು ಪಾಂಡವರ ಆಪ್ತನಲ್ಲವೆ ?"

"ಆದರೂ ಶಲ್ಯ ರಾಜನು ನಮ್ಮ ಪರವಾಗಿಯೇ ಯುದ್ಧ ಮಾಡುತ್ತಾನೆ. ನಗರದ ಉತ್ತರ ಭಾಗದಲ್ಲಿ ಕೌರವರ ದಲವು ಒಕ್ಕೂಡುತ್ತಲಿದೆ. ಹಾಗೆ ಕೂಡಿದ ಸೈನ್ಯವನ್ನೆಲ್ಲ ಯುದ್ಧ ಭೂಮಿಗೆ ಕಳಿಸಬೇಕಾಗಿದೆ. ಆದುದರಿಂದ ಅವರನ್ನೆಲ್ಲ ಹೊರಡಿಸುವ ಮುನ್ನ ನಾವು ಅಲ್ಲಿರಬೇಕಾದುದು ಅಗತ್ಯವಿದೆ."

"ಯುವರಾಜ, ರಥಾರೂಢರಾಗಿರಿ. ಯುದ್ಧದ ಇನ್ನು ಪಿನಃ ಬೇರೆ ಏನಿದೆ ?"

ದುರ್ಯೋಧನನೊಡನೆ ಕರ್ಣನೂ ರಥವನ್ನೇರಿದ. ಎರಡೂ ರಥಗಳು ನಗರದ ಉತ್ತರ ಭಾಗದತ್ತ ಓಡಲಾರಂಭಿಸಿದವು.

## 43

ನದಿಯ ವಿಶಾಲವಾದ ಪ್ರವಾಹದಲ್ಲಿ ಮನಸೋಕ್ತವಾಗಿ ಸೂರ್ಯ ಕಿರಣಗಳು ಪಸರಿಸಿದ್ದವು. ಆ ಬಿಸಿಲಿನ ತಾಪವನ್ನು ಲೆಕ್ಕಿಸದೆ ಪೂರ್ವಕ್ಕೆ

ಮುಖಮಾಡಿ ಗಂಗಾ ಪ್ರವಾಹದಲ್ಲಿ ನಿಂತುಕೊಂಡಿದ್ದ ಕರ್ಣನು ತನ್ನ ನಿತ್ಯದ ಅಹ್ನೀಕದಲ್ಲಿ ನಿರತನಾಗಿದ್ದ. ಆ ಬಿಸಿಲಿನ ತಾಪದಿಂದ ಮುಖವು ಅಗ್ನಿಕುಂಡ ದಂತಾಗಿತ್ತು. ತನ್ನ ಪೂಜಾಕ್ರಮಗಳನ್ನೆಲ್ಲ ಮುಗಿಸಿದ ಅನಂತರ ಸೂರ್ಯ ದೇವನಿಗೆ ವಂದನೆಗಳನ್ನು ಸಲ್ಲಿಸಿ, ಬೊಗಸೆಯಲ್ಲಿ ಗಂಗಾಜಲವನ್ನು ತುಂಬಿ ಕೊಂಡು, ತದೇಕ ಚಿತ್ತದಿಂದ ಸೂರ್ಯದೇವನನ್ನೇ ನೋಡುತ್ತ ಎತ್ತರದ ಧ್ವನಿಯಲ್ಲಿ,

"ಯಾರಾದರೂ ಯಾಚಕರು ಇದ್ದಾರೆಯೇ" ಎಂದು ನುಡಿದ.

ಕೆಲವು ಕ್ಷಣಗಳ ಅನಂತರ ಯಾರೂ ಇಲ್ಲ ಎಂಬುದನ್ನು ನಿಶ್ಚಯ ಮಾಡಿಕೊಂಡು ಬೊಗಸೆಯಲ್ಲಿದ್ದ ಗಂಗಾಜಲವನ್ನು ಪ್ರವಾಹದಲ್ಲಿ ಹರಿಬಿಟ್ಟು ಆ ತೀರ್ಥವನ್ನು ಕಣ್ಣಿಗಂಟಿಸಿಕೊಂಡು ಶಾಂತ ಮನೋಭಾವದಿಂದ ದಂಡೆ ಯನ್ನು ತಲುಪಿದ. ಬಟ್ಟೆಗಳನ್ನುಟ್ಟು, ಪಾದತ್ರಾಣಗಳನ್ನು ಹಾಕಿಕೊಂಡು, ಹೊರಡಲುದ್ಯುಕ್ತನಾದ. ಇನ್ನೇನು ಹೆಜ್ಜೆಯನ್ನಿಡಬೇಕು ಆಗ ದೂರದಲ್ಲಿ ಶ್ವೇತವಸ್ತ್ರಧಾರಿಯಾದವರೊಬ್ಬರು ನಿಂತಿರುವುದು ಕಾಣಬಂದಿತು. ಮುಖದ ಮುಂಭಾಗದಲ್ಲಿ ವಸ್ತ್ರವನ್ನೆಳೆದುಕೊಂಡಿದುದ್ದರಿಂದ ಆ ವಸ್ತ್ರವು ನದಿಯ ದಂಡೆಯಲ್ಲಿ ಬೀಸುತ್ತಿರುವ ಗಾಳಿಯಿಂದಾಗಿ ಹೊಯ್ದಾಡುತ್ತಲಿತ್ತು. ನಿಧಾನ ವಾಗಿ ಒಂದೊಂದೇ ಹೆಜ್ಜೆಗಳನ್ನಿಡುತ್ತ ಕರ್ಣನು ಮುನ್ನಡೆಯಲಾರಂಭಿಸಿದ. ಕರ್ ಕರ್ ಎಂಬ ಕಾಲು ಸಪ್ಪಳವು ಕೇಳಬರುತ್ತಿತ್ತು.

ಕರ್ಣನ ಮನಸ್ಸು,

"ಒಂದು ವೇಳೆ ಮೃತ್ಯುವಿನ ದರ್ಶನವಾದರೆ ಅದು ಹೀಗೇಯೇ ಆಗ ಬಹುದೆ ? ರೂಪ ಹೀನ, ಶ್ವೇತ ವಸ್ತ್ರಧಾರಿ, ಶಾಂತ, ಸ್ಥಿರ...."

ಸ್ವಲ್ಪ ಸಮೀಪಕ್ಕೆ ಹೋದನಂತರ ಆ ಬಿಸಿಲಿನಲ್ಲಿ ನಿಂತಿರುವವಳು ಸ್ತ್ರೀ ಎಂಬುದು ಸ್ಪಷ್ಟವಾಗಿ ಗೋಚರವಾಗಲಾರಂಭಿಸಿತು. ಅವನು ತನ್ನ ಮೈ ಮೇಲಿನ ಬಟ್ಟೆಗಳನ್ನು ಸಾವರಿಸಿಕೊಳ್ಳುತ್ತ ಆ ವ್ಯಕ್ತಿಯನ್ನು ಸಮೀಪಿಸಲು ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕತೊಡಗಿದ, ಅದೇ ಸಮಯದಲ್ಲಿ

"ಸ್ವಲ್ಪ ನಿಲ್ಲಿರಿ" ಎಂಬ ಶಬ್ದವು ಕೇಳಬಂದಿತು.

"ಯಾರು ?"

ಆ ವ್ಯಕ್ತಿ ತನ್ನ ತಲೆಯ ಮೇಲಿನ ಶೆರಗನ್ನು ಹಿಂದಕ್ಕೆ ಸರಿಸಿದಾಗ ಆ ಮುಖವನ್ನು ಕಂಡು ಕರ್ಣನು ಗಾಬರಿಯಿಂದ ಕುಸಿದು ಹೋದನು.

ಅರ್ಜುನನ ತಾಯಿ ! ಕುಂತಿ. ಶತ್ರುಪಕ್ಷದವರ ಮಾತೆ. ಅದೂ ಏಕಾಕಿಯಾಗಿ ! !

ಕುಂತಿಯ ಸಾತ್ವಿಕ ರೂಪವನ್ನು ಮನಸಾರೆ ನೋಡಿದ. ಆ ತಾಯಿಯ ರೂಪವನ್ನು ಇಷ್ಟೊಂದು ಸಮೀಪದಿಂದ ಆತನು ಎಂದೂ ನೋಡಿರಲಿಲ್ಲ. ಆದುದರಿಂದ ಮನವು ಪುನಃ ಪುನಃ ಆ ರೂಪವನ್ನು ನೋಡಲು ಆಶಿಸಿತು. ಕುಂತಿಯ ಮುಖದಲ್ಲಿ ಕಿರುನಗೆ ಕಾಣಿಸಿತು. ಮೊದಲೇ ಅವಳೇ ಅವರಿಬ್ಬರ ಮಧ್ಯದಲ್ಲಿರುವ ಸಂಶಯವನ್ನು ಅವಳೇ ಮೊದಲು ನಿವಾರಿಸಿದಳು.

"ಗುರುತು ಸಿಕ್ಕಿತೇ"

ಅವಳ ಧ್ವನಿ ನಡುಗುತ್ತಿರುವಂತೆ ಭಾಸವಾಯಿತು, ಎಚ್ಚರಗೊಂಡ ಕರ್ಣನು ತನ್ನೆರಡು ಕೈಗಳನ್ನೂ ಜೋಡಿಸಿ,

"ತಮ್ಮನ್ನು ಯಾರು ಗುರುತಿಸುವುದಿಲ್ಲ. ಪಾಂಡವರ ಮಾತೆ, ವೀರ ಅರ್ಜುನನ ತಾಯಿ, ರಾಜಮಾತಾ ಕುಂತಿದೇವಿ. ಅಧಿರಥ ಸೂತಪುತ್ರ ರಾಧೇಯನು ತಮಗೆ ವಂದನೆಗಳನ್ನು ಸಲ್ಲಿಸುತ್ತಾನೆ."

ತಲೆ ಬಾಗಿಸಿದ ಕರ್ಣನನ್ನು ಕಂಡು ಕುಂತಿ ತುಂಬಾ ವ್ಯಥಿತಳಾದಳು.

"ಕರ್ಣಾ, ನಿನಗೆ ಇಷ್ಟೇ ಪರಿಚಯವಿದೆಯೇ ?"

ಅವಳ ಕೋಮಲ ಆತ್ಮೀಯ ಧ್ವನಿಯನ್ನು ಕೇಳಿದ ಕರ್ಣನು,

"ರಾಜಮಾತಾ, ತಮಗೆ ವೀರಪತ್ನಿ, ವೀರಮಾತಾ, ಎಂಬ ಸಂಬೋಧನೆಗಳು ಸರಿಹೋಗಲಿಲ್ಲವೇ ? ನಾಳೆ ಹೂಡಲಿರುವ ರಣರಂಗದ ನೆರಳಿನಲ್ಲಿ ಇಂದು ತಾವು ನನಗಿತ್ತ ಸಂದರ್ಶನದ ಉದ್ದೇಶವೇನು ? ಯಾವ ಉದ್ದೇಶ ದಿಂದ ತಾವು ಇಂಥ ಕಡುಬಿಡಿಸಿಲಿನಲ್ಲಿ ಏಕಾಕಿಯಾಗಿ ಇಲ್ಲಿಯವರೆಗೆ ದಯ ಮಾಡಿಸಿದಿರಿ ?"

ಕುಂತಿಯ ಮುಖದಲ್ಲಿ ಕಾಣಿಸಿಕೊಂಡ ಕಿರುನಗೆ ಈಗಾಗಲೊ ಮಾಯ ವಾಗಿತ್ತು. ಅವಳು ದೃಢವಾದ ಧ್ವನಿಯಲ್ಲಿ,

"ಕರ್ಣಾ, ನಿನ್ನ ಕೀರ್ತಿಯೇ ನನ್ನನ್ನು ಇಲ್ಲಿಯವರೆಗೆ ಬರುವಂತೆ ಮಾಡಿದೆ. ನಿನ್ನ ದಾನಧರ್ಮಗಳಿಗೆ ಸಾಟಿಯಿಲ್ಲವೆಂದು ಕೇಳಿದ್ದೇನೆ. ಅದು

ನಿಜವೋ ಅಥವಾ ಸುಳ್ಳೋ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿಯೇ ನಾನು ಇಲ್ಲಿಯವರೆಗೆ ಬಂದಿದ್ದೇನೆ."

"ನನಗೆ ಅರ್ಥವಾಗಲಿಲ್ಲ !"

"ಅರ್ಥವಾಗದಂತಹುದೇನಿದೆ ? ಈಗ ನಾನು ನಿನ್ನೆದುರು ರಾಜಮಾತೆಯಾಗಿ ಬಂದಿಲ್ಲ, ಸಾಮಾನ್ಯ ಯಾಚಕಳಾಗಿ ಬಂದಿರುವೆ !"

ಕುಂತಿಯು ಮಾತುಗಳಿಂದ ಚಕಿತಗೊಂಡ ಕರ್ಣನು, ಸಾವರಿಸಿಕೊಂಡು

"ತಾವು ಯಾಚಕರೇ ? ರಾಜಮಾತೆ, ತಮಾಷೆ ಮಾಡುತ್ತಿಲ್ಲವಷ್ಟೆ ? ಏನಾದರೂ ಕೊರತೆಗಳಿದ್ದಲ್ಲಿ ಅದನ್ನು ನಿವಾರಿಸಿಕೊಳ್ಳಲು ಇನ್ನೊಬ್ಬರನ್ನು ಕೇಳಬೇಕಾಗುತ್ತದೆ. ಆದರೆ ಯಾವ ಜೀವನದಲ್ಲಿ ಮೊದಲಿನಿಂದಲೂ ಸಮೃದ್ಧತೆ ತುಂಬಿ ಬಂದಿದೆಯೋ ಅಂಥವರು ಇನ್ನೊಬ್ಬರನ್ನು ಎಂದಾದರೂ ಯಾಚಿಸುವುದುಂಟೇ ? ಶಕ್ತಿಶಾಲಿಯಾದ ಭೀಮ, ಧನುರ್ಧಾರಿಯಾದ ಅರ್ಜುನ, ಧರ್ಮಬುದ್ಧಿಯ ಯುಧಿಷ್ಠಿರರಂಥ ಮಕ್ಕಳಿರುವಾಗ ನೀವು ಇನ್ನೊಬ್ಬರನ್ನು ಯಾಚಿಸಬೇಕೆ ? ಕೃಷ್ಣನಂತಹ ಮಹಾಪುರುಷನು ನಿಮ್ಮ ಬೆನ್ನಿಗಿರುವಾಗ ರಾಜಮಾತೆಯಾದ ನೀವು ಸೂತಪುತ್ರನಲ್ಲಿ ಯಾಚಿಸುವುದೇ ಇದನ್ನು ಯಾರಾದರೂ ನಂಬಬಹುದೇ ? ರಾಜಮಾತೇ, ತಾವು ಸಾಮಾನ್ಯರಲ್ಲ ! ತಮಗೆ ಈ ನಡತೆ ಯೋಗ್ಯವೆನಿಸೀತೇ ? ಈ ದುರ್ದೈವೀ ಕರ್ಣನ ದಾನಶೀಲತೆಯನ್ನು ಪರೀಕ್ಷೆ ಮಾಡುವಿರಾ ?" ಎಂದು ಅನಂತರ ಕರ್ಣನು ಸ್ವಲ್ಪ ಸಾವರಿಸಿಕೊಂಡು ನುಡಿದ "ರಾಜಮಾತಾ, ಕುಂತೀದೇವಿ, ಅರ್ಜುನನ ಜನನಿ."

"ಕರ್ಣಾ, ಈ ಅಜ್ಞಾನದ ಆವರಣ ಎಲ್ಲಿಯವರೆಗೆ ತಡೆದು ನಿಲ್ಲಬಲ್ಲದು. ನಿನಗೆ ಎಲ್ಲವೂ ಗೊತ್ತಿದೆ, ಕೃಷ್ಣನು ಎಲ್ಲವನ್ನೂ ನಿನಗೆ ಹೇಳಿದ್ದಾನೆ. ಆ ವಿಚಾರವನ್ನು ನಾನು ಚೆನ್ನಾಗಿ ಬಲ್ಲೆ. ನನ್ನ ಹಾಗೂ ನಿನ್ನ ಭಾಂದವ್ಯ ಎಂಥದು ಎಂಬ ಮಾತನ್ನು ನೀನು ಚೆನ್ನಾಗಿ ತಿಳಿದುಕೊಂಡಿರುವೆ."

ಅವಳ ವ್ಯಾಕುಲತೆಯ ವಾಣಿಯಿಂದ ಕರ್ಣನು ಗಾಸಿಯಾದ ಹಾಗೂ ಬಹು ಖಿನ್ನನಾಗಿ ನುಡಿದ,

"ಬಾಂಧವ್ಯ ! ಯಾವ ಭಾಂಧವ್ಯವು ಪ್ರತ್ಯಕ್ಷ ಮಾತೆಯಾದವಳಿಗೆ ಸಹನವಾಗಲಿಲ್ಲವೋ, ಅಂಥ ಮಾತಿನಿಂದ ಈಗಾಗುವ ಪ್ರಯೋಜನವಾದರೂ ಏನು ? "

"ಕರ್ಣಾ, ಹೇಳಲಿಲ್ಲವೆ ? ನಾನು ಯಾಚಕಳು, ಯಾಚಕಳಾಗಿಯೇ ನಿನ್ನ ಮುಂದೆ ನಿಂತಿದ್ದೇನೆ."

"ರಾಜಮಾತೆ, ಈಗ ನಿಮಗೇನು ಬೇಕಾಗಿದೆ ? ನನ್ನ ಪುರುಷಾರ್ಥ ಹಾಗೂ ಧರ್ಮ ಇವುಗಳನ್ನು ಹೊರತುಪಡಿಸಿ ಬೇಕಾದುದನ್ನು ಕೇಳಿ, ಆನಂದ ದಿಂದ ಅರ್ಪಿಸಲು ಸಿದ್ಧನಿರುವೆ."

"ನಿಜವೇ ?"

"ಕರ್ಣನಲ್ಲಿ ದಾನವನ್ನು ಪಡೆಯಲು ಬಂದ ಯಾಚಕರು ಈವರೆಗೂ ಬರಿಗೈಯಿಂದ ಯಾರೂ ಮರುಳಿದುದಿಲ್ಲ. ಪಾಂಡವರ ವಿಜಯಕ್ಕಾಗಿ ಸಾಕ್ಷಾತ್ ದೇವೇಂದ್ರನೇ ಬಂದು ನನ್ನ ಕವಚ ಕುಂಡಲಗಳನ್ನು ಪಡೆದು ಹೋದ. ನನ್ನ ದಾತೃತ್ವದಲ್ಲಿರುವ ನಿಷ್ಠೆಯಿಂದಲೇ ಆತನಿಗೆ ಯಾವುದು ಬೇಕಾಗಿತ್ತೋ ಅದನ್ನು ನಾನು ಕೊಟ್ಟು ಕಳುಹಿಸಿದೆ."

"ನಿನ್ನ ಶತ್ರುಗಳಿಗೆ ನಿನ್ನ ಪರಾಜಯದ ಅಭಿಲಾಷೆಯಾಗಿರಬಹುದು. ಅವರು ನಿನ್ನಿಂದ ಕವಚ ಕುಂಡಲಗಳನ್ನು ಪಡೆದಿರಬಹುದು. ನಿನ್ನ ಪರಾ ಜಯಕ್ಕಾಗಿ ನಾನು ದಾನ ಕೇಳಲು ಬಂದವಳಲ್ಲ, ನಿನ್ನ ಯಶಸ್ಸಿನ ಅಪೇಕ್ಷೆ ಯಿಂದಲೇ ನಾನು ಯಾಚಕಳಾಗಿ ಬಂದಿದ್ದೇನೆ. ನನಗೆ ನಿನ್ನ ವಿಜಯವನ್ನು ನೋಡಬೇಕಾಗಿದೆ. ಅದಕ್ಕಾಗಿ ನಾನು ಅತೃಪ್ತಳಾಗಿದ್ದೇನೆ."

"ಏನು ಬೇಕೋ ಕೇಳಿರಿ ! ದಾನಿಯಾದ ಕರ್ಣನು ತನ್ನ ಜೀವನದಲ್ಲಿ ಎಂದಿಗೂ ಕಾರಣಗಳನ್ನು ಕೇಳಿದವನಲ್ಲ. ಈ ಸೂರ್ಯ ದಾಹವನ್ನು ನೀವು ಸಹಿಸಲಾರಿರಿ. ಈ ಬಿಸಿಲಿನಲ್ಲಿ ನಿಲ್ಲುವುದು ನಿಮಗೆ ವಿಹಿತವೆನಿಸದು."

"ಇಡೀ ಜೀವನವೆಲ್ಲ ಯಾವ ದಾಹದಿಂದ ಕೊರಗಿರುವೆನೋ ಆ ಸೂರ್ಯದಾಹದ ಭೀತಿ ನನಗಿಲ್ಲ, ನನ್ನ ಚಿಂತೆಯನ್ನು ಮಾಡಬೇಡ.''

"ನನ್ನ ಮಾತನ್ನು ಕೇಳಬೇಕು" ಕರ್ಣನು ನದಿಯ ದಂಡೆಯಲ್ಲಿದ್ದ ಕದಂಬ ವೃಕ್ಷವನ್ನು ತೋರಿಸಿ "ದಯಮಾಡಿ ಆ ನೆರಳಿನತ್ತ ಬರಬೇಕು, ಅಲ್ಲಿ ನಾವು ನಿಶ್ಚಿಂತೆಯಿಂದ ಮಾತನಾಡಬಹುದು."

ಕುಂತಿಯು ಅಪ್ಪಣೆಯನ್ನು ನಿರೀಕ್ಷಿಸದೆ ಕರ್ಣನು ತಾನೇ ಮುಂದಾಗಿ ಆ ಕದಂಬ ವೃಕ್ಷದತ್ತ ಸಾಗಿದ. ಅವನ ಹಿಂದೆ ಕುಂತಿಯೂ ಹೊರಟಳು. ತನ್ನ ಕೈಯ್ಯಲ್ಲಿದ್ದ ಉತ್ತರೀಯವನ್ನು ಅವಳು ಕರ್ಣನ ಕೈಯ್ಯಲ್ಲಿತ್ತಳು.

"ತಮಗೇನು ಬೇಕಾಗಿದೆ ?"

ಕರ್ಣನ ಧ್ವನಿ ನಿಶ್ಚಿತವಾದುದಾಗಿತ್ತು.

"ನನಗೆ ನೀನೇ ಬೇಕಾಗಿದೆ ! ನಿನ್ನನ್ನು ಕರೆದೊಯ್ಯಬೇಕೆಂದೇ ನಾನು ಬಂದಿದ್ದೇನೆ."

"ನನ್ನನ್ನು ಕರೆದೊಯ್ಯಲು ! ಎಲ್ಲಿಗೆ ?"

ನದಿಯ ದಂಡೆಯಲ್ಲಿ ಅನತಿ ದೂರದಲ್ಲಿಯೇ ಒಂದು ನಾವೆ ನಿಂತಿದ್ದು ಅದನ್ನೇ ಆತ ಬಹು ಹೊತ್ತು ನೋಡುತ್ತಲಿದ್ದ.

"ತಾಯಿಯು ಮಗನನ್ನು ಕರೆದೊಯ್ಯುವುದೆಲ್ಲಿಗೆ ? ಅವಳಿಗೆ ತನ್ನ ಹೃದಯದ ವಿನಃ ಬೇರೊಂದು ಸ್ಥಾನವಿದೆಯೆ ?"

"ಮಹಾತಾಯೀ, ಹೊಟ್ಟೆಯಲ್ಲಿರುವಾಗಲೇ ಮಗುವಿಗೆ ಮಾತೃಸಹವಾಸದ ಯೋಗವುಲಭಿಸುತ್ತದೆಂದು ನಾನು ಕೇಳಿದ್ದೇನೆ. ಈಗ ತಾವು ನನ್ನನ್ನು ಕರೆದೊಯ್ಯುವದರಿಂದ ಪುನಃ ಅಂತಹ ಅಂತಃಕರಣವು ನನಗೆ ಲಭಿಸೀತೇ ?"

ಈ ಮಾತಿನಿಂದ ಕುಂತಿಯ ಹೃದಯವು ಗಾಸಿಗೊಂಡಿತು. ಅವಳು ತನ್ನ ಸ್ವಾಭಿಮಾನಯುಕ್ತವಾದ ನೇತ್ರಗಳಿಂದ ಕರ್ಣನನ್ನು ನೋಡಿದಳು.

"ಕರ್ಣಾ, ಇದನ್ನಾರು ನಿನಗೆ ಹೇಳಿದರು ? ಯುಧಿಷ್ಠಿರ, ಭೀಮ, ಅರ್ಜುನ ನನ್ನವರು. ನಕುಲ, ಸಹದೇವ ಮಾದ್ರಿಯ ಮಕ್ಕಳು. ಅವರಿಬ್ಬರನ್ನೂ ನೀನು ವಿಚಾರಿಸಿಕೋ. ನನ್ನ ಮೂರು ಜನ ಮಕ್ಕಳಿಗೆ ಯಾವ ಮಾತೃಪ್ರೇಮವಿದೆಯೋ ಅದೇ ಪ್ರೇಮ ಆ ಇಬ್ಬರಿಗೂ ದೊರೆಯುತ್ತಲಿದೆ"

"ತಪ್ಪು ಭಾವನೆಯಾಗುತ್ತಿದೆ, ನಾನು ನನ್ನ ಒಡಹುಟ್ಟಿದವರನ್ನು ಕುರಿತು ಹೀಗೆ ಮಾತನಾಡಲಿಲ್ಲ. ಕೇವಲ ಅಂತಃಕರಣವನ್ನು ಕುರಿತು ಮಾತನಾಡಿದೆ. ಅಷ್ಟೇ ?"

"ಮಗೂ, ರಕ್ತ ಸಂಬಂಧವೆಂಬುದು ಅಷ್ಟೊಂದು ದುರ್ಬಲವಾಗಿರುವುದಿಲ್ಲ,"

"ಸಂಬಂಧ" ಕರ್ಣನು ನಕ್ಕು "ಕೇವಲ ಮಾತಿನಿಂದ ಈ ಸಂಬಂಧವು ವೃದ್ಧಿಯಾಗುತ್ತದೆಯೇ ? ಅದೂ ಕೇವಲ ಸಹವಾಸದಿಂದ ಬೆಳೆಯಬೇಕಲ್ಲವೆ ? ನಿಮ್ಮ ತೊಡೆಯ ಮೇಲೆ ಆಡಿ ನಾನು ಬೆಳೆದಿದ್ದರೆ, ನಿಮ್ಮ

ಸ್ತನ ಪಾನ ಮಾಡಿ ನನ್ನ ಈ ದೇಹ ಪುಷ್ಟಿಗೊಂಡಿದ್ದರೆ, ಆಗ ಈ ಸಂಬಂಧವು ಅವಿಚ್ಛಿನ್ನವೆಂದೆನಿಸುತ್ತಿತ್ತು. ಆಗ ಮಾತ್ರ "ತಾಯಿ" ಎಂಬ ಶಬ್ದಕ್ಕೆ ಸಾರ್ಥಕತೆ ಲಭಿಸುತ್ತಿತ್ತು. ಹರಿವ ಪ್ರವಾಹದಲ್ಲಿ ತೇಲುವವನಿಗೆ ದಂಡೆಯು ಆರಿವಾದರೂ ಯಾತಕ್ಕೆ ಬೇಕು? ಅಂದಮೇಲೆ ನಾನು ಈ ಪ್ರೌಢಾವಸ್ಥೆಯಲ್ಲಿ ಆ ಸಂಬಂಧವನ್ನು ತಿಳಿದುಕೊಂಡು ತಾಯಿಯಾದವಳನ್ನು ತಬ್ಬಿಕೊಳ್ಳುವ ದಾದರೂ ಹೇಗೆ?"

"ಕರ್ಣ, ಮಾತೃತ್ವವು ಯಾವಾಗಲೂ ಪರಾಧೀನವಾಗಿರುವದಿಲ್ಲ."

"ಇರದಿರಬಹುದು! ಮಾತೃತ್ವದ ಅಪಮಾನ ಮಾಡುವ ಎದೆಗಾರಿಕೆಯೂ ನನ್ನದಲ್ಲ. ನದಿಯು ಪಾತ್ರದಲ್ಲಿ ತೇಲಿ ಬಂದ ಮಗುವನ್ನೆತ್ತಿಕೊಂಡ ರಾಧಾತಾಯಿಗೆ ತಾನು ಅನಂತರದಲ್ಲಿ ಗರ್ಭಧಾರಣೆ ಮಾಡುವಂತಾದುದನ್ನು ಕಂಡ ನಾನು ಮಾತೃತ್ವದ ವಿಚಾರವನ್ನು ಕುರಿತು ಹೇಗೆ ಸಣ್ಣ ಮಾತನ್ನಾಡಲಿ? ನನ್ನನ್ನು ಕಂಡಾಗೆಲ್ಲ ನಿಮ್ಮ ಮನಸ್ಸು ತಲ್ಲಣಿಸುತ್ತಿರಬಹುದು. ಆದರೆ ನೀವು ಮಾತ್ರ ನನಗೆ ನನ್ನ ಶತ್ರುವಾದ ಅರ್ಜುನನ ತಾಯಿಯಾಗಿಯೇ ಕಾಣಿಸುತ್ತ ಬಂದಿರುವಿರಿ."

"ಕರ್ಣ;"

"ರಾಜಮಾತೇ, ತಾವು ದಯಪಾಲಿಸಬೇಕೆಂದಿರುವ ಅಂತಃಕರಣದ ಬಗ್ಗೆ ನಾನು ಯಾವಾಗಲೂ ಋಣಿಯಾಗಿರುವೆ. ಮರ್ಯಾದೆಯಿಂದ ಜ್ಞಾತವಾದ ಜ್ಞಾನವು ಮಾನವನಿಗೆ ವರವಾಗಿ ಪರಿಣಮಿಸುತ್ತದೆ. ಆದರೆ ಮರ್ಯಾದೆಯ ಸೀಮಾ ರೇಖೆಯನ್ನು ಮೀರಿ ಸಂಪಾದಿಸಿದ ಜ್ಞಾನವನ್ನು ವಿನಾಶದ ಮೂಲವೆನ್ನುತ್ತಾರೆ."

"ಕರ್ಣ, ಮಾತೃಪ್ರೇಮಕ್ಕೆ ಮರ್ಯಾದೆಯ ಬಂಧನವಿಲ್ಲ. ಅವಳಿಗೆ ಒಂದೇ ಒಂದು ಅಪೇಕ್ಷೆಯು ಯಾವಾಗಲೂ ಇರುತ್ತದೆ. ಮಗೂ ಕರ್ಣ, ನೀನು ನನ್ನವನು ನಿನ್ನ ಮೇಲೆ ಬೇರೆ ಯಾರ ಅಧಿಕಾರವೂ ಇಲ್ಲ, ತನ್ನ ಮೊದಲು ಸಂತಾನದ ಒಗ್ಗೆ ತಾಯಿಯಾದವಳಲ್ಲಿ ಯಾವ ಭಾವನೆ ಇರುತ್ತದೆಂಬುದು ಹೆತ್ತ ತಾಯಿಯಾದವಳಿಗೆ ಮಾತ್ರ ತಿಳಿದ ವಿಷಯ."

"ಬೇಡ ತಾಯಿ, ಆ ಕಲಂಕಿತವಾದ ಮಾತೃತ್ವದ ವಿಚಾರವನ್ನು ನೀವಾದರೂ ಆಡುವುದು ಬೇಡ."

"ಕರ್ಣಾ, ಮಾತೃತ್ವವು ಎಂದೂ ಕಲಂಕಿತವಾದುದಲ್ಲ."

"ಇದನ್ನು ನೀವು ಹೇಳುತ್ತೀರಾ?" ಕರ್ಣನು ಸಂಯಮವನ್ನು ಕಳೆದುಕೊಳ್ಳುತ್ತಲಿದ್ದ. "ಮಾತೇ, ಆ ಹಿಂದಿನ ದಿನಗಳನ್ನು ನೆನೆದುಕೊಳ್ಳಿರಿ. ಆವೇ ತಾನೇ ಕಣ್ಣು ಬಿಡುತ್ತಿದ್ದ ಕಂದನಿಗೆ ವಿಶಾಲವಾದ ನದಿಯ ಪಾತ್ರವನ್ನು ತೋರಿಸಿದಿರಲ್ಲ; ಆ ದಿನವನ್ನು ನೆನಪು ಮಾಡಿಕೊಳ್ಳಿರಿ, ಇನ್ನೂ ಆ ಮಗು ಬದ್ಧಮುಷ್ಟಿಯಲ್ಲಿರುವಾಗಲೇ, ಪ್ರವಾಹದ ತೆರೆಗಳಿಗೆ ಆ ಕಂದನನ್ನೊಪ್ಪಿಸಿದಿರಲ್ಲ; ಆ ದಿನವನ್ನು ನೆನಪು ಮಾಡಿಕೊಳ್ಳಿರಿ. ಯಾವ ಮಗುವಿಗೆ ರೂಪ ಆಕಾರಗಳನ್ನು ಗುರುತು ಹಿಡಿಯುವ ಶಕ್ತಿ ಇದ್ದಿಲ್ಲವೋ ಅಂಥ ಮಗುವನ್ನು ನಕ್ಷತ್ರಗಳ ಮಾಲೆಗಳನ್ನೆಣಿಸುವಂತೆ ಮಾಡಿದಿರಿ. ಆತ ಅಂಥ ಅಕ್ಷಮ್ಯವಾದ ಅಪರಾಧವನ್ನೇನು ಮಾಡಿದ್ದ? ಇಂದು ಅಂತಃಕರಣಕ್ಕಾಗಿ ತಳಮಳಿಸುವ ಮಾತೃ ಹೃದಯಕ್ಕೆ ಅಂದು ಏನಾಗಿತ್ತು? ಪ್ರವಾಹದ ಸೆಳೆತಕ್ಕೆ ಸಿಕ್ಕು ಅಂದೇ ಈ ಜೀವನವು ಪರಿಸಮಾಪ್ತಿಯನ್ನು ಹೊಂದಿದ್ದರೆ ಎಂಬ ಅಳುಕಾದರೂ ನಿಮಗೆ ಏಕೆ ಹುಟ್ಟಲಿಲ್ಲ!" "ಕರ್ಣನು ದೀರ್ಘ ಶ್ವಾಸನನ್ನೆಳೆದು ಸುದೈವದಿಂದ ಹಾಗಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಈ ಕರ್ಣನಿಗೆ ಪರಕೀಯ ಎಂಬ ಭಾವನೆಯ ನೋವು, ಹಾಗೂ ಎದುರು ಬಂದ ತೆರೆಗಳನ್ನನುಸರಿಸಿಕೊಂಡು ಜೀವಿಸುವುದಾದರೂ ತಪ್ಪುತ್ತಿತ್ತು! ಯಾವ ಅಪರಾಧಕ್ಕಾಗಿ ನನಗೆ ಈ ಶಿಕ್ಷೆ?"

ಕಣ್ಣೀರನ್ನೊರೆಸಿಕೊಳ್ಳುತ್ತ ಕುಂತಿಯು ಹೇಳಿದಳು,

"ಅಪರಾಧವು ನಿನ್ನದಲ್ಲ, ಅದೆಲ್ಲವೂ ನನ್ನದೇ ಹಾಗಿಲ್ಲವೇ ಹೋಗಿದ್ದರೆ ಕಠೋರವಾದ ನಿನ್ನ ಮಾತುಗಳನ್ನು ಕೇಳುವ ಬಲ ನನ್ನಲ್ಲಿ ಎಂದಿಗೂ ಇರುತ್ತಿರಲಿಲ್ಲ. ಕರ್ಣಾ, ನೀನು ಗಂಡಸು. ನಿನ್ನ ವಿಚಾರಧಾರೆಗಳು ನಿನ್ನ ಶರೀರ ಧರ್ಮಕ್ಕೆ ಯೋಗ್ಯವೆಂದೆನಿಸುವಂತಹವು. ಆದರೆ ನನ್ನ ಮರ್ಯಾದೆಯೇ ಬೇರೆ. ನಾನು ಸ್ತ್ರೀ; ನನಗಿರುವ ಬಂಧನದಲ್ಲಿಯೇ ನಾನು ನನ್ನದನ್ನು ರಕ್ಷಿಸಿಕೊಂಡು ಬರಬೇಕಾಗಿದೆ."

ಕರ್ಣನ ಮುಖದಲ್ಲಿ ಕಟು ಹಾಸ್ಯ ಮಿಂಚಿತು

"ಯಾವ ಬಂಧನ?? ಎಂಥ ಬಂಧನ? ಪಾಪದ ಸಮರ್ಥನೆಯನ್ನೇಕೆ ಮಾಡಿಕೊಳ್ಳುವಿರಿ. ಆ ಬಂಧನವನ್ನು ಅಂದೇ ದೂರಮಾಡಿಕೊಳ್ಳಲಿಲ್ಲವೇಕೆ?"

"ಮಗೂ, ಮರ್ಯಾದೆಯ ಎಲ್ಲೆಯನ್ನು ದಾಟಬೇಡ." ಕರ್ಣನ ಮೇಲೆಯೇ ನೆಟ್ಟ ದೃಷ್ಟಿಯನ್ನಿಟ್ಟ ಕುಂತಿಯು "ಸ್ತ್ರೀ ಧರ್ಮದ ನನ್ನ ಕೃತ್ಯಕ್ಕೆ ಮೂಲ ಕಾರಣವೇನು ? ಆ ಮಾತು ನಿನಗೆ ಅರ್ಥವಾಗಲಾರದು. ಸ್ತ್ರೀ ಯಾದವಳು ಯಾವಾಗಲೂ ಪರನಿಷ್ಟೆಯಲ್ಲಿಯೇ ಜೀವಿಸುತ್ತ ಬಂದವಳು. ಅವಳು ಪುರುಷರಂತೆ ಎಂದೂ ಸ್ವತಂತ್ರಳಲ್ಲ. ಅವಳು ವಿವಾಹಪೂರ್ವದಲ್ಲಿ ಪಿತೃಗೃಹದಲ್ಲಿ ಬಂಧಿತಳು. ವಿವಾಹನಂತರ ಅವಳು ಪತಿಯ ನೆರಳೆನಿಸುವಳು ಅವಳ ಅಸ್ತಿತ್ವದ ಸ್ವಾತಂತ್ರ್ಯವೆಂಬುದೆಲ್ಲಿದೆ ?"

"ಯಾವ ನಿಷ್ಠೆಯ ಆಧಾರದಿಂದ ನೀವು ನನ್ನನ್ನು ತೊರೆದಿರಿ ? ಅದ ನ್ನಾದರೂ ಹೇಳಿರಿ."

"ಅವಶ್ಯವಾಗಿ ಹೇಳುವೆ" ಯಾವುದೋ ಲೋಕದಲ್ಲಿರುವವಳಂತೆ ಭಾವನಾಪರವಶಳಾದ ಕುಂತಿಯು ಹೇಳಲಾರಂಭಿಸಿದಳು.

"ಬಹು ದಿನಗಳ ಹಿಂದಿನ ಮಾತು. ನನ್ನ ತಂದೆ ಕುಂತೀಭೋಜನಲ್ಲಿ ಮಹಾತಪಸ್ವಿಗಳೆಂದು ಹೆಸರುವಾಸಿಗಳಾಗಿದ್ದ ದೂರ್ವಾಸರು ಆಗಮಿಸಿದ್ದರು. ಅವರಿಗೆ ಬಹು ಕಠಿಣವಾದ ವ್ರತವನ್ನು ಆಚರಿಸಬೇಕಾಗಿತ್ತು. ಅವರು ಪಂಚಭೂತಗಳ ಸಾಕ್ಷಾತ್ಕಾರವನ್ನು ಪಡೆಯುವ ಹಂಬಲವನ್ನಿಟ್ಟುಕೊಂಡಿ ದ್ದರು. ತಮ್ಮ ಅನುಷ್ಠಾನವನ್ನಾರಂಭಿಸಿದಾಗ, ಆ ವ್ರತಾಚರಣೆಯಲ್ಲಿ ಯಾವ ನ್ಯೂನತೆಗಳಾಗದಂತೆ ನೋಡಿಕೊಳುವ ಕೆಲಸವನ್ನು ತಂದೆಯವರು ನನಗೊಪ್ಪಿಸಿದರು. ಅನುಷ್ಠಾನದಿಂದ ಮುನಿಯ ಮನಸ್ಸು ಕದಡದಂತೆ ನೋಡಿಕೊಳ್ಳಬೇಕಾದ ಕಾರ್ಯವು ಬಹು ಕಠಿಣವಾಗಿತ್ತು. ಆದುದರಿಂದ ಅವರ ಸ್ವಭಾವವನ್ನು ತಿಳಿದುಕೊಂಡವರಿಗೆ ಮಾತ್ರ ಅವರ ಸೇವೆಗೆಂದು ನಿಯಮಿಸುವುದು ಅತ್ಯವಶ್ಯವಾಗಿತ್ತು. ದೂರ್ವಾಸರ ಕೋಪವು ತ್ರಿಲೋಕ ದಲ್ಲಿಯೂ ಪ್ರಸಿದ್ಧಿಯನ್ನು ಹೊಂದಿತ್ತು. ಆದುದರಿಂದ ಅವರ ಸೇವೆ ಮಾಡಲು ಧೈರ್ಯದಿಂದ ಯಾರೂ ಮುಂದಾಗಲಿಲ್ಲ ಆಗ ನನ್ನ ತಂದೆ ತುಂಬ ಯೋಚನೆಮಾಡಲಾರಂಭಿಸಿದರು. ದೂರ್ವಾಸರ ಶಾಪವೆಂದರೆ ತೀರಿತು, ಅವರು ಆಡಿದಂತೆ ಎಲ್ಲವೂ ನಡೆದು ಹೋಗುವದೆಂಬ ಭೀತಿ ಇತ್ತು. ಕೊನೆಗೆ ಆ ಮುನಿಗಳ ಸೇವೆಗೆಂದು ತಂದೆಯವರು ನನ್ನನ್ನೇ ನಿಯಮಿಸಿದರು. ಆ ವಿಚಿತ್ರ ಮುನಿಯ ಬೇಕು ಬೇಡಗಳನ್ನು ಪೂರೈಸಿ ಕೊಡುವುದರಲ್ಲಿ ನಾನು

ಪಟ್ಟಪಾಡು ಹೇಳತೀರದಂತಹದು. ಆದರೂ ಆ ಮುನಿಗಳು ಪ್ರಾರಂಭಿಸಿದ ಅನುಷ್ಠಾನವು ನಿರ್ವಿಘ್ನವಾಗಿ ಪರಿಸಮಾಪ್ತಿಗೊಂಡಿತು ಅಂತರಿಕ್ಷದ ದೇವತೆಗಳನ್ನು ಅವರು ವಶಪಡಿಸಿಕೊಂಡಿದ್ದರು. ನಾನು ಮಾಡಿದ ಸೇವಾದಿಗಳಿಂದ ಸಂತುಷ್ಟರಾಗಿದ್ದರು. ಆ ಮಹಿಮರು ತಮ್ಮ ತಪಸ್ಸಿನ ಸಿದ್ಧಿಯನ್ನು ಕಂಡುಕೊಳ್ಳುವುದಕ್ಕಾಗಿ ನನ್ನನ್ನೇ ಆರಿಸಿದರು. ತಮ್ಮ ವಶವಾಗಿದ್ದ ಕೆಲವು ಮಂತ್ರಗಳನ್ನು ನನಗೊಪ್ಪಿಸಿ ಹೇಗೆ ಬಂದಿದ್ದರೋ ಹಾಗೆ ಹೊರಟು ಹೋದರು.

"ಜಿಜ್ಞಾಸೆಯು ಮಾನವನನ್ನು ಸುಮ್ಮನಿರಗೊಡುವುದಿಲ್ಲ. ಆ ಮಂತ್ರಗಳನ್ನು ಪರೀಕ್ಷಿಸುವ ಅಭಿಲಾಷೆಗಳು ನನ್ನ ಮನದಲ್ಲಿ ಪ್ರಬಲವಾಗಿ ಕಾಡತೊಡಗಿದವು. ಒಂದು ದಿನ ನಾನು ಏಕಾಂತದಲ್ಲಿರುವಾಗ ನನಗರಿವಿಲ್ಲದಂತೆ ಅಂತರಾತ್ಮದಿಂದ ಆ ದಿವ್ಯ ಮಂತ್ರಗಳು ಹೊರಹೊಮ್ಮಿದವು ಆಗ ದೇದೀಪ್ಯಮಾನವಾದ ಪುರುಷನೊಬ್ಬ ನನ್ನನ್ನು ಸ್ವೀಕರಿಸಲು ಬಂದು ನಿಂತುಕೊಂಡ."

ಕುಂತಿಯು ಲಜ್ಜೆಯಿಂದ ತನ್ನ ಮುಖ ಮುಚ್ಚಿಕೊಂಡಳು.

"ಮಾತೇ ನಿಲ್ಲಿಸಬೇಡಿರಿ ! ಎಲ್ಲವನ್ನೂ ಹೇಳಿರಿ."

"ಆ ದಿವ್ಯ ಪ್ರಕಾಶದ ತೇಜಸ್ಸಿನಿನಲ್ಲಿ ನಾನು ಯಾವಾಗ ಬದ್ಧಳಾದೆ ಎಂಬುದೇ ನನಗೆ ತಿಳಿಯಲಿಲ್ಲ. ನೀನು ನನ್ನ ಗರ್ಭದಲ್ಲಿ ಬೆಳೆಯಲಾರಂಭಿಸಿದೆ. ಆಗ ಹಗಲು, ರಾತ್ರಿ ಮನಸ್ಸಿಗೆ ನೆಮ್ಮದಿ ಎಂಬುದೇ ಇರಲಿಲ್ಲ. ನಾನು ಆಗ ಕುಮಾರಿಯಾಗಿದ್ದೆ, ಗರ್ಭಧಾರಣೆ ಮಾಡಿದ್ದೆ ; ತಂದೆಯ ಕುಲಕ್ಕೆ ಎಂಥ ಕೆಟ್ಟ ಹೆಸರು ! ಅತ್ಯಂತ ವಿಶ್ವಾಸಿಯಾದ ಗೆಳತಿಯೊಂದಿಗೆ ಆಶ್ರಮದಲ್ಲಿರಲಾರಂಭಿಸಿದೆ. ಮುನಿಯ ಸೇವೆಯಲ್ಲಿ ದಿನಗಳೆದುದರಿಂದ ನನ್ನ ಈ ಬದಲಾವಣೆಗೆ ತಂದೆಯವರು ಒಪ್ಪಿಗೆಯನ್ನಿತ್ತರು. ಒಂದು ದಿನ ನಿನ್ನ ಜನನವಾಯಿತು. ತುಂಬಿದ ಕಗ್ಗತ್ತಲಲ್ಲಿ ಅಶ್ವನದಿಯ ಪ್ರವಾಹದಲ್ಲಿ ನಿನ್ನನ್ನು ತೇಲಿಬಿಡಲಾಯಿತು. ತಾಯಿಯಾದವಳ ದುರ್ದೈವೆಂಥದ್ದು ! ಎಂಬ ಮಾತು ನಿನಗೆ ತಿಳಿಯಲಾರದ ವಿಷಯ. ಮುಂದೆ ನೀನು ನಡೆಯುತ್ತಿರಬಹುದು, ಒಂದೊಂದಾಗಿ ತೊದಲು ನುಡಿಯನ್ನಾಡುತ್ತಿರಬಹುದು ಆ ಸುಖವನ್ನು ಯಾವಳೋ ಪುಣ್ಯಶಾಲಿಯಾದವಳು ಕೇಳಿ ನೋಡಿ ಆನಂದಿಸು

ತ್ತಿರಬಹುದು. ಎಂಬ ಕನಸಿನ ದುಃಖವನ್ನು ಕೇವಲ ತಾಯಿಯಾದವಳು ಮಾತ್ರ ಅನುಭಸಬಲ್ಲಳು."

ಕುಂತಿಯು ಮಾತುಗಳನ್ನು ಕೇಳುತ್ತಿರುವಂತೆ ಕಠೋರವಾಗಿದ್ದ ಕರ್ಣನ ಮನಸ್ಸು ನಿಧಾವಾಗಿ ಮೃದುತ್ವಕ್ಕೆ ಪರಿವರ್ತಿಸಲಾರಂಭಿಸಿತು.

"ಮಾತೇ, ನಿನ್ನ ಮಾತುಗಳು ಸರಿಯಾಗಿವೆ. ನಾನು ನಿನಗೆ ದೋಷವನ್ನೀಯಲಾರೆ, ಇನ್ನು ದೋಷವೆಂಬುದೇನಾದರೂ ಇದ್ದಲ್ಲಿ ಅದು ಕೇವಲ ನನ್ನ ದೈವದ್ದು ! ಅಥವಾ ಪ್ರಾರಬ್ಧವಲ್ಲದೆ ಬೇರೇನೂ ಅಲ್ಲ. ಹಾಗಿಲ್ಲದೆ ಹೋಗಿದ್ದರೆ ನನ್ನ ಹಣೆಯ ಬರಹದಲ್ಲಿ ಇಂಥ ಪರಕೀಯ ಜೀವನವೆಂಬುದು ಎಂದೂ ಬರುತ್ತಿರಲಿಲ್ಲ. ಅದನ್ನು ನೆನೆಯುವುದು ಭಯಾನಕವೆಂದೆನಿಸುತ್ತಿದೆ."

"ಆ ತರಹದ ಅನುಭವ ನನಗೂ ಇದೆ. ಕರ್ಣಾ, ನಾನು ಕುಂತೀಭೋಜನ ಮಗಳು, ಶೂರಿ ರಾಜನ ಕನ್ಯೆ, ನನ್ನಹೆತ್ತ ತಂದೆಯು ನನ್ನನ್ನು ಕುಂತೀಭೋಜನಿಗೆ ದತ್ತು ಕೊಟ್ಟಿದ್ದರು. ಸಜವಾದ ತಾಯಿತಂದೆಗಳ ಅಂತಃಕರಣದಿಂದ ನಾನೂ ದೂರಳಾಗಿಯೇ ಬೆಳೆದೆ. ಆದರೂ ನನ್ನ ಜೀವನದಲ್ಲಿ ನಿಷ್ಠೆಯನ್ನು ಬೆಳೆಸಿಕೊಂಡು ಬಂದೆ. ಆ ನಿಷ್ಠೆಯೇ ನನಗೆ ಬದುಕಲು ಕಲಿಸಿತು."

"ಅಮ್ಮಾ , ನಿನಗೆ ನಿನ್ನ ನಿಷ್ಠೆಯ ಬಲವಾದರೂ ಇದೆ, ಆದರೆ ನನ್ನ ಹಣೆಯಲ್ಲೇನಿದೆ ? ಕೇವಲ ತೇಲುತ್ತ ಸಾಗುವುದು. ಪ್ರವಾಹವನ್ನನುಸರಿಸಿಕೊಂಡು ತೇಲುವದು ; ಇಷ್ಟೇ ನನ್ನ ಜೀವನ. ಯಾವಗಳಿಗೆಯಲ್ಲಿ ನೀವು ನನ್ನನ್ನು ಪ್ರವಾಹದಲ್ಲಿ ಬಿಟ್ಟಿರೋ ಅಂದಿನಿಂದ ಇಂದಿನವರೆಗೆ ತೇಲುತ್ತಲೇ ಇದ್ದೇನೆ. ಅನಾಥನಾದ ನಾನು ಕಾಲದ ತೆರೆಗಳೊಂದಿಗೆ ತೇಲುವದೇ ವಿನಃ ಬೇರಿನ್ನೇನು ಮಾಡಲುಸಾಧ್ಯ ?"

ವ್ಯಾಕುಲವಾದ ಆ ಮಾತುಗಳಿಂದ ಕುಂತಿಯ ಅಂತರಾತ್ಮವು ಹತಾಶಗೊಂಡಿತು. ಮುಂದೆ ಬಂದ ಅವಳು ಕರ್ಣನನ್ನು ಒಂದೇ ಸಲಕ್ಕೆ ಅಪ್ಪಿಕೊಂಡಳು.

"ಬೇಡ ಮಗೂ, ಕೊನೆಯ ಪಕ್ಷ ನಿನ್ನ ತಾಯಿಯ ಮುಂದಾದರೂ ನೀನು "ಅನಾಥ" ಎಂಬ ಮಾತನ್ನು ನುಡಿಯಬೇಡ. ನನಗೆ ಆ ಮಾತು ಸಹನೆಯಾಗುವುದಿಲ್ಲ."

ಕುಂತಿಯು ಕರ್ಣನ ಬೆನ್ನಿನ ಮೇಲೆ ಕೈಯಾಡಿಸುತ್ತಿದ್ದಳು. ಅವಳ ಆ ಕೈಯ್ಯಲ್ಲಿ ಅಗಾಧವಾದ ವಿಶ್ವಾಸದ ಅನುಭವವಾಗತೊಡಗಿತು. ಆಲಿಂಗನದಲ್ಲಿ ಎಂಥ ಅಮಿತವಾದ ಆನಂದವಿದೆ, ಪ್ರೇಮವಿದೆ, ಭೀಮ, ಅರ್ಜುನಾದಿಗಳ ಬಲವೆಲ್ಲಿದೆ ? ಎಂಬುದರ ಅನುಭವವು ಕರ್ಣನಿಗೆ ಆ ಆಲಿಂಗನದಿಂದ ಮನದಟ್ಟಾಯಿತು.

ಕೆಳಮುಖ ಹಾಕಿಕೊಂಡ ಕರ್ಣನಿಗೆ ಅಶ್ರುದುಂಬಿದ ಕಪೋಲಗಳ ಸ್ಪರ್ಶಾನುಭವವಾಯಿತು. ಗುಲಾಬಿಯ ದಳಗಳ ಸ್ಪರ್ಶವಾದಂತೆ ಕಂಪಿಸುವ ತುಟಿಗಳು ಅವನ ಮುಖವನ್ನು ಮುತ್ತಿಟ್ಟವು. ಆ ಚುಂಬನದಿಂದ ಕರ್ಣನಿಗೆ ಸ್ವರ್ಗಸುಖ ಪ್ರಾಪ್ತಿಯಾದ ಅನುಭವವಾಯಿತು. ಸಂಕೋಚವೆನಿಸಿದರೂ ಅವನು ತನ್ನ ಶರೀರವನ್ನೆಲ್ಲ ಆತ್ಮಾರ್ಪಣೆ ಮಾಡಿದಂತೆನಿಸಿತು. ಕುಂತಿಯ ತಲೆಯ ಮೇಲೆ ಕರ್ಣನ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಲಿತ್ತು. ಕರ್ಣನ ಆಲಿಂಗನದಲ್ಲಿ ಸಮಾಧಿಸ್ಥಳಾದ ಕುಂತಿಗೆ, ಆ ಕರ್ಣಧಾರೆಗಳು ಎಚ್ಚರಿಸಿದವು. ಕರ್ಣನೂ ಕೆಲವೇ ಕ್ಷಣಗಳಲ್ಲಿ ಎಚ್ಚೆತ್ತುಕೊಂಡ. ಅವಳ ಆಲಿಂಗನದಿಂದ ಹೊರಬಂದಾಗ ಅಪರಾಹ್ನದ ಸೂರ್ಯ ಕಿರಣಗಳು ಆತನ ಮುಖದ ಮೇಲಿರುವ ಕಣ್ಣೀರು ಹನಿಗಳಿಗೆ ಮಿಂಚಿನ ಹೊಳಪನ್ನೀಯಲಾರಂಭಿಸಿದ್ದವು, ಕುಂತಿ ತನ್ನ ಹಸ್ತದಿಂದ ಅವುಗಳನ್ನೊರಸಿದಳು. ನಗಲು ಪ್ರಯತ್ನಿಸುತ್ತ ಕರ್ಣನು ಹೇಳಿದ,

"ತಾಯೀ, ಇಂದು ನಾನು ಸೋತೆ, ಇಂದಿನವರೆಗೆ ನಿನ್ನ ಮಗನು ಏನೆಲ್ಲವನ್ನು ಸಹಿಸಿಕೊಂಡು ಬಂದಿದ್ದ. ದುಃಖ, ಅವಮಾನ ಎಲ್ಲವನ್ನೂ ಎದುರಿಸಿಕೊಂಡು ಬಂದಿದ್ದ. ಆ ದುಃಖ ಅವಮಾನಗಳು ಎಂದೂ ನನ್ನ ಹೃದಯದಿಂದ ಹೊರಬಂದಿರಲಿಲ್ಲ. ಇಂದು ನಿನ್ನ ಭಾಗ್ಯವೇ ಭಾಗ್ಯ. ಪ್ರಥಮ ದರ್ಶನದಲ್ಲಿಯೇ ನೀನು, ನಿನ್ನ ಮಗನ ಮುಖದಲ್ಲಿ ಕಣ್ಣೀರನ್ನು ಕಂಡೆ. ಪುಟ್ಟ ಪುಟ್ಟ ಹೆಜ್ಜೆಗಳನ್ನು ನೀನು ನೋಡದಿರಬಹುದು, ಮುದ್ದಾದ ಮಾತುಗಳನ್ನು ಕೇಳದಿರಬಹುದು. ಸ್ವಪರಾಕ್ರಮದಿಂದ ಅಂಗರಾಜನೆಂದು ಕರೆಸಿಕೊಂಡ, ತನ್ನ ದಾನದಿಂದ ಇಂದ್ರದೇವನನ್ನೇ ಯಾಚಕನನ್ನಾಗಿಸಿದ, ನಾಳಿನ ಕುರುಕ್ಷೇತ್ರದ ಮೂಲ ಸೂತ್ರಧಾರನೆನಿಸಿದ, ಈ ನಿನ್ನ ಮಗನ ಕಣ್ಣೀರನ್ನು ನೋಡಲು ನಿನಗೆ ದೊರೆಯಿತಲ್ಲ; ಇದೇನು ಸಾಮಾನ್ಯದ

ಮಾತಾದೀತೆ ? ತಾಯೀ ನಿರಾಶನಾದ ನನ್ನ ಏಕಾಕಿ ಜೀವನಕ್ಕೆ ನಿನ್ನ ಈ ಆಲಿಂಗನದಿಂದ ದೊರತ ಶಕ್ತಿಯು ನೂರಾರು ಸಾವುಗಳನ್ನೆದುರಿಸುವಂತಹ ಬಲವನ್ನು ತಂದುಕೊಟ್ಟಿದೆ."

ಕುಂತಿಯು ಗಾಬರಿಯಿಂದ ಕರ್ಣನ ಬಾಯಿಯನ್ನು ಮುಚ್ಚಿದಳು.

"ಅಶುಭ ನುಡಿಯಬಾರದು. ಕರ್ಣಾ, ಇನ್ನು ಮೇಲೆ ಮರಣದ ವಿಚಾರವನ್ನೆತ್ತಬೇಡ. ತಾಯಿಯು ಮಕ್ಕಳಿಗೆ ಜೀವನವೀಯಲು ಕಾಣಿಸಿ ಕೊಳ್ಳುತ್ತಾಳೆ."

ಸ್ವಪ್ನದಿಂದ ಎಚ್ಚೆತ್ತುಗೊಂಡವನಂತೆ ಕರ್ಣನಿಗೆ ಎಚ್ಚರವಾಯಿತು.

"ಜೀವನ ! ಎಂಥ ಜೀವನ ?"

"ಹಕ್ಕಿನ ಜೀವನ ! ಮಾನವಂತ ಜೀವನ. ಕರ್ಣಾ, ನಾನು ನಿನ್ನನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ."

"ಎಲ್ಲಿಗೆ ?"

"ಆಚೆಯ ದಡಕ್ಕೆ, ಎಲ್ಲಿ ಪಾಂಡವರ ಶಿಬಿರಗಳಿವೆಯೋ ಆ ಸ್ಥಳಕ್ಕೆ, ನಿನ್ನ ಪರಾಕ್ರಮಿಗಳಾದ ಸೋದರರು ಎಲ್ಲಿದ್ದಾರೆಯೋ ಆ ಸ್ಥಳಕ್ಕೆ. ಯಾವ ಕುಲಕ್ಕೆ ನೀನು ವಂಶದಿಂದ, ರಕ್ತದಿಂದ ಬಂಧಿಸಲ್ಪಟ್ಟಿರುವೆಯೋ ಅಲ್ಲಿಗೆ ನಿನ್ನನ್ನು........"

"ಯಾತಕ್ಕೆ ?" ಕರ್ಣನು ಕೇಳಿದ.

"ಯಾತಕ್ಕೆಂದರೆ, ತಾಯಿಯಾದವಳು ಮಕ್ಕಳನ್ನು ಏಕೆ ಕರೆದೊಯ್ಯು ತ್ತಾಳೆ. ಆ ಮಗನು ತನ್ನವನೆಂದಲ್ಲವೆ? ಕರ್ಣಾ ನೀನು ನನ್ನ ಮಗನೆಂದು!"

"ತಾಯೀ, ನಿಜವಾಗಿಯೂ ನಾನು ಬೇಕಾಗಿದ್ದೇನೆಯೇ"

"ಕರ್ಣಾ, ನಿನಗೆ ಇನ್ನೂ ಸಂಶಯವೇ ? ಜನ್ಮಕೊಟ್ಟ ತಾಯಿಯಲ್ಲಿ ನೀನು ವಿಶ್ವಾಸವಿಡಲಾರೆಯಾ ? ಮಗೂ, ನಿನಗಾಗಿ ನಾನು ಬೇಕಾದುದನ್ನು ಮಾಡಬಲ್ಲೆ. ನಾನು ಹೇಳಿದಲ್ಲಿ ನನ್ನ ಮಕ್ಕಳು ನಿನ್ನನ್ನು ಸ್ವೀಕಾರ ಮಾಡು ತ್ತಾರೆ. ಆದರದಿಂದ, ಪ್ರೇಮದಿಂದ ಅವರು ನಿನ್ನನ್ನು ಬರಮಾಡಿಕೊಳ್ಳು ತ್ತಾರೆ." ಅಷ್ಟೇ ಅಲ್ಲ, ನೀನು ಜೇಷ್ಠ ಪಾಂಡವನಿರುವೆ ಹಾಗೂ........

"ಹೇಳು, ನಿಲ್ಲಿಸುವುದೇಕೆ ?" ಶಾಂತನಾಗಿ ಕರ್ಣನು ಹೇಳಿದ "ದ್ರೌಪ ದಿಯು ಆರನೆಯ ಪತಿ ಎಂದು ನನ್ನನ್ನು ಸ್ವೀಕಾರ ಮಾಡುವಳು ಎಂದಲ್ಲವೆ?

ಇದೆಲ್ಲವನ್ನೂ ನಾನು ಕೃಷ್ಣನಿಂದ ಕೇಳಿದ್ದೇನೆ. ಅವುಗಳನ್ನೆಲ್ಲ ಪುನಃ ಪುನಃ ಹೇಳುವ ಅಗತ್ಯವೇನಿಲ್ಲ. ಅವುಗಳಿಂದ ನನಗೆ ಯಾವ ಪುರುಷಾರ್ಥವೂ ಇಲ್ಲ. ನಾನು ನಿನಗೆ ಬೇಕಲ್ಲವೆ ?"

"ಹೌದು."

"ಹಾಗಾದರೆ ಅದಕ್ಕೆ ಒಂದೇ ಉಪಾಯವಿದೆ."

"ಹೇಳು ಕರ್ಣ" ಕುಂತಿ ಆತುರತೆಯಿಂದ ಕೇಳಿದಳು. "ಅದಕ್ಕಾಗಿ ನಾನು ಏನು ಬೇಕಾದರೂ ಮಾಡಲು ಸಿದ್ಧ."

ನಡು ಮಧ್ಯಾಹ್ನದಲ್ಲಿಯೂ ತಂಪಾದ ಗಾಳಿಯ ಸ್ಪರ್ಶವಾದಂತೆನಿಸಿತು, ಕರ್ಣನಿಗೆ.

"ತಾಯಿ. ನೀನು ಪಾಂಡವರನ್ನು ರಕ್ಷಿಸಿಕೊಂಡು ಬಂದಿರುವೆ. ಅವರನ್ನು ಬೆಳೆಸಿರುವೆ. ಅವರಿಗೆಲ್ಲ ತಾಯಿಯ ಸುಖವು ದೊರೆಯುವಂತೆ ನೋಡಿಕೊಂಡೆ. ಆ ಸುಖದಿಂದ ವಂಚಿತನಾದವನೆಂದರೆ ನಾನೊಬ್ಬನೇ. ಆದುದರಿಂದ ನೀನು ನನ್ನೊಂದಿಗೆ ಹೊರಟುಬಿಡಬಾರದೆ ? ಉಳಿದುಳಿದ ದಿನ ನಾನು ತಾಯಿಯ ಸಹವಾಸದಲ್ಲಿ ಕಳೆಯುವೆ."

"ಎಲ್ಲಿಗೆ ?" ಕುಂತಿಯು ಬಹು ಆಶ್ಚರ್ಯದಿಂದ ಕೇಳಿದಳು.

"ನನ್ನೊಂದಿಗೆ ? ಈ ದಡದಲ್ಲಿರುವ ನನ್ನ ಮನೆಗೆ, ಅಲ್ಲಿ ನಿನಗೆ ರಾಜ ಮಾತೆ ಎಂದು ಗೌರವ ದೊರೆಯಬಹುದು, ಕರ್ಣನ ತಾಯಿ ಎಂದು ತಿಳಿದು ಬಂದಾಗ ದುರ್ಯೋಧನನೂ ನಿನಗೆ ತಲೆ ಬಾಗುತ್ತಾನೆ. ಅಭಿಮಾನದಿಂದ ನಾನೂ ಈ ಮಾತನ್ನು ಹೇಳಬಹುದು."

ಕರ್ಣನು ಹೀಗೆ ಇತ್ತಂಡವಾದವನ್ನು ಮಂಡಿಸುವನೆಂಬ ಕಲ್ಪನೆಯೇ ಕುಂತಿಗಿರಲಿಲ್ಲ. ಆದುದರಿಂದ ಕರ್ಣನ ಮಾತುಗಳು ಅವಳನ್ನು ಪೇಚಿಗೆ ಸಿಲುಕುವಂತೆ ಮಾಡಿದವು. ಏನುಹೇಳಬೇಕೆಂಬುದೇ ಅವಳಿಗೆ ತೋಚ ದಾಯಿತು. ಕುಂತಿಯು ಸುಮ್ಮನಿರುವುದನ್ನು ಕಂಡ ಕರ್ಣನು ಖಿನ್ನವಾದ.

"ಮಾತೇ, ಈಗಲಾದರೂ ತಿಳಿಯಿತೇ ? ನಿನಗೆ ನಾನು ಬೇಕಾಗಿ ದ್ದೇನೆಯೇ ? ಆ ನಿನ್ನ ಮಕ್ಕಳೇ ನಿನಗೆ ಬೇಕಾಗಿದ್ದಾರೆ. ಆದುದರಿಂದ ಅವರ ಬಗ್ಗೆ ನಿನಗೆ ಕಾಳಜಿಯಾಗಿದೆ. ನಾನು ನಿನ್ನೊಂದಿಗೆ ಬಂದರೂ ನನಗೆ

ಬೇಕಾದುದು ನಿನಗೆ ದೊರೆಯುಲಾರದು. ಪಾಂಡುಪುತ್ರರು ಸೂರ್ಯಪುತ್ರ ನನ್ನು ಹೇಗೆ ಸ್ವೀಕರಿಸುವರು. ತಾಯಿಯ ರಕ್ತದಿಂದ ಜಾತಿಯನ್ನು ಕಂಡು ಹಿಡಿಯುಲು ಬರುವದಿಲ್ಲ. ಪಾಂಡವರು ರಾಜಮುಕುಟವನ್ನು ಸೂತಪುತ್ರನ ತಲೆಯ ಮೇಲಿಟ್ಟು ಅಭಿಷೇಕ ಮಾಡಲು ಎಂದೂ ಸಿದ್ಧರಾಗರು. ಪಾಂಡವ ರಿದ್ದಲ್ಲಿಗೆ ನಾನು ಹೋದರೆ ಸಿಂಹಗಳ ಸಮೂಹದಲ್ಲಿ ಜಿಂಕೆಯು ಪ್ರವೇಶ ಮಾಡಿದಂತಾಗುವುದು. ಪಾಂಡವರಲ್ಲಿ ಈ ಕರ್ಣನಿಗೆ ಸ್ಥಾನವೇ ಇಲ್ಲ. ಯಾರಿಗೂ ಬೇಡಾದವನು ನಾನು. ಹಾಗೆ ನೋಡಿದಲ್ಲಿ ನನಗೆ ಎಲ್ಲಿಯೂ ಸ್ಥಾನವಿಲ್ಲ, ನದಿಯ ತರಂಗಗಳಿಗೆ ಅರ್ಪಿತವಾದ ನಿನ್ನ ಮಗನ ಪ್ರವಾಸವು ಆ ಪ್ರವಾಹದೊಂದಿಗೆ ಸಾಗಬೇಕಾಗಿದೆ. ಒಂದಲ್ಲ ಒಂದು ದಿನ ನದಿಯ ಪ್ರವಾಹವು ಕೂಡುವಂತೆ ನಾನೂ ಸಹ ಆ ಮಹಾಸಾಗರವನ್ನು ಕೂಡ ಬಹುದು, ಈ ನನ್ನ ಪ್ರವಾಸವು ಎಂದೂ ಅರ್ಧಕ್ಕೆ ನಿಲ್ಲಲಾರದು. ಆ ಮಹಾಸಾಗರದವರೆಗೂ ಪಯಣ ಮಾಡುವಂತಹ ಆಶೀರ್ವಾದವನ್ನು ಮಾತ್ರ ನೀನು ಈ ಮಗನಿಗೆ ದಯಪಾಲಿಸು."

ಸಂಪೂರ್ಣ ಸೋತುಹೋದ ಕುಂತಿಯು—

"ಕರ್ಣಾ, ನಾನು ಎಂಥ ಆಸೆಯನ್ನಿಟ್ಟುಕೊಂಡು ಬಂದಿದ್ದೆ."

ಕರ್ಣನ ಮುಖದಲ್ಲಿ ಪುನಃ ನಗು ಕಾಣಿಸಿಕೊಂಡಿತು. ಅವನ ಎದೆ ಅಗಲವಾಯಿತು. ನಿಶ್ಚಯ ಧ್ವನಿಯಲ್ಲಿ ಆತನು ಹೇಳಿದ,

"ನಾನು ನಿನ್ನನ್ನು ಎಂದೂ ನಿರಾಶೆಗೊಳಿಸಲಾರೆ. ಯಾವ ಕರ್ಣನು ತನ್ನ ಶತ್ರುಗಳನ್ನು ಬರಿಗೈಯಿಂದ ಕಳಿಸಿಲ್ಲವೋ ಅಂಥ ನಿನ್ನ ಮಗ ತಾಯಿ ಯನ್ನು ನಿರಾಶೆಗೊಳಿಸಿ ಕಳಿಸುವದೇ ? ಮಾತೇ ನೀನು ಚಿಂತೆ ಮಾಡಬೇಡ. ನಿನ್ನ ಆಶೆಗಳೆಲ್ಲ ಪೂರ್ಣಗೊಳ್ಳುವವು. ಮಾತೃಋಣಕ್ಕೆ ನಾನು ಬದ್ಧ ನಾಗಿರುವೆ. ಹಾಗೆಯೇ ನನ್ನ ಆಯುಷ್ಯವು ಮಿತ್ರನ ಋಣದಲ್ಲಿ ಸಿಲುಕಿ ಹೋಗಿದೆ. ಆದುದರಿಂದ ನಾನು ನಿನ್ನ ಮಕ್ಕಳೊಂದಿಗೆ ಯುದ್ಧ ಮಾಡುವೆ. ಅರ್ಜುನನೇ ಪಾಂಡವರ ನಿಜವಾದ ಶಕ್ತಿ ಎಂದೆನಿಸಿಕೊಂಡಿದ್ದಾನೆ. ಅತ ನೊಂದಿಗೆ ಮಾತ್ರ ನಾನು ಯುದ್ಧ ಮಾಡುವೆ. ಹೇ ಯಶಸ್ವಿನೀ ! ನಮ್ಮ ಇಬ್ಬರಲ್ಲಿ ಯಾರಾದರೊಬ್ಬರು ಮರಣ ಹೊಂದಿದರೂ ನಿನ್ನ ಐದು ಮಕ್ಕಳು

ನಿನಗೆ ಉಳಿದೇ ಉಳಿಯುತ್ತಾರೆ. ಇದಕ್ಕಿಂತ ಹೆಚ್ಚಿನ ವಚನವನ್ನು ನಾನು ಕೊಡಲಾರೆ. ಅಂಥ ಅಪೇಕ್ಷೆಯನ್ನು ನೀನು ಮಾಡದಿರುವುದೇ ಉಚಿತ."

ಕುಂತಿಯು ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ಅವಳು ಗದ್ಗದಿತಳಾಗಿ ನುಡಿದಳು.

"ನೀನು ಎಲ್ಲವನ್ನೂ ಕೊಟ್ಟಿರುವಿ. ಆದರೆ ನಾನು ಮಾತ್ರ ತಾಯಿಯಾಗಿ ನಿನಗೇನೂ ಕೊಡಲಾರದೇ ಹೋದೆ."

"ಅಮ್ಮ, ನಿನ್ನ ಆಶೀರ್ವಾದವೇನು ಕಡಿಮೆಯದೇ ? ತಾಯೀ, ನಿನ್ನ ಮಗನಿಗೆ ಆಶೀರ್ವಾದಮಾಡು. ಜಯದ ಅಪೇಕ್ಷೆಯಿಂದಾಗಲೀ, ಯಶಸ್ಸು ಹಾಗೂ ಕೀರ್ತಿಯ ಲೋಭದಿಂದಾಗಲೀ ಧರ್ಮದಿಂದ ನಾನು ವಿಚಲಿತನಾಗಲಾರದಂತೆ ನನ್ನನ್ನು ಅನುಗ್ರಹಿಸು, ಆ ಅನುಗ್ರಹವೇ ನನ್ನನ್ನು ಕಾಪಾಡಲಿ."

ಕುಂತಿಯು ಬಹು ಪ್ರೇಮಭಾವದಿಂದ ತನ್ನ ಬಲಗೈಯನ್ನು ಆತನ ಹೆಗಲ ಮೇಲಿಡುತ್ತ ಹೇಳಿದಳು,

"ಕರ್ಣ, ನಾನು ನಿನ್ನಲ್ಲಿಗೆ ಬರುವ ಮುನ್ನ ನನ್ನ ಮನದಲ್ಲಿ ನಿರ್ಧಾರಮಾಡಿಕೊಂಡ ನಿನ್ನ ಚಿತ್ರಕ್ಕೆ ಯಾವ ಕುಂದುಕೊರತೆಗಳೂ ಕಾಣಿಸಿಕೊಳ್ಳಲಿಲ್ಲ. ಬದಲಾಗಿ ನಿನ್ನನ್ನು ಕಂಡು ಆಶ್ಚರ್ಯ ಚಕಿತಳಾಗಿದ್ದೇನೆ. ಯಾವಾತನ ಧರ್ಮ ಬುದ್ಧಿಯು ತ್ರಿಕಾಲದಲ್ಲಿಯೂ ತಪ್ಪನ್ನು ಮಾಡಲು ಅವಕಾಶವನ್ನಿತ್ತಿಲ್ಲವೋ ಅಂಥ ನನ್ನ ಮಗನ ಕೈಯಿಂದ ಎಂದೂ ಪಾಪಕೃತ್ಯಗಳಾಗಬಹುದೆಂದು ನನಗನಿಸುವುದಿಲ್ಲ "

"ಯಾವ ಧರ್ಮ, ಎಂಥ ಪಾಪ ? ತಾಯೀ ಏನು ಹೇಳುತ್ತಿರುವಿ ನೀನು ?"

"ಮತ್ತೆ ಭೇಟಿಯಾಗಬಹುದೋ ಇಲ್ಲವೋ ಅದನ್ನು ಯಾರಿಗೂ ಹೇಳಲು ಬರುವಂತಿಲ್ಲ. ಆದುದರಿಂದ ಇಂದೇ ನನ್ನ ಮನದಲ್ಲಿ ನಡುತ್ತಿರುವ ಮುಳ್ಳಿನ ನೋವನ್ನು ತೋಡಿಕೊಳ್ಳಬೇಕೆನಿಸುತ್ತಿದೆ. ಆದುದರಿಂದ ಕರ್ಣ, ನಾನು ಕೇಳುವ ಮಾತಿಗೆ ಸರಿಯಾದ ಉತ್ತರವನ್ನು ಕೊಡು."

"ಜನನೀ, ನಾನು ಅಸತ್ಯವನ್ನು ನುಡಿದುದು ಜೀವನದಲ್ಲಿ ಒಂದೇ ಒಂದು ಸಲ ಅದೂ ಗುರುದೇವ ಪರಶುರಾಮರಿಂದ ಶಸ್ತ್ರವಿದ್ಯೆಯನ್ನು ಸಂಪಾದಿಸುವ ಸಮಯದಲ್ಲಿ ಮಾತ್ರ."

"ಕರ್ಣ, ದ್ರೌಪದಿಯನ್ನು ರಾಜಸಭೆಗೆ ಕರೆತಂದಾಗ ಅವಳವಸ್ತ್ರಾಪಹರಣದ ಸಲಹೆಯನ್ನು ನೀನೇ ಮಾಡಿದೆ ಎಂದು ನಾನು ಕೇಳಿದ್ದೇನೆ. ಆ ಮಾತಿನ ಮೇಲೆ ನನಗೆ ವಿಶ್ವಾಸವೆನಿಸದಾಗಿದೆ. ಯಾಕೆಂದರೆ ನನ್ನ ಹೊಟ್ಟೆಯಲ್ಲಿ ಹುಟ್ಟಿದವನು ಇಂಥ ಹೀನ ಮಾರ್ಗವನ್ನು ಅನುಸರಿಸಲಾರ ಎಂದು ಮನವು ಹೇಳತೊಡಗಿದೆ. ನಾನು ಕೇಳಿದ ಈ ಮಾತಿನಿಂದ ನನ್ನ ಅಂತಃಕರಣದಲ್ಲಿ ಯಾವಾಗಲೂ ಬಾಣ ಚುಚ್ಚಿದಂತಹ ಅನುಭವವಾಗುತ್ತಲಿದೆ. ಆದುದರಿಂದ ಕರ್ಣ ನನಗೆ ಸತ್ಯವನ್ನು ತಿಳಿದುಕೊಳ್ಳಬೇಕಾಗಿದೆ. ನಾನು ಕೇಳಿದುದು ಸತ್ಯವಲ್ಲ ಎಂಬುದನ್ನು ಕೇಳಲು ಆತುರಳಾಗಿದ್ದೇನೆ."

ಕ್ಷಣಹೊತ್ತು ಮೌನಿಯಾಗಿ ಕುಳಿತು ವಿಚಾರ ಮಾಡಿದ ಕರ್ಣನು.

"ಅತ್ಯಂತ ಸತ್ಯ : ಆ ಮಾತನ್ನು ನಾನೇ ಹೇಳಿದೆ. ಇದರಲ್ಲಿ ಅಸತ್ಯವೆಂಬುದಿಲ್ಲ,"

ಆ ಮಾತಿನಿಂದ ಕುಂತಿಗೆ ಹೃದಯಾಘಾತವಾದಂತೆನಿಸಿತು. ಅವಳು ಗಾಯಗೊಂಡ ಮನಸ್ಸಿನಿಂದ ನುಡಿದಳು,

"ದೋಷ ನಿನ್ನದಲ್ಲ; ನೀನು ಪಡೆದುಕೊಂಡ ಸಂಗತಿ ಹಾಗೂ ಸಹವಾಸದಿಂದ ಕೂಡಿದುದು."

"ಮಾತೇ, ನಿನ್ನ ತಿಳುವಳಿಕೆಯಲ್ಲಿ ತಪ್ಪಿದೆ. ಅದು ಸಂಗತಿಯ ದೋಷವಲ್ಲ. ನನ್ನ ಸಂಗಾತಿಯು ನಿರ್ದೋಷಿಯಾಗಿದ್ದಾನೆ. ದೋಷವೇನಾದರೂ ಇದ್ದಲ್ಲಿ ಅದು ನನ್ನ ಪುರುಷಾರ್ಥದಲ್ಲಿದೆ."

"ಇದನ್ನು ಯಾರಾದರೂ ಪುರುಷಾರ್ಥ ಎಂದು ಕರೆಯುತ್ತಾರೆಯೇ ? ಅಬಲೆಯಾದ, ಅಸಹಾಯಕಳನ್ನು ರಾಜಸಭೆಗೆ ಕರೆತಂದು ಅವಳನ್ನು ವಸ್ತ್ರಹೀನಳನ್ನಾಗಿ ಮಾಡುವಂತೆ ಆಜ್ಞಾಪಿಸುವದೆಂದರೆ ಇದೆಂತಹ ಪುರುಷಾರ್ಥ ?"

"ಕ್ಷಮಿಸು ಮಾತೆ, ಈ ಜನ್ಮದಲ್ಲಿಯೇ ಆ ವಿಷಯವು ನಿನಗೆ ತಿಳಿಯಲಾರದು. ಅದಕ್ಕೆ ಗಂಡಾಗಿಯೇ ಹುಟ್ಟಿ ಬರಬೇಕು. ರೂಪದೊಂದಿಗೆ ಅಹಂಕಾರವನ್ನೂ ಅರ್ಥಮಾಡಿಕೊಳ್ಳಬೇಕಾಗುತ್ತದೆ."

"ಅಹಂಕಾರ ! ಬಲಹೀನರ ಮೇಲೆ ಅಧಿಕಾರ ನಡೆಸುವುದೇ ?"

ಕರ್ಣನು ನಕ್ಕು

"ದುರ್ಬಲರಾರು ? ದ್ರೌಪದಿಯೇ ? ಅಮ್ಮ , ಅವಳು ನಿನ್ನ ಸೊಸೆಯಾಗಿದ್ದರೂ ಅವಳ ಅಹಂಕಾರ, ಕ್ರೋಧ, ಸೌಕ್ಯಗಳ ಪರಿಚಯವು ನಿನಗಿಲ್ಲ, ದ್ರೌಪದಿಯು ಸಾತ್ವಿಕಳೇ ? ಅಸತ್ಯ," ಆಕಾಶದಲ್ಲಿ ಹೊಳೆಯುತ್ತಿರುವ ಸೂರ್ಯನನ್ನು ತೋರಿಸುತ್ತ "ಈ ಸೂರ್ಯನ ಪ್ರಕಾಶವು ಕೋಮಲವಾಗಿದೆ ಎಂದು ಹೇಳಿದಂತೆಯೇ, ಅವಳ ಮಾತಾಗುವುದು, ಅವಳ ಕೋಮಲತನದ ಅರಿವು ಕರ್ಣನಿಗೆ ಮಾತ್ರ ತಿಳಿದ ವಿಚಾರವಾಗಿದೆ."

"ಏನು ಮಾತನಾಡುತ್ತಿರುವೆ ?"

"ತಾಯೀ, ದ್ರೌಪದಿಯು ಸ್ವಯಂವರದಲ್ಲಿದ್ದಳೆಂಬುದು ನಿನಗೆ ತಿಳಿದ ವಿಷಯವಷ್ಟೆ ? ಮತ್ಸ್ಯಯಂತ್ರವನ್ನು ಭೇಧಿಸುವುದೇ ಸ್ವಯಂವರದ ನಿಯಮವಾಗಿತ್ತು. ಆಹ್ವಾನವನ್ನು ನಾನು ಸ್ವೀಕರಿಸಿದೆ. ಅತ್ಯಂತ ವಿಶ್ವಾಸದಿಂದ ಧನುಸ್ಸನ್ನೆತ್ತಿ ಹಿಡಿದಿದ್ದೆ. ಆಗ ಅವಳು ರಾಜಸಭೆಯಲ್ಲಿ ಏನು ಹೇಳಿದಳು ಎಂಬುದು ನಿನಗೆ ಗೊತ್ತಿದಿಯೇ ? ಇಂದಿಗೂ ಅವಳ ಆ ಮಾತುಗಳು ಕಾದ ಸೀಸದಂತೆ ನನ್ನ ಕಿವಿಗಳಲ್ಲಿ ಕುದಿಯುತ್ತಲಿವೆ !"

"ಅವಳು ಹೇಳಿದಳು—

ಕರ್ಣನು ಮುಖವು ಪಶ್ಚಿಮಾದ್ರಿಯತ್ತ ಸಾಗುತ್ತಿರುವ ಸೂರ್ಯದೇವನಂತೆ ಕೆಂಪು ಕೆಂಡದಂತಾಗಿತ್ತು.

"ಕಾಗೆಯು ರಾಜಹಂಸದತ್ತ ನೋಡಬಾರದು, ಸೂತಪುತ್ರನು ರಾಜಕನ್ಯೆಯು ಅಪೇಕ್ಷೆಯನ್ನು ಮಾಡಬಾರದು, ಹೀಗೆ ನುಡಿದ ಅವಳ ಮಾತುಗಳನ್ನು ಕೇಳಿ ಸಂತಾಪಗೊಂಡರೂ ಸಾವರಿಸಿಕೊಂಡು ನಾನು ಮರಳಿ ಬಂದೆ."

ಕುಂತಿಯು ಆತನಿಗೆ ಸಮಾಧಾನ ಹೇಳಬೇಕೆನ್ನುವದರೊಳಗಾಗಿ ಕ್ರೋಧಯುಕ್ತನಾದ ಕರ್ಣನು ಮತ್ತೆ ಮಾತನ್ನು ಮುಂದುವರಿಸಿದ.

"ಅವಳು ಇಷ್ಟಕ್ಕೇ ತೃಪ್ತಳಾಗಲಿಲ್ಲ. ರಾಜಸೂಯ ಯಾಗಕ್ಕಾಗಿ ನಾವೆಲ್ಲ ಅಮಂತ್ರಿತರಾಗಿ ಹೋಗಿದ್ದೆವು. ಸಾಲಾಗಿ ಭೋಜನಕ್ಕೆ ಕುಳಿತುಕೊಂಡಿದ್ದೆವು. ದ್ರೌಪದಿಯು ಬಡಿಸುತ್ತಾ ಬಂದಳು. ಆಕಸ್ಮಿಕವಾಗಿ ನನ್ನ ದೃಷ್ಟಿ ಅವಳ ಮೇಲೆ ಹರಿದಾಗ ಅವಳ ಸೆರಗು ಜಾರಿತು. ನನ್ನ ನೋಟದಲ್ಲಿ ವಾಸನೆಯ ಲವಲೇಶವೂ ಇರಲಿಲ್ಲ. ಆದರೆ ಸ್ವರೂಪ ಗರ್ವಿತೆಯಾದ

ಅವಳು ಆ ಸಂಧಿಯನ್ನು ಹಾಗೆಯೇ ಹೋಗಗೊಡಲಿಲ್ಲ. ತುಂಬಿದ ಭೋಜನ ಶಾಲೆಯಲ್ಲಿ ಅವಳು,

"ಯಾಚಕರಾದವರು ದಾನಿಗಳನ್ನು ತಲೆಯೆತ್ತಿ ನೋಡಬಾರದು ಎಂದು ಗುಡುಗಿದಳು."

ವಿಶಾಲವಾದ ತನ್ನ ಎದೆಯನ್ನು ತಟ್ಟಿಕೊಳ್ಳುತ್ತ ಕರ್ಣನು ಹೇಳಿದ.

"ಯಾವ ಕರ್ಣನ ದಾತೃತ್ವವು ತ್ರಿಲೋಕದಲ್ಲಿಯೇ ಖ್ಯಾತಿಯನ್ನು ಗಳಿಸಿದೆಯೋ ಅಂಥ ನನಗೆ ಈ ದ್ರೌಪದಿಯು ಯಾಚಕರು ದಾನಿಗಳನ್ನು ನೋಡಬಾರದೆಂದು ಹೂಂಕರಿಸಿದಳು. ಅವಳು ಯಾತಕ್ಕಾಗಿ ನನಗೆ ಈ ಅವಮಾನವನ್ನು ಮಾಡಿದಳು ? ಆಗ ಅವಳಿಗೆ ನಾನಾವ ತೊಂದರೆಯನ್ನಿತ್ತಿದ್ದೆ ? ನಾನು ಸೂತಕುಲದಲ್ಲಿ ಬೆಳೆದೆನು ಎಂದಲ್ಲದೆ ?"

"ಅದೇ ದ್ರೌಪದಿಯು ದಾಸಿಯಾಗಿ ಕೌರವರ ಸಭೆಯನ್ನು ಪ್ರವೇಶ ಮಾಡಿದಾಗ ನಾನು ಅವಳ ಲಾವಣ್ಯವನ್ನು ನೋಡುತ್ತಿರಲಿಲ್ಲ, ಅವಳ ಸ್ಥಿತಿಯ ಅರಿವೂ ನನಗಿರಲಿಲ್ಲ, ಆಗ ಕೇವಲ ಅಹಂಕಾರ ಹಾಗೂ ಅವಮರ್ಯಾದೆಗಳು ಮಾತ್ರ ತೋರಿಬರುತ್ತಿದ್ದವು. ಅಲ್ಲಿ ವಾಸನೆಯ ಲವಲೇಶವೂ ಇರಲಿಲ್ಲ. ಅವಳು ಬಳಸಿದ ಆ ಕಠೋರ ಶಬ್ದಗಳು ಮಾತ್ರ ನನ್ನನ್ನು ಪುನಃ ಪುನಃ ಎಚ್ಚರಿಸುತ್ತಿದ್ದವು. ನನ್ನ ಅಹಂಕಾರವು ಪ್ರೈವೆತ್ತಿ ಬಂದಾಗ ನಾನು ಆ ರೀತಿ ಆಜ್ಞೆಯನ್ನು ಮಾಡಿದೆ. ಸಾಮಾನ್ಯ ಸ್ತ್ರೀಯರ ಹೊರತಾಗಿ ಈ ರಾಜ ಸ್ತ್ರೀ ಬೇರೆಯಾಗಿರುವಳೋ ಹೇಗೆ ? ಎಂಬುದನ್ನು ನೋಡುವುದೇ ನನ್ನ ಉದ್ದೇಶವಾಗಿತ್ತು."

ತನ್ನ ಮಗನ ಇನ್ನೊಂದು ರೂಪವನ್ನು ಕಂಡು ತಬ್ಬಿಬ್ಬಾಗಿ ಕುಳಿತ ಕುಂತಿಯನ್ನು ನೋಡಿ ಕರ್ಣನು,

"ತಾಯೀ, ನನ್ನ ನಿನ್ನ ಸಂಭಂಡವು ಗೊತ್ತಿರದೆ ನನ್ನ ಅಹಂಕಾರವನ್ನು ಕೆರಳಿಸುವ ಪ್ರಯತ್ನವು ನಿನ್ನಿಂದ ನಡೆದ ಪಕ್ಷದಲ್ಲಿ ಅಥವಾ ದುರ್ದೈವದಿಂದ ನೀನು ರಾಜಸಭೆಗೆ ಬರುವಂತಾಗಿದ್ದಲ್ಲಿ ಆಗಲೂ ಪೌರುಷದ ಅಹಂಕಾರಕ್ಕೆ ವಶನಾಗಿ ನಾನು ಹೀಗೆಯೇ ಆಜ್ಞೆಯನ್ನು ಮಾಡುತ್ತಿದ್ದೆ. ಅಲ್ಲಿ ನಿನ್ನ ವಾರ್ಧಕ್ಯ ಹಾಗೂ ಸ್ತ್ರೀತ್ವದ ವಿಚಾರವನ್ನೂ ನಾನು ಮಾಡುತ್ತಿರಲಿಲ್ಲ.

"ದ್ರೌಪದಿಯ ವಿಷಯದಲ್ಲಿ ನನ್ನ ಮನಸ್ಸು ವಿಚಲಿತವಾಗಿದ್ದಲ್ಲಿ ದುರ್ಯೋಧನನ ಮಾತಿನಂತೆ ನನ್ನ ಅನೇಕ ಜನ ದಾಸಿಯರಲ್ಲಿ ಅವಳೂ ಒಬ್ಬಳಾಗಿರುತ್ತಿರಲಿಲ್ಲವೆ ? ವಾಸನೆಗಳಿಗೂ ಒಂದು ಮರ್ಯಾದೆ ಇರುತ್ತದೆ. ಅವುಗಳಿಗೆ ಕೇವಲ ತನ್ನ ಉದ್ದೇಶದ ಬಗ್ಗೆ ದೃಢತೆ ಇರುತ್ತದೆ. ಕೃಷ್ಣನು ಮಾಡಿಕೊಂಡ ವಿನಂತಿಯ ಮೇರೆಗೆ ನಾನು ಅವಳ ಅರನೆಯ ಪತಿಯಾಗಬಹುದಿತ್ತು. ನನ್ನ ಕೃತ್ಯಗಳಿಗಾಗಿ ನೀನು ಕೇವಲ ನನ್ನನ್ನೇ ದೂಷಿಸಬೇಡ. ದೋಷವನ್ನೀಯುವದೇ ನಿನ್ನ ಉದ್ದೇಶವಾಗಿದ್ದಲ್ಲಿ ಅದು ಮೊದಲು ನಿನ್ನ ಹಿರಿಯ ಮಗನಾದ ಯುಧಿಷ್ಠಿರನಿಗೆ ಸಲ್ಲುತ್ತದೆ. ಅಂಥತ್ವದ ಧರ್ಮಬುದ್ಧಿಯೂ ಪರಕೀಯರನ್ನಾಗಿ ಮಾಡುತ್ತದೆಂಬುದನ್ನು ಅವನಿಗೆ ತಿಳಿಸಿ ಹೇಳು. ಹಾಗಿಲ್ಲದಿದ್ದರೆ ಏಕವಸ್ತ್ರಳಾದ. ರಜಸ್ವಲೆಯಾದ ದ್ರೌಪದಿಯನ್ನು ಆತ ರಾಜಸಭೆಗೆ ಬರುವಂತೆ ಆಗ್ರಹ ಮಾಡುತ್ತಿರಲಿಲ್ಲ."

ಕುಂತಿಯು ಕರ್ಣನತ್ತ ನೋಡಿದಳು. ಅಭಿಮಾನಪೂರಿತವಾದ ಆತನ ಆವೇಶವನ್ನು ನೋಡಿ ಅವಳಿಗೆ ಆಶ್ಚರ್ಯವೆನಿಸಿತು. ಸೂಕ್ಷ್ಮವಾದ ನಗುವಿನ ಛಾಯೆ ಅವಳ ಮುಖದಲ್ಲಿ ಕಾಣಿಸಿಕೊಂಡಿತು. ಕರ್ಣನು ಅದನ್ನು ಗುರುತಿಸಿದುದನ್ನು ಕಂಡಾಗ ಕುಂತಿಯು,

"ಕರ್ಣಾ, ನಾನು ನಿನಗೆ ದೋಷವನ್ನೀಯಲಾರೆ, ಆದರೂ ನೀನು ದ್ರೌಪದಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ. ಅವಳು ಹೀಗೇಕೆ ನಡೆದುಕೊಂಡಳೆಂಬುದೂ ನಿನಗೆ ಅರ್ಥವಾಗುವುದಿಲ್ಲ. ಅದಕ್ಕೆ ಕಾರಣ ನೀನು ಪುರುಷನೆಂಬುದು. ಸ್ತ್ರೀಯರ ಮತ್ಸರವೂ ಹೇಗಿರುತ್ತದೆಂಬುದನ್ನು ತಿಳಿಯಲು ಹೇಗೆ ಸಾಧ್ಯ ? ಸಂಯಮ ಹಾಗೂ ದ್ವೇಷ ಇವು ಒಂದೇ ಕಡೆಯಲ್ಲಿ ಹೇಗೆ ಒಕ್ಕೂಡಲು ಸಾಧ್ಯ ? ಸೂರ್ಯ-ಚಂದ್ರರಿಬ್ಬರೂ ಆಕಾಶದಲ್ಲಿ ಒಟ್ಟಾಗಿರಲಾರರು, ಒಂದು ವೇಳೆ ಹಾಗಿದ್ದರೂ ಅವರಿಬ್ಬರಲ್ಲಿ ಒಬ್ಬರ ತೇಜವು ಹೀನವಾಗಲೇಬೇಕು. ಕರ್ಣಾ ನಾನು ಇನ್ನು ಬರುವೆ."

ಕರ್ಣನು ಸುತ್ತಲೂ ನೋಡಿದ. ನಾಲ್ಕು ದಿಕ್ಕಿನಲ್ಲಿ ಬಿಸಿಲಿನ ತಾಪವು ಆವರಿಸಿಕೊಂಡಿತ್ತು.

"ತಾಯೀ, ಇಂಥ ಕಡು ಬಿಸಿಲಿನಲ್ಲಿ ಒಬ್ಬಳೇ ಹೋಗುವುದು ಬೇಡ, ವಿಚಾರ ಮಾಡಿದಲ್ಲಿ ಮಕ್ಕಳು ತಾಯಿಗೆ ಛತ್ರವಿದ್ದಂತೆ, ಆದರೂ ನಿನ್ನನ್ನು ನೆರಳಿನಲ್ಲಿ ಸಾಗಿಸಿಕೊಂಡು ಹೊಗುವ ಧೈರ್ಯವು ಮಾತ್ರ ನನ್ನಲ್ಲಿಲ್ಲ. ನಿನಗೆ ಕೊಟ್ಟ ವಚನದಿಂದ ನಾನು ಎಲ್ಲ ಬಲವನ್ನೂ ಕಳೆದುಕೊಂಡಿದ್ದೇನೆ. ಅಮ್ಮ, ಈ ಸೂರ್ಯದಾಹವನ್ನು ಕಡಿಮೆ ಮಾಡಲು ಕಪ್ಪುಮೋಡ ಬೇಕೆನಿಸುತ್ತದೆ. ಜನ್ಮದಾತೃವಾದ ಭೂಮಿಯ ತೃಣಾರ್ಥಭಾವವನ್ನು ಕಂಡು ಮೇಘಗಳು ತಮ್ಮ ಸರ್ವಸ್ವವನ್ನೆಲ್ಲ ಅದಕ್ಕಾಗಿ ಧಾರೆಯೆರೆಯುತ್ತವೆ. ಆಗ ಅದರ ಮಾಲಿನ್ಯವು ಕಳೆದು ಹೋಗಿ ಅದು ಶುಭ್ರದವಳದಂತಾಗುತ್ತದೆ. ಪುಣ್ಯ ಸಂಚಯದಿಂದ ವಿರುದ್ಧವಾದ ಆ ಮೇಘಕ್ಕೆ ಬಹುದಿನಗಳ ಕಾಲ ಸೂರ್ಯದಾಹವನ್ನು ಸಹಿಸಿಕೊಳ್ಳುವ ಶಕ್ತಿಯು ಇರುವುದಿಲ್ಲ. ನನ್ನ ಜೀವನವೂ ಹಾಗೆಯೇ ಆಗಿದೆ. ಯಾವ ನನ್ನ ಉತ್ತರೀಯವನ್ನು ಆಧಾರವಾಗಿ ಪಡೆದಿರುವೆಯೋ ಅದೇ ಉತ್ತರೀಯವನ್ನು ನೀನು ಸ್ವರ್ಗಕ್ಕೆ ಹೋಗುವಾಗಲೂ ತೆಗೆದುಕೊಂಡು ಹೋಗು, ನನ್ನ ನೆನಪಿಗಾಗಿ ಅದನ್ನಿಟ್ಟುಕೋ, ಯಾವಾಗಲಾದರೂ ನನ್ನ ಅವಶ್ಯಕತೆ ತೋರಿಬಂದಲ್ಲಿ ಈ ವಸ್ತ್ರವನ್ನು ಕೊಟ್ಟುಕಳಿಸು. ನಾನಿತ್ತ ವಚನದೊಂದಿಗೆ ಆಗ ನಿನ್ನ ಸ್ಮರಣೆಯು ಬರುತ್ತದೆ, ನೀನೆಲ್ಲಿದ್ದರೂ ಆಗ ನಾನು ನಿನ್ನ ದರ್ಶನಕ್ಕಾಗಿ ಬರುವೆ."

ಕರ್ಣನು ತನ್ನ ಉತ್ತರೀಯವನ್ನು ಕುಂತಿಯ ಕೈಗಿಟ್ಟು ತಲೆಬಾಗಿ ಅವಳಿಗೆ ನಮಸ್ಕಾರ ಮಾಡಿದ. ಅವಳ ಪಾದ ಕಮಲಗಳನ್ನು ಸ್ಪರ್ಶಮಾಡಿ ಮೇಲೇಳುತ್ತಲ್ಲಿದ್ದ ಅವನನ್ನು ಕುಂತಿ ಪುನಃ ಮತ್ತೊಮ್ಮೆ ಅಪ್ಪಿಕೊಂಡಳು ಆಗ ಮಾತ್ರ ಅವಳಿಗೆ ದುಃಖವನ್ನು ತಡೆದುಕೊಳ್ಳುವದಾಗಲಿಲ್ಲ. ಕರ್ಣನು ತನ್ನ ಮನಸ್ಸನ್ನು ಸಮಾಧಾನ ಮಾಡಿಕೊಳ್ಳುತ್ತ ಹೇಳಿದ,

"ತಾಯೀ, ಚಿಂತಿಸಬೇಡ, ನಿನ್ನ ಮನಸ್ಸಿಗೆ ಘಾಸಿಯಾಗುವಂತಹ ಯಾವ ಕೆಲಸವನ್ನೂ ಮಾಡುವುದಿಲ್ಲ. ನನ್ನ ವಚನಗಳು ನಿನಗೆ ಆನಂದವನ್ನು ಉಂಟುಮಾಡಿಲ್ಲವೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ನೀನು ನನ್ನ ಸಲುವಾಗಿ ಒಂದು ಕೆಲಸವನ್ನು ಮಾತ್ರ ಮಾಡು, ಯಾವಾಗ ನಿನ್ನ ಮಗನ ಪ್ರವಾಸವು ಪೂರ್ಣಗೊಳ್ಳುತ್ತದೆಯೋ, ಯಾವಾಗ ಆತನು ತನ್ನ ಪ್ರವಾಸದ ಕೊನೆಯ ಭಾಗವೆನಿಸಿದ ಸಾಗರವನ್ನು ಕೂಡಿದ ಎಂಬ ವಾರ್ತೆಯು

ನಿನಗೆ ತಿಳಿದುಬರುತ್ತದೆಯೋ, ಆಗ ಮಾತ್ರ ನೀನು ನನಗಾಗಿ ಎರಡು ಹನಿ ಕಣ್ಣೀರನ್ನು ಸುರಿಸು, ಅದೂ ಸಮಾಧಾನ ಚಿತ್ತದಿಂದ........"

ಮುಂದೆ ಕರ್ಣನಿಂದ ಶಬ್ದಗಳೇ ಹೊರಬರದಂತಾದವು. ಆದರೂ ಬಹು ಕಷ್ಟದಿಂದ ಹೇಳಿದ,

"ಕಾರಣ....ಆ ಸಮಯದಲ್ಲಿ ಈ ಭೂಮಿಯ ಮೇಲೆ ದುರ್ದೈವಿಗಳಾಗಿ ಅತಿ ಕಡಿಮೆಯ ಅಶ್ರುಗಳು ಕಾಣಸಿಗುತ್ತದೆ....ವೃಷಾಲಿ........ದುರ್ಯೋಧನ ಇವರುಗಳು ನನ್ನ ಮೃತ್ಯುವಿನ ನಂತರ ಧಾರಾಕಾರವಾದ ಪ್ರವಾಹವನ್ನೇ ಹರಿಸಬಹುದು. ಆ ಕಣ್ಣೀರಿನಲ್ಲಿ ಸ್ವಾರ್ಥದ ಸ್ಪರ್ಶವಿರುತ್ತದೆ. ಆದರೆ ನಿನ್ನ ಕಣ್ಣೀರು ಮಾತ್ರ, ನಾನು ಸ್ವರ್ಗದ ಹಾದಿಯನ್ನು ತುಳಿಯುವಾಗ ನನಗೆ ಮಹಾಬಲವನ್ನೀಯುತ್ತದೆ."

ಕುಂತಿಗೆ ಏನೂ ಹೇಳಲು ಬರುವಂತಿರಲಿಲ್ಲ. ಅವಳು ತನ್ನ ದುಃಖದ ಭಾರವನ್ನು ಅದುಮಿಕೊಳ್ಳಲು ಕರ್ಣನಿತ್ತ ಉತ್ತರೀಯದ ಸಹಾಯವನ್ನು ಪಡೆದುಕೊಂಡು ಹೊರಟುಬಿಟ್ಟಳು.

## 44

ಕರ್ಣನಿಂದ ಕುಂತಿಯು ದೂರ, ಬಹುದೂರ ಹೋಗುತ್ತಲಿದ್ದಳು. ಅವನಿಂದ ಕೊಡಲ್ಪಟ್ಟ ನೀಲ ಉತ್ತರೀಯವನ್ನು ಅವಳು ತನ್ನ ಬಲಗೈಯಲ್ಲಿ ಹಿಡಿದುಕೊಂಡಿದ್ದಳು, ಶ್ವೇತವಸ್ತ್ರಧಾರಿಯಾದ ಅವಳ ಆಕೃತಿಯು ದೂರ ಸರಿಯುತ್ತಿರುವುದನ್ನೇ ಕರ್ಣನು ಏಕಾಗ್ರತೆಯಿಂದ ನೋಡುತ್ತಲಿದ್ದ. ಸುಡುತ್ತಿರುವ ಬಿಸಿಲಿನ ಪರಿವೆಯೂ ಆತನಿಗಿರಲಿಲ್ಲ. ಕುಂತಿಯ ರೂಪದ ವಿನಃ ಬೇರಾವುದೂ ಆತನಿಗೆ ಕಾಣಿಸುತ್ತಿರಲಿಲ್ಲ

ಬಾಲ್ಯದಲ್ಲಿ ಪಾಂಡುಪುತ್ರರೊಂದಿಗೆ ಆಟವಾಡಲು ಹೋಗುತ್ತಿದ್ದ ಕರ್ಣನನ್ನು ಅವಳು ಅನೇಕ ಸಲ ಸಮೀಪಕ್ಕೆ ಬರಮಾಡಿಕೊಂಡಿದ್ದಳು. ಯಾರೂ ಇಲ್ಲದಾಗ ಮುದ್ದಾಡುತ್ತಿದ್ದಳು. ಅಂತಃಕರಣದ ಸ್ಪರ್ಶದಿಂದ ಕರ್ಣನು ಮೋಹಿತನಾಗುತ್ತಿದ್ದ. ಪಾಂಡವರ ರಾಜಸೂಯ ಯಾಗಕ್ಕೆ ಹೋದಾಗ ದುರ್ಯೋಧನನನ್ನು ಕರೆದು ಆಶೀರ್ವದಿಸಿದ್ದಳು. ಆ ಸಮಯದಲ್ಲಿ

ಪಕ್ಕದಲ್ಲಿಯೇ ಇದ್ದ ಕರ್ಣನನ್ನು ಆಶೀರ್ವದಿಸುವಾಗ ಅವಳು ಬಹು ವಿಚಲಿತ ಳಾಗಿದ್ದಳು, ದ್ರೌಪದಿಯನ್ನು ಗೆದ್ದುಕೊಂಡು ಹೋದ ಪಾಂಡವರು ಕರ್ಣನ ಅವಸ್ಥೆಯನ್ನು ಕುರಿತು ವಿವರವಾದ ವರದಿಯನ್ನೊಪ್ಪಿಸಿದಾಗ ಅವಳ ಅಂತರಾತ್ಮವು ಹೇಗೆ ತಳಮಳಗೊಂಡಿತೆಂಬುದನ್ನಾರು ಬಲ್ಲರು ! ಶಸ್ತ್ರ ವಿದ್ಯಾ ಕಾಲದಲ್ಲಿ ಕರ್ಣನಿಗಾದ ಅವಮಾನವನ್ನು ಕೇಳಿ ಅವಳು ಅದನ್ನು ಹೇಗೆ ಸಹಿಸಿ ಕೊಂಡಿರಬಹುದು ! ಯಾವಾಗಲೂ ಕರ್ಣನ ನಿಂದೆಯನ್ನು ಕೇಳೀ ಕೇಳೀ ಅವಳ ಅಂತರಾತ್ಮವು ಎಷ್ಟು ಘಾಸಿಗೊಂಡಿರಬಹುದು !

ಈ ಎಲ್ಲ ವಿಚಾರಗಳು ಬಂದಾಗ ಕರ್ಣನು ತುಂಬ ವ್ಯಥಿತನಾದ. ಅವನಿ ಗರಿವಿಲ್ಲದಂತೆ ಆತನ ಎಡಗೈ ಗಲ್ಲದ ಮೇಲಾಡಿತು. ಕುಂತಿಯು ಆತನನ್ನಪ್ಪಿ ಕೊಂಡಾಗ ಅವಳ ದೇಹಕ್ಕೆ ಆ ಭಾಗದ ಸ್ಪರ್ಶವಾಗಿತ್ತು. ಮತ್ತೊಮ್ಮೆ ಆ ತಾಯಿ ಹೋಗುವುದನ್ನು ನೋಡಿದಾಗ ಅವಳು ನದಿಯ ದಂಡೆಯನ್ನು ಸಮೀಪಿಸಿದ್ದಳು.

ಇಂದು ಏಕೆ ಈ ತಾಯಿಯ ದರ್ಶನದ ಯೋಗವು ಘಟಿಸಿತು ! ಇಂದಿನ ವರೆಗೂ ಈ ರಹಸ್ಯವನ್ನು ತನ್ನ ಹೊಟ್ಟೆಯಲ್ಲಿ ಹುದುಗಿಟ್ಟುಕೊಂಡ ಈ ಮಾತೆಗೆ ಇಂದೇ ಏಕೆ ಇಂಥ ಪ್ರೇರಣೆಯಾಯಿತು ? ತನ್ನ ಮರ್ಯಾದೆಯನ್ನು ಕಾಪಾಡಿಕೊಂಡು ಬರುವುದರಲ್ಲಿ ಅವಳು ಸಾಕಷ್ಟು ದುಃಖವನ್ನು ಸಹಿಸಿ ದ್ದಾಳೆ. ಹೀಗಿದ್ದರೂ ಇಂದೇ ಏಕೆ ಆ ಸಂಯಮವು ಸಡಿಲಾಯಿತು. ಪುತ್ರಪ್ರೇಮಕ್ಕಾಗಿಯೇ ಅವಳು ಈ ಎಲ್ಲ ಬಂಧನಗಳನ್ನು ಕಿತ್ತೊಗೆದಿರ ಬಹುದೇ !

ಕರ್ಣನ ಮುಖಭಾವವೇ ಬದಲಾಯಿತು.

ಪುತ್ರ ಪ್ರೇಮಕ್ಕಾಗಿಯೇ ಆದಲ್ಲಿ ಅದರಲ್ಲಿ ನನ್ನ ಸಮಾವೇಶವೇನೂ ಇಲ್ಲ. ನಾನೊಬ್ಬ ನಿಮಿತ್ತ ಮಾತ್ರ, ಈ ವಿಚಾರಗಳಿಂದ ಕರ್ಣನ ಮನಸ್ಸು ಖಿನ್ನವಾಯಿತು. ಕುಂತಿಯು ಈಗ ನೌಕಾಶ್ರಯವನ್ನು ಹೊಂದಿದ್ದಳು. ಆ ನೌಕೆಯೂ ದಂಡೆಯನ್ನು ಬಿಟ್ಟು ಮುಂದೆ ಸಾಗಿತ್ತು.

ಪುತ್ರಹೀನಳಾಗಿದ್ದ ರಾಧಾ ತಾಯಿಗೆ ಪ್ರವಾಹಿತನಾಗಿ ಕರ್ಣನು ದೊರ ಕಿದ, ಅನಂತರವೇ ಅವಳಲ್ಲಿ ಮಾತೃತ್ವವು ಜಾಗೃತವಾಯಿತು. ಇದೆಲ್ಲವೂ ಕರ್ಣನ ಕಾಲ್ಗುಣದಿಂದ ಎಂದು ಆ ದಂಪತಿಗಳಿಬ್ಬರೂ ಅಂದುಕೊಳ್ಳುತ್ತಿದ್ದರು.

ಇಂದು ಕುಂತಿದೇವಿಯೂ ತನ್ನ ಪರಿಚಯ ಮಾಡಿಕೊಟ್ಟಳು. ಹಾಗೆಯೇ ತನ್ನ ಮಕ್ಕಳನ್ನೂ ಅವಳು ರಕ್ಷಿಸಿಕೊಂಡಳು. ಇಬ್ಬರ ಮನೆಗಳೂ ಸಂಸದ್ಭರಿತವಾದವು. ಆದರೆ ಕರ್ಣನಿಗೆ ಮಾತ್ರ ಮಾತೆಯ ದರ್ಶನವಾದಾಗಲೂ ಆತನು ಪರಕೀಯನಾಗಿದ್ದ. ಏಕಾಕಿಯಾಗಿದ್ದ. ಮೃತ್ಯುವಿನ ವಿನಃ ಕರ್ಣನಿಗೆ ಯಾರೂ ನನ್ನವರೆಂದು ಹೇಳುವಂತಿರಲಿಲ್ಲ.

ನಾನಾರು ? ಎಂಬ ವಿಚಾರವನ್ನು ಕುರಿತು ಕರ್ಣನ ಮನಸ್ಸು ಯಾವಾಗಲೂ ಕೊರೆಯುತ್ತಿತ್ತು. ಆ ಒಂದು ಶೋಧನೆಯಲ್ಲಿಯೇ ಜೀವನದ ಪ್ರತಿಷ್ಠೆ, ಧ್ಯೇಯ, ಇವುಗಳನ್ನೆಲ್ಲ ಒಂದುಗೂಡಿಸಿದಂತೆನಿಸಿದರೂ ಒಂದುಗೂಡಿದ ಆ ಗಂಟು ಸಡಿಲಿಸಿದಾಗ ಮಾತ್ರ ಜೀವನದ ಸರ್ವಸ್ವವೆಲ್ಲವನ್ನೂ ಕಳೆದುಕೊಂಡವನಂತೆ, ಆಧಾರರಹಿತನಾದವನಂತೆ, ಆತನಿಗೆ ಭಾಸವಾಗತೊಡಗಿತು. ಆತ್ಮಶೋಧನೆಯ ಮಾರ್ಗವು ಸಹ ಇದೇ ಆಗಿರಬಹುದೇ ?

ಕೃಷ್ಣನು ಜನ್ಮರಹಸ್ಯವನ್ನು ತಿಳಿಸಿದ. ಆಗ ಈ ತರಹದ ಜೀವನದ ವಿಫಲತೆಯ ಅರಿವು ಅವನಿಗಾಗಿರಲಿಲ್ಲ. ಶತ್ರುಗಳ ಮೇಲೆ ಪ್ರಹಾರ ಮಾಡಬೇಕೆನ್ನುವ ಈರ್ಷ್ಯೆಯು ಹೊರಟು ಹೋಗಿದರೂ ಕರ್ಣನಲ್ಲಡಕವಾಗಿದ್ದ ಪೌರುಷ್ಯ, ಚೈತನ್ಯ, ನಿರ್ಭಯತೆ, ಸ್ವಾಭಿಮಾನ ಇವೇ ಮೊದಲಾದವುಗಳು ಹಾಗೆಯೇ ಉಳಿದುಕೊಂಡು ಬಂದಿದ್ದವು. ಕೃಷ್ಣನು ಕೊಡಬೇಕೆಂದಿದ್ದ ರಾಜ್ಯ, ಮಾನ, ಸನ್ಮಾನ, ಹಾಗೂ ಅರಿವು ಮಾಡಿಕೊಟ್ಟ ಕ್ಷತ್ರಿಯತ್ವ ಇವೆಲ್ಲವುಗಳನ್ನೂ ಕರ್ಣ ಸಹಜವಾಗಿಯೇ ದೂರ ಸರಿಸಿದ್ದ. ಆದರೆ ಕುಂತಿಯ ದರ್ಶನ ಮಾತ್ರದಿಂದ ಆ ಎಲ್ಲ ಬಲವೂ ಸೋರಿಹೋದಂತೆನಿಸಿತು. ಆತ್ಮಸಮರ್ಪಣೆಯ ಸಾಮರ್ಥ್ಯವನ್ನೀಯುವ ಮಾತೃತ್ವದ ದರ್ಶನವನ್ನು ಯಾರೂ ಪಡೆದುಕೊಂಡಿಲ್ಲವೆ ?

ಮಾತೃದರ್ಶನದಿಂದಾಗಿ ಕರ್ಣನಿಗೆ ತೇಜಸ್ವಿಯಾದ ಜೀವನ ಪಡೆದಂತೆನಿಸಿತು. ಅವನ ಪೌರುಷ್ಯ, ಚೈತನ್ಯ ಹಾಗೂ ನಿರ್ಭಯತೆಗಳಿಗೆ ಈಗ ಒಂದೇ ಒಂದು ಆಹ್ವಾನವು ಉಳಿದುಕೊಂಡಿತ್ತು. ಅದುವೇ ಮೃತ್ಯು ! ಅದಕ್ಕಾಗಿ ಬರಲಿರುವ ಪರಾಜಯ, ಮಾನಹಾನಿ ಮೊದಲಾದುವುಗಳನ್ನು ಸ್ವೀಕರಿಸುವುದು ಅನಿವಾರ್ಯವೆಂದೆನ್ನಿಸತೊಡಗಿತು. ಅದರಿಂದ ಕೃಷ್ಣನಿಗೆ ಸಮಾಧಾನವಾಗಬಹುದು, ಪಾಂಡವರು ಸುರಕ್ಷಿತರಾಗಿರಬಹುದು, ಕುಂತೀ ಮಾತೆಯ ಜೀವನ

ಸಾರ್ಥಕವೆಂದೆನಿಸಬಹುದು. ರಣಾಂಗಣದಲ್ಲಿಯ ಮೃತ್ಯುವನ್ನು ಕಂಡು ದುರ್ಯೋಧನನಿಗೆ ಮಿತ್ರಪ್ರೇಮದ ಅರಿವಾಗಬಹುದು. ಆ ಕೃತಾರ್ಥ ಮೃತ್ಯುವನ್ನು ಸಂಧಿಸುವುದರ ವಿನಃ ಈಗ ಕರ್ಣನ ಕೈಯಲ್ಲಿ ಬೇರಾವುದೂ ಇರಲಿಲ್ಲ. ಕರ್ಣನು ಯಾರೊಬ್ಬರ ಸೊತ್ತಲ್ಲ, ಆಗಿರಲೂ ಇಲ್ಲ. ಅವನು ಏಕಾಕಿ, ಸೂರ್ಯಪುತ್ರನ ಪ್ರಕೃತಿಯೇ ಅದು.

ತನ್ನ ವಿಚಾರಗಳಿಂದ ಕರ್ಣನು ಸಾವರಿಸಿಕೊಂಡ. ಅಕ್ಕಪಕ್ಕದಲ್ಲಿ ನೋಡಿದ. ನದಿಯ ಪ್ರವಾಹದಲ್ಲಿದ್ದ ನೌಕೆಯು ಈಗ ಆಚೆಯ ದಡವನ್ನು ಸಮೀಪಿಸುತ್ತಲಿತ್ತು. ತಾನು ನಿಂತಲ್ಲಿಯೇ ಆ ನೌಕೆಯನ್ನು ನೋಡುತ್ತಲಿದ್ದ.

ಜೀವನವೂ ಈ ನೌಕೆಯಂತೆಯೇ ಅಲ್ಲವೆ? ಜೀವನ ಪ್ರವಾಹ ದಲ್ಲಿಯೂ ಎಂದಾದರೊಮ್ಮೆ ಇಂಥ ನೌಕೆಯು ಅಗತ್ಯವೆನಿಸುವುದಿಲ್ಲವೆ? ಋಣಾನುಬಂಧವೆಂಬ ಹುಟ್ಟನ್ನೇ ಈ ನೌಕೆಯಲ್ಲಿ ಜೋಡಿಸಿ ಉಪಯೋಗಿಸ ಲಾಗುವುದಿಲ್ಲವೆ? ಈ ಹುಟ್ಟನ್ನು ಬಳಸಿದಾಗಲೇ ಪ್ರವಾಹದ ಆಚೆ ದಡ ವನ್ನು ಮುಟ್ಟಬಹುದಲ್ಲವೆ? ಅನುಕೂಲವಾಗುವ ದೈವಸಂಕಲ್ಪದಂತೆ ಕೆಲವು ಸಲ ಗಾಳಿಯೂ ನಮ್ಮನ್ನು ಇನ್ನೊಂದು ದಂಡೆಗೆ ತಲುಪಿಸಬಹುದು. ಹಾಗಾಗದೇ ಹೋದಲ್ಲಿ ನಾವು ಪ್ರವಾಹಕ್ಕೆ ಸಿಲುಕಬಹುದು. ಪ್ರವಾಹ ಸರ್ವೇತರೆಂದೂ ಕರೆಸಿಕೊಳ್ಳಬಹುದು. ತೆರೆಗಳೊಂದಿಗೆ ಹೋರಾಡುವುದರ ವಿನಃ ನನಗೆ ಅನ್ಯ ಮಾರ್ಗವೇ ಇಲ್ಲ ಎಂದೆನ್ನಿಸುತ್ತದೆ.

ಕರ್ಣನು ತನ್ನ ವಿಚಾರಗಳಿಂದ ಎಚ್ಚೆತ್ತುಕೊಂಡು ರಥದತ್ತ ಸಾಗಿದ. ಬಿಸಿಲಿನ ತಾಪದಿಂದಾಗಿ ಶರೀರವೆಲ್ಲ ಬೆಂಡಾಗಿ ಹೋಗಿತ್ತು. ಭೂಮಿಯೂ ಸಹ ಬಿಸೀ ನಿಶ್ವಾಸ ಬಿಡುತ್ತಿರುವಂತೆ ಅದರ ಕಾವು ಮೇಲೆದ್ದು ಬರುತ್ತಿತ್ತು. ಆಗೊಮ್ಮೆ ಈಗೊಮ್ಮೆ ಬೀಸುವ ಪ್ರವಾಹದ ಮೇಲಿನ ಗಾಳಿಯಿಂದ ಮತ್ತಷ್ಟು ಕಸಿವಿಸಿಯಾದಂತಾಗುತ್ತಿತ್ತು. ರಥವನ್ನು ಸಮೀಪಿಸಿದಾಗ ಕರ್ಣನಿಗೆ ಒಂದೇ ಸಲ ತಂಪನ್ನೆರಚಿದಂತೆನಿಸಿತು. ಕುದುರೆಗಳ ಕಡಿವಾಣಗಳನ್ನು ಕೈಗೆತ್ತಿಕೊಂಡ ನಂತರ ಆ ಶೀತಲ ಛಾಯೆಯೂ ಅಸಹ್ಯವೆನಿಸತೊಡಗಿತು. ಅತೀ ವೇಗದಿಂದ ಆತನ ರಥವು ರಾಜಗೃಹದತ್ತ ಓಡಲಾರಂಭಿಸಿತು.

ಕರ್ಣನು ಮನೆಯಲ್ಲಿ ಕಾಲಿಡುತ್ತಿದ್ದಂತೆ ವೃಷಾಲಿಯು ಆತನ ಸಮ್ಮುಖಕ್ಕೆ ಬಂದು ವಿಚಾರಿಸಿದಳು.

"ಇಂದು ತುಂಬ ಹೊತ್ತಾಯಿತಲ್ಲ ?"

"ಹೌದು" ಎಂದು ನುಡಿದ ಕರ್ಣನು, "ವೃತುಂಜಯು, ವೃಷಸೇನ ಯಾರೂ ಕಾಣುವದೇ ಇಲ್ಲವಲ್ಲ ?"

"ಅವರೆಲ್ಲ ಶಸ್ತ್ರಾಗಾರಕ್ಕೆ ಹೋಗಿದ್ದಾರೆ. ತಮ್ಮ ತಮ್ಮ ಶಸ್ತ್ರಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಅವರಿಗೆ ತಮ್ಮ ಯುದ್ಧಾಸ್ತ್ರಗಳ ವಿನಃ ಬೇರೆ ಯಾವುದರ ಯೋಚನೆಯೂ ಇಲ್ಲ. ಅವುಗಳನ್ನು ಆಭರಣಗಳೆಂದೇ ಭಾವಿಸಿದ್ದಾರೆ."

"ಅದು ತುಂಬ ಸತ್ಯವಾದ ಮಾತು. ವಸೂ ! ವೀರರಿಗೆ ಶಸ್ತ್ರಾಸ್ತ್ರಗಳೇ ನಿಜವಾದ ಆಭರಣಗಳು."

"ಆದರೆ, ನೀವು ಇಂದು ಅದೇಕೋ ತುಂಬ ವೇಳೆ ಮಾಡಿದಿರಿ."

ಕರ್ಣನ ಮುಖದಲ್ಲಿ ನಗು ಕಾಣಿಸಿಕೊಂಡಿತು. ಆತನ ಮುಂದೆ ಕುಂತೀ ಮಾತೆಯೇ ಬಂದು ನಿಂತಂತೆನಿಸಿತು.

"ಇಂದು ಪರಮೇಶ್ವರನ ದರ್ಶನವಾಯಿತು !"

"ನಿಜವೇ ?"

"ನಿಜ."

"ಹಾಗಾದರೆ ಆ ಪರಮೇಶ್ವರನು ನಿಮಗೆ ಏನನ್ನು ದಯಪಾಲಿಸಿದ ?"

"ಯಾವುದನ್ನೂ ಕೊಡಲಿಲ್ಲ, ಕೊಟ್ಟದ್ದು ಯಾವುದೂ ಇಲ್ಲ. ಇನ್ನೂ ಏನಾದರೂ ಅಲ್ಪ ಸ್ವಲ್ಪ ಉಳಿದುಕೊಂಡಿದ್ದಲ್ಲಿ ಅದೆಲ್ಲವನ್ನೂ ಆತ ಮರಳಿ ಪಡೆದುಕೊಂಡು ಹೋದ."

"ಹಾಗಾದರೆ ಅವನೆಂಥ ಪರಮೇಶ್ವರ ! ಭಗವಂತನು ದಯಪಾಲಿಸುತ್ತಾನೆ. ಆದರೆ ಅದನ್ನೆಂದಿಗೂ ಕಿತ್ತುಕೊಳ್ಳುವುದಿಲ್ಲ" ವೃಷಾಲಿಯು ನುಡಿದಳು.

"ಹಾಗಲ್ಲ ವೃಷಾಲೀ, ಭಗವಂತನ ಕೊಡುಗೆಯಿಂದಲೇ ಜೀವನವು ಸಮೃದ್ಧಿ ಹೊಂದಲಾರದು. ಅಂಥ ವಿಚಾರಗಳೂ ಯೋಗ್ಯವಲ್ಲ. ಸಾಮಾನ್ಯರ ಜೀವನದಲ್ಲಿ ದೈವಕೃಪೆ ಅಲ್ಪವಾದರೂ ಅದು ಅವರ ಜೀವನಕ್ಕೆ ಸಾರ್ಥಕ್ಯವನ್ನು ತಂದುಕೊಡುವಂತಹದು. ಈ ಮಾತು ಸತ್ಯವಾದರೂ ಈ ಭೂಮಿಯ ಮೇಲಿರುವ ಕೆಲವು ಅಭಾಗಿಗಳನ್ನು ಹುಡುಕಿಕೊಂಡು ದೇವನೇ

ಆತನಲ್ಲಿ ಬೇಡಲು ಬರುತ್ತಾನೆ. ಆದೂ ತಾನು ಬೇಡುವದನ್ನು ಆತ ತನ್ನ ಹಕ್ಕೆಂದು ಕೇಳಿ ತೆಗೆದುಕೊಳ್ಳುತ್ತಾನೆ. ಇದರಲ್ಲಿ ಪರಿಶುದ್ಧತೆಯು ಅಡಕವಾಗಿರುತ್ತದೆ, ಇಂದು ನಾನು ಜೀವನ ಸಾಫಲ್ಯವಾದುದರ ಅನುಭವವನ್ನು ಹೊಂದಿದ್ದೇನೆ. ಎಲ್ಲ ಭಾರಗಳೂ ಕಡಿಮೆಯಾದಂತೆನ್ನಿಸಿವೆ. ಮನದ ಭಾರವೂ ಇಳಿದಂತಾಗಿದೆ. ವಸೂ, ಇಂದು ನಾನು ತೃಪ್ತನಾಗಿದ್ದೇನೆ, ಕೃತಾರ್ಥನಾಗಿದ್ದೇನೆ."

ವೃಷಾಲಿಗೆ ಕರ್ಣನ ಮಾತುಗಳೊಂದೂ ಅರ್ಥವಾಗಲಿಲ್ಲ. ಅದರೂ ಅವಳು ತನ್ನ ಪತಿಯ ಮುಖದ ಮೇಲೆ ತುಂಬಿ ತುಳುಕುತ್ತಿದ್ದ ತೃಪ್ತಿಯ ಭಾವವನ್ನು ಕಂಡು ಸಮಾಧಾನ ಹೊಂದಿದಳು. ಇಷ್ಟೊಂದು ತೃಪ್ತಭಾವದ ಮುಖವನ್ನು ಅವಳು ಎಂದೂ ಕಂಡಿರಲಿಲ್ಲ.

ಕರ್ಣನ ಅಂತರಾತ್ಮವು ಮಾತ್ರ ಈಗ ಕುರುಕ್ಷೇತ್ರದ ನೆಲವನ್ನೇ ಚಿಂತಿಸುತ್ತಿತ್ತು. ಮೃತ್ಯುವಿಗೆ ಅಹ್ವಾನವೀಯುವ ಆ ರಣರಂಗದ ಚಿಂತೆಯು ಈಗ ಕರ್ಣನಿಂದ ದೂರಾಗುತ್ತಿತ್ತು. ಆತನು ಅತ್ಯಂತ ನಿರ್ಭಯತೆಯಿಂದ ಆ ಕುರುಕ್ಷೇತ್ರದ ನೆಲವನ್ನೇ ನೋಡುತ್ತಲಿದ್ದ.

## 45

ಪವಿತ್ರವಾದ ಹಿರಣ್ವತಿ ದಂಡೆಯ ಮೇಲಿರುವ ಕುರುಕ್ಷೇತ್ರದ ನೆಲದಲ್ಲಿಯೇ ಕೌರವರ ಮೂಲ ಪುರುಷನಾದ ಕುರುವು ತಪವನ್ನಾಚರಿಸಿದನು. ತಾನು ನೇಗಿಲನ್ನೆಳೆದ ಭೂಮಿಯೆಲ್ಲವೂ ಧರ್ಮಕ್ಷೇತ್ರವೆಂದು ಕರೆಯುವಂತಾಗಲೀ, ಎಂದು ಇಂದ್ರನಿಂದ ಆತನು ವರವನ್ನು ಪಡೆದುಕೊಂಡಿದ್ದನು. ಇಂದು ಅದೇ ಸ್ಥಳದಲ್ಲಿ ಕುರುಪಾಂಡವರ ಸೇನೆಗಳು ಯುದ್ಧಕ್ಕಾಗಿ ನಿಂತುಕೊಂಡಿದ್ದವು ಸೂರ್ಯಗ್ರಹಣ ಕಾಲದಲ್ಲಿ ಕೌರವರು, ಪಾಂಡವರು, ಯಾದವರು, ಗೋಪಾಲಕರು ಯಾವ ನೆಲದಲ್ಲಿ ಮಿಳಿತರಾಗಿದ್ದರೋ ಅವರೆಲ್ಲ ಇಂದು ಇನ್ನೊಬ್ಬರನ್ನು ನಾಶಪಡಿಸಲು ಸಕಲ ಸಿದ್ಧತೆಗಳಿಂದ ಕುರುಕ್ಷೇತ್ರದಲ್ಲಿ ಇಂದು ಮಿಳಿತರಾಗಿದ್ದರು. ಯಾವ ಸ್ಥಳದಲ್ಲಿ ದೇವಮಂದಿರಗಳ ಪೂಜಾಕಾಲದ ಘಂಟಾ ನಿನಾದಗಳು ಎಲ್ಲೆಡೆಯಲ್ಲಿ ವ್ಯಾಪಿಸಿಕೊಂಡಿರುತ್ತಿದ್ದವೋ, ಅದೇ ಸ್ಥಳ

ದಲ್ಲಿ ಇಂದು ಶಂಖನಾದ, ಆನೆಗಳ ಕೂಗಾಟ, ರಥದ ಗಾಲಿಗಳ ಸಪ್ಪಳ, ಕುದುರೆಗಳ ಓಡಾಟ ಇವೇ ಮೊದಲಾದವುಗಳಿಂದ ಆ ಭಾಗವೆಲ್ಲ ಕೋಲಾಹಲದಿಂದ ತುಂಬಿಹೋದಂತೆ ತೋರಿಬರುತ್ತಿತ್ತು. ಯಾವ ನೆಲದಲ್ಲಿ ಯಜ್ಞಯಾಗಾದಿಗಳು ನಡೆದು ಹೋಗಿದ್ದವೋ, ಅದೇ ನೆಲದಲ್ಲಿ ಇಂದು ಊಟೋಪಚಾರ ನಿಮಿತ್ತವಾಗಿ ಸಾವಿರಾರು ಒಲೆಗಳನ್ನು ಹೊತ್ತಿಸಿರುವುದು ಕಾಣಬರುತ್ತಿತ್ತು. ಹಿರಣ್ವತಿ ನದಿಯ ದಂಡೆಗುಂಟ ಪಾಂಡವರ ಚತುರಂಗ ಸೇನೆ ಬೀಡು ಬಿಟ್ಟಿತ್ತು. ಅದರ ಇನ್ನೊಂದು ದಂಡೆಯಲ್ಲಿ ಕೌರವರ ದಳವು ವಿಶ್ರಾಂತಿಯನ್ನು ಪಡೆಯುತ್ತಿತ್ತು. ಸರ್ವನಾಶದ ಮುಹೂರ್ತವನ್ನು ಎರಡೂ ದಂಡೆಯವರು ಎದುರು ನೋಡುತ್ತಿದ್ದರು.

ಕೌರವ ಸೇನೆಯ ಪ್ರಮುಖರೆಲ್ಲರ ಸಭೆಯನ್ನು ಕರೆಯಲಾಗಿತ್ತು. ಸೇನಾಧಿಪತ್ಯವನ್ನು ಯಾರಿಗೆ ವಹಿಸಬೇಕೆಂಬ ವಿಚಾರವನ್ನು ಕುರಿತು ಚರ್ಚೆ ಆರಂಭಿಸಲಾಗಿತ್ತು. ಭೀಷ್ಮರು ಎಲ್ಲರಿಗಿಂತ ಹಿರಿಯರಾಗಿದ್ದರು. ಸೇನಾಪತಿಯ ಪದವಿಯನ್ನು ಅವರಿಗೊಪ್ಪಿಸುವದೇ ವಿಹಿತವೆಂದು ಎಲ್ಲರ ಅಭಿಮತವಾಗಿತ್ತು. ಸಭೆಯ ಮಧ್ಯಭಾಗದಲ್ಲಿ ಎತ್ತರವಾದ ಆಸನದಲ್ಲಿ ಭೀಷ್ಮರು ಕುಳಿತುಕೊಂಡಿದ್ದರು.

ದುರ್ಯೋಧನನು ಭೀಷ್ಮಾಚಾರ್ಯರು ಕುಳಿತ ಸ್ಥಳಕ್ಕೆ ಬಂದು ಕೈ ಜೋಡಿಸಿ ಹೇಳಿದ,

"ಪಿತಾಮಹರೇ, ಪಾಂಡವರ ಸೇನೆಯು ಯುದ್ಧಕ್ಕಾಗಿ ಸಿದ್ಧವಾಗಿ ನಿಂತಿದೆ. ತಾವು ನಮಗೆಲ್ಲ ಜೇಷ್ಠರೂ, ಶ್ರೇಷ್ಠರೂ ಆಗಿದ್ದೀರಿ. ತಾವು ನನ್ನ ಸೇನಾಧಿಪತ್ಯವನ್ನು ಸ್ವೀಕರಿಸಬೇಕು. ವಿಜಯವನ್ನು ಸಂಪಾದಿಸಿ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ."

ಇಡೀ ಸಭೆಯು ದುರ್ಯೋಧನನ ಮಾತಿಗೆ ತನ್ನ ಒಪ್ಪಿಗೆಯನ್ನು ಸೂಚಿಸಿತು. ಅದನ್ನು ಗಮನಿಸಿದ ಭೀಷ್ಮಾಚಾರ್ಯರು,

"ದುರ್ಯೋಧನಾ, ನನಗೆ ಕೌರವರಾಗಲೀ ಅಥವಾ ಪಾಂಡವರಾಗಲೀ ಇಬ್ಬರೂ ಸಮಾನರೇ, ಆದರೆ ನೀನು ಇಂದು ನನ್ನನ್ನು ಪ್ರಾರ್ಥಿಸಿಕೊಳ್ಳುತ್ತಿರುವೆ, ಆದುದರಿಂದ ಅವಶ್ಯವಾಗಿ ನಾನು ಸೇನಾಧಿಪತ್ಯವನ್ನು ಸ್ವೀಕರಿಸುತ್ತೇನೆ ಆದರೆ ಅದಕ್ಕಾಗಿ ನನ್ನ ಎರಡು ಪಣಗಳಿವೆ."

"ಯಾವುದು ? ತಿಳಿಸಿರಿ. ಅದನ್ನು ಆನಂದದಿಂದ ಒಪ್ಪಿಕೊಳ್ಳುತ್ತೇನೆ" ಎಂದು ದುರ್ಯೋಧನನು ಹೇಳಿದ.

"ಪ್ರತಿದಿನವೂ ನಾನು ಹತ್ತು ಸಹಸ್ರ ಯೋಧರನ್ನು ಕೊಲ್ಲುವೆ."

ಪಿತಾಮಹರನ್ನು ಅತ್ಯಾನಂದದಿಂದ ದುರ್ಯೋಧನನು ನೋಡುತ್ತಲಿದ್ದ.

"ಆದರೆ, ಪಾಂಡವರನ್ನು ನಾನು ಸಂಹಾರ ಮಾಡಲಾರೆ."

ಭೀಷ್ಮರ ಮಾತುಗಳಿಂದ ಸಭೆ ಸ್ತಬ್ಧವಾಯಿತು. ಸಾವರಿಸಿಕೊಂಡ ದುರ್ಯೋಧನನು,

"ಪಿತಾಮಹರೇ, ತಮ್ಮ ಸೇನಾಧಿಪತ್ಯವೇ ಹೆಚ್ಚಿನದು. ಅದನ್ನು ತಾವು ಒಪ್ಪಿಕೊಂಡಿರಿ. ಅದರಿಂದ ನನಗೆ ಧನ್ಯತೆಯೆನಿಸಿದೆ."

ಕೌರವರ ಸೇನೆಯಲ್ಲಿರುವ ಅಧಿರಥೀ ಮಹಾರಥೀ ಇವರುಗಳ ಎಣಿಕೆಗಳಿಗೆ ಆರಂಭವಾಯಿತು. ಎಲ್ಲ ಪ್ರಮುಖ ವೀರರನ್ನು ಭೀಷ್ಮರು ಅವರವರ ಯೋಗ್ಯತಾನುಸಾರವಾಗಿ ಹೊಗಳಿ ಪ್ರೋತ್ಸಾಹವನ್ನಿತ್ತರು. ಆದರೆ ತಪ್ಪಿಯೂ ಕರ್ಣನ ಹೆಸರನ್ನು ಅವರು ಉಚ್ಚರಿಸಲಿಲ್ಲ. ಅದನ್ನು ಗಮನಿಸಿದ ದುರ್ಯೋಧನನು—

"ಪಿತಾಮಹರೇ, ಮಹಾರಥಿ ಕರ್ಣನ ವಿಚಾರದಲ್ಲಿ ತಾವು ಯಾವ ಮಾತನ್ನೂ ಹೇಳಲಿಲ್ಲ."

ಭೀಷ್ಮರ ಮುಖದಲ್ಲಿ ಉಪಹಾಸ್ಯ ಕಾಣಿಸಿತು. ಅವರು ಹೇಳಿದರು,

"ಆ ರಾಧೇಯನ ಹೆಸರನ್ನು ಈ ಸಭೆಯಲ್ಲಿ ಏತಕ್ಕೆ ತೆಗೆದುಕೊಳ್ಳುವಿ ? ಅವನು ರಾಧೇಯ. ಅಷ್ಟೇ. ಸಾಮಾನ್ಯ ರಥಿಕನೂ ಅಲ್ಲ ; ಅಂದ ಮೇಲೆ ಆತನು ಮಹಾರಥಿ ಹೇಗಾಗುತ್ತಾನೆ."

"ಪಿತಾಮಹ ?"

ಕರ್ಣನು ಸಂತಾಪಗೊಂಡಿದ್ದ. ಆತನತ್ತ ಬೊಟ್ಟು ಮಾಡಿ ತೋರಿಸಿದ ಭೀಷ್ಮರು,

"ಅವನು ಅರ್ಧರಥಿಯಾಗಿದ್ದಾನೆ."

ರಾಜಸಭೆಯು ಗಾಬರಿಗೊಂಡಿತು. ಕರ್ಣನ ಮುಖವು ಕೆಂಡದಂತಾಯಿತು, ಅಧಿರಥ ಹಾಗೂ ರಾಧಾತಾಯಿಯ ವಿಯೋಗಕ್ಕಿಂತಲೂ ಪಿತಾಮಹರ

ಮಾತಿನ ಪೆಟ್ಟು ಹೆಚ್ಚಿನದಾಗಿತ್ತು. ತನ್ನೆಲ್ಲ ಭಾವನೆಗಳನ್ನು ಹತ್ತಿಕ್ಕಿಕೊಂಡು ಕರ್ಣನು ಹೇಳಿದ,

"ಪಿತಾಮಹರೇ, ತಾವು ಯಾವ ಆಧಾರದಿಂದ ನನ್ನನ್ನು ಅರ್ಧರಥಿ ಎಂದು ಗುರುತಿಸಿದಿರಿ ?"

"ನಾಲ್ಕು ಜನರು ಕೂಡಿದಾಗಲೇ ಅದನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿದ್ದಲ್ಲಿ ಅದಕ್ಕೆ ನನ್ನದೇನೂ ಅಡ್ಡಿ ಇಲ್ಲ."

"ಹಿರಿಯರೇ, ಕರ್ಣನು ಯಾವ ಅಪರಾಧವನ್ನು ಮಾಡದಿದ್ದರೂ ವೃಥಾ ಅವನ ಮೇಲೆ ಅಪವಾದ ಹೊರಿಸುವದೇ ?" ದುರ್ಯೋಧನನು ಕೇಳಿದ.

"ಇಲ್ಲ ರಾಜನ್ ! ವೃಥಾ ನಾನು ಅವನನ್ನು ದೂಷಿಸುವುದಿಲ್ಲ. ಕರ್ಣನು ನಿನ್ನ ಪ್ರಿಯಮಿತ್ರನೆಂಬುದು ನನಗೆ ತಿಳಿದ ವಿಚಾರ. ಅವನ ಪ್ರೋತ್ಸಾಹದಿಂದಲೇ ಈ ಯುದ್ಧವನ್ನು ಹೂಡಲಾಗಿದೆ, ಎಂಬ ಮಾತು ನನಗೆ ಅರಿಯದ ವಿಷಯವೇನಲ್ಲ. ಆತನ ಶರೀರದಲ್ಲಿ ತಾಪಸಿಗರ ತೇಜಸ್ಸಿದೆ ನಿಜ. ಅದರೊಂದಿಗೆ ಅವನು ಮತ್ಸರ ಸ್ವಭಾವಿಯಾಗಿದ್ದಾನೆ, ಅತ್ಯಂತ ಸ್ವಾಭಿಮಾನಿಯಾಗಿದ್ದಾನೆ. ನಿನ್ನ ಸಖ್ಯದಿಂದ ಅವನು ಮತ್ತಷ್ಟು ಮೇಲೇರಿ ಕುಳಿತಿದ್ದಾನೆ, ಈ ಕಾರಣಗಳಿಂದಲೇ ಅವನು ಅರ್ಧರಥಿ ಎಂದೆನಿಸಿಕೊಳ್ಳುತ್ತಾನೆ. ಯುದ್ಧದಲ್ಲಿ ಅರ್ಜುನನೊಂದಿಗೆ ಹೋರಾಡುವ ಪ್ರಸಂಗ ಬಂದಲ್ಲಿ ಆತನು ಉಳಿಯಲಾರ,"

"ಪಿತಾಮಹರೇ, ನಾನು ನಿಮಗೆ ಯಾವ ತರಹದ ಅನ್ಯಾಯವನ್ನು ಮಾಡದಿದ್ದಾಗಲೂ ನೀವು ಮಾತ್ರ ಯಾವಾಗಲೂ ನನ್ನನ್ನು ದ್ವೇಷಿಸುತ್ತಲೇ ಬಂದಿರುವಿರಿ. ನಿಮ್ಮ ವಾಗ್ಬಾಣಗಳಿಂದ ನನ್ನನ್ನು ಇರಿಯುತ್ತಿರುವ ನೀವು ಅಧಿರಥ ಭೀಷ್ಮರಲ್ಲವೆ ! ಕೌರವರ ಆಶ್ರಯದಿಂದ ಬದುಕುವವರು, ಹಾಗೂ ಯಾವಾಗಲೂ ಅವರ ಅಹಿತ ಚಿಂತನೆಯನ್ನೇ ಮಾಡುವವರು. ರಾಜ್ಯತ್ಯಾಗ ಮಾಡಿದರೂ ಅಧಿಕಾರ ಸೂತ್ರಗಳನ್ನು ಮಾತ್ರ ನಿಮ್ಮ ಸ್ವಾಧೀನದಲ್ಲಿಯೇ ಇಟ್ಟುಕೊಂಡವರು, ಪಾಂಡವರ ವಿರುದ್ಧ ಹೂಡಲಾದ ಯುದ್ಧದಲ್ಲಿ ಸೇನಾಧಿಪತ್ಯವನ್ನು ಸ್ವೀಕರಿಸಿದಾಗಲೂ ನೀವು ಪಾಂಡವರನ್ನುಳಿಸಲು ಯೋಚಿಸು

ತ್ತಿದ್ದೀರಿ. ಶಿಖಂಡಿಯೊಡನೆ ಶಸ್ತ್ರ ಹಿಡಿಯಲಾರೆನೆಂದ ನೀವು ಇಂದು ಕೌರವ ವೀರರಲ್ಲಿಯೇ ರಥಿ, ಮಹಾರಥಿ, ಅಧಿರಥಿ ಎಂಬ ತಾರತಮ್ಯವನ್ನು ಮಾಡು ತ್ತಲಿದ್ದೀರಿ. ಇಷ್ಟೆಲ್ಲ ಮಾಡಿದರೂ ನೀವು ಅಧಿರಥರಲ್ಲ. ದೀರ್ಘಾಯುಷಿ ಗಳಾಗಲೀ, ಅಥವಾ ಬಿಳಿಯ ಕೂದಲು ಕಾಣುತ್ತಿವೆ, ಎಂದಾಗಲೀ ಅಂಥವ ರನ್ನು ಅಧಿರಥರೆಂದು ಕರೆಯುತ್ತಾರೆಯೇ ?"

ಕರ್ಣನು ತನ್ನ ಮಾತನ್ನು ನಿಲ್ಲಿಸುವುದೇ ತಡ ಆಚಾರ್ಯ ದ್ರೋಣರು ಬಹು ಸಿಟ್ಟಿನಿಂದ ಎದ್ದು ನಿಂತು ಭೀಷ್ಮರನ್ನು ಪ್ರಶ್ನೆ ಮಾಡಿದರು.

"ಹೇ ಗಾಂಗೇಯಾ ! ಈ ಸಿಂದಕನ ನುಡಿಗಳನ್ನು ಕೇಳಬೇಡ, ನನ್ನ ಮತವಾದರೂ ನಿಮ್ಮ ವಿಚಾರವನ್ನೇ ಅವಲಂಭಿಸಿದೆ. ಪ್ರತಿಯೊಂದು ಯುದ್ಧದಲ್ಲಿಯೂ ಈತನು ತಾನೇ ತಾನಾಗಿ ಮೆರೆಯುತ್ತಾನೆ. ಹೀಗಿದ್ದರೂ ಪ್ರತಿಯೊಂದು ರಣಾಂಗಣದಿಂದಲೂ ಕಾಲ್ತೆಗೆದು ಈತನು ಓಡಿ ಬಂದಿದ್ದಾನೆ. ಈತ ಮಹಾ ಪ್ರಮಾದ ಪುರುಷನೆನಿಸಿಕೊಂಡಿದ್ದಾನೆ. ಅರ್ಧರಥಿಯಾಗಿ ದ್ದಾನೆ. ಯುವರಾಜ ದುರ್ಯೋಧನನ ಗೆಳೆತನವೇ ಅವನ ಜೀವಾಳವೆಂದು ಕರೆಸಿಕೊಂಡಿದೆ."

"ಗೆಳೆತನ !" ಕರ್ಣನು ಸೆಡೆದು ನಿಂತು ನುಡಿದ ; "ಆಚಾರ್ಯ, ಮಿತ್ರತ್ವವೆಂದರೇನು ಇದಾದರೂ ತಮಗೆ ಗೊತ್ತಿದೆಯೇ ? ಪೂಜಾಕಾಲದಲ್ಲಿ ಸಹಜವಾಗಿ ಬದಲಿಸುವ ಮಂತ್ರಗಳಷ್ಟು ಅದು ಸುಲಭವಾದುದೆಂದು ಭಾವಿಸು ವಿರಾ ? ಕೊನೆಯ ಪಕ್ಷ ನೀವಾದರೂ ಈ ಮಿತ್ರತ್ವವನ್ನು ಕುರಿತು ಮಾತನಾಡ ಬಾರದಾಗಿತ್ತು. ನಿಮ್ಮ ಹಾಗೂ ದ್ರುಪದನ ಮಿತ್ರತ್ವದ ವಿಚಾರವು ಲೋಕ ವಿಖ್ಯಾತವಾಗಿದೆ. ಒಬ್ಬರಿಗೆ ರಾಜೈಶ್ವರ್ಯದ ಅಹಂಕಾರವಿದ್ದರೆ, ಇನ್ನೊಬ್ಬ ರಿಗೆ ಜ್ಞಾನಿ ಎಂಬ ಹೆಮ್ಮೆ. ದ್ರುಪದನ ವಿಚಾರದಲ್ಲಿ ನಿಮ್ಮ ಗೆಳೆತನವು ಸರಿ ಯಾಗಿದ್ದಲ್ಲಿ ಆ ಗೆಳೆಯನು ಮಾಡಿದ ತಪ್ಪನ್ನು ನೀವು ಮನ್ನಿಸುತ್ತಿದ್ದಿರಿ. ಅದಿಲ್ಲದೆ ವೃಥಾ ಅಹಂಕಾರವನ್ನು ತಾಳಿದಿರಿ. ಆ ಅಹಂಕಾರದಲ್ಲಿಯೇ ನಿಮ್ಮ ವ್ಯಕ್ತಿತ್ವವು ಅಡಕವಾಗಿದೆ. ತಪಶ್ಚರ್ಯವನ್ನು ಹೊಂದಿಯೂ ಸಹ ಶಿಷ್ಯನಿಂದ ಗುರುದಕ್ಷಿಣೆಯನ್ನು ಕೇಳಿ, ಆ ಮಿತ್ರನ ಪರಾಜಯವನ್ನಪೇಕ್ಷಿಸಿದಿರಿ. ಇದು ಗೆಳೆತನದ ಲಕ್ಷಣವಲ್ಲ. ಆಚಾರ್ಯರೇ, ಇದು ಮಿತ್ರತ್ವದ ಉಪಹಾಸ್ಯ ವೆನಿಸುವುದು."

"ರಾಧೇಯಾ !"

"ನಿಲ್ಲಿರಿ, ನನಗೆ ಇನ್ನೂ ಹೇಳಬೇಕಾಗಿದೆ. ಯುವರಾಜನ ಪ್ರತಿಷ್ಠೆಗಾಗಿ ನಾನೇ ಜರಾಸಂಧನೊಂದಿಗೆ ಯುದ್ಧಮಾಡಿದೆ, ವಿಜಯವನ್ನು ಸಂಪಾದಿಸಿದೆ. ಆಗ ನನ್ನ ಸಹಾಯಕ್ಕೆಂದು ತಾವಾರೂ ಬಂದಿರಲಿಲ್ಲ. ಯುವರಾಜನಿಗಾಗಿ ನಾನು ದಿಗ್ವಿಜಯವನ್ನು ಕೈಕೊಂಡೆ. ಆಗ ನನ್ನನ್ನು ಸತ್ಕರಿಸಲು ನೀವೆ ಎದುರು ಬಂದು ನಿಂತುಕೊಂಡಿದ್ದಿರಿ. ಗಂಧರ್ವರು ನನ್ನನ್ನು ಸೋಲಿಸಿರಬಹುದು. ಆದರೆ ವಿರಾಟನ ಮೇಲೇರಿ ಹೋದಾಗ ನೀವೇ ನಮ್ಮ ಸಂಗಡ ಇದ್ದಿರಲ್ಲ, ಪಿತಾಮಹ ! ಆಗ ಉತ್ತರೆಯ ಅಪೇಕ್ಷೆಯಂತೆ ನಿಮ್ಮ ವಸ್ತ್ರಗಳನ್ನೆಲ್ಲಿ ತೆಗೆದುಕೊಂಡು ಹೋಗಿದ್ದರಲ್ಲ ! ಅದು ನಿಮ್ಮ ಯಾವ ಶೌರ್‍ಯತನದ ಪ್ರತೀಕವಾಗಿತ್ತು ? ಇದೇ ಮಹಾರಥಿಯ ಲಕ್ಷಣ ಎಂದೆನ್ನುವದಾದಲ್ಲಿ ಅಂಥ ಮಾಲಿಕೆಯಲ್ಲಿ ನನ್ನ ಹೆಸರು ಇಲ್ಲದಂತಾದರೂ ಚಿಂತೆಯಿಲ್ಲ. ಅದರಿಂದ ನನಗೆ ಸಂತೋಷವೆನಿಸುತ್ತದೆ."

ಭೀಷ್ಮರು ಎದ್ದು ನಿಂತು ದುರ್ಯೋಧನನಿಗೆ ಹೇಳಿದರು.

"ನಾಳೆ ಬೆಳಗಾದರೆ ಯುದ್ಧವು ಪ್ರಾರಂಭವಾಗಲಿದೆ. ಆದುದರಿಂದ ಇಲ್ಲಿ ವೃಥಾ ಜಗಳವಾಡುತ್ತ ಕುಳಿತುಕೊಳ್ಳಲು ನನಗೆ ಸಮಯವಿಲ್ಲ. ನಾನು ಈಗ ಒಂದು ನಿರ್ಣಯವನ್ನು ಸ್ವೀಕರಿಸಿದ್ದೇನೆ. ನಾನು ಜೀವಂತವಾಗಿರುವವರೆಗೂ ನನ್ನ ಸೇನೆಯಲ್ಲಿ ಈ ಕರ್ಣನಿಗೆ ಸ್ಥಾನವಿಲ್ಲ. ಹಾಗಾಗಲಾರದು ಎಂದಾದಲ್ಲಿ ಅವನಾದರೂ ಯುದ್ಧವನ್ನಾರಂಭಿಸಲಿ ಇಲ್ಲವೆ ನಾನು ಯುದ್ಧನಿರತನಾಗುತ್ತೇನೆ, ನನ್ನೊಂದಿಗೆ ಅವನು ಸ್ಪರ್ಧಿಸುವುದು ಬೇಡ."

"ಆಗಲಿ ಹಾಗೆಯೇ ಮಾಡುವಾ ! ಯುವರಾಜ ನೀವು ಚಿಂತಿಸಬೇಡಿರಿ. ಈ ಭೀಷ್ಮರು ತಮ್ಮ ಮುಂದಾಳುತನದಲ್ಲಿ ವಿಜಯವನ್ನು ಸಂಪಾದಿಸಿದರೆ ಅದನ್ನು ಕಂಡು ನಾನು ಸಂತೋಷಪಡುತ್ತೇನೆ. ಅದಾಗದೇ ಹೋದಲ್ಲಿ ಯಾವುದನ್ನು ಇವರ ಕೈಯಿಂದ ಮಾಡಲು ಸಾಧ್ಯವಾಗಲಿಲ್ಲವೋ, ಅದನ್ನು ನಾನು ಮಾಡಿ ತೋರಿಸುತ್ತೇನೆ. ಭೀಷ್ಮರು ಜೀವಂತರಾಗಿರುವವರೆಗೆ ನಾನು ಯುದ್ಧವನ್ನು ಮಾಡಲಾರೆ. ಅವರು ಮರಣವನ್ನಪ್ಪಿದ ನಂತರವೇ ನಾನು ಅರ್ಜುನನೊಂದಿಗೆ ಯುದ್ಧಕ್ಕೆ ನಿಲ್ಲುವೆ."

ಕರ್ಣನು ರಾಜಸಭೆಯಿಂದ ಎದ್ದು ಹೊರಟು ಹೋದನು.

## 46

ಅಂದು ನಸುಕಿನಲ್ಲಿಯೇ ಕರ್ಣನ ಮನೆಯಲ್ಲಿ ಚಟುವಟಿಕೆಗಳು ಆರಂಭ ವಾಗಿದ್ದವು. ಯುದ್ಧಭೂಮಿಗೆ ಹೊರಡಲು ಮೃತ್ಯುಂಜಯ, ವೃಷಕೇತು ವೃಷಸೇನ ಹಾಗೂ ದ್ರುಮ ಎಲ್ಲರೂ ಸಿದ್ಧರಾಗಿದ್ದರು. ಮನೆಯ ಮುಂಭಾಗ ದಲ್ಲಿ ರಥವು ಸಿದ್ಧವಾಗಿ ನಿಂತಿತ್ತು. ಕರ್ಣನಿರುವ ಸ್ಥಳಕ್ಕೆ ನಾಲ್ಕು ಜನರು ಪ್ರವೇಶ ಮಾಡಿದರು. ವೃಷಾಲಿಯು ಅವರೆಲ್ಲರಿಗೂ ಆರತಿಯನ್ನು ಬೆಳಗಿ ದಳು. ಅದನ್ನು ನೋಡಿದ ಕರ್ಣನು ಹೇಳಿದ,

"ಇನ್ನು ಐದನೆಯವನು ಎಲ್ಲಿದ್ದಾನೆ ?"

"ಇಲ್ಲೇ ಇದ್ದೇನೆ" ಎಂದು ಚಕ್ರಧರನು ಮುಂದೆ ಬಂದ.

ವೃಷಾಲಿಯು ಅವನಿಗೂ ಆರತಿಯನ್ನು ಮಾಡಿದಳು. ಆಗ ಚಕ್ರಧರನು,

"ಅತ್ತಿಗೆ, ರಣಾಂಗಣದಿಂದ ನಿಮಗೆ ಏನು ತರಲಿ ?"

"ನೀವೆಲ್ಲರೂ ಸುಖರೂಪದಿಂದ ಮರಳಿ ಬನ್ನಿರಿ, ನನಗೆ ಇನ್ನೇನೂ ಬೇಕಾಗಿಲ್ಲ."

ಎಲ್ಲರೂ ಕರ್ಣನಿಗೆ ನಮಸ್ಕಾರ ಮಾಡಿ ಯುದ್ಧಭೂಮಿಗೆ ಹೊರಟು ಬಿಟ್ಟರು. ವೃಷಾಲಿಯು ಆರತಿಯ ತಟ್ಟೆಗಳನ್ನು ಕೆಳಗಿಟ್ಟಾಗ ಅವಳ ಕಣ್ಣು ಹನಿಗೂಡಿದ್ದವು. ಅದನ್ನು ಕಂಡ ಕರ್ಣನು ಅವಳನ್ನು ಸಮೀಪಕ್ಕೆ ಕರೆದು,

"ವಸೂ, ರಣಾಂಗಣದಲ್ಲಿ ಅಳುವಿಗೆ ಅಥವಾ ಶೋಕಕ್ಕೆ ಸ್ಥಾನವೇ ಇಲ್ಲ. ಅಲ್ಲಿ ವೀರರ ಧ್ವನಿಗೆ ಮಾತ್ರ ಸ್ಥಾನವಿರುತ್ತದೆ" ಎಂದ.

ವೃಷಾಲಿಯನ್ನು ಆತ ಮಹಡಿಯ ಮುಂಭಾಗದಲ್ಲಿಯ ಬೈಲಿಗೆ ಕರೆದು ಕೊಂಡು ಬಂದ. ಯುದ್ಧಭೂಮಿಯತ್ತ ಓಡಿದ ರಥದ ಗಾಲಿಗಳು ದಾರಿ ಯುದ್ದಕ್ಕು ಕಾಣಿಸುತ್ತಿದ್ದವು. ತಂಪಾದ ಗಾಳಿ ಬೀಸುತ್ತಲಿತ್ತು. ಬಹು ಹೊತ್ತಿನವರೆಗೆ ಆ ದಂಪತಿಗಳು ಅಲ್ಲಿಯೇ ನಿಂತುಕೊಂಡಿದ್ದರು. ನಿಧಾನವಾಗಿ ಬೆಳಕು ಮೂಡಲಾರಂಭಿಸಿತು. ಆಕಾಶದಲ್ಲಿರುವ ನಕ್ಷತ್ರಗಳು ಕಾಣದಂತಾಗ ತೊಡಗಿದವು, ನಾನಾ ವಿಧವಾದ ಸ್ವರಗಳನ್ನು ಕೇಳಿಸುತ್ತ ಹಕ್ಕಿಗಳು ಗುಂಪು

ಗುಂಪಾಗಿ ಸಂಚಾರವನ್ನು ಆರಂಭಿಸಿದವು. ಆಕಾಶವೆಲ್ಲ ಗಲಿಬಿಲಿಯಿಂದ ಪ್ರತಿಧ್ವನಿಗೈಯತೊಡಗಿತು. ದೂರದಿಂದ ನಗಾರಿಯ ಧ್ವನಿಯೂ ಕೇಳಲಾರಂಭಿಸಿತು. ಸೇನಾ ಭಾಗಗಳೆಲ್ಲ ಸಿದ್ಧವಾಗಿರುವಂತೆ ಸೂಚಿಸಲು ಆ ನಗಾರಿಯನ್ನು ಬಾರಿಸಲಾಗುತ್ತಿತ್ತು. ಭಯಭೀತಳಾದ ವೃಷಾಲಿಯು ಆ ನಿಟ್ಟನ್ನೇ ನೋಡುತ್ತಿದ್ದಳು. ಆದರೆ ಅವಳಿಗೆ ಯಾವುದೂ ಕಾಣಿಸುತ್ತಿರಲಿಲ್ಲ. ಕಾಣಿಸುತ್ತಿದ್ದುದು ಕುರುಕ್ಷೇತ್ರದಲ್ಲಿಯ ಕೇವಲ ಸೂರ್ಯವನದ ಭಾಗವು ಮಾತ್ರ. ಆ ವನದ ಹಿಂಭಾಗದಲ್ಲಿಯೋ, ಇಲ್ಲವೇ ಅದರ ಸಮೀಪದಲ್ಲಿಯೋ ಇಂದಿನ ಯುದ್ಧದ ಭೂಮಿಯೆಂದು ಗುರುತಿಸಲಾಗಿತ್ತು. ಸೂರ್ಯಬಿಂಬವು ಕಾಣಿಸಿದೊಡನೆ ಶಂಖಗಳ ನಾದವು ಕೇಳಬರಲಾರಂಭಿಸಿತು. ಕರ್ಣನು ತನ್ನೆರಡೂ ಕೈಗಳನ್ನು ಜೋಡಿಸಿ ಸೂರ್ಯದೇವನಿಗೆ ನಮಸ್ಕಾರ ಮಾಡುತ್ತ ಹೇಳಿದ,

"ವಸೂ, ಯುದ್ಧವು ಆರಂಭವಾಯಿತು."

ಇಬ್ಬರೂ ಮನೆಯ ಒಳಭಾಗಕ್ಕೆ ಬಂದರು.

ಕೌರವ-ಪಾಂಡವರಲ್ಲಿ ಘನ ಘೋರ ಯುದ್ಧವು ಪ್ರಾರಂಭವಾಯಿತು. ದಿನಗಳ ಮೇಲೆ ದಿನಗಳು ಕಳೆಯುತ್ತಿದ್ದವು. ಭೀಷ್ಮರು ಸೇನಾಧಿಪತ್ಯವನ್ನು ವಹಿಸಿಕೊಂಡು ಒಂಬತ್ತು ದಿನಗಳಾಗಿದ್ದವು. ಆದರೂ ಯುದ್ಧದ ವಿಚಾರವಾಗಿ ಯಾವದೇ ತರಹದ ನಿರ್ಣಯವನ್ನು ಹೇಳುವಂತಿರಲಿಲ್ಲ. ಈ ಒಂಬತ್ತು ದಿನಗಳಲ್ಲಿ ಮೃತ್ಯುಂಜಯ, ವೃಷಕೇತು ಇಬ್ಬರನ್ನೂ ಕಳೆದುಕೊಂಡಾಗಿತ್ತು. ಕುಳಿತುಕೊಂಡಲ್ಲಿಯೇ ಯುದ್ಧವಾರ್ತೆಗಳನ್ನು ಕೇಳುವುದು ಹಾಗೂ ಪುತ್ರವಿಯೋಗದ ದುಃಖವನ್ನು ಸಹಿಸುವುದು ಇವು ಕರ್ಣನಿಗೆ ತುಂಬ ಅಸಹ್ಯವನ್ನುಂಟುಮಾಡತೊಡಗಿದ್ದವು.

ಒಂಬತ್ತನೆಯ ದಿನ ಸಾಯಂಕಾಲ ಯುವರಾಜ ದುರ್ಯೋಧನನು ಕರ್ಣನ ಭೇಟಿಗೆಂದು ಬಂದ. ಯುದ್ಧಭೂಮಿಯಿಂದ ಬಳಲಿ ಬಂದ ದುರ್ಯೋಧನನಿಗೆ ಕರ್ಣನು ಆದರದ ಸ್ವಾಗತವನ್ನು ನೀಡಿದ. ಆಗ ದುರ್ಯೋಧನನು

"ಕರ್ಣಾ, ನೀನು ಪ್ರತಿಜ್ಞೆಯಿಂದ ಪರಾವರ್ತನವಾಗುವಂತೆ ಕೇಳಿಕೊಳ್ಳಲು ಬಂದಿದ್ದೇನೆ."

"ಕಾರಣ ?"

"ಮಿತ್ರಾ, ಒಂಬತ್ತು ದಿನಗಳಿಂದ ಈ ಯುದ್ಧವು ನಡೆಯುತ್ತಲಿದೆ. ಅದರಿಂದಾದ ಪ್ರಯೋಜನವೇನು ? ದಿನವೂ ನನ್ನ ಸೇನೆಯು ಮಾತ್ರ ಬಲಿಯಾಗುತ್ತಲಿದೆ."

"ಭೀಷ್ಮರು ಪ್ರತಿಜ್ಞೆ ಮಾಡಿದಂತೆ ಪ್ರತಿದಿನ ಹತ್ತು ಸಾವಿರ ಸೈನಿಕರನ್ನು ಸಂಹಾರ ಮಾಡುತ್ತಿರುವರಷ್ಟೇ ?"

"ಅವರ ಪ್ರತಿಜ್ಞೆಯಿಂದ ಪಾಂಡವರೂ ಸುರಕ್ಷಿತರಾಗಿದ್ದಾರೆ."

ಕರ್ಣನು ನಕ್ಕು ಹೇಳಿದ. "ಯುವರಾಜ, ಹತ್ತುಸಾವಿರ ಸಂಖ್ಯೆಯನ್ನು ಸರಿಯಾಗಿ ಎಣಿಸಲು ಒಳ್ಳೆಯ ಒಬ್ಬ ಸಹಾಯಕನನ್ನು ಅವರಿಗೆ ಅನುಕೂಲ ಮಾಡಿಕೊಡಿರಿ. ಯಾಕೆಂದರೆ, ಎಲ್ಲಿಯಾದರೂ ತಪ್ಪು ಎಣಿಕೆಯಾದಲ್ಲಿ ತಮಗೆ ಪ್ರತಿಜ್ಞಾ ಭಂಗದೋಷವು ಬಂದೀತೆಂದು ಪಿತಾಮಹರು ತಿಳಿದುಕೊಂಡಾರು !"

"ಗೆಳೆಯಾ, ರಣರಂಗದ ಪರಿಸ್ಥಿತಿಯಿಂದಾಗಿ ನನ್ನ ಮನಸ್ಸು ತುಂಬಾ ವ್ಯಗ್ರವಾಗಿ ಹೋಗಿದೆ. ಇಂಥ ಪರಿಸ್ಥಿತಿಯಲ್ಲಿಯೂ ನೀನು ತಮಾಷೆ ಮಾಡುತ್ತಿರುವೆಯಾ ?"

"ಯುವರಾಜ, ನಿಮ್ಮ ಚಿಂತೆ ನನಗೆ ಅರ್ಥವಾಗುತ್ತಿದೆ. ಆದರೆ ನಾನು ಏನೂ ಮಾಡುವಂತಿಲ್ಲ. ಪಿತಾಮಹರು ಮಹಾ ಯುದ್ಧಾಳುಗಳು. ಅವರು ಮನಸ್ಸು ಮಾಡಿದಲ್ಲಿ ಅಥವಾ ಅವರು ಮನಃಪೂರ್ವಕ ಯುದ್ಧ ಮಾಡಬೇಕೆಂದು ಸಂಕಲ್ಪಿಸಿದಲ್ಲಿ........"

"ಕರ್ಣಾ, ಈ ಒಂಬತ್ತು ದಿನಗಳಲ್ಲಿ ಭೀಷ್ಮರು ಶ್ವೇತಾನನ ವಧೆ ಮಾತ್ರ ಮಾಡಿದ್ದಾರೆ. ಅದನ್ನು ಬಿಟ್ಟರೆ ಹೇಳಿಕೊಳ್ಳುವಂತಹದೇನೂ ನಡೆದಿಲ್ಲ."

"ಕೃಷ್ಣನನ್ನು ಶಸ್ತ್ರ ಧರಿಸುವಂತೆ ಮಾಡಿದುದು ಸಾಮಾನ್ಯ ಕೆಲಸವೆ ?"

"ಕೃಷ್ಣನು ಅದನ್ನುಪಯೋಗಿಸಿದ್ದರೆ ನನಗೆ ಸಮಾಧಾನವಾಗುತ್ತಿತ್ತು" ಎಂದು ಉದ್ವೇಗದಿಂದ ದುರ್ಯೋಧನನು ನುಡಿದ.

"ಯುವರಾಜ, ಹೀಗೆ ನಿರಾಶರಾಗಬೇಡಿರಿ. ಯಾವ ಪಿತಾಮಹರು ಗುರುದೇವ ಪರಶುರಾಮರಿಗೆ ಯುದ್ಧದ ಆಹ್ವಾನವನ್ನಿತ್ತಿದ್ದರೋ, ಅಂಥವರ ಪರಾಕ್ರಮದ ಬಗ್ಗೆ ಶಂಕೆಯನ್ನಿಟ್ಟುಕೊಳ್ಳಬೇಡಿರಿ, ಒಂದು ವೇಳೆ ಮನಸಾ ಅವರು ಯುದ್ಧಕ್ಕೆ ನಿಂತಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇಲ್ಲ."

"ಹಾಗಾದಲ್ಲಿ ಅದನ್ನು ಸಾಧಿಸುವುದಾದರೂ ಹೇಗೆ?"

"ಮಾಡಬೇಕೆಂದು ನಿಶ್ಚಯಿಸಿದಲ್ಲಿ ಅವಶ್ಯವಾಗಿ ಮಾಡಬಹುದು."

ದುರ್ಯೋಧನನು ಆಸೆಗಣ್ಣುಗಳಿಂದ ಕರ್ಣನನ್ನು ನೋಡಲಾರಂಭಿಸಿದ ಆಗ ಕರ್ಣನು,

"ಯುವರಾಜ, ಏಳಿರಿ ಹೀಗೆಯೇ ಭೀಷ್ಮರಲ್ಲಿ ಹೋಗಿ ಹೇಳಿರಿ. ನಿಮ್ಮ ಕೈಯಿಂದ ಪರಾಕ್ರಮದ ಯುದ್ಧ ಮಾಡಿ ಗೆಲ್ಲುವದಾಗದಿದ್ದಲ್ಲಿ, ವೃಥಾ ಸೇನೆಯನ್ನು ನಾಶಪಡಿಸುವದನ್ನಾದರೂ ನಿಲ್ಲಿಸುವಂತೆ ಕೇಳಿಕೊಳ್ಳಿರಿ, ಶಸ್ತ್ರ ಸನ್ಯಾಸವನ್ನು ಸ್ವೀಕರಿಸಿ, ಯುದ್ಧಭೂಮಿಯಿಂದ ಮರಳುವಂತೆ ಅವರನ್ನು ಕೇಳಿಕೊಳ್ಳಿರಿ."

"ಒಂದು ವೇಳೆ ಅವರು ಹಾಗೆಯೇ ಮಾಡಿದರೆ?"

ಕರ್ಣನು ಸಮಾಧಾನದಿಂದ ನಕ್ಕು,

"ಇಲ್ಲ, ಪಿತಾಮಹರು ಹಾಗೆ ಎಂದೂ ಶಸ್ತ್ರ ಸನ್ಯಾಸವನ್ನು ಸ್ವೀಕರಿಸಲಾರರು. ಅವರು ನಿಜವಾದ ಕ್ಷತ್ರಿಯ ವೀರರಾಗಿದ್ದಾರೆ. ಕ್ಷತ್ರಿಯನಿಗೆ ಶಸ್ತ್ರ ಸನ್ಯಾಸವೆಂಬುದು ಪರಮ ದುಃಖಕರವಾದ ಸಂಗತಿ. ಆದುದರಿಂದ ನಿಮ್ಮ ಈ ಸೂಚನಾ ಮಾತ್ರದಿಂದ ಅವರ ಅಹಂಕಾರವು ಜಾಗ್ರತವಾಗುತ್ತದೆ. ಆಗ ಅವರು ನಿಜವಾದ ಯುದ್ಧವನ್ನಾರಂಭಿಸುತ್ತಾರೆ. ಹಾಗಾದಲ್ಲಿ ಯುವರಾಜ, ಅವರಂಥ ಯುದ್ಧಾಳುಗಳು ಬೇರೊಬ್ಬರಿಲ್ಲವೆಂದೇ ತಿಳಿಯಿರಿ. ನನ್ನ ಈ ನಂಬಿಕೆ ತಿಲಮಾತ್ರವೂ ಸುಳ್ಳಾಗಲಾರದು."

ಆಸೆಯಿಂದ ಮೇಲೆದ್ದ ದುರ್ಯೋಧನನು ಕರ್ಣನ ಅಪ್ಪಣೆಯನ್ನು ಪಡೆದು ಹೊರಟುಬಿಟ್ಟ.

ರಾತ್ರಿಯ ಸಮಯದಲ್ಲಿ ಕರ್ಣನು ತನ್ನ ಬಿಡಾರದತ್ತ ಹೋಟು ನಿಂತಾಗ ಯುವರಾಜನು ಬಂದಿರುವದಾಗಿ ಹೇಳಿದರು. ಆಗ ಕರ್ಣನನ್ನು ಭೇಟಿ ಮಾಡಿದ ದುರ್ಯೋಧನನು ಆನಂದದ ಭರದಲ್ಲಿ ಹೇಳಿದ,

"ಕರ್ಣಾ, ನಿನ್ನ ಮಾತ್ರೆಯು ಈಗ ಕೆಲಸ ಮಾಡಿತು. ಶಸ್ತ್ರಸನ್ಯಾಸದ ಮಾತೆತ್ತಿದೊಡನೆ ನಾಗರಹಾವು ಸಿಟ್ಟಿನಿಂದ ತನ್ನ ಹೆಡೆಯನ್ನು ಮೇಲೆತ್ತುವಂತೆ ಪಿತಾಮಹರು ಕುಪಿತರಾದರು. ಆ ಕ್ಷಣವೇ ಅವರು ಘೋರವಾದ ಪ್ರತಿಜ್ಞೆಯನ್ನು ಮಾಡಿದರು."

"ನಿಜವೇ ? ಎಂಥ ಪ್ರತಿಜ್ಞೆ ?"

"ದುರ್ಯೋಧನಾ, ನನ್ನ ಮಾತನ್ನು ಕೇಳು, ನಾಳೆ ಸೂರ್ಯಾಸ್ತದೊಳಗಾಗಿ ನಾನು ನಿಷ್ಪಾಂಡವ ಪೃಥ್ವಿಯನ್ನು ಮಾಡುವೆ" ಎಂದು ನುಡಿದರು.

ಕರ್ಣನು ಭರದಿಂದ ದುರ್ಯೋಧನನ್ನು ಅಪ್ಪಿಕೊಂಡು ಹೇಳಿದ,

"ಯುವರಾಜ, ನಾಳಿನ ಜಯ ನಿಮ್ಮದು."

"ಪಿತಾಮಹರು ಪ್ರತಿಜ್ಞೆ ಮಾಡಿದೊಡನೆ ನಾನು ಕೇಳಿದೆ."

"ಏನು ಕೇಳಿದಿರಿ ?"

"ನಾನು ಕೇಳಿದೆ, ಒಂದು ವೇಳೆ ನಿಮ್ಮ ಪ್ರತಿಜ್ಞೆಯು ಸಫಲವಾಗದಿದ್ದರೆ? ಎಂದು ನುಡಿದಾಗ ಪಿತಾಮಹರು ಮತ್ತಷ್ಟು ಕೋಪದಿಂದ ನನ್ನನ್ನು ನೋಡಿ, ನಂತರ ಹೇಳಿದರು."

"ಹಾಗಾದಲ್ಲಿ ಈ ಭೀಷ್ಮನು ಜೀವಿಸಲಾರ"

ಆಗ ಕರ್ಣನು ಹೇಳಿದ,

"ಯಾಕೆ ಹಾಗೆ ಕೇಳಿದಿರಿ! ಭಾವಪರವಶರಾಗಿ ಘೋರ ಪ್ರತಿಜ್ಞೆಯನ್ನೇ ಅವರು ಮಾಡಿದ್ದರು. ನಿಮ್ಮ ಶಂಕೆಯು ಅವರನ್ನು ಮುಕ್ತರನ್ನಾಗಿ ಮಾಡಿಸಿತು. ಯುವರಾಜ ಹೋಗಿರಿ, ಹೋಗಿ ವಿಶ್ರಾಂತಿಯನ್ನು ಪಡೆಯಿರಿ. ನಾಳೆ ಪಿತಾಮಹರ ಪರಾಕ್ರಮ ನೋಡಲು ಸಿಗುವುದಿಲ್ಲ ಎಂಬ ದುಃಖವು ನನಗಾಗಿದೆ."

ದುರ್ಯೋಧನನು ಹೊರಟು ಹೋದ ನಂತರ ಕರ್ಣನು ತನ್ನ ಬಿಡಾರದತ್ತ ಹೊರಟ. ಅವನ ಮನಸ್ಸು ದಣಿದಿತ್ತು. ಎಲ್ಲಿಯೋ ಒಂದು ತರಹದ ಸಮಾಧಾನವೆನಿಸಿದರೆ, ಮುಂದೆ ಆ ಸಮಾಧಾನವೇ ಅವನನ್ನು ವಿಚಲಿತನನ್ನಾಗಿ ಮಾಡುತ್ತಿತ್ತು.

## 47

ಕರ್ಣನು ತನ್ನ ಗೃಹದಲ್ಲಿ ಅಸ್ವಸ್ಥಚಿತ್ತನಾಗಿ ಶತಪಥ ಹಾಕುತ್ತಲಿದ್ದ. ವೃಷಾಲಿಯು ಮೂಕಳಾಗಿ ಪತಿಯ ಚಲನವಲನವನ್ನೇ ನೋಡುತ್ತಿದ್ದಳು. ನಡುಮಧ್ಯಾಹ್ನದ ಪ್ರಖರವಾದ ಬಿಸಿಲಿನಿಂದಾಗಿ ಮನೆಯು ತುಂಬೆಲ್ಲ ಹೆಚ್ಚು

ಬೆಳಕು ಚೆಲ್ಲಿದಂತಾಗಿತ್ತು. ಓಡಾಡುತ್ತಿದ್ದ ಕರ್ಣನು ಒಂದು ಸಲ ನಿಂತು ದೀರ್ಘಶ್ವಾಸವನ್ನು ಬಿಟ್ಟ. ಅವನ ಗಮನವು ವೃಷಾಲಿಯತ್ತ ಹರಿಯಿತು.

"ಏನು ನೋಡುತ್ತಿರುವಿ ?"

"ನಿಮ್ಮನ್ನೇ."

"ವಸೂ, ಯುದ್ಧವು ಆರಂಭವಾಗಿ ಇಂದಿನ ಹತ್ತನೇ ದಿನವೂ ಕಳೆಯಿತು. ಹೀಗೆ ಘನಘೋರವಾದ ಯುದ್ಧವು ಪ್ರಾರಂಭವಾದಾಗ ಅಲ್ಲಿಂದ ಬರುವ ಸಮಾಚಾರಗಳನ್ನು ಕೇಳುತ್ತ, ಇಲ್ಲಿ ಕೂಡುವದೆಂದರೆ ಬೇಸರವೆನ್ನಿಸಿದೆ. ಆ ಪ್ರತಿಜ್ಞೆಯನ್ನು ನಾನು ಮಾಡಿರದಿದ್ದರೆ ಚೆನ್ನಾಗಿರುತ್ತಿತ್ತು."

"ಅದರಲ್ಲಿ ನಿಮ್ಮ ತಪ್ಪೇನಿದೆ ? ಪಿತಾಮಹರು ನಿಮ್ಮನ್ನು ಅವಮಾನ ಮಾಡದಿದ್ದರೆ ?...."

"ಅವಮಾನ ! ಅದೇನು ಹೊಸದೇ, ಯಾವಾಗಲೂ ಹೀಗೆಯೇ ನಡೆದು ಬಂದಿಲ್ಲವೆ ? ಅದನ್ನೇ ಒಂದು ನಿಮಿತ್ತವನ್ನಾಗಿ ಮಾಡಿಕೊಂಡು ನಾನು ರಣಾಂಗಣವನ್ನು ತಪ್ಪಿಸಿಕೊಂಡೆ. ಅದರಿಂದೇನಾದರೂ ಸಮಾಧಾನವಿದೆಯೆ ? ಇಲ್ಲ, ನನ್ನ ದೈವದಲ್ಲಿಯೇ ಅದು ಬರೆದಿಲ್ಲ."

"ನೀವೇನು ರಣರಂಗವನ್ನು ತ್ಯಜಿಸಿರುವಿರಾ ?" ಆಶ್ಚರ್ಯದಿಂದ ವೃಷಾಲಿ ನುಡಿದಳು.

ಅವಳ ಮಾತಿನಿಂದ ಕರ್ಣನಿಗೆ ಎಚ್ಚರವಾದಂತೆನ್ನಿಸಿ ಅವನು ನಕ್ಕು ಹೇಳಿದ.

"ವಸೂ ನಮ್ಮ ಸೇನೆ ಹಾಗೂ ನಮ್ಮ ಮಕ್ಕಳು ಎಲ್ಲರೂ ರಣರಂಗದಲ್ಲಿ ಯುದ್ಧ ಮಾಡುತ್ತಲಿದ್ದಾರೆ. ನಾನು ಮಾತ್ರ ಇಲ್ಲಿ ಸುಮ್ಮನೆ ಕುಳಿತುಕೊಂಡಿದ್ದೇನೆ. ಇದರ ಅರ್ಥವೇನು ? ರಣರಂಗವನ್ನು ತ್ಯಜಿಸಿದಂತಲ್ಲವೆ ? ನಾನು ರಣಭೂಮಿಯಲ್ಲಿಲ್ಲದಿದ್ದರೂ ಆ ಕುರುಪುಂಗವನು ಈ ಹತ್ತು ದಿನಗಳಿಂದಲೂ ಅಮಿತೋತ್ಸಾಹದಿಂದ ತನ್ನ ಪರಾಕ್ರಮವನ್ನು ತೋರಿಸುತ್ತಲಿದ್ದಾನೆ. ಯಾರಿಗೆ ಗೊತ್ತು ಇಂದು ಆ ಯುದ್ಧವೂ ಮುಗಿದುಹೋಗಬಹುದೇನೋ.... ಹಾಗೂ...."

ಮಾತನಾಡುತ್ತಿದ್ದಂತೆಯೇ ಕರ್ಣನು ಮಧ್ಯದಲ್ಲಿಯೇ ನಿಲ್ಲಿಸಿದ. ತನ್ನ ಉತ್ತರೀಯವನ್ನು ಸರಿಮಾಡಿಕೊಂಡು ಹೊರಭಾಗಕ್ಕೆ ಬಂದ. ಅತನ ಹಿಂದೆ

41

ವೃಷಾಲಿಯೂ ಬಂದಳು. ಅವಳಿಗೆ ಕಾರಣ ತಿಳಿದುಕೊಳ್ಳುವ ಅಗತ್ಯವೆನಿಸಲಿಲ್ಲ. ಯುದ್ಧಭೂಮಿಯ ಭಾಗದಿಂದ ಶಂಖ, ರಣಭೇರಿಗಳ ನಿನಾದವು ಕೇಳಬರುತ್ತಿತ್ತು. ಕರ್ಣನು ಸೂರ್ಯನತ್ತ ನೋಡಿದ. ಆತನು ನಡು ನೆತ್ತಿಯಿಂದ ಕೆಳಗಿಳಿಯುತ್ತಲಿದ್ದ.

"ವಸೂ, ಯಾವದೋ ವಿಜಯ ಧ್ವನಿ ಕೇಳಬರುತ್ತಲಿದೆ. ಯಾರೋ ಜಯವನ್ನು ಸಂಪಾದಿಸಿದ್ದಾರೆ. ಯಾರ ಮೃತ್ಯುವಿನಿಂದ ಯಾರು ಬದುಕಿದರೋ, ಯಾರ ಪರಾಜಯದಿಂದ ಯಾರು ಜಯಗಳಿಸಿದರೋ !"

ಯುದ್ಧಭೂಮಿಯತ್ತ ಕರ್ಣನು ನೋಡುತ್ತಲಿದ್ದ. ಅದೇ ಸಮಯಕ್ಕೆ ಸರಿಯಾಗಿ ಕರ್ಣನ ನಿವಾಸದತ್ತ ನಾಗಾಲೋಟದಿಂದ ಒಂದು ರಥವು ಧಾವಿಸಿ ಬರುತ್ತಿರುವುದು ಕಾಣಿಸಿತು. ದ್ಯುಮ, ಚಕ್ರಧರ, ವೃಷಸೇನ ಇವರುಗಳೆಲ್ಲ ಯುದ್ಧಕ್ಕೆ ಹೋಗಿದ್ದರು. ಅಶುಭ ಕಲ್ಪನೆಗಳು ಮೂಡಿಬಂದಾಗ ಕರ್ಣನು ಹೊರಾಂಗಣದಿಂದ ಹಿಂದಕ್ಕೆ ಮರುಳಿದ. ಮತ್ತೊಮ್ಮೆ ಹೆಬ್ಬಾಗಿಲಿನತ್ತ ಧಾವಿಸಿ ಹೋದ. ಅಷ್ಟರಲ್ಲಿ ಆ ರಥವು ಬಾಗಿಲನ್ನು ಸಮೀಪಿಸಿತ್ತು. ಆ ರಥದಿಂದ ದ್ಯುಮ, ವೃಷಸೇನ, ಚಕ್ರಧರ ಇವರುಗಳು ಇಳಿಯುತ್ತಲಿದ್ದರು. ಅದನ್ನು ಕಂಡಾಗ ಕರ್ಣನಿಗೆ ಸಮಾಧಾನವೆನಿಸಿತು.

ಎಲ್ಲರಿಗಿಂತ ಮುಂದಾಗಿ ಬಂದ ಚಕ್ರಧರನನ್ನು ಕರ್ಣನು ವಿಚಾರಿಸಿದ,

"ಇಂದು ಪಿತಾಮಹರ ಪರಾಕ್ರಮದ ಸಾರ್ಥಕ್ಯವನ್ನು ನೀವೆಲ್ಲ ನೋಡಿದಿರಲ್ಲವೆ ?"

"ಹೌದು, ಅವರ ಪರಾಕ್ರಮಕ್ಕೆ ಸಾಟಿಯೇ ಇಲ್ಲ. ಇಂದಿನ ಸೂರ್ಯಾಸ್ತವನ್ನು ಪಾಂಡವರು ನೋಡುತ್ತಿರಲಿಲ್ಲ."

"ಚಕ್ರಧರ !"

"ಪಾಂಡವರು ಭೀಷ್ಮರ ಮುಂದೆ ಶಿಖಂಡಿಯನ್ನು ತಂದು ನಿಲ್ಲಿಸಿದರು. ಆತನನ್ನು ಕಂಡ ಪಿತಾಮಹರು ತಮ್ಮ ಶಸ್ತ್ರವನ್ನೇ ಕೆಳಗಿಟ್ಟರು. ಅದೆಲ್ಲವನ್ನೂ ಗಮನಿಸಿದ ಅರ್ಜುನನು ಶಿಖಂಡಿಯ ಹಿಂದಿನಿಂದ........"

"ಭೀಷ್ಮರ ವಧೆ ಮಾಡಿದನೆ ?"

"ಇಲ್ಲ, ಭೀಷ್ಮರು ತುಂಬ ಗಾಯ ಹೊಂದಿ ಮಲಗಿದರು. ಅವರು

ಇಚ್ಛಾ ಮರಣಿಗಳಲ್ಲವೆ ? ಈಗ ದಕ್ಷಿಣಾಯನ ಕಾಲ. ಆದುದರಿಂದ ಉತ್ತರಾಯಣದವರೆಗೂ ಜೀವಧಾರಣ ಮಾಡುವ ನಿಗ್ರಹ ಅವರಲ್ಲಿದೆ."

"ಪಿತಾಮಹರನ್ನು ಶಿಬಿರಕ್ಕೆ ತಂದಿದ್ದಾರೆಯೇ ?

"ಇಲ್ಲ, ರಣಭೂಮಿಯಲ್ಲಿಯೇ, ಯಾವ ಸ್ಥಳದಲ್ಲಿ ಅವರು ಬಿದ್ದಿದ್ದರೋ ಅಲ್ಲಿಯೇ, ಅವರು ವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ. ತಮ್ಮ ಶರೀರದಲ್ಲಿ ನೆಟ್ಟ ಬಾಣಗಳನ್ನು ತೆಗೆಯಲೂ ಸಹ ಅವರು ಒಪ್ಪಿಗೆಯನ್ನೀಯಲಿಲ್ಲ. ದುರ್ಯೋಧನ ಮಹಾರಾಜರು ಅವರಿಗೆ ಸುಖಶಯ್ಯೆಯನ್ನು ನಿರ್ಮಿಸುವದಾಗಿ ಕೇಳಿಕೊಂಡರು. ಅದಕ್ಕೆ ಅವರು ಒಪ್ಪಲಿಲ್ಲ."

"ಹಾಗಾದರೆ ಬಯಲಿನಲ್ಲಿಯೇ ಇರುವರೇ ?"

"ಅವರು ಕುರುಕ್ಷೇತ್ರದ ಆಸುಪಾಸಿನಲ್ಲಿ ಬೆಳೆಯುವ ದರ್ಭಾಸನದ ಶಯ್ಯೆ ಮಾಡಲು ಹೇಳಿದ್ದಾರೆ. ಹುಲ್ಲಿನ ಹಾಸಿಗೆಯ ಮೇಲೆಯೇ ವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ. ಪಿತಾಮಹರು ಬಿದ್ದುದನ್ನು ಕಂಡಾಗ ನಮ್ಮ ಸೇನೆಯು ತುಂಬ ಗಾಬರಿಗೊಂಡು ಧೈರ್ಯ ಕಳೆದುಕೊಂಡಿದೆ."

"ಯುದ್ಧವು ನಿಂತುಹೋಗಿದೆಯೇ ?"

"ಇಲ್ಲ, ಆಚಾರ್ಯ ದ್ರೋಣರು ಈಗ ನಮ್ಮ ಸೈನ್ಯವನ್ನು ಹುರಿದುಂಬಿಸುತ್ತಿದ್ದಾರೆ. ಪಾಂಡವ ಪಕ್ಷದಲ್ಲಿ ಜಯಭೇರಿಗಳು ಕೇಳಬರತೊಡಗಿವೆ."

"ಜಯ ! ಅವರ ಪಿತಾಮಹರೇ ನೆಲಕ್ಕುರುಳಿದಾಗ ಅದನ್ನು ಕಂಡಾಗಲೂ ಅವರು ಜಯವನ್ನು ಆಚರಿಸುತ್ತಾರೆಯೇ ? ಜಯವೇನೋ ನಿಜ, ಆದರೆ ಆ ಜಯದ ಪರಾಕ್ರಮಕ್ಕೆ ಜೋಡಿಸಿದ ತುದಿ ಎಂಥದು, ಎಂಬುದು ಅವರು ಗಮನಕ್ಕೆ ತಂದುಕೊಂಡಂತಿಲ್ಲ. ಪಿತಾಮಹರು ಬಿದ್ದರೆಂಬ ಶಬ್ದದ ಬಗ್ಗೆಯೂ ನನಗೆ ಇನ್ನೂ ನಂಬಿಕೆ ಹುಟ್ಟುವುದಿಲ್ಲ."

ಭೀಷ್ಮರು ಪತನಗೊಂಡ ವಾರ್ತೆಯೊಂದಿಗೆ ಆ ದಿವ್ಯ ಮೂರ್ತಿಯು ಕರ್ಣನ ಮುಂದೆ ಕಾಣಿಸಿಕೊಂಡಿತು. ಆ ಹಿರಿಯರ ಬಗ್ಗೆ ತಾಳಿದ ಕೋಪ, ಸಂತಾಪಗಳೆಲ್ಲ ಮಾಯವಾಗಿ ಹೋದವು. ಆ ತೇಜಸ್ವೀ ಜೀವನ ಮಾತ್ರ ನೆನಪಿನಲ್ಲುಳಿಯಿತು, ಅವರ ತ್ಯಾಗ, ಅಜೇಯ, ಪರಾಕ್ರಮ. ಕುರುವಂಶದ ಸರ್ವಶ್ರೇಷ್ಠ ಎಂಬ ಧೀಮಂತತನ, ಎಲ್ಲರನ್ನೂ ಬೆಳೆಸಿದವನು, ಎಲ್ಲರಿಗೂ ನೀತಿ ನಿಯಮಗಳನ್ನು ಹೇಳಿದವನು, ಶಾಂತಸ್ವಭಾವಿಯೂ ಆದ ಗಾಂಗೇ

ಯನು ಇಂದು ಕುಸಿದುಬಿದ್ದಿದ್ದಾನೆ ! ಮೃತ್ಯುವಿನ ಹೆಸರೆತ್ತಿದರೆ ಓಡಿಹೋಗು ವದು ಲೋಕರೂಢಿಯಾದರೆ, ಬಂದಿರುವ ಮೃತ್ಯುವನ್ನೂ ತಡೆಹಿಡಿದು ನಿಲ್ಲಿಸಿ, ಶರಪಂಜರದಲ್ಲಿ ವಿಶ್ರಾಂತಿಯನ್ನು ಪಡೆಯುತ್ತಲಿರುವ ಅಗಾಧವಾದ ಆ ಭೀಷ್ಮರ ವ್ಯಕ್ತಿತ್ವವನ್ನು ಕುರಿತು ಆತನು ಚಿಂತಿಸಲಾರಂಭಿಸಿದ.

ರಥದ ಶಬ್ದವು ಕೇಳಿಬಂದಾಗ ಆತನಿಗೆ ಬಾಹ್ಯ ಪ್ರಜ್ಞೆಯು ಬಂದಿತು. ವಣವೇಷಧಾರಿಯಾದ ಅಶ್ವತ್ಥಾಮನು ಮನೆಯ ಮೆಟ್ಟಿಲುಗಳನ್ನು ಹತ್ತುತ್ತ ಲಿದ್ದ. ತನ್ನ ಕಣ್ಣೀರನ್ನು ಬಹು ಕಷ್ಟದಿಂದ ತಡೆಹಿಡಿಯುತ್ತ ಆತನು,

"ಕರ್ಣಾ, ಪಿತಾಮಹರು........"

ಅಶ್ವತ್ಥಾಮನ ಹೆಗಲ ಮೇಲೆ ಕೈಯನ್ನಿಟ್ಟು ಕರ್ಣನು ಹೇಳಿದ, "ನನಗೆ ಎಲ್ಲ ವಿಷಯವೂ ತಿಳಿದಿದೆ."

"ಅಂಗರಾಜ, ಭೀಷ್ಮರು ನೆಲಕ್ಕುರುಳಿದ ನಂತರ ನಮ್ಮ ಸೇನೆಯಲ್ಲಿ ಹಾಃ ಹಾಃ ಕಾರವೆದ್ದಿತು. ಆ ಸೈನ್ಯವನ್ನು ಸಮಾಧಾನಪಡಿಸಲು ಈಗ ತಂದೆ ಹಾಗೂ ಯುವರಾಜರು ಪ್ರಯತ್ನಿಸುತ್ತಿದ್ದಾರೆ. ನಮ್ಮ ವೀರರೆಲ್ಲ ನಿನ್ನ ದರ್ಶನಕ್ಕಾಗಿ ಕಾತುರರಾಗಿದ್ದಾರೆ. ಅವರೆಲ್ಲರೂ ನಿನ್ನನ್ನು ಸ್ಮರಣೆ ಮಾಡುತ್ತ ಲಿದ್ದಾರೆ. ನಿನ್ನನ್ನು ಕರೆತರಲೆಂದೇ ಯುವರಾಜನು ನನ್ನನ್ನು ಕಳುಹಿಸಿ ದ್ದಾನೆ."

"ಹೌದು ಮಿತ್ರಾ, ಯುದ್ಧಭೂಮಿಯ ಅವಶ್ಯಕತೆಯ ಅರಿವು ನನಗೆ ಚೆನ್ನಾಗಿ ಅರ್ಥವಾಗುತ್ತದೆ. ಸಹನ ಶಕ್ತಿಗೂ ಒಂದು ಮಿತಿ ಇದೆ, ಚಕ್ರಧರ ನನ್ನ ರಥವನ್ನು ಸಿದ್ಧಗೊಳಿಸು."

ಕ್ಷಣಮಾತ್ರದಲ್ಲಿ ಕರ್ಣನ ಮುಖಚರ್ಯೆಯು ಪಲ್ಲಟವಾಯಿತು. ಅವನು ಚಲಿಸುತ್ತಿದ್ದಂತೆಯೇ ಆಜ್ಞೆ ಮಾಡುತ್ತಲಿದ್ದ,

"ಚಕ್ರಧರ ಇನ್ನು ವೇಳೆಯಿಲ್ಲ. ನನ್ನ ರತ್ನಖಚಿತವಾದ ಹಾಗೂ ಸೂರ್ಯ ಸಮಾನವಾಗಿ ಹೊಳೆಯುವ ಶಿರಸ್ತ್ರಾಣ ಹಾಗೂ ಸುವರ್ಣಕವಚ ಗಳನ್ನು ತೆಗೆದುಕೊಂಡು ಬಾ. ಅವುಗಳನ್ನು ನನ್ನ ಮೈಯಲ್ಲಿ ತೊಡಿಸು. ಹದಿನಾರು ಬತ್ತಳಿಕೆಗಳನ್ನು ನನ್ನ ರಥದಲ್ಲಿಡು. ಸರ್ವರೀತಿಯಿಂದಲೂ ರಥ ವನ್ನು ಸಿದ್ಧಗೊಳಿಸು. ಶುಭ್ರವಾದ ಹಾಗೂ ಶೀಘ್ರಗಾಮಿಗಳಾದ ಕುದುರೆ ಗಳನ್ನು ರಥಕ್ಕೆ ಜೋಡಿಸು. ಶತ್ರುಗಳನ್ನು ಭಯಭೀತಗೊಳಿಸುವ ನನ್ನ

ಸುವರ್ಣ ಶೃಂಖಲೆ ಹಾಗೂ ಕಮಲಚಿಹ್ನಾಂಕಿತವಾದ ಧ್ವಜವನ್ನು ರಥದ ಮೇಲೆ ಹಾರಾಡುವಂತೆ ಮಾಡು. ಕೌರವರ ರಕ್ಷಣೆಗಾಗಿ ಹಾಗೂ ಪಾಂಡವರ ನಾಶಕ್ಕಾಗಿ ಈ ಘನಘೋರವಾದ ಯುದ್ಧದಲ್ಲಿ ನಾನು ನನ್ನ ಪ್ರಾಣದ ಪರಿವೆಯಿಲ್ಲದೆ ಅದನ್ನು ಸಮರ್ಪಿಸಲೋಸುಗ ಯುದ್ಧಭೂಮಿಯನ್ನು ಪ್ರವೇಶ ಮಾಡುವೆ, ಮಿತ್ರಾ, ವೇಳೆಯು ತುಂಬಾ ಕಡಿಮೆ ಇದೆ."

ಅತ್ಯಂತ ಅಲ್ಪಾವಧಿಯಲ್ಲಿಯೇ ಕರ್ಣನು ಯುದ್ಧಭೂಮಿಗೆ ಹೊರಡಲು ಸಿದ್ಧನಾದ. ಅವನ ಎದೆಯ ಮೇಲೆ ರತ್ನಖಚಿತವಾದ ಸುವರ್ಣ ಕವಚವಿತ್ತು. ಶಿರಸ್ತ್ರಾಣವು ಫಳಫಳನೆ ಹೊಳೆಯುತ್ತಲಿತ್ತು. ಹೆಗಲ ಮೇಲೆ ದಿವ್ಯವಾದ ಧನುಸ್ಸನ್ನು ಆತನು ಧಾರಣೆಮಾಡಿದ್ದ.

ವೃಷಾಲಿಯು ತಟ್ಟೆಯಲ್ಲಿ ಆರತಿಯನ್ನು ತಂದಳು. ಅವಳು ಕರ್ಣನಿಗೆ ಕುಂಕುಮ ತಿಲಕವನ್ನಿಟ್ಟಳು. ಆರತಿಯನ್ನು ಬೆಳಗಿದಳು. ತಟ್ಟೆಯನ್ನು ಕೆಳಗಿಟ್ಟಾಗ ಮುಗುಳು ನಗೆಯಿಂದ ಕೂಡಿದ ಕರ್ಣನು ತನ್ನ ಕೈಗಳನ್ನು ಮೇಲಕ್ಕೆತ್ತಿದ. ಆಗ ವೃಷಾಲಿಯು ಆತನ ಸೊಂಟಕ್ಕೆ ಶಲ್ಯವನ್ನು ಸುತ್ತುತ್ತ ಹೇಳಿದಳು.

"ನಾನು ದಾರಿ ಕಾಯುತ್ತೇನೆ."

"ನಿಶ್ಚಯವಾಗಿ ನನ್ನ ಪರಾಕ್ರಮದ ಕಥೆಯನ್ನು ಹೇಳಲು ನಾನೇ ನಿನ್ನೆದುರು ಬಂದು ನಿಲ್ಲುತ್ತೇನೆ. ವೃಷಾಲಿ ನನ್ನ ಶಂಖ."

"ವೃಷಾಲಿಯು ಸುವರ್ಣದಿಂದ ಹೊದಿಸಲ್ಪಟ್ಟ ಶಂಖವನ್ನು ಆತನ ಕೈಗಿತ್ತಳು. ಅದನ್ನು ಅತ್ಯಂತ ಆದರ ಭಾವದಿಂದ ಕಣ್ಣಿಗೊತ್ತಿಕೊಂಡು ಬಲಗೈಯಲ್ಲಿ ಅದನ್ನು ಹಿಡಿದುಕೊಂಡ ಕರ್ಣನು ಹೊರಬಾಗಿಲಿಗೆ ಬಂದಾಗ ರಥವು ಸಿದ್ಧವಾಗಿತ್ತು. ಮೆಟ್ಟಲುಗಳ ಮೇಲೆ ನಿಂತ ವೃಷಾಲಿಯನ್ನು ನೋಡಿದಾಗ ತುಟಿಯ ಮೇಲೆ ನಗು ಮೂಡಿತು. ಕರ್ಣನು ರಥಾರೂಢನಾದ.

"ಯುವರಾಜ ದುರ್ಯೋಧನರ ಶಿಬಿರದತ್ತ ರಥವನ್ನು ಸಾಗಿಸು" ಎಂದು ಆಜ್ಞೆ ಮಾಡಿದ.

ಆತನ ರಥದ ಹಿಂದೆ ಅಶ್ವತ್ಥಾಮ ಹಾಗು ಚಕ್ರಧರನ ರಥಗಳು ಧಾವಿಸುತ್ತಿದ್ದವು. ಆಕಾಶದಲ್ಲಿ ಹಾರಾಡುತ್ತಿರುವ ಕರ್ಣನ ರಥದ ಮೇಲಿರುವ ಧ್ವಜವನ್ನು ಕಂಡು ಕೌರವ ಸೇನೆಯು ಪಿತಾಮಹರ ಪತನದ ದುಃಖವನ್ನು ಮರೆತು ಕರ್ಣನಿಗೆ ಜಯ ಜಯಕಾರವನ್ನು ಮಾಡಲಾರಂಭಿಸಿತು.

ದುರ್ಯೋಧನನು ಕರ್ಣನಿಗೆ ಎದುರಾಗಿ ಬಂದು ಅವನಿಗೆ ಸ್ವಾಗತವನ್ನು ಕೋರಿದ. ಸನ್ಮಾನದಿಂದ ಶಿಬಿರಕ್ಕೆ ಕರೆದುಕೊಂಡು ಹೋದ. ಶಿಬಿರದಲ್ಲಿ ಕೌರವ ಯೋಧರೆಲ್ಲ ಮಿಳಿತರಾಗಿದ್ದರು. ರಣಾಂಗಣದಲ್ಲಿ ಯುದ್ಧವು ನಡೆಯುತ್ತಲೇ ಇತ್ತು. ಬಹು ಕಷ್ಟದಿಂದ ದುರ್ಯೋಧನನು ಹೇಳಿದ,

"ಮಿತ್ರಾ, ಪಿತಾಮಹರು........"

"ಅವರು ಜೀವನದ ಸಾರ್ಥಕ್ಯವನ್ನು ಕಂಡುಕೊಂಡರು. ಆದರೆ ಅವರೇ ಆರಂಭಿಸಿದ ಈ ಯುದ್ಧ........"

"ಮುನ್ನಡೆಯುತ್ತದೆ" ನಿಶ್ಚಿತ ಧ್ವನಿಯಲ್ಲಿ ದುರ್ಯೋಧನನು ಹೇಳಿದ,

"ಮಿತ್ರಾ, ಪಿತಾಮಹರ ನಂತರ ಸೇನಾಪತಿಯ ಪದವಿಯನ್ನು ನೀನು ವಹಿಸಕೊಳ್ಳಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ."

"ಇಲ್ಲ, ಹಾಗೆ ಮಾಡಿದಲ್ಲಿ ಬಹು ದೊಡ್ಡ ಅಪರಾಧವೆನಿಸುತ್ತದೆ. ಈಗ ಹೆಚ್ಚಿನ ಜವಾಬುದಾರಿಯೂ ಇದೆ. ಭೀಷ್ಮರು ಶರಶಯ್ಯೆಯನ್ನು ಹೊಂದಿದ್ದರೂ ದ್ರೋಣಾಚಾರ್ಯರು ಅಷ್ಟೇ ರಭಸದಿಂದ ಹೋರಾಡುತ್ತಲಿದ್ದಾರೆ. ಅವರಿಗೆ ಈ ಪದವಿ ಸಲ್ಲಬೇಕಾದುದು ಅತ್ಯಂತ ಯೋಗ್ಯವಾಗಿದೆ. ಗುರುವರ್ಯರಾದ ಆಚಾರ್ಯ ದ್ರೋಣರು ಉಪಸ್ಥಿತರಿರುವಾಗ ಬೇರೆ ಯಾರನ್ನಾದರೂ ಸೇನಾಪತಿಯನ್ನಾಗಿ ಆರಿಸಿದಲ್ಲಿ ಕೀರ್ತಿವಂತರಾದ ಯೋಧರಿಗೆ ಅದು ಅಸಹನೀಯವಾಗುತ್ತದೆ."

"ಆದರೆ ನೀನು ?"

"ಮಿತ್ರಾ, ನನ್ನ ಚಿಂತೆಯನ್ನು ಮಾಡಬೇಡ. ಗುರುಗಳಾದ ದ್ರೋಣಾಚಾರ್ಯರ ಕೈ ಕೆಳಗೆ ಕೆಲಸ ಮಾಡಲು ನನಗೆ ಆನಂದವೆನ್ನಿಸುತ್ತದೆ. ನೀನು ನಿಶ್ಚಿಂತನಾಗಿರು ನಿನ್ನ ಸಲುವಾಗಿ ನನ್ನ ಪರಾಕ್ರಮವನ್ನು ಸಾರ್ಥಕಗೊಳಿಸುವೆ."

ದುರ್ಯೋಧನ, ಕರ್ಣ ಹಾಗೂ ಉಳಿದ ವೀರರೆಲ್ಲ ಸೈನ್ಯದ ಮಧ್ಯಭಾಗದಲ್ಲಿರುವ ದ್ರೋಣಾಚಾರ್ಯರಿದ್ದಲ್ಲಿಗೆ ಹೋದರು. ಸೇನಾಪತಿಯ ಪದವನ್ನು ಸ್ವೀಕರಿಸುವಂತೆ ಅವರನ್ನು ಪ್ರಾರ್ಥಿಸಿಕೊಂಡರು. ಆ ಪೂಜ್ಯರು ತಮ್ಮ ಒಪ್ಪಿಗೆಯನ್ನಿತ್ತ ನಂತರ ದುರ್ಯೋಧನನು ಶಾಸ್ತ್ರಪ್ರಕಾರವಾಗಿ ಅವರಿಗೆ ಸೇನಾಪತಿ ಪದದ ಅಭಿಷೇಕವನ್ನು ಮಾಡಿದ. ಆಗ ಅಸಾಧ್ಯವಾದ ಶಂಖಧ್ವನಿ ಹಾಗೂ ಪ್ರಚಂಡವಾದ ಜಯ ಜಯಕಾರಗಳೊಂದಿಗೆ ದ್ರೋಣಾ

ಚಾರ್ಯರು ಸೇನಾಪತಿಯ ಪದವಿಯನ್ನು ವಹಿಸಿಕೊಂಡರು. ಈ ವಾರ್ತೆಯು ರಣರಂಗದಲ್ಲೆಲ್ಲ ಹರಡಿಕೊಂಡಿತು. ಹೊಸ ಉತ್ಸಾಹದಿಂದ ಕೌರವ ಸೇನೆಯು ಪಾಂಡವರನ್ನೆದುರಿಸಲು ಮುನ್ನುಗ್ಗಿತು. ಸೂರ್ಯಾಸ್ತವಾದೊಡನೆ ಯುದ್ಧವನ್ನು ನಿಲ್ಲಿಸಲಾಯಿತು. ಗಾಯಗೊಂಡು ತುಂಬ ದಣಿದ ಯೋಧರು ತಮ್ಮ ತಮ್ಮ ಶಿಬಿರಗಳಿಗೆ ಮರಳಲಾರಂಭಿಸಿದರು.

ದುರ್ಯೋಧನನು ತನ್ನ ಶಿಬಿರಕ್ಕೆ ಬಂದನು. ಅನಂತರ ಆತನ ಅಪ್ಪಣೆಯನ್ನು ಪಡೆಯಲು ಕರ್ಣನು,

"ಯುವರಾಜ, ಒಂದು ಅಪರಾಧವು ನಡೆದು ಹೋಗಿದೆ. ಈಗ ನಾನು ಪರಿಮಾರ್ಜನೆ ಮಾಡಿಕೊಳ್ಳಬೇಕಾಗಿದೆ" ಎಂದ.

"ಎಂಥ ಅಪರಾಧ ?"

"ನಾನು ರಣಾಂಗಣಕ್ಕೆ ಹೋಗುವ ಮುನ್ನ ಭೀಷ್ಮರ ಆಶೀರ್ವಾದವನ್ನು ಪಡೆಯಬೇಕಾಗಿತ್ತು. ಆಗ ನನಗೆ ವೇಳೆಯೇ ದೊರೆಯಲಿಲ್ಲ. ಈಗ ಆ ಕಾರ್ಯವನ್ನು ಮಾಡಬೇಕಾಗಿದೆ."

"ನಾನೂ ಬರಲೇ ?"

"ಬೇಡ, ನಾನೊಬ್ಬನೇ ಹೋಗುವೆ."

ಸೂರ್ಯಾಸ್ತವಾಗಿ ತುಂಬ ಹೊತ್ತಾಗಿತ್ತು. ಮಂದವಾದ ಚಂದ್ರಪ್ರಕಾಶದಿಂದ ವಾತಾವರಣವೆಲ್ಲ ನಿಗೂಢತೆಯಿಂದ ಕೂಡಿದಂತೆ ತೋರುತ್ತಲಿತ್ತು. ಏಕಾಂಗಿಯಾದ ಕರ್ಣನು ರಥಾರೂಢನಾಗಿ ಲಗಾಮುಗಳನ್ನು ಕೈಗೆತ್ತಿಕೊಂಡಾಗ ರಣಭೂಮಿಯತ್ತ ರಥವು ಓಡಲಾರಂಭಿಸಿತು. ಶಂಖನಾದ, ಆನೆಗಳ ಕಿರುಚಾಟ, ರಥಗಳ ಓಡಾಟದ ಸಪ್ಪಳ ಇವೇ ಮೊದಲಾದುವುಗಳಿಂದ ತುಂಬಿಹೋಗಿದ್ದ ರಣಭೂಮಿಯು ಈಗ ಶಾಂತವಾಗಿತ್ತು. ನೆಲಕ್ಕುರುಳಿ ಬಿದ್ದ ಪ್ರೇತಗಳ ಮೇಲೆ ಚಕ್ರಗಳು ಹೋಗದಂತೆ ರಥವನ್ನು ಬಹು ಜಾಗರೂಕತೆಯಿಂದ ಓಡಿಸಬೇಕಾಗಿತ್ತು. ಯುದ್ಧಭೂಮಿಯ ಉತ್ತರ ಭಾಗದತ್ತ ಕರ್ಣನು ತನ್ನ ರಥವನ್ನು ಓಡಿಸುತ್ತಲಿದ್ದ. ಮಾಲಾಕಾರವಾದ ದೀವಟಿಗೆಗಳ ಬೆಳಕು ಕಾಣಲಾರಂಭಿಸಿತು. ನಂತರ ಸ್ವಲ್ಪ ದಾರಿ ಸರಿದ ನಂತರ ಕರ್ಣನ ರಥವು ನಿಂತಿತು. ಸೇವಕರು ಮುಂದೆ ಬಂದರು. ಅನತಿ ದೂರದಲ್ಲಿ ಇನ್ನೊಂದು ರಥವು ನಿಂತಿರುವುದನ್ನು ಕಂಡ ಕರ್ಣನು ವಿಚಾರಿಸಿದ.

"ಸಮೀಪದಲ್ಲಿ ಯಾರಿದ್ದಾರೆ ?"

"ದ್ವಾರಕಾಧೀಶ, ಕೃಷ್ಣ ಮಹಾರಾಜರು."

"ಮತ್ತೇ ?"

"ಯಾರೂ ಇಲ್ಲ ; ಎಲ್ಲರೂ ಬಂದು ಹೋದರು"

ಕರ್ಣನು ತನ್ನ ಕಿರೀಟವನ್ನು ರಥದಲ್ಲಿಟ್ಟು ನಿಧಾನವಾಗಿ ಭೀಷ್ಮರಿದ್ದಲ್ಲಿಗೆ ಹೊರಟ. ಶರಶಯ್ಯೆಯಲ್ಲಿ ಭೀಷ್ಮರು ಮಲಗಿಕೊಂಡಿದ್ದರು. ಕೃಷ್ಣನು ಅವರ ಪಕ್ಕದಲ್ಲಿ ಅಧೋವದನನಾಗಿ ಕುಳಿತುಕೊಂಡಿದ್ದ. ಪ್ರಜ್ವಲಿಸುವ ದೀವಟಿಗೆಗಳು ಭೀಷ್ಮರ ಮುಖದ ಮೇಲೆ ಬೆಳಕನ್ನು ಚೆಲ್ಲಿದ್ದವು. ಅವರು ಕಣ್ಣು ಮುಚ್ಚಿದ್ದರು. ರಣವೇಷಗಳಿಂದ ನೆಲಕ್ಕುರುಳಿದವರು ಹಾಗೆಯೇ ವಿಶ್ರಾಂತಿಯನ್ನು ಪಡೆಯುತ್ತಿದ್ದರು. ಆ ಯೋಧರನ್ನು ಕಂಡು ಕರ್ಣನ ನೇತ್ರಗಳು ತುಂಬಿ ಬಂದವು. ಆ ಮಹಾಪುರುಷನ ಎದೆಯ ಮೇಲೆ ಬಿಳಿಯ ಗಡ್ಡಗಳು ಹರಡಿಕೊಂಡಿದ್ದವು. ಸಾಕಷ್ಟು ಗಾಯಗಳಾಗಿದ್ದರೂ ಮುಖದ ಮೇಲಿನ ಕಾಂತಿಯು ಮಾತ್ರ ಸ್ವಲ್ಪವೂ ಕುಂದಿರಲಿಲ್ಲ. ಗಾಯಗಳಿಂದಾದ ನೋವಿನ ತೊಂದರೆಯೂ ಕಾಣಬರುತ್ತಿರಲಿಲ್ಲ. ಶುಭ್ರಕಾಂತಿಯಿಂದ ನವೋದಿತ ಚಂದ್ರನಂತೆ ಕಾಣುತ್ತಿದ್ದ ಭೀಷ್ಮರು ಅತ್ಯಂತ ಶಾಂತಚಿತ್ತರಾಗಿ ಮಲಗಿದಂತೆ ತೋರಿಬರುತ್ತಿತ್ತು. ಕರ್ಣನು ಭೀಷ್ಮರ ಪಾದಗಳಹತ್ತಿರ ಕುಳಿತು ಎರಡೂ ಕೈಗಳಿಂದ ಅವರ ಪಾದಗಳನ್ನು ಹಿಡಿದುಕೊಂಡು ತನ್ನ ಕಣ್ಣೀರಿನಿಂದ ಆ ಪಾದಗಳಿಗೆ ಅಭಿಷೇಕ ಮಾಡತೊಡಗಿದ. ಇದೇ ಭೀಷ್ಮರು ಆತನಿಗೆ ಅರ್ಧರಥೀ ಎಂದು ಕರೆದು ತೇಜೋಭಂಗವನ್ನು ಮಾಡಿದ್ದರು. ಆದರೂ ಭೀಷ್ಮರನ್ನು ಕಂಡೊಡನೆ ಅವನಿಗೆ ದುಃಖವು ತಡೆಯದಂತಾಯಿತು. ಭೀಷ್ಮರು ವಿಚಾರಿಸಿದರು.

"ನನ್ನ ಪಾದಗಳನ್ನು ಹಿಡಿದುಕೊಂಡು ಅಶ್ರು ಸುರಿಸುವವರು" ಯಾರು ?"

"ಹೇ, ಕುರುಶ್ರೇಷ್ಠಾ ! ಅಂಗರಾಜ ಕರ್ಣನು ತಮ್ಮ ದರ್ಶನಾರ್ಥಿಯಾಗಿ ಬಂದಿದ್ದಾನೆ" ಎಂದು ಕೃಷ್ಣನು ಮೇಲೇಳುತ್ತ ಹೇಳಿದ. "ನಾನು ಇನ್ನು ಹೊರಡುವೆ, ನನಗೆ ಅಪ್ಪಣೆಯನ್ನು ಕೊಡಿರಿ."

ಭೀಷ್ಮರು ತಲೆಯನ್ನಾಡಿಸಿದರು. ಆಗ ಕರ್ಣನತ್ತ ನೋಡಿದ ಕೃಷ್ಣನು ಹೊರಡಲುದ್ಯುಕ್ತನಾದ. ಅದನ್ನು ಕಂಡು ಅವಸರದಿಂದ ಮೇಲೆದ್ದ ಕರ್ಣನು,

"ಕೃಷ್ಣಾss"

ಅವನ ಆ ಕೂಗು ಕೃಷ್ಣನನ್ನು ಹಿಡಿದು ನಿಲ್ಲಿಸಿತು. ಆತ ಕರ್ಣನನ್ನೇ ದಿಟ್ಟಿಸಿ ನೋಡುತ್ತಲಿದ್ದ. ಕರ್ಣನ ಕಪೋಲಗಳ ಮೇಲೆ ಕಣ್ಣೀರು ಧಾರಾಕಾರವಾಗಿ ಇಳಿಯುತ್ತಿತ್ತು. ಅದನ್ನೊರೆಸಿಕೊಳ್ಳಬೇಕೆಂಬ ಪ್ರಜ್ಞೆಯೂ ಆತನಿಗಿರಲಿಲ್ಲ. ಕೃಷ್ಣನ ಮುಖದಲ್ಲಿ ಮಂದಹಾಸವು ಕಾಣಿಸಿತು, ಆತನು ತನ್ನ ಕೈಯಿಂದ ಕರ್ಣನ ಕಣ್ಣುಗಳನೊರಸಿದ. ಕೃಷ್ಣನ ಆ ಕೃತಿಯಿಂದ ಆತನಿಗೆ ಮತ್ತಷ್ಟು ದುಃಖವು ಉಮ್ಮಳಿಸಿತು. ಅವನು ಕೃಷ್ಣನನ್ನು ಬಿಗಿದಪ್ಪಿಕೊಂಡ. ಕೃಷ್ಣನ ಕೈ ಕರ್ಣನ ಬೆನ್ನಿನ ಮೇಲಾಡುತ್ತಿತ್ತು. ಕರ್ಣನ ಅಪ್ಪುಗೆಯನ್ನು ಬಿಡಿಸಿಕೊಂಡ ಕೃಷ್ಣನು, ಕರ್ಣನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಕೃಷ್ಣನ ಅಂತರಾತ್ಮವು ಅತೀವ ದುಃಖಗೊಂಡಂತೆ ಕರ್ಣನಿಗನಿಸಿತು. ಹಿಂದೆ ದ್ರೌಪದಿಯ ವಸ್ತ್ರಾಪಹರಣ ಕಾಲದಲ್ಲಿ ಕೃಷ್ಣನ ಇಂಥ ರೂಪವನ್ನೇ ಆತನು ಕಂಡಿದ್ದ, ಮುಂದೆ ಕೆಲವೇ ಗಳಿಗೆಯಲ್ಲಿ ಕೃಷ್ಣನು ಯಾವಮಾತನ್ನಾಡದೇ ಆ ಸ್ಥಳದಿಂದ ಹೊರಟುಬಿಟ್ಟ. ಮಂದಗತಿಯಲ್ಲಿ ಹೊರಟ ಕೃಷ್ಣನ ರಥವನ್ನೇ ಕರ್ಣನು ನೋಡುತ್ತಲಿದ್ದ.

"ಕರ್ಣಾ."

ಆ ಕೂಗು ಭೀಷ್ಮರನ್ನು ಆತ ಮತ್ತಷ್ಟು ಸಮೀಪಿಸುವಂತೆ ಮಾಡಿತು.

"ಹೇ. ಮಹಾಬಾಹೋ, ತಾವು ಯಾವಾಗಲೂ ದ್ವೇಷಿಸುತ್ತಿದ್ದ ಆ ಸೂತಪುತ್ರನಾದ ಈ ಕರ್ಣನು ತಮ್ಮಲ್ಲಿ ಕ್ಷಮೆ ಕೇಳಲು ಬಂದಿದ್ದಾನೆ."

"ಕ್ಷಮೆ ! ಯಾತಕ್ಕಾಗಿ ?"

"ತಮ್ಮ ಭೇಟಿಗಾಗಿ ನಾನು ಈ ಮೊದಲೇ ಬರಬೇಕಿತ್ತು. ಆದರೆ ಬಿಡುವು ದೊರೆಯಲಿಲ್ಲ, ಆದುದರಿಂದ ತಮ್ಮ ದರ್ಶನಕ್ಕೆ ಬರಲು ವಿಳಂಬವಾಯಿತು."

"ಇಲ್ಲ ಕರ್ಣಾ, ಯಾವುದು ಉಚಿತವೋ, ಅದನ್ನೇ ನೀನು ಮಾಡಿರುವೆ. ವೀರರಾದವರು ರಣನೀತಿಗೆ ಬದ್ಧರಾಗಿರುತ್ತಾರೆ. ನಿನಗಿಂತ ಮೊದಲು ಅಪ್ಪ

ತ್ಥಾಮನು ಬಂದುಹೋದ. ಆತನಿಂದ ಎಲ್ಲ ವೃತ್ತಾಂತವೂ ತಿಳಿಯಿತು ಆಚಾರ್ಯ ದ್ರೋಣರಿಗೆ ಸೇನಾಪತಿಯ ಪದವಿಯನ್ನೀಯುವಂತೆ ಸಲಹೆ ಮಾಡಿದುದು ತುಂಬ ಒಳ್ಳೆಯದಾಯಿತು. ಅದರಿಂದ ನನ್ನ ಮನಸ್ಸಿಗೆ ತುಂಬ ಸಮಾಧಾನವೆನ್ನಿಸಿತು. ಮಹಾರಥಿ! ಕರ್ಣನೇ, ಇನ್ನೂ ಸಮೀಪಕ್ಕೆ ಬಾ" ಭೀಷ್ಮರು ಆಜ್ಞಾಪಿಸಿದರು.

"ಮಹಾರಥಿ !" ಎಂಬ ಹೆಸರಿನಿಂದ ತನ್ನನ್ನು ಕೂಗಿದಾಗ ಕರ್ಣನ ಅಂಗಾಂಗಗಳೆಲ್ಲ ನಡುಗಿಹೋದವು. ಭೀಷ್ಮರು ಅವನನ್ನೇ ನೋಡುತ್ತಲಿದ್ದರು. ಅವರ ಮುಖವು ಪ್ರಸನ್ನಗೊಂಡಿತು.

"ನಿನ್ನ ಬರುವನ್ನೇ ನಾನು ನಿರೀಕ್ಷಿಸುತ್ತಿದ್ದೆ. ನೀನು ಬಂದುದರಿಂದ ನನಗೆ ತುಂಬ ಸಮಾಧಾನವೆನ್ನಿಸಿತು. ನಿನ್ನ ಅಹಂಕಾರದ ಸ್ವಭಾವದಿಂದಾಗಿ ಆಗಾಗ ನಾನು ಮಾಡಿದ ಅಪಮಾನವನ್ನು ನೆನೆದು, ಎಲ್ಲಿ ನೀನು ಬರುವದನ್ನೇ ನಿಲ್ಲಿಸುವೆಯೋ ಎಂದು ಯೋಚಿಸುತ್ತಲಿದ್ದೆ. ಒಂದು ವೇಳೆ ನೀನು ಬಾರದೇ ಹೋಗಿದ್ದಲ್ಲಿ ನಿನ್ನನ್ನು ನಾನು ಕರೆಸುತ್ತಿರಲಿಲ್ಲ. ಹಾಗೆ ಮಾಡಿದ್ದಲ್ಲಿ ನನ್ನ ಅಹಂಕಾರಕ್ಕೆ ಕುಂದುಂಟಾಗುತ್ತಿತ್ತು. ಆದರೂ ಮನಸ್ಸಿನಲ್ಲಿ ಹಳಹಳಿಯು ಮಾತ್ರ ಉಳಿದುಕೊಂಡು ಹೋಗುತ್ತಿತ್ತು."

ಸ್ವಲ್ಪ ಹೊತ್ತು ಸುಧಾರಿಸಿಕೊಂಡ ನಂತರ ಪುನಃ ಭೀಷ್ಮರು ಮಾತನಾಡಲಾರಂಭಿಸಿದರು.

"ಮಗೂ, ನಾನು ನಿನಗೆ ಸಾಕಷ್ಟು ಅವಮಾನವನ್ನು ಮಾಡಿದ್ದೇನೆ, ಅನೇಕ ಸಲ ನಿನ್ನನ್ನು ಕಡೆಗಣಿಸಿದ್ದೇನೆ. ಆದುದರಿಂದಾಗಿ ನೀನು ನನ್ನ ವಿಷಯದಲ್ಲಿ ವಿಪರೀತ ಕಲ್ಪನೆಗಳನ್ನು ಮಾಡಿಕೊಳ್ಳುವದು ಸಹಜವೇ ಆಗಿದೆ."

"ಇಲ್ಲ....ಪಿತಾಮಹರೇ, ನನ್ನ ಮನಸ್ಸಿನಲ್ಲಿ ಅಂಥ ವಿಕಲ್ಪಗಳಿಗೆ ಸ್ಥಾನವೇ ಇಲ್ಲ, ನಿಮಗಿರುವ ಅಧಿಕಾರದಿಂದ ನೀವು ಹಾಗೆ ಮಾಡಿದಿರಿ ಅಷ್ಟೇ"

ಭೀಷ್ಮರು ಸಮಾಧಾನದಿಂದ ನುಡಿದರು:

"ಕರ್ಣಾ, ನಿನ್ನ ಮನಸ್ಸು ನಿರ್ಮಲವಾದುದೆಂಬುದನ್ನು ನಾನು ಬಲ್ಲೆ. ನಾನು ಶರಪಂಜರದಲ್ಲಿ ಮಲಗಿದ್ದುದನ್ನು ಕಂಡು ನಿನ್ನ ದುಃಖವು ಮರುಕಳಿಸಿಬಂದಿತು. ಅದನ್ನು ಕಂಡಾಗ ನಿನ್ನಲ್ಲಿ ಅಹಂಕಾರವಿದ್ದರೂ

ಆದರಲ್ಲಿ ಕಾಪಟ್ಯವೆಂಬುದುದಿಲ್ಲ ಎಂಬುದನ್ನು ತಿಳಿದುಕೊಂಡೆ. ನಾನು ನಿನ್ನನ್ನು ಅಪಮಾನ ಮಾಡಿದಾಗಲೆಲ್ಲ ನೀನು ಸಂತಾಪಗೊಳ್ಳುತ್ತಿದ್ದಿ. ಆಗ ಅದನ್ನು ಕಂಡ ನನಗೆ ಸಮಾಧಾನವಾಗುತ್ತಿತ್ತು. ನಿನ್ನ ರೂಪದ ಬಗ್ಗೆ ಕೌತುಕವೆನಿಸುತ್ತಿತ್ತು."

ಭೀಷ್ಮರ ಮಾತುಗಳಿಂದ ಕರ್ಣನು ಚಕಿತನಾಗಿದ್ದ. ಆತನ ಮುಖದ ಮೇಲಿರುವ ಆಶ್ಚರ್ಯದ ಭಾವವನ್ನು ಅರ್ಥಮಾಡಿಕೊಂಡ ಭೀಷ್ಮರು,

"ನಿನ್ನನ್ನು ಅಹಂಕಾರಿ ದುರಭಿಮಾನಿ ಎಂದು ದೂಷಿಸುತ್ತಿದ್ದೆ. ಅದರೆ ಅದರಲ್ಲಿ ಹೇಳಿಕೊಳ್ಳುವಂತಹ ಅರ್ಥವೇನೂ ಇರಲಿಲ್ಲ. ವೀರನಾದವನಿಗೆ ಕೇವಲ ಶಿರಸ್ತ್ರಾಣ, ಕವಚಾದಿಗಳಿದ್ದರೆ ಸಾಲದು, ಅಭೇದ್ಯವಾದ ಮಾನಸಿಕ ಸ್ಥಿತಿಯೂ ಅಷ್ಟೇ ಅವಶ್ಯ. ಅಭಿಮಾನ, ಅಹಂಕಾರ ಹಾಗೂ ಈರ್ಷ್ಯೆ ಇವು ವೀರರಿಗೆ ನಿಜವಾದ ಕವಚಗಳಿದ್ದಂತೆ. ವೀರರಲ್ಲಿ ಪ್ರಕಟವಾಗುವ ಈ ಭಾವನೆಗಳು ಶತ್ರುಗಳಿಗೆ ಯಾವಾಗಲೂ ದುರ್ಗುಣವಾಗಿಯೇ ತೋರಿಬರುತ್ತವೆ.

ಮಗೂ, ನಾನು ಕ್ಷತ್ರಿಯನಿರುವೆ. ನನ್ನಂಥ ಅಜೇಯರು ಈ ಭೂಲೋಕದಲ್ಲಿಯೇ ಇಲ್ಲ ಎಂಬ ಅಹಂಕಾರವು ನನಗೂ ಇತ್ತು. ಆ ನನ್ನ ಅಹಂಕಾರವನ್ನು ಕೆಣಕುವ ಸಾಮರ್ಥ್ಯವನ್ನು ಕೇವಲ ನಿನ್ನಲ್ಲಿ ಮಾತ್ರ ನಾನು ಕಾಣುತ್ತಿದ್ದೆ. ಅದು ನಿನ್ನ ರೂಪದಲ್ಲಿ ವ್ಯಕ್ತವಾಗುತ್ತಿತ್ತು. ಆದುದರಿಂದಲೇ ಆಗಾಗ ನನ್ನ ಮತ್ಸರವು ಪ್ರಕಟವಾಗುತ್ತಿತ್ತು. ಈ ಮಾತನ್ನು ನೀನು ಅರ್ಥಮಾಡಿಕೊಳ್ಳಲಿಲ್ಲ. ನಾನು ನಿನಗೆ ಮಾಡಿದ ಅವಮಾನವೇ ನಿಜವಾದ ನಿನ್ನ ಸನ್ಮಾನವೆನಿಸುತ್ತಿತ್ತು."

"ಪಿತಾಮಹ, ನಾನೊಬ್ಬ ಸೂತಪುತ್ರ."

"ಕರ್ಣಾ, ಅಕ್ಕಪಕ್ಕದಲ್ಲಿ ಯಾರಾದರೂ ಇದ್ದಾರೆಯೇ ?"

ಆ ಮಾತಿನಿಂದ ಕರ್ಣನು ಆಶ್ಚರ್ಯಚಕಿತನಾದ. ಸುತ್ತಲೂ ಕಣ್ಣಾಡಿಸಿ ನೋಡಿದ. ರಕ್ಷಕ ದಲದವರು ತುಂಬ ದೂರದಲ್ಲಿ ನಿಂತುಕೊಂಡಿದ್ದರು. ಅದನ್ನು ಗಮನಿಸಿದ ಕರ್ಣನು ಹೇಳಿದ.

"ಯಾರೂ ಇಲ್ಲ."

"ಮಗೂ, ನೀನು ಸೂತಪುತ್ರನಲ್ಲ ರಾಧೇಯನೂ ಅಲ್ಲ. ನೀನು ಕೌಂತೇಯನಿರುವೆ."

ಈ ಮಾತಿನಿಂದ ಕರ್ಣನ ಮೈಮನಗಳು ರೋಮಾಂಚನಗೊಂಡವು. ಆತನು ನಡುಗುವ ಧ್ವನಿಯಲ್ಲಿಯೇ ಕೇಳಿದ.

"ನಿಮಗೆ ಅದು ಹೇಗೆ ಗೊತ್ತು ?"

"ನಿನಗೆ ತಿಳಿದಿದೆಯೇ ?"

"ಹೌದು ತಿಳಿದಿದೆ. ಆದರೆ ಕಾಲವು ಮಿಂಚಿಹೋದನಂತರ ಆ ವಿಷಯವು ಗೊತ್ತಾಗಿದೆ. ಅದನ್ನು ನನಗೆ ಕೃಷ್ಣನೇ ಮೊದಲು ತಿಳಿಸಿದ. ಆದರೆ ತಮಗೆ...."

ಧೀರ್ಘಶ್ವಾಸವನ್ನು ಬಿಟ್ಟ ಭೀಷ್ಮರು,

"ಅಂಗರಾಜಾ, ಈ ರಹಸ್ಯವನ್ನು ಕೃಷ್ಣನಿಂದ ಬಚ್ಚಿಡಲು ವಿದುರನಿಗೆ ಸಾಧ್ಯವಾಗಲಿಲ್ಲ. ಅಂದ ಮೇಲೆ ಅದನ್ನು ನನಗೂ ತಿಳಿಯದಂತಿಡಲು ಸಾಧ್ಯವೇ ? ಕರ್ಣಾ, ಈಗ ನಿನ್ನ ಸ್ವರೂಪ ಜ್ಞಾನವು ನಿನಗಾಗಿದೆ. ವೀರ ಶ್ರೇಷ್ಠಾ, ಜ್ಞಾನಕ್ಕೆ ಅನೇಕ ದಾರಿಗಳು ಕಾಣಿಸುತ್ತವೆ. ಆದರೆ ಅಜ್ಞಾನಕ್ಕೆ ದಾರಿ ಎಂಬುದೇ ಇಲ್ಲ. ಕಾಪಟ್ಯದ ಆವರಣವನ್ನು ಮುಂದುವರೆಸಿಕೊಂಡು ಹೋಗುವುದು ಬಹು ಕಠಿಣವಿದೆ. ಆ ಮೋಹದಲ್ಲಿ ನೀನು ಸಿಲುಕಬೇಡ."

"ನಾನೇನು ಮಾಡಲಿ ?" ಕರ್ಣನು ಪ್ರಶ್ನೆ ಮಾಡಿದ.

"ಏನು ಮಾಡಲಿ ಎಂದರೆ? ಪಾಂಡವರೊಂದಿಗೆ ಸಖ್ಯತ್ವವನ್ನು ಬೆಳೆಸು. ಅವರು ನಿನ್ನ ಸೋದರರಾಗಿದ್ದಾರೆ. ನಿನ್ನನ್ನು ಸ್ವೀಕರಿಸುವುದರಲ್ಲಿಯೇ ಅವರಿಗೆ ಧನ್ಯತೆ ಇದೆ. ಮಹಾ ಸಂಯಮಿಯಾದ ನಿನ್ನ ತಾಯಿಗೆ ಇದರಿಂದ ಸುಖವಾಗುತ್ತದೆ. ಕೃಷ್ಣನಿಗೆ ಅತ್ಯಾನಂದವೆನಿಸುತ್ತದೆ. ನಾನು ಯಾವಾಗಲೂ ಶಾಂತಿಯನ್ನೇ ಅಪೇಕ್ಷಿಸುತ್ತ ಬಂದಿದ್ದೇನೆ. ಆ ಶಾಂತಿಯ ಸಾಧನೆಯು ನಿನ್ನಿಂದ ಪೂರ್ಣವಾಗಲೀ. ಮಗೂ ಕರ್ಣಾ, ಈ ವೈರತ್ವವೂ ನನ್ನೊಂದಿಗೆ ಪರಿಸಮಾಪ್ತಿಯನ್ನು ಹೊಂದಲಿ. ನಿರ್ಮಲ ಮನಸ್ಸಿನಿಂದ ಎಲ್ಲ ರಾಜರುಗಳೂ ತಮ್ಮ ತಮ್ಮ ಸ್ವಗೃಹವನ್ನು ಸೇರುವಂತಾಗಲಿ"

"ಆಮೇಲೆ ಧೃತರಾಷ್ಟ್ರ ಪುತ್ರ ದುರ್ಯೋಧನನ ಗತಿ ? ಅವನ ದಾರಿ ಯಾವುದು ?" ಕರ್ಣನ ಧ್ವನಿ ಕಂಪಿಸುತ್ತಿತ್ತು.

"ಹುಂ !"

"ಪಿತಾಮಹರೇ, ಯಾರು ನನ್ನ ಭರವಸೆಯಿನ್ನಿಟ್ಟುಕೊಂಡೇ ಈ ಯುದ್ಧವನ್ನಾರಂಭಿಸಿರುವರೋ, ಆ ದುರ್ಯೋಧನಾದಿಗಳಿಗೆ ಯಾದ ದಾರಿ ಇದೆ? ನಾನು ಪಾಂಡವರನ್ನು ಕೂಡಿಕೊಂಡೆ ಎಂದು ತಿಳಿದೊಡನೆ ನನ್ನ ಮಿತ್ರ ದುರ್ಯೋಧನನ ಎದೆಯೊಡೆದು ಹೋಗುತ್ತದೆ. ಜೀವಮಾನದಲ್ಲಿ ನನಗೆ ಒಬ್ಬನೇ ಒಬ್ಬ ಅಂತಃಕರಣಿಯ ಸಹವಾಸವು ಲಭಿಸಿದೆ. ಆ ಮಹಾಧನವೆಂದರೇನೆ ನನ್ನ ಮಿತ್ರಪ್ರೇಮ. ಅದನ್ನು ನಾನು ತೊಳೆದು ಹಾಕಲಾರೆ. ಆ ಗೆಳೆತನದ ಮುಂದೆ ನನ್ನ ಜೀವನವೂ ಹುಲ್ಲಿಗೆ ಸಮಾನ."

ಭೀಷ್ಮರು ಕೆಲಸಮಯ ವಿಶ್ರಾಂತಿಯನ್ನು ಪಡೆದು ಆನಂತರ ಮತ್ತೆ ಹೇಳಿದರು.

"ಧನ್ಯ ! ಕರ್ಣ ನೀನೇ ಧನ್ಯ ! ನಿನ್ನ ಮಿತ್ರಪ್ರೇಮವನ್ನು ಕಂಡು ನನಗೆ ಧನ್ಯತೆಯೆನಿಸಿದೆ! ನಿನಗೆ ನಾನು ಯಾವ ಆಗ್ರಹವನ್ನೂ ಮಾಡಲಾರೆ. ನಿಷ್ಠೆಯನ್ನು ಇಷ್ಟೊಂದು ಸಹಜವಾಗಿ ವ್ಯಕ್ತಪಡಿಸುವುದು ನನ್ನಿಂದಲೂ ಸಾಧ್ಯವಾಗಲಿಕ್ಕಿಲ್ಲ, ಕುರುಡು ಪ್ರೀತಿಗಿಂತ ಪ್ರತ್ಯಕ್ಷದೃಷ್ಟಿಯಿಂದಾಗಿ ನಾವಿಬ್ಬರೂ ಆಕರ್ಷಿತರಾದೆವು. ಪಾಂಡವರ ಬಗ್ಗೆ ನಮಗಿರುವ ಅತಃಕರಣವು ನನ್ನ ಮನದಿಂದ ಇನ್ನೂ ದೂರವಾಗಿಲ್ಲ. ಪಾಂಡುಪುತ್ರರು ತಂದೆಯ ಛತ್ರವನ್ನು ಕಳೆಕೊಂಡುದರಿಂದ ಅವರ ಬಗ್ಗೆ ನನ್ನ ಮನದಲ್ಲಿ ಅನುಕಂಪವು ಮೂಡಿತು. ಯಾರ ಆಶ್ರಯವನ್ನು ಹೊಂದಿದ್ದೆವೋ ಅವರ ಬಗ್ಗೆ ದುರ್ಲಕ್ಷ್ಯವು ಪ್ರಾರಂಭವಾಯಿತು. ಪಾಂಡು ಪುತ್ರರನ್ನು ರಕ್ಷಿಸುವಲ್ಲಿ ತುಂಬ ಕಾಳಜಿ ವಹಿಸತೊಡಗಿದವು. ನಮ್ಮ ಈ ಕಾಳಜಿಯ ಸ್ವಭಾವದಿಂದಲೇ ದ್ವೇಷವು ಉತ್ಪನ್ನವಾಯಿತು. ಕರ್ತವ್ಯದ ನಿಷ್ಠೆಯಿಂದಾಗಿ ನಾವು ಯಾವಾಗಲೂ ಬದ್ಧರಾಗಿದ್ದೆವು. ಅದರಲ್ಲಿ ಭಕ್ತಿ ಯಾವುದು ? ನಿಷ್ಠೆ ಯಾವುದು ? ಇದರ ನಿರ್ಣಯವನ್ನು ಮಾಡುವದಾಗಲಿಲ್ಲ. ದುರ್ಯೋಧನನಿಗೆ ನಾನು ಪ್ರಿಯವಾದುದನ್ನು ಮಾಡುವುದಾಗಲಿಲ್ಲ. ಕೊನೆಯ ಪಕ್ಷ ನಿನ್ನ ನಿಷ್ಠೆಯಿಂದಾದರೂ ಅವನಿಗೆ ಸುಖವು ದೊರೆಯುವಂತಾಗಲಿ. ನಿನ್ನ ಜನ್ಮ ರಹಸ್ಯ ತಿಳಿದುಕೊಂಡಾಗಲೂ ನಿರ್ಭಯತೆಯಿಂದ ಮಿತ್ರಪ್ರೇಮಕ್ಕಾಗಿ ನೀನು ಏಕನಿಷ್ಠನಾಗಿರುವುದನ್ನು ಕಂಡು ನನಗೆ ನಿನ್ನ ನಿಷ್ಠೆಗೂ ಒಂದು ಸಾಫಲ್ಯವಿದೆ. ಎಂದೆನಿಸುತ್ತಲಿದೆ."

"ಪಿತಾಮಹರೇ ಇಲ್ಲ, ನೀವು ತಿಳಿದುಕೊಂಡ ಆ ನಿಷ್ಠೆ ನನ್ನಲ್ಲಿಲ್ಲ. ನನ್ನ ಜನ್ಮ ಕಥೆಯ ರಹಸ್ಯವು ನನಗೆ ತಿಳಿಯದಿದ್ದರೆ ಚೆನ್ನಾಗಿತ್ತು. ಸಂಧಿ ಕಾರ್ಯವು ವಿಫಲವಾದ ಅನಂತರ ಮೊಟ್ಟ ಮೊದಲು ನನಗೆ ಕೃಷ್ಣನು ಈ ರಹಸ್ಯವನ್ನು ತಿಳಿಸಿದ. ನನ್ನ ಆಯುಷ್ಯದುದ್ದಕ್ಕೂ ಯಾವದನ್ನು ತಿಳಿದು ಕೊಳ್ಳಬೇಕು, ನೋಡಬೇಕು ಎಂದು ಹಂಬಲಿಸುತ್ತಿದ್ದೆನೋ, ಆ ತಾಯಿಯ ದರ್ಶನವು ಯುದ್ಧಾರಂಭದ ಪೂರ್ವಭಾವಿಯಾಗಿ ನನಗೆ ಲಭಿಸಿತು. ಜನ್ಮ ಜಾತವಾಗಿ ಬಂದ ನನ್ನ ಕವಚ ಕುಡಲಗಳು ಕಳಚಿಹೋದುದೂ ಆ ಸಮಯ ದಲ್ಲಿಯೇ, ಇಬ್ಬರೂ ಪಾಂಡವರನ್ನು ಸುರಕ್ಷಿತವಾಗಿರುವಂತೆ ನೋಡಿಕೊಂಡಿರು ವರು. ಹೀಗಾಗಿ ಇರಲಾರದ ಉತ್ಸಾಹವನ್ನು ವ್ಯಕ್ತಪಡಿಸಲು ಈಗ ನನ್ನಲ್ಲಿ ಏನುಳಿದಿದೆ? ಗುರುದೇವ ಪರಶುರಾಮರ ಶಾಪವೂ ನಡೆದೇ ಹೋಗಲಿ, ಒಂದು ವೇಳೆ ಆಕಸ್ಮಿಕವಾಗಿ ಬ್ರಹ್ಮಾಸ್ತ್ರದ ಮಂತ್ರಗಳು ನೆನಪಾದಾಗಲೂ ನಾನು ನನ್ನ ಸೋದರರ ಮೇಲೆ ಅದನ್ನು ಪ್ರಯೋಗಿಸಲು ಸಾಧ್ಯವೇ ? ನಾನು ಜ್ಯೇಷ್ಠನಲ್ಲವೆ?" ತನ್ನ ಕಣ್ಣೀರನ್ನೊರಸಿಕೊಳ್ಳುತ್ತ ಕರ್ಣನು ಹೇಳಿದ "ನನ್ನ ಮಿತ್ರತ್ವವು ಎಂದೋ ಶಿಥಿಲವಾಗಿ ಹೋಯಿತು. ಇಂದು ದುರ್ಯೋ ಧನನ ದೃಷ್ಟಿಯನ್ನೆದುರಿಸುವ ಸಾಮರ್ಥ್ಯವು ನನ್ನಲ್ಲಿಲ್ಲ. ಅವನ ಆಲಿಂಗನ ಮಾಡಿಕೊಂಡಲ್ಲಿ ಅಂತರಾತ್ಮವು ಕಸಿವಿಸಿಕೊಳ್ಳುತ್ತದೆ. ನನ್ನ ಕೈಯಲ್ಲಿ ಯಾವ ಯಶವೂ ಉಳಿಯಲಿಲ್ಲ."

"ಶಾಂತನಾಗು ಕೌಂತೇಯ ! ಶಾಂತನಾಗು, ಇದು ನಿನ್ನ ದೋಷವಲ್ಲ, ಅದೇನಾದರೂ ಇದ್ದಲ್ಲಿ ಎಲ್ಲವೂ ನಿಯತಿಗೆ ಸೇರಿದೆ. ಯಾವದು ಆಗ ಬೇಕೆಂದಿದೆಯೋ ಅದು ಆಗಿಯೇ ತೀರುತ್ತದೆ ನಿರ್ಭಯವಾದ ಮನಸ್ಸಿನಿಂದ ನೀನು ರಣಾಂಗಣಕ್ಕೆ ಹೊರಡು. ನೀನು ಅಧಿರಥಿಯಾಗಿರುವೆ, ಶತ್ರುಗಳಿಗೆ ರಣಾಂಗಣದಲ್ಲಿ ರಿಪುಭಯಂಕರನಾಗುವೆ. ಈ ಮಾತನ್ನು ನಾನು ಚೆನ್ನಾಗಿ ಬಲ್ಲೆ. ಭಗವಾನ್ ಪರಶುರಾಮರನ್ನು ಪ್ರಸನ್ನೀಕರಿಸಿಕೊಳ್ಳುವದೆಂದರೆ ಸಾಮಾನ್ಯದ ವಿಷಯವಲ್ಲ. ದೇವಬ್ರಾಹ್ಮಣರಲ್ಲಿಯ ನಿನ್ನ ಭಕ್ತಿ, ಅಜಿಂಕ್ಯ ವಾದ ನಿನ್ನ ಸಾಮರ್ಥ್ಯ, ದಾನದ ಪರಾಕಾಷ್ಠತೆ ಇವುಗಳನ್ನೆಲ್ಲ ನಾನು ತಿಳಿ ದವನಾಗಿರುವೆ. ನಿನ್ನ ಯೋಗ್ಯತೆಗೆ ಸಮಾನರಾದವರು ಈ ಲೋಕದಲ್ಲಿಯೇ ಇಲ್ಲ, ನೀನು ದೇವ ಸದೃಶನಿರುವೆ. ಕರ್ಣಾ, ಶರಸಂಧಾನ, ಹಸ್ತಲಾಘವ

ಹಾಗೂ ಆತ್ಮಬಲ ಈ ಮೂರರಲ್ಲಿಯೂ ನೀನು ಅರ್ಜುನ ಹಾಗೂ ಕೃಷ್ಣನಿಗೆ ಸಮಾನನಾಗಿರುವೆ. ಅದರಲ್ಲಿ ನನಗೆ ಸಂಶಯವೇ ಇಲ್ಲ."

ಕರ್ಣನ ಮುಖದಲ್ಲಿ ಕಂಡ ನಗೆಯನ್ನು ಪರೀಕ್ಷಿಸಿದ ಪಿತಾಮಹರು ನುಡಿದರು,

"ಮಗೂ, ನಾನು ನಿನ್ನನ್ನು ಸುಮ್ಮನೇ ಸ್ತುತಿಸುವೆನೆಂದು ತಿಳಿಯಬೇಡ. ಕುರುರಾಜರಿಗೆ ವಧುವನ್ನು ತರುವದಕ್ಕಾಗಿ ಕಾಶೀ ರಾಜನಲ್ಲಿ ಒಬ್ಬಂಟಿಗನಾಗಿಯೇ ಎಲ್ಲರನ್ನೂ ಎದುರಿಸಿದೆ. ನಿನ್ನ ಪರಾಕ್ರಮದಿಂದ ದುರ್ಯೋಧನನಿಗೆ ಭಾನುಮತಿಯನ್ನು ತಂದಿತ್ತೆ ಅದೇನು ಕಡಿಮೆಯ ಸಾಹಸವೇ ! ಆ ಪರಾಕ್ರಮದ ರೂಪವು ಎಂಥದೆಂಬುದನ್ನು ನಾನೂ ಒಂದು ಸಲ ಅನುಭವಿಸಿದ್ದೇನೆ. ಮಹಾಪರಾಕ್ರಮಿಯಾಗಿದ್ದ ಜರಾಸಂಧನನ್ನು ಪರಾಭವಗೊಳಿಸಿ, ಮಾಲಿನಿ ನಗರದ ಅಧಿಪತ್ಯವನ್ನೇ ಪಡೆದುಕೊಂಡೆಯಲ್ಲವೆ ? ಅಂಗರಾಜನಾಗಿ ವರ್ತಿಸಿದ ನಿನ್ನ ನಡೆನುಡಿಗಳು ಯಾವಾಗಲೂ ಆದರ್ಶಪ್ರಾಯವಾಗಿವೆ. ಜ್ಞಾನ ಹಾಗೂ ದಾನಗಳಿಂದ ನಿನ್ನ ಕೀರ್ತಿಯು ಸಾರ್ವತ್ರಿಕವಾಗಿ ವ್ಯಾಪಿಸಿದೆ. ಸುಸಂಸ್ಕೃತಿಯನ್ನು ಯಾರು ರಕ್ಷಿಸಿಕೊಂಡು ಬಂದಿದ್ದಾರೆ ?"

"ನಿಲ್ಲಿಸಿರಿ, ಪೂಜ್ಯರೇ ಇನ್ನಷ್ಟು ಕೇಳುವ ಸಾಮರ್ಥ್ಯವೂ ನನ್ನಲ್ಲಿಲ್ಲ. ನಾನು ಕೌಂತೇಯ, ಸೂರ್ಯಪುತ್ರ. ಈ ವಿಚಾರ ಗೊತ್ತಿದ್ದರೂ ಯಾವಾಗಲೂ ನನ್ನನ್ನು ಕುಲಹೀನನೆಂದು ಉಪೇಕ್ಷಿಸಲಾಯಿತು. ಕುಲದ ಹೆಸರಿನಲ್ಲಿ ನನ್ನ ಪ್ರತಿಷ್ಠೆಯು ಪಣಕ್ಕಿಡುವಂತಾದಾಗ ಆ ನನ್ನ ತಾಯಿಯಾಗಲೀ ಅಥವಾ ನನ್ನ ಕುಲವನ್ನು ಚೆನ್ನಾಗಿ ಅರಿತಿದ್ದ ಕುಲಶ್ರೇಷ್ಠರಾಗಲೀ ನನ್ನ ಕುಲೋಚ್ಚಾರ ಮಾಡುವ ಸಾಹಸವನ್ನು ತೋರಲಿಲ್ಲ. ಅಷ್ಟೇ ಅಲ್ಲ, ಆ ಜನರೇ ಮುಂದಾಗಿ ನಿಂತು ನನ್ನ ಸೂತಕುಲೋಚ್ಚಾರವನ್ನು ಮಾಡಿ ನನ್ನ ಮೇಲಿನ ಸೇಡನ್ನು ತೀರಿಸಿಕೊಂಡರು. ನಾನು ಯಾವಾಗಲೂ ಚಾರಿತ್ರ್ಯವನ್ನು ರಕ್ಷಿಸಿಕೊಂಡು ಬಂದಿದ್ದೇನೆ. ಆದರೂ ಸಂತಾಪದ ಭರದಲ್ಲಿ ದ್ರೌಪದಿಯ ವಸ್ತ್ರಾಪಹರಣ ಮಾಡುವಂತೆ ಆಜ್ಞೆ ಮಾಡಿದುದರಿಂದ ನನ್ನ ಚಾರಿತ್ರ್ಯ ಸಂಪನ್ನತೆಯು ಜೀವನವೂ ಹಾಳಾಗಿ ಹೋಗುವಂತಾಯಿತು. ಯಾವ ದಾನಾದಿಗಳಿಂದ ನನ್ನ ಕೀರ್ತಿಯು ದಶದಿಕ್ಕುಗಳಲ್ಲಿ ವ್ಯಾಪಿಸಿತ್ತೋ, ಅದೇ ದಾನಾದಿಗಳು ನನ್ನ ಕವಚ ಕುಂಡಲಗಳನ್ನು ಕಳೆದುಕೊಳ್ಳುವಂತೆ ಮಾಡಿದವು. ಇನ್ನು ನನ್ನ

ಗುರುಭಕ್ತಿ, ಗುರುಗಳಿಗೆ ನಿದ್ರಾಭಂಗವಾಗಬಾರದೆಂದು ತಿಳಿದು ಬಂದ ಕಷ್ಟಗಳನ್ನೆಲ್ಲ ಅನುಭವಿಸಿದೆ. ಆದರಿಂದ ನನಗೆ ಬಂದ ಫಲವೇನು ? ಭಯಂಕರವಾದ ಶಾಪ ! ಜೀವನವು ಸಮೃದ್ಧವಾಗುವದೆಂಬ ನಂಬಿಕೆಯಿಂದ ಜೀವನದುದ್ದಕ್ಕೂ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಬಂದೆ. ಆದರೆ ಈ ಸಂಸ್ಕಾರಗಳೂ ನನ್ನ ಜೀವನದಲ್ಲಿ ಯಾವ ಪ್ರಯೋಜನಕ್ಕೆ, ಬಾರದಂತಾದವು. ಕೃಷ್ಣ, ಹಾಗೂ ತಾಯಿಯಾದ ಕುಂತಿ ಇವರು ನನ್ನಿಂದ ಏನು ಬೇಕಾಗಿತ್ತೊ ಅದನ್ನು ಅವರು ಪಡೆದುಕೊಂಡರು. ಆದುದರಿಂದ ನಾನು ಅಂದೇ ನನ್ನ ಪರಾಜಯುವನ್ನು ನಿಶ್ಚಯು ಮಾಡಿಕೊಂಡೆ. ಇಷ್ಟೆಲ್ಲ ಆದಮೇಲೆ ಉಳಿದುದೆಂದರೆ ಬೆಲೆಬಾಳುವ ಮಾತೃತ್ವವು ಮಾತ್ರ. ಅದಕ್ಕೆ ಈಗ ಯಾವ ಅರ್ಥವೂ ಇಲ್ಲದಂತಾಯಿತು. ಜೀವನದ ಸಾಫಲ್ಯವನ್ನು ಅನುಭವಿಸುವುದು ನನ್ನ ಹಣೆಯಲ್ಲಿ ಬರೆದಿಲ್ಲ."

ಮಂದಸ್ಮಿತರಾದ ಭೀಷ್ಮರು ಹೇಳಿದರು,

"ನಿನ್ನಷ್ಟು ಜೀವನದ ಸಾಫಲ್ಯವನ್ನು ಯಾರು ಅನುಭವಿಸಿದ್ದಾರೆ? ಕರ್ಣ, ಸಾಫಲ್ಯವೆಂದರೆ ನಿನಗೇನು ಬೇಕಾಗಿತ್ತು ? ದ್ರುಪದ, ವಿರಾಟ, ಶಲ್ಯ ಮೊದಲಾದ ನರೇಂದ್ರರು ಐಶ್ವರ್ಯ ಹಾಗೂ ಅಧಿಕಾರವನ್ನು ಮಾತ್ರ ಅನುಭವಿಸಿದರು. ಹಾಗೆಂದ ಮಾತ್ರಕ್ಕೆ ಅವರ ಹೆಸರುಗಳೆಲ್ಲ ಅನಂತರದಲ್ಲಿ ಉಳಿಯುತ್ತವೆಯೇ ? ನಾನು ಆಜನ್ಮಬ್ರಹ್ಮಚರ್ಯವನ್ನು ಪಾಲಿಸಿದೆ. ಮನೋವಿಕಾರಗಳನ್ನೆಲ್ಲ ಎದುರಿಸಿದೆ, ರಾಜ್ಯ ತ್ಯಾಗಮಾಡಿದೆ, ಕೊನೆಗೆ ಈ ಶರಶಯ್ಯೆಯ ಮೇಲೆ ಮಲಗಿರುವುದು ಯಾತಕ್ಕಾಗಿ ?

"ಕರ್ಣ, ಈ ಜಗತ್ತಿನಲ್ಲಿ ಯಾವ ಮನುಷ್ಯನು ಐಶ್ವರ್ಯಸಂಪನ್ನ ಜೀವನ ನಡೆಸುತ್ತಾನೆಯೋ, ಅಂಥವರ ನೆನಪು ಬಹು ದಿನ ಉಳಿಯಲಾರದು. ಅಂಥವರು ಪೂರ್ವಜನ್ಮದ ಸಂಚಯುವನ್ನು ಖರ್ಚುಮಾಡಲು ಮಾತ್ರ ಈ ಭೂಮಿಯಲ್ಲಿ ಹುಟ್ಟಿರುತ್ತಾರೆ. ಅವರ ಆಗು ಹೋಗುಗಳೆಲ್ಲ ಅವರ ಮರಣದೊಂದಿಗೆ ಸಮಾಪ್ತಿ ಹೊಂದುತ್ತವೆ, ಆದರೆ ಈ ಜೀವನದಲ್ಲಿ ಕೆಲವರು ಮಾತ್ರ ತಮ್ಮತನವನ್ನು ಬಿಟ್ಟುಹೋಗುತ್ತಾರೆ. ತಮ್ಮ ತ್ಯಾಗದಿಂದ. ಬಲಿದಾನದಿಂದ ಅಂಥವರು ಇನ್ನೊಬ್ಬರ ಜೀವನವನ್ನು ಸಂಪನ್ನಗೊಳಿಸುತ್ತಾರೆ. ಅಂಥವರನ್ನೇ ಕೀರ್ತಿಶಾಲಿಗಳೆಂದು ಕರೆಯುತ್ತಾರೆ. ಅವರ ಸ್ಮರಣ ಮಾತ್ರದಿಂದ ಜೀವಿಸಲು ಬಲವು ದೊರೆಯುತ್ತದೆ. ಅದುವೇ ನಿಜವಾದ ಜೀವನದ ವಿಜಯ ಎಂದು

ಕರೆಸಿಕೊಳ್ಳುತ್ತದೆ, ಮೃತ್ಯುಲೋಕದಲ್ಲಿ ಸ್ಥಾನವನ್ನು ಗಳಿಸಿಕೊಳ್ಳುವುದು ಅಂಥ ಸುಲಭದ ಕೆಲಸವೇನೂ ಅಲ್ಲ. ಅಸಾಧ್ಯವಾದುದನ್ನು ನೀನು ಸಾಧಿಸಿ ಕೊಂಡಿರುವೆ, ನಿನ್ನಂತಹ ಜೀವನ ಸಾಫಲ್ಯತೆ ಪಡೆದವರನ್ನು ನೋಡುವುದೂ ವಿರಳ."

"ಪಿತಾಮಹ ! ಕ್ಷಮಿಸಿರಿ ನನ್ನ ಏಕನಿಷ್ಠ ಮಿತ್ರನನ್ನು........"

"ಏನೂ ಹೇಳಬೇಕಾಗಿಲ್ಲ ಕರ್ಣ, ಅದನ್ನು ನಾನು ಚೆನ್ನಾಗಿ ಬಲ್ಲೆ. ಆ ನೋವನ್ನು ಅನುಭವಿಸಿದ್ದೇನೆ, ಅನುಭವಿಸುತ್ತಲೂ ಇದ್ದೇನೆ. ಹೇ ಜೇಷ್ಠನಾದ ಹಾಗೂ ಶ್ರೇಷ್ಠನಾದ ಕೌಂತೇಯನೇ, ನಾನು ನಿನ್ನ ವಿಚಾರವನ್ನು ಕುರಿತು ಪ್ರಸನ್ನನಾಗಿದ್ದೇನೆ, ನಿನಗೆ ಬೇಕಾದ ವರವನ್ನು ಕೇಳಿಕೋ."

"ವರ." ಕ್ಷಣಹೊತ್ತು ವಿಚಾರ ಮಾಡಿದ ನಂತರ ಕರ್ಣನು ಹರ್ಷಚಿತ್ತನಾಗಿ ಕೇಳಿದ.

"ಪಿತಾಮಹರೇ, ತಮಗೆ ವರವನ್ನು ಕೊಡಬೇಕೆಂಬ ಅಪೇಕ್ಷೆಯಿನ್ನಲ್ಲಿ ಒಂದೇ ಒಂದು ವರವನ್ನು ದಯಪಾಲಿಸಿರಿ. ಮೃತ್ಯುವಿಗೂ ನಿಷ್ಠರಾಗಿರುವಂತಹ ತಮ್ಮ ಬಲವನ್ನು ನನಗೆ ಕೊಡಿರಿ. ನನ್ನ ಮಿತ್ರನಿಗಾಗಿ ಕೊಡಲು ಈಗ ನನ್ನಲ್ಲಿ ಯಾವುದೂ ಉಳಿದಿಲ್ಲ. ರಣಭೂಮಿಯಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವದೊಂದೇ ಉಳಿದಿದೆ, ಆ ಬಲವನ್ನು ನನಗೆ ಕೊಡಿರಿ."

"ಭೀಷ್ಮರು ನಡುಗುತ್ತಿರುವ ತಮ್ಮ ಕೈಯನ್ನು ಮೇಲೆ ಮಾಡಿದರು. ಕರ್ಣ ಅವರ ಕೈಯನ್ನು ತನ್ನ ತಲೆಯ ಮೇಲಿರಿಸಿಕೊಂಡ. ಆಗ ಭೀಷ್ಮರು,

"ಕರ್ಣ, ನಾನು ಶರಪಂಜರದಲ್ಲಿ ಮಲಗಿರದೆ ಹೋಗಿದ್ದರೆ ನಿನ್ನನ್ನು ಬಿಗಿದಪ್ಪಿಕೊಳ್ಳುತ್ತಿದ್ದೆ. ವೀರಾಗ್ರಣಿಯೇ, ನಿನಗೆ ಕಲ್ಯಾಣವಾಗಲಿ. ಹೇ ಜೇಷ್ಠ ಕೌಂತೇಯ. ನಿನಗೆ ನಿನ್ನ ಮನೋಭೀಷ್ಟವು ಲಭಿಸಲಿ, ಮೃತ್ಯುವಿನ ಆಗಮನವು ನಿನಗೆ ಸಹಜವಾಗಿ ತಿಳಿಯುವಂತಾಗಲಿ. ಆಗ ಹಸನ್ಮುಖಿಯಾಗಿ ಆದನ್ನೆದುರಿಸುವ ಸಾಮರ್ಥ್ಯವು ನಿನಗೆ ದೊರೆಯಲಿ. ಸೂರ್ಯಪುತ್ರಾ, ನಿನ್ನ ಮೃತ್ಯುವೇ ನಿನ್ನ ಜೀವನದ ಕಾರಣೀಭೂತವೆಂದು ಪರಿಣಮಿಸುವಂತಾಗಲಿ. ನಿನ್ನ ಕೀರ್ತಿ ಚಿರಂತವಾಗಿ ಉಳಿಯುವಂತಾಗಲಿ. ಇದೇ ನನ್ನ ಆಶೀರ್ವಾದವೆಂದು ತಿಳಿ. ಹೋಗು. ನಿರ್ಭಯಯುಕ್ತಿಯಿಂದ ಹೊರಡು. ನಿನಗೆ ಕಲ್ಯಾಣವಾಗಲಿ."

ಕರ್ಣನು ಭೀಷ್ಮರ ಕೈಯನ್ನು ಅವರ ಎದೆಯ ಮೇಲಿರಿಸಿದ. ಅವರ ಮೇಲಿನ ದೃಷ್ಟಿಯನ್ನು ತೆಗೆಯದ ಹಾಗೆ ನಾಲ್ಕು ಹೆಜ್ಜೆಗಳನ್ನು ಹಿಂದಕ್ಕಿಟ್ಟ. ಭೀಷ್ಮರು ತಮ್ಮ ನೇತ್ರಗಳನ್ನು ಮುಚ್ಚಿಕೊಂಡರು. ಅವರ ಚರಣಗಳಿಗೆ ನಮಸ್ಕರಿಸಿದ ಕರ್ಣನು ಹಿಂದಕ್ಕೆ ಹೊರಳಿ ರಥದತ್ತ ಸಾಗಿದ. ಅವನ ಮುಖದಲ್ಲಿ ವಿಚಿತ್ರವಾದ ಶಾಂತಿಯು ಮೂಡಿತ್ತು.

## 48

ಕರ್ಣನ ರಥವು ಯುದ್ಧ ಭೂಮಿಯನ್ನು ದಾಟಿ ಸ್ವಲ್ಪ ದೂರ ಹೋದ ನಂತರ ರಥವನ್ನು ನಿಲ್ಲಿಸಿ, ಆ ರಥದ ಮುಂಭಾಗದಲ್ಲಿ ಎದ್ದು ನಿಂತು ನಾಲ್ಕೂ ದಿಕ್ಕಿಗೆ ತನ್ನ ದೃಷ್ಟಿಯನ್ನು ಹರಿಸಿದ. ಎಲ್ಲ ಕಡೆಗೂ ಶಾಂತತೆಯು ಪಸರಿಸಿತ್ತು. ಚಂದ್ರನು ತನ್ನ ಪರಿವಾರದೊಂದಿಗೆ ನೀಲಾಕಾಶದಲ್ಲಿ ಪ್ರವಾಸವನ್ನಾರಂಭಿಸಿದ್ದ. ಕಾರ್ತೀಕ ಮಾಸದ ಶುಭ್ರ ಧವಳ ಕಾಂತಿಯು ಭೂದೇವಿಯನ್ನು ಸ್ಪರ್ಶಿಸುತ್ತಲಿತ್ತು. ಗಂಭೀರತೆಯಿಂದ ರಾತ್ರಿಯ ಆ ರೂಪವು ಭವ್ಯವಾಗಿ ತೋರುತ್ತಿತ್ತು. ಭೀಷ್ಮರನ್ನು ಭೇಟಿಯಾಗಿ ಬಂದ ನಂತರ ಆತನ ಮನಸ್ಸು ಏಕಾಕಿ ಎಂದೆನಿಸತೊಡಗಿತು. ಮನದ ನಿಗೂಢತೆಯು ಅರಿವಾದಂತೆನಿಸುತ್ತಿತ್ತು. ಕರ್ಣನಿಗೆ ಮರಳಿ ಹೋಗಬೇಕೆಂದೆನ್ನಿಸುತ್ತಿರಲಿಲ್ಲ. ಆದರೂ ಆತನು ರಥವನ್ನು ಮುನ್ನಡೆಸಿದ. ಕೌರವ ಶಿಬಿರಗಳನ್ನೆಲ್ಲ ಹಿಂದಿಟ್ಟು ಆತನ ರಥವು ಮುಂದೆ ಮುಂದೆ ಸಾಗುತ್ತಿತ್ತು. ಆ ರಥವು ನದಿಯ ದಂಡೆಯನ್ನು ಸಮೀಪಿಸಿತು. ಆಗ ಅವನು ರಥದಿಂದಿಳಿದು ಮರಳಿನಲ್ಲಿ ನಡೆಯಲಾರಂಭಿಸಿದ. ಮರಳಿನ ವಿಶಾಲವಾದ ಹಾಸಿಗೆಯನ್ನು ತುಳಿಯುತ್ತಲಿದ್ದಾಗ, ಹಿರಣ್ವತಿಯ ಪ್ರವಾಹವು ಬೆಳ್ಳಿಯ ಹಾಸಿಗೆಯಂತೆ ತೋರುತ್ತಿತ್ತು. ನದಿಯ ಇನ್ನೊಂದು ದಂಡೆಯಲ್ಲಿ ಪಾಂಡವರ ಶಿಬಿರಗಳಿದ್ದು ಅಸಂಖ್ಯಾತವಾದ ಅಲ್ಲಿಯ ದೀಪಗಳು ಕಾಣಿಸುತ್ತಲಿದ್ದವು. ಪ್ರವಾಹಕ್ಕೆ ಸಮೀಪಿಸಿದಂತೆಲ್ಲ ಆವನ ಪಾದತ್ರಾಣಗಳು ಮರಳಿನಲ್ಲಿ ಹುದುಗಲಾರಂಭಿಸಿದವು. ಹಿರಣ್ವತಿ ನದಿಯ ಪ್ರವಾಹವನ್ನು ನೋಡುವುದರಲ್ಲಿ ಆತನು ತಲ್ಲೀನನಾಗಿದ್ದ.

"ಈ ಪ್ರವಾಹದ ಎಳೆತವು ನನಗೆ ಇಷ್ಟೇಕೆ ಅಂಟಿಕೊಂಡಿದೆ? ಅನೇಕ ಸಲ ನಾನು ಈ ಪ್ರವಾಹದ ದಂಡೆಗೆ ಬಂದು ನಿಂತುದಿಲ್ಲವೆ? ಈ ಜೀವ ನದಿ

ಯನ್ನು ಕುರಿತು ಅದೆಷ್ಟು ಸಲ ನಾನು ಯೋಚನೆ ಮಾಡಿಲ್ಲ ! ಹೇ ಜನನೀ ಯಾವ ಕೈಯಿಂದ ನನ್ನನ್ನು ನಿನ್ನ ಪ್ರವಾಹದಲ್ಲಿ ತೇಲಿಬಿಡಲಾಯಿತೋ, ಆ ಜೀವವು ನಿನಗೇನಾದರೂ ಪ್ರಾರ್ಥನೆ ಮಾಡಿಕೊಂಡಿತೇ ? ಆ ಸುಕುಮಾರನ ಕೈಗಳು ನಿನ್ನ ಪ್ರವಾಹವನ್ನು ಸ್ಪರ್ಶಮಾಡಿದಾಗ, ಹಾಗೂ ಇಳಿದು ಬಂದ ಕಣ್ಣೀರಿನ ಸ್ಪರ್ಶಮಾಡಿದಾಗ ನಿನ್ನ ಮನದಲ್ಲಿ ಎಂದಾದರೂ ಆಂದೋಲನವು ಪ್ರಾರಂಭವಾಯಿತೆ ? ಹೀಗೆ ಅನೇಕ ತರಂಗಗಳ ಸಮಸ್ಯೆಯನ್ನು ಕುರಿತು ನೀನೂ ಯೋಚನೆ ಮಾಡುತ್ತಿರುವೆಯಾ ?

ಇಂದು ನನ್ನ ಆ ಎಲ್ಲ ಪ್ರಶ್ನೆಗಳಿಗೂ ಉತ್ತರ ಲಭಿಸಿದಂತಾಗಿದೆ. ಹೀಗಿದ್ದರೂ ಸಹ ನನ್ನ ಮನಸ್ಸು ನದಿಯ ಸಾಮಿಪ್ಯವನ್ನೇ ಬಯಸುತ್ತಲಿದೆ. ಬೆಳಗಾದರೆ ನಾಳಿನ ಯುದ್ಧದಲ್ಲಿ ರುದ್ರದರ್ಶನದ ಅನುಭವವನ್ನು ನಾನು ಪಡೆಯಬೇಕಾಗಿದೆ. ನಾಳಿನ ರಣಯಜ್ಞದಲ್ಲಿ ಆಹುತಿಯನ್ನು ಹಾಕಬೇಕಾಗಿದೆ. ಬಿಲ್ಲಿಗೆ ಹೂಡಿದ ಬಾಣಗಳನ್ನು ಕಿವಿಯವರೆಗೂ ಎಳೆದು ಬಿಡುವಾಗ ಹೊರಡುವ ನಾದವನ್ನು ಕೇಳಿ ಕಿವಿಗಳಿಗೆ ಸಂತೃಪ್ತಿಯನ್ನೀಯಬೇಕಾಗಿದೆ. ಕ್ಷಮಾ, ದಯಾ, ಶಾಂತಿ ಮೊದಲಾದವುಗಳಿಗೆ ಅವಕಾಶವನ್ನೀಯದೆ ಈರ್ಷ್ಯೆ, ಅಹಂಕಾರ, ಅಪಘಾತಗಳಿಗೆ ಆಶ್ರಯವನ್ನು ಹುಡುಕಬೇಕಾಗಿದೆ. ಈ ಸಮಯವು ರಣಭೂಮಿಯನ್ನು ಕುರಿತು ಚಿಂತಿಸಬೇಕಾದುದು. ಅವೆಲ್ಲವನ್ನೂ ತೊರೆದು ನಾನು ಈ ನದಿಯ ಪ್ರವಾಹನ್ನು ಹುಡುಕಿಕೊಂಡು ಬರುವದೇ ? ಈ ಪ್ರವಾಹದ ಎಳೆತವಾದರೂ ಎಂಥದು ?

ಈ ಎಲ್ಲ ವಿಚಾರಗಳಿಂದಾಗಿ ಕರ್ಣನ ಮುಖದಲ್ಲಿ ವಿಚಿತ್ರ ನಗು ಕಾಣಿಸಿಕೊಂಡಿತು.

ಪ್ರವಾಹದ ಸೆಳೆತಕ್ಕೆ ಸಿಕ್ಕವರು ಪ್ರವಾಸ ಮಾಡಬಯಸಿದಲ್ಲಿ, ಆ ಪ್ರವಾಹದ ಗತಿಯಿಂದ ದೂರವಿರಲು ಹೇಗೆ ಸಾಧ್ಯವಾದೀತು ! ಇಡೀ ಜೀವನವು ಈ ನದಿಯ ದಂಡೆಯನ್ನೇ ಅವಲಂಬಿಸಿದೆ. ನನ್ನ ಜೀವನ ಪ್ರವಾಹವೇ ಈ ಜಲ ಪ್ರವಾಹದೊಂದಿಗೆ ಸಾಗಿದೆ. ಜೀವನದ ಮಹಾ ದಾನವು ಈ ದಂಡೆಯಲ್ಲಿಯೇ ಪ್ರಾಪ್ತವಾಗಿದೆ. ಇನ್ನು ಕೊನೆಯ ದಾನವನ್ನೂ ಸಹ ಈ ಪ್ರವಾಹದ ದಂಡೆಯಲ್ಲಿಯೇ ಪೂರೈಸಬೇಕಾಗಿದೆ.

ಈ ವಿಚಾರಗಳಿಂದ ಕರ್ಣನ ಮನಸ್ಸು ನಡುಗಿದಂತಾಯಿತು. ಅವನು ತನ್ನ ಉತ್ತರೀಯವನ್ನು ಮೈತುಂಬ ಹೊದ್ದುಕೊಂಡ.

ನನಗೆ ಸಾವಿನ ಭಯವೆನ್ನಿಸುವದಿಲ್ಲ. ಇನ್ನು ಬದುಕುವ ಹಂಬಲವೂ ಇಲ್ಲ. ಹಾಗಾದಲ್ಲಿ ಸಾವಿಗಾಗಿ ಹೆದರುವದೇಕೆ? ಎಲ್ಲ ಪ್ರವಾಹಗಳೂ ಒಂದಿಲ್ಲೊಂದು ದಿನ ಸಾಗರವನ್ನು ಕೂಡುತ್ತವೆ ಎಂದು ಕೇಳಿದ್ದೇನೆ. ಈ ಜೀವನದ ಪ್ರವಾಹವೂ ಆ ರೂಪದಲ್ಲಿ ವಿಲೀನವಾದಲ್ಲಿ, ಆ ಮೂಲ ಪ್ರವಾಹದ ಅಸ್ತಿತ್ವವೂ ಉಳಿಯಲು ಸಾಧ್ಯವೇ? ಅದೃಷ್ಟದಲ್ಲಿ ಸ್ವರ್ಗ ಪ್ರಾಪ್ತಿ ಇರಬಹುದು, ಅಥವಾ ನರಕವೂ ಇರಬಹುದು. ಆದರೆ ಅದು ಯಾವ ರೂಪದಿಂದ ಭೋಗಿಸಲು ಸಿಕ್ಕುವದೋ ಅದನ್ನಾರು ಬಲ್ಲರು!

ಹುಂ! ಭೋಗದ ಆಸಕ್ತಿಯೇ ಜೀವನ. ಭೋಗವನ್ನು ತ್ಯಾಗ ಮಾಡುವದೇ ಮರಣ. ಆ ಮೃತ್ಯುವಿನ ಮಾರ್ಗವನ್ನು ತುಳಿಯುತ್ತಿರುವಾಗ ಭೋಗದ ಆ ವಿಚಾರವನ್ನೇಕೆ ಮಾಡಬೇಕು? ಜೀವನ್ಮರಣಗಳ ಶಿಕ್ಷೆಯನ್ನು ಸಹಜವಾಗಿ ದಾಟಬಲ್ಲ ಅಥವಾ ದಾಟಿದ ಪಿತಾಮಹರನ್ನೇ ಈ ವಿಚಾರವನ್ನು ಕುರಿತು ಕೇಳಿ ತಿಳಿದುಕೊಳ್ಳಬೇಕಾಗಿತ್ತು. ಸಾವಿಗೆ ಶರಣು ಹೋಗುವುದು ಸುಲಭವಾದರೂ ಬಾಗಿಲಿಗೆ ಬಂದು ನಿಂತ ಸಾವನ್ನು ತಡೆದು ನಿಲ್ಲಿಸಿ ಅದರ ಮೇಲೆ ಸದಾ ಗಮನವಿಡುವುದು ಎಂಥ ಕಠಿಣದ ಕೆಲಸ.

ಸಾವಿಗಿಂತ ಸವೆಯುತ್ತ ಹೋಗುವುದು ಇನ್ನಷ್ಟು ಕಠಿಣವಾದ ಕೆಲಸ. ಸಾವಿನೊಂದಿಗೆ ಎಲ್ಲವೂ ಸವೆದು ಹೋಗುತ್ತದೆ. ವಯಸ್ಸಾದಂತೆಲ್ಲ ದಿನ ದಿಂದ ದಿನಕ್ಕೆ ಒಂದೊಂದು ರೀತಿಯಲ್ಲಿ ತನ್ನ ಮರಣದ ಅವಧಿಯನ್ನು ತಾವೇ ಅರಿತುಕೊಳ್ಳುವುದು ಎಂದರ್ಥ. ಈ ವಿಚಾರವನ್ನು ಚೆನ್ನಾಗಿ ಅರಿತುಕೊಂಡಿರುವ ಭೀಷ್ಮರು ಜೀವನದಲ್ಲಿ ಆಸಕ್ತಿಯನ್ನೇಕೆ ಇರಿಸಿಕೊಂಡು ಬಂದರು? ಅದಕ್ಕೆ ಯಾವ ಕಾರಣವಿರಬಹುದು? ಪ್ರತಿಷ್ಠೆಯ ಹಿರಿತನದಲ್ಲಿ ಪಾಲಿಸಿಕೊಂಡು ಬಂದ ಬ್ರಹ್ಮಚರ್ಯ ಹಾಗೂ ರಾಜ್ಯತ್ಯಾಗ ಇವುಗಳ ಫಲವನ್ನು ಭೋಗಿಸುವುದಕ್ಕಾಗಿಯೇ ಅವರು ಹಾಗೆ ಮಾಡಿರಬಹುದೇ? ಅಥವಾ ಪರೋಕ್ಷವಾಗಿ ಇರುವಿಕೆಯನ್ನು ವ್ಯಕ್ತಪಡಿಸಿಕೊಳ್ಳಲು ಅವರು ಹೀಗೆ ಮಾಡಿರಬಹುದೇ? ಅವರ ಈ ವಿಚಾರಗಳನ್ನು ಕುರಿತು ನಾನೇಕೆ ಚಿಂತಿಸಬೇಕು? ಅದು ನನ್ನ ಅಧಿಕಾರಕ್ಕೆ ಸಂಬಂಧಿಸಿದ್ದೇ? ಹಾದಿಯಲ್ಲಿ ಸಾವು ಕಾದುಕೊಂಡಿರುವಾಗ ಈ ಎಲ್ಲ ವಿಚಾರಗಳನ್ನು ಕುರಿತು ಯೋಚಿಸುವಂತಹ ಸಮಯವಾದರೂ ಎಲ್ಲಿದೆ?

ಸಾವು ಎಲ್ಲ ಯೋಚನೆಗಳಿಂದ ಎಲ್ಲ ಬಂಧನಗಳಿಂದ ಚಿರಶಾಂತಿಯನ್ನೀಯುವ ಒಂದು ಸಾಧನ. ಮರಣವೆಂಬುದು ಮಹಾ ಕಲ್ಯಾಣಕರವಾದ ಒಂದು ಬದಲಾವಣೆ! ಆದರೆ ಈ ಸಾವಿನ ವಿಚಾರವು ಮನದಲ್ಲಿ ಮೂಡುವದೇ ತಡ ಜೀವನವು ತಲ್ಲಣಿಸಬಹುದಾದಂಥಹ ಅನೇಕ ಭಾವನೆಗಳು ಎದ್ದು ನಿಲ್ಲುತ್ತವೆ.

ಈ ವಿಚಾರದಿಂದ ಕರ್ಣನ ಅಂತರರಾತ್ಮವು ನಡುಗಿತು. ಮೈಮೇಲಿನ ಹೊದ್ದಿಕೆಯನ್ನು ಸರಿಮಾಡಿಕೊಳ್ಳುತ್ತಿರುವಾಗ, ಗಾಬರಿಗೊಂಡ ನೀರ ಹಕ್ಕಿಯೊಂದು ಕರ್ಣನ ತಲೆಯ ಮೇಲಿಂದ ಹಾರಿಹೋಯಿತು.

ಮನದ ವಿಚಾರಗಳನ್ನೆಲ್ಲ ಬದಿಗಿಟ್ಟು ಕರ್ಣನು ತನ್ನ ರಥದತ್ತ ಹೊರಡಲುದ್ಯುಕ್ತನಾದ. ಅವನ ಕಾಲು ಮರಳಿನಲ್ಲಿ ಹುದುಕಿಕೊಂಡಿತ್ತು. ನಿಧಾನವಾಗಿ ಅದನ್ನು ಬಿಡಿಸಿಕೊಂಡು ಮುನ್ನಡೆದ. ದೂರದಿಂದ ಸುಮಧುರವಾದ ಕೊಳಲಿನ ಧ್ವನಿಯು ಕೇಳಬರತೊಡಗಿತು.

ಇಂಥ ಅಪರಾತ್ರಿಯಲ್ಲಿ ಯಾರು ಈ ಕೊಳಲನ್ನೂದುತ್ತಿರಬಹುದು! ಅದೂ ಇಷ್ಟು ಚೆನ್ನಾಗಿ! ನಾಳೆ ಬೆಳಗಾದರೆ ರಣಸಂಗ್ರಾಮವು ಆರಂಭವಾಗುವ ಮುನ್ನ ಈ ಕೊಳಲುಧ್ವನಿ ಕೇಳಬರುತ್ತಿದೆಯಲ್ಲ! ವಚನವನ್ನಿತ್ತಿದ್ದ ಕೃಷ್ಣನೇ ಈ ಕೊಳಲನ್ನು ನುಡಿಸುತ್ತಿರಬಹುದೇ? ಮನಸ್ಸಿನ ವ್ಯಥೆಯನ್ನು ದೂರ ಮಾಡಿಕೊಳ್ಳಲು ಆತ ಈ ಕೊಳಲನ್ನು ಆಶ್ರಯಿಸಿರಬಹುದೆ?

ಶರಪಂಜರದಲ್ಲಿ ಮಲಗಿದ್ದ ಭೀಷ್ಮರ ಹತ್ತಿರ ಅಧೋವದನನಾಗಿ ಕುಳಿತಿದ್ದ ಕೃಷ್ಣನ ರೂಪವು ಕರ್ಣನ ಮುಂದೆ ಬಂದು ನಿಂತಂತಾಯಿತು. ಮುಖವನ್ನೆತ್ತಿ ನೋಡಿದಾಗ ಕೃಷ್ಣನ ಮುಖದಲ್ಲಿ ಅಪಾರವಾದ ವ್ಯಥೆಯನ್ನು ಕಂಡ ಅನುಭವವಾಯಿತು.

ಪಿತಾಮಹ ಭೀಷ್ಮರು ವಯೋವೃದ್ಧರು, ತಾಪಸಿಗರು, ಕುರುಕುಲದ ಹಿರಿಯರು. ಈ ಭೀಷ್ಮರೇ ಪಾಂಡವರು ಮಾಡಿದ ರಾಜಸೂಯ ಯಾಗದಲ್ಲಿ ಕೃಷ್ಣನಿಗೆ ಅಗ್ರಪೂಜೆಯ ಮರ್ಯಾದೆಯನ್ನು ಸಲ್ಲಿಸಿದರು. ಈಶ್ವರೀಯ ಅವತಾರವೆಂದು ಅವರು ಆತನನ್ನು ನಂಬಿಕೊಂಡು ಬಂದಿದ್ದರು. ಅದೇ ಭೀಷ್ಮರ ಮುಂದೆ ಶಿಖಂಡಿಯನ್ನು ನಿಲ್ಲಿಸಿ ಅರ್ಜುನನ ಕೈಯಿಂದ ಭೀಷ್ಮರು ಪತನವಾದುದನ್ನು ನೋಡಿದಾಗ ಕೃಷ್ಣಾ, ನಿನ್ನ ಮನಸ್ಸಿಗೆ ಎಂಥ ಕ್ಲೇಶವಾಗಿರಲಿಕ್ಕಿಲ್ಲ?

ಕರ್ಣನು ನದಿಯ ದಂಡೆಯ ಮೇಲಿರುವ ದೃಶ್ಯವನ್ನು ನೋಡುತ್ತಲಿದ್ದ. ಯಾವುದೂ ಸರಿಯಾಗಿ ಕಾಣಿಸುತ್ತಿರಲಿಲ್ಲ. ಆದರೆ ಆ ಕೊಳಲಿನ ಧ್ವನಿಯು ಮಾತ್ರ ಅಖಂಡವಾದ ರೀತಿಯಲ್ಲಿ ಅಲೆಅಲೆಯಾಗಿ ತೇಲಿಬರುತ್ತಿತ್ತು. ಯಾವ ಸ್ಥಳದಲ್ಲಿ ಕರ್ಣನು ನಿಂತುಕೊಂಡಿದ್ದನೋ ಅಲ್ಲಿಯೇ ಕುಳಿತುಬಿಟ್ಟ. ಆ ನಾದ ಮಾಧುರ್ಯದಲ್ಲಿ ತನ್ನನ್ನು ತಾನೇ ಸಮರ್ಪಿಸಿದ.

ಎಂಥ ಮಧುರವಾದ ನಾದವಿದು ! ಜೀವನದ ಎಲ್ಲ ಚಿಂತೆಗಳನ್ನೂ ದೂರುಮಾಡುವಂತಹ ಸಾಮರ್ಥ್ಯವು ಈ ಕೊಳಲಿನಲ್ಲಿದೆ ಸೂರ್ಯನ ಪ್ರಥಮ ಕಿರಣಗಳೊಂದಿಗೆ ಸರೋವರದಲ್ಲಿಯ ಕಮಲಗಳು ಅರಳಿಕೊಳ್ಳುತ್ತವೆ. ಆ ಕಮಲದಲ್ಲಿ ಅಡಗಿಕೊಂಡಿರುವ ಭ್ರಮರಗಳು ಮಧುರ ಧ್ವನಿಯನ್ನು ಹೊರಡಿಸುತ್ತ ಹೊರಬರುತ್ತವೆ. ಆ ಎಲ್ಲ ಸಂಬಂಧವನ್ನು ಈ ಕೊಳಲಿನ ನಾದವು ಇಂದು ನನಗೆ ಸ್ಮರಣೆಗೆ ತರುತ್ತಲಿದೆ. ಈ ಕೊಳಲು ಸಾಮಾನ್ಯವಾದುದಲ್ಲ.

ಕೊಳಲಿನಲ್ಲೇನಿದೆ, ಅದೊಂದು ಪೊಳ್ಳು ಬಿದಿರು ಎಂದು ಹೇಳುತ್ತಾರೆ. ಆ ಕೊಳವೆಯನ್ನೂದಿದಾಗ ಬಿಡಿಸಲಾದ ಆ ಛಿದ್ರಗಳ ಮೇಲೆಲ್ಲ ಉಸುರಿಗೆ ತಕ್ಕಂತೆ ಮೃದುವಾಗಿ ಕೈಯಾಡಿಸಿದಾಗ ಮನದಾಳದ ಮಧುರತೆಯು ಹೊರ ಹೊಮ್ಮುತ್ತದೆ.

ಕೃಷ್ಣನೇ ಹೇಳಿದ್ದ.

ಉಸಿರು ! ನಿರ್ಜೀವಿಗೆ ಸಜೀವಗೊಳಿಸುವದು ಎಂದು ಪ್ರತಿಯೊಬ್ಬರ ಜೀವನದಲ್ಲಿಯೂ ಇಂಥ ಮಾಧುರ್ಯವನ್ನು ತುಂಬುವ ಉಸಿರು ದೊರೆಯಲು ಸಾಧ್ಯವೆ ?

ಅಗ್ನಿಯನ್ನು ಪ್ರಜ್ವಲಗೊಳಿಸಬೇಕಾದರೂ ಗಾಳಿಯನ್ನೂದಬೇಕಾಗುತ್ತದೆ. ಅದೇ ಗಾಳಿಯಿಂದ ಹತ್ತಿದ ದೀಪವನ್ನೂ ಶಾಂತ ಮಾಡಬಹುದು.

ಒಂದು ರೀತಿಯಲ್ಲಿ ವಿಧಾತನು ಮಾನವ ದೇಹವನ್ನೇ ಕೊಳಲಿನಂತೆ ರಚಿಸಿದ್ದಾನೆ. ಆತನಿತ್ತ ಉಸಿರಿರುವವರೆಗೆ ಈ ದೇಹವು ಸಜೀವಿ ಎಂದು ಕರೆಸಿಕೊಳ್ಳುತ್ತದೆ. ಈ ದೇಹವು ಗರ್ಭವಾಸದಲ್ಲಿರುವಾಗಲೂ ಮಾತೆಯಾದವಳ ಶ್ವಾಸೋಚ್ಛ್ವಾಸದಿಂದಲೇ ಆ ಗರ್ಭಸ್ಥ ಶಿಶು ಸುಖವನ್ನನುಭವಿಸುತ್ತದೆ ಅದು ತಾನೂ ಸುಖ ಪಡೆದು ತಾಯಿಗೂ ಸುಖವನ್ನೀಯುತ್ತದೆ.

ಬಾಲ್ಯಾವಸ್ಥೆಯ ಅಪಸ್ವರಗಳಿಗೆ ಮುಂದೆ ಎಂದಾದರೊಮ್ಮೆ ಸ್ಥಿರವಾದ

ಸ್ವರವು ಪ್ರಾಪ್ತವಾಗುತ್ತದೆ. ತಾರುಣ್ಯಾವಸ್ಥೆಯಲ್ಲಾಡಿಸಿದ ಉನ್ಮಾದದ ಉಸಿರಾಟವು ಈ ಕೊಳಲಿನಿಂದಲೇ ಹುಟ್ಟಿದಂತೆನಿಸುತ್ತವೆ. ವಾರ್ಧಕ್ಯದಲ್ಲಿ ಅದೇ ಕೊಳಲು ಅಸ್ಥಿರಸ್ವರಗಳ ಒಡೆಯನೆಂದೆನ್ನಿಸಿಕೊಳ್ಳುತ್ತದೆ. ಅದರೂ ಆ ಸ್ವರವು ಯಾವಾಗ ಸಿಲ್ಲುತ್ತದೆ? ಯಾತರಿಂದ ಸಿಲ್ಲುತ್ತದೆ ಎಂಬುದನ್ನು ಯಾರೂ ಹೇಳುವಂತಿಲ್ಲ. ಉಸಿರು ನಿಂತುಹೋದೊಡನೆ ದೇಹವೆಂಬುದು ಒಂದು ಕಾಷ್ಠದಂತಾಗುವುದು. ಮುಂದೆ ಆ ದೇಹವನ್ನು ಒಂದು ರೀತಿಯ ಕಸವೆಂದು ಭಾವಿಸಲಾಗುತ್ತದೆ. ಈ ಎಲ್ಲ ಪರಿವರ್ತನೆಗಳ ಚಕ್ರವು ಉರುಳಿದ ಮೇಲೆ ಏನಾದರೂ ಹಿಂದುಳಿಯುವಂತಾದರೆ ಅದನ್ನು ಸ್ಮರಣೆ, ನೆನಪು, ಕೀರ್ತಿ ಎಂದೆಲ್ಲ ಹೆಸರುಗಳಿಂದ ಗುರುತಿಸುತ್ತಾರೆ. ಮಧುರ ಧ್ವನಿಯ ಆ ಕೊಳಲಿನ ನೆನಪು, ಸುಂದರವಾದ ಸ್ವಪ್ನ–ಇವು ಉಸಿರಾಡುವವರೆಗೆ ಅವ್ಯಕ್ತಭಾವದಿಂದ ಅನುಸರಿಸುವುದುಂಟು.

ಕರ್ಣನು ಆಕಾಶದತ್ತ ನೋಡಿದಾಗ ಚಂದ್ರನು ಶುಭ್ರ ಮೋಡಗಳಿಂದ ಮುಂದೆ ಸರಿಯುತ್ತಲಿದ್ದ. ನೋಡನೋಡುತ್ತಿರುವಂತೆ ಅವನ ಬೆಳಕು ಹೆಚ್ಚಾದಂತೆ ತೋರತೊಡಗಿತು.

ಕಾಲದ ಅಸ್ತಿತ್ವವು ತಿಳಿದುಬರುವದಿಲ್ಲವೇಕೆ? ಆದರೆ ಅದು ಕಾಲಸಿಗೆ ಮಾತ್ರ ತಿಳಿದ ವಿಚಾರವಾಗಿರುತ್ತದೆ. ಕೊನೆಯ ಪಕ್ಷ ಈ ವಿಚಾರವು ನನಗಾದರೂ ತಿಳಿಯಬಾರದೆ? ಈ ಜೀವ ಜಗತ್ತಿನಲ್ಲಿ ಕಾಲಿರಿಸಿದೊಡನೆಯೇ ಪ್ರವಾಹದೊಂದಿಗೆ ನನ್ನ ಪ್ರಥಮ ಪ್ರವಾಸವು ಆರಂಭ. ಅದೂ ಸಹ ಕಾಲನ ಸಹವಾಸದೊಂದಿಗೇನೇ. ಶಸ್ತ್ರವಿದ್ಯಾಕಾಲದಲ್ಲಿ ಸ್ಪರ್ಧೆಯು ನಡೆದಾಗ, ಹಾಗೂ ವಸ್ತ್ರಾಪಹರಣ ಕಾಲದಲ್ಲಿ ಮೃತ್ಯು ತನ್ನ ಸೆಳೆತಕ್ಕೆಳೆದುಕೊಂಡಿತು. ಜರಾಸಂಧನೊಂದಿಗೆ ದ್ವಂದ್ವ ಯುದ್ಧ ನಡೆದಾಗಲೂ ಈ ಕಾಲನ ಛಾಯೆ ನನ್ನ ಮೇಲೆ ತನ್ನ ಪ್ರಭಾವವನ್ನು ಬೀರಿತು. ಕೃಷ್ಣನು ನನ್ನ ಜನ್ಮ ರಹಸ್ಯವನ್ನು ತಿಳಿಸಿದಾಗಲೂ ಮೃತ್ಯುವಿನ ಅಸ್ತಿತ್ವದ ಅರಿವಾಯಿತು ಈ ಎಲ್ಲವನ್ನೂ ಸೂರ್ಯದೇವನ ಆಶೀರ್ವಾದ ಬಲದಿಂದ ರಕ್ಷಿಸಿಕೊಂಡು ಬಂದೆ. ಇಂದ್ರನ ಕೃಪೆಯಿಂದ, ದರ್ಶನದಿಂದ ಆತನ ರುದ್ರ ರೂಪದ ಸಾಕ್ಷಾತ್ಕಾರವಾದಂತಾಯಿತು. ಜನ್ಮವಿತ್ತ ಮಾತೆಯ ದರ್ಶನದಿಂದ ಮರಣದ ಸಾಕ್ಷಾತ್ಕಾರವನ್ನು ಅನುಭವಿಸಿದಂತಾಯಿತು. ನನ್ನಷ್ಟು ಕಾಲನ ಅನುಭವ

ವನ್ನಾರು ಪಡೆದಿದ್ದಾರೆ ! ಇಷ್ಟು ಚಿರಪರಿಚಿತವೆನಿಸಿದ ಸಾವಿಗಾಗಿ ಚಿಂತಿಸ ಬೇಕೇ, ಹೆದರಬೇಕೇ !

ಸಾವು ಎಂದೊಡನೆ ಸರ್ವನಾಶ ಎಂದರ್ಥವಲ್ಲ. ಸಾವು ಎಂಬುದರ ಇನ್ನೊಂದು ಅರ್ಥ ರೂಪಾಂತರ. ಗ್ರೀಷ್ಮ ಋತುವಿನ ಸೂರ್ಯ ಕಿರಣಗಳಿಂದ ಹಿಮಾಲಯದ ಮಂಜುಗಡ್ಡೆಗಳೆಲ್ಲ ಕರಗುತ್ತವೆ ಎಂದೊಡನೆ ಹಿಮಗಡ್ಡೆಗಳೆಲ್ಲ ನಾಶವಾದವು ಎಂದರ್ಥವೆ ? ಒಂದು ವೇಳೆ ಹಾಗಾದಲ್ಲಿ ಗಂಗೆಯ ಮಹಾ ಪೂರದ ರೂಪವನ್ನು ನೋಡಲು ಹೇಗೆ ಸಾಧ್ಯ ? ಮುಂದೆ ಆ ಗಂಗಾ ಪ್ರವಾಹವೇ ಸಾಗರವನ್ನು ಕೂಡುತ್ತದೆ. ಹಾಗೆಂದಮಾತ್ರಕ್ಕೆ ಗಂಗೆಯು ನಾಶವಾಯಿತು ಎಂದು ಅರ್ಥವೆ ? ಆ ಮಹಾಸಾಗರವೇ ಗಂಗೆಯ ಹೊಸ ರೂಪ ಎಂದೆನಿಸುವುದಿಲ್ಲವೆ ? ರೂಪಾಂತರಗಳಲ್ಲಿ ಭಯವು ಕಾಣಿಸಿಕೊಳ್ಳುವುದ ರಿಂದ ಸಾವಿಗೂ ಭಯವೆನಿಸುವದು. ಈ ವಿಚಾರಗಳಿಂದ ಕರ್ಣನ ಮನದಲ್ಲಿ ಹೊಸ ವಿಶ್ವಾಸವು ಪ್ರಕಟವಾದಂತಾಯಿತು.

ಈಗಂತೂ ಕೊಳಲು ಧ್ವನಿಯು ನಿಂತುಹೋಗಿತ್ತು. ಪುನಃ ಅದನ್ನು ಊದುವವರೆಗೂ ಅದೊಂದು ಪೊಳ್ಳು ಬಿದಿರಾಗಿಯೇ ಕಾಣುವದು. ಅದರ ಮೂಲ ರೂಪವು ಕೇವಲ ಪೊಳ್ಳು. ಆ ಕೊಳಲಿನಂತೆಯೇ ಈ ದೇಹದ ಸ್ಥಿತಿ ಯಾಗಬಾರದೇಕೆ ? ಏಕಾಕಿ ಜೀವನದಲ್ಲಿ ದಾನದ ಸಾಫಲ್ಯವು ಮಾತ್ರ ನನ್ನ ಸಂಗಾತಿ, ಅದೊಂದು ಉಳಿದುಕೊಂಡರೆ ಸಾಕು.

ಯಾರು ಜೀವಿಸಲು ಪಾತ್ರರೋ ಅಂಥವರು ಬಾಳಲಿ ; ನನ್ನ ಮರಣ ದಿಂದಾಗಿ ಇನ್ನೊಬ್ಬರ ಜೀವನ ಬೆಳಗುವಂತಾಗಲಿ, ಅವರ ಇಚ್ಛೆ ಹಾಗೂ ಅಪೇಕ್ಷೆಗಳೆಲ್ಲ ಅವರಿಗೆ ಲಭಿಸುವಂತಾಗಲಿ, ನನ್ನ ಮೃತ್ಯುವಿನ ಅರ್ಥಲಾಭವೂ ಅವರಿಗೆ ದೊರೆಯಲಿ.

ಕರ್ಣನು ವಿಚಾರದಿಂದ ಎಚ್ಚೆತ್ತು ಶಾಂತರೀತಿಯಿಂದ ನಿಂತುಕೊಂಡಿದ್ದ ಪಾಂಡವರ ಶಿಬಿರದತ್ತ ನೋಡಿ ಕೈಮುಗಿದ,

ತನ್ನ ರಥದತ್ತ ಸಮೀಪಿಸಿದಾಗ ಎರಡೂ ಹಿಲಾಲುಗಳೂ ಶಾಂತವಾಗಿ ಹೋಗಿದ್ದವು. ಆ ಕತ್ತಲೆಯಲ್ಲಿಯೇ ರಥವನ್ನೇರಿದ. ಹಿಂದಿರುಗಿನೋಡಿದಾಗ ಆ ಪ್ರವಾಹವು ಶಾಂತತೆಯ ಮಡಿಲು ಎಂದೆನಿಸುವಂತಾಯಿತು.

## 49

ಕೃಷ್ಣನು ಬಹು ದಣಿದ ಮನಸ್ಸಿನಿಂದ ತನ್ನ ಶಿಬಿರದತ್ತ ಸಾಗಿದ್ದ. ಆಕಾಶದಲ್ಲಿ ಬೆಳೆಯುತ್ತಿದ್ದ ಚಂದ್ರನೊಂದಿಗೆ ರಾತ್ರಿಯೂ ಬೆಳೆಯುತ್ತಲಿತ್ತು. ತಂಪಾದ ಗಾಳಿಯಿಂದ ಮೈ ಕೊರೆಯುತ್ತಿತು. ಶಿಬಿರದ ಹೊರಭಾಗದಲ್ಲಿದ್ದ ಸೇವಕರತ್ತ ಕೃಷ್ಣನ ಗಮನವು ಹರಿಯಿತ್ತು. ಕೃಷ್ಣನು ಸಮೀಪಿಸಿದೊಡನೆ ಅವರು ಆತನಿಗೆ ವಂದನೆಗಳನ್ನು ಸಲ್ಲಿಸಿದರು. ಯಾವ ಮಾತನ್ನೂ ಆಡದೆ ಆತನು ಬಾಗಿಲಿಗೆ ಇಳಿಬಿಟ್ಟ ಪರದೆಯನ್ನು ಸರಿಸಿ ಮುಂದೆ ಸಾಗಿದ. ಆ ಬಾಗಿಲಿನಲ್ಲಿಯೇ ಅವನ ಕಾಲುಗಳು ನಿಂತುಹೋದವು. ಧೂಪದ ಸುಗಂಧ ವಾದ ವಾಸನೆಯು ಶಿಬಿರದ ತುಂಬೆಲ್ಲ ಹರಡಿಕೊಂಡಿತ್ತು. ಸಮೀಪದಲ್ಲಿರುವ ಕುಂಡದಲ್ಲಿ ಅಗ್ನಿಯು ಪ್ರಜ್ವಲಿತವಾಗಿತ್ತು. ದೀಪ ಸ್ತಂಭಗಳು ಶಿಬಿರದ ತುಂಬೆಲ್ಲ ಬೆಳಕನ್ನು ಚೆಲ್ಲಿದ್ದವು. ಆಸನದ ಮೇಲೆ ಕುಳಿತುಕೊಂಡಿದ್ದ ವಿದುರ ನತ್ತ ಅವನ ನೋಟವು ಸ್ಥಿರಗೊಂಡಿತು. ಇಂಥ ಅಪರಾತ್ರಿಯಲ್ಲಿ ವಿದುರನ ಆಗಮನವಾದುದನ್ನು ಕಂಡು ಆತನು ಆಶ್ಚರ್ಯಚಕಿತನಾದ. ವಯೋ ವೃದ್ಧನೂ, ಸಾತ್ವಿಕನೂ ಆದ ವಿದುರನನ್ನು ಕಂಡಾಗ ಆತನ ಉದ್ವಿಗ್ನಗೊಂಡ ಮನಸ್ಸಿಗೆ ನೆಮ್ಮದಿಯೆನಿಸಿತು. ವಿದುರನಿಗೆ ನಿದ್ರಾಭಂಗವಾಗಬಾರದೆಂದು ಅತಿ ಮೆಲ್ಲಗೆ ನಡೆದಾಗ ಕೃಷ್ಣನ ಕೊಳಲು ದೀಪಸ್ತಂಭಕ್ಕೆ ತಾಕಿತು. ಆ ಶಬ್ದದಿಂದ ವಿದುರನು ಕಣ್ಣುಬಿಟ್ಟ. ಕೃಷ್ಣನನ್ನು ನೋಡಿ ಅವಸರದಿಂದ ಎದ್ದು ನಿಂತುಕೊಂಡ.

"ವಿದುರಾ, ಸಂಕೋಚ ಬೇಡ ಕುಳಿತುಕೊ." ವಿದುರನಿಂದ ದೀರ್ಘ ಶ್ವಾಸವು ಹೊರಹೊಮ್ಮಿತು. ಕೃಷ್ಣನನ್ನು ನೋಡುತ್ತಲಿದ್ದ ವಿದುರನ ಗಮನವು ಆತನ ಕೈಯ್ಯಲಿದ್ದ ಕೊಳಲಿನತ್ತ ಹೋಯಿತು. ಅವನಿಗೆ ತಡೆದು ಕೊಳ್ಳುವದಾಗಲಿಲ್ಲ.

"ಕೃಷ್ಣಾ, ಒಂದು ಮಾತನ್ನು ಕೇಳಬಹುದೆ?"

ಕೃಷ್ಣನ ಮುಖದಲ್ಲಿ ಉದಾಸೀನತೆಯ ಭಾವವಿತ್ತು.

"ಇಂಥ ಅಪರಾತ್ರಿಯಲ್ಲಿ ಈ ಕೊಳಲನ್ನು ತೆಗೆದುಕೊಂಡು ಎಲ್ಲಿಗೆ ಹೋಗಿದ್ದೀ ಎಂದು ಕೇಳುವಿಯಲ್ಲವೆ?"

ವಿದುರನು ಆತನ ಮಾತಿಗೆ ಒಪ್ಪಿಗೆಯನ್ನು ಸೂಚಿಸಲು ತಲೆಯನ್ನ ಲ್ಲಾಡಿಸಿದ.

"ಮಿತ್ರಾ, ಕಳೆದ ಮನಶ್ಶಾಂತಿಯನ್ನು ಪುನಃ ಪಡೆದುಕೊಳ್ಳಲು ನನ್ನಲ್ಲಿರುವ ಸಾಧನವೆಂದರೆ ಇದೊಂದೇ. ದಣಿದ ಮನಸ್ಸಿಗೆ ನೆಮ್ಮದಿಯ ನ್ನೀಯಲು ನದಿಯ ದಂಡೆಯನ್ನು ಹುಡುಕಿಕೊಂಡು ಹೋಗಿದ್ದೆ. ಪ್ರತಿಯಾಗಿ ಮನಸ್ಸು ಮತ್ತಷ್ಟು ವ್ಯಗ್ರವಾಯಿತು. ನನ್ನ ಪರಿಸ್ಥಿತಿಯೇ ಹೀಗಿರುವಾಗ ಇನ್ನು ಆತನ ಪರಿಸ್ಥಿತಿಯನ್ನಾರು ಬಲ್ಲರು ?"

"ಯಾರದು ?"

ಕೃಷ್ಣನ ಮುಖದ ಮೇಲೆ ನಿರ್ವಿಕಾರದ ಭಾವವು ಕಾಣಿಸಿಕೊಂಡಿತು.

"ನನ್ನ ಈ ಕೊಳಲ ನಾದವನ್ನು ಕೇಳಲು ಇಂದು ನನ್ನಂತೆಯೇ ಅಭಾಗಿಯಾದ ಶ್ರೋತೃವು ನನಗೆ ಲಭಿಸಿದ್ದ."

"ಯಾರು ಆತ?"

"ಅದು ನನಗೆ ಹೇಗೆ ಗೊತ್ತಾಗಬೇಕು. ನಾನು ಈ ದಂಡೆಗೆ ಕುಳಿತು ಕೊಳಲನ್ನೂದುತ್ತಿದ್ದೆ. ಮಧ್ಯದಲ್ಲಿ ಹಿರಣ್ವತಿಯ ಪ್ರವಾಹ. ನಮ್ಮಿಬ್ಬರಲ್ಲಿ ತುಂಬ ಅಂತರವಿತ್ತು, ಮಂಜು ಕವಿದಿತ್ತು."

ವಿದುರನಿಗೆ ಕೃಷ್ಣನ ಕಣ್ಣಂಚಿನಲ್ಲಿ ಹನಿಗೂಡಿದುದು ಕಾಣಿಸಿತು. ಆದುದರಿಂದ ಆತ ತನ್ನನ್ನೇ ತಾನು ಸಾವರಿಸಿಕೊಂಡು,

"ವಿದುರಾ. ಇಂಥ ಅಪರಾತ್ರಿಯಲ್ಲಿ ನೀನು ಬಂದಿರುವೆಯಲ್ಲ ?"

ವಿದುರನು ಆಸನದಿಂದೆದ್ದು ಸಮೀಪದ ಅಗ್ನಿಕುಂಡದಲ್ಲಿ ತನ್ನ ಕೈ ಗಳನ್ನು ಚಾಚಿ ಬಿಸಿಮಾಡಿಕೊಳ್ಳಲಾರಂಭಿಸಿದ. ಆತನ ಹಿಂಬದಿಯ ಆಕೃತಿ ಯನ್ನೇ ಕೃಷ್ಣನು ನೋಡುತ್ತಲಿದ್ದ. ಸ್ವಲ್ಪ ಹೊತ್ತಿನ ನಂತರ ವಿದುರನು ಹೇಳಿದ.

"ಕೃಷ್ಣಾ, ಪಿತಾಮಹರು ಶರಪಂಜರದ ಮೇಲೆ ಮಲಗಿಕೊಂಡರು. ಆ ವೃದ್ಧ ತಾಪಸಿಗರ ದರ್ಶನ ಪಡೆದ ಅನಂತರ ನನ್ನ ಮನಸ್ಸು ಹಿಡಿತಕ್ಕೆ ಬಾರ ದಂತಾಗಿದೆ. ಹೇಳಿ ಕೇಳಿ ನಾನು ದಾಸೀ ಪುತ್ರನಾಗಿದ್ದೇನೆ. ಮಾನ, ಅಪಮಾನ, ಇವುಗಳನ್ನು ಸಹಿಸುವುದರಲ್ಲಿಯೇ ನನ್ನ ಬಹುಭಾಗವು ಕಳೆದು ಹೋಗಿದೆ. ಧೃತರಾಷ್ಟ್ರನ ಸಖ್ಯ ಹಾಗೂ ಆಶ್ರಯ ದೊರಕಿತಾದರೂ ನಾನು

ಭೀಷ್ಮರ ಸ್ನೇಹದ ನೆರಳನ್ನೇ ನಂಬಿ ಜೀವಿಸಿದೆ. ಆದರಿಂದ ನನ್ನ ಜ್ಞಾನೋಪಾಸನೆಗೂ ಒಂದು ತರಹದ ಸಾರ್ಥಕತೆಯು ಲಭಿಸಿತು. ಕೃಷ್ಣಾ, ನಾನು ನಿನ್ನಷ್ಟು ಜ್ಞಾನಿಯಲ್ಲ. ಒಬ್ಬನೇ ಒಬ್ಬ ಕ್ಷತ್ರಿಯನನ್ನು ನಾನು ಕಂಡಿದ್ದೇನೆ. ಆ ಅಧಿಕಾರವು ಕೇವಲ ಭೀಷ್ಮರಲ್ಲಿ ಮಾತ್ರ ಇದೆ. ಅವರನ್ನು ಶರಪಂಜರದಲ್ಲಿ ನೋಡಿದಾಗಿನಿಂದ ನನ್ನ ಪ್ರಾಣವು ಚಡಪಡಿಸಲಾರಂಭಿಸಿದೆ. ಜೀವನದಲ್ಲಿ ಮೊದಲು ಬಾರಿಗೆ ಹುಡುಗುತನದ ಅರಿವಾಗತೊಡಗಿದೆ. ಏನೂ ತಿಳಿಯದಂತೆನ್ನಿಸಿದೆ. ಆದುದರಿಂದ ಈ ರಾತ್ರಿಯಲ್ಲಿ ನಿನ್ನನ್ನು ಹುಡುಕಿಕೊಂಡು ಬಂದಿದ್ದೇನೆ."

ಮಾತನಾಡುತ್ತಿದ್ದಂತೆ ವಿದುರನು ಮಧ್ಯದಲ್ಲಿಯೇ ನಿಲ್ಲಿಸಿದ. ಆತನ ಬೆನ್ನ ಮೇಲೆ ಕೃಷ್ಣನ ಹಸ್ತವು ಚಲಿಸುತ್ತಿತ್ತು. ಆ ದಿವ್ಯ ಸ್ಪರ್ಶದ ಅನುಭವವನ್ನು ಹೊಂದಿದ್ದ ವಿದುರನ ಆ ಬಾಡಿದ ಮುಖದಲ್ಲಿ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಲಿತ್ತು. ಆತನ ಮನಸ್ಥಿತಿಯನ್ನು ಕಂಡು ಕೃಷ್ಣನಿಗೆ ಬಹು ಸಂಕಟವಾಯಿತು. ತನ್ನೆಲ್ಲ ದುಃಖ ಸಂಕಟವನ್ನು ಹತ್ತಿಕ್ಕಿಕೊಂಡು ವಿದುರನು ಹೇಳಿದ.

"ಕೃಷ್ಣಾ, ಯಾತಕ್ಕಾಗಿ ಈ ಯುದ್ಧ, ಇದರಿಂದ ಏನು ಲಾಭ ?"

"ಸರ್ವನಾಶ"! ಶಾಂತ ಸ್ವರದಲ್ಲಿ ಕೃಷ್ಣನು ಹೇಳಿದ,

"ಯಾತಕ್ಕಾಗಿ ?"

"ಅಹಂಕಾರ, ಅಧಿಕಾರಲಾಲಸೆ, ಪುರುಷಾರ್ಥಗಳು, ಇವ್ವುಗಳೇ ಇದಕ್ಕೆಲ್ಲ ಕಾರಣ"

"ಕೃಷ್ಣಾ, ಇದರಿಂದ ನಿನಗೆ ಆನಂದವಿದೆಯೆ?" ಆಶ್ಚರ್ಯದಿಂದ ಕೇಳಿದ ವಿದುರ.

"ಸುಖ ದುಃಖಗಳನ್ನೆಲ್ಲ ತೊರೆದು ನಿರ್ಣಯವನ್ನು ನಾನು ಸ್ವೀಕರಿಸಿದ್ದೇನೆ. ವಿದುರಾ, ಇದು ಕೇವಲ ಪ್ರಾರಂಭದ ದೆಶೆ ಎಂದು ತಿಳಿ. ಇದರ ಅನಂತರವೂ ನಾನು ಇನ್ನೂ ಅನೇಕ ಘಟನೆಗಳನ್ನು ನೋಡಬೇಕಾಗಿದೆ. ಯಾರು ಪಾಂಡವರಿಗೆ ಶಸ್ತ್ರವಿದ್ಯೆಯನ್ನು ಕಲಿಸಿದರೋ ಆ ದ್ರೋಣಾಚಾರ್ಯರ ವಧೆಯನ್ನು ನಾನು ನೋಡಬೇಕಾಗಿದೆ. ಯಾರ ಸಾತ್ವತ್ವದಿಂದ ಪಾಂಡವರು ನಿರ್ಭಯರಾಗಿರುವರೋ ಆ ಕರ್ಣನ ಮರಣವು ಅವನ ಸೋದರ

ರಿಂದಾಗುವುದನ್ನು ನೋಡಬೇಕಾಗಿದೆ. ಅದೆಲ್ಲವೂ ನಡೆಯಬೇಕಾಗಿದ್ದಲ್ಲಿ ಪಾಂಡವರ ಬಲ ಸಾಲದು. ಆದುದರಿಂದ ಏನೆಲ್ಲವನ್ನೂ ನಾನೇ ಮಾಡಬೇಕಾಗಿದೆ. ಶಿಖಂಡಿಯನ್ನು ಮುಂದೆ ಮಾಡಿಕೊಂಡು ಭೀಷ್ಮರನ್ನುರುಳಿಸಿಯಾಗಿದೆ. ಹೀಗೆಯೇ ಅನೇಕ ಮಾರ್ಗಗಳನ್ನು ಹಿಡಿದು ಪಾಂಡವರಿಗೆ ಜಯವನ್ನು ಸಂಪಾದಿಸಿ ಕೊಡಬೇಕಾಗಿದೆ, ವಿದುರಾ, ನೀನು ಯುದ್ಧಭೂಮಿಯಿಂದ ಬಹುದೂರ ಇರುವಿ. ನಡೆದುದೆಲ್ಲ ನಿನ್ನ ಪರೋಕ್ಷವೆಂದೆನಿಸುವುದು. ಆದರೆ ನನಗೆ ಹಾಗಾಗಲಾರದು. ಅದೆಲ್ಲವನ್ನೂ ನಾನು ನೋಡಬೇಕಾಗುತ್ತದೆ,"

"ಆ ಬಲವನ್ನು ಸಂಗ್ರಹಿಸುವದಕ್ಕಿಂತ ಯುದ್ಧವನ್ನು ನಿಲ್ಲಿಸುವದು ವಿಹಿತವಲ್ಲವೆ ?"

"ಏನು !"

"ಈ ಸರ್ವನಾಶಕಾರಕವಾದ ಯುದ್ಧವನ್ನು !"

"ಈ ವಿಚಾರದಲ್ಲಿ ನನಗೇನು ಆನಂದವಿದೆಯೇ ? ವಿದುರಾ, ಪ್ರಯೋಗಿಸುವ ಮುನ್ನ ತಾನು ಬಿಡುವ ಬಾಣದ ಮಹತ್ವವನ್ನು ಕುರಿತು ವಿಚಾರ ಮಾಡಬೇಕು. ಯಾಕೆಂದರೆ, ಬಿಟ್ಟದ್ದು ಬಿಟ್ಟು ಹೋಯಿತು. ಪುನಃ ಅದು ಮರಳಿ ಬರಲಾರದು. ನಿನಗೆ ಯಾವದಾದರೂ ದಾರಿ ತೋಚುತ್ತಿದೆಯೇ."

ವಿದುರನು ಹೇಳಿದ "ಒಂದೇ ಒಂದು ಉಪಾಯವಿದೆ."

"ಯಾವುದು ?" ಆಸೆಯಿಂದ ಕೃಷ್ಣನು ಪ್ರಶ್ನೆ ಮಾಡಿದ.

"ಆ ಕರ್ಣನಿಗೆ ತನ್ನ ಜನ್ಮ ವೃತ್ತಾಂತದ ರಹಸ್ಯವನ್ನು ತಿಳಿಸುವುದು."

"ಅದು ಅತನಿಗೆ ತಿಳಿದ ವಿಷಯವಾಗಿದೆ"

ಕೃಷ್ಣನ ಮಾತಿನಿಂದ ವಿದುರನು ಚಕಿತನಾದ.

"ಯಾರು ಹೇಳಿದರು ?"

"ನಾನು ಹಾಗೂ ಪಿತಾಮಹ ಭೀಷ್ಮರು. ಅಷ್ಟೇ ಅಲ್ಲ, ಸ್ವತಃ ಅತನ ತಾಯಿಯೂ ಈ ಮಾತನ್ನು ಹೇಳಿದಳು."

"ಹಾಗಾದರೆ ಆತ ಅದನ್ನು ಒಪ್ಪಲಿಲ್ಲವೇ ?"

"ಇಲ್ಲ ವಿದುರಾ, ಆತನು ರಕ್ತಸಂಬಂಧವನ್ನು ಆನಂದದಿಂದ ಒಪ್ಪಿಕೊಂಡ. ಆದರೂ ಕರ್ತವ್ಯದಿಂದ ಮಾತ್ರ ಎಂದೂ ವಿಮುಖನಾಗಲಿಲ್ಲ."

"ಎಂಥ ಕರ್ತವ್ಯ ?"

"ಅಧರ್ಮದೊಂದಿಗೆ ಅಂಟಿಕೊಂಡು ಬಂದ ಗೆಳೆತನ. ಆದುದರಿಂದ ಅವನಿಗೆ ನಿಷ್ಠೆಯು ಅರಿವಾಗುವುದಾದರೂ ಹೇಗೆ ? ಧರ್ಮಾರ್ಥಗಳ ವಿವರಣೆಯನ್ನು ಯಾರು ಹೇಳಬಲ್ಲರು ? ವಿದುರಾ, ಧರ್ಮವೆಂಬುದು ಒಂದು ರೀತಿಯಲ್ಲಿ ಸ್ವಾರ್ಥತೆಯಿಂದ ಕೂಡಿದೆ. ಯಾವಾಗ ಆ ಸ್ವಾರ್ಥವನ್ನು ತಡೆಯಲಾಗುತ್ತದೆಯೋ ಅಂಥ ಕಾರಣವು ಅಧರ್ಮವೆಂದು ಕರೆಸಿಕೊಳ್ಳುತ್ತದೆ."

"ಕೃಷ್ಣಾ, ಈ ಮಾತನ್ನು ನೀನು ಹೇಳುವೆಯಾ ?"

"ಅದರಲ್ಲಿ ಆಶ್ಚರ್ಯಪಡುವಂತಹದೇನಿದೆ ? ನೀನೂ ತಿಳಿದವನಲ್ಲವೆ ? ತತ್ವವೇತ್ತನೆಂದು ಕರೆಸಿಕೊಳ್ಳುವ ನಿನಗೆ ಪ್ರತಿನಿತ್ಯ ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳುವುದರಲ್ಲಿಯೇ ಆನಂದವಿದೆ. ಅದೇ ನಿನ್ನ ಗುರಿ. ಅಧಿಕಾರದಿಂದ ದೂರ ಇರುವಿಕೆ, ನಿಸ್ವಾರ್ಥ ಮನೋಭಾವ, ಇವುಗಳೇ ನಿನ್ನ ತತ್ವಜ್ಞಾನದ ಬಲ. ನಾನು ಒಂದು ಮಾತನ್ನು ಸ್ಪಷ್ಟವಾಗಿ ವಿಚಾರಿಸಬಹುದೇ ?"

"ಕೇಳು ಕೃಷ್ಣಾ."

"ಕೌರವರ ಪಕ್ಷದಲ್ಲಿ ಅಧರ್ಮದ ಅನೇಕ ಕೃತ್ಯಗಳು ನಡೆಯುತ್ತಿದ್ದಾಗಲೂ ನೀನು ಹಾಗೂ ಪಿತಾಮಹರು. ದ್ರೋಣಾಚಾರ್ಯ. ಕೃಪಾಚಾರ್ಯರು ಕೌರವರ ಪಕ್ಷವನ್ನೇ ಅವಲಂಬಿಸಿದಿರೇಕೆ ?"

"ಕೌರವೇಶ್ವರನನ್ನು ಬಿಟ್ಟು ನಾವು ಎಲ್ಲಿಗೆ ಹೋಗುವುದು ? ಆತನ ವಿನಃ ನಮಗೆ ಬೇರೆ ಗತ್ಯಂತರವಿರಲಿಲ್ಲ"

"ಈ ಉತ್ತರವೇನೋ ಸಮಂಜಸವೆನಿಸುವಂತಹುದು. ಆದರೆ ಹೀಗೆ ಮೋಸಗೊಳಿಸುವದು ಮಾತ್ರ ವಿಹಿತವೆನಿಸದು. ನೀವು ಮನಸ್ಸು ಮಾಡಿದ್ದಲ್ಲಿ ಒಂದು ವೇಳೆ ಯುದ್ಧವನ್ನು ನಿಲ್ಲಿಸಲಾಗದಿದ್ದರೂ ಸಹ ಅದರಿಂದ ಹೊರ ಬರಲು ನಿಮಗೆ ಅವಕಾಶವಿತ್ತು."

"ಹೊರಬರಲು ?"

"ಹೌದು" ವಿದುರನನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಲಿದ್ದ ಕೃಷ್ಣನು ಹೇಳಿದ. "ಭೀಷ್ಮರು ಪಿತಾಮಹರೆಂದು ಕರೆಸಿಕೊಳ್ಳುತ್ತಿದ್ದರು. ಅವರ ಅಧಿಕಾರವು ಹಿರಿದಾದದ್ದು, ತಮ್ಮ ಕುಲಕ್ಷಯವಾಗುವದನ್ನು ನೋಡುವ

ಶಕ್ತಿಯು ಅವರಲ್ಲಿರಲಿಲ್ಲ. ಯುದ್ಧವು ನಿಶ್ಚಿತವಾದೊಡನೆ ಎಲ್ಲವನ್ನೂ ಬಿಟ್ಟು ಧೃತರಾಷ್ಟ್ರನೊಡನೆ ವಾನಪ್ರಸ್ಥವನ್ನೇಕೆ ಅಂಗೀಕರಿಸಲಿಲ್ಲ ? ಯಾರಾದರೂ ಅವರನ್ನು ತಡೆದು ನಿಲ್ಲಿಸುತ್ತಿದ್ದರೆ ? ನಾನು ಪಾಂಡವರ ಪಕ್ಷವನ್ನು ಸ್ವೀಕರಿಸಿದ ಅನಂತರ ನನ್ನ ಹಿರಿಯಣ್ಣನಾದ ಬಲರಾಮನು ಯುದ್ಧದಲ್ಲಿ ಭಾಗ ವಹಿಸದೆ ಅಲಿಪ್ತನಾಗಿ ತೀರ್ಥಯಾತ್ರೆಗೆಂದು ಹೊರಟು ಹೋಗಲಿಲ್ಲವೆ ? ಬಲಾತ್ಕಾರದಿಂದ ನಾನು ಅವನನ್ನು ತಡೆದು ನಿಲ್ಲಿಸಿರುವೆನೆ ? ನಿಮಗೆಲ್ಲರಿಗೂ ಮನುಸ್ಸಿನ ಜ್ಞಾನ ಹಾಗೂ ಮಾನವ ಅಧಿಕಾರವಿದ್ದಿಲ್ಲವೆ ? ಅದರ ಬೆಂಬಲ ವನ್ನು ನೀವೇಕೆ ಸ್ವೀಕಾರಮಾಡಲಿಲ್ಲ ?"

"ಹೇಳು ಕೃಷ್ಣಾ ನಾನು ಈ ಕಲ್ಪನೆಯಿಂದ ಅಸ್ವಸ್ಥನಾಗಿದ್ದೇನೆ. ನನಗೆ ಆ ಎಲ್ಲ ಕಾರಣಗಳೂ ತಿಳಿಯಬೇಕೆನ್ನಿಸಿವೆ."

"ಕೌರವನ ಬಗ್ಗೆ ನಿಷ್ಠೆಯನ್ನು ತೋರಿಸುವುದೊಂದೇ ನಿಮಗೆ ಧರ್ಮ ವೆಂದು ತೋರಿತು. ಪಾಂಡವರ ಬಗ್ಗೆ ನಿಮ್ಮ ಮನಸ್ಸಿನಲ್ಲಿದ್ದ ಪ್ರೀತಿಯೂ ಕೌರವ ನಿಷ್ಠೆಯು ಮುಂದೆ ಕಡಿಮೆ ಎಂದೆನ್ನಿಸತೊಡಗಿತು. ಇನ್ನು ಕೌರವರ ಛತ್ರದಿಂದ ಸರಿದು ಹೋಗುವದೂ ಸಹ ಸುಲಭದ ಮಾತಾಗಿರಲಿಲ್ಲ. ನಿಮ್ಮ ಜ್ಞಾನ ಜ್ಯೋತಿಗೆ ಅದು ಭಯಾನಕ ಶಾಪವಾಗಿ ಪರಿಣಮಿಸಿತು."

ಮರ್ಮಭೇದಕವಾದ ಕೃಷ್ಣನ ಮಾತುಗಳಿಂದ ವಿದುರನ ಮುಖವು ಬಿಳುಪಿಟ್ಟುಕೊಂಡಿತು. ಅವನು ನಿಶ್ಚಿತ ಧ್ವನಿಯಲ್ಲಿ ಹೇಳಿದ.

"ಕೃಷ್ಣಾ, ಇದೇ ಮಾತನ್ನು ನಾನೂ ಹೇಳಬಹುದಲ್ಲವೆ ? ಇದೇ ನಿಜ ವಾದಲ್ಲಿ ನೀನು ಪಾಂಡವರ ಪಕ್ಷವನ್ನೇಕೆ ವಹಿಸಿದೆ ?"

"ಅದಕ್ಕೆ ನಾನು ಇನ್ನೂ ಉತ್ತರವನ್ನು ಶೋಧಿಸುತ್ತಿರುವೆ. ವಿದುರಾ, ನಿಷ್ಠೆಯನ್ನು ಸ್ನೇಹದಿಂದ ಬಂಧಿಸಲಾಗುತ್ತದೆಯೇ ವಿನಃ ಕೇವಲ ಕರ್ತವ್ಯ ದಿಂದಲ್ಲ. ಈ ಪಾಂಡವರ ಮೊದಲು ದರ್ಶನ ನನಗೆ ದ್ರೌಪದಿಯ ಸ್ವಯಂವರ ದಲ್ಲಾಯಿತು. ಕುಂತಿಯು ನನ್ನ ತಂದೆಯ ತಂಗಿ ; ಅಂದ ಮೇಲೆ ಪಾಂಡವರು ನನ್ನ ಆತ್ಮೀಯ ಸಂತಾನರು. ಪಾಂಡವರಲ್ಲಿದ್ದ ಗುಣಗಳು ನನ್ನನ್ನಾಕರ್ಷಿಸಿದವು. ದ್ರೌಪದಿಯೊಂದಿಗೆ ಪಾಂಡವರು ವಿವಾಹವಾದಾಗ ಅವರ ಪಕ್ಷದಲ್ಲಿ ಯಾರೂ ಇರಲಿಲ್ಲ. ಆ ಕೊರತೆಯನ್ನು ತುಂಬಿದೆ. ಪಾಂಡವ ರಿಗೆ ಅಗಣಿತವಾದ ಸಂಪತ್ತನ್ನು ಕಾಣಿಕೆಯಾಗಿ ಕೊಡಿಸಿದೆ. ಅವರ ಸಹವಾಸ

ದಲ್ಲಿ ಅಭೇದ್ಯವಾದ ಸ್ನೇಹವು ಬೆಳೆದುಕೊಂಡಿತು. ಅವರಿಗೆ ಯಾರ ಆಧಾರವೂ ಇಲ್ಲವಾದುದರಿಂದ ನಾನು ಬೆಂಗಾವಲಾಗಿ ನಿಂತೆ. ಅರಣ್ಯದಲ್ಲಿಯೂ ರಾಜ್ಯ ನಿರ್ಮಿಸಲು ಕಾರಣನಾದೆ. ಖಾಂಡವಪ್ರಸ್ಥವನ್ನು ಇಂದ್ರಪ್ರಸ್ಥವಾಗಿ ರೂಪಾಂತರಗೊಳ್ಳುವಂತೆ ಮಾಡಿದೆ. ಈ ಎಲ್ಲ ಕಾರಣಗಳಿಂದ ನನಗೆ ಕೃತಾರ್ಥತೆ ಎನಿಸಿತು ಆದರೆ ಅದು ಕೇವಲ ಒಂದು ಭಾವನೆಯಾಗಿತ್ತು. ಯಾಕೆಂದರೆ ಮಾನವ ಜೀವನವೆಂಬುದೊಂದು ಜೂಜು. ಈ ವಿಷಯ ನನ್ನ ಮನಸ್ಸಿಗೆ ಬಂದಿರಲಿಲ್ಲ. ಸಾಮಾನ್ಯ ಒಂದು ಜೂಜಿನಲ್ಲಿ ಪಾಂಡವರು ಎಲ್ಲವನ್ನೂ ಕಳೆದುಕೊಂಡರು. ಆ ವನವಾಸಿಗಳಾದ ಪಾಂಡವರನ್ನು ಬಿಡಲು ನನಗೆ ಮತ್ತೆಷ್ಟು ಸಾಧ್ಯವಾಗಲಿಲ್ಲ. ನಿಷ್ಠೆ ಎಂಬುದು ಒಂದೇ ಸಲ ಜೋಡಿಸಲ್ಪಡುತ್ತದೆ. ಅದಕ್ಕೆ ಇಂಥ ಕಾರಣವೇ ಬೇಕೆಂದೇನೂ ಇಲ್ಲ. ಯಾದವರ ಕುಲವನ್ನು ನಾನು ಸಂರಕ್ಷಿಸಿದೆ. ಅದರಲ್ಲಿಯ ಕೆಲವರು ಮಾತ್ರ ಪಾಂಡವ ಪಕ್ಷಕ್ಕೆ ಬಂದಿನ್ನು ಉಳಿದವರೆಲ್ಲರೂ ಕೌರವರ ಪಕ್ಷಕ್ಕೆ ಬಂದು ನಿಂತಿದ್ದಾರೆ. ನಮ್ಮ ನಿಷ್ಠೆಗಾಗಿ ಹೇಗೆ ನೀವು ವ್ಯಥೆಪಡುತ್ತಿರುವಿರೋ ಹಾಗೆಯೇ ನಾನೂ ನನ್ನ ನಿಷ್ಠೆಯನ್ನು ಕುರಿತು ಚಿಂತಿಸುತ್ತಿರುವೆ"

"ಕೃಷ್ಣಾ, ಈ ಮಾತನ್ನು ನೀನು ಹೇಳುವೆಯಾ ?" ವಿದುರನು ಆಶ್ಚರ್ಯದಿಂದ ಕೇಳಿದ. "ಯುದ್ಧಾರಂಭದ ದಿನ ಸ್ವಜನರನ್ನು ನೋಡಿ ತಬ್ಬಿಬ್ಬಾಗಿ ನಿಂತ ಅರ್ಜುನನಿಗೆ ನೀನೇ ಉಪದೇಶವನ್ನು ಮಾಡಿವೆಯಲ್ಲವೆ ? ಆ ನಿನ್ನ ಉಪದೇಶದಿಂದಲೇ ಅರ್ಜುನನಿಗೆ ಕಳೆದುಹೋದ ಧೈರ್ಯವು ಪ್ರಾಪ್ತವಾಯಿತು. ಅಂದ ಮೇಲೆ ನಿನ್ನಂಥವನಿಗೆ ಈ ತರಹದ ಮಾತುಗಳು ಶೋಭಿಸುವವೆ ?"

ಕೃಷ್ಣನು ನಕ್ಕುಬಿಟ್ಟ.

"ವಿದ್ಯಾ, ಧರ್ಮ, ನ್ಯಾಯ, ನೀತಿ ಇವುಗಳು ಇನ್ನೊಬ್ಬರಿಗೆ ಉಪದೇಶ ಮಾಡಲು ಬಹು ಸುಲಭದ ಕೆಲಸ. ಆದರೆ ಅದನ್ನು ತಾನೇ ಆಚರಿಸುವದೆಂದರೆ ಬಹು ಕಷ್ಟಸಾಧ್ಯ. ಕರ್ಮಫಲವನ್ನು ಅಪೇಕ್ಷಿಸದೆ ಯುದ್ಧನಿರತನಾಗು, ಎಂದು ಹೇಳುವಾಗ ಅರ್ಜುನನ ಯುದ್ಧಕ್ಕೆ ಸನ್ನದ್ಧನಾಗಬೇಕು ಎಂಬುದೇ ನನ್ನ ಬಯಕೆಯಾಗಿರಲಿಲ್ಲವೆ ? ನನ್ನ ಉಪದೇಶದಿಂದ ಅರ್ಜುನನು ಯುದ್ಧವನ್ನಾರಂಭಿಸಿದ. ಆದುದರಿಂದ ನಾನು ಹೇಳಿದುದನ್ನೆಲ್ಲ

ಆಚರಿಸುವನೇ ಎಂಬುದು ಸಂದೇಹಾಸ್ಪದವಾಗಿದೆ. ಸೇಡಿನ ಭರದಲ್ಲಿರುವ ಭೀಮನು ನಿತ್ಯ ನೂತನ ಪ್ರತಿಜ್ಞೆಗಳನ್ನು ಮಾಡುತ್ತಲಿದ್ದಾನೆ. ಅರ್ಜುನ ನಂತೂ ನನ್ನಂತಹ ಧನುರ್ಧಾರಿಯೇ ಇಲ್ಲ ಎಂದು ಹೇಳಿಕೊಳ್ಳುತ್ತಿದ್ದಾನೆ. ಯುಧಿಷ್ಠಿರನಂತೂ ಯಾವ ಕ್ಷಣದಲ್ಲಿ ಜೀವನದ ಯಶಸ್ಸನ್ನು ಜೂಜಾಟಕ್ಕೆ ಹಚ್ಚುತ್ತಾನೋ ಹೇಳಲು ಬರುವಂತಿಲ್ಲ. ಇಷ್ಟೆಲ್ಲ ಇದ್ದಾಗಲೂ ಒಂದು ವಿಷಯದಲ್ಲಿ ಮಾತ್ರ ನನಗೆ ವಿಶ್ವಾಸವಿದೆ."

"ಯಾವುದು ಆ ವಿಷಯ ?

"ಪಾಂಡವರು ನನ್ನಲ್ಲಿಟ್ಟಿರುವ ವಿಶ್ವಾಸ. ಯಾವರೀತಿಯಿಂದಲೇ ಆಗಲಿ ನಾನು ಅವರಿಗೆ ನಿಶ್ಚಿತ ಫಲವನ್ನು ಸಂಪಾದಿಸಿಕೊಡುವೆ. ಅವರೂ ಈ ವಿಚಾರದಲ್ಲಿ ನಿಷ್ಠೆಯನ್ನು ತಾಳಿದ್ದಾರೆ. ಅವರು ನನ್ನಲ್ಲಿಟ್ಟಿರುವ ನಂಬಿಕೆಗಾಗಿಯೇ ಎಲ್ಲವನ್ನೂ ನಾನು ಕಣ್ದೆರೆದು ನೋಡಬೇಕಾಗಿದೆ. ಯುದ್ಧ ವಂತೂ ಅನಿವಾರ್ಯ ಎಂದಾದಾಗ ಅದರಿಂದ ಬರುವ ಕೀರ್ತಿಯಾಗಲಿ ಅಥವಾ ಅಪಕೀರ್ತಿಯಾಗಲಿ ಅದು ನಮ್ಮಿಬ್ಬರಲ್ಲಿ ಮಾತ್ರ ಮೀಸಲು ಎಂದೆನಿಸಿದೆ."

"ಇಬ್ಬರಾರು ?

"ನಾನು ಹಾಗೂ ಕರ್ಣ. ದೈವದಾಟವೆಂಬುದು ಬಹು ವಿಚಿತ್ರ ವಾದುದು. ನಾನು ಉಪದೇಶವನ್ನಿತ್ತುದು ಅರ್ಜುನನಿಗೆ ಎಂದಾದರೂ, ಅದರ ಆಚರಣೆಯನ್ನು ಕಾಣುತ್ತಿರುವುದು ಕರ್ಣನಲ್ಲಿ. ಸುಖ-ದುಃಖ, ಲಾಭ–ಹಾನಿ, ಜಯ–ಅಪಜಯ ಇವೆಲ್ಲವುಗಳಲ್ಲಿ ಭೇದವನ್ನೆಣಿಸದೆ ಯುದ್ಧ ನಿರತನಾಗಿರುವ ಕರ್ಣನನ್ನು ಬಿಟ್ಟರೆ ಬೇರೆ ಯಾರಿದ್ದಾರೆ? ಜೀವನದುದ್ದಕ್ಕೂ ಸುಖವನ್ನನುಭವಿಸಲಿಲ್ಲ. ನಿರ್ವಿಕಾರ ಮನೋಭಾವದಿಂದ ಗೆಳೆತನ ಕ್ಕಾಗಿಯೇ ಸರ್ವಸ್ವವನ್ನೆಲ್ಲ ಅರ್ಪಣೆ ಮಾಡಿದ. ಆ ಕರ್ಣನ ಜೀವನವೇ ಧನ್ಯ ! ಪಾಂಡವರು ನನ್ನನ್ನು ದೈವೀಗುಣ ಸಂಪನ್ನನೆಂದು ನಂಬಿದ್ದಾರೆ. ತನ್ನ ಯಶಸ್ಸಿಗಾಗಿಯೇ ಅರ್ಜುನನು ನನ್ನನ್ನು ನಂಬಿದ್ದಾನೆ. ಆತನು ದೈವತ್ವದ ಆಧಾರವನ್ನು ನಂಬಿ ವಿಜಯ ಸಂಪಾದಿಸಲು ಪ್ರಯತ್ನಿಸುವಂಥವನು. ಕರ್ಣನು ಮಾತ್ರ ಹಾಗಲ್ಲ. ಮಿತ್ರಪ್ರೇಮಕ್ಕಾಗಿ ನನ್ನೊಂದಿಗೆ ವೈರತ್ವವನ್ನು ಕಟ್ಟಿಕೊಳ್ಳಲೂ ಸಿದ್ಧನಾದ. ಇವರಿಬ್ಬರಲ್ಲಿ ಯಾರು ಶ್ರೇಷ್ಠರು? ಎಂಬುದನ್ನು

ಗುರುತಿಸುವುದೇ ಕಠಿಣವಾಗಿದೆ. ಅರ್ಜುನನಿಗೆ ನನ್ನಲ್ಲಿ ಶ್ರದ್ಧೆ ಇದೆ. ಆದರೆ ನಿರ್ವಾಜ್ಯ ಪ್ರೇಮವನ್ನು ಕಾಣುತ್ತಿರುವುದು ಕರ್ಣನಲ್ಲಿಯೇ. ನಾಳಿನ ರಣರಂಗದಲ್ಲಿ ನನ್ನ ಆಜ್ಞೆಯಿಂದಲೇ ಅವನ ಸಾವು ಸನ್ನಿಹಿತ ಎಂಬ ಕಲ್ಪನೆಯೂ ನನಗೆ ಸಹಿಸಲಸಾಧ್ಯವೆನ್ನಿಸಿದೆ."

ವಿದುರನ ಮುಖಚರ್ಯೆಯೇ ಬದಲಿಸಿತು. ನಿಶ್ಚಿತವಾದ ಧ್ವನಿಯಲ್ಲಿ ಆವನು ಹೇಳಿದ.

"ಕೃಷ್ಣಾ, ಈ ಎಲ್ಲ ವಿಚಾರಗಳ ಬಗ್ಗೆ ಚಿಂತಿಸಬೇಕಾಗಿಲ್ಲ. ನಾಳೆ ಯುದ್ಧವೇ ನಿಂತುಹೋಗಬಹುದು ಅಥವಾ ನಿಲ್ಲಿಸಬೇಕಾಗಬಹುದು. ಅದ ಕ್ಕಾಗಿಯೇ ನಾನು ಉಪಾಯವನ್ನು ಕಂಡುಹಿಡಿದಿದ್ದೇನೆ."

"ಯಾವ ಉಪಾಯ ?"

"ನಾಳೆ ಪಾಂಡವರಿಗೆ ಕರ್ಣನಾರು? ಎಂಬುದು ತಿಳಿದು ಹೋಗುತ್ತದೆ."

"ವಿದುರಾ," ಕೃಷ್ಣನ ಧ್ವನಿ ಕಠೋರವಾಗಿತ್ತು.

"ಆ ಸಾತ್ವಿಕ ವೃತ್ತಿಯ ಪಾಂಡವರು ಎಂದೂ ತಮ್ಮ ಅಣ್ಣನ ವಧೆ ಮಾಡಲಾರರು."

ಮೂರ್ತಿಮಂತ ಭಯ ಕೃಷ್ಣನ ಮುಖದಲ್ಲಿ ಕಾಣಲಾರಂಭಿಸಿತು. ಆತನು ವಿದುರನ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಬಹು ನಯ ವಾಗಿ ಹೇಳಿದ.

ಇಲ್ಲ, ವಿದುರಾ ನಿನಗೆ ಈ ಕಾರ್ಯ ಮಾಡಲು ಬರುವಂತಿಲ್ಲ."

"ಯಾಕೆ ?"

"ಯಾಕೆ ?" ಪ್ರಜ್ವಲಿಸುತ್ತಿದ್ದ ಅಗ್ನಿಕುಂಡವನ್ನೇ ನೋಡುತ್ತಿದ್ದ. ಕೃಷ್ಣನು ಆ ಕುಂಡದತ್ತ ಕೈತೋರಿಸುತ್ತ ಹೇಳಿದ "ಅರಳಿದ ಈ ಅಗ್ನಿ ಯನ್ನು ನೋಡಿದೆಯಾ, ಅದರ ಮೇಲೆ ಈಗ ನೀರು ಚೆಲ್ಲಿದರೆ ಅದು ಆ ಸ್ಥಳ ದಲ್ಲಿಯೇ ಆರಿಹೋಗುತ್ತದೆ. ಮುಂದೆ ಅರಳಲು ಸಾಧ್ಯವೇ ? ಅದರ ಮೂಲ ತೇಜಸ್ಸು ನಾಶವಾದಂತೆಯೇ. ಹಾಗಾಗದೆ ಆ ಅಗ್ನಿಯು ಸಂಪೂರ್ಣವಾಗಿ ಅರಳಿ ತಾನೇ ಶಾಂತವಾಗಿ ಹೋಗಬೇಕು, ಆಗ ಮಾತ್ರ ಜೀವನ ದಾಹವನ್ನು ಕಡಿಮೆಗೊಳಿಸುವಂತಹ ಭಸ್ಮವು ಪ್ರಾಪ್ತವಾಗುತ್ತದೆ."

"ಭಸ್ಮ ?"

"ವಿದುರಾ, ಈಗ ಆ ಸಂಧರ್ಭಗಳಿಗೆಲ್ಲ ಬೆಲೆಯೇ ಇಲ್ಲ. ಪಾಂಡವರಿಗೆ ಕರ್ಣನ ರಕ್ತಸಂಬಂಧವೇನು? ಎಂಬುದು ತಿಳಿದುಬಂದಲ್ಲಿ ಕ್ಷಣಾರ್ಧದಲ್ಲಿ ಅವರು ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟುಬಿಡುತ್ತಾರೆ. ಅದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಇಷ್ಟಾದರೂ ಕರ್ಣನು ಮಾತ್ರ ಅವರಿಗೆ ದೊರೆಯಲಾರ. ಯಾಕೆಂದರೆ ದುರ್ಯೋಧನನ ವಿಚಾರದಲ್ಲಿ ಅವನಿಗಿರುವ ಪ್ರೀತಿ, ವಿಸ್ವಾಸ ಅಮೂಲ್ಯವಾದವುಗಳು. ಅಜರಾಮರ ಎಂದು ಕರೆಸಿಕೊಳ್ಳುವಂತಹವು. ಇಂದು ಪಾಂಡವರು ಸ್ವೀಕರಿಸಿದ ಜಯವು ಕರ್ಣ ಸಂಬಂಧವರಿತ, ಅನಂತರ ಅದು ಕರ್ಣನ ಹಸ್ತದಿಂದ ದುರ್ಯೋಧನನಿಗೆ ಮುಟ್ಟಬಹುದು. ಪಿತಾಮಹರು ಪಾಂಡವರ ನಿಷ್ಠೆಗಾಗಿಯೆ ತಮ್ಮ ಪತನವನ್ನು ಸಂತೋಷದಿಂದ ಒಪ್ಪಿಕೊಂಡರು. ನಾಳೆ ನೀನು ನಿಜ ಸಂಗತಿ ಹೇಳಿದಲ್ಲಿ ಅದಕ್ಕೆ ಯಾವ ಅರ್ಥವೂ ಉಳಿಯಲಾರದು. ಆದುದರಿಂದ ನೀನು ಅಂಥ ಸಾಹಸಕ್ಕೆ ಕೈ ಹಾಕಬೇಡ, ನಿನಗಿಂತಲೂ ಅನೇಕ ವಿಚಾರಗಳಲ್ಲಿ ನಾನು ದುಃಖಿಯಾಗಿರುವೆ. ಇನ್ನು ಮುಂದೆ ಈ ಯುದ್ಧವಾದರೂ ಹೆಚ್ಚು ಕಾಲ ನಡೆಯಲಾರದು. ಯಾವಾಗ ಯುದ್ಧವು ನಿಲ್ಲುತ್ತದೆಯೋ ಆಗ ಮಾತ್ರ ನಮ್ಮ ದುಃಖವು ದೂರವಾಗಬಹುದು."

"ಯುದ್ಧದಿಂದ !"

"ಅಲ್ಲ. ಯುದ್ಧದಿಂದಲ್ಲ. ಜಯಾಪಜಯುಗಳ ಅರ್ಥವನ್ನು ಈಗಾಗಲೇ ಕಳೆದುಕೊಂಡಿದ್ದಗೂ ಯಾರು ಕರ್ತವ್ಯಕ್ಕಾಗಿ ಕೊನೆಯುವರೆಗೂ ತಮ್ಮ ಹಟವನ್ನು ಸಾಧಿಸಿಕೊಂಡು ಬಂದರೋ, ಆ ಭೀಷ್ಮರೇ ನಮ್ಮ ದುಃಖವನ್ನು ಅರಿಯಬಲ್ಲರು. ನಮ್ಮನ್ನೆಲ್ಲ ಸಮಾಧಾನ ಪಡಿಷುವ ಸಾಮರ್ಥ್ಯವನ್ನೂ ಅವರಲ್ಲಿಯೇ ನಾವು ಕಾಣಬಹುದು. ಈಗಂತೂ ಬಂದುದನ್ನು ಅನುಭವಿಸುವುದರ ವಿನಃ ಯಾವುದೂ ನಮ್ಮ ಕೈಯಲ್ಲಿ ಇಲ್ಲ."

"ಕೃಷ್ಣಾ, ನಾನು ಬರುವೆ."

ಕೃಷ್ಣನು ತಾನು ಹೊದ್ದುಕೊಂಡಿದ್ದ ಉಣ್ಣೆಯ ವಸ್ತ್ರವನ್ನು ವಿದುರನ ಮೈ ಮೇಲೆ ಹೊದಿಸುತ್ತ ಹೇಳಿದ,

"ಗೆಳೆಯಾ, ನೀನು ಹೊರಡುವ ಮುನ್ನ ನಿನ್ನ ಆಶೀರ್ವಾದವು ನನಗೆ ಬೇಕಾಗಿದೆ."

"ಆಶೀರ್ವಾದ ?"

"ಹೌದು ವಿದುರಾ, ಕೌರವರು ಯಾವಾಗಲೂ ನಿನ್ನನ್ನು ದಾಸೀಪುತ್ರನೆಂದು ಅವಹೇಳನ ಮಾಡುತ್ತ ಬಂದರು. ನಿನ್ನ ಪಾಂಡಿತ್ಯ, ರಾಜನೀತಿ ಇವುಗಳ ಬಗ್ಗೆ ಅವರು ಸ್ವಲ್ಪವೂ ಗಮನವನ್ನೀಯಲಿಲ್ಲ. ಹೀಗಿದ್ದರೂ ನೀನು ಸತ್ಯದ ಪಕ್ಷವನ್ನು ಎಂದೂ ದೂರೀಕರಿಸಲಿಲ್ಲ. ತತ್ವಜ್ಞಾನದ ನಿನ್ನ ಭೋಧನೆಯಿಂದ ಯಾವ ಪ್ರಯೋಜನವನ್ನು ಪಡೆಯದಿದ್ದಾಗಲೂ ನೀನು ಮಾತ್ರ ನಿನ್ನ ಕರ್ತವ್ಯದಿಂದ ಚ್ಯುತನಾಗಲಿಲ್ಲ. ಪ್ರತಿನಿಮಿಷದಲ್ಲಿ ನೀನು ಪರಾಜಯವನ್ನನುಭವಿಸಿದರೂ ನಿನ್ನ ಸಾತ್ವಿಕ ಉಪದೇಶವು ಮಾತ್ರ ಸಂತತ ಧಾರೆಯಾಗಿ ಪ್ರವಹಿಸಿತು. ಇಂದಿನವರೆಗೆ ಯಾರೂ ನಿನ್ನ ಆಶೀರ್ವಾದವನ್ನು ಅಪೇಕ್ಷಿಸದೆ ಇರಬಹುದು, ಆದರೆ ನನಗೆ ಮಾತ್ರ ಅಗತ್ಯವಿದೆ. ನಾಳೆ ಪಾಂಡವ, ವಿಜಯಕ್ಕಾಗಿ ದ್ರೋಣಾಚಾರ್ಯ, ಕೃಪಾಚಾರ್ಯರ, ಕರ್ಣ ಮೊದಲಾದ ವೀರರನ್ನು ಪರಾಜಯಗೊಳಿಸಬೇಕಾಗಿದೆ. ನಾಳೆ ನನ್ನ ಅಸ್ಪೃಹೆಯ ಮೇರೆಗೆ ಸದ್ಭಾವನೆಗಳ ಪರಾಜಯವಾಗಬೇಕಾಗಿದೆ. ಅದನ್ನು ಅನುಭವಿಸಲು ನನಗೆ ಶಕ್ತಿಯು ಬೇಕಾಗಿದೆ. ಅದಕ್ಕಾಗಿ ಅಂಥ ಆಶೀರ್ವಾದವನ್ನು ಮಾಡು. ಅಂಥಹ ಶಕ್ತಿ ಕೇವಲ ನಿನ್ನೊಬ್ಬನಲ್ಲಿ ಮಾತ್ರ ನಾನು ಕಂಡಿದ್ದೇನೆ."

ಕೃಷ್ಣನು ತಲೆ ಬಾಗಿಸಿದ. ದ್ರವಬಿಂದುಗಳಿಂದ ತುಂಬಿದ ಕೃಷ್ಣಕುಂತಲದ ಮೇಲೆ ವಿದುರನು ತನ್ನ ಕೈಯನ್ನಾಡಿಸಿದ. ವಿದುರನಿಗೆ ಹೇಳಿಕೊಳ್ಳುವುದಾವುದೂ ಉಳಿದಿರಲಿಲ್ಲ. ಆತನ ಕಂಠವು ಬಿಗಿದು ಬಂದಿತು. ಅವನು ನಾವೆಯತ್ತ ಹೊರಟು ಬಿಟ್ಟ. ಕೃಷ್ಣನು ತಲೆಯೆತ್ತಿದಾಗ ವಿದುರನು ನಾವೆಯಲ್ಲಿ ಕುಳಿತಿದ್ದು ಅದು ಮುಂದಗತಿಯಿಂದ ಮುಂದೆ ಮುಂದೆ ಸಾಗುತ್ತಲಿತ್ತು. ಆ ಶಾಂತ ವಾತಾವರಣದಲ್ಲಿ "ಚುಕ್–ಚುಬಕಾ" ಎಂದು ಶಬ್ದವು ಮಾತ್ರ ಕೇಳಿ ಬರುತ್ತಿತ್ತು. ಆ ಶಬ್ದವು ಕೇಳದಂತಾಗುವವರೆಗೆ ಆ ಪ್ರವಾಹದ ದಂಡೆಯಲ್ಲಿಯೇ ಕೃಷ್ಣನು ನಿಂತುಕೊಂಡಿದ್ದ.

## 50

ಕರ್ಣನು ತುಂಬ ನಸುಕಿನಲ್ಲಿಯೇ ಕೌರವ ಶಿಬಿರಕ್ಕೆ ಬಂದನು. ದುರ್ಯೋಧನನು ಆತನಿಗೆ ಸ್ವಾಗತವನ್ನು ಬಯಸಿದನು. ಇಬ್ಬರೂ ಕೂಡಿಕೊಂಡು ದ್ರೋಣಾಚಾರ್ಯರಿದ್ದಲ್ಲಿಗೆ ಹೋದರು. ಯುದ್ಧಕ್ಕೆ ಸನ್ನದ್ಧರಾಗಿ ನಿಂತಿದ್ದ ಆಚಾರ್ಯರು ಇಬ್ಬರನ್ನೂ ಆದರದಿಂದ ಬರಮಾಡಿಕೊಂಡರು.

"ಕರ್ಣಾ, ಯುಧಿಷ್ಠಿರನನ್ನು ಜೀವಸಹಿತ ಹಿಡಿದು ತರುವನೆಂದು ನಾನು ದುರ್ಯೋಧನನಿಗೆ ವಚನವನ್ನಿತ್ತಿದ್ದೇನೆ. ಇಂದಿನ ಯುದ್ಧಕ್ಕಾಗಿ ಒಂದು ತಂತ್ರವನ್ನು ರಚಿಸಿದ್ದೇನೆ. ಯುದ್ಧವು ಆರಂಭವಾದೊಡನೆ ಪೂರ್ವ ಯೋಜನೆಯಂತೆ ಸಮಸಪ್ತಕರಿಂದ ಅರ್ಜುನನಿಗೆ ಆಹ್ವಾನವನ್ನೀಯಲಾಗುವುದು. ಅರ್ಜುನನು ಅವರೊಂದಿಗೆ ಯುದ್ಧನಿರತನಾದಾಗ ಇನ್ನೊಂದೆಡೆಯಲ್ಲಿ ಚಕ್ರವ್ಯೂಹವನ್ನು ನಿರ್ಮಾಣ ಮಾಡಲಾಗುವುದು. ಆ ವ್ಯೂಹದ ಮಧ್ಯಭಾಗದಲ್ಲಿ ನೀವೆಲ್ಲ ಶ್ರೇಷ್ಠ ವೀರರಿರುತ್ತೀರಿ. ಅರ್ಜುನನು ಬೇರೆ ಕಡೆಯಲ್ಲಿ ಯುದ್ಧನಿರತನಾಗುವುದರಿಂದ ಯುಧಿಷ್ಠಿರನು ಆ ಚಕ್ರವ್ಯೂಹವನ್ನು ಭೇಧಿಸಲು ಬರುವನು. ಆಗ ಸಹಜವಾಗಿಯೇ ನಾವು ಅವನನ್ನು ಹಿಡಿಯಬಹುದು. ಈ ಚಕ್ರವ್ಯೂಹ ಯುದ್ಧವನ್ನು ಭೇಧಿಸುವುದು ಕೇವಲ ಅರ್ಜುನನ ವಿನಃ ಇನ್ನಾರಿಂದಲೂ ಸಾಧ್ಯವಿಲ್ಲ, ಅಷ್ಟೇ ಅಲ್ಲ ಯಾವ ಪಾಂಡವರೂ ಅದನ್ನು ಭೇಧಿಸಲಾರರು.

ಆಚಾರ್ಯ ದ್ರೋಣರ ಈ ಮಾತಿನಿಂದ ಉತ್ಸಾಹಗೊಂಡ ದುರ್ಯೋಧನನು ತನ್ನೆಲ್ಲ ವೀರರೊಂದಿಗೆ ರಣಾಂಗಣಕ್ಕೆ ಹೊರಟು ಬಿಟ್ಟ. ದ್ರೋಣರಿಂದ ರಚಿತವಾದ ಯುದ್ಧದ ಕೋಟೆ ಬಹು ವಿಚಿತ್ರವಾಗಿತ್ತು. ಚಕ್ರದ ಮುಂಭಾಗದಲ್ಲಿ ರಾಜಕುಮಾರನನ್ನು ಯೋಜಿಸಲಾಯಿತು. ಕರ್ಣ ಹಾಗೂ ದುರ್ಯೋಧನರನ್ನು ಚಕ್ರದ ಮಧ್ಯಭಾಗಕ್ಕೆ ಕಳುಹಿಸಲಾಯಿತು. ಅಲ್ಲಿ ದುಶ್ಯಾಸನ ಹಾಗೂ ಕೃಪಾಚಾರ್ಯರು ಅವರನ್ನು ಸ್ವಾಗತಿಸಿದರು.

ಸೂರ್ಯೋದಯಕ್ಕೆ ಸರಿಯಾಗಿ ರಣಭೂಮಿಯಲ್ಲಿ ಶಂಖಧ್ವನಿಗಳು ಕೇಳಬರಲಾರಂಭಿಸಿದವು. ಮೊದಲೇ ನಿರ್ಧರಿಸಿದಂತೆ ಆಚಾರ್ಯರು ಅರ್ಜುನನನ್ನು ಸಮಸಪ್ತಕರೊಂದಿಗೆ ಹೋರಾಡುವಂತೆ ಮಾಡಿದರು. ಚಕ್ರವ್ಯೂಹ

ಭೇಧಿಸಲು ಯಾರು ಬರುತ್ತಾರೆಂದು ಎಲ್ಲರೂ ನೋಡುತ್ತಲಿದ್ದರು. ಅಷ್ಟರಲ್ಲಿಯೇ ಪಾಂಡವ ಸೇನೆಯು ಆರ್ಭಟಿಸಿ ಧಾವಿಸಿ ಬರುತ್ತಿರುವದು ಕಾಣಿಸಿತು ಘನಘೋರವಾದ ಯುದ್ಧವು ಪ್ರಾರಂಭವಾಯಿತು. ನಡೆಯುತ್ತಲಿದ್ದ ಯುದ್ಧವನ್ನು ಕರ್ಣನು ನೋಡುತ್ತಲಿದ್ದ. ಚಕ್ರಕೋಟೆಯು ಒಂದೊಂದೇ ಭಾಗಗಳು ಶಿಥಿಲವಾಗತೊಡಗಿದವು. ಅದೇ ಸಮಯಕ್ಕೆ ಸರಿಯಾಗಿ ಪಾಂಡವರ ರಥ ಚಕ್ರಕೋಟೆಯ ಮಧ್ಯಭಾಗಕ್ಕೆ ಪ್ರವೇಶ ಮಾಡಿತು ಭೀಮ ದರ್ಶನವಾಗಬಹುದೆಂದು ಕರ್ಣನು ಆ ರಥದತ್ತ ನೋಡಿದ. ಆದರೆ ಆ ರಥದಲ್ಲಿ ಭೀಮಸಿರಲಿಲ್ಲ. ಕರ್ಣನ ಆಶ್ಚರ್ಯಕ್ಕೆ ಪಾರಾವಾರವೇ ಉಳಿಯಲಿಲ್ಲ. ರಥದಲ್ಲಿ ಎಳೆಯ ಬಾಲಕ, ಅರ್ಜುನನ ಪುತ್ರ ಅಭಿಮನ್ಯುವು ಯುದ್ಧನಿರತನಾದದು ಕಾಣಬಂದಿತು. ಸುವರ್ಣ ಕವಚವನ್ನು ಧರಿಸಿದ ಆ ಬಾಲಕನು ಎದುರು ಬರುತ್ತಿರುವ ಬಾಣಗಳ ಸುರಿಮಳೆಯನ್ನು ಲೆಕ್ಕಿಸದೆ ರಭಸದಿಂದ ತನ್ನ ಧನುಸ್ಸನ್ನೆಳೆಯುತ್ತಲಿದ್ದ. ಆತನಿಂದ ಬಿಟ್ಟ ಬಾಣಗಳಾವುವೂ ಹುಸಿಹೋಗುತ್ತಿರಲಿಲ್ಲ. ಗುರಿ ತಪ್ಪುತ್ತಿರಲಿಲ್ಲ. ತನ್ನ ಪರಾಕ್ರಮದಿಂದ ಅರ್ಜುನಪುತ್ರನಾದುದಕ್ಕೆ ಸಾರ್ಥಕತೆಯನ್ನು ಎತ್ತಿ ತೋರಿಸುತ್ತಲಿದ್ದ. ದ್ರೋಣಾಚಾರ್ಯರೂ ಕರ್ಣನೊಂದಿಗೆ ಆ ಯುದ್ಧವನ್ನು ಆಶ್ಚರ್ಯದಿಂದ ನೋಡುತ್ತಲಿದ್ದರು. ಪ್ರತಿ ಕ್ಷಣಕ್ಕೂ ಅಭಿಮನ್ಯುವಿನ ಪರಾಕ್ರಮವು ಬೆಳೆಯುತ್ತಿತ್ತು, ಆತನು ಶಲ್ಯರಾಜನನ್ನು ಗಾಯಗೊಳಿಸಿದನಲ್ಲದೆ ಅವನ ಸೋದರನನ್ನು ಯಮಸದನಕ್ಕಟ್ಟಿಸಿದ. ದುಶ್ಶಾಸನನು ಮೂರ್ಛಿತನಾದ, ಕೌರವಸೇನೆಯ ಹಾಹಾಕಾರವನ್ನು ಕೇಳಿ ಕರ್ಣನು ಮುಂದೆ ಬಂದ. ಆಗಲೂ ಅಭಿಮನ್ಯುವು ಬಾಣಗಳ ಮಳೆಗರೆಯುತ್ತಲಿ ಇದ್ದ. ಆತನ ಬಾಣಗಳನ್ನು ಕರ್ಣನು ಮಧ್ಯದಲ್ಲಿಯೇ ಕಡಿದು ಹಾಕುತ್ತಲಿದ್ದ. ಅಭಿಮನ್ಯುವಿನ ಮುಖದ ಮೇಲೆ ಕಾಣಿಸುತ್ತಿದ್ದ ತೇಜಸ್ಸು ಹಾಗೂ ಯುದ್ಧನಿರತನಾದಾಗಲೂ ಆತನ ಮುಖದಲ್ಲಿ ಕಾಣುತ್ತಿದ್ದ ಮುಗುಳುನಗೆ ಇವುಗಳನ್ನು ಕಂಡು ಕರ್ಣನು ತುಂಬ ಚಕಿತನಾದ. ಕರ್ಣನ ಧನುಸ್ಸಿಗೆ ಕಾವೇರಿದಂತಾದರೂ ಬಾಣಗಳನ್ನು ಬಿಡುವಾಗ ಆತನ ಚಿತ್ತವು ಚಂಚಲಗೊಳ್ಳುತ್ತಿತ್ತು. ಆಕಸ್ಮಿಕವಾಗಿ ರಭಸದಿಂದ ಬಂದ ಬಾಣವು ಕರ್ಣನ ಕೈಲಿದ್ದ ಧನಸ್ಸನ್ನು ಮುರಿದು ಹಾಕಿತು. ಕ್ಷಣ ಮಾತ್ರದಲ್ಲಿ

ಆತನು ಬೇರೊಂದು ಧನುಸ್ಸನ್ನು ಕೈಗೆತ್ತಿಕೊಂಡ. ಅಷ್ಟರಲ್ಲಿ ಆತನ ರಥದ ಧ್ವಜವು ಅಲುಗಾಡಿದಂತೆನಿಸಿತು. ಅದೇ ಸಮಯಕ್ಕೆ ಸರಿಯಾಗಿ ಕರ್ಣನ ಸೋದರನು ಅಭಿಮನ್ಯುವಿಗೆ ಎದುರಾಗಿ ಬಂದ, ಕರ್ಣನು ತನ್ನ ಬತ್ತಳಿಕೆಯಲ್ಲಿದ್ದ ಬಾಣವನ್ನೆತ್ತಿಕೊಂಡು ಬಿಲ್ಲಿಗೆ ಹೂಡಿದ. ಆ ಅಲ್ಪಾವಧಿಯಲ್ಲಿಯೇ ಅಭಿಮನ್ಯುವಿನ ಬಾಣವು ಕರ್ಣನ ಸೋದರನ ಕಂಠವನ್ನೇ ಭೇಧಿಸಿ ಹಾಕಿತ್ತು. ಸೋದರನ ಮರಣವನ್ನು ಕಂಡಾಗ ಕರ್ಣನ ಮುಖದಲ್ಲಿದ್ದ ಕೌತುಕಭಾವವು ಮಾಯವಾಯಿತು ಕೈಗೆತ್ತಿಕೊಂಡ ಬಾಣವನ್ನು ಕಿವಿಯವರೆಗೂ ಎಳೆದು ಸರಿಯಾದ ಗುರಿಯಲ್ಲಿ ಪ್ರಯೋಗ ಮಾಡಿದ. ಆಗ ಅಭಿಮನ್ಯುವಿನ ಕೈಯ್ಯಲ್ಲಿದ್ದ ಧನುಸ್ಸು ತುಂಡಾಗಿ ಬಿದ್ದಿತು. ಬಾಲಯೋಧನು ಆದರಿಂದ ವಿಚಲಿತನಾಗಲಿಲ್ಲ. ರಥದಿಂದ ಕೆಳಗೆ ಧುಮುಕಿದ. ಆತನ ಕೈಯಲ್ಲಿ ಗದೆ ಇತ್ತು. ಆಗ ದುಶ್ಯಾಸನನ ಮಗನು ಗದೆಯನ್ನೆತ್ತಿಕೊಂಡು ಮುಂದಾದ. ಇಬ್ಬರಲ್ಲಿಯೂ ಗದಾ ಯುದ್ಧವು ಆರಂಭವಾಯಿತು. ಒಬ್ಬನು ಇನ್ನೊಬ್ಬನ ಮೇಲೆ ಪ್ರಹಾರವನ್ನಾರಂಭಿಸಿದರು. ಕೊನೆಗೆ ಇಬ್ಬರೂ ಮೂರ್ಛಿತರಾಗಿ ಬಿದ್ದರು. ಮೊದಲು ದುಶ್ಯಾಸನನ ಮಗ ಎಚ್ಚೆತ್ತುಕೊಂಡ. ತನ್ನ ಗದೆಯನ್ನೆತ್ತಿ ಎಚ್ಚರಗೊಳ್ಳುತ್ತಲಿದ್ದ ಅಭಿಮನ್ಯುವಿನ ಮೇಲೆ ಪ್ರಹಾರ ಮಾಡಿದ ಕರ್ಣನಿಗೆ ಅದನ್ನು ನೋಡಲಾಗಲಿಲ್ಲ. ಕೌರವರ ಗುಂಪಿನಲ್ಲಿ ವಿಜಯದ ಸಂಕೇತವೆಂದು ಶಂಖವನ್ನೂದಲಾರಂಭಿಸಿದರು. ಆ ಗದ್ದಲದಿಂದ ದಾರಿ ಮಾಡಿಕೊಂಡು ಕರ್ಣನು ಶಿಬಿರದತ್ತ ಹೊರಟುಬಿಟ್ಟ. ಅಭಿಮನ್ಯುವಿನ ಮರಣದಿಂದಾಗಿ ಯುದ್ಧವು ಮತ್ತೊಂದು ದಿನ ಮುಂದುವರಿಸಲಾಯಿತು.

ಎರಡನೆಯ ದಿನ ಕೌರವ ವೀರರ ಮುಖದಲ್ಲಿ ಚಿಂತೆ ಆವರಿಸಿತು. ಸೂರ್ಯಾಸ್ತದೊಳಗಾಗಿ ಜಯದ್ರಥನನ್ನು ಸಂಹರಿಸುವುದಾಗಿ ಅರ್ಜುನನು ಪ್ರತಿಜ್ಞೆ ಮಾಡಿದ್ದ.

"ಜಯದ್ರಥನ ವಧೆಗಾಗಿ ಪ್ರತಿಜ್ಞೆ ಮಾಡಲು ಕಾರಣವೇನು ?

ಅಂಥ ಪ್ರಸಂಗದಲ್ಲಿಯೂ ಕರ್ಣನ ಮುಖದಲ್ಲಿ ನಗೆ ಮೂಡಿತು.

"ಒಳ್ಳೇ ಮಾತು ! ಅಭಿಮನ್ಯುವಿನ ವಧೆಯಾದಾಗ ಜಯದ್ರಥನು ಅಲ್ಲಿ ಇರಲೇ ಇಲ್ಲ, ಆದರೂ ಅವನನ್ನು ಸಂಹರಿಸುವ ಪ್ರತಿಜ್ಞೆಯೇ?"

"ಅದೇನೇ ಇರಲಿ. ನಾವು ಜಯದ್ರಥನನ್ನು ಉಳಿಸಿಕೊಳ್ಳಬೇಕು. ಆತ ತುಂಬ ಭಯಭೀತನಾಗಿದ್ದಾನೆ."

ಎಲ್ಲರೂ ಜಯದ್ರಥನಿಗೆ ರಕ್ಷಣೆಯನ್ನಿತ್ತರು. ಕೌರವ ವೀರರೆಲ್ಲ ಸೇರಿ ಆತನನ್ನು ರಕ್ಷಿಸುವ ಪ್ರಯತ್ನ ಮಾಡುವದಾಗಿ ಭರವಸೆಯನ್ನಿತ್ತರು. ಅರ್ಜುನನು ತನ್ನ ಪರಾಕ್ರಮವನ್ನೆಲ್ಲ ಸೂರೆ ಮಾಡಿದಾಗಲೂ ಆತನಿಗೆ ಜಯದ್ರಥನ ದರ್ಶನವು ಲಭಿಸದಂತಾಯಿತು. ಇಡೀ ದಿನವೆಲ್ಲ ಅಸಾಧ್ಯವಾದ ತುಮುಲವು ನಡೆಯಿತು. ಸೂರ್ಯದೇವನು ಪಶ್ಚಿಮಾದ್ರಿಯನ್ನು ತಲಪುತ್ತಲಿದ್ದ. ಕಾರ್ತೀಕ ಮಾಸದಲ್ಲಿ ಎಂದೂ ಕಾಣದಿದ್ದ ಮೋಡವು ಆಕಾಶದಲ್ಲಿ ಕಾಣಿಸತೊಡಗಿತು. ನೋಡನೋಡುತ್ತಿರುವಂತೆ ಆ ಮೋಡವು ಸೂರ್ಯನಿಗೆ ಅಡ್ಡ ಬಂದಿತು. ಸಮಯದ ಮಿತಿಯು ಯಾರಿಗೂ ತಿಳಿಯದಂತಾಯಿತು. ರಣಭೂಮಿಯ ಮೇಲೆ ಸಂಧ್ಯಾಕಾಲದ ವಾತಾವರಣವು ಪಸರಿಸಿತು. ಮೋಸವನ್ನರಿಯದ ಕೌರವವೀರರು ಯುದ್ಧ ಮಾಡುತ್ತಿರುವಾಗ ಯಾರೋ ಶಂಖನಾದವನ್ನು ಮಾಡಿದರು. ಸೂರ್ಯಾಸ್ತವಾಯಿತೆಂಬ ಭಾವನೆಯಿಂದ ಹರ್ಷಭರಿತನಾದ ಜಯದ್ರಥನು ರಕ್ಷಾಕೋಟೆಯಿಂದ ಹೊರಬಂದುಬಿಟ್ಟ. ಅದೇ ಸಮಯಕ್ಕೆ ಸರಿಯಾಗಿ ಅರ್ಜುನನ ರಥವು ಅವನಿಗೆದುರಾಯಿತು. ಮೋಡದ ಒಂದು ಮರೆಯಿಂದ ತೂರಿಬರುತ್ತಿದ್ದ ರೇಶಿಮೆಯಂತಹ ಸೂರ್ಯಕಿರಣಗಳು ರಣಭೂಮಿಯನ್ನೆಲ್ಲ ಹರಡಿಕೊಂಡವು. ಆ ಸೂರ್ಯಕಿರಣಗಳನ್ನೇ ನೋಡುತ್ತಲಿದ್ದ ಜಯದ್ರಥನಿಗೆ ಎಚ್ಚರಗೊಳ್ಳಲು ಸಮಯವು ದೊರೆಯಲಿಲ್ಲ. ಅರ್ಜುನನ ಬಾಣವು ಅವನ ಕಂಠಕ್ಕೆ ಗುರಿಯಿಟ್ಟು ಅದನ್ನು ಛೇದಿಸಿತು. ಕೌರವರು ಪಟ್ಟ ಶ್ರಮವೆಲ್ಲ ವ್ಯರ್ಥ ಎಂದೆನ್ನಿಸುವಂತಾಯಿತು. ಜಯದ್ರಥನ ಮರಣವನ್ನು ಕಂಡು ದುರ್ಯೋಧನನು ದುಃಖಿತನಾದ.

"ಜಯದ್ರಥನು ಮರಣ ಹೊಂದಿದನೆ! ಆಗಲಿ, ಈ ಅಪಘಾತದಿಂದ ಪ್ರಾರಂಭವಾದ ಯುದ್ಧವು ಎಂದೂ ನಿಲ್ಲಲಾರದು. ಇದು ಹಗಲು-ರಾತ್ರಿಗಳ ಯುದ್ಧ, ಕಾಲ ಹಾಗೂ ಸಮಯಗಳ ಯುದ್ಧ. ಆದುದರಿಂದ ಯಾವುದನ್ನೂ ವಿಚಾರ ಮಾಡದೆ ಯುದ್ಧವು ಮುಂದುವರಿಯಲಿ."

ರಾಜಾಜ್ಞೆಯಾದುದರಿಂದ ಸೂರ್ಯಾಸ್ತವಾಗಿದ್ದರೂ ಯುದ್ಧವನ್ನು ಮುಂದುವರಿಸಲಾಯಿತು. ದಿನವೆಲ್ಲ ಕಾದಾಡಿ ದಣಿದಿದ್ದ ಸೇನೆ ರಾತ್ರಿಯ

ಕಾಲದಲ್ಲಿಯೂ ಯುದ್ಧವನ್ನು ಮುಂದುವರೆಸಿದವು. ಅಸಂಖ್ಯಾತ ದೀವಟಿಗೆಗಳ ಚಲನವಲನಗಳಿಂದಾಗಿ ಇಡೀ ಯುದ್ಧಭೂಮಿಯು ಹುರುಪಳಿಸಿ ಹೋಗುತ್ತಿರುವಂತೆ ತೋರತೊಡಗಿತು. ರಾತ್ರಿಕಳೆದಂತೆಲ್ಲ ಯುದ್ಧದ ಗತಿಯು ತನ್ನ ಬದಲಾವಣೆಯನ್ನು ತಾನೇ ನಿರ್ಧರಿಸಲಾರಂಭಿಸಿತು. ಆವೇಶಭರಿತನಾದ ಕರ್ಣನು ಶತ್ರುಗಳನ್ನೆದುರಿಸುವುದರಲ್ಲಿ ನಿರತನಾಗಿದ್ದ. ಆದರೂ ಕೌರವ ಸೇನೆಯು ಓಡಿಹೋಗಲಾರಂಭಿಸಿತು. ಕರ್ಣನು ಆ ದಿಕ್ಕಿಗೆ ರಥವನ್ನು ಸಾಗಿಸುತ್ತಲಿದ್ದ. ಅದೇ ಸಮಯಕ್ಕೆ ಸರಿಯಾಗಿ ದುರ್ಯೋಧನನ ರಥವು ಅಲ್ಲಿಗೆ ಬಂದಿತು.

"ಮಿತ್ರಾ ಘಾತವಾಯಿತು. ಪಾಂಡವರ ಮಗನಾದ ಘಟೋದ್ಗಜನು ರಣಭೂಮಿಯಲ್ಲಿ ಪ್ರತ್ಯಕ್ಷನಾಗಿದ್ದಾನೆ. ಆತನು ಹಲಾಯುಧನನ್ನು ಸಂಹರಿಸಿಸಿದ್ದಾನೆ. ಕೌರವ ಸೇನೆಯನ್ನೆಲ್ಲ ಚಿಂದಿ ಚಿಂದಿಯಾಗಿ ಮಾಡಿ ವಿಛಿದ್ರಿಸತೊಡಗಿದ್ದಾನೆ. ರಭಸದಿಂದ ಮುಂದುವರಿಯುತ್ತಲಿದ್ದಾನೆ."

"ನಾನು ಅವನನ್ನೆದುರಿಸಬೇಕೆ ?"

"ಹೌದು ನಿನ್ನ ವಿನಃ ಯಾರೂ ನಮ್ಮನ್ನು ಈ ಸಂಕಟದಿಂದ ಪಾರು ಮಾಡಲಾರರು. ನಿನ್ನ ಹತ್ತಿರ ಒಂದು ಶಕ್ತ್ಯಾಯುಧವಿದೆ ಎಂದು ಕೇಳಿದ್ದೇನೆ. ಆ ಆಯುಧದಿಂದ ಈ ಘಟೋದ್ಗಜನನ್ನು ಸಂಹಾರ ಮಾಡು."

"ಮಿತ್ರಾ, ನನ್ನ ಹತ್ತಿರ ವಾಸವೀ ಶಕ್ತಿ ಇದೆ. ಈ ಮಾತು ನಿಜ. ಅದರ ಶಕ್ತಿಯು ಅಮೋಘವಾದುದು ಆದರೆ ಒಂದೇ ಒಂದು ಸಲ ಅದನ್ನು ಪ್ರಯೋಗ ಮಾಡಬಹುದು. ಆದುದರಿಂದ ನಾನು ಅರ್ಜುನನಿಗಾಗಿ ಕಾದಿರಿಸಿದ್ದೇನೆ."

"ಅರ್ಜುನನ್ನು ಆಮೇಲೆ ನೋಡಿಕೊಳ್ಳೋಣ. ಈ ಘಟೋದ್ಗಜನನ್ನು ಸಂಹರಿಸದಿದ್ದಲ್ಲಿ ಸೂರ್ಯೋದಯವಾಗುವುದರೊಳಗಾಗಿಯೇ ಕೌರವರ ಸೋಲು ಶತಸ್ಸಿದ್ಧ. ಆದುದರಿಂದ ನನಗೆ ಘಟೋದ್ಗಜನು ಬೇಕಾಗಿದ್ದಾನೆ."

"ಆಗಲಿ ಹಾಗೆಯೇ ಆಗಲಿ."

ಕರ್ಣನ ರಥವು ಓಡುತ್ತಲ್ಲಿದ್ದ ಸೇನೆಯನ್ನು ಹಿಂದೆ ಹಾಕಿ ಘಟೋದ್ಗಜನನ್ನು ಎದುರಿಸಲು ಸಿದ್ಧವಾಯಿತು ಕರ್ಣನು ತನ್ನ ವಾಸವೀ ಶಕ್ತಿಯ ಮಂತ್ರವನ್ನು ಸ್ಮರಿಸಿಕೊಂಡು ಆ ದಿವ್ಯವಾದ ಬಾಣವನ್ನು ಧನುಸ್ಸಿಗೆ ಜೋಡಿ

ಸಿದ. ಧ್ವನಿಗೈಯುತ್ತ ಬಾಣವು ಧನುಸ್ಸಿನಿಂದ ಚಿಮ್ಮಿತು. ಆಕಾಶವೇ ಕಡಿದು ಬೀಳುವಂತೆ ಕೂಗಿಕೊಳ್ಳುತ್ತ ಘಟೋತ್ಕಜನು ಕೌರವ ವೀರರ ಮೇಲೆ ಬಿದ್ದುಬಿಟ್ಟ. ಕರ್ಣನ ಈ ವಿಜಯದಿಂದ ಉತ್ಸಾಹಭರಿತ ಸೇನೆಯು ಆತನ ಹೆಸರಿನಿಂದ ಜಯಘೋಷ ಮಾಡತೊಡಗಿತು. ಪಾಂಡವರ ಸೇನೆಯಲ್ಲಿ ಹಾಹಾಕಾರವು ಕೇಳಬರತೊಡಗಿತು. ಆ ಎರಡೂ ಪರಿಸ್ಥಿತಿಗಳನ್ನು ಲಕ್ಷಿಸದೆ ಕರ್ಣನ ರಥವು ಶಿಬಿರದತ್ತ ಧಾವಿಸತೊಡಗಿತು.

ಕರ್ಣನ ಮನದಲ್ಲಿದ್ದ ಕೊನೆಯ ಭಾರವೂ ಸಹ ಈಗ ಇಳಿದು ಹೋದಂತಾಯಿತು.

## 51

ತಾಪದಾಯಕವಾದ ರಣಸಂಗ್ರಾಮವನ್ನು ಮುಗಿಸಿ ಕರ್ಣನು ತನ್ನ ನಿವಾಸಕ್ಕೆ ಬಂದ. ಆತನ ಹಿನ್ನೆಲೆಯಲ್ಲಿ ವೃಷಸೇನ ಚಕ್ರಧರ ಇಬ್ಬರೂ ಬಂದರು. ಮನೆಯನ್ನು ಪ್ರವೇಶಿಸಿದ ಕರ್ಣನು ರಣವೇಷವನ್ನು ಕಳಚಿಹಾಕಿ ನಿತ್ಯದ ಸಾಮಾನ್ಯವಾದ ಉಡುಪುಗಳನ್ನು ಧರಿಸಿ ನಿಂತಾಗ ವೃಷಾಲಿ ಆತನ ಕೋಣೆಗೆ ಪ್ರವೇಶ ಮಾಡಿದಳು.

"ಇಂದು ದ್ರೋಣಾಚಾರ್ಯರ ವಧೆಯಾಯಿತಂತೆ! ವೃಷಸೇನನು ಹೇಳುತ್ತಲಿದ್ದ."

"ಹೌದು"

"ದೃಷ್ಟದ್ಯುಮ್ನನಿಂದ ಈ ಕಾರ್ಯವಾಯಿತೆಂದು ಕೇಳಿದೆ."

"ಹೌದು ಎಲ್ಲರೂ ಧರ್ಮನಿಷ್ಠರೇ"

"ಹಾಗೆಂದರೆ ? ಇದರಲ್ಲಿ ಮೋಸವೇನಾದರೂ ನಡೆಯಿತೇ ?"

ಆ ಮಾತನ್ನು ಕೇಳಿದಾಗ ಕರ್ಣನ ಮುಖದಲ್ಲಿ ವ್ಯಂಗ ಹಾಸ್ಯ ಕಾಣಿಸಿತು. ಆತನು ವೃಷಾಲಿಯ ಕೈಯನ್ನು ತನ್ನ ಕೈಯಲ್ಲಿಟ್ಟುಕೊಂಡು ಮೃದುವಾಗಿ ತಟ್ಟುತ್ತ,

"ವಸೂ, ಇಂದು ದ್ರೋಣಾಚಾರ್ಯರು ತಮ್ಮ ಅಗಾಧವಾದ ಪರಾಕ್ರಮವನ್ನು ತೋರಿಸಿದರು. ಯುದ್ಧಾರಂಭದಲ್ಲಿಯೇ ಅವರು ದ್ರುಪದ ಹಾಗೂ

ವಿರಾಟನನ್ನು ಕೊಂದರು. ದ್ರುಪದನ ವಿಚಾರದಲ್ಲಿ ಬಹು ದಿನಗಳಿಂದ ಶೇಖರಿಸಿಕೊಂಡು ಬಂದಿದ್ದ ವೈರತ್ವವು ಇಂದು ಕೊನೆಗೊಂಡಿತು. ತಂದೆಯ ಮರಣದಿಂದಾಗಿ ದೃಷ್ಟದ್ಯುಮ್ನನು ಕೋಪಗೊಂಡಿದ್ದ. ಆತನೂ ರಣಭೂಮಿಯಲ್ಲಿ ದ್ರೋಣಾಚಾರ್ಯರನ್ನು ಹುಡುಕುತ್ತಲಿದ್ದ. ಅದೇ ಸಮಯಕ್ಕೆ ಸರಿಯಾಗಿ ಅಶ್ವತ್ಥಾಮನು ಹತನಾದ ಎಂಬ ವಾರ್ತೆಯು ಅವರ ಕಿವಿಗೆ ಬಿದ್ದಿತು."

"ಅಶ್ವತ್ಥಾಮನೂ ?"

"ಇಲ್ಲ ಅವನು ಮೃತ್ಯುಂಜಯ, ಅವನನ್ನು ಸಂಹಾರ ಮಾಡಲು ಹೇಗೆ ಸಾಧ್ಯ ? ಭೀಮನು ಅಶ್ವತ್ಥಾಮ ಎಂಬ ಆನೆಯನ್ನು ಕೊಂದಿದ್ದ. ಅದನ್ನು ಆತ ದ್ರೋಣರಿಗೆ ತಿಳಿಸಿದ, ಹಾಗೆ ತಿಳಿಸುವಾಗ ಅಶ್ವತ್ಥಾಮನನ್ನು ಕೊಂದೆ ಎಂದು ಹೇಳಿದನೇ ಹೊರತು ಆನೆಯನ್ನು ಕೊಂದೆ ಎಂದು ಹೇಳಲಿಲ್ಲ. ಆಗ ಸತ್ಯಸಂದನಾದ ಯುಧಿಷ್ಠಿರನನ್ನು ಕೇಳಿದರು. ಧರ್ಮರಾಜನೂ ಅರೆ ಸತ್ಯವನ್ನೇ ನುಡಿದ. ಪುತ್ರಶೋಕದಿಂದ ಅವರು ಶಸ್ತ್ರಸನ್ಯಾಸ ಸ್ವೀಕರಿಸಿದರು. ಈ ಸಂಧಿಯನ್ನೇ ಕಾಯುತ್ತಲಿದ್ದ ದೃಷ್ಟದ್ಯುಮ್ನನು ಅತಿವೇಗದಿಂದ ಬಂದು ಅವರ ರಥವನ್ನು ಹತ್ತಿ ಶಸ್ತ್ರರಹಿತರಾದ ಆ ವಯೋವೃದ್ಧರ ತಲೆಯ ಮೇಲಿನ ಬಿಳಿಯ ಕೂದಲನ್ನು ಹಿಡಿದೆಳೆದು ಖಡ್ಗದಿಂದ ಅವರ ಶಿರಚ್ಛೇದನ ಮಾಡಿದವನ್ನು."

"ಇದು ಅಧರ್ಮವಲ್ಲವೆ ?" ವ್ಯಾಕುಲದಿಂದ ವೃಷಾಲಿಯು ಪ್ರಶ್ನೆ ಮಾಡಿದಳು.

"ಒಪ್ಪಿಕೊಂಡಲ್ಲಿ ! ವಸೂ. ದ್ರೋಣಾಚಾರ್ಯರಿಗೆ ತಮ್ಮ ಮಗನು ಮೃತ್ಯುಂಜಯ ಎಂಬ ವಿಚಾರವು ಗೊತ್ತಿರಲಿಲ್ಲವೆ ? ಆ ಮಾತಿಗೆ ಬೇರೆಯವರ ಸಾಕ್ಷಿ ಬೇಕಿತ್ತೆ ? ಶಿಖಂಡಿಯು ಮುಂದೆ ಬಂದನೆಂದು ಭೀಷ್ಮರು ಮರುಳಬಹುದಾಗಿತ್ತಲ್ಲವೆ ? ಅವರೇಕೆ ಯುದ್ಧಭೂಮಿಯಿಂದ ಮರುಳಲಿಲ್ಲ ?"

"ಹೌದು ಏಕೆ ಮರುಳಿಬರಲಿಲ್ಲ ?"

"ಯಾಕೆ ?" ಕರ್ಣನು ನಕ್ಕು ಹೇಳಿದ, "ಮರಣಕ್ಕಾಗಿ ಹಾತೊರೆಯುತ್ತಿದ್ದವರು ಮರಣಪ್ರಾಯ ಜೀವನವನ್ನು ಎಂದೂ ಅಪೇಕ್ಷಿಸುವುದಿಲ್ಲ.

ಅಂಥವರು ಕೇವಲ ಕೀರ್ತಿರೂಪವಾದ ಮರಣವನ್ನು ಮಾತ್ರ ಹುಡುಕಲು ಯತ್ನಿಸುತ್ತಾರೆ."

"ಹಾಗಾದರೆ ?"

"ಈ ಯುದ್ಧವು ಕೊನೆಯವರೆಗೂ ಹೀಗೆಯೇ ಸಾಗುತ್ತದೆ. ಸಂಪೂರ್ಣ ವಿನಾಶವಾಗುವವರೆಗೆ ಇದು ನಿಲ್ಲಲಾರದು. ವಸೂ, ಜಯ ಸಂಪಾದಿಸುವದಕ್ಕಾಗಿಯೇ ಈ ಯುದ್ಧ ಎಂದೇನೂ ಅಲ್ಲ. ಯಾಕೆಂದರೆ ಅಹಂಕಾರವೇ ಅದರ ಮೂಲ. ಪರಾಜಯದಿಂದ ಅಹಂಕಾರವು ನಾಶವಾಗುವದಿಲ್ಲ. ಅದು ಇನ್ನಷ್ಟು ತೀಕ್ಷ್ಣಗೊಳ್ಳುತ್ತದೆ."

"ಹಾಗಾದರೆ ನಾಳಿನ ಸೇನಾಪತಿ ?"

"ಆತನು ನಿನ್ನ ಸಮ್ಮುಖದಲ್ಲಿಯೇ ಇದ್ದಾನೆ. ಅಶ್ವತ್ಥಾಮ ಹಾಗೂ ದುರ್ಯೋಧನರು ನನ್ನನ್ನೇ ಸೇನಾಪತಿ ಎಂದು ಘೋಷಿಸಿದ್ದಾರೆ. ನಿನ್ನ ಪತಿಯಾದ ಅಂಗರಾಜನು ನಾಳೆ ಕುರುಸೇನಾಧಿಪತ್ಯವನ್ನು ಸ್ವೀಕರಿಸುತ್ತಾನೆ. ನಾಳೆ ನನ್ನ ನೇತೃತ್ವದಲ್ಲಿ ಭಯಾನಕವಾದ ಯುದ್ಧವು ಪ್ರಾರಂಭವಾಗುತ್ತದೆ."

"ನೀವು ವಿಜಯಿಗಳಾಗುತ್ತೀರಿ ಎಂಬ ಮಾತಿನಲ್ಲಿ ನನಗೆ ಯಾವ ಸಂಶಯವೂ ಇಲ್ಲ."

"ನನಗೂ ಇಲ್ಲ." ಒಂದು ಕ್ಷಣ ತಡೆದು, ಕರ್ಣನು ಗಂಭೀರಭಾವದಿಂದ ಹೇಳಿದ. "ವೃಷಾಲೀ, ಯಾವ ಯಶವು ಭೀಷ್ಮರಿಗೆ, ದ್ರೋಣರಿಗೆ ಸಾಧಿಸಲು ಬಂದಿತೋ ಅದನ್ನು ನಾನು ಸಹಜವಾಗಿ ಸಂಪಾದಿಸಬಹುದು."

ವೃಷಾಲಿಯ ಮುಖದಲ್ಲಿ ಚಿಂತೆ ಆವರಿಸಿತು. ಅದನ್ನು ಗುರುತಿಸಿದ ಕರ್ಣನು,

"ನಡೆ, ನಾಳಿನ ಯುದ್ಧದ ಬಗ್ಗೆ ಚಿಂತಿಸುವದೇ ಬೇಡ. ವೃಷಸೇನನು ಇಂದು ಅಸಾಧ್ಯ ಪರಾಕ್ರಮವನ್ನು ತೋರಿಸಿದಾನೆ. ಅದನ್ನೆಲ್ಲ ಆತನ ಮುಖದಿಂದ ಕೇಳಿ ತಿಳಿದುಕೊಳ್ಳೋಣ. ಇಂದಿನ ಭೋಜನಕ್ಕೆ ಚಿಂತೆಯ ಲವಲೇಶವೂ ಅಂಟದಿರಲಿ."

ಭೋಜನಾನಂತರ ಕರ್ಣನು ತನ್ನ ಶಯನಗೃಹಕ್ಕೆ ಬಂದಾಗ ಅಲ್ಲಿ ಯಾರೂ ಇರಲಿಲ್ಲ. ಪುರುಷಾಕೃತಿಯಷ್ಟು ಎತ್ತರವಾಗಿದ್ದ ದೀಪಸ್ತಂಭಗಳು ಬೆಳಗುತ್ತಲಿದ್ದವು. ಮಂಚದ ಮೇಲೆ ಶುಭ್ರವಾದ ಹಾಸಿಗೆ. ಅದರ ಮೇಲೆ

ದಿವ್ಯ ಲೇಪವಿತ್ತು. ಪರಿಮಳ ಸುಗಂಧ ದ್ರವ್ಯಗಳ ವಾಸನೆ ಇಡೀ ಮನೆಯ ನ್ನೆಲ್ಲ ವ್ಯಾಪಿಸಿಕೊಂಡಿತ್ತು. ಹಸ್ತಿದಂತದಿಂದ ಮಾಡಲ್ಪಟ್ಟ ಪೀಠದ ಮೇಲೆ ಸುವರ್ಣ ಪಾತ್ರೆಗಳೊಂದಿಗೆ ಎರಡು ತಾಂಬೂಲಗಳನ್ನು ಸಿದ್ಧಪಡಿಸಿಡ ಲಾಗಿತ್ತು. ಶಯ್ಯಾಗೃಹದಲ್ಲಿನ ಪ್ರಶಾಂತತೆಗಿಂತ ಹೊರಗಿನ ನಿಶ್ಶಬ್ದತೆಯು ಅತಿ ಸಮೀಪದ್ದೆನಿಸುತ್ತಿತ್ತು. ಜೀವನವು ಹೊಸ ರೂಪವನ್ನು ಸಿದ್ಧಪಡಿಸುವು ದರಲ್ಲಿ ನಿರತನಾಗಿತ್ತು.

ಹೊಸ ರೂಪ ! ಯಾವುದು ಆ ಹೊಸ ರೂಪ ?

ಸೂತ ಪುತ್ರನಾದ ರಾಧೇಯ ಅಂಗರಾಜನೆಂದು ಕರೆಸಿಕೊಂಡು ಮುಂದೆ ಆತನು ಮಹಾದಾನಿಯಾದ ಕರ್ಣನೆಂದಾದ, ಆ ಕರ್ಣನೇ ಇಂದು ಕೌಂತೇಯ ನೆಂದು ಕರೆಸಿಕೊಂಡ. ಈ ಕೌಂತೇಯನೇ ನಾಳೆ ಕುರು ಸೇನೆಯ ಸೇನಾಧಿಪತಿ ಯಾಗಿ ರಣರಂಗವನ್ನು ಪ್ರವೇಶ ಮಾಡುವನು. ಒಂದೇ ಜೀವ, ಆದರೆ ! ಆತನಲ್ಲಾದ ಸ್ಥಿತ್ಯಂತರಗಳು ಅನೇಕ ?

ಸೇನಾಪತಿ !

ಸ್ವಂತದ ತನ್ನ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಯಾರು ಜೀವಿತರಾಗಿ ಉಳಿಯಲು ಅಪೇಕ್ಷಿಸುತ್ತಾರೆಯೋ ಅಂಥವರನ್ನು ಮರಣದ ದಾರಿಗೆ ಎಳೆತಂದು ನಿಲ್ಲಿಸುವಂತೆ ಮಾಡುವದು. ಇದನ್ನು ಸಾಧಿಸಿದಲ್ಲಿ ವಿಜಯಶ್ರೀ ಸೇನಾಧಿಪತಿಯಿಂದಾಗುವದು. ಒಂದು ವೇಳೆ ಅದು ಸಾಧಿಸದೇ ಹೋದರೆ ಆ ದೋಷವು ಸೇನಾಪತಿಯ ಪಾಲಿಗೆ ಉಳಿದು ಹೋಗುವುದು, ಸೇನೆಯ ನಿಷ್ಠೆ ಕಡಿಮೆಯಾಯಿತೆಂದೆನಿಸುವದು.

ನಿಷ್ಠೆಯ ಅನುಷ್ಠಾನಕ್ಕೂ ಬಲದ ಅವಶ್ಯಕತೆ ಇದೆ.

ನಾಳೆ ನನ್ನೆದುರಿಗೆ ಭೀಮನು ನಿಲ್ಲಬಹುದು. ಬಲದಲ್ಲಿ ಅತಿ ನಿಷ್ಠೆ ಯುಳ್ಳ ಮಹಾ ಯೋಧಪುರುಷ. ನನ್ನನ್ನು ನೋಡಿದೊಡನೆ ಅವನ ತೋಳು ಗಳು ಸ್ಫುರಣಗೊಳ್ಳುವುದುಂಟು. ಯುದ್ಧಕ್ಕಾಗಿ ಹಾತೊರೆಯುತ್ತ ರಥದಲ್ಲಿ ನಿಂತುಕೊಂಡಿರುವ ಆ ವೀರನ ಆವೇಶವು ಬೇರೊಬ್ಬರಿಗೆ ದೃಷ್ಟಿ ತಾಕುವಂತ ಹುದು. ಅವನನ್ನೆದುರಿಸಲು ನಾನು ಹೋಗಬೇಕು. ರಕ್ತಸಂಬಂಧ ವನ್ನರಿತವನು ! ಆಗ ನನ್ನ ನಿಷ್ಠೆಯ ರೂಪವು ಹೇಗಿರಬಹುದೊ ?

ಕೃಷ್ಣನು, ಅರ್ಜುನನನ್ನು ಯಾವಾಗಲೂ ನನ್ನಿಂದ ದೂರವಿಡುತ್ತಲೇ

ಬಂದಿದ್ದಾನೆ. ಆಕಸ್ಮಿಕವಾಗಿ ನಾಳೆ ಅರ್ಜುನನೇ ಮುಂದೆ ಬಂದರೆ? ಆಗ ಅವನ ರಥದ ಸಾರಥ್ಯ ಕಾರ್ಯವನ್ನು ಕೃಷ್ಣನೇ ಮಾಡುತ್ತಿರುವುದು ಸಾಮಾನ್ಯ. ಒಣಕಲು ಬಿದುರನ್ನೆತ್ತಿಕೊಂಡು ಅದರಲ್ಲಿ ಅನೇಕ ಸ್ವರಗಳನ್ನು ಸಂಯೋಜಿಸಿ ಊದುತ್ತಲಿದ್ದ ಆ ಕೃಷ್ಣನು ನನ್ನನ್ನು ನೋಡಿ ಮುಗುಳುನಗೆಯಲ್ಲಿಯೇ ತನ್ನೆಲ್ಲ ಆತ್ಮೀಯ ವಿಚಾರಗಳನ್ನು ವ್ಯಕ್ತಪಡಿಸಬಹುದು. ಆ ಮೋಹಕ ನಗೆಯನ್ನು ಕಂಡೊಡನೆ ನಾನು ನನ್ನ ಬತ್ತಳಿಕೆಗೆ ಕೈ ಹಾಕಿ ಬಾಣಗಳನ್ನು ಹುಡುಕಾಡಬಹುದು. ಆಗ ನನ್ನ ನಿಷ್ಠೆಗೆ ಬಲವು ದೊರೆಯಬಹುದೇ ?

ಈ ಯುದ್ಧವು ಯಾತಕ್ಕಾಗಿ? ಇದರಿಂದ ಯಾವ ತರಹದ ಜಯವನ್ನು ಗಳಿಸಬಹುದು ?

ಜಯ–ಪರಾಜಯ !

ಹರ್ಷ–ಖೇದ ! !

ಜೀವನ–ಮರಣ ! ! !

ಎಷ್ಟು ಕಡಿಮೆಯ ಅಂತರ ! ಎಷ್ಟು ಸಣ್ಣ ಹೆಜ್ಜೆಗಳು !

ಗರ್ಭದಿಂದ ಹೊರಬರುವಾಗಲೇ ಅಹಂಕಾರಾದಿಗಳಿಂದ ಆಕ್ರೋಶ ಮಾಡುವ ಜೀವಿ ಬೆಳೆಯುವ ವಯೋಧರ್ಮದಂತೆ ಆತ್ಮಸ್ತುತಿ, ಆತ್ಮರೂಪ, ದಾತೃತ್ವ, ಪುರುಷಾರ್ಥ ಹೀಗೆ ಅನೇಕ ಕಲ್ಪನೆಗಳ ಭಾವನೆಗಳಿಂದ ಲೇಪಿತನಾಗುತ್ತಾನೆ. ತನ್ನ ಕೈಯಿಂದಲೇ ಈ ಎಲ್ಲ ಭಾವನೆಗಳನ್ನು ಲೇಪಿಸಿಕೊಳ್ಳುತ್ತಾನೆ. ಅವುಗಳ ಅಂತಿಮ ಗುರಿಯು ಸಾವಿನಲ್ಲಿದೆ ! ಅದರಿಂದಲೇ ಕೊನೆಯ ಹಂತದ ಪರಾಜಯ.

ಯಾವ ಜೀವನಿಗೆ ಈ ಎಲ್ಲ ವಿಚಾರಗಳ ಪರಿಚಯವಿದೆಯೋ ಅಂಥವನಿಗೆ ತನ್ನದಾದ ತಳವೆಂಬುದೇ ಕಾಣಬರುವುದಿಲ್ಲ.

ಮೃದುವಾದ ಸ್ಪರ್ಶಾನುಭವವಾದುದರಿಂದ ಕರ್ಣನು ತನ್ನ ವಿಚಾರಲೋಕದಿಂದ ಎಚ್ಚೆತ್ತುಕೊಂಡ. ಹಿಂದಿರುಗಿ ನೋಡಿದಾಗ ವೃಷಾಲಿಯು ಶಯನಾಗೃಹವನ್ನು ಪ್ರವೇಶ ಮಾಡುತ್ತಿದ್ದಳು. ಅವಳ ಒಂದು ಕೈಯಲ್ಲಿ ತಟ್ಟೆ ಇತ್ತು. ಅದರ ಮೇಲೆ ಹೊದಿಕೆ ಹಾಕಲಾಗಿತ್ತು. ಹೂವಿನ ವಾಸನೆಯೂ ಸಹ ಅವಳೊಂದಿಗೆ ಆ ಕೋಣೆಯನ್ನೆಲ್ಲ ವ್ಯಾಪಿಸಿತು. ತಾಂಬೂಲದ ತಟ್ಟೆಯನ್ನು ಕರ್ಣನ ಮುಂದೆ ಹಿಡಿದ ಅವಳು,

"ತಾಂಬೂಲವನ್ನು ಸ್ವೀಕರಿಸುವುದಿಲ್ಲವೆ?"

"ನಿನ್ನ ದಾರಿಯನ್ನೇ ಕಾಯುತ್ತಲಿದ್ದೆ."

ಕರ್ಣನೊಂದಿಗೆ ವೃಷಾಲಿಯೂ ತಟ್ಟೆಯಲ್ಲಿಡಲಾಗಿದ್ದ ತಾಂಬೂಲವನ್ನೆತ್ತಿಕೊಂಡಳು. ಆ ತಟ್ಟೆಯು ಬರಿದಾಯಿತು. ತಾಂಬೂಲದ ಆಸ್ವಾದನೆ ಹೀರುತ್ತ ಕರ್ಣನೇ ವೃಷಾಲಿಯ ಕೈ ಹಿಡಿದು ಮೇಲುಪ್ಪರಿಗೆಯತ್ತ ಸಾಗಿದ. ಎಲ್ಲೆಡೆಗಳಲ್ಲಿ ಬೆಳದಿಂಗಳು ಪಸರಿಸಿತ್ತು. ತಣ್ಣಗಿನ ಗಾಳಿ ಬೀಸುತ್ತಿತ್ತು. ದೂರದಲ್ಲಿ ರಣಭೂಮಿಯಿಂದ ಕೌರವ ಶಿಬಿರದ ದೀಪಗಳು ಕಾಣಿಸುತ್ತಿದ್ದವು. ಅವುಗಳ ಕಡೆಗೆ ಕೈಮಾಡಿ ತೋರಿಸುತ್ತ ಕರ್ಣನು ಹೇಳಿದ,

"ನೋಡಿದೆಯಾ, ಎಷ್ಟು ಪ್ರಶಾಂತವಾಗಿದೆ. ನಿಶ್ಚಿಂತವಾದ ರೀತಿಯಲ್ಲಿ ಸೇನೆ ವಿಶ್ರಾಂತಿಯನ್ನು ಪಡೆಯುತ್ತಲಿದೆ. ಆ ಕೌರವ ಶಿಬಿರದಿಂದ ಅನತಿ ದೂರದಲ್ಲಿ ಕಾಣುವದೇ ಪಾಂಡವರ ಶಿಬಿರ. ಅದು ಹಿರಣ್ವತಿ ತೀರದಲ್ಲಿದೆ. ಆದರೆ ನಾಳಿನ ಯುದ್ಧದ ಭೀತಿ ಆ ಶಿಬಿರಗಳಲ್ಲಿಲ್ಲ. ಹೀಗೆ ಶಾಂತರೀತಿಯಿಂದಿರುವ ಶಿಬಿರಗಳು, ನಾಳೆ ಜೀವದ ಹಂಗಿಲ್ಲದಂತೆ ಒಬ್ಬರನ್ನೊಬ್ಬರು ಹೋರಾಟ ನಡೆಸುವುದುಂಟು. ಈ ವಿಚಾರವನ್ನು ಕುರಿತು ಯೋಚನೆ ಮಾಡಿದಾಗ ಎಂಥವರಿಗೂ ಆಶ್ಚರ್ಯವೆನ್ನಿಸುವದು."

"ಈ ಅನುಭವವನ್ನು ತಾವು ಕಲಿಯುವುದು ಅಗತ್ಯ"

"ಹುಂ!"

ಅವಳ ಮುಖದಲ್ಲಿ ಅಸಮಾಧಾನವು ಕಾಣಬಂದಿತು. ವೃಷಾಲಿಯು ಹೇಳಿದಳು.

"ನಿಮ್ಮ ಸೇನೆಗೆ ಚಿಂತೆಯೆನಿಸದು. ಆ ಸೇನೆಯು ಸೇನಾಪತಿಯನ್ನು ಅನುಸರಿಸಿದರೆ, ಸೇನಾಧಿಪತಿಯಾದವನು ರಾತ್ರಿಯ ಸಮಯದಲ್ಲಿ ಸೇನೆಯನ್ನನುಸರಿಸಬೇಕಾಗುವದು."

ಕರ್ಣನು ಮುಖವನ್ನು ಕೆಳಗೆ ಮಾಡಿ ನಮ್ರತೆಯಿಂದ ಹೇಳಿದ,

"ಮಹಾರಾಣಿಯವರೇ ನಡೆಯೋಣವಾಗಲಿ. ತಮ್ಮ ಆಜ್ಞೆಯೇ ನಮಗೆ ಶಿರೋಮಾನ್ಯ."

ವೃಷಾಲಿಯೊಂದಿಗೆ ಮುಕ್ತಮನಸ್ಸಿನಿಂದ ನಗುತ್ತ ಕರ್ಣನು ಮಹಲನ್ನು ಪ್ರವೇಶ ಮಾಡಿದ.

## 52

ನಸುಕಿನ ಸಮಯ.

ಕರ್ಣನ ಮನೆಯ ಹೆಬ್ಬಾಗಿಲಿನ ಎಡಬಲಗಳಲ್ಲಿ ದೂತರು ಹಿಲಾಲುಗಳನ್ನು ಹಿಡಿದು ನಿಂತಿದ್ದರು. ಎರಡು ರಥಗಳು ಪ್ರಯಾಣಕ್ಕೆ ಸನ್ನದ್ಧವಾಗಿ ನಿಂತುಕೊಂಡಿದ್ದವು. ಒಂದು ರಥಕ್ಕೆ ಬಿಳಿಯ ಕುದುರೆಗಳನ್ನು ಹೂಡಿದ್ದರೆ, ಇನ್ನೊಂದಕ್ಕೆ ಕಪ್ಪು ಕುದುರೆಗಳನ್ನು ಕಟ್ಟಿದ್ದರು. ಸಾರಥಿಗಳಿಬ್ಬರೂ ತಮ್ಮ ಒಡೆಯನ ದಾರಿ ಕಾಯುತ್ತ ರಥದ ಸಮೀಪದಲ್ಲಿ ನಿಂತುಕೊಂಡಿದ್ದರು. ಯುದ್ಧಭೂಮಿಯಲ್ಲಿ ಓಡಾಡಿದ ಕುದುರೆಗಳು ತಮ್ಮ ಮುಂಗಾಲಿನಿಂದ ಧಾವಿಸುವ ಚಾಪಲ್ಯತೆಯನ್ನು ವ್ಯಕ್ತಪಡಿಸುತ್ತಲಿದ್ದವು. ರಥದ ರಕ್ಷಣೆಗೆಂದಿರುವ ಸೇವಕರು ಆ ಕುದುರೆಗಳನ್ನು ಸ್ವಾಂತನಗೊಳಿಸಲು ಆಗಾಗ ಅವುಗಳ ಮೇಲೆ ಕೈಯಾಡಿಸುತ್ತಿದ್ದರು. ಮೆಟ್ಟಲಿನ ಮೇಲಿರುವ ನೌಕರರು ಎಚ್ಚರದ ಕೂಗನ್ನು ಹಾಕಿದಾಗ ಎಲ್ಲರ ಗಮನವು ಹೆಬ್ಬಾಗಿಲಿನತ್ತ ಹೊರಳಿತು. ಮಹಾರಥಿ ಕರ್ಣನು ತನ್ನ ಮಗನೊಂದಿಗೆ ಹೊರಬರುತ್ತಿರುವುದು ಕಾಣಬಂದಿತು.

ಕರ್ಣ ಹಾಗೂ ವೃಷಸೇನ ಇಬ್ಬರೂ ರಣವೇಷ ಧರಿಸಿದ್ದರು. ಅಭೇದ್ಯವಾದ ಶಿರಸ್ತ್ರಾಣ ಹಾಗೂ ಕವಚಗಳನ್ನು ತೊಟ್ಟಿದ್ದರು. ಧನುಸ್ಸು, ಖಡ್ಗ ಹಾಗೂ ಆಯುಧಗಳಿಂದ ಸನ್ನದ್ಧರಾದ ಅವರ ಬೆನ್ನಿಗೆ ಬಾಣಗಳನ್ನು ತುಂಬಿದ ಬತ್ತಳಿಕೆ ಹೆಚ್ಚು ಶೋಭಿಸುತ್ತಿತ್ತು. ಅವರಿಬ್ಬರ ಹಿಂದೆ ಕರ್ಣನ ಪತ್ನಿಯೂ ಇದ್ದಳು. ಕರ್ಣನು ಮುಗುಳು ನಗೆಯಿಂದ ಅವಳಿಗೆ ಹೇಳಿದ.

"ನಾವು ಬರುತ್ತೇವೆ."

"ವೃಷಸೇನನ ಬಗ್ಗೆ ಲಕ್ಷ್ಯವಿರಲಿ" ತಡೆಯಲಾರದೆ ವೃಷಾಲಿಯು ನುಡಿದಳು.

ಕರ್ಣನು ಪತ್ನಿಯನ್ನೊಂದು ಸಲ ನೋಡಿ ನಕ್ಕ, ನಂತರ ವೃಷಸೇನನ ಹೆಗಲ ಮೇಲೆ ಕೈಯನ್ನಿಟ್ಟು ಹೇಳಿದ.

"ವೃಷಸೇನನ ವಿಚಾರವಾಗಿ ನಾವು ಚಿಂತಿಸಬೇಕಾಗಿಲ್ಲ. ಅವನು ಯುದ್ಧಾಳು, ಅತ ಯುದ್ಧಕಲೆಯಲ್ಲಿ ಬಹು ನಿಪುಣ. ತನ್ನನ್ನು ತಾನು ಸಂಬಾಳಿಸಿಕೊಳ್ಳುವದರಲ್ಲಿ ಆತನು ಸಮರ್ಥ. ಇಂದು ನಾನು ಸೇನಾಪತಿ ಎಂದು ನಿಯುಕ್ತನಾಗಿರುವೆ. ಆದುದರಿಂದ ಸೇನಾಪತಿಯಾದವರಿಗೆ ರಣಭೂಮಿಯಲ್ಲಿ ಎಲ್ಲ ಯೋಧರೂ ಸಮಾನರೇ."

ಅದೇ ವೇಳೆಗೆ ಚಕ್ರಧರನು ಬಂದು ವೃಷಾಲಿಯನ್ನು ಕೇಳಿಕೊಂಡ.

"ಅತ್ತಿಗೆ, ನೀವು ನನ್ನ ಬಗ್ಗೆಯೂ ಸ್ವಲ್ಪ ಗಮನವಿಡಿ ಎಂದು ನಿಮ್ಮ ಯಜಮಾನರಿಗೆ ಹೇಳಿರಲ್ಲ."

ಆತನ ಮಾತಿನಿಂದ ವೃಷಾಲಿಗೆ ನಗು ಬಂದಿತು. ಅವಳು ಕರ್ಣನತ್ತ ನೋಡಿ ಹೇಳಿದಳು.

"ಇಲ್ಲ, ಸಾಧ್ಯವಿಲ್ಲ. ಇಂದು ಅವರು ಸೇನಾಪತಿಗಳು, ಅದುದರಿಂದ ಅವರ ಮೇಲೆ ಗಮನವೀಯುವಂಥವರು ಯಾರಾದರೂ ಬೇಕಲ್ಲವೆ? ಆ ಕಾರ್ಯವನ್ನು ನಾನು ನಿಮಗೆ ಒಪ್ಪಿಸುತ್ತೇನೆ."

"ತುಂಬಾ ಒಳ್ಳೆಯ ಮಾತು. ನನ್ನ ಯೋಗಕ್ಷೇಮವನ್ನು ನೋಡಲು ಒಳ್ಳೆಯವರನ್ನೇ ಆರಿಸಿರುವಿ. ಆಗಲಿ ಇನ್ನು ಸಮಯವಿಲ್ಲ. ದುರ್ಯೋಧನ ಮಹಾರಾಜರು ನಮ್ಮ ದಾರಿಯನ್ನು ಕಾಯುತ್ತಿರಬಹುದು."

ವೃಷಸೇನನು ತಾಯಿಯನ್ನು ನಮಸ್ಕರಿಸಿದ. ಅತ್ಯಂತ ವಾತ್ಸಲ್ಯದಿಂದ ಅವನ ಮೈಮೇಲೆ ಕೈಯಾಡಿಸಿದಳು. ಅಪ್ಪಿಕೊಂಡಳು. ನಂತರ ಕರ್ಣನ ಸೊಂಟಕ್ಕೆ ಉತ್ತರೀಯವನ್ನು ಕಟ್ಟುವುದರಲ್ಲಿ ನಿರತಳಾದಳು.

"ರಣಾಂಗಣಕ್ಕೆ ಹೊರಡುವಾಗ ಇಂಥ ಗಂಟು ಸರಿಹೋಗಲಾರದು. ಯಾಕೆಂವರೆ ಒಳ್ಳೇ ಸಮಯದಲ್ಲಿ ಅದು ಬಿಚ್ಚಲು ಬರುವಂತಿರಬೇಕು."

"ಆದುದರಿಂದಲೇ ನಾನು ಈ ಗಂಟನ್ನು ಹಾಕಿದ್ದೇನೆ."

ಉತ್ತರವನ್ನೀಯಬೇಕೆಂಬ ವಿಚಾರವಿದ್ದರೂ ಸಹ ದೂರದಿಂದ ಕೇಳ ಬರತೊಡಗಿದ ರಣವಾದ್ಯಗಳ ನಿನಾದದಿಂದಾಗಿ ಕರ್ಣನ ಮನಸ್ಸು ಯುದ್ಧ ಭೂಮಿಯತ್ತ ಓಡಲಾರಂಭಿಸಿತು. ಸೇನೆಯ ಭಾಗಗಳನ್ನೆಲ್ಲ ಒಕ್ಕೂಡಿಸುವ ಸಾಂಕೇತಿಕ ಧ್ವನಿಯೊಂದಿಗೆ ಆ ಎರಡೂ ರಥಗಳು ನಾಗಾಲೋಟದಿಂದ ಧಾವಿಸತೊಡಗಿದವು. ಮನೆಯ ಅತಿ ಎತ್ತರವಾದ ಭಾಗದಲ್ಲಿ ನಿಂತು ನೋಡುತ್ತಲಿದ್ದ ವೃಷಾಲಿಗೆ ಕೇವಲ ಕುದುರೆಗಳ ಕಾಲುಸಪ್ಪಳವು ಮಾತ್ರ ಕೇಳ ಬರುತ್ತಿತ್ತು. ಇಲ್ಲಿಯವರೆಗೆ ತಡೆಹಿಡಿದ ಅವಳ ದುಃಖವು ಒಂದೇ ಸಲಕ್ಕೆ ಹೊರಹೊಮ್ಮುವಂತಾಯಿತು. ಅದನ್ನು ಹೇಗೋ ಸಾವರಿಸಿಕೊಂಡು ಅವಳು ಅರಮನೆಯೊಳಗೆ ಹೊರಟುಹೋದಳು.

ಕೌರವ ಶಿಬಿರದ ಯೋಧರೆಲ್ಲ ಕರ್ಣನಿಗಾಗಿ ಕಾಯುತ್ತಲಿದ್ದರು. ವೃಷಸೇನನೊಂದಿಗೆ ಕರ್ಣನು ಶಿಬಿರವನ್ನು ಪ್ರವೇಶ ಮಾಡಿದ. ಕರ್ಣನ

ರಥವನ್ನು ಕಂಡು ದುರ್ಯೋಧನನಿಗೆ ತುಂಬ ಸಂತೋಷವಾಯಿತು. ಆತನು ಮುಂದೆ ಬಂದು ಕರ್ಣನಿಗೆ ಸ್ವಾಗತವನ್ನು ನೀಡಿದ. ಶಿಬಿರದಲ್ಲಿ ಸೇನಾಧಿಪತ್ಯದ ಅಭಿಷೇಕ ಮಾಡಲು ಸರ್ವಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಎಲ್ಲ ಕೌರವ ಶ್ರೇಷ್ಠರೂ ಅಲ್ಲಿ ಉಪಸ್ಥಿತರಿದ್ದರು. ರೇಶಿಮೆಯ ವಸ್ತ್ರದಿಂದ ಅಲಂಕೃತವಾದ ಆಸನದ ಮೇಲೆ ಕರ್ಣನನ್ನು ಕೂಡಿಸಲಾಯಿತು. ದುರ್ಯೋಧನನಿಂದ ಯಥಾರೀತಿ ಅಭಿಷೇಕವನ್ನು ಮಾಡಿಸಲಾಯಿತು. ಈ ಅಭಿಷೇಕದ ಕಾರ್ಯಾಚರಣೆಯು ನಡೆದಾಗ ಕರ್ಣನ ಮನಸ್ಸಿಗೆ ಕೃತಾರ್ಥತೆಯ ಅನುಭವವಾಯಿತು. ಶಸ್ತ್ರವಿದ್ಯಾಭ್ಯಾಸ ಕಾಲದಲ್ಲಿ ಅವಮಾನವಾದಾಗಲೂ ಇದೇ ದುರ್ಯೋಧನನು ಆತನಿಗೆ ಅಂಗದೇಶದ ರಾಜ್ಯಾಧಿಪತ್ಯವನ್ನಿತ್ತು ಗೌರವಿಸಿದ್ದ. ಸೇನಾಧಿಪತ್ಯದ ಅಭಿಷೇಕ ಶಾಸ್ತ್ರ ವಿಧಿಗಳೆಲ್ಲ ಮುಗಿದ ನಂತರ ಮೇಲೆದ್ದ ಕರ್ಣನು ವಿನಯದಿಂದ ದುರ್ಯೋಧನನಿಗೆ ನಮಸ್ಕಾರ ಮಾಡಿದ. ಆಗ ಯುವರಾಜನು ಆನಂದದಿಂದ ಆತನನ್ನು ಬಿಗಿದಪ್ಪಿಕೊಂಡು ಹೇಳಿದ,

"ಗೆಳೆಯಾ, ನಿನ್ನಿಂದ ನನಗೆ ವಿಜಯಪ್ರಾಪ್ತಿಯಾಗುವದೆಂಬ ಭರವಸೆ ಇದೆ."

ಕರ್ಣನು ಕೌರವ ಸೇನೆಯ ಸಕಲ ಯೋಧರನ್ನು ಮುಂದೆ ಮಾಡಿಕೊಂಡು ರಣಾಂಗಣವನ್ನು ಪ್ರವೇಶಮಾಡಿದ. ಹೊಸ ಸೇನಾಪತಿಯನ್ನು ಕಂಡ ಕೌರವ ಸೇನೆಯು ಗಗನ ಭೇದಿಸುವಂತೆ ಕರ್ಣನ ಹೆಸರಿನಿಂದ ಜಯಜಯಕಾರಮಾಡಿತು. ಸೈನ್ಯದ ಮುಂಭಾಗದಲ್ಲಿ ಕರ್ಣನ ರಥವನ್ನು ನಿಲ್ಲಿಸಲಾಯಿತು. ಆತನ ಪಕ್ಕದಲ್ಲಿಯೇ ದುರ್ಯೋಧನನ ರಥವಿತ್ತು. ಸೈನ್ಯದ ಪ್ರಮುಖರನ್ನೆಲ್ಲ ಮುಂದೆ ಬರಮಾಡಿಕೊಂಡು ಸೈನ್ಯವನ್ನು ಬೇರೆಬೇರೆ ಭಾಗಗಳಾಗಿ ವಿಂಗಡಿಸುವಂತೆ ಕರ್ಣನು ಆಜ್ಞೆಯನ್ನಿತ್ತ. ಆ ಸೇನಾಸಮೂಹದ ಚಲನವಲನವನ್ನೆಲ್ಲ ಯುವರಾಜನು ವೀಕ್ಷಿಸುತ್ತಲಿದ್ದ. ಆಕಸ್ಮಿಕವಾಗಿ ಆತನ ಗಮನವು ವೃಷಸೇನನತ್ತ ಹರಿಯಿತು. ಅವನು ದುರ್ಯೋಧನನಿಗೆ ನಮಸ್ಕಾರವನ್ನು ಸಲ್ಲಿಸಿದ. ಬಹು ಆದರದಿಂದ ಅವನನ್ನು ಬರಸೆಳೆದು ಮುದ್ದಾಡಿ,

"ವೃಷಸೇನಾ, ಮಗೂ ಬಹು ಎಚ್ಚರದಿಂದ ಕಾರ್ಯಪ್ರವೃತ್ತನಾಗು" ಎಂದು ಹೇಳಿದ.

"ಮಹಾರಾಜ, ತಮ್ಮ ವಿಜಯಕ್ಕಾಗಿ ನಾನು ನನ್ನ ಪ್ರಾಣವನ್ನಾದರೂ ಬಲಿಕೊಡಲು ಸಿದ್ಧನಿರುವೆ."

ಮಗನ ಮಾತಿನಿಂದ ಕರ್ಣನಿಗೆ ತುಂಬ ಅಭಿಮಾನವೆನ್ನಿಸಿತು. ಆತನ ಮಾತಿಗೆ ಮೋಹಿತನಾದ ದುರ್ಯೋಧನನು ತನ್ನ ಕೊರಳಲ್ಲಿದ್ದ ಬೆಲೆ ಬಾಳುವ ಹಾರವನ್ನು ತೆಗೆದು ವೃಷಸೇನನ ಕೊರಳಿಗೆ ಹಾಕಿ "ಮಗೂ ವಿಜಯಿಯಾಗು" ಎಂದು ಆಶೀರ್ವಾದ ಮಾಡಿದ.

ವೃಷಸೇನನು ತಂದೆಯತ್ತ ಹೊರಳಿ ನಮಸ್ಕರಿಸಿ. ತನ್ನ ಪ್ರತಿಬಿಂಬ ದಂತಿರುವ ಆ ಮಗುವನ್ನು ನೋಡುತ್ತ ಕರ್ಣನು,

"ಮಗೂ, ನಿನ್ನ ಕೀರ್ತಿಯು ಲೋಕೋತ್ತರವಾದುದೆಂದು ಎಣಿಸು ವಂತಾಗಲಿ ! ವೀರರಾದವರು ಜಯಾಪಜಯಗಳನ್ನು ಎಂದೂ ಮನಸ್ಸಿನಲ್ಲಿ ತರಲಾರರು. ಒಂದು ವೇಳೆ ನಿನಗೆ ಪರಾಜಯವಾದರೂ ಅದೂ ಮಹಾ ಪರಾಕ್ರಮಿಯಿಂದ ಘಟಿಸುವಂತಾಗಲಿ. ಅಂಥ ಯೋಗವು ನಿನಗೆ ಲಭಿಸಲಿ, ಇದೇ ನನ್ನ ಆಶೀರ್ವಾದ."

ಕರ್ಣನ ಆಶೀರ್ವಾದವನ್ನು ಪಡೆದ ವೃಷಸೇನನು ತನ್ನ ಸೇನಾ ವಿಭಾಗ ವನ್ನು ಕೂಡಿಕೊಂಡು ಹೊರಡಲು ಅಣಿಯಾದ. ಕರ್ಣನು ಆ ರಥವನ್ನೇ ನೋಡುತ್ತಲಿದ್ದ. ರಣಾಂಗಣದಲ್ಲಿ ನೂರಾರು ರಥಚಕ್ರಗಳ ಗುರುತುಗಳು ಕಾಣಿಸುತ್ತಿದ್ದವು. ಅಂಬಾರಿಗಳನ್ನು ಹೊತ್ತ ಆನೆಗಳು ಆರ್ಭಟಿಸುತ್ತ ತಿರುಗಾಡುತ್ತಿದ್ದವು. ಗದೆ, ಖಡ್ಗ ಮೊದಲಾದ ಆಯುಧಗಳನ್ನು ಹಿಡಿದು ಸುಸಜ್ಜಿತರಾಗಿ ಹೊರಟಿರುವ ವೀರರ ಧ್ವನಿಯು ವೀರಶ್ರೀಗೆ ಆಹ್ವಾನ ವನ್ನೀಯುತ್ತಿತ್ತು. ಕರ್ಣ, ದುರ್ಯೋಧನರಿಬ್ಬರೂ ತಮ್ಮ ತಮ್ಮ ರಥಗಳ ನ್ನೇರಿದರು. ಆನೆಯ ದಳದೊಂದಿಗೆ ದುರ್ಯೋಧನನ ದಳವು ಕೂಡಿ ಕೊಂಡಿತು. ಕರ್ಣನು ತನ್ನ ರಥವನ್ನು ಸೈನ್ಯದ ಮುಂಭಾಗಕ್ಕೆ ಕೊಂಡೊಯ್ಯುವಂತೆ ಆಜ್ಞೆ ಮಾಡಿದ.

ಸೈನ್ಯದ ಅಗ್ರಭಾಗದಲ್ಲಿ ಸುವರ್ಣ ಶೃಂಖಲೆಯ ಗುರುತಿನ ಪತಾಕೆ ಯುಳ್ಳ ಕರ್ಣನ ರಥವು ಬಂದು ನಿಂತಿತು. ಸೈನ್ಯದ ಬೇರೆ ಬೇರೆ ಭಾಗ ಗಳಿಂದ ಶಂಖನಾದಗಳು ಕೇಳಬರತೊಡಗಿದವು. ಆಕಾಶವೆಲ್ಲ ರಕ್ತರಂಜಿತ ವಾದ ಕೆಂಪು ಬಣ್ಣದಿಂದ ಹೊದಿಸಿದಂತೆ ತೋರತೊಡಗಿತು. ಕರ್ಣನು ತನ್ನ

ನೋಟವನ್ನು ಪಾಂಡವರ ಸೇನೆಯತ್ತ ಹೊರಳಿಸಿದ ಅದೇ ಸಮಯಕ್ಕೆ ಸರಿಯಾಗಿ ಅರ್ಜುನನ ಕಪಿ ಧ್ವಜವು ಪಾಂಡವಸೇನೆಯ ಅಗ್ರಭಾಗದಲ್ಲಿ ಕಾಣಬರತೊಡಗಿತು. ಆ ರಥವನ್ನು ನೋಡುತ್ತಿದ್ದಂತೆ ಕರ್ಣನಿಗೆ ಕೃಷ್ಣನಿತ್ತ ಆಶೀರ್ವಚನ ನೆನಪಾಗತೊಡಗಿತು.

........ಯಾವದೇ ತರಹದ ಜಯಾಪಜಯಗಳಿಂದ ನಿನ್ನ ಪರಾಕ್ರಮೀ ಜೀವನವು ಮರೆಯಾಗಲು ಸಾಧ್ಯವಿಲ್ಲ. ಅದು ನಿನ್ನ ತಂದೆಯಂತೆ ಯಾವಾಗಲೂ ತೇಜಸ್ವಿಯಾಗಿಯೇ ಇರುತ್ತದೆ. ಆ ಪ್ರಕಾಶವನ್ನು ಸ್ಪರ್ಶಮಾಡುವ ಧೈರ್ಯವು ಯಾವ ದೇವತೆಗಳಿಗೂ ಸಾಧ್ಯವಾಗದು.

ಕೃಷ್ಣನ ಆ ಮಾತುಗಳು ನೆನಪಾದೊಡನೆ ಆತನು ಪುಲಕಿತನಾದ. ಅರ್ಜುನನ ರಥದತ್ತ ನೋಡಿ ಮುಂಭಾಗದಲ್ಲಿ ಕುಳಿತ ಆ ಮಹಾನುಭಾವನಿಗೆ ಕೃತಜ್ಞತೆಯಿಂದ ನಮಿಸಿದ. ಮುಖದಲ್ಲಿ ಮುಗುಳುನಗೆ ಮೂಡಿತು. ಎದೆ ಹಾರಲಾರಂಭಿಸಿತು. ಒಂದು ಸಲ ಹಿಂದಿರುಗಿ ನೋಡಿದ, ಪೂರ್ವ ದಿಗಂತದಿಂದ ಸೂರ್ಯಕಿರಣಗಳು ನಿಧಾನವಾಗಿ ಹೊರಹೊಮ್ಮುತ್ತಿದ್ದವು. ತನ್ನೆರಡೂ ಕೈಗಳನ್ನು ಮೇಲೆತ್ತಿ ಸೂರ್ಯದೇವನಿಗೆ ವಂದನೆಗಳನ್ನು ಸಲ್ಲಿಸಿದ. ನಂತರ ರಥದಲ್ಲಿರಿಸಿದ್ದ ವಿಜಯ ಶಂಖವನ್ನು ಕೈಗೆತ್ತಿಕೊಂಡು ಎರಡೂ ಕೈಗಳಿಂದ ಅದನ್ನು ಹಿಡಿದು ತನ್ನ ಬಾಯಿಗಂಟಿಸಿಕೊಂಡಾಗ ಆತನ ಕಪೋಲಗಳೆರಡೂ ಊದಿಕೊಂಡು ಬಂದವು. ಕಂಠಭಾಗದಲ್ಲಿದ್ದ ನರಗಳು ಎದ್ದು ಕಾಣಿಸತೊಡಗಿದವು. ಅತಿ ದೀರ್ಘಕಾಲದ ಧ್ವನಿಯು ಸುವರ್ಣ ಕವಚದಿಂದ ಕೂಡಿದ ಆ ಶಂಖದಿಂದ ಹೊರಹೊಮ್ಮಿತು. ಹೀಗೆ ಕರ್ಣನು ಮೂರು ಸಲ ತನ್ನ ಶಂಖವನ್ನೂದಿದ. ನಂತರ ಆ ಶಂಖವನ್ನು ರಥದಲ್ಲಿಡುತ್ತಿದ್ದಂತೆಯೇ ಪಾಂಡವರ ಪಕ್ಷದಿಂದ ಕೃಷ್ಣನ ಪಾಂಚಜನ್ಯವೆಂಬ ಶಂಖದ ಗಂಭೀರ ಧ್ವನಿಯು ಉತ್ತರ ರೂಪವಾಗಿ ಕೇಳಬರತೊಡಗಿತು. ಕರ್ಣನು ತನ್ನ ಕೈಗಳನ್ನು ಮೇಲಕ್ಕೆತ್ತಿದ. ಆ ಸಂಕೇತವನ್ನು ಕಂಡ ಆತನ ಸೇನೆಯು ಮುಂದೆ ಮುಂದೆ ಸರಿಯಲಾರಂಭಿಸಿತು. ಜಯಘೋಷಗಳನ್ನು ಮಾಡುತ್ತ ಮುಂದುವರಿದ ಸೇನೆಗಳು ಪರಸ್ಪರವಾಗಿ ಕಾದಾಡಲಾರಂಭಿಸಿದವು ವೀರರಿಗೆ ಬೆನ್ನು ಚಪ್ಪರಿಸುವಂತಹ ರೀತಿಯಲ್ಲಿ ರಣವಾದ್ಯಗಳು ಮೊಳಗಲಾರಂಭಿಸಿದವು. ಘನಘೋರವಾದ ಯುದ್ಧವು ಆರಂಭವಾಯಿತು.

ಕರ್ಣನು ತನ್ನ ರಥದಲ್ಲಿ ನಿಂತುಕೊಂಡು ಯುದ್ಧವನ್ನು ಪರೀಕ್ಷಿಸುತ್ತಲಿದ್ದ. ಆಗಾಗ ಯುದ್ಧಾಳುಗಳನ್ನು ಹುರಿದುಂಬಿಸಲು ಆತನ ರಥವು ಅತ್ತಿತ್ತ ಚಲಿಸುತ್ತಿತ್ತು. ಕರ್ಣನ ರಥವು ಓಡಾಡಿದಂತೆಲ್ಲ ಆತನ ರಥದ ರಕ್ಷಣಾ ದಳವೂ ಆತನನ್ನನುಸರಿಸಿಕೊಂಡೇ ಚಲಿಸುತ್ತಿತ್ತು. ಕರ್ಣನ ರಥದ ನಾಲ್ಕೂ ಭಾಗದಲ್ಲಿ ವೀರರು ತಮ್ಮ ತಮ್ಮ ರಥದಲ್ಲಿದ್ದುಕೊಂಡು ಆತನ ಸಂಚಾರಕ್ಕೆ ಮಾರ್ಗ ಮಾಡಿಕೊಡುತ್ತಿದ್ದರು. ಕರ್ಣನು ತನಗೆ ಸರಿಸಮಾನಾದವನು ಮುಂದೆ ಬಂದಾಗ ಮಾತ್ರ ಆತನೊಂದಿಗೆ ಯುದ್ಧನಿರತನಾಗುತ್ತಿದ್ದ. ನಡು ಮಧ್ಯಾಹ್ನದ ಕಾಲ ಸಮೀಪಿಸಿದರೂ ಯುದ್ಧದ ಯಾವ ನಿರ್ಣಯವೂ ಹೇಳುವಂತಿರಲಿಲ್ಲ. ಆಗ ತೇಜಸ್ವಿಯಾದ ಒಂದು ರಥವು ಕರ್ಣನನ್ನೆದುರಿಸಲು ಧಾವಿಸಿ ಬರುತ್ತಿರುವುದು ಕಾಣಬಂದಿತು. ಅದು ಬಹುಶಃ ಅರ್ಜುನನ ರಥವಾಗಿರಬಹುದೆ ? ಎಂಬ ಶಂಕೆಯೂ ಮೂಡಿತು. ಧ್ವಜದತ್ತ ನೋಡಿದಾಗ ಆ ರಥವು ಕಪಿಧ್ವಜಯುಕ್ತವಾಗಿರಲಿಲ್ಲ. ಅದು ನಕುಲನ ರಥವಾಗಿರಬಹುದೆ ? ಎಂಬ ಶಂಕೆಯೂ ಮೂಡಿತು. ಆತನ ರೂಪವು ತೇಜಸ್ವಿ ಚಂದ್ರ ಪ್ರಕಾಶದಂತೆ ತೋರುತ್ತಿತ್ತು. ಆತನ ರೂಪದಲ್ಲಿ ಮೋಹಕತೆ ಎದ್ದು ಕಾಣುತ್ತಿತ್ತು. ಕರ್ಣನು ನಕುಲನನ್ನು ಬದಿಗೆ ಸರಿಸಿ ಮುಂದೆ ಹೋಗಲು ಪ್ರಯತ್ನಿಸುತ್ತಿದ್ದ. ಆಗ ನಕುಲನು "ಸೂತಪುತ್ರನೇ ನಿಲ್ಲು ! ಹೋಡಿ ಹೋಗಬೇಡ, ನಿನ್ನೆದುರು ನಾನು ಯುದ್ಧಕ್ಕೆ ಸಿದ್ಧವಾಗಿ ಬಂದಿದ್ದೇನೆ. ಈ ಎಲ್ಲ ತರಹದ ನಾಶಕ್ಕೆ ನೀನೇ ಕಾರಣನಾದವನು. ಅಧಮನೇ, ಇಂದು ನಿನ್ನನ್ನು ಸಂಹಾರಮಾಡಿ ಕೃತಕೃತ್ಯನಾಗುವೆ."

ಕರ್ಣನಿಗೆ ನಗು ತಡೆಯುವದಾಗಲಿಲ್ಲ.

"ನಕುಲ. ರಾಜಪುತ್ರರಿಗೆ ಶೋಭಿಸುವಂತೆ ನೀನು ಮಾತನಾಡಿದೆ. ಆದರೆ ಕೇವಲ ಮಾತಿನಿಂದ ಯಾರೂ ಯುದ್ಧಾಳು ಎಂದು ಕರೆಸಿಕೊಳ್ಳುವುದಿಲ್ಲ ಆದುದರಿಂದ ನೀನು ನನ್ನ ಮೇಲೆ ಬಾಣ ಪ್ರಯೋಗ ಮಾಡು. ನಿನ್ನ ಪರಾಕ್ರಮವನ್ನು ನೋಡಬೇಕೆಂಬ ಅಪೇಕ್ಷೆ ನನಗಿದೆ."

ಕರ್ಣನು ನಕುಲನಿಂದ ಬಿಡಲ್ಪಟ್ಟ ಬಾಣಗಳನ್ನೆಲ್ಲ ಮಧ್ಯದಲ್ಲಿಯೇ ಮುರಿದು ಹಾಕುತ್ತಲಿದ್ದ. ಆದರಿಂದ ಕೋಪಗೊಂಡ ನಕುಲನು ಮತ್ತಷ್ಟು ರಭಸದಿಂದ ಬಾಣ ಪ್ರಯೋಗವನ್ನಾರಂಭಿಸಿದ. ಅವರಿಬ್ಬರಲ್ಲಿಯೂ ಬಹು

ಹೊತ್ತಿನವರೆಗೆ ಯುದ್ಧವು ನಡೆಯಿತು. ಆ ಯುದ್ಧ ಕೌತುಕವಾಗಿ ತೋರು ತ್ತಿತ್ತು. ಕೊನೆಗೊಮ್ಮೆ ಯುದ್ಧದ ತೀರ್ಮಾನವನ್ನು ನಿರ್ಧರಿಸುವಂತಹ ಬಾಣ ಪ್ರಯೋಗವನ್ನು ಕರ್ಣನು ಬಳಸಿದ. ಆದರಿಂದ ನಕುಲನ ಧನುಸ್ಸು ಮುರಿದು ಹೋಯಿತು. ರಥದ ಧ್ವಜವು ಕಳಚಿ ಬಿದ್ದಿತು. ನಕುಲನ ರಥ ವನ್ನು ರಕ್ಷಿಸುತ್ತಿದ್ದ ರಕ್ಷಾದಳವೂ ಇಲ್ಲದಂತಾಯಿತು. ಆತನ ಸಾರಥಿಯು ಸ್ಥಾನಭ್ರಷ್ಟನಾದ. ನೋಡ ನೋಡುತ್ತಿದ್ದಂತೆ ನಕುಲನ ಕವಚವು ಕಳಚಿ ಹೋಯಿತು. ಆತ ವಿರಥಿಯಾದ. ಮುಂದೇನು ಎಂಬುದೇ ಆತನಿಗೆ ತೋಚದಾಯಿತು. ಕ್ಷಣಮಾತ್ರದಲ್ಲಿ ಆತನು ರಣಭೂಮಿಯಿಂದ ಓಡ ಲಾರಂಭಿಸಿದ. ಅದನ್ನು ಕಂಡ ಕರ್ಣನು ತಾನೂ ತನ್ನ ರಥದಿಂದ ಧುಮುಕಿ ಓಡುತ್ತಿರುವ ನಕುಲನನ್ನು ಎದುರಿಸಿದ. ಪರಾಜಯದ ಅವಮಾನದಿಂದ ಕ್ಷೋಭಿತನಾದ ನಕುಲನು ಒಂದೇ ಸಮನೆ ನಡುಗುತ್ತಲಿದ್ದ. ಮುಖವೆಲ್ಲ ಬಿಳುಪೇರಿ ಹೋಗಿತ್ತು. ತನ್ನ ಕೊನೆಯ ತಮ್ಮನ ಪರಿಸ್ಥಿತಿಯನ್ನು ಕಂಡು ಕರ್ಣನ ಅಂತಃಕರಣವು ಉಕ್ಕಿಬಂದಿತು. ಆತನನ್ನು ಮುಂದೆ ಕರೆದು ಮೈಮೇಲೆ ಕೈಯಾಡಿಸಬೇಕೆಂಬ ಯೋಚನೆಯೂ ಮೂಡಿತು. ಆಗ ಕರ್ಣನು,

"ವೀರಶ್ರೇಷ್ಠ ! ಹೆದರಬೇಡ. ನಾನು ಅಭಯವನ್ನೀಯುವೆ. ಹೇ ಸುಕುಮಾರನೆ, ತನ್ನ ಶಕ್ತಿಯನ್ನರಿತುಕೊಂಡು ಶತ್ರುಗಳೊಂದಿಗೆ ಯುದ್ಧದ ಆಹ್ವಾನವನ್ನೀಯಬೇಕು. ಇಂಥ ಭಯಂಕರವಾದ ರಣರಂಗದಲ್ಲಿ ಒಬ್ಬಂಟಿಗ ನಾಗಿ ತಿರುಗುವದೂ ಸಹ ಉಚಿತವಲ್ಲ. ಯುದ್ಧದ ಹಿರಿಮೆಯನ್ನು ನೋಡುವ ಅಪೇಕ್ಷೆಯಿದ್ದಲ್ಲಿ ನಿನ್ನ ಹಿರಿಯ ಸೋದರರಾದ ಭೀಮ, ಅರ್ಜುನ ನರ ಪರಿಸರದಲ್ಲಿಯೇ ಸುತ್ತಾಡಿಕೊಂಡಿರುವದು ವಿಹಿತ. ಹೋಗು ಸಂತೋಷ ದಿಂದ ಶಿಬಿರವನ್ನು ಸೇರಿಕೋ."

ನಕುಲನ ಕಣ್ಣೀರು ತನಗೆ ಕಾಣಿಸಕೂಡದೆಂದು ಕರ್ಣನು ಹೊರಳಿ ತನ್ನ ರಥದತ್ತ ಸಾಗಿದ. ನಡು ಮಧ್ಯಾಹ್ನವು ಕಳೆದು ಹೋಗಿತ್ತು. ದಹಿಸುವ ಸೂರ್ಯ ಕಿರಣಗಳು ರಣರಂಗವನ್ನು ದಾವಾಗ್ನಿಯನ್ನಾಗಿ ಮಾಡಿ ದ್ದವು. ಸೂರ್ಯಾಸ್ತದವರೆಗೆ ಆ ದಾಹವು ಹಾಗೆಯೇ ಇತ್ತು.

ಸೂರ್ಯಾಸ್ತದ ನಂತರ ಕರ್ಣನು ತನ್ನ ಶಿಬಿರದಲ್ಲಿ ವಿಶ್ರಾಂತಿಯನ್ನು

ಪಡೆಯುತ್ತಲಿದ್ದ. ಆಗ ದುರ್ಯೋಧನನ ಆಗಮನವಾಯಿತು. ಅವನ ಮುಖವು ತುಂಬ ಬಾಡಿಹೋಗಿತ್ತು. ಯುದ್ಧಕಾಲದಲ್ಲಾದ ಗಾಯಗಳ ಬಗ್ಗೆಯೂ ಆತನು ಗಮನ ಕೊಟ್ಟಂತಿರಲಿಲ್ಲ. ಅವನು ಕರ್ಣನಿಗೆ ಕೇಳಿದ.

"ಗೆಳೆಯಾ, ಈ ರಣಭೂಮಿಯು ನನಗೆ ಯಶವನ್ನೀಯಲಾರದೆಂದೆನಿಸುತ್ತಿದೆ."

"ಯಾಕೆ ? ಇಂದು ನಾನು ರಣಾಂಗಣದಲ್ಲಿ ತೋರಿಸಿದ ಸಾಹಸವು ನಿಮಗೆ ಸರಿದೋರಲಿಲ್ಲವೆ ? ಪಾಂಡವರ ಸೇನೆಯಂತೂ ನನ್ನ ಇಂದಿನ ಯುದ್ಧದಿಂದ ತಲ್ಲಣಿಸಿ ಹೋಗಿದೆ,"

"ನಾನು ನಿನ್ನ ಪರಾಕ್ರಮವನ್ನು ಕುರಿತು ಮಾತನಾಡಲಿಲ್ಲ."

"ಹಾಗಾದರೆ ?"

"ಮಿತ್ರಾ, ಇಂದು ಎಷ್ಟೊಂದು ಹಾನಿಯಾಗಿದೆ ಎಂಬುದನ್ನು ನೀನು ಗಮನಿಸಿರುವೆಯಾ ? ಕ್ಷೇಮಧೂರ್ತ ರಾಜನನ್ನು ಭೀಮನು ಸಂಹಾರ ಮಾಡಿದ. ಸಾತ್ಯಕಿ, ವಿಂದ ಹಾಗೂ ಅನುವಿಂದರನ್ನು ಪರಲೋಕಕ್ಕೆ ಕಳುಹಿಸಿದ. ಚಿತ್ರ ಹಾಗೂ ಚಿತ್ರಸೇನ ಇವರು ರಣಭೂಮಿಯನ್ನಪ್ಪಿದರು. ಹೀಗೆ ಇಂದು ಬಹುಜನ ವೀರರನ್ನು ಕಳೆದುಕೊಂಡೆವು. ಅನೇಕರು ಗಾಯಾಳುಗಳಾದರು. ನಾಶವಾದ ಕವಚಗಳು ಹಾಗೂ ಆಯುಧಗಳಿಗಂತೂ ಲೆಕ್ಕವೇ ಇಲ್ಲ"

"ಇದರಲ್ಲಿ ನನ್ನ ತಪ್ಪೇನಿದೆ."

"ಕರ್ಣ, ದೋಷವು ನಿನ್ನದಲ್ಲವಾದರೆ ಬೇರಿನ್ನಾರದು ? ರಣಾಂಗಣದ ಜಯಾಪಜಯಗಳಿಗೆಲ್ಲ ಸೇನಾಪತಿಯೇ ಮೂಲಕಾರಣ. ಜಯದೊಂದಿಗೆ ಅಪಜಯದ ಒಡೆತನವನ್ನೂ ಸಹ ಆತನೇ ಸ್ವೀಕರಿಸಬೇಕಾಗುವದು."

ದುರ್ಯೋಧನನ ಮಾತಿಗೆ ಕರ್ಣನು ಯಾವ ಉತ್ತರವನ್ನೂ ಕೊಡಲಿಲ್ಲ. ಕಾರಣ ಅವನ ಮಾತಿನಲ್ಲಿ ಸತ್ಯವಿತ್ತು.

"ಕರ್ಣಾ, ಇಂದಿಗೆ ಹದಿನಾರು ದಿನಗಳಾದವು. ಈ ಹದಿನಾರು ದಿನಗಳಲ್ಲಿ ನಮ್ಮ ಸೇನೆಗಾದ ನಷ್ಟ ಅಷ್ಟಿಷ್ಟೆಂದು ಹೇಳಲು ಬರುವಂತಿಲ್ಲ. ಪ್ರತಿದಿನವೂ ಹೀಗೆ ನಮ್ಮ ಬಲವು ಕುಂದುತ್ತಾ ಹೋದಲ್ಲಿ ನಮ್ಮ ಗತಿ ಏನು, ? ಮಿತ್ರಾ, ಸಾಧ್ಯವಿದ್ದಷ್ಟು ಬೇಗನೆ ವಿಜಯವು ನಮ್ಮದಾಗುವಂತೆ

ನಾವು ಪ್ರಯತ್ನಿಸಬೇಕಾಗಿದೆ. ಆ ಅರ್ಜುನನನ್ನು ಮುಗಿಸಿದೆಯಾದರೆ ನಮ್ಮ ಈ ಸಂಕಟಗಳೆಲ್ಲ ದೂರಾಗುತ್ತದೆ."

ಕರ್ಣನು ಆ ಮಾತಿಗೆ ನಕ್ಕು,

"ಯುವರಾಜ, ಈ ಮಾತು ಅಷ್ಟೊಂದು ಸುಲಭಸಾಧ್ಯ ಎಂದು ತಿಳಿಯಬೇಡ. ಅರ್ಜುನನನ್ನು ಸೋಲಿಸುವುದು ಬಹು ಸುಲಭ ಎಂದು ತಿಳಿದು ಕೊಂಡಿರುವಿಯಾ ?"

"ಗೆಳೆಯನೇ, ಅರ್ಜುನನಿಗಾಗಿ ಪ್ರತಿಜ್ಞೆಯನ್ನು ಮಾಡುತ್ತಿದ್ದೆ. ಆದರೆ ಇಂದು ನೀನೇ ಈ ಮಾತನ್ನು ಹೇಳುವಿಯಾ ?"

"ಹೌದು ಆ ಅರ್ಜುನನು ನನ್ನ ಮುಂದೆ ಬರಬೇಕಲ್ಲವೆ ? ಕೃಷ್ಣ ನಂತೂ ಆತನನ್ನು ಯಾವಾಗಲೂ ನನ್ನಿಂದ ದೂರದಲ್ಲಿಡುತ್ತ ಬಂದಿದ್ದಾನೆ. ಅದು ಅವನ ಸತತ ಪ್ರಯತ್ನವಾಗಿ ಹೋಗಿದೆ. ನಾನು ಅರ್ಜುನನಿಗಾಗಿ ಅಂಜುವುದಿಲ್ಲ. ಹೆದರುವುದಿಲ್ಲ. ಶರೀರಬಲ, ಮನೋಬಲ ಹಾಗೂ ಯುದ್ಧಕೌಶಲ್ಯ ಇದಾವುದರಲ್ಲಿಯೂ ಅರ್ಜುನನು ನನಗೆ ಸರಿಸಮಾನನಲ್ಲ. ಅವನ ಗಾಂಡೀವ ಧನುಸ್ಸನ್ನು ಮೀರಿಸುವಂತಹ ವಿಜಯ ಧನುಸ್ಸು ನನ್ನಲ್ಲಿದೆ. ಅದು ಭಗವಾನ್ ಪರಶುರಾಮರಿಗೆ ಸೇರಿದ್ದು. ಅವರೇ ಅದನ್ನು ನನಗೆ ಆಶೀರ್ವಾದ ಪೂರ್ವಕ ಕೊಟ್ಟಿದ್ದಾರೆ."

"ಹಾಗಾದರೆ ಬೇರಿನ್ನಾವ ತೊಂದರೆ ಇದೆ ?"

"ಬಹು ದೊಡ್ಡ ತೊಂದರೆ ಇದೆ. ಹೇ ಕೌರವೇಶ್ವರಾ, ಶ್ರೇಷ್ಠ ರಥಿ ಯಾದವನಿಗೆ ಕೇವಲ ತನ್ನ ಶಸ್ತ್ರಗಳಿಂದ ಜಯವನ್ನು ಗಳಿಸಲು ಸಹಾಯಕ ನಾಗುವಂತಹ ಅತ್ಯುತ್ತಮ ಸಾರಥಿಯ ಸಹಕಾರವೂ ಅಷ್ಟೇ ಅಗತ್ಯವಿದೆ. ಸುದೈವದಿಂದ ಅರ್ಜುನನಿಗೆ ಕೃಷ್ಣನಂತಹ ಶ್ರೇಷ್ಠ ಸಾರಥಿಯು ದೊರೆಕಿ ದ್ದಾನೆ. ಆದರೆ ನನಗೆ ಅಂಥ ಸಾರಥಿ ಇಲ್ಲವಾಗಿದ್ದಾನೆ."

"ಕೃಷ್ಣನಿಗೆ ಸರಿಸಮಾನವಾದ ಸಾರಥ್ಯ ಕಾರ್ಯವನ್ನು ನಿರ್ವಹಿಸು ವಂಥವರು ನಮ್ಮಲ್ಲಿ ಯಾರೂ ಇಲ್ಲವೆ ?"

"ಇದ್ದಾರೆ"

"ಯಾರು ?"

"ಮುದ್ರರಾಜನಾದ ಶಲ್ಯ ! ಅವರಂಥ ಸಾರಥಿ ಬೇರೊಬ್ಬರಿಲ್ಲ. ಅಷ್ಟೇ

ಅಲ್ಲ. ಅಶ್ವವಿದ್ಯಾ ಪಾರಂಗತರಲ್ಲಿಯೂ ಅವರ ಹೆಸರು ಅಗ್ರಗಣ್ಯವಾಗಿದೆ. ಆತ ಒಂದುವೇಳೆ ನನ್ನ ಸಾರಥ್ಯ ಕಾರ್ಯವನ್ನು ನಿರ್ವಹಿಸಿದಲ್ಲಿ ನಿನ್ನ ಮನೋಕಾಮನೆಗಳೆಲ್ಲ ಪೂರ್ಣಗೊಳ್ಳಲು ಹೆಚ್ಚಿನ ಸಮಯವು ಬೇಕಾಗಿಲ್ಲ."

ಉತ್ಸಾಹದಿಂದ ಎದ್ದು ನಿಂತ ದುರ್ಯೋಧನನು ಕರ್ಣನಿಗೆ ಹೇಳಿದ,

"ಮಿತ್ರಾ, ನೀನು ಚಿಂತಿಸುವ ಕಾರಣವಿಲ್ಲ. ನಾಳೆ ಶಲ್ಯರಾಜನು ನಿನ್ನ ಸಾರಥ್ಯ ಕರ್ಮವನ್ನು ಖಂಡಿತವಾಗಿಯೂ ಮಾಡುತ್ತಾನೆಂದು ತಿಳಿ."

ಕರ್ಣನು ಯಾವ ಮಾತನ್ನೂ ಆಡಲಿಲ್ಲ. ಆತನು ದುರ್ಯೋಧನನ ಅಪ್ಪಣೆಯನ್ನು ಪಡೆದು ನಿವಾಸದತ್ತ ಹೊರಡಲು ರಥಾರೂಢನಾದ.

## 53

ಮರುದಿನ ನಸುಕಿನಲ್ಲಿಯೇ ಕರ್ಣನು ಕೌರವ ಶಿಬಿರವನ್ನು ತಲುಪಿದ. ಆತನು ಇನ್ನೂ ರಥದಿಂದಿಳಿಯುವುದೇ ತಡ ದುರ್ಯೋಧನನು ಮುಂದೆ ಬಂದು,

"ಕರ್ಣಾ, ನಿನ್ನ ಬಯಕೆಯು ಪೂರ್ಣವಾಯಿತು."

"ಯಾವದು ?"

"ಮುದ್ರರಾಜ ಶಲ್ಯನು ನಿನ್ನ ಸಾರಥ್ಯಕರ್ಮವನ್ನು ಮಾಡಲು ಒಪ್ಪಿಗೆಯನ್ನಿತ್ತಿದ್ದಾನೆ."

"ಯುವರಾಜ, ಇನ್ನು ಪರಾಕ್ರಮವನ್ನು ಕುರಿತು ನೀವು ಚಿಂತಿಸಬೇಡಿರಿ."

"ನಡೆ, ಮುದ್ರರಾಜನು ನಮ್ಮ ದಾರಿಯನ್ನು ಕಾಯುತ್ತಲಿದ್ದಾನೆ."

ಕರ್ಣನು ದುರ್ಯೋಧನನೊಂದಿಗೆ ಶಲ್ಯರಾಜನ ಶಿಬಿರವನ್ನು ಪ್ರವೇಶ ಮಾಡಿದಾಗ ಶಲ್ಯರಾಜನು ಮೇಲೇಳಲಿಲ್ಲ. ಕುಳಿತಲ್ಲಿಂದಲೇ ಆತ ಕರ್ಣ, ದುರ್ಯೋಧನರನ್ನು ನೋಡುತ್ತಲಿದ್ದ. ನಂತರ ಕರ್ಣನು ಆತನ ಸಮೀಪಕ್ಕೆ ಬಂದ ನಂತರ,

"ಮುದ್ರರಾಜಾ, ಅಂಗರಾಜನಾದ ಕರ್ಣನು ತಮಗೆ ವಂದನೆಗಳನ್ನು ಸಲ್ಲಿಸುತ್ತಾನೆ" ಎಂದ.

"ಸೂತಪುತ್ರ ರಾಧೇಯನೇ, ನಿನಗೆ ವಿಜಯವಾಗಲಿ."

ಕುಳಿತ ಸ್ಥಳದಿಂದಲೇ ಶಲ್ಯರಾಜನು ಕರ್ಣನಿಗೆ ಸ್ವಾಗತ ಕೋರಿದ. ಆಗ ಕರ್ಣನು ದುರ್ಯೋಧನನತ್ತ ನೋಡಿದ. ಆತನ ಮುಖವು ತುಂಬಾ ಸಂತಾಪಗೊಂಡಿತ್ತು. ಅದನ್ನರಿತು ಸಂತೋಷಚಿತ್ತನಾದ ಶಲ್ಯರಾಜನು,

"ರಾಧೇಯಾ, ನಾನಾಡಿದ ಮಾತಿನಿಂದ, ಬಳಸಿದ ಶಬ್ದಗಳಿಂದ ನೀನು ಅಸಮಾಧಾನವನ್ನು ಹೊಂದಿಲ್ಲವಷ್ಟೇ ?"

"ಶಲ್ಯರಾಜ ! ರಾಧೇಯನೆಂದು ಕರೆಸಿಕೊಳ್ಳುವದರಲ್ಲಿ ನನಗೆ ಧನ್ಯತೆ ಯೆನಿಸುತ್ತದೆ ಆದರೂ ನನ್ನ ಹೆಸರಿನಿಂದ ಕೂಗುವ ಅಧಿಕಾರವು ಮಾತ್ರ ಕೆಲವೇ ಕೆಲವು ಜನರಿಗೆ ಮೀಸಲಾಗಿದೆ. ಅಂಥ ಆತ್ಮೀಯತೆಯು ತಮ್ಮ ದಾಗಿಲ್ಲ. ಆದುದರಿಂದ ಅಂಥ ಅಧಿಕಾರವೂ ತಮಗೆ ಬರುವುದಿಲ್ಲ."

"ಆಗಲಿ, ಇನ್ನು ಮುಂದೆ ಸೂತಪುತ್ರನೆಂದೇ ನಿನ್ನನ್ನು ಕೂಗುವೆ. ಅದು ನಿನಗೆ ಒಪ್ಪಿಗೆಯಷ್ಟೆ ?"

"ನಾನು ಸೂತನಿರುವಂತೆ ಅಂಗದೇಶದ ಅಧಿಪತಿಯೂ ಆಗಿರುವೆ."

"ಹಂ ! ಅಂಗರಾಜ ! ಕರ್ಣ, ಅದು ಕೇವಲ ಒಂದು ಉಪಾಧಿ. ರಾಜ್ಯವನ್ನು ಕೊಟ್ಟಮಾತ್ರಕ್ಕೆ ಎಂದೂ ರಾಜನಾಗಲಾರ, ಹಾಗಾದಲ್ಲಿ ಎಲ್ಲರೂ ರಾಜರಾಗಬಹುದು. ಕುಲವಂತರೆಂದೂ ಕರೆಸಿಕೊಳ್ಳಬಹುದು."

"ಶಲ್ಯರಾಜ !" ಖಡ್ಗದ ಮೇಲೆ ಕೈಯನ್ನಿಡುತ್ತ ಕರ್ಣನು ಕೂಗಿದ.

ಆಸನದಿಂದ ಮೇಲೆದ್ದ ಶಲ್ಯರಾಜನು ಕರ್ಣನನ್ನೇ ದುರುಗುಟ್ಟಿಕೊಂಡು ನೋಡುತ್ತ ಹೇಳಿದ.

"ಖಡ್ಗದ ಮೇಲಿಟ್ಟ ಕೈ ಸರಿಸು ಕರ್ಣಾ. ನನ್ನ ಸಾರಥ್ಯ ಕರ್ಮವು ನಿನಗೆ ಬೇಕಾದಲ್ಲಿ ನಾನಾಡುವ ಅಪ್ರಿಯ ವಾಕ್ಯಗಳನ್ನೆಲ್ಲ ನೀನು ಕೇಳಲೇ ಬೇಕು. ಅಂಥ ಕರಾರು ಮುಂದಿಟ್ಟ ನಂತರವೇ ನಾನು ನಿನ್ನ ಸಾರಥ್ಯ ಕರ್ಮವನ್ನು ಒಪ್ಪಿದ್ದೇನೆ, ಅಷ್ಟೇ ಅಲ್ಲ ಶೂದ್ರನ ಭಾವನೆಗಳಿಗೆ ನಾನು ಬೆಲೆ ಕೊಡುವುದಿಲ್ಲವೆಂಬುದನ್ನೂ ನೀನು ತಿಳಿದುಕೋ."

ಆಶ್ಚರ್ಯಚಕಿತನಾದ ಕರ್ಣನು ದುರ್ಯೋಧನನನ್ನು ನೋಡಿದ. ಆತನ ಕಣ್ಣುಗಳು ದೈನ್ಯತೆಯನ್ನು ವ್ಯಕ್ತಪಡಿಸುತ್ತಿದ್ದವು.

"ಮಿತ್ರಾ, ಶಲ್ಯರಾಜನು ಹೇಳುವ ಮಾತು ಸತ್ಯವಾದುದು. ನನ್ನ

ಸಲುವಾಗಿ ಈ ಅವಮಾನವನ್ನು ನೀನು ಸಹನಮಾಡಿಕೋ. ನಿನ್ನ ಕೋಪವನ್ನು ತಡೆದು ಹಿಡಿ."

ಮಹಾಪೂರದಂತೆ ಬಂದ ಕರ್ಣನ ಸಂತಾಪವು ಅನಿವಾರ್ಯವಾಗಿ ಮಂಜಿನಂತೆ ಕರಗಿಹೋಯಿತು.

"ಸರಿ, ಶಲ್ಯರಾಜ ನೀವು ನನ್ನ ಸಾರಥ್ಯ ಕರ್ಮವನ್ನು ಮಾಡುವಿರಲ್ಲವೆ ? ಅಷ್ಟೇ ಸಾಕು. ಕೃಷ್ಣನಿಗಿಂತ ಶ್ರೇಷ್ಠವಾದ ಸಾರಥ್ಯ ಕರ್ಮವನ್ನು ಮಾಡುವ ತಮ್ಮ ಅನುಭವನ್ನು ಪಡೆಯಲು ನಾನು ಉತ್ಸುಕನಾಗಿದ್ದೇನೆ. ಆದುದರಿಂದ ನೀವು ಬಳಸುವ ಎಂಥ ಶಬ್ದಗಳನ್ನೂ ಸಹ ಸಹಿಸಿಕೊಳ್ಳಲು ನಾನು ಸಿದ್ಧನಿದ್ದೇನೆ."

ಕರ್ಣ, ದರ್ಯೋಧನ, ಶಲ್ಯ ಈ ಮೂವರೂ ಶಿಬಿರದಿಂದ ಹೊರಬಿದ್ದರು. ಶಲ್ಯರಾಜನು ಅತ್ಯಮೌಲ್ಯವಾದ ರಥವನ್ನು ಕರ್ಣನಿಗಾಗಿಯೇ ಸಿದ್ಧಪಡಿಸಿಕೊಂಡಿದ್ದ. ಆ ರಥವನ್ನು ಸಂಪೂರ್ಣವಾಗಿ ಪರೀಕ್ಷಿಸಿದ ನಂತರ ಕರ್ಣನು ಆದಕ್ಕೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದ. ಪ್ರದಕ್ಷಿಣೆ ಹಾಕಿ ಏಕಾಗ್ರತೆಯಿಂದ ಸೂರ್ಯದೇವನಿಗೆ ವಂದನೆಗಳನ್ನು ಸಲ್ಲಿಸಿದ. ಅನಂತರ ಶಲ್ಯರಾಜನಿಗೆ ಹೇಳಿದ,

"ಶಲ್ಯರಾಜ, ತಾವು ಮೊದಲು ರಥಾರೂಢರಾಗಬೇಕು"

ಶಲ್ಯನು ಒಂದು ಸಲ ದುರ್ಯೋಧನನನ್ನು ನೋಡಿದ. ಆಗ ದುರ್ಯೋಧನನು,

"ಹೇ ಮಾದ್ರೇಶಾ, ಕರ್ಣನ ಈ ದಿವ್ಯ ರಥದ ಸಾರಥ್ಯ ಕರ್ಮವನ್ನು ನೀನು ವಹಿಸಿಕೋ, ನಿನ್ನ ಬೆಂಬಲದಿಂದ ಕರ್ಣನು ಧನಂಜಯನನ್ನು ಸುಲಭವಾಗಿ ಗೆಲ್ಲುತ್ತಾನೆ" ಎಂದ.

ದುರ್ಯೋಧನನ ಹೇಳಿಕೆಯಂತೆ ಶಲ್ಯರಾಜನು ರಥಾರೂಢನಾದ. ಅನಂತರ ಕರ್ಣನು ರಥವನ್ನೇರಿದ. ಲಗಾಮುಗಳನ್ನು ಶಲ್ಯನು ಕೈಗೆತ್ತಿಕೊಂಡಾಗ ರಥವು ರಣಭೂಮಿಯತ್ತ ಓಡಲಾರಂಭಿಸಿತು. ಸುಮ್ಮನೇ ಇರುವ ಕರ್ಣನನ್ನು ಕಂಡು ಶಲ್ಯರಾಜನು,

"ಹೇ ಸೂತಪುತ್ರ, ಯುದ್ಧದ ಕಲ್ಪನೆಯಿಂದ ನೀನು ಗಾಬರಿಯಾಗಿಲ್ಲವಷ್ಟೇ ? ಸೂರ್ಯೋದಯವಾಗಲು ಇನ್ನೂ ಕಾಲಾವಧಿ ಇದೆ. ಆ ಕಾಲಾವಧಿ

ಯೊಳಗಾಗಿ ನಿನ್ನ ನಿರ್ಣಯವು ಬದಲಾದಲ್ಲಿ ನನಗೆ ತಿಳಿಸು. ನಾನು ಆನಂದ ದಿಂದ ನಿನ್ನನ್ನು ಶಿಬಿರಕ್ಕೆ ತಲುಪಿಸುವೆ, ಅದರಲ್ಲಿಯೇ ನಿನ್ನ ಹಿತವಿದೆ."

ಸಂಯಮಿಯಾದ ಕರ್ಣನು ಹೇಳಿದ.

"ಶಲ್ಯರಾಜ, ಇಂದು ಯುದ್ಧಭೂಮಿಯಲ್ಲಿ ನನ್ನ ಧನುಸ್ಸಿಗೆ ಯಾವಾಗ ಹೆದೆಯೇರಿಸುವೆನೋ ಆಗ ನಿಮಗೆ ನನ್ನ ಶೌರ್ಯ, ಪ್ರತಾಪಗಳ ಅರಿವಾ ಗುವುದು. ನನ್ನ ದರ್ಶನಮಾತ್ರದಿಂದ ಪಾಂಡವರು ಭಯಭೀತರಾಗುವ ದನ್ನು ನೀವೇ ಕಾಣುವಿರಿ, ಅಲ್ಲಿಯವರೆಗೆ ಸ್ವಲ್ಪ ಸಮಾಧಾನವನ್ನು ತಂದು ಕೊಳ್ಳಿರಿ."

ಆತನ ಮಾತಿನಿಂದ ಶಲ್ಯನಿಗೆ ಯಾವ ಪರಿಣಾಮವೂ ಆಗಲಿಲ್ಲ. ಅವನು ದೊಡ್ಡ ಧ್ವನಿಯಿಂದ ನಗಲಾರಂಭಿಸಿದ. ಅದನ್ನು ಕೇಳಿದ ಕರ್ಣನು,

"ಈಗ ನಗುವಂಥದೇನಾಗಿದೆ ? ನನ್ನ ಪರಾಕ್ರಮವನ್ನು ಸಿದ್ಧಪಡಿಸು ವದಕ್ಕಾಗಿಯೇ ಈ ತೋಳುಗಳು ಹಾತೊರೆಯುತ್ತಲಿವೆ."

"ರಾಧೇಯಾ, ಸಿಂಹ ಹಾಗೂ ನರಿಗಳು ಎದಿರು ಬದಿರಾದಾಗ ನರಿಯು ಜೀವಂತವಾಗಿ ಉಳಿದುದನ್ನು ನಾನು ಎಂದೂ ಕೇಳಿಲ್ಲ. ಮಹಾ ಧನುರ್ಧರ ನಾದ ಅರ್ಜುನನು ಎದುರಾಗುವವರೆಗೂ ಈ ಅವಹೇಳನ ನಿಲ್ಲಲಾರದು."

"ಶಲ್ಯರಾಜ, ನೀವು ನನ್ನ ಸಾರಥಿಯಾಗಿರುವಿ."

"ಸಾರಥ್ಯಕಾರ್ಯವನ್ನಂತೂ ನಾನು ಮಾಡುತ್ತಲೇ ಇರುವೆ."

"ಹಾಗೆಯೇ ಇನ್ನೊಬ್ಬರ ಅವಮಾನವನ್ನೂ ಸಹ ಮುಂದುವರಿ ಸಿರುವಿರಿ."

ಉದ್ವಿಗ್ನ ಮನಸ್ಸಿನಿಂದ ಈ ಮಾತನ್ನು ನಕ್ಕು ಹೇಳಿದ ಕರ್ಣನು.

"ತಾವು ಮಾದ್ರದೇಶದ ಪ್ರಭುಗಳಲ್ಲವೆ ? ಆ ದೇಶದ ಕೀರ್ತಿಗನು ಗುಣವಾಗಿಯೇ ತಾವು ಹೀಗೆ ನುಡಿಯುತ್ತಲಿದ್ದೀರಿ. ಯಾವ ದೇಶದಲ್ಲಿ ವ್ಯಸನವನ್ನೇ ಪ್ರಧಾನ ಜೀವನವೆಂದು ಗಣಿಸುತ್ತಾರೆಯೋ, ಅನೀತಿಯನ್ನೇ ನೀತಿ ಎಂದು ನಂಬುತ್ತಾರೆಯೋ, ಪಾಪದ ಆಚರಣೆಗಳನ್ನೇ ಪುಣ್ಯವೆಂದು ಭಾವಿಸುತ್ತಾರೆಯೋ, ಅ ಮಾದ್ರದೇಶದ ಪುತ್ರರು ತಾವಾಗಿರುವಿರಿ. ಆದುದ ರಿಂದ ತಮ್ಮಂಥವರಿಂದ ಒಳ್ಳೆಯ ಮಾತು, ಒಳ್ಳೆಯ ನಡತೆಗಳನ್ನು ಅಪೇಕ್ಷಿ ಸುವುದೇ ಮೂರ್ಖತನವೆಂದೆನ್ನಿಸುವುದು."

"ಹಾಗೇನಿಲ್ಲ, ಕೆಲವು ಸಂದರ್ಭಗಳಲ್ಲಿ ನಾನು ಒಳ್ಳೆಯ ಹಿತವಚನಗಳನ್ನೂ ಹೇಳಬಲ್ಲೆ."

"ಒಂದು ಸಮುದ್ರ ತೀರದಲ್ಲಿ ಸಂಪನ್ನನಾದ ವೈಶ್ಯನೊಬ್ಬ ಇರುತ್ತಿದ್ದ........"

"ಶಲ್ಯರಾಜ, ನನಗೆ ಕಥೆ ಕೇಳಬೇಕಾಗಿಲ್ಲ ರಥವನ್ನು ಮುಂದೋಡಿಸಿರಿ"

"ರಥವಂತೂ ಸರಿಯಾಗಿಯೇ ಓಡುತ್ತಲಿದೆ, ಅದರ ಚಿಂತೆ ಬಿಡು. ಆದರೆ ನಾನು ಹೇಳುತ್ತಿರುವ ಈ ಕಥೆಯನ್ನಾದರೂ ಕೇಳಬಾರದೆ?" ಶಲ್ಯರಾಜನು ಕಥೆಯನ್ನು ಮುಂದುವರೆಸುತ್ತ "ಆ ವೈಶ್ಯನ ಮನೆಯ ಸಮೀಪದಲ್ಲಿಯೇ ಒಂದು ಮರವಿತ್ತು, ಆ ಮರದಲ್ಲಿ ಕಾಗೆಯೊಂದು ವಾಸಿಸುತ್ತಿತ್ತು. ವೈಶ್ಯನ ಮನೆಯ ಅನ್ನವನ್ನುಂಡು ಅದು ತುಂಬ ಕೊಬ್ಬಿಹೋಗಿತ್ತು. ಒಂದು ದಿನ ಮಾನಸ ಸರೋವರಕ್ಕೆಂದು ಹೊರಟ ಹಂಸಪಕ್ಷಿಯು ಆ ವೃಕ್ಷದಲ್ಲಿ ವಿಶ್ರಾಂತಿಗಾಗಿ ಬಂದು ಕುಳಿತುಕೊಂಡಿತು. ಆ ಹಂಸವನ್ನು ಕಂಡ ವೈಶ್ಯಪುತ್ರನು ತನ್ನ ಕಾಗೆಯನ್ನು ಕುರಿತು ಹೀಗೆ ಹೇಳಿದ."

"ಅಬ್ಬಾ, ಈ ಹಂಸಪಕ್ಷಿಗಿಂತ ನೀನೇ ನಮಗೆ ಶ್ರೇಷ್ಠನೆಂದು ತೋರುವಿ."

ಪಕ್ವಾನ್ನಗಳನ್ನೇ ತಿಂದು ಬದುಕಿ ಬೆಳೆದ ಆ ಕಾಗೆಯು ವೈಶ್ಯಪುತ್ರನ ಆ ಮಾತನ್ನು ನಿಜವೆಂದು ನಂಬಿತು. ತನ್ನೊಡನೆ ಉಡ್ಡಾಣ ಮಾಡುವಂತೆ ಗಿಡದಲ್ಲಿ ಕುಳಿತುಕೊಂಡಿದ್ದ ಹಂಸಪಕ್ಷಿಯನ್ನು ಪ್ರಚೋದಿಸಿತು. ಆ ಕಾಗೆಯ ಮಾತನ್ನು ಕೇಳಿದಾಗ ಹಂಸಪಕ್ಷಿಗೆ ವಿನೋದವೆನಿಸಿದರೂ ಸಹ ಅದು,

"ಹೌದು, ನಿಜವಾಗಿಯೂ ನೀನು ಮಹಾಶ್ರೇಷ್ಠ, ಈ ಮಾತನ್ನು ನಾನೂ ಒಪ್ಪಿಕೊಳ್ಳುವೆ."

ಈ ಮಾತಿನಿಂದ ಕಾಗೆಗೆ ಸಮಾಧಾನವಾಗಲಿಲ್ಲ. ಅದು ಉಡ್ಡಾಣದಿಂದಲೇ ಶ್ರೇಷ್ಠತ್ವ ಹಾಗೂ ಕನಿಷ್ಠತ್ವಗಳ ನಿರ್ಣಯವಾಗಬೇಕೆಂದು ಹಟ ಮಾಡತೊಡಗಿತು."

"ಕಾಗೆಯ ಮೂರ್ಖತನಕ್ಕಾಗಿ ಹಳಹಳಿಸಿದ ಹಂಸಪಕ್ಷಿಯು ತನ್ನ ಗರಿಗೆದರಿಕೊಂಡು ಆಕಾಶದತ್ತ ಉಡ್ಡಾಣ ಮಾಡಿತು, ಕಾಗೆಯೂ ಆ ಹಂಸಪಕ್ಷಿಗೆ ಉಡ್ಡಾಣದ ನಾನಾ ತರಹದ ವೈಖರಿಗಳನ್ನು ಪ್ರದರ್ಶಿಸುತ್ತ ಹಾರ

ಲಾರಂಭಿಸಿತು. ಆದರೆ ಹಂಸಪಕ್ಷಿಯು ಮಾತ್ರ ರಾಜಗಾಂಭೀರ್ಯದಿಂದ ಒಂದೇ ತೆರನಾಗಿ ಹಾರುತ್ತಲಿತ್ತು. ಸ್ವಲ್ಪ ಸಮಯ ಕಳೆಯುವುದರೊಳಗಾಗಿ ಮಾರ್ಗ ಮಧ್ಯದಲ್ಲಿ ಸಮುದ್ರವು ಕಾಣಿಸಿತು. ಆದರೆ ಅದರ ದಂಡೆಯು ಮಾತ್ರ ಕಾಣಿಸುತ್ತಿರಲಿಲ್ಲ. ಕಾಗೆಯ ರೆಕ್ಕೆಗಳ ಶಕ್ತಿಯು ಕಡಿಮೆಯಾಗಲಾರಂಭಿಸಿತು. ಅಪಾರವಾದ ಆ ಜಲರಾಶಿಯನ್ನು ಕಂಡು ಅದು ಗಾಬರಿಗೊಂಡಿತು. ಕೊನೆ ಕೊನೆಗಂತೂ ಅದು ನೀರಿನ ಸಮೀಪಕ್ಕೆ ಹಾರುತ್ತಾ, ತನ್ನ ದಣಿದ ರೆಕ್ಕೆಗಳನ್ನು ನೀರಿಗೆ ಬಡಿಯಲಾರಂಭಿಸಿತು. ಅದನ್ನು ಕಂಡ ಹಂಸಪಕ್ಷಿಯು ಆ ಕಾಗೆಯನ್ನು ಕುರಿತು,

"ಕಾಗೆಯೇ, ನೀನು ಬಗೆಬಗೆಯ ಹಾರಾಟವನ್ನು ತೋರಿಸಿದಿ. ಆದರೆ ಅದರ ಹೆಸರನ್ನು ಮಾತ್ರಹೇಳಲಿಲ್ಲ. ಹೀಗೆ ನೀರಿಗೆ ರೆಕ್ಕೆ ತಾಕುವಂತೆ ಹಾರುವುದು ಅಲೌಕಿಕವೆಂದೆನಿಸುವದು. ಆದರೂ ಇರಲಿ, ಹೀಗೆ ಹಾರುವುದನ್ನು ಏನೆಂದು ಕರೆಯುತ್ತಾರೆ ಹೇಳಬಲ್ಲೆಯಾ ?"

"ಇದನ್ನು ಉಡ್ಡಾಣವೆಂದು ಕರೆಯುವುದಿಲ್ಲ, ಇದು ನನ್ನ ದೈವವೆಂದೆನಿಸಿಕೊಳ್ಳುತ್ತದೆ. ನನ್ನ ಮೃತ್ಯುವೇ ನನ್ನ ಪಾಪದ ಪ್ರಾಯಶ್ಚಿತ್ತವನ್ನು ಮಾಡಿಸುತ್ತಿದೆ."

"ಕಾಗೆಯ ಸ್ಥಿತಿಯನ್ನು ಕಂಡು ಹಂಸವು ಮರುಗಿತು. ಅದು ರೆಕ್ಕೆಯಲ್ಲಿ ಕಾಗೆಯನ್ನು ಹಿಡಿದುಕೊಂಡು ನಿರಾಯಾಸವಾಗಿ ಹಾರುತ್ತ ಮರಳಿ ಬಂದು ಕಾಗೆ ಯಾವ ಗಿಡದಲ್ಲಿತ್ತೋ ಅಲ್ಲಿಯೇ ಅದನ್ನು ತಂದಿರಿಸಿತು."

ಈ ಕಥೆಯನ್ನು ವಿವರಿಸಿ ಹೇಳಿದ ಶಲ್ಯರಾಜನು ಕರ್ಣನಿಗೆ "ನೀನೂ ಆ ಕಾಗೆಯಂತೆ ಕೌರವರ ಅನ್ನದಿಂದ ಬದುಕಿದವನು. ಆದುದರಿಂದಲೇ ನಿನಗೆ ಈ ಕಥೆಯನ್ನು ಹೇಳಬೇಕೆನಿಸಿತು."

"ಶಲ್ಯರಾಜ, ನಿಜವಾದ ಹಂಸಪಕ್ಷಿಯು ಮುಳುಗುತ್ತಿರುವ ಕಾಗೆಯನ್ನುಳಿಸುತ್ತದೆ. ಇನ್ನು ತಾವು ಹೇಳಿದಂತೆ ನಾನು ಕಾಗೆಯಾಗಿರಬಹುದು. ಆದರೆ ಮುಳುಗುತ್ತಿರುವವರನ್ನು ಮೇಲೆತ್ತಿ ಹಾರುವಂಥ ಹಂಸವನ್ನು ಮಾತ್ರ ನಾನು ಕಾಣದಂತಾಗಿರುವೆ."

ಕರ್ಣನ ರಥವು ರಣಭೂಮಿಯನ್ನು ತಲುಪಿದಾಗ ವೃಷಸೇನ ಹಾಗೂ ಚಕ್ರಧರ ಇಬ್ಬರೂ ಆತನಿಗೆ ಸ್ವಾಗತವನ್ನಿತ್ತರು. ಕರ್ಣನ ಆಶೀರ್ವಾದವನ್ನು

ಪಡೆದ ವೃಷಸೇನನು ಚಕ್ರಧರನನ್ನು ಕೂಡಿಕೊಂಡು ತನ್ನ ಸೇನೆಯೊಂದಿಗೆ ಯುದ್ಧಮಾಡಲು ಹೊರಟುಬಿಟ್ಟ. ಪೂರ್ವ ದಿಂಗಂತವೆಲ್ಲ ಬೆಳಕಾಗಿತ್ತು. ಕರ್ಣನು ಅಂದಿನ ಸೇನಾ ವೀಕ್ಷಣೆಯನ್ನು ಮಾಡಿದ. ಅದೇ ಸಮಯಕ್ಕೆ ಸರಿಯಾಗಿ ದುರ್ಯೋಧನನೂ ಆ ಸ್ಥಳಕ್ಕೆ ಬಂದು ತಲುಪಿದ. ಸೂರ್ಯೋದಯದೊಂದಿಗೆ ಕರ್ಣನ ಯುದ್ಧವು ಆರಂಭವಾಯಿತು. ಆತನು ತನ್ನ ಸೇನೆಯನ್ನು ಹುರಿದುಂಬಿಸುತ್ತ ಪರಾಕ್ರಮವನ್ನೆಸಗುತ್ತಲಿದ್ದ. ರಣರಂಗದಲ್ಲಿ ಆತನ ರಥವು ಸಂಚರಿಸುತ್ತಲಿತ್ತು. ಪ್ರತ್ಯಕ್ಷ ಸೂರ್ಯದೇವನೇ ಭೂಮಿಗಿಳಿದಿರುವಂತೆ ಭಾಸವಾಗುತ್ತಿತ್ತು.

ಆಕಸ್ಮಿಕವಾಗಿ ಶಲ್ಯರಾಜನು ರಥವನ್ನೋಡಿಸತೊಡಗಿದ. ರಥವು ನಾಗಾಲೋಟದಿಂದ ಓಡುತ್ತಲಿತ್ತು. ಶಲ್ಯರಾಜನ ಅಭಿಪ್ರಾಯವೇನಿರಬೇಕೆಂದು ಯೋಚಿಸುವಷ್ಟರಲ್ಲಿಯೇ ಕರ್ಣನಿಗೆ ಯುಧಿಷ್ಠಿರನ ರಥವು ಕಾಣಿಸಿತು ಕರ್ಣನ ರಥವು ಯುಧಿಷ್ಠಿರನ ರಥದ ಎದುರಾಗಿ ಬಂದು ನಿಂತಿತು. ಆಗ ಶಲ್ಯರಾಜನು,

"ಕರ್ಣ, ನೋಡು ಪಾಂಡವ ಜ್ಯೇಷ್ಠ ಕೌಂತೇಯ...."

ಅವನು ಪ್ರಥಮ ಪಾಂಡವ! ಜ್ಯೇಷ್ಠ ಕೌಂತೇಯ....ಹಾಗಾದರೆ ನಾನು ?

"ಶಲ್ಯರಾಜ ರಥವನ್ನು ಹಿಂತಿರುಗಿಸಿರಿ. ಈತನೊಂದಿಗೆ ಯುದ್ಧ ಮಾಡುವ ಅಪೇಕ್ಷೆಯು ನನಗಿಲ್ಲ. ನನಗೆ ಬೇಕಾಗಿರುವುದು ಕೇವಲ ಅರ್ಜುನ."

"ರಾಧೇಯ, ಆ ಯುಧಿಷ್ಠಿರನನ್ನು ನೋಡಿ...."

ಶಲ್ಯರಾಜನಿಗೆ ಮುಂದೆ ಮಾತನಾಡುವ ಅಗತ್ಯವೆನಿಸಲಿಲ್ಲ. ಒಂದು ಬಾಣವು ಅತೀ ವೇಗದಿಂದ ಕರ್ಣನ ಪಕ್ಕದಲ್ಲಿಯೇ ಹಾದುಹೋಯಿತು. ಸಂತಾಪಗೊಂಡು ನೋಡಿದಾಗ ಯುಧಿಷ್ಠಿರನು ಇನ್ನೊಂದು ಬಾಣವನ್ನು ಜೋಡಿಸುವುದು ಕಾಣಿಸಿತು. ಕರ್ಣನು ತನ್ನತ್ತ ದೃಷ್ಟಿ ಹಾಯಿಸಿದುದನ್ನು ಕಂಡ ಯುಧಿಷ್ಠಿರನು,

"ಸೂತಪುತ್ರನಾದ ಕರ್ಣನೇ ! ನಾನು ನಿನ್ನನ್ನು ಹುಡುಕುತ್ತಲಿದ್ದೆ. ಇಂದು ನಿನ್ನನ್ನು ಸಂಹಾರ ಮಾಡಿ ನಿನ್ನ ಯುದ್ಧ ದಾಹವನ್ನು ಕೊನೆಗೊಳಿಸುವೆ. ಅದುದರಿಂದ ಯುದ್ಧಕ್ಕೆ ಸಿದ್ಧನಾಗು."

ಯುಧಿಷ್ಠಿರನು ಬಿಟ್ಟ ಬಾಣಗಳನ್ನೆಲ್ಲ ಕರ್ಣನು ನಿರಾಯಾಸವಾಗಿ ಕತ್ತರಿಸಿ ಹಾಕುತ್ತಲಿದ್ದ. ಬಹು ಹೊತ್ತಿನವರೆಗೆ ಒಬ್ಬರನ್ನೊಬ್ಬರು ಸೋಲಿಸಲು ಪ್ರಯತ್ನಿಸಿದರು. ಕೊನೆಗೊಮ್ಮೆ ಕರ್ಣನಿಂದ ಯುಧಿಷ್ಠಿರನ ಧನಸ್ಸು ಮುರಿದು ಬಿದ್ದಿತು. ಅವನ ಅಂಗರಕ್ಷಕ ದಲವೆಲ್ಲ ನಾಶವಾಯಿತು. ಸಾರಥಿಯೂ ಮರಣವನ್ನಪ್ಪಿದ. ಕೊನೆಗೆ ಯುಧಿಷ್ಠಿರನ ರಥವೂ ಸಹ ಗಾಳಿಪಟವಾಗಿ ಹೋಯಿತು. ಕರ್ಣನ ಪರಾಕ್ರಮವನ್ನು ಕಂಡು ಹೆದರಿದ ಯುಧಿಷ್ಠಿರನು ಬೇರೊಂದು ರಥವನ್ನು ಹತ್ತಿ ಓಡುತ್ತಿರುವುದನ್ನು ಕಂಡ ಕರ್ಣನು ಅವಸರದಿಂದ ಆ ರಥದ ಮೇಲೆಯೂ ದಾಳಿಯನ್ನಾರಂಭಿಸಿದ. ಕೊನೆಗೊಮ್ಮೆ ಯುಧಿಷ್ಠಿರನನ್ನು ಸಮೀಪಿಸಿ ಆತನ ಹೆಗಲ ಮೇಲೆ ಕೈಯಿಟ್ಟು ಹೇಳಿದ,

"ಯುಧಿಷ್ಠಿರನೇ ! ನಿಶ್ಚಿಂತ ಮನಸ್ಸಿನಿಂದ ಮರಳಿ ಹೋಗು. ಇದು ಯುದ್ಧಭೂಮಿ. ದ್ಯೂತದ ಪಟವಲ್ಲ. ದ್ಯೂತದ ಪಟದಷ್ಟು ಯುದ್ಧ ಭೂಮಿಯು ಸುಲಭವೆಂದು ತಿಳಿಯಬೇಡ. ಯುದ್ಧಭೂಮಿಯ ಮೇಲೆ ಪುನಃ ಕಾಲಿಡಬೇಡ. ಒಂದು ವೇಳೆ ಈ ಯುದ್ಧಭೂಮಿಯಲ್ಲಿ ಕಾಲಿಟ್ಟರೂ ನನ್ನ ಮಾತ್ರ ಸುಳಿಯಬೇಡ."

ಕರ್ಣನು ಅತ್ಯಂತ ಗಂಭೀರ ಭಾವದಿಂದ ಬಂದು ಪುನಃ ತನ್ನ ರಥ ವನ್ನೇರಿದ. ಕರ್ಣನ ಪರಾಕ್ರಮವನ್ನು ಕಂಡು ಮೋಹಿತನಾದ ಶಲ್ಯರಾಜನು,

"ಕರ್ಣಾ, ಯುಧಿಷ್ಠಿರನನ್ನು ಬಿಟ್ಟಿದ್ದೇ ಒಳ್ಳೆಯದಾಯಿತು. ಎಂದೂ ಆತನನ್ನು ನೀನು ಬಿಡಲಾರೆ ಎಂದು ತಿಳಿದುಕೊಂಡಿದ್ದೆ."

"ಶಲ್ಯರಾಜ, ನಾನು ಕಾಗೆಯಲ್ಲ, ರಾಜಹಂಸನಿರುವೆ. ನನಗೆ ಈಗ ಅರ್ಜುನನ ರಥವನ್ನೆದುರಿಸಬೇಕಾಗಿದೆ. ಆತನೊಂದಿಗೆ ಯುದ್ಧಮಾಡಲು ಮನವು ಹಾತೊರೆಯುತ್ತಿದೆ."

ಮಧ್ಯಾಹ್ನವು ಕಳೆದು ಹೋದರೂ ರಣರಂಗವು ಯಥಾರೀತಿಯಲ್ಲಿ ಮುಂದುವರೆದಿತ್ತು. ಕರ್ಣನ ಪರಾಕ್ರಮದಿಂದಾಗಿ ಪಾಂಡವ ಸೇನೆಯು ಗಾಬರಿಗೊಂಡಿತ್ತು. ಆದರೂ ಯುದ್ಧದ ನಿರ್ಣಯವನ್ನು ನಿರ್ಧರಿಸುವುದು ಮಾತ್ರ ಬಹು ಕಠಿಣವೆಂದೆನಿಸುತ್ತಿತ್ತು. ಅಸಂಖ್ಯಾತವಾದ ಪ್ರೇತಗಳ ರಾಶಿಯು ಬಿದ್ದಿರುವಾಗ ಅದರ ಮಧ್ಯದಲ್ಲೇ ಯುದ್ಧವು ಮುಂದುವರಿದಿತ್ತು.

ರಥಗಳ ಓಡಾಟ, ಬಾಣಗಳ ಶಬ್ದ. ಇವುಗಳಿಂದ ಕಿವಿ ಗಡಚಿಟ್ಟು ಕೊಂಡಿದ್ದವು. ಆನೆಗಳ ಕಾಲು ತುಳಿತದಿಂದ ಕುರುಕ್ಷೇತ್ರದ ನೆಲವೇ ಕುಸಿದು ಹೋಗುತ್ತಿರು-ವಂತೆ ಭಾಸವಾಗುತ್ತಿತ್ತು. ಕಪಿಧ್ವಜಾಂತವಾದ ಅರ್ಜುನನ ರಥವನ್ನು ಹುಡುಕುತ್ತ ಕರ್ಣನ ರಥವು ಸಂಚರಿಸುತ್ತಲಿತ್ತು. ನಡು ಮಧ್ಯಾಹ್ನವು ಗತಿಸಿ ಹೋಗಿತ್ತು. ಗದಾಂಕಿತವಾದ ಭೀಮನ ರಥವು ಭಾವಿಸಿ ಬರುತ್ತಿರುವುದು ಕಾಣಿಸಿತು. ಅದನ್ನು ಕಂಡೊಡನೆ ಕರ್ಣನು ಶಲ್ಯರಾಜನಿಗೆ ಹೇಳಿದ,

"ಶಲ್ಯರಾಜಾ ಭೀಮನು ಬಲುಸೊಕ್ಕಿಸಿಂದ ಬರುತ್ತಿದ್ದಾನೆ. ನಮ್ಮ ರಥ ವನ್ನು ಬದಿಗೆ ತೆಗೆದುಕೊಳ್ಳಿರಿ."

"ಭೀಮನ ಮುಂದೆ ನಿನ್ನ ಆಟವು ನಡೆಯಲಾರದೆಂದೋ ?

"ನಾನು ಅರ್ಜುನನನ್ನು ಎದುರಿಸಬೇಕಾಗಿದೆ."

"ಅವನ ಹೆಸರನ್ನೇಕೆ ಉಚ್ಚರಿಸುವೆ. ಭೀಮನ ರಥವನ್ನು ನೋಡಿದಾಗಲೇ ಇಷ್ಟೊಂದು ಹೆದರುವವನು ಅರ್ಜುನನ ಹೆಸರನ್ನೇಕೆ ತೆಗೆದುಕೊಳ್ಳುವೆ ?

"ಒಂದು ಕ್ಷಣ ನಿಮ್ಮ ಮಾತೇ ಸತ್ಯವೆಂದು ನಂಬಿರಿ. ನಂತರ ತಾವು ನನ್ನ ರಥದ ಸಾರಥ್ಯ ಕರ್ಮವನ್ನು ಮಾಡುತ್ತಿರುವಿರಿ ಎಂಬುದನ್ನೂ ಮರೆಯ ಬೇಡಿರಿ. ಈಗಂತೂ ರಥವನ್ನು ಪಕ್ಕಕ್ಕೆ ತೆಗೆದುಕೊಳ್ಳಿರಿ.

ಶಲ್ಯರಾಜನು ರಥವನ್ನು ಪಕ್ಕಕ್ಕೆ ಸರಿಸಿಕೊಂಡ. ಕರ್ಣನ ರಥವು ತನ್ನ ದಿಕ್ಕನ್ನು ಬದಲಾಯಿಸಿದುದನ್ನು ಕಂಡ ಭೀಮನು ತನ್ನ ಸಾರಥಿಯನ್ನು ಎಚ್ಚರಿಸಿದ. ಆಗ ಭೀಮನ ರಥವು ಮತ್ತಷ್ಟು ವೇಗದಿಂದ ಧಾವಿಸತೊಡಗಿತು. ಸ್ವಲ್ಪಹೊತ್ತಿನಲ್ಲಿಯೇ ಆ ರಥವು ಕರ್ಣನ ರಥಕ್ಕೆ ಅಡ್ಡ ಬಂದು ನಿಂತುಕೊಂಡಿತು ಆಗ ಭೀಮನು ಆರ್ಭಟಿಸಿದ,

"ಕರ್ಣಾ, ಹೆದರಿಕೊಂಡು ಓಡಿಹೋಗುತ್ತಿರುವೆಯಾ? ನೀನು ಕೌರವರ ಸೇನಾಪತಿಯಲ್ಲವೆ ?"

ಅಂಥ ಪ್ರಸಂಗದಲ್ಲಿಯೂ ಕರ್ಣನು ದೀರ್ಘಶ್ವಾಸವನ್ನು ಬಿಟ್ಟು ಭೀಮ ನನ್ನೇ ತದೇಕ ಚಿತ್ತದಿಂದ ನೋಡುತ್ತಲಿದ್ದ. ಆತನ ಬಾಹುಗಳು ಸ್ಫುರಣ ಗೊಳ್ಳುತ್ತಿದ್ದವು. ವೀರಶ್ರೀಯು ಭೀಮನಿಗೆ ನೂರುಪಟ್ಟು ಕಾಂತಿಯನ್ನುಂಟು ಮಾಡಿತ್ತು. ಶಕ್ತಿಶಾಲಿಯಾದ ಭೀಮನನ್ನು ಕಂಡು ಆತನ ನೇತ್ರಗಳು ತೃಪ್ತಿ ಗೊಂಡವು. ಆತನ ಕವಚದ ಮೇಲೆ ಕಣ್ಣೀರಿನ ಹನಿಗಳು ಕಾಣುವಂತಾದವು.

ಭೀಮನ ಕೆಂಡದಂತಹ ನೇತ್ರಗಳು ದಟ್ಟಡವಿಯಲ್ಲಿ ವಾಸಿಸುತ್ತಿರುವ ಮದೋನ್ಮತ್ತವಾದ ಗಜವು ತನಗೆದುರಾದ ಮರಗಳನ್ನು ತುಂಡರಿಸಿ ಚೆಲ್ಲಿ ಮುಂದಡಿಯನ್ನಿಡುತ್ತ ಸಾಗಿದಂತೆ ಭೀಮನು ಇಡೀ ರಣಾಂಗಣವನ್ನೆಲ್ಲ ವ್ಯಾಪಿಸಿದ್ದ.

ದ್ರೌಪದಿಯ ವಸ್ತ್ರಾಪಹರಣದ ಕಾಲದಲ್ಲಿ ಪ್ರತಿಜ್ಞಾಬದ್ಧನಾದ ಪಾಂಡವರಲ್ಲಿ ಈತನು ಅಗ್ರಗಣ್ಯ. ಆ ದ್ರೌಪದಿಯ ಶೀಲವನ್ನು ರಕ್ಷಿಸುವುದಕ್ಕಾಗಿಯೇ ಬಲಭೀಮನು ಕೀಚಕನನ್ನು ಸಂಹಾರ ಮಾಡಿದ. ಭೀಮನ ದರ್ಶನವೆಂದರೆ ಸಾಕ್ಷಾತ್ ಪುರುಷಾರ್ಥ ದರ್ಶನದ ಲಾಭನಾದಂತೆ ಎಂದು ಕರ್ಣನು ವಿಚಾರ ಮಾಡುತ್ತಲಿದ್ದ.

ಕಿವಿಯ ಪಕ್ಕದಲ್ಲಿ ವೇಗವಾಗಿ ಹರಿದು ಹೋದ ಬಾಣದ ಶಬ್ಧದಿಂದಾಗಿ ಕರ್ಣನು ಎಚ್ಚರಗೊಂಡ. ಭೀಮನು ಬಾಣದ ಮಳೆಗರೆಯಲಾರಂಭಿಸಿದ್ದ. ಅದನ್ನು ಗಮನಿಸಿದ ಕರ್ಣನು ತನ್ನ ಬಾಣವನ್ನು ಹೂಡಲು ಬತ್ತಳಿಕೆಗೆ ಕೈ ಹಾಕಿದ. ಕರ್ಣ ಹಾಗೂ ಭೀಮ ಇಬ್ಬರೂ ತಮ್ಮ ಪ್ರಾಣದ ಮೇಲಿನ ಚಿಂತೆಯನ್ನು ಬಿಟ್ಟು ಹೋರಾಡಲಾರಂಭಿಸಿದರು. ಸಾಕ್ಷಾತ್ ಅಗ್ನಿ ಹಾಗೂ ಸೂರ್ಯ ರಣಭೂಮಿಯಲ್ಲಿ ಕಾದಾಡುತ್ತಿರುವಂತೆ ತೋರತೊಡಗಿತು. ಕೇವಲ ಪ್ರತೀಕಾರ ನಿಮಿತ್ತದಿಂದ ಕರ್ಣನು ತನ್ನ ಬಾಣಪ್ರಯೋಗವನ್ನು ಕೈಕೊಂಡಿದ್ದ ಆದರೆ ಭೀಮನು ಮಾತ್ರ ಸೇಡಿನಿಂದ ಯುದ್ಧನಿರತನಾಗಿದ್ದ. ಭೀಮನ ಪ್ರಹಾರಗಳಿಂದಾಗಿ ಕರ್ಣನು ಆಯಾಸಗೊಳ್ಳುತ್ತಲಿದ್ದ. ಭೀಮನನ್ನು ಹೇಗೆ ಮರಳಿ ಕಳಿಸಬೇಕೆಂಬುದೇ ಆತನಿಗೆ ತೋಚದಂತಾಗಿತು. ಕರ್ಣನು ಶಕ್ತಿಗುಂದುತ್ತಲಿದ್ದಾನೆಂಬ ಅರಿವಾದೊಡನೆ ಭೀಮನು ಅಧಿಕೋತ್ಸಾಹದಿಂದ ಯುದ್ಧಮಾಡತೊಡಗಿದ. ಆತನ ಒಂದು ಬಾಣವಂತೂ ಕರ್ಣನ ಹೆಗಲನ್ನೇ ಗಾಸಿಮಾಡಿತು. ಆಗ ಕರ್ಣನು ರಥದ ಕಂಬವನ್ನಾಶ್ರಯಿಸುವಂತಾಯಿತು. ಅದನ್ನು ಕಂಡು ಗಾಬರಿಯಾದ ಶಲ್ಯನು.

"ಕರ್ಣಾ, ರಥವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೇ ?"

ತನ್ನ ಎಡಗೈಯಿಂದ ನಟ್ಟ ಬಾಣವನ್ನು ಕಿತ್ತು ಕೊಳ್ಳುತ್ತ ಕರ್ಣನು ಹೇಳಿದ.

"ಬೇಡ, ಎಲ್ಲ ಅಪೇಕ್ಷೆಗಳೂ ಪೂರೈಸುವವೆಂವೇನೂ ಇಲ್ಲ, ಈ ಭೀಮನಿಂದಲೇ ಅದು ನಡೆಯುವಂತಿದ್ದರೆ ಹಾಗೆಯೇ ಆಗಲಿ "

ಕರ್ಣನು ಧನುಸ್ಸನ್ನೆತ್ತಿ ಪುನಃ ಯುದ್ಧನಿರತನಾದ. ಮಧ್ಯಾಹ್ನದ ಬಿಸಿಲು ರಣಭೂಮಿಯನ್ನೆಲ್ಲ ಕೆಂಡದಂತೆ ಮಾಡಿತ್ತು. ಅದೇ ಸಮಯದಲ್ಲಿ,

"ಮಿತ್ರಾಽಽ ಅಂಗರಾಜಾಽಽ........"

ಯುದ್ಧದ ಕೋಲಾಹಲ ಗಲಭೆಯನ್ನು ಸಹ ಮೀರಿಸಿ ಬಂದ ಆರ್ತಧ್ವನಿಯನ್ನು ಕೇಳಿ ಕರ್ಣನು ಹಿಂದಿರುಗಿ ನೋಡಿದ. ದೂರದಲ್ಲಿ ಚಕ್ರಧರನನು ಧಾವಿಸಿ ತನ್ನ ರಥವನ್ನೂ ಬಿಟ್ಟು ಓಡೋಡಿ ಬರುತ್ತಲಿದ್ದ. ಆಚಕ್ರಧರನ್ನು ಕಂಡೊಡನೆ ಕರ್ಣನು, " ಶಲ್ಯರಾಜ. ರಥವನ್ನು ಹೊರಳಿಸಿರಿ" ಎಂದ,

"ಅಪೇಕ್ಷೆಯು ತೀರಿತೇ ?

"ಶಲ್ಯರಾಜ, ನೀವು ನನ್ನ ಸಾರಥಿಯಾಗಿರುವಿರಿ. ನಾನು ನಿಮಗೆ ಸೇನಾಪತಿಯಾಗಿರುವೆ. ಮುನ್ನೋಡಿ ರಥವನ್ನು ಹೊರಳಿಸಿರಿ" ಕರ್ಣನ ಆ ಉಗ್ರತನವನ್ನು ಕಂಡು ಶಲ್ಯರಾಜನು ರಥವನ್ನು ಹೊರಳಿಸಿದ. ಅದನ್ನು ಕಂಡ ಭೀಮನು ನುಡಿದ:

"ಹೇಡಿ, ರಣಭೂಮಿಯಿಂದ ಓಡಿಹೋಗುತ್ತೀಯಾ ?"

ಕರ್ಣನು ಉದ್ವಿಗ್ನತೆಯಿಂದ ಅದಕ್ಕೆ ಉತ್ತರವನ್ನಿತ್ತ.

"ತಮ್ಮಂಥ ಮಹಾಯೋಧರ ಮುಂದೆ ಯಾರು ನಿಲ್ಲುತ್ತಾರೆ ?"

ಭೀಮನು ಅದಕ್ಕೆ ಏನು ಉತ್ತರ ಕೊಟ್ಟನೆಂಬುದೂ ಕರ್ಣನಿಗೆ ಕೇಳ ಬರಲಿಲ್ಲ. ಆತನ ರಥವು ಹಿಂದಿರುಗಿ ಓಡುತ್ತಲಿತ್ತು. ಚಕ್ರಧರನನ್ನು ಸಮೀಪಿದೊಡನೆ ರಥವನ್ನು ನಿಲ್ಲಿಸಿ ಕೆಳಗಿಳಿದು ಬಂದು ಚಕ್ರಧರನನ್ನ ಕೂಡಿದ. ಆತನ ಮುಖವು ವೇದನೆಯಿಂದ ಕೂಡಿದುದಾಗಿತ್ತು. ಅದನ್ನು ಗಮನಿಸಿದ ಕರ್ಣನು.

"ಮಿತ್ರಾಽಽ"

"ಅಂಗರಾಜಾ, ದುಶ್ಶಾಸನನ ವಧೆಯಾಯಿತು."

"ಯಾರು ವಧೆಮಾಡಿದರು ?

"ನೀನು ಯಾರೊಂದಿಗೆ ಯುದ್ಧನಿರತನಾಗಿದ್ದಿಯೋ ಆ ಭೀಮನೇ ದುಶ್ಶಾಸನನನ್ನು ಸಂಹಾರಮಾಡಿ ನಿನ್ನೊಡನೆ ಯುದ್ಧಕ್ಕೆ ಬಂದಿದ್ದ."

"ಇದನ್ನು ಹೇಳಲಿಕ್ಕಾಗಿಯೇ ಬಂದೆಯಾ ? ನಿನ್ನ ರಥವೆಲ್ಲಿದೆ ?"

"ಅಲ್ಲದೆ, ಮಿತ್ರಾ, ದುಶ್ಶಾಸನನ ವಧೆ ಬಹು ವಿಚಿತ್ರವಾಗಿ ನಡೆಯಿತು"

"ಹೇಳು."

"ದುಶ್ಶ್ಯಾಸನನನು ಭೀಮನ ಗದಾ ಪ್ರಹಾರದಿಂದ ನೆಲಕ್ಕುರುಳಿದ. ಆಗ ಭೀಮನು ಅವನತ್ತ ಸಾಗಿ ಅತ್ಯಂತ ವಿಚಲಿತ ಸ್ಥಿತಿಯಲ್ಲಿ ಬಿದ್ದುಕೊಂಡಿದ್ದ ಆ ದುಶ್ಶ್ಯಾಸನನನ್ನು ಹಿಡಿದು ಯಾವ ಕೈಯಿಂದ ನೀನು ದ್ರೌಪದಿಯ ವಸ್ತ್ರವನ್ನು ಹಿಡಿದೆ? ಎಂದು ಕೇಳಿದ. ಅಂಥ ಪರಿಸ್ಥಿತಿಯಲ್ಲಿಯೂ ದುಶ್ಶ್ಯಾಸನನು ತನ್ನ ಬಲಗೈಯನ್ನು ಎತ್ತಿ ತೋರಿಸಿ,

"ಭೀಮಾ, ಇದೇ ಕೈಯಿಂದ ಸಾವಿರಹಸುಗಳನ್ನು ದಾನ ಮಾಡಿದ್ದೇನೆ. ಇದೇ ನನ್ನ ಕೈ ಖಡ್ಗ ಧರಿಸಿದೆ. ರಮಣಿಯರ ವಕ್ಷಸ್ಥಳವನ್ನೂ ಸ್ಪರ್ಶಮಾಡಿದೆ. ಇದೇ ಕೈಯಿಂದಲೇ ನಾನು ತುಂಬಿದ ಸಭೆಯಲ್ಲಿ ನಿಮ್ಮೆಲ್ಲರ ಮುಂದೆ ಯಾಜ್ಞಸೇನಿಯ ತುರುಬನ್ನು ಹಿಡಿದೆಳೆದೆ. ಈ ಕೈ ಎಂದೂ ಪರಾನ್ನವನ್ನು ಮುಟ್ಟಿಲ್ಲ. ಇದು ಪವಿತ್ರವಾದ ವಿಜಯಹಸ್ತವೆನಿಸಿದೆ."

ದುಶ್ಶ್ಯಾಸನನ ಮಾತುಗಳಿಂದ ಮತ್ತಷ್ಟು ಕೋಪಗೊಂಡ ಭೀಮನು, ಆತನ ಎದೆಯ ಮೇಲೆ ಕಾಲಿಟ್ಟು ಮೇಲೆತ್ತಿದ ದುಶ್ಶ್ಯಾಸನನ ಕೈಯನ್ನು ತನ್ನ ಬಲದಿಂದ ಕಿತ್ತೆಸೆದು ಬಿಟ್ಟ. ಹಾಗೆಯೇ, ಆತನ ಎದೆಯ ಮೇಲೆ ಕುಳಿತು ಉಗುರುಗಳಿಂದ ವಕ್ಷಸ್ಥಲವನ್ನು ಸೀಳಿ ಎಲ್ಲರೂ ನೋಡುತ್ತಿದ್ದಂತೆ ಆ ರಕ್ತವನ್ನು ಪಾನ ಮಾಡಿದ."

ಕರ್ಣನ ಮೈ ನಡುಗಿ ಹೋಯಿತು.

"ಮಿತ್ರಾ, ನಾನು ಹೊರಡುತ್ತೇನೆ" ಎಂದು ಚಕ್ರಧರನು ಹೊರಳಿದಾಗ ಕರ್ಣನಿಗೆ ಆಘಾತವಾಯಿತು. ಚಕ್ರಧರನ ಬೆನ್ನಲ್ಲಿ ನಟ್ಟುಹೋಗಿರುವ ಕೊಡಲಿಯನ್ನು ಕಂಡು ಆತನು ಗಾಬರಿಯಾದ. ನಾಲ್ಕು ಹೆಜ್ಜೆ ಮುಂದು ಹೋಗುವವಷ್ಟರಲ್ಲಿಯೇ ಚಕ್ರಧರನು ನೆಲಕ್ಕುರುಳಿದ. ಧಾವಿಸಿ ಬಂದು ಕರ್ಣನು ಆತನನ್ನು ಮೇಲೆತ್ತಿದ.

"ಮಿತ್ರಾ, ನಿನ್ನ ಬೆನ್ನಲ್ಲಿ ಯಾರು ಈ ಅಸ್ತ್ರ ಪ್ರಯೋಗ ಮಾಡಿದರು?"

ಚಕ್ರಧರನು ಕಣ್ಣು ತೆರೆದು ನೋಡಿದ. ಮುಖದಲ್ಲಿ ನಗುವನ್ನು ತಂದುಕೊಂಡು "ದುಶ್ಶ್ಯಾಸನನಿಗೆ ವೀರಶಯ್ಯೆಯನ್ನು ರಚಿಸುತ್ತಲಿದ್ದೆ. ಆತನ ಶರೀರದ ಮೇಲೆ ಹೊದಿಕೆಯೊಂದನ್ನು ಹೊದಿಸುತ್ತಲಿದ್ದೆ, ಆಗ ಯಾರೋ ಹಿಂದಿನಿಂದ ನನ್ನ ಮೇಲೆ ಪ್ರಹಾರ ಮಾಡಿದರು. ಕರ್ಣಾ. ಈ ರಣಾಂಗಣದಲ್ಲಿ ಸತ್ಯವೆಂಬುದಿಲ್ಲ. ಧರ್ಮನೀತಿಗಳಿಗೆ ಇಲ್ಲಿ ಅವಕಾಶವೇ ಇಲ್ಲ. ಇಲ್ಲಿ ನಡೆಯು

ವುದೆಲ್ಲ ಧರ್ಮದ ಅವಹೇಳನ ಮಾತ್ರ. ಆದರೆ ಅದೆಲ್ಲ ಧರ್ಮದ ಸೋಗಿನಲ್ಲಿ ರುತ್ತದೆ. ಭೀಷ್ಮ, ದ್ರೋಣ ಮೊದಲಾದವರ ಕಥೆಯೂ ಹೀಗೆಯೇ ಇದೆ. ಈ ರಣಭೂಮಿಯಲ್ಲಿ ನಿನಗೆ ಜಯ ದೊರೆಯಲಾರದು. ಆದುದರಿಂದ ಗೆಳೆಯಾ ನೀನು ಸಾವಧಾನದಿಂದಿರು. ನಿನ್ನನ್ನು ನೀನೇ ರಕ್ಷಿಸಿಕೋ. ನಾನು ಹೊರಡುವೆ."

ಮಾತನಾಡುತ್ತಿದ್ದಂತೆಯೇ ಚಕ್ರಧರನು ಕರ್ಣನ ತೊಡೆಯ ಮೇಲೆ ತನ್ನ ಗೋಣನ್ನು ಚೆಲ್ಲಿದ. ಕರ್ಣನಿಗೆ ಉಸಿರಾಡುವುದೂ ಕಠಿಣವಾಯಿತು. ಆತನ ಕಣ್ಣುಗಳು ಧಾರಾಕಾರವಾಗಿ ಹರಿಯುತ್ತಿದ್ದುದರಿಂದ ಚಕ್ರಧರನ ಆಕೃತಿಯು ಅವನಿಗೆ ಕಾಣಿಸದಂತಾಯಿತು. ನಿಧಾನವಾಗಿ ಮೇಲೆದ್ದು ನಟ್ಟ ದೃಷ್ಟಿಯಿಂದ ಚಕ್ರಧರನನ್ನು ನೋಡುತ್ತ, ತನ್ನ ಸೊಂಟಕ್ಕೆ ಸುತ್ತಿದ್ದ ಉತ್ತರೀಯವನ್ನು ತೆಗೆದು ಚಕ್ರಧರನಿಗೆ ಹೊದಿಸಿ ತನ್ನ ರಥದತ್ತ ಹೊರಟು ಬಿಟ್ಟ.

"ಶಲ್ಯರಾಜ, ಈ ರಣಭೂಮಿಯಿಂದ ಬಹು ದೂರಕ್ಕೆ ರಥವನ್ನು ಕೊಂಡೊಯ್ಯಿರಿ. ಕೊನೆಯಪಕ್ಷ ಈ ಗಳಿಗೆಯಲ್ಲಾದರೂ ನಾನು ಯುದ್ಧ ಭೂಮಿಯ ನೋಟದಿಂದ ದೂರಾಗಿ ನಿಲ್ಲುವಂತಾಗಲಿ."

ಶಲ್ಯನು ಕರ್ಣನ ರಥವನ್ನು ಶಿಬಿರದತ್ತ ಓಡಿಸಲಾರಂಭಿಸಿದ.

## 54

ಕರ್ಣನ ರಥವು ಯುದ್ಧಭೂಮಿಯಿಂದ ಶಿಬಿರದತ್ತ ಹೋಯಿತೆಂಬ ವಾರ್ತೆಯು ಮುಟ್ಟಿದೊಡನೆ ದುರ್ಯೋಧನನೂ ಶಿಬಿರದತ್ತ ಸಾಗಿದ. ಕರ್ಣನು ಮಂಚದಲ್ಲಿ ಕುಳಿತು ವಿಶ್ರಾಂತಿಯನ್ನು ಪಡೆಯುತ್ತಿದ್ದ. ಪಕ್ಕ ದಲ್ಲಿಯೇ ಆತನ ಶಿರಸ್ತ್ರಾಣವಿತ್ತು. ಕಣ್ಣುಮುಚ್ಚಿ ವಿಶ್ರಾಂತಿಯನ್ನು ಪಡೆಯುತ್ತಿದ್ದ ಕರ್ಣನನ್ನು ನೋಡಿದಾಗ ದುರ್ಯೋಧನನು,

"ಗೆಳೆಯಾ, ನೀನು ತುಂಬ ಗಾಯಗೊಂಡು ಮರಳಿದೆ ಎಂದು ಕೇಳಿ ಮನಸ್ಸು ನಿಲ್ಲದೆ ಬಂದಿರುವೆ."

"ಇಲ್ಲ, ಅಂಥ ಗಾಬರಿಯಾಗುವಂತಹದೇನೂ ಆಗಿಲ್ಲ. ಯುವರಾಜ, ನಾನು ಚೆನ್ನಾಗಿರುವೆ ಸ್ವಲ್ಪ ಆಯಾಸವಾಗಿದೆ ಅಷ್ಟೆ"

ಕರ್ಣನ ಗಾಯಗಳನ್ನು ಗಮನಿಸಿದ ದುರ್ಯೋಧನನು.

"ಗಾಯಗಳಿಗೆ ಲೇಪವನ್ನಾದರೂ ಮಾಡಿಸಬೇಕಾಗಿತ್ತಲ್ಲವೇ" ಎಂದ

"ಎಲ್ಲ ಗಾಯಗಳಿಗೂ ಉಪಚಾರದ ಅಗತ್ಯವಿರುವುದಿಲ್ಲ. ಇನ್ನು ಕೆಲವು ಗಾಯದ ಗುರುತುಗಳಂತೂ ಜೀವನದುದ್ದಕ್ಕೂ ಉಳಿದುಕೊಂಡಿರುತ್ತವೆ."

"ಅಂಗರಾಜ, ನಿನ್ನೆ ನಕುಲನು ನಿನ್ನ ಕೈಗೆ ಸಿಕ್ಕಿದ್ದನೇ ?"

"ಹೌದು."

"ಹಾಗಾದರೆ ನೀನು ಅವನನ್ನು ಬಿಟ್ಟುಬಿಟ್ಟೆ ?"

"ಹೌದು."

"ಇಂದು ಯುಧಿಷ್ಠಿರನು ನಿನ್ನ ಕೈಗೆ ಸಿಕ್ಕಿದ್ದನೆಂದು ಕೇಳಿರುವೆ."

"ಹೌದು."

"ಅವನನ್ನು ಬಿಟ್ಟುಬಿಟ್ಟೆಯಾ ?"

"ಹೌದು."

"ಭೀಮನು ನಿನ್ನನ್ನು ಪರಾಭವಗೊಳಿಸಿದನೇ ?"

"ಹೌದು."

ದುರ್ಯೋಧನನು ಸಂತಾಪಗೊಂಡ.

"ಕರ್ಣಾ, ಹೌದು ! ಹೌದು ! ಎಂದೇನು ಹೇಳುವಿ, ಶತ್ರು ಕೈಗೆ ಸಿಕ್ಕಾಗಲೂ ನೀನು ಅಂಥವರನ್ನು ಬಿಟ್ಟುಬಿಡುವದೇ ?"

"ಅವರನ್ನು ಸಂಹರಿಸಿದಾಗಲೂ ಯುದ್ಧ ನಿಲ್ಲುತ್ತಿತ್ತೇ ?"

"ಸಂಹರಿಸಬೇಕೆಂದಲ್ಲ, ಅವರನ್ನು ಜೀವಂತವಾಗಿ ಹಿಡಿದಲ್ಲಿ" ಎಂದು ಹೇಳಿದ ದುರ್ಯೋಧನನು "ಕರ್ಣಾ, ದ್ರೋಣಾಚಾರ್ಯರಿಗೆ ನಾನು ಒಂದೇ ವಿನಂತಿಯನ್ನು ಮಾಡಿಕೊಂಡಿದ್ದೆ. ನನಗೆ ಯುಧಿಷ್ಠಿರನು ಜೀವಂತವಾಗಿ ಬೇಕೆಂದು ಕೇಳಿಕೊಂಡಿದ್ದೆ. ಅಂದು ಆಚಾರ್ಯರು ಸಾಧಿಸದಿದ್ದುದನ್ನು ಇಂದು ನೀನು ಸಾಧಿಸಿದ್ದೆ. ನನಗೆ ಯುಧಿಷ್ಠಿರನು ಬೇಕಾಗಿರುವನೆಂಬ ವಿಚಾರವು ನಿನಗೂ ತಿಳಿದ ಮಾತಾಗಿತ್ತು. ಹೀಗಿದ್ದರೂ ನೀನು ಅವನನ್ನು ಬಿಟ್ಟುಬಿಟ್ಟೆ."

"ಆತನು ನಿಮ್ಮ ಕೈವಶವಾಗಿದ್ದಲ್ಲಿ ಯುದ್ಧವು ಹೇಗೆ ನಿಲ್ಲುತ್ತಿತ್ತು ?" ಕರ್ಣನು ಪ್ರಶ್ನೆ ಮಾಡಿದ.

"ನಿಲ್ಲುತ್ತಿತ್ತು, ಖಂಡಿತವಾಗಿಯೂ ನಿಲ್ಲುತ್ತಿತ್ತು. ಕರ್ಣ, ಈ ಗೊಂದಲದಲ್ಲಿ ನನಗೆ ಯಶವಿಲ್ಲ ಎಂಬುದು ಸಂಪೂರ್ಣವಾಗಿ ಮನದಟ್ಟಾಗಿ ಹೋಗಿದೆ. ಆ ಯುಧಿಷ್ಠಿರನು ನನ್ನ ಕೈಗೆ ಸಿಕ್ಕಿದ್ದರೆ, ಪುನಃ ದ್ಯೂತಕ್ಕೆ ಆತ ನನ್ನು ಕರೆಯುತ್ತಿದ್ದೆ. ದ್ಯೂತಲಂಪಟನಾದ ಆತನು ಅದನ್ನು ಒಪ್ಪಿಕೊಳ್ಳುತ್ತ ಲಿದ್ದ, ಆಗ ದ್ಯೂತದಲ್ಲಿ ಜಯವು ಪುನಃ ನಮ್ಮದಾಗುತ್ತಿತ್ತು. ಪಾಂಡವರು ಮತ್ತೆ ವನವಾಸಕ್ಕೆ ಹೋಗುತ್ತಿದ್ದರು."

ದುರ್ಯೋಧನನ ಭಾಷಣವನ್ನು ಕೇಳಿ ಕರ್ಣನಿಗೆ ನಗು ತಡೆಯು ದಂತಾಯಿತು. ಅದನ್ನು ಕಂಡು ಸಿಟ್ಟಿಗೆದ್ದ ದುರ್ಯೋಧನನು ಹೇಳಿದ.

"ಯಾಕೆ, ನನ್ನ ಮಾತುಗಳೆಲ್ಲ ಸುಳ್ಳು ಎಂದೆನಿಸುತ್ತಿದೆಯೇ? ಶಕುನಿಯ ಸಹಾಯದಿಂದ...."

ತುಂಬ ದಣಿದ ಕರ್ಣನು "ಯುವರಾಜ, ಒಂದು ದ್ಯೂತದಿಂದ ಎಂಥ ಪರಿಣಾಮವಾಗಿದೆ ಎಂಬುದನ್ನು ಅನುಭವಿಸುತ್ತಿರುವಾಗಲೂ ನೀವು ಇನ್ನೊಂದು ಜೂಜಿನ ಸ್ವಪ್ನವನ್ನು ಕಾಣುತ್ತಿರುವಿರಲ್ಲ! ಪಾಂಡವರು ಪುನಃ ವನವಾಸಿಗಳಾಗಬಹುದು, ಮತ್ತೆ ಹನ್ನೆರಡು ವರ್ಷಗಳು ಕಳೆದ ನಂತರ ರಣಕಹಳೆಯನ್ನೂದಬಹುದು. ಆಗ ನಿಮ್ಮ ರಣವಾದ್ಯಗಳನ್ನು ಕೇಳಲು ಒಂದು ನರಪಿಳ್ಳೆಯಾದರೂ ಈ ಭೂಮಿಯಲ್ಲಿ ನಿಮಗೆ ಹುಡುಕಲು ಸಾಧ್ಯ ಎಂದು ತಿಳಿದಿರುವಿರಾ?"

"ನನಗೆ ಅದಾವುದರ ಚಿಂತೆಯೂ ಇಲ್ಲ. ಆ ವೇಳೆಗೆ ಈ ಭೂಮಿಯ ಮೇಲೆ ಎರಡೇ ಎರಡು ಜೀವಿಗಳು ಬದುಕಿದ್ದರೆ ಸಾಕು. ನಾನೊಬ್ಬ ಆ ಯುಧಿಷ್ಠಿರನೊಬ್ಬ. ಅದಕ್ಕಾಗಿ ಈ ಪೃಥ್ವಿಯನ್ನು ನಾಶಪಡಿಸಲೂ ನಾನು ಹಿಂದುಮುಂದು ನೋಡುವುದಿಲ್ಲ.

"ಯುವರಾಜ, ದ್ಯೂತದಿಂದ ಏನೇನು ಸಾಧಿಸಿರುವಿರಿ?"

"ಕುರುರಾಜ್ಯದ ಸೇನಾಪತಿಯೇ, ನನಗೆ ಈ ಪ್ರಶ್ನೆ ಮಾಡುವುದೇ? ಅಂಗರಾಜ, ನನಗೆ ವಿಜಯನ್ನು ಸಂಪಾದಿಸಬೇಕಾಗಿದೆ. ಎಲ್ಲ ವಿಜಯವೂ ನನ್ನದಾಗಬೇಕಾಗಿದೆ. ಆದರೆ ಆ ವಿಜಯವು ನಮ್ಮೆಲ್ಲರಿಂದ ಲಭಿಸಲಾರ ದೆಂದೆನಿಸತೊಡಗಿದೆ,"

"ಯುಯರಾಜ, ನನ್ನ ನಿಷ್ಠೆಯಲ್ಲಿ ನಿಮಗೆ ವಿಶ್ವಾಸವಿಲ್ಲದಿದ್ದಲ್ಲಿ ಈ

ಸೇನಾಪತಿಯ ಪದವಿಯನ್ನು ನೀವು ಯಾರಿಗಾದರೂ ಒಪ್ಪಿಸಬಹುದು. ಅದರಿಂದ ನಾನು ಅಸಮಾಧಾನ ಹೊಂದಲಾರೆ."

"ಮಿತ್ರಾ !"

"ಈ ಮಾತನ್ನು ನಾನು ಸಿಟ್ಟಿನಿಂದಾಗಲಿ ಅಥವಾ ಕೋಪದಿಂದಾಗಲಿ ಹೇಳುತ್ತಿಲ್ಲ. ಯುವರಾಜಾ, ಶಸ್ತ್ರಸನ್ಯಾಸವನ್ನು ಸ್ವೀಕರಿಸುವುದರಲ್ಲಿ ಪಿತಾಮಹರಂತೆ ನಾನು ಕ್ಷತ್ರಿಯನೇನಲ್ಲ, ನನಗೆ ಅಪಮಾನವೆನಿಸುವದಿಲ್ಲ. ಹೇಳಿಕೇಳಿ ನಾನೊಬ್ಬ ಸೂತಪುತ್ರ. ನಿಮ್ಮ ವಿಜಯಕ್ಕಾಗಿ ಎಲ್ಲ ಕಷ್ಟನಷ್ಟಗಳನ್ನು ಎದುರಿಸಲೂ ನಾನು ಸಿದ್ಧ. ಜೀವವಿರುವವರೆಗೂ ಅದಕ್ಕಾಗಿ ನಾನು ಬೇರೊಬ್ಬರ ಕೈಕೆಳಗೆ ಕೆಲಸ ಮಾಡಲು ಹಿಂದುಮುಂದು ನೋಡಲಾರೆ. ಯುದ್ಧ ಮಾಡುತ್ತಲೇ ನಾನು ಮರಣ ಹೊಂದುವೆ."

ಕರ್ಣನ ಈ ಮಾತುಗಳಿಂದ ದುರ್ಯೋಧನನಿಗೆ ತುಂಬ ಕಸಿವಿಸಿಯಾಯಿತು.

"ಕರ್ಣ, ಹೀಗೆಲ್ಲ ನುಡಿಯಬೇಡ. ಕೊನೆಯ ಪಕ್ಷ ನೀನಾದರೂ ಇಂಥ ಮಾತುಗಳನ್ನಾಡಬೇಡ. ನೀನಿರದ ವಿಜಯನ್ನು ಸಂಪಾದಿಸುವದಕ್ಕಿಂತ ನೀನಿದ್ದುಕೊಂಡು ಪರಾಭವವು ಪ್ರಾಪ್ತವಾದಲ್ಲಿ ಅದನ್ನು ನಾನು ಆನಂದದಿಂದ ಸ್ವೀಕಾರ ಮಾಡುವೆ. ನೀನಿರದ ವಿಜಯ ತೃಣಕ್ಕೆ ಸಮಾನ."

ಕರ್ಣನ ಶಿಬಿರದಿಂದ ಹೊರಹೊರಡುತ್ತಲಿದ್ದ ದುರ್ಯೋಧನನು ಹೇಳಿದ,

"ನೀನು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಪಡೆದುಕೊ. ನಾನು ರಣಭೂಮಿಯತ್ತ ಹೋಗಿಬರುವೆ."

ದುರ್ಯೋಧನನು ಹೊರಟು ಹೋದುದನ್ನೇ ನೋಡುತ್ತಿದ್ದ ಕರ್ಣನು ತನ್ನ ಕಿರೀಟವನ್ನೆತ್ತಿಕೊಂಡು ಮೇಲೇಳುತ್ತ,

"ಶಲ್ಯರಾಜ ನಡೆಯಿರಿ !" ಎಂದ.

"ರಾಧೇಯಾ, ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊ."

"ಇನ್ನುಮೇಲೆ ವಿಶ್ರಾಂತಿಗೆ ಸ್ಥಳವೆಂಬುದಿಲ್ಲ. ಅದು ರಣಭೂಮಿಯ ವಿನಃ ನನಗೆ ಬೇರೆಲ್ಲಿಯೂ ದೊರೆಯಲಾರದು."

ರಥಾರೂಢನಾಗಿ ಹೊರಟ ಕರ್ಣನು ಬಹುಬೇಗನೆ ಯುದ್ಧದಲ್ಲಿ

ಒಂದಾಗಿ ಹೋದ. ಆತನಿಗೆ ಅರ್ಜುನನ ರಥವನ್ನು ಕಾಣುವ ಆತುರವಿತ್ತು. ಆ ರಣಧೂಳಿಯಲ್ಲಿ ಕಪಿಧ್ವಜಯುಕ್ತ ರಥವು ಮಾತ್ರ ಕಾಣಿಸುತ್ತಿರಲಿಲ್ಲ. ಸೂರ್ಯದೇವನು ಪಶ್ಚಿಮಾಚಲವನ್ನು ಸಮೀಪಿಸುತ್ತಿರುವಾಗ ಕರ್ಣನನ್ನು ಹುಡುಕುತ್ತ ಒಂದು ರಥ ಬರುತ್ತಿರುವುದು ಕಾಣಿಸಿತು. ಅದು ಅಶ್ವತ್ಥಾಮನ ರಥವಾಗಿತ್ತು. ಅವನು ಬಹು ದೊಡ್ಡ ಧ್ವನಿಯಿಂದ ಕೂಗಿ ಹೇಳಿದ,

"ಕರ್ಣಾ, ಉತ್ತರ ಭಾಗದಲ್ಲಿರುವ ನಿನ್ನ ಮಗನನ್ನು ಅರ್ಜುನನು ಮುತ್ತಿದ್ದಾನೆ."

ಯಾರಿಗಾಗಿ ಕರ್ಣನು ದಿನವಿಡೀ ಹುಡುಕುತ್ತಿದ್ದನೋ ಆ ಅರ್ಜುನನು ತನ್ನ ಮಗನಾದ ವೃಷಸೇನನೊಂದಿಗೆ ಯುದ್ಧನಿರತನಾಗಿದ್ದಾನೆ. ಸೂರ್ಯಾಸ್ತವಾಗಲು ಇನ್ನೂ ಸಾಕಷ್ಟು ಸಮಯವಿದೆ. ಅರ್ಜುನನ ರಥವನ್ನು ಎದುರಿಸುವಂತೆ ಕರ್ಣನು ಶಲ್ಯನಿಗೆ ಆಜ್ಞೆ ಮಾಡಿದ.

ಕರ್ಣನ ರಥವು ರಣರಂಗವನ್ನೇ ಬಡಿದೆಬ್ಬಿಸುವಂತೆ ವಾಯುವೇಗದಿಂದ ಧಾವಿಸಲಾರಂಭಿಸಿತು. ಅದನ್ನು ಕಂಡು ಗಾಬರಿಯಿಂದ ಸೈನಿಕರು ಕ್ಷಣ ಹೊತ್ತು ತಮ್ಮ ಯುದ್ಧವನ್ನೂ ಮರೆತು ಕರ್ಣನ ರಥ ಧಾವಿಸುತ್ತಿರುವುದನ್ನೇ ನೋಡುತ್ತಿದ್ದರು. ಭಯಚಕಿತರಾಗಿ ಆ ರಥಕ್ಕೆ ದಾರಿ ಮಾಡಿಕೊಡಲು ದೂರ ಸರಿದು ನಿಲ್ಲುತ್ತಿದ್ದರು. ಕರ್ಣನಿಗೆ ಕಪಿಧ್ವಜ ಕಾಣುವ ಆತುರ ಹೆಚ್ಚುತ್ತಲಿತ್ತು.

ಅರ್ಜುನನು ತನ್ನ ರಕ್ಷಣಾದಳದೊಂದಿಗೆ ವೃಷಸೇನನನ್ನು ಮುತ್ತಿಗೆ ಹಾಕಿದ್ದ. ಅದೇತಾನೆ ವೃಷಸೇನ ನಕುಲನನ್ನು ಪರಾಭವಗೊಳಿಸಿದ್ದರಿಂದ ಆತನಿಗೆ ತುಂಬಾ ಗಾಯಗಳಾಗಿದ್ದವು. ಆದರೂ ಸಹ ಆ ಬಾಲಕನು ತನ್ನ ಗಾಯಗಳನ್ನು ಲೆಕ್ಕಿಸದೆ ಅರ್ಜುನನೊಂದಿಗೆ ಕಾದಾಡುತ್ತಲಿದ್ದ. ಕರ್ಣನು ಆ ಸ್ಥಳಕ್ಕೆ ಬಂದುದನ್ನು ಕಂಡ ವೃಷಸೇನನು, ತನ್ನ ಬತ್ತಳಿಕೆಯಲ್ಲಿದ್ದ ಬಾಣವನ್ನೆತ್ತಿಕೊಳ್ಳುತ್ತಿರುವಾಗ ಆತನ ಗಮನವು ತಂದೆಯತ್ತ ಹೋಯಿತು ಮುಖದ ಮೇಲೆ ವೀರಹಾಸ್ಯವು ಕಾಣಿಸಿಕೊಂಡಿತು, ಆ ಮಗು ತನ್ನ ಧನುಸ್ಸಿಗೆ ಬಾಣವನ್ನು ಹೂಡುತ್ತಿರುವಂತೆಯೇ ಕರ್ಣನಿಗೆ ಅರ್ಜುನನ ಶಬ್ದಗಳು ಕೇಳಿಸಿದವು.

"ರಾಧೇಯಾ, ಸಮಯಕ್ಕೆ ಸರಿಯಾಗಿ ಬಂದಿರುವೆ. ನಾನಿಲ್ಲದೇ

ಹೋದಾಗ ನೀವು ವೀರಾಧಿವೀರರೆಲ್ಲ ಒಟ್ಟುಗೂಡಿಕೊಂಡು ನನ್ನ ಮಗನಾದ ಅಭಿಮನ್ಯುವಿನ ಸಂಹಾರ ಮಾಡಿದಿರಿ. ಆದರೆ ಇಂದು ನಾನೊಬ್ಬನೇ ನಿನ್ನ ಮಗನನ್ನು ಸಂಹಾರ ಮಾಡಲು ಉತ್ಸುಕನಾಗಿದ್ದೇನೆ. ನಿನಗೆ ಸಾಮರ್ಥ್ಯ ವಿದ್ದಲ್ಲಿ ಅವನನ್ನುಳಿಸಿಕೋ."

ಅರ್ಜುನನ ಮಾತಿನೊಂದಿಗೆ ಆತನಿಂದ ಬಿಡಲ್ಪಟ್ಟ ಬಾಣವು ಕರ್ಣನ ಯಾವ ವಿಚಾರಗಳಿಗೂ ಆಸ್ಪದವೀಯದಂತೆ ಗುರಿಯನ್ನು ಸಾಧಿಸಿತು. ಆಶ್ರಯ ತಪ್ಪಿದ ಹೂವು ನೆಲಕ್ಕುರುಳುವಂತೆ ಸುಕುಮಾರನಾದ ವೃಷಸೇನನು ನೆಲಕ್ಕುರುಳಿದ.

ಕರ್ಣನ ದೇಹವೆಲ್ಲ ಕಂಪಿಸತೊಡಗಿತು. ಅವನು ರಥದಿಂದ ಧುಮುಕಿ ಮಗನತ್ತ ಧಾವಿಸಿಬಂದ. ಆ ವೇಳೆಗಾಗಲೇ ವೃಷಸೇನನ ಪ್ರಾಣ ಪಕ್ಷಿಯು ಹಾರಿಹೋಗಿತ್ತು. ಆ ಕೋಮಲ ಕಂಠದಲ್ಲಿ ಅರ್ಜುನನ ಬಾಣವು ಅದು ಪಾರಾಗಿಹೋಗಿತ್ತು. ಕಾರಂಜಿಯಂತೆ ರಕ್ತವು ಚಿಮ್ಮುತ್ತಲಿತ್ತು. ಕೇವಲ ಒಂದೇ ಒಂದು ಕ್ಷಣದ ಹಿಂದೆ ತನ್ನ ಸಹಾಯಕ್ಕಾಗಿ ಬಂದ ತಂದೆಯನ್ನು ಕಂಡು ಮುಗುಳು ನಗೆ ನಕ್ಕ ಆ ಯುವಕನ ಮುಖಭಾವವು ಈಗಲೂ ಹಾಗೆಯೇ ಇತ್ತು. ಆ ನಗುವಿನಲ್ಲಿ ಸ್ವಲ್ಪವೂ ವ್ಯತ್ಯಾಸ ಕಾಣುತ್ತಿರಲಿಲ್ಲ. ಬಾಣಪ್ರಯೋಗದಿಂದಾಗಿ ವೃಷಸೇನನ ಕೊರಳಿನಲ್ಲಿದ್ದ ಮುತ್ತಿನ ಕಂಠಾ ಭರಣವು ಕಳಚಿ ಕೆಳಗೆ ಬಿದ್ದಿತ್ತು. ಮೈಮೇಲೆ ಎಚ್ಚರ ತಪ್ಪಿದವನಂತೆ ಕರ್ಣನ, ಅದೆಲ್ಲವನ್ನೂ ನೋಡುತ್ತಲಿದ್ದ. ಆ ಜಾತಿವಂತ ಮುತ್ತಿನ ಮಾಲಿಕೆ ಯಲ್ಲಿ ಒಂದು ಮುತ್ತು ಒಡೆದು ಹೋಗಿತ್ತು. ಇನ್ನು ಎಂಥ ಪ್ರಯತ್ನ ಮಾಡಿದಾಗಲೂ ಆ ಮುತ್ತು ಮೊದಲಿನಂತಾಗಲು ಸಾಧ್ಯವಿರಲಿಲ್ಲ.

ನಡುಗುತ್ತಲಿದ್ದ ಕರ್ಣನ ಕೈಗಳು ವೃಷಸೇನನ ತೆರೆದ ಕಣ್ಣುಗಳನ್ನು ಮುಚ್ಚುವಂತೆ ಮಾಡಿದವು. ಅದರಿಂದ ವೃಷಸೇನನು ಮಲಗಿ ನಿದ್ರಿಸು ತ್ತಿರುವಂತೆ ತೋರತೊಡಗಿದನು. ಯಾವುದೋ ದಿವ್ಯ ಸ್ವಪ್ನದಲ್ಲಿ ಮುಳುಗಿ ಹೋದಂತಿರುವ ಅವನನ್ನು ಎಬ್ಬಿಸುವುದು ಪಾಪವೆಂದೆನ್ನಿಸುತ್ತಿತ್ತು.

ಕರ್ಣನ ಹಿಂಭಾಗಕ್ಕೆ ಸಪ್ಪಳವಾದಂತೆನಿಸಿತು. ಆದರೂ ಅವನು ಹಿಂದಿರುಗಿ ನೋಡಲಿಲ್ಲ.

"ಪುತ್ರವಿಯೋಗದ ದುಃಖವು ಇಷ್ಟೊಂದು ಅಸಾಧ್ಯವಾಗಿರುತ್ತದಲ್ಲವೆ ? ಅಭಿಮನ್ಯುವಿನ ಮರಣದಿಂದಾಗಿ ನಾನೂ ಎಂಥ ಯಾತನೆಯನ್ನನುಭವಿಸಿದೆನೆಂಬುದು ಈಗ ನಿನ್ನ ಸ್ವಾನುಭವಕ್ಕೆ ಬಂದಿರಬಹುದಲ್ಲವೆ ? ಕೋಮಲ ಶರೀರಿಯಾದ ನನ್ನ ಮಗನನ್ನು ಮೃಗದಂತೆ ಬೇಟೆಯಾಡುವ ಮೊದಲು ನೀವುಗಳು ಯೋಚನೆ ಮಾಡುವಂತಾಗಿದ್ದರೆ ಇಂದು ನಿನಗೆ ಈ ಅವಸ್ಥೆಯು ಬರುತ್ತಿರಲಿಲ್ಲ. ಇಂದು ನನ್ನ ಮಗನನ್ನು ಕೊಂದ ಸೇಡನ್ನು ತೀರಿಸಿಕೊಂಡು ಕೃತಾರ್ಥನಾಗಿರುವೆ."

ವೃಷಸೇನನ ಮರಣದಿಂದಾಗಿ ಹನಿದುಂಬಿದ ನೇತ್ರಗಳು ಅರ್ಜುನನ ಮಾತಿಸಿಂದಾಗಿ ಅಲ್ಲಿಯೇ ಬತ್ತಿಹೋದವು, ಕರ್ಣನು ಮಹಾ ಸಂತಾಪದಿಂದ ಹಿಂದಿರುಗಿ ನೋಡಿದ. ಅಗಲವಾದ ಕೆಂಡದಂತೆ ತೋರುವ ಆ ಕಣ್ಣುಗಳಲ್ಲಿಯ ಅಗ್ನಿಯನ್ನು ಅರ್ಜುನನು ಗುರುತಿಸಿದ. ಹಾಗೆಯೇ ಆತನು ಕೃಷ್ಣನ ಕಡೆಗೆ ನೋಡಿದ. ಆಗ ಕೃಷ್ಣನು ಆ ರಥದ ಮುಂದೆ ಅಧೋವದನನಾಗಿ ಕುಳಿತುಕೊಂಡಿದ್ದ. ಅಂಥ ವಿಷಮಾವಸ್ಥೆಯಲ್ಲಿಯೂ ಕರ್ಣನ ಮುಖದಲ್ಲಿ ಕಟುಹಾಸ್ಯವು ಕಾಣಿಸಿಕೊಂಡಿತು. ತನ್ನ ಧನುಸ್ಸಿನ ಮೇಲೆ ಬಲಗೈಯನ್ನಿಟ್ಟುಕೊಂಡು ಪರಾಕ್ರಮದ ಅಹಂಕಾರದಿಂದ ಕರ್ಣನು ಅರ್ಜುನನಿಗೆ ಉತ್ತರವನ್ನಿತ್ತ :

"ಅರ್ಜುನಾ, ನೀನು ಕೃತಾರ್ಥನಾಗಲಿಲ್ಲ. ಇಂದು ನಾನು ಕೃತಾರ್ಥನಾಗಿರುವೆ. ಇಂದು ನೀನು ನನ್ನ ಮಗನ ಸಂಹಾರ ಮಾಡಿ ಸೇಡು ತೀರಿಸಿಕೊಳ್ಳಲಿಲ್ಲ. ಅದರ ಬದಲಾಗಿ ನೀನು ನನಗೆ ಉಪಕಾರವನ್ನು ಮಾಡಿದೆ. ಅದಕ್ಕಾಗಿ ನಿನಗೆ ಕೃತಜ್ಞನಾಗಿದ್ದೇನೆ. ಬಾಲ್ಯತನದ ಕೌತುಕಗಳನ್ನೆಲ್ಲ ಮನೆಯಲ್ಲಿಯೇ ವರ್ಣಿಸಬೇಕು. ಅವುಗಳೆಲ್ಲ ರಣಾಂಗಣಕ್ಕೆ ಕಳಿಸುವ ಮೊದಲಿನ ಮಾತುಗಳು. ಈ ರಣಾಂಗಣದಲ್ಲಿ ಬಾಲಕರು, ತರುಣರು, ವೃದ್ಧರೆಂಬ ಭೇದ ಭಾವವಿರುವದಿಲ್ಲ. ಅದು ಯಾವಾಗಲೂ ಶತ್ರುಗಳ ಕೈಯಲ್ಲಿರುವ ಆಯುಧಗಳನ್ನು ಗುರುತಿಸುವದು. ನನ್ನ ಮಗನ ವಯಸನ್ನು ನೋಡಿ ಅವನನ್ನು ನೀನು ಬಿಟ್ಟುಬಿಟ್ಟದ್ದರೆ. ಆಗ ಮಾತ್ರ ಈ ಕರ್ಣನಿಗೆ ಪೃಥ್ವಿಯ ಮೇಲೆ ನಿಲ್ಲಲು ಸ್ಥಳವಿರುತ್ತಿರಲಿಲ್ಲ. ನನ್ನ ಮಗನಿಗಾಗಿ ಸ್ವರ್ಗದ

ಬಾಗಿಲು ಎಂದೂ ತೆಗೆದಿರುತ್ತಿರಲಿಲ್ಲ. ಈ ಎಲ್ಲ ಕಾರಣಗಳಿಂದ ನಾನು ನಿನಗೆ ಉಪಕೃತನಾಗಿರುವೆ."

ಅರ್ಜುನನ ಮುಖದಲ್ಲಿ ಕಾಣಿಸಿಕೊಂಡ ಆಶ್ಚರ್ಯದ ಭಾವವನ್ನು ಕಂಡ ಕರ್ಣನು ಉದಾಸೀನತೆಯಿಂದ ನಕ್ಕು ಹೇಳಿದ,

"ಹೋಗಲಿ, ಅರ್ಜುನಾ ಹೋಗು ! ನಾನು ಏನು ಮಾಡುತ್ತಿರುವೆನೆಂಬುದರ ಅರ್ಥವು ನಿನಗಾಗಬೇಕಾಗಿದ್ದಲ್ಲಿ, ನಿನ್ನ ಸಾರಥ್ಯ ಕಾರ್ಯವನ್ನು ನಿರ್ವಹಿಸುತ್ತಿರುವ ಕೃಷ್ಣನಲ್ಲಿ ಕೇಳಿ ತಿಳಿದುಕೋ. ಆತ ನಿನಗೆ ಸರಿಯಾಗಿ ತಿಳಿಸಿ ಹೇಳಿಯಾನು."

ವೃಷಸೇನನತ್ತ ನೋಡಿ ಕರ್ಣನು ಮತ್ತೆ ಹೇಳಿದ,

"ಹೋಗು ಅರ್ಜುನಾ, ಹೊರಟು ಹೋಗು. ನಾಳೆ ನಿರ್ಣಯಾತ್ಮಕವಾದ ಯುದ್ಧವಾದೀತು, ಅಲ್ಲಿಯವರೆಗೆ ವಿಶ್ರಾಂತಿಯನ್ನು ಪಡೆದುಕೋ. ಇಂದು ಸಾಕಷ್ಟು ಪರಾಕ್ರಮವನ್ನು ತೋರಿಸಿರುವೆ ಸಾಕು ಹೊರಟು ಬಿಡು !"

ವೃಷಸೇನನ ಶಲ್ಯೆಯನ್ನು ಬಿಡಿಸಿ. ಕೆಳಗೆ ಬಿದ್ದಿದ್ದ ಧನುರ್ಬಾಣಗಳನ್ನು ಅವನ ಸಮೀಪದಲ್ಲಿರಿಸಿ. ಮಗನ ಮುಖವನ್ನು ಮುಚ್ಚುವಾಗ ಕರ್ಣನ ಕೈ ನಡುಗಿತು. ಅತೀ ಕಷ್ಟದಿಂದ ಕೊನೆಯ ಸಲ ವೃಷಸೇನನ ತಲೆಯನ್ನು ಸವರಿದ. ಬಹು ಕಷ್ಟದಿಂದ ಮನದ ದುಃಖವನ್ನು ಬಿಗಿ ಹಿಡಿದುಕೊಂಡು ಕೊನೆಯ ಬಾರಿ ಮಗನ ದರ್ಶನ ಪಡೆದು ಮುಖದ ಮೇಲೆ ಆ ವಸ್ತ್ರವನ್ನು ಹೊದಿಸಿದ. ಆ ನೋಟವು ಶಲ್ಯರಾಜನಿಗೂ ತಡೆಯದಂತಾಯಿತು. ಆತನು ಶೋಕಮಗ್ನನಾದ ಕರ್ಣನ ಬಲಗೈಯನ್ನು ತನ್ನ ಕೈಯಲ್ಲಿ ಹಿಡಿದು ಅವನನ್ನು ಮೇಲೆಬ್ಬಿಸಿದ. ತಡೆಹಿಡಿದ ಅಶ್ರುಗಳು ಕೆಳಗುರುಳಿದವು. ರಥದತ್ತ ಸಾಗಿದಾಗ ನೆಲಕ್ಕೆ ಬಿದ್ದ ವೃಷಸೇನನ ಶಿರಸ್ತ್ರಾಣವು ಕಾಣಿಸಿತು. ಅದನ್ನು ಕೈಗೆತ್ತಿಕೊಂಡು ರಥಾರೂಢನಾದ ಕರ್ಣನು ಬಹು ಕಷ್ಟದಿಂದ ಹೇಳಿದ.

"ಶಿಬಿರ."

ಸೂರ್ಯ ಬಿಂಬವು ಪಶ್ಚಿಮಾದ್ರಿಯನ್ನು ಸಂಪೂರ್ಣವಾಗಿ ತಲುಪಿತ್ತು. ಅನೇಕ ರಕ್ತರಂಜಿತ ಚಿತ್ರಗಳು ಕಾಣುತ್ತಿದ್ದವು.

ರಣಾಂಗಣದಲ್ಲಿ ಯುದ್ಧವನ್ನು ನಿಲ್ಲಿಸಿದ ಸಂಕೇತವಾಗಿ ನಗಾರಿಯ ಶಬ್ದಗಳು ಕೇಳಬರತೊಡಗಿದವು.

ಶಿಬಿರ ತಲುಪಿದೊಡನೆಯೇ ಶಲ್ಯರಾಜ ರಥದಿಂದಿಳಿದುಬಿಟ್ಟ. ತಕ್ಷಣವೇ ಕರ್ಣನ ಸಾರಥಿ ಆ ರಥವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ. ಏನೂ ತೋಚದೆ ಶಿರಸ್ತ್ರಾಣವನ್ನು ಎದೆಗವಚಿಕೊಂಡು ನಿಂತ ಕರ್ಣನ ಪರಿಸ್ಥಿತಿಯನ್ನು ಕಂಡ ಶಲ್ಯರಾಜನಿಗೆ ದುಃಖವು ತಡೆಯುವುದಾಗಲಿಲ್ಲ. ಆತನು ಶೋಕಮಗ್ನನಾದ ಕರ್ಣನ ಹೆಗಲ ಮೇಲೆ ಕೈಯಿಟ್ಟು ಅವನನ್ನು ಸ್ವಾಂತನ ಪಡಿಸಲು,

"ರಾಧೇಯಾ, ಮನುಷ್ಯನಾದವನು ಇಷ್ಟೊಂದು ಹಚ್ಚಿಕೊಳ್ಳಬಾರದು."

"ಶಲ್ಯರಾಜ, ಕೆಲವರು ಪರನಿಂದೆ ಮಾಡುವುದಕ್ಕಾಗಿ ಹುಟ್ಟಿ ಬಂದಿರುತ್ತಾರೆ. ಅದೇ ರೀತಿ ಕೆಲವರು ಅನುಭವಿಸುವದಕ್ಕಾಗಿಯೇ ಜನ್ಮ ತಾಳಿರುತ್ತಾರೆ. ನನ್ನ ಹಣೆಯ ಬರಹದಲ್ಲಿ ಇಷ್ಟೇ ಇದೆ........ಅಷ್ಟೇ. ಸಾರಥೀss"

ರಥವು ಕರ್ಣನ ನಿವಾಸದತ್ತ ಸಾಗಿತ್ತು. ಕರ್ಣನ ಹಿಂದೆ ಧ್ವಜ ರಹಿತವಾದ ಒಂದು ರಥವು ಬರುತ್ತಲಿತ್ತು. ಕರ್ಣನು ಅದನ್ನು ಗಮನಿಸಲಿಲ್ಲ.

## 55

ಸಂಧ್ಯಾ ಕಾಲದ ಸಮಯದಲ್ಲಿ ಕರ್ಣನ ರಥವು ಮನೆಯತ್ತ ಸಾಗಿತು. ಆತನ ಮನಸ್ಥಿತಿಯು ಸ್ಥಿತಪ್ರಜ್ಞನಂತಾಗಿತ್ತು. ತನಗೊದಗಿದ ದುಃಖವನ್ನು ತಡೆದುಕೊಳ್ಳಲು ಆತನು ಅಂತರಂಗದಲ್ಲಿಯೇ ಪ್ರಯತ್ನಿಸುತ್ತಿದ್ದ. ಧಾವಿಸುತ್ತಿದ್ದ ರಥ ಇದಕ್ಕಿದ್ದಂತೆ ನಡುದಾರಿಯಲ್ಲಿಯೇ ನಿಂತುಕೊಂಡಿತು.

"ರಥವನ್ನೇಕೆ ನಿಲ್ಲಿಸಿದಿರಿ ?"

ಹಿಂದಿರುಗಿ ನೋಡುತ್ತಲಿದ್ದ ಸಾರಥಿ ಹೇಳಿದ,

"ಯಾವದೋ ರಥವು ಹಿಂದಿನಿಂದ ಬರುತ್ತಿದೆ."

ಸಾರಥಿಯ ಮಾತಿನಿಂದ ಕರ್ಣನು ಹಿಂದಿರುಗಿ ನೋಡಿದಾಗ ವೃಷಸೇನನ ರಥವು ಹಿಂಬಾಲಿಸುತ್ತಿತ್ತು. ಆ ರಥದ ಹಿಂದೆ ಬೇರೊಂದು ರಥ

ಬರುತ್ತಿರುವದೂ ಕಾಣಿಸಿತು. ಯಾಕೆಂದರೆ ಆ ರಥವು ವೃಷಸೇನನ ರಥವನ್ನು ಹಿಂದೆ ಹಾಕಿ ಮುಂದೆ ಬರುತ್ತಿರುವದು ಗೋಚರವಾಯಿತು. ಅದು ದುರ್ಯೋಧನನ ರಥವಾಗಿತ್ತು. ಅದನ್ನು ತಿಳಿದುಕೊಂಡ ಕರ್ಣನು ತನ್ನ ರಥದಿಂದಿಳಿದ. ಧಾವಿಸುತ್ತ ಬಂದ ರಥದಿಂದ ದುರ್ಯೋಧನನು ಕೆಳಗಿಳಿದುದನ್ನು ನೋಡಿದಾಗ ಕರ್ಣನ ದುಃಖವು ಇಮ್ಮಡಿಗೊಂಡಿತು ಕರ್ಣನ ಇಂಥ ವಿಕೃತ ರೂಪವನ್ನು ದುರ್ಯೋಧನನು ಎಂದೂ ನೋಡಿರಲಿಲ್ಲ. ಆತನನ್ನು ಸಮೀಪಕ್ಕೆ ಬರಸೆಳೆದುಕೊಂಡು ಭಾರವಾದ ಧ್ವನಿಯಲ್ಲಿ ಹೇಳಿದ,

"ಕರ್ಣಾ, ನಾನು ಶಿಬಿರಕ್ಕೆ ಬಂದೊಡನೆಯೇ ಈ ವಾರ್ತೆಯನ್ನು ಕೇಳಿದೆ. ಆ ವೇಳೆಗಾಗಲೇ ನೀನು ಶಿಬಿರವನ್ನು ಬಿಟ್ಟು ಹೊರಟಿರುವದೂ ತಿಳಿದುಬಂದಿತು. ನನ್ನ ಮನಸ್ಸು ತಡೆಯದಾಯಿತು. ಆದುದರಿಂದ ಹಿಂದು ಮುಂದಿನದನ್ನು ವಿಚಾರಿಸದೆ ಇತ್ತ ಧಾವಿಸಿ ಬಂದೆ. ಆ ಅರ್ಜುನನಿಗೆ ಇದರ ಪ್ರಾಯಶ್ಚಿತ್ತವು ಕಟ್ಟಿಟ್ಟದ್ದೆಂದು ತೋರುವುದು."

ದುರ್ಯೋಧನನ ಆಲಿಂಗನದಿಂದ ದೂರಾಗುತ್ತ ಕರ್ಣನು

"ಯುವರಾಜ, ನನ್ನ ಮನಸ್ಸಿನಲ್ಲಿ ಸೇಡಿಗೆ ಸ್ಥಾನವಿಲ್ಲ. ಸಾವು ಯಾರನ್ನು ಬಿಡುತ್ತದೆ? ಜನ್ಮದೊಂದಿಗೇ ಅದರ ಬಾಂಧವ್ಯ ಇದ್ದೇ ಇರುತ್ತದೆ. ವೃಷಸೇನನು ಕೃತಾರ್ಥತೆಯ ಸಾವನ್ನು ಕಂಡಿದ್ದಾನೆ ಆದರೆ ಅವನ ಸಾವಿನೊಂದಿಗೆ ನನ್ನ ಜೀವನದ ಅಂತ್ಯವಾಯಿತಲ್ಲ ; ಎಂದು ನನಗೆ ದುಃಖವಾಗುತ್ತಿದೆ" ಎಂದ.

"ನಿನ್ನ ಅಂತ್ಯವೆ ?"

"ನಿಜ ಯುವರಾಜ, ಮಕ್ಕಳೇ ತಂದೆಯ ವಾರಸುದಾರರು. ಅವರ ರೂಪದಲ್ಲಿಯೇ ನಮ್ಮ ಜೀವನವು ಮುಂದುವರೆಯುತ್ತದೆ. ನಮ್ಮ ಈ ಜೀವನ ಮುಗಿದರೂ ಕಾಲಾನಂತರದ ನಮ್ಮ ಜೀವನ ಪ್ರವಾಹ ಅಖಂಡವಾಗಿ ಸಾಗುತ್ತದೆ ಎಂಬ ಕಲ್ಪನೆಯು ಮೃತ್ಯುವಿನ ಅಸ್ತಿತ್ವವನ್ನೇ ಮರೆಸುವಂತೆ ಮಾಡುತ್ತದೆ. ಈ ಜೀವನಪ್ರವಾಹವು ವೃಷಸೇನನ ಮರಣದಿಂದ ತುಂಡರಿಸಿ ಹೋಯಿತಲ್ಲ. ಎಂಬ ನೋವು ನನ್ನ ಆತ್ಮವನ್ನು ಹಿಂಡಿಬಿಟ್ಟಿದೆ. ಒಂದು ವೇಳೆ ನಾನು ಹೋದರೂ ಅವನಿರಬೇಕಾಗಿತ್ತು."

ಕತ್ತಲೆಯು ವ್ಯಾಪಿಸುತ್ತಿರುವದನ್ನು ಗಮನಿಸಿದ ಕರ್ಣನು

"ಯುವರಾಜ, ರಾತ್ರಿಯಾಗುತ್ತಲಿದೆ. ತಾವು ಶಿಬಿರದತ್ತ ನಡೆಯಿರಿ. ಹೀಗೆ ರಾತ್ರಿಯ ಕಾಲದಲ್ಲಿ ಯುದ್ಧಭೂಮಿಯಲ್ಲಿ ಸಂಚರಿಸಬಾರದು" ಎಂದ.

"ನಾನು ನಿನ್ನನ್ನು ಬಿಟ್ಟುಬರುವೆ"

"ಬೇಡ ವೃಷಾಲಿಯ ಮುಂದೆ ನಾನೊಬ್ಬನೇ ಹೋಗಲು ಅಪೇಕ್ಷಿಸುವೆ, ನಾಳೆ ನಿರ್ಣಾಯಕ ಯುದ್ಧವಾಗಲಿದೆ. ಗೆಳೆಯಾ, ನಾಳೆ ಈ ಭಯಾನಕ ಯುದ್ಧವು ಮುಗಿದು ಹೋಗುವದು."

"ನಿಜವೇ !"

"ನಾಳೆ ಯುದ್ಧವು ನಿಲ್ಲಲೇಬೇಕು."

ದುರ್ಯೋಧನನು ಕರ್ಣನ ಅಪ್ಪಣೆಯನ್ನು ಪಡೆದು ಶಿಬಿರದತ್ತ ಮರಳಿ ಹೊರಟುಬಿಟ್ಟ. ಕರ್ಣನ ರಥವು ನಿವಾಸದತ್ತ ಸಾಗಿತು ಆತನ ಕಣ್ಮುಂದೆ ವೃಷಾಲಿಯೇ ಕಾಣುತ್ತಿದ್ದಳು ಈ ವಾರ್ತೆಯನ್ನು ತಿಳಿಸಲು ಮನೆಗೆ ಹೋಗುವುದಕ್ಕಿಂತ ಬೇರೆ ಎಲ್ಲಿಯಾದರೂ ಬಹು ದೂರ ಹೋಗಬಾರದೇಕೆ ? ಎಂದು ಆತನ ಮನಸ್ಸು ಯೋಚಿಸುತ್ತಿತ್ತು.

ರಥವು ನಿಂತಾಗ ಮನೆಯ ಮೊದಲ ಮೆಟ್ಟಲಲ್ಲಿಯೇ ವೃಷಾಲಿ ನಿಂತಿರುವುದು ಕಾಣಿಸಿತು. ಅವಳನ್ನು ಮಾತನಾಡಿಸುವ ಧೈರ್ಯವೇ ಬಾರದಂತಾಯಿತು. ಕರ್ಣನ ಹೆಗಲ ಮೇಲಿರದ ಹೊದಿಕೆಯು ಅವಳ ಗಮನವನ್ನು ಸೆಳೆಯಿತು. ತನ್ನ ಪತಿಯ ರಥದ ಹಿಂದೆ ಧ್ವಜಹೀನವಾದ ರಥವನ್ನು ಕಂಡಾಗ ಅವಳ ಮನದ ದುಗುಡವು ಮತ್ತಷ್ಟು ಹೆಚ್ಚಾಗತೊಡಗಿತು. ಅಧೋವದನನಾಗಿ ಅತೀ ಸೋತು ಹೋದ ತನ್ನ ಪತಿಯು ಆಯಾಸದಿಂದ ಒಂದೊಂದೇ ಮೆಟ್ಟಲನ್ನು ಹತ್ತುತ್ತಿರುವದನ್ನು ಕಂಡಾಗ ಅವಳು ತುಂಬ ವ್ಯಾಕುಲಳಾಗಿ,

"ನಾಥಾಽಽ" ಎಂದಳು.

ಆ ಶಬ್ದದಿಂದಾಗಿ ಕರ್ಣನು ತನ್ನ ತಲೆಯನ್ನು ಮೇಲೆತ್ತಿದ, ವೃಷಾಲಿಯ ಪರಿಸ್ಥಿತಿಯು ಅವನ ಗಮನಕ್ಕೆ ಬಂದಿತು. ಉಳಿದ ಪಾವಟಿಗೆಗಳನ್ನೆಲ್ಲಿ ಒಂದೇ ಹಾರಿಕೆಗೆ ದಾಟಿ ಮುಂದೆ ಬಂದು ನಿಂತ.

"ತಾವು ಬಂದಿರಿ, ಆದರೆ ನನ್ನ ವಸೂ ಎಲ್ಲಿದ್ದಾನೆ ?"

ಅಸ್ಥಿರಳಾದ, ಭಯಭೀತಳಾದ. ವೃಷಾಲಿಯ ದೃಷ್ಟಿಗೆ ತನ್ನ ದೃಷ್ಟಿ

ಯನ್ನಿಟ್ಟು ನೋಡುವುದು ಕರ್ಣನಿಗೆ ತುಂಬ ಕಠಿಣವಾಯಿತು. ಆದರೂ ಅವನು ಸಾವರಿಸಿಕೊಂಡು,

"ನಮ್ಮ ವೃಷಸೇನನು ಇಂದು ಅಮರನಾದ, ಆತನು ರಣರಂಗದಲ್ಲಿ ಅರ್ಜುನನ ಕೈಯಿಂದ ವೀರಸ್ವರ್ಗವನ್ನು ಪಡೆದ. ವೃಷಾಲೀ ಆತನ ಪರಾಕ್ರಮಕ್ಕೆ ಎಣೆಯೇ ಇಲ್ಲ" ಎಂದ.

ಕಣ್ಣಲ್ಲಿ ಧಾರಾಕಾರವಾದ ಕಣ್ಣೀರನ್ನು ತುಂಬಿಕೊಂಡಿದ್ದು ಥರಥರನೆ ನಡುಗುತ್ತಿದ್ದ ಆ ತಾಯಿಯು ಕೇಳಿದಳು.

"ಪರಾಕ್ರಮವೆಂಥದು ! ಜೀವಂತರಾಗಿದ್ದುಕೊಂಡು ಪರಾಕ್ರಮವನ್ನು ತೋರಿಸಲು ಬರುವದಿಲ್ಲವೆ ?"

ಕರ್ಣನು ಅವಳನ್ನು ಹತ್ತಿರಕ್ಕೆ ಬರಮಾಡಿಕೊಂಡ. ವೃಷಾಲಿಯಂತೆಯೇ ಅವನ ಸ್ಥಿತಿಯಾಗಿತ್ತು. ಅದರೂ ಅವನು ತನ್ನ ದುಃಖವನ್ನು ಬದಿಗಿಟ್ಟು.

"ವಸೂ ಅಳಬೇಡ, ಯಾವುದರಿಂದ ಆನಂದವಾಗಬಹುದೋ ಅಂಥ ಮರಣವನ್ನೇ ನಮ್ಮ ಮಗನು ಅನುಭವಿಸಿದ್ದಾನೆ. ಪರಾಕ್ರಮವನ್ನು ತೋರಿಸಿಯೂ ಬದುಕಬಹುದು. ಆದರೆ ಅಂಥವರಿಗೆ ಆಯುಷ್ಯದ ಕೊನೆಯ ಭಾಗದಲ್ಲಿ ವೀರಗತಿಯೇ ಪ್ರಾಪ್ತವಾಗುವದೆಂಬ ನಂಬಿಕೆಯೇನಿಲ್ಲ. ವೀರಸ್ವರ್ಗವನ್ನು ಗಳಿಸಿಕೊಳ್ಳುವುದೂ ಸುಲಭದ ಮಾತೇನಲ್ಲ. ವೃಷಸೇನನಿಗಾಗಿ ಕಣ್ಣೀರಿಡುವುದು ಅವನನ್ನು ಹೆತ್ತ ನಮಗೆ ಶೋಭಿಸಲಾರದು. ಇಲ್ಲಿಯವರೆಗೆ ನಡೆದ ಯುದ್ಧದಲ್ಲಿ ನಾವು ಕಳೆದುಕೊಂಡುದೇನು ಕಡಿಮೆಯದೇ ? ರಣಭೂಮಿಯನ್ನು ಹಾಸಲಾಗಿದೆ. ಅದೂ ಬೆಳೆದಂತೆಲ್ಲ ಅದರೊಂದಿಗೆ ವಿಸ್ತರಿಸಲ್ಪಡುವ ದುಃಖವನ್ನೂ ನಾವು ಸಹನೆ ಮಾಡಿಕೊಳ್ಳಬೇಕಲ್ಲವೆ?"

"ನಾಥ !" ಮುಂದೆ ಅವಳಿಂದ ಶಬ್ದಗಳೇ ಹೊರಡಲಿಲ್ಲ,

"ಸಮಾಧಾನವನ್ನು ತಂದುಕೋ, ದುಃಖವನ್ನು ತಡೆಹಿಡಿ. ವಸೂ, ಈ ರಣಾಂಗಣದಲ್ಲಿ ಕಾಣಬರುವ ಮೋಹರಗಳು ಬೇರೆ ಬೇರೆ ಎಂದು ತೋರಿದರೂ ಆ ವಿಧಾತನ ಪೆಟ್ಟಿಗೆಯುಲಿಲ್ಲಿ. ಆ ಎಲ್ಲ ರತ್ನಗಳು ಒಂದೇ ಎಂದೆನಿಸುತ್ತವೆ. ಯಾರಿಗೆ ಗೊತ್ತು ಈ ವೇಳೆಗಾಗಲೇ ವೃಷಸೇನ ಹಾಗೂ ಅಭಿಮನ್ಯು ಇಬ್ಬರೂ ಕೂಡಿಕೊಂಡು ಆಟವಾಡುತ್ತಿರಬಹುದೇನೋ."

ವೃಷಾಲಿಗೆ ತನ್ನ ಆಧಾರವನ್ನು ಕೊಟ್ಟು ಅವಳನ್ನು ನಿಧಾನವಾಗಿ ನಡೆಸಿಕೊಂಡು ಶಯ್ಯಾಗೃಹಕ್ಕೆ ಕರೆದುಕೊಂಡು ಬಂದ. ಮಗನು ಇಲ್ಲದಂತಾದನೆಂಬ ಕಲ್ಪನೆಯೇ ಅವಳಿಗೆ ಅಸಹ್ಯವನ್ನುಂಟುಮಾಡಿತ್ತು. ಕೇವಲ ಎರಡೇ ಎರಡು ದಿನಗಳ ಹಿಂದೆ ವೃಷಸೇನನು ಅವಳ ಮುಂದೆ ಕುಳಿತುಕೊಂಡು ತನ್ನ ರಣಾಂಗಣದ ಪರಾಕ್ರಮಗಳನ್ನೆಲ್ಲ ಕಥೆಯಂತೆ ಹೇಳಿಕೊಂಡಿದ್ದ. ಆ ಘಟನೆಗಳನ್ನೆಲ್ಲ ವಿವರಿಸುವಾಗ ಅವನ ಮುಖದಲ್ಲಿ ವಿಲಕ್ಷಣವಾದ ವೀರಶ್ರೀ ಕಾಣಬರುತ್ತಿತ್ತು. ಅದನ್ನೆಲ್ಲ ನೆನಸಿಕೊಂಡ ಅವಳಿಗೆ ಸಹಿಸಲಾರದಂತಹ ದುಃಖವಾಗತೊಡಗಿತು. ಆದರೂ ಅವಳು,

"ಇದೆಲ್ಲ ಹೇಗೆ ನಡೆಯಿತು?" ಪ್ರಶ್ನಿಸಿದಳು.

"ರಣಾಂಗಣದಲ್ಲಿ ನಾನು ಬೇರೊಂದು ಭಾಗದಲ್ಲಿ ಯುದ್ಧನಿರತನಾಗಿದ್ದೆ. ವೃಷಸೇನನು ನಕುಲನನ್ನು ಪರಾಭವಗೊಳಿಸಿದ. ಅದೇ ಸಮಯಕ್ಕೆ ಸರಿಯಾಗಿ ಅರ್ಜುನನು ಆತನಿಗೆದುರಾದ. ಅರ್ಜುನನ ರೂಪ ಹಾಗೂ ಪರಾಕ್ರಮವನ್ನು ಕಂಡು ವೃಷಸೇನನು ಸ್ವಲ್ಪವೂ ಗಾಬರಿಗೊಳ್ಳಲಿಲ್ಲ. ತನಗಿದ್ದ ಶಕ್ತಿಯಲ್ಲಿಯೇ ಆತನು ಯುದ್ಧ ನಿರತನಾಗಿದ್ದ. ಅರ್ಜುನನು ವೃಷಸೇನನಿಗೆ ಮುತ್ತಿಗೆ ಹಾಕಿದ್ದಾನೆಂದು ಕೇಳಿದೊಡನೆ ನಾನು ಆತನ ಸಹಾಯಕ್ಕಾಗಿ ಧಾವಿಸಿದೆ. ಆದರೆ ಆ ವೇಳೆಗಾಗಲೇ ತುಂಬ ಸಮಯ ಗತಿಸಿಹೋಗಿತ್ತು. ನನ್ನೆದುರಿನಲ್ಲಿಯೇ ಅರ್ಜುನನಿಂದ ಬಿಡಲ್ಪಟ್ಟ ಬಾಣವು ಹಾದುಹೋಯಿತು. ರಣಭೂಮಿಯಲ್ಲಿ ಚಿರನಿದ್ರೆಯನ್ನು ಹೊಂದಿದ ವೃಷಸೇನನತ್ತ ನಾನು ಹೋದೆ. ಅವನ ರೂಪದಲ್ಲಿ ಯಾವ ಬದಲಾವಣೆಗಳೂ ಆಗಿರಲಿಲ್ಲ. ನಾನು ಬಂದುದನ್ನು ಕಂಡು ಮುಗುಳುನಗೆಯಿಂದ ನನ್ನನ್ನು ನೋಡಿದ. ಆ ನೋಟದಲ್ಲಿ ಯಾವ ಮಾರ್ಪಾಟನ್ನೂ ನಾನು ಕಾಣಲಿಲ್ಲ."

"ಏನೂ ಹೇಳಲಿಲ್ಲವೇ?" ನಡುಗುತ್ತಿದ್ದ ಧ್ವನಿಯಲ್ಲಿ ಅವಳು ಕೇಳಿದಳು.

ಇಲ್ಲವೆಂಬಂತೆ ಆತನು ತನ್ನ ಗೋಣನ್ನಲ್ಲಾಡಿಸಿ "ಇಲ್ಲ, ಆತನಿಗೆ ಅಷ್ಟು ಅವಕಾಶವು ದೊರೆಯಲಿಲ್ಲ. ಅರ್ಜುನನ ಶರಸಂಧಾನವು ತನ್ನ ಗುರಿಯನ್ನು ಸಾಧಿಸಿತು. ದುಃಖವು ಯಾವಾಗಲೂ ವಿರಹದಲ್ಲಿರುತ್ತದೆ.

ಹೋಗುವವರು ಯಾವಾಗಲೂ ದುಃಖದಿಂಯ ಮುಕ್ತರಾಗುತ್ತಾರೆ. ಆದರೆ ಹಿಂದುಳಿದವರು ಮಾತ್ರ....ನಾನು ಕೇವಲ ವೃಷಸೇನನ ಅಗಲಿಕೆಯನ್ನೇ ಹೊತ್ತು ತಂದಿಲ್ಲ...." ಎಂದ.

ವೃಷಾಲಿಯು ಮುಖವೆತ್ತಿ ನೋಡಿದಾಗ ಕರ್ಣನ ನೇತ್ರಗಳು ತುಂಬಿ ಬಂದಿದ್ದವು.

"ವಸೂ, ಅನುಭವಿಸುವ ಮಹಾಪೂರವನ್ನೇ ನಾನು ಹೊತ್ತು ತಂದಿರುವೆ. ನನ್ನ ಮನಸ್ಸಿಗೂ ವೇದನೆಯಾಗುವದಿಲ್ಲವೆಂದು ತಿಳಿದಿರುವೆಯಾ. ಇಂದು ಕೇವಲ ಮಗನನ್ನು ಕಳೆದುಕೊಂಡೆನೆಂದಲ್ಲ, ಮತ್ತೆಂದೂ ಸಿಗಲಾರ ದಂತಹ ನಮ್ಮ ಚಕ್ರಧರನನ್ನೂ...."

"ಭಾವಾಜೀಽಽ"

"ಹೌದು. ನನ್ನ ಸರ್ವಸ್ವವೆಲ್ಲವೂ ಇಂದು ನಾಶವಾದಂತಾಗಿದೆ. ಅವನ ಬೆನ್ನಿಗೇ ಯಾರೋ ಕೊಡಲಿಯ ಪೆಟ್ಟನ್ನು ಹಾಕಿದರು ಅಂಥ ಪರಿಸ್ಥಿತಿ ಯಲ್ಲಿಯೂ ಆತ ನನ್ನನ್ನು ಹುಡುಕಿಕೊಂಡು ಬಂದಿದ್ದ. ವಸೂ. ನಗುಮುಖ ದಿಂದ ದುಃಖವನ್ನು ಹೇಗೆ ಸಹನ ಮಾಡಿಕೊಳ್ಳಬೇಕೆಂಬುದನ್ನು ಆತನೇ ನನಗೆ ಕಲಿಸಿಹೋದ. ವೃಷಸೇನನನ್ನು ನಾನು ಕಳೆದುಕೊಂಡೆ. ಆಗ ಅರ್ಜುನನ ಕೃತಿಯ ಬಗ್ಗೆ ನನಗೆ ಕೋಪವೆನ್ನಿಸಲಿಲ್ಲ. ಅಭಿಮನ್ಯುವಿನ ಮರಣವಾರ್ತೆಯಿಂದ ಆತನು ಎಂಥ ದುಃಖವನ್ನು ಅನುಭವಿಸಿರಲಿಕ್ಕಿಲ್ಲ ಎಂಬ ಕಲ್ಪನೆಯ ಅನುಭವ ನನಗಾಯಿತು. ದಾಸಿಯಾದ ಕರ್ಣ ತನ್ನ ಜೀವನ ದಲ್ಲಿಯೇ ಅತ್ಯಂತ ಬೆಲೆಬಾಳುವ ದಾನವನ್ನು ಕೊಟ್ಟಂತಾಯಿತೆಂದು ಆ ಕ್ಷಣದಲ್ಲಿ ನನಗನ್ನಿಸಿತು. ವಸೂ, ಇನ್ನು ಕಣ್ಣೀರಿಗೆ ಸ್ಥಾನವೇ ಇಲ್ಲ. ನಾಳೆ ನಿರ್ಣಾಯಕವಾದ ಯುದ್ಧ ಮಾಡುವುದಾಗಿ ಅರ್ಜುನನಿಗೆ ಆಹ್ವಾನವನ್ನಿತ್ತಿ ದ್ದೇನೆ. ನಾಳೆ ಅರ್ಜುನ ಅಥವಾ ನಾನು ಹೀಗೆ ಯಾರಾದರೊಬ್ಬರು ನಾಳಿನ ಸೂರ್ಯಾಸ್ತವನ್ನು ನೋಡಬಹುದು."

ಕೊನೆಯ ಶಬ್ದಗಳನ್ನು ಕೇಳಿದಾಗ ವೃಷಾಲಿ ಮತ್ತಷ್ಟು ಹತಾಶ ಳಾದಳು.

"ಹೀಗೆ ಹೇಳಬೇಡಿರಿ, ನೀವು ವಿಜಯಿಗಳಾಗುತ್ತೀರಿ ! ಆ ಅರ್ಜುನನನ್ನು ನೀವು ಸಹಜವಾಗಿ ಪರಾಭವಗೊಳಿಸುವಿರಿ."

"ಅದು ನನ್ನ ಯೋಗ್ಯತೆಯಾಗಿರಬಹುದು. ಆದರೆ ವೃಷಾಲಿ, ಯುದ್ಧವು ಕೇವಲ ಯೋಧನ ಬಲವನ್ನೇ ಅವಲಂಭಿಸಿರುವುದಿಲ್ಲ. ಸಾರಥಿಯಾದವನಿಗೂ ಅಂಥ ಬಲವಿರಬೇಕಾಗುತ್ತದೆ. ಸಾಮಾನ್ಯನಾದವನಿಗೆ ವಜ್ರಬಲವನ್ನು ತಂದು ಕೊಡುವಂತಹ ಆ ಕೃಷ್ಣನ ಸಾರಥ್ಯದ ಮುಂದೆ ಯಾವಾಗಲೂ ನನ್ನನ್ನು ನಿಂದಿಸುವುದರಲ್ಲಿಯೇ ತೃಪ್ತಿಯನ್ನು ಕಾಣುವ ಶಲ್ಯರಾಜನು ಸಮಾನನಾಗುವನೇ? ವೃಷಾಲಿ, ನಾಳೆ ನಾನು ಇಲ್ಲದಿದ್ದರೂ ನಡೆದೀತು, ಆದರೆ ನನ್ನ ಅನಂತರ ನನ್ನನ್ನು ಅರ್ಥಮಾಡಿಕೊಳ್ಳುವಂಥವರು ಯಾರಾದರೂ ಸಿಕ್ಕಬಹುದೆಂದೆನಿಸುವದಿಲ್ಲ. ನನಗೆ ಸಂಪೂರ್ಣವಾಗಿ ತಿಳಿ ಹೇಳುವ ನೀನು ............ನೀನಾದರೂ ಹಿಂದುಳಿಯುಬಹುದು. ಅದಕ್ಕಾಗಿ ನನಗೆ ಸಮಾಧಾನವೆನ್ನಿಸುವದು."

"ಇಲ್ಲ ನಾಥಾ........ಬದುಕುವುದರಲ್ಲಿ ಅರ್ಥವಿಲ್ಲ."

"ವಸೂ, ನನಗಾಗಿ ಒಂದು ಕೆಲಸ ಮಾಡುವೆನೆಂದು ವಚನ ಕೊಡು."

"ವಚನವೆಂಥದು ?"

"ಒಂದು ವೇಳೆ ನಾನು ಮರುಳಿಬಾರದಿದ್ದರೆ ಉಳಿದವರ ಬಗ್ಗೆ ನೀನು ಶಾಪವನ್ನು ಮಾತ್ರ ಕೊಡಬೇಡ. ಯಾಕೆಂದರೆ ನಿನ್ನ ಶಾಪವನ್ನನುಭವಿಸುವ ಶಕ್ತಿಯು ಅವರಲ್ಲುಳಿದುಕೊಂಡಿಲ್ಲ. ಅಷ್ಟೇ ಅಲ್ಲ, ಅಂಥ ಶಾಪದಿಂದ ಅವರನ್ನುಳಿಸಿಕೊಳ್ಳುವ ಶಕ್ತಿಯು ಆ ಕೃಷ್ಣನಲ್ಲಿಯೂ ಇರಲಾರದು."

ವೃಷಾಲಿಯು ಅಂದಿನ ರಾತ್ರಿಯನ್ನೆಲ್ಲ ಕರ್ಣನ ತೋಳು ತೆಕ್ಕೆಯಲ್ಲಿಯೇ ಕಳೆದಳು. ಅರೆನಿದ್ರೆಯಲ್ಲಿಯೂ ಸಹ ಅವಳಿಗೆ ದುಃಖವು ಮರುಕಳಿಸಿದಂತಾಗುತ್ತಿತ್ತು. ಅವಳ ಆಲಿಂಗನದಲ್ಲಿ ರಾತ್ರಿ ಹೇಗೆ ಕಳೆದನೆಂಬುದೇ ಕರ್ಣನಿಗೆ ತೋಚದಾಯಿತು.

## 56

ನಸುಕಿನಲ್ಲಿ ಕರ್ಣನೊಬ್ಬನೇ ಹೊರಭಾಗದ ಉಪ್ಪರಿಗೆಯಲ್ಲಿ ನಿಂತುಕೊಂಡಿದ್ದ. ವಾತಾವರಣವು ಪ್ರಶಾಂತವಾಗಿತ್ತು. ಆಕಾಶದಲ್ಲಿರುವ ನಕ್ಷತ್ರಗಳು ಸೂರ್ಯ ಪ್ರಭಾವದಿಂದ ನಿಸ್ತೇಜವಾಗತೊಡಗಿದ್ದವು. ಆ ಶಾಂತತೆ

ಯನ್ನೇ ಕರ್ಣನು ಅನುಭವಿಸುತ್ತಲಿದ್ದ. ಅಸಾಧ್ಯವಾದ ಚಳಿಯಿದ್ದರೂ ಅವನು ಧರಿಸಿದ್ದ ಶಿರಸ್ತ್ರಾಣ ಹಾಗೂ ಕವಚಗಳಿಂದ ಆ ಚಳಿಯು ಅವನಿಗೆ ಮುಟ್ಟದಂತಾಗಿತ್ತು. ಇನ್ನು ಕೆಲವೇ ಸಮಯದಲ್ಲಿ ನಿರ್ಣಾಯಕ ಯುದ್ಧವು ಪ್ರಾರಂಭವಾಗುವದರಲ್ಲಿತ್ತು.

ನಿರ್ಣಾಯಕ ಯುದ್ಧ. ಯಾವಾಗ ಎಲ್ಲಿ ನಡೆಯಬಹುದೆಂಬುದು ತಿಳಿಯದಿದ್ದರೂ ನಡೆಯುತ್ತಿರುವ ಯುದ್ಧದ ಕೊನೆ ಎಂಬುದಂತೂ ನಿಶ್ಚಯ ವಾಗಿತ್ತು. ಆದರೆ ಅದು ಕೊನೆಗೊಳ್ಳುವ ಬಗೆ ಹೇಗೆ? ಅದನ್ನು ಹೇಳು ವಂತಿಲ್ಲವಾದರೂ ಯುದ್ಧವಂತೂ ಮುಂದುವರಿಯುವಂತಿಲ್ಲ. ಎಷ್ಟು ಬೇಗನೇ ಮುಗಿದರೆ ಅಷ್ಟು ಕ್ಷೇಮ. ಶಸ್ತ್ರಸ್ಪರ್ಧೆಯ ಕಾಲದಲ್ಲಿ ಅರ್ಜುನನು ಕೊಟ್ಟ ಆಹ್ವಾನ, ಆ ಸೇಡು, ಹಾಗೂ ಅಪಮಾನದಿಂದ ಹುಟ್ಟಿದ ಮತ್ಸರ, ಇವೇ ಮೊದಲಾದುವುಗಳಿಂದ ಅವನನ್ನು ಸಂಹಾರ ಮಾಡುವ ಚಿಂತೆಯಲ್ಲಿಯೇ ಈ ಜೀವನ ಕಳೆಯಿತು. ಕವಚ ಕುಂಡಲಗಳನ್ನು ದಾನ ಮಾಡುವಾಗ ನನ್ನ ಆ ಸೇಡಿಗೆ ಧಕ್ಕೆ ಬಂದೀತೆಂದೇನೂ ಅನ್ನಿಸಲಿಲ್ಲ. ಅದರ ಬದಲಾಗಿ ಆತ್ಮ ಬಲದ ಸಾಕ್ಷಾತ್ಕಾರವನ್ನು ಪಡೆದಂತೆನ್ನಿಸಿತು. ಯುದ್ಧವು ಅನಿವಾರ್ಯ ಎಂಬುದನ್ನು ದುರ್ಯೋಧನನಿಗೆ ಖಚಿತ ಮಾಡಿಕೊಟ್ಟವನೂ ನಾನೇ. ಅರ್ಜುನನು ಕೃಷ್ಣನ ಮಿತ್ರತ್ವವನ್ನು ಸಂಪಾದಿಸಿದನೆಂದು ತಿಳಿಯಿತು. ಆಗಲೂ ನನ್ನ ಪ್ರತಿಜ್ಞೆಗೆ ಇದೆಂದೂ ಅಡಚನೆ ಎಂದೆನಿಸಲಿಲ್ಲ.

ಇಷ್ಟೆಲ್ಲವನ್ನೂ ನಾನು ಕಡೆಗಣಿಸಿದ್ದೆ, ಆದರೆ ಕೃಷ್ಣನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ನನಗೆ ವಜ್ರಾಘಾತವನ್ನು ಮಾಡಿದ.

ಈ ಮಾತು ಮೊದಲೇ ತಿಳಿದಿದ್ದಲ್ಲಿ!

ಒಂದು ವೇಳೆ ಕೃಷ್ಣನಿಗೆ ಗೊತ್ತಿದ್ದಲ್ಲಿ ಆತ ಮೊದಲೇ ಏಕೆ ಈ ಮಾತನ್ನು ತಿಳಿಸಲಿಲ್ಲ?

ಭೀಷ್ಮ ಹಾಗೂ ವಿದುರರಿಗೂ ಈ ವಿಚಾರವು ತಿಳಿದ ಮಾತಾಗಿತ್ತು. ಸಮಯ ನೋಡಿಕೊಂಡು ಈ ವಿನಾಶವನ್ನು ತಡೆಯುವುದು ಅವರ ಕೈಯ ಲ್ಲಿಯೇ ಇತ್ತಲ್ಲವೇ? ನಾನಾರು? ಎಲ್ಲಿಂದ ಬಂದೆ? ಯಾರವನು? ಎಲ್ಲಿಗೆ ಹೋಗುವೆ? ಈ ಪ್ರಶ್ನೆಗಳನ್ನು ಬಿಡಿಸುವುದಕ್ಕಾಗಿಯೇ ಜೀವನವಿಡೀ ಹೋರಾಡಿದೆ. ಈ ನನ್ನ ಎಲ್ಲಪ್ರಶ್ನೆಗಳಿಗೂ ಉತ್ತರ ಸಿಗುವ ಸಮಯದಲ್ಲಿ

ಒಂದು ಭಯಂಕರವಾದ ಅಶಾಂತತೆಯನ್ನು ನಾನು ಉಡಿಯಲ್ಲಿ ಕಟ್ಟಿಕೊಳ್ಳುವಂತಾಯಿತು ! ಆತ್ಮಶೋಧನೆ ಎಂದರೆ ಜೀವನದ ಅಂತ್ಯ ಎಂದು ಅರ್ಥ ಮಾಡಿಕೊಳ್ಳಬೇಕೆ ? ಹಾಗಿಲ್ಲದಿದ್ದರೆ ಈ ಕೃಷ್ಣ ನನ್ನ ಜೀವನದ ರಹಸ್ಯವನ್ನು ತಿಳಿಸದಿದ್ದರೆ ? ಆಗ ನನ್ನ ಜೀವನದ ಅಂತರಂಗದಲ್ಲಿ ಕುದಿಯುತ್ತಿದ್ದ ಸೇಡಿನ ಕಿಚ್ಚು ಎಂದೂ ಶಾಂತವಾಗುತ್ತಿರಲಿಲ್ಲ. ಜಯವನ್ನು ಸಂಪಾದಿಸುವ ನನ್ನ ಅಪೇಕ್ಷೆಯು ಇದ್ದಕ್ಕಿದಂತೆ ಎಂದೂ ಮಾಯವಾಗುತ್ತಿರಲಿಲ್ಲ. ಬೆಳೆದು ಬಂದ ನನ್ನ ಕೀರ್ತಿಗೆ ಅಡ್ಡಬಂದು ನಿಲ್ಲುವಂಥ ಯಾವ ಪರಿಸ್ಥಿತಿಯೂ ಬರುತ್ತಿರಲಿಲ್ಲ. ಇನ್ನು ಈಗ ಉಳಿದಿರುವದೆಂದರೆ ಕೇವಲ ಅಪಜಯದ ಅನುಭವ ಮಾತ್ರ. ದೈವವು ನನ್ನೊಂದಿಗೆ ಇಂಥ ವಿಚಿತ್ರ ಆಟವನ್ನಾಡಬಾರದಾಗಿತ್ತು.

ಈ ಆಟವನ್ನು ನಾನೇನು ಪ್ರಾರಂಭಿಸಿರಲಿಲ್ಲ. ದೈವವೇ ಅದನ್ನಾಡಿಸಿತು. ಇಂಥ ಭಯಾನಕವಾದ ಆಟವನ್ನು ಇನ್ನೊಂದೆಡೆಗೆ ನೋಡುವದೂ ಸಾಧ್ಯವಿಲ್ಲ ! ಒಂದೇ ತಾಯಿಯಿಂದ ಹುಟ್ಟಿದ ಜೀವರು ಹುಟ್ಟುತ್ತಿದ್ದಂತೆ ದೂರದೂರವಾಗುವಂತಾಯಿತು. ಒಬ್ಬರಿಗೊಬ್ಬರು ಪ್ರೇಮ, ವಿಶ್ವಾಸಗಳಿಂದ ಬೆಳೆಯುವದರ ಬದಲಾಗಿ ಅಣ್ಣತಮ್ಮಂದಿರಲ್ಲಿ ವೈರಭಾವ ಬೆಳೆಯುವಂತಾಯಿತು, ಭಗವಂತನಿಗೆ ಈ ಆಟ ಅಪೂರ್ವ ಎಂದೆನಿಸಿತೇನೊ ಆ ಮಹಾನುಭಾವ ಅದೇ ಅಣ್ಣತಮ್ಮಂದಿರ ಕೈಯಲ್ಲಿ ಭಯಾನಕವಾದ ಶಸ್ತ್ರಾಸ್ತ್ರಗಳನ್ನು ಕೊಟ್ಟು ರಣಾಂಗಣದಲ್ಲಿ ಒಬ್ಬರಮೇಲೊಬ್ಬರುಯುದ್ಧಮಾಡುವಂತೆ ಮಾಡಿದ. ಇದರಲ್ಲಿ ಕೊನೆಯ ನಿರ್ಣಯ ಯಾವುದು ?.... ದೈವವಾದರೂ ಸಂಯಮವನ್ನು ತಾಳಬಾರದಾಗಿತ್ತೇ ?

ಕರ್ಣನ ಗಮನವು ಆಕಾಶದಲ್ಲಿರುವ ನಕ್ಷತ್ರಗಳ ಮೇಲಿತ್ತು. ಆಕಸ್ಮಿಕವಾಗಿ ಉಜ್ವಲವಾದ ಒಂದು ನಕ್ಷತ್ರವು ಕಳಚಿಬಿದ್ದಂತೆ ತೋರಿತು. ಅದನ್ನು ಕಂಡು ಕರ್ಣನ ಮುಖದಲ್ಲಿ ಒಂದು ತರಹದ ಹಾಸ್ಯವು ಮೂಡಿತು.

ಲಕ್ಷೋಪಲಕ್ಷ ತಾರೆಗಳಲ್ಲಿ ಒಂದು ಕಳಚಿ ಬಿದ್ದಾಕ್ಷಣ ತಾರಾಗಣವೆಲ್ಲ ಕಳಚಿಬಿದ್ದಂತಾಯಿತೇ ? ಅದರಿಂದ ಯಾವ ಕೊರತೆಯೂ ಆಗಲಾರದು. ಆಕಾಶದ ತುಂಬೆಲ್ಲ ಹಣೆದುಕೊಂಡಿರುವ ಈ ತಾರೆಗಳೂ ಒಂದಿಲ್ಲೊಂದು ದಿನ ಅಳಿಸಿ ಕಳಚಿ ಹೋಗಬೇಕಾಗಬಹುದು. ಅವುಗಳೇನು ಪಾಪ ಮಾಡಿವೆಯೆ?

ಅವುಗಳ ಪುಣ್ಯ ನಶಿಸಿಹೋಯಿತೆ ? ಶುದ್ಧವಾದ ಅಗ್ನಿಯು ಯಾವುದರಿಂದ ಶಾಂತವಾಗುವುದು ? ಹಾಗೆ ಶಾಂತವಾಗಲು ಕಾರಣವೇನು ? ಯಾವಾಗಲೂ ತುಂಬಿ ಸೂಸುವ ಸಾಗರಕ್ಕೆ ಗಂಗಾ ನದಿಯು ನೀರೆ ಬೇಕೆಂಬ ಅಗತ್ಯವಿದೆಯೆ ? ಮಹಾ ಗಂಭೀರ ಭಾವದಿಂದ ತಲೆಯೆತ್ತಿ ನಿಂತುಕೊಂಡಿರುವ ಈ ಪರ್ವತಾವಳಿಗಳು ಭೂಕಂಪಗಳಿಂದ ನಡುಗಿ ಹೋಗುವುದೇಕೆ ? ಅವುಗಳೇನು ಪಾಪ ಮಾಡಿಸಿಯೆ? ಈ ಪಾಪ ಹಾಗೂ ಪುಣ್ಯಗಳ ಅರ್ಥವೇನು ?

ಅಪಮಾನದ ಬದಲಾಗಿ ಸೇಡು ! ನಿರ್ಮಲ ಜೀವನದ ಬಯಕೆ ಹಾಗೂ ಸೋಲಿನ ವಿಷಯದಲ್ಲಾಗುವ ದುಃಖ, ಇವು ಪಾಪವೆಂದು ಕರೆಸಿಕೊಳ್ಳುವವೆ ? ನಮ್ಮವರು ಯಾರಾದರೂ ಇರಬೇಕು. ಅವರು ನಮ್ಮ ಅಂತರಾತ್ಮವನ್ನು ಅರಿತವರಾಗಿರಬೇಕು. ಅಂತಃಕರಣದಿಂದ ಯಾರಾದರೂ ಮೈಮೇಲೆ ಕೈಯಾಡಿಸಬೇಕು. ತಮ್ಮ ಅಂತಃಕರಣದ ಬಂಧನಗಳಿಂದ ನಮ್ಮ ಬಲವನ್ನು ಹೆಚ್ಚಿಸುವಂತಾಗಬೇಕು. ಹೀಗೆಲ್ಲ ಅಪೇಕ್ಷೆಯಾದರೆ ಅದು ಸ್ಪರ್ಧೆ ಎಂದೆನಿಸುವುದೆ ? ಪರಮಾರ್ಥಕ್ಕೂ ಸ್ವಾರ್ಥದ ಬಲವಿರಬೇಕಾಗುತ್ತದಲ್ಲವೆ ?

ದಾನವು ಎಂದೂ ಏಕಾಂಗಿಯಾಗಿರುವದಿಲ್ಲ. ಮಿತ್ರಪ್ರೇಮದೊಂದಿಗೆ ಐಶ್ವರ್ಯ ಹಾಗೂ ಅಧಿಕಾರಗಳು ಕೈವಶವಾದವು. ಸೂತಪುತ್ರನ ಕೈಯಲ್ಲಿ ಆಧಿಪತ್ಯವು ಪ್ರಾಪ್ತವಾಯಿತು. ಆದರೆ ಇದರಿಂದ ಜೀವನವೆಲ್ಲ ಆ ಮಿತ್ರ ಪ್ರೇಮದಲ್ಲಿಯೇ ತೊಡುಗುವಂತಾಯಿತು. ಜೀವನದ ವಿಕಾಸಕ್ಕಾಗಿಯೇ ದಾತೃತ್ವದ ಉಪಯೋಗವೇನಾದರೂ ಇರುತ್ತದೆಯೆ ? ಹಾಗಾದರೆ ಅದೇ ಮನಸ್ಸಿನಲ್ಲಿ ಸೌಂದರ್ಯದ ಅಭಿಲಾಷೆ, ದಾತೃತ್ವದ ಅಹಂಕಾರ, ಸ್ನೇಹಮಯವಾದ ಅಖಂಡ ದಾಸ್ಯ, ಇವುಗಳ ಮುಂದೆ ಐಶ್ವರ್ಯವೆಂಥದು ? ಪಿಪಾಶಿಯು ಆರ್ತನಾಗಿರುವದೇ ಪುಣ್ಯ, ತೃಪ್ತನಾಗಿರುವುದೇ ಪಾಪ ! ಎಂದಾದರೆ ಇದರಲ್ಲಿ ಯಾವುದೋ ಒಂದು ತಪ್ಪಾಗಿರಬಹುದೆಂದೆನಿಸುವುದಲ್ಲವೇ ?

ಕನ್ನಡಿಯ ಮುಂದೆ ನಿಂತುಕೊಂಡು ರಣವೇಷ ಧಾರಣಮಾಡಿಕೊಳ್ಳುತ್ತಿರುವಾಗ ಸ್ವಂತದ ರೂಪವನ್ನು ನೋಡಿಕೊಳ್ಳುವ ಧೈರ್ಯವು ಇಂದು ಕಳೆದುಹೋದಂತಾಗಿತ್ತು. ಆತನ ಕಣ್ಮುಂದೆ ವೃಷಸೇನನು ಬಂದುನಿಂತಂತಾಗುತ್ತಿತ್ತು. ರಣಾಂಗಣದಲ್ಲಿ ಗಾಢವಾದ ಚಿರನಿದ್ರೆಯಲ್ಲಿರುವ ರೂಪವನ್ನೇ

ತಾನು ಹೆಗಲ ಮೇಲಿಟ್ಟುಕೊಂಡು ಬೆಳೆಸಿದ ಆ ವೃಷಸೇನನ ದೇಹ ಆ ರೂಪವೇ ಇಂದು ಆತನ ಕಣ್ಮುಂದೆ ಸುಳಿದಾಡುತ್ತಿತ್ತು. ಅದೇ ರೂಪ, ಅದೇ ಪರಿಚಿತ ಶರೀರ, ಆದರೆ ಈಗ ಕಾಣದಂತಾದುದಾದರೂ ಯಾವುದು ? ಆ ಚೈತನ್ಯ ! ಇಂದು ಅದರ ಕೊರತೆ ಅನ್ನಿಸಿದಂತಾಗಿದೆಯಲ್ಲ, ಆ ಪರಿಚಯ ಮತ್ತೆ ಎಂದಾದರೂ ಘಟಿಸಬಹುದೆ ? ಹಾಗಾದರೆ ಈಗ ಹೋಗುವದು ಎಂದರೆ ಎಲ್ಲಿಗೆ ? ಅದು ತಿಳಿದಿದ್ದಲ್ಲಿ ಈ ಮೃತ್ಯುವಿನ ಭಯವಾದರೂ ಇರುತ್ತಿರಲಿಲ್ಲ. ಆ ರೂಪದ ಮೋಹದಲ್ಲಿ ಮನುಷ್ಯ ಇಷ್ಟೊಂದು ಬಂಧಿತನಾಗುತ್ತಿರಲಿಲ್ಲ. ಚೈತನ್ಯವು ತಾನು ಮಾಡಿಕೊಂಡ ಜಡತ್ವದ ತ್ಯಾಗವನ್ನೇ ಮರಣ ಎಂದು ಗುರುತಿಸಬೇಕೆ ? ಹಾಗಿದ್ದಲ್ಲಿ ಈ ರೂಪ, ದೇಹಾದಿಗಳ ಮೋಹವಾದರೂ ಯಾತಕ್ಕೆ ?

ಬದುಕು ! ಇನ್ನು ಅದರ ವಿಚಾರವನ್ನು ಹೆಚ್ಚುಕಾಲ ಮಾಡುವ ಅಗತ್ಯವೆನಿಸಲಾರದು.

"ವೃಷಾಲೀ ಯಾವಾಗ ಬಂದೆ !"

"ತುಂಬ ಹೊತ್ತಾಯಿತು, ಯಾವದೋ ವಿಚಾರದಲ್ಲಿ ನೀವು ತಲ್ಲೀನ ರಾಗಿದ್ದಿರಿ, ಆದುದರಿಂದ ನಾನು ಸುಮ್ಮನಿದ್ದೆ."

"ರಣರಂಗಕ್ಕೆ ಹೋಗುವ ವೀರನು ಬೇರಿನ್ನೇನು ವಿಚಾರಮಾಡುತ್ತಾನೆ? ಯುದ್ಧಭೂಮಿಯಲ್ಲಿ ಎದುರಿಸಬೇಕಾದ ಶತ್ರುಗಳಾರು ? ಯಾವ ಋಣಾನು ಬಂಧವು ಎಳೆತಂದು ನಮ್ಮ ಮುಂದೆ ಆತನನ್ನು ನಿಲ್ಲಿಸುವುದು ? ಇವೇ ಮೊದಲಾದ ಅಜ್ಞಾತವೆನ್ನಿಸಿದ ಶತ್ರುಗಳನ್ನು ಕುರಿತಾದ ವಿಚಾರ. ಆದರೆ ಯಾರಿಗೆ ಋಣಾನುಬಂಧದ ಪರಿಚಯವಿದೆಯೋ, ಅಂಥ ಶತ್ರುಗಳೊಂದಿಗೆ ಯುದ್ಧ ಮಾಡಲು ಹೊರಡುವ ವೀರನಿಗೆ ಮನಸ್ಸಿನಲ್ಲಿ ಎಂಥ ಗೊಂದಲ ವಾಗಲಿಕ್ಕಿಲ್ಲ ?"

"ಎಂಥ ಋಣಾನುಬಂಧ ?"

ಅವಸರದಿಂದ ಕರ್ಣನು ಹೇಳಿದ,

"ಮಾನವತ್ವದ ಸಂಭಂಧ ಅಷ್ಟೇ ! ಇನ್ನು ಬೇರೆ ಯಾವದು! ವೃಷಾಲಿ ಕೃಷ್ಣನು ಯುದ್ಧಭೂಮಿಯಲ್ಲಿ ನನ್ನ ಮುಂದೆ ಕಾಣಿಸಿಕೊಂಡಾಗಲೆಲ್ಲ ಆತನು ಚಂಪಾನಗರಿಗೆ ಬಂದು ಹೋದ ಸುಮಧುರ ಗಳಿಗೆಯು ಆ ದಿನದ

ನೆನಪಾಗುತ್ತದೆ. ಆಗ ನನಗೆ ಆತ ಶತ್ರುಪಕ್ಷದ ಸಾರಥಿ ಎಂಬುದೆಲ್ಲ ಮರತೇ ಹೋಗುತ್ತದೆ."

ವೃಷಾಲಿಯು ಕೈಯ್ಯಲ್ಲಿದ್ದ ಶಾಲನ್ನು ನೋಡಿ ಕರ್ಣನು ತನ್ನೆರಡೂ ಕೈಗಳನ್ನು ಮೇಲೆ ಮಾಡಿದ ಆದರೆ ಅವಳು ನಿತ್ಯದಂತೆ ಅದನ್ನು ಸೊಂಟಕ್ಕೆ ಸುತ್ತಲಿಲ್ಲ, ಅದನ್ನು ಆತನ ಕೈಗೊಪ್ಪಿಸಿದಳು. ಆದರಿಂದ ಆಶ್ಚರ್ಯಚಕಿತ ನಾದ ಕರ್ಣನು,

"ಇಂದು ಶಾಲನ್ನು ಸೊಂಟಕ್ಕೆ ಸುತ್ತದೆ ?........"

"ಅದಕ್ಕೆ ಈಗ ಸಮಯವೇ ಉಳಿಯಲಿಲ್ಲ"....ಅವಳಿಗೆ ದುಃಖವು ಮರುಕಳಿಸಿತು.

ಕರ್ಣನು ಮುಂದೆ ಹೆಜ್ಜೆಯನ್ನಿಟ್ಟು ಅವಳನ್ನು ಸಮೀಪಕ್ಕೆ ಬರಮಾಡಿ ಕೊಂಡು ತನ್ನ ದುಃಖವನ್ನು ತೋರಿಸಿಕೊಳ್ಳದಂತೆ ಹೇಳಿದ.

"ವೃಷಾಲೀ, ಕರ್ಣನ ಈ ಜೀವನದಲ್ಲಿ ರಾಧಾಮಾತೆಯಿಂದ ಪ್ರಾಪ್ತ ವಾದ ಅಂತಃಕರಣ ಹಾಗೂ ನಿನ್ನ ಸಹವಾಸ ಇವುಗಳನ್ನು ಬಿಟ್ಟರೆ ದೊರೆತ ಸುಖ ತುಂಬ ಕಡಿಮೆ. ನಿನ್ನ ರೂಪವು ನನ್ನ ಸುಖಕ್ಕೆ ಕಾರಣವಾಯಿತು. ಇಂದು ರಣಾಂಗಣಕ್ಕೆ ಹೊರಟು ನಿಂತಾಗ ನನಗೆ ಜೀವನದಲ್ಲಿಯ ಯಾವ ಅಪೇಕ್ಷೆಗಳೂ ಪೂರ್ಣಗೊಳ್ಳಲಿಲ್ಲ. ಅಥವಾ ಅಪೂರ್ಣವಾದವು ಎಂದೆನಿಸ ತೊಡಗಿಲ್ಲ. ನೀನು ಈ ಕಣ್ಣೀರನ್ನು ತೊಡೆದುಹಾಕು. ರಣಭೂಮಿಗೆ ಹೊರಟಿರುವ ಪತಿಯು ತೋಳುಗಳಿಗೆ ಬಲದ ಆವಶ್ಯಕತೆ ಇರುತ್ತದೆ. ಆತನಿಗೆ ಅನುಕಂಪಾದಿಗಳಿಗೆ ಅಲ್ಲಿ ಎಡೆ ಎಂಬುದಿಲ್ಲ, ಇನ್ನು ನಾನು ಹೊರಡುವೆ."

ಕರ್ಣನ ಕೊನೆಯ ಶಬ್ದವನ್ನು ಕೇಳಿ ಅವಳು ಮತ್ತಷ್ಟು ಭಯಭೀತ ಳಾದಳು

"ರಣಾಂಗಣಕ್ಕೆ ಹೋಗುವಾಗಲೆಲ್ಲ ತಾವು ಯಾವಾಗಲೂ ನಾನು ಬರುವೆ ಎಂದು ಹೇಳುತ್ತಿದ್ದಿರಿ ಆದರೆ ಇಂದು........"

"ಆ ಶಬ್ದವು ತಪ್ಪಿ ನನ್ನ ಮುಖದಿಂದ ಹೊರಬಿದ್ದಿದೆ. ನೀನು ಕೆಳಗಿನ ವರೆಗೆ ಬರುವುದು ಬೇಡ, ಕೃಷ್ಣನು ಅಂದು ಹೇಳಿದ ಮಾತು ಸತ್ಯವಾದೀತು. ನಿರೂಪವು ಮಂದಗತಿಯದಾಗಿರಕೂಡದು. ಅದು ಬಹುಬೇಗನೇ ಮುಗಿಯು ವಂತಾಗಿರಬೇಕು. ಪ್ರಿಯೇ, ರಣಭೂಮಿಯಿಂದ ಮರಳುವುದರಲ್ಲಿಯೇ

ಜೀವನದ ಸಾರ್ಥಕ್ಯವೆಂಬುದಿದೆಯೇ ? ಯುದ್ಧಭೂಮಿಯಿಂದ ಮರಳಿದೆ ನೆಂದರೆ ಅಪಜಯವೆಂದೆನಿಸುವದು. ಒಂದು ವೇಳೆ ಯುದ್ಧಭೂಮಿಯಲ್ಲಿಯೇ ಹೊರಟುಹೋದೆನೆಂದರೆ ನಾನು ವಿಜಯಿಯಾದೆ ಎಂಬ ಮಾತನ್ನು ಖಂಡಿತ ವಾಗಿ ತಿಳಿದುಕೊಳ್ಳುವಿ. ನೀನು ಇಲ್ಲಿಯೇ ನಿಲ್ಲು, ಅಗೋ ಅತ್ತ ನೋಡು, ವಿಶ್ವದ ಅಂಧಕಾರವು ದೂರವಾಗುತ್ತಲಿದೆ. ಎಲ್ಲ ದಿಕ್ಕುಗಳೂ ಬೆಳಕನ್ನು ಕಾಣುತ್ತಲಿವೆ. ಅಂಧಕಾರವನ್ನು ದೂರಮಾಡಿ ಹೊರಹೊಮ್ಮುತ್ತಲಿರುವ ಸೂರ್ಯ ಕಿರಣಗಳಿಂದ ಸೃಷ್ಟಿಗೆ ಹೊಸರೂಪ ಧಾರಣ ಮಾಡಲು ಅವಕಾಶ ಸೀಯುವಂತೆ ತೋರುತ್ತಲಿದೆ. ಪ್ರಕೃತಿಗೆ ಹೊಸ ಚೈತನ್ಯವನ್ನು ಅದು ಕೊಟ್ಟಂತಾಗಿದೆ. ಹಿಂದಿನ ಕತ್ತಲೆಯಿಂದ ಕೊಡಮಾಡಿದ ವಿಶ್ರಾಂತಿಯು ನೆನಪು ಯಾರಿಗೂ ಉಳಿಯಲಾರದು. ಈ ಚಮತ್ಕಾರವನ್ನು ನೀನು ನೋಡುತ್ತಿರು."

ಕರ್ಣನು ಮುನ್ನಡೆಯಲಾರಂಭಿಸಿದ. ಮುಂದೆ ಸಾಗುತ್ತಲಿದ್ದ ಆ ಕರ್ಣನನ್ನೇ ವೃಷಾಲಿಯು ನೋಡುತ್ತಲಿದ್ದಳು. ಅವಳಿಗೆ ಉಸಿರುಗಟ್ಟಿ ದಂತಾಯಿತು. ಮೈಮೇಲೆ ಪ್ರಜ್ಞೆಯೂ ಇಲ್ಲದಂತಾಯಿತು. ಕಣ್ಣಾಲೆ ಗಳು ತುಂಬಿ ಬಂದಿದ್ದವು. ಆ ಸ್ಥಿತಿಯಲ್ಲಿಯೇ ಅವಳು,

"ನಾಥಾಽಽ"

ಅವಳ ಈ ಕೂಗು ಕರ್ಣನನ್ನು ಹಿಡಿದು ನಿಲ್ಲಿಸುವಂತೆ ಮಾಡಿತು. ಆದರೂ ಮನಸ್ಸಿಲ್ಲದ ಮನಸ್ಸಿನಿಂದ ಮುಂದಡಿ ಇಡುವಂತೆಯೂ ಆತನನ್ನು ಯಾವದೋ ಶಕ್ತಿ ನೋಡಿಕೊಳ್ಳುತ್ತಿತ್ತು. ಆ ಕೂಗು, ಹಾಗೂ ಅದರಲ್ಲಡಕ ವಾದ ಸಾಮರ್ಥ್ಯ ಇವುಗಳೇ ಆತನನ್ನು ಎಚ್ಚರಿಸಿ ನಿಲ್ಲುವಂತೆ ಮಾಡಿದವು. ಬಿರುಗಾಳಿಯು ಮುತ್ತಿದಂತೆ ವೃಷಾಲಿಯು ಧಾವಿಸಿ ಬಂದು ಅವನನ್ನು ಅಪ್ಪಿ ಕೊಂಡಿದ್ದಳು. ಕರ್ಣನು ತನಗರಿವಿಲ್ಲದಂತೆ ಅವಳ ಬೆನ್ನಿನ ಮೇಲೆ ಕೈಯಾಡಿ ಸುತ್ತಲಿದ್ದ, ಸಾಧ್ಯವಾದಷ್ಟು ಕಠೋರತನವನ್ನು ಬಳಸಿ,

"ವೃಷಾಲೀ"

ಅವಳು ತಲೆಯನ್ನೆತ್ತಿದಳು. ನೀರು ತುಂಬಿದ ಅವಳ ಕಣ್ಣುಗಳು ಅಸ್ಥಿರಗೊಂಡಿದ್ದವು. ಅಜ್ಞಾತವಾದ ಭಯವು ಅವಳ ಆ ಕಣ್ಣುಗಳಲ್ಲಿ ತುಂಬಿಕೊಂಡಿತ್ತು. ಅವಳ ಇಡೀ ದೇಹವು ಕಂಪಿಸುತ್ತಿತ್ತು. ತೇವಗೊಂಡ

ಕಪೋಲಗಳ ಮೇಲೆ ಅವಳ ಮುಂಗುರುಳುಗಳು ಅಂಟಿಕೊಂಡಿದ್ದವು. ಗಾಯ ಗೊಂಡವಳಂತಿರುವ ಅವಳ ಆ ನೋಟ, ನಡುಗುತ್ತಿರುವ ತುಟಿಗಳು, ಸ್ಫುರಣ ಗೊಳ್ಳುತ್ತಿದ್ದ ನಾಸಿಕ, ಇವುಗಳನ್ನೆಲ್ಲ ಕಂಡು ಕರ್ಣನ ಮನಸ್ಸು ವಿಚಲಿತ ಗೊಂಡಿತು. ಜೀವನದಲ್ಲಿ ಎಂದೂ ಆತನು ತನ್ನ ಪತ್ನಿಯ ಇಂಥ ರೂಪವನ್ನು ಕಂಡಿರಲಿಲ್ಲ. ತನ್ನೆರಡೂ ಕೈಗಳಿಂದ ಅವಳ ಮುಖವನ್ನು ಹಿಡಿದುಕೊಂಡು,

"ಪ್ರಿಯೇ ! ಸಂಬಾಳಿಸಿಕೋ, ನಿನ್ನ ಈ ಸ್ಥಿತಿಯನ್ನು ಕಂಡು ನನ್ನ ಬಲವೆಲ್ಲ ಉಡುಗಿಹೋಗುತ್ತಲಿದೆ. ಯೋಧನಿಗೆ ಬಲವೇ ತಾರಕ. ಬಲವೇ ರಕ್ಷಕ. ದಿಗಂತ ಕೀರ್ತಿಗಾಗಿ ರಣರಂಗಕ್ಕೆ ಹೊರಟಿರುವ ವೀರನೊಂದಿಗೆ ಹೀಗೆ ನಡೆದುಕೊಳ್ಳುವದು ವಿಹಿತವೆನಿಸದು, ನೀನೇನು ಸಾಮಾನ್ಯಳೇ ! ವೀರಪತ್ನಿ ! ನಿನಗೆ ಈ ನಡತೆ ಎಂದೂ ಶೋಭಿಸದು."

ವೃಶಾಲಿಯು ಬಹು ಕಷ್ಟಪಟ್ಟು ನುಡಿದಳು.

"ಇಲ್ಲ ನಾಥಾ, ನೀವು ನನ್ನನ್ನು ಬಿಟ್ಟು ಹೋಗಲಾರಿರಿ. ನಿಮ್ಮ ಆ ಕೀರ್ತಿ ಎಂಬುದು ನನಗೆ ತಿಳಿಯಲಾರದಾಗಿದೆ. ನನಗೆ ಒಂದೇ ಒಂದು ವಿಷ ಯವು ಕಾಣುತ್ತಲಿದೆ. ಅದೆಂದರೆ ಕೇವಲ ನಿಮ್ಮ ಈ ಪಾದಗಳು. ನಿಮ್ಮ ಶೌರ್ಯವು ಕೀರ್ತಿಯನ್ನು ತಂದುಕೊಡಬಹುದು, ನಿಮ್ಮ ದಾತೃತ್ವವೂ ಅಜರಾ ಮರ ವೆಂದೆನಿಸಬಹುದು. ನಿಮಗೆ ಸಂಸಾರದಲ್ಲಿ ಯಾವುದು ಲಭಿಸಲಿಲ್ಲವೋ ಅದೆಲ್ಲವೂ ಆ ರಣರಂಗದಲ್ಲಿ ನಿಮಗೆ ಲಭಿಸಬಹುದು. ಆದರೆ ನನ್ನ ಅದೃಷ್ಟವು ಮಾತ್ರ ?

"ವೃಶಾಲೀ,"

"ನಾಥಾ, ನೀವಿರುವವರೆಗೂ ಈ ಜೀವನಕ್ಕೆ ಒಂದು ಅರ್ಥವಿದೆ, ರಣ ಭೂಮಿಯಲ್ಲಿ ನನ್ನ ಸೋದರ. ಬಂಧು ಹಾಗೂ ಮಕ್ಕಳನ್ನು ನಾನು ಕಳೆದು ಕೊಂಡೆ. ಆ ದುಃಖಗಳನ್ನೆಲ್ಲ ಧೈರ್ಯದಿಂದ ಸಹಿಸಿಕೊಂಡು ಬಂದಿರುವೆ. ಇನ್ನು ಮುಂದೆ ಈ ದೇಹದಲ್ಲಿ ಆ ಶಕ್ತಿಯು ಇಲ್ಲವಾಗಿದೆ. ವೈಧವ್ಯ ವೆಂಬುದು ಜೀವನದ ಅರ್ಥವನ್ನೇ ಕೆಡಿಸಿಹಾಕುತ್ತದೆ. ನಾಥಾ, ನೀವು ಜೀವನದುದ್ದಕ್ಕೂ ಇನ್ನೊಬ್ಬರಿಗೆ ಕಲ್ಯಾಣವನ್ನು ಮಾಡಿದಿರಿ. ಯಾವ ಅಪರಾಧವನ್ನು ಮಾಡದ ನನಗೆ ಮಾತ್ರ ನನ್ನ ಜೀವನಸರ್ವಸ್ವವೇ ಇಲ್ಲ

ದಂತೆ ಮಾಡಹೊರಟಿರುವಿರಿ. ನನ್ನ ಜೀವನವನ್ನು ಕೆಡಿಸುವ ಅಧಿಕಾರ ನಿದಿಯೆ ? ಇಲ್ಲ ನಾಥಾ, ನಿಮಗೆ ಹೋಗಲು ಬಿಡುವುದಿಲ್ಲ."

ವ್ಯಾಕುಲಳಾದ ಪತ್ನಿಯ ಮಾತುಗಳಿಂದ ಒಂದು ಕ್ಷಣ ಕರ್ಣನಿಗೆ ಏನೂ ತೋಚದಾಯಿತು. ಅವನು ಆವೇಶಭರಿತನಾಗಿ ವೃಷಾಲಿಯನ್ನಪ್ಪಿ ಕೊಂಡ. ಅರೆಕ್ಷಣ ಅವನ ಕಣ್ಣುಗಳೂ ಹನಿದುಂಬಿದವು. ಮರುಕ್ಷಣವೇ ಅದೊಂದು ಸ್ವಪ್ನವೆಂಬಂತೆ ಆತನು ವೃಷಾಲಿಯನ್ನು ದೂರ ಸರಿಸುತ್ತ,

"ವೃಷಾಲೀ, ಇಂಥ ಹುಚ್ಚುತನದ ನಡತೆ ನಿನ್ನಿಂದ ಘಟಿಸಬಹು ದೆಂದು ನಾನು ಎಂದೂ ಭಾವಿಸಿರಲಿಲ್ಲ. ನನ್ನ ಹಾಗೂ ನಿನ್ನ ಭಾಂಧವ್ಯವು ಮೃತ್ಯುವಿನಿಂದ ಎಂದೂ ಬಿಡುಗಡೆಯಾಗಲಾರದು. ಅದು ಅಂಖಂಡ ವಾದುದು. ಹುಚ್ಚೀ ಮೃತ್ಯುವಿನ ಆಹ್ವಾನದೊಂದಿಗೆ, ಶತ್ರುಗಳೊಂದಿಗೆ ಹೋರಾಡುತ್ತಿರುವಾಗ ವೀರನಾದ ಯೋಧನ ಎಡಗೈ ಯಾವಾಗಲೂ ಸೊಂಟಕ್ಕೆ ಕಟ್ಟಿದ ಶಾಲಿನ ಆಧಾರವನ್ನೇ ನಂಬಿಕೊಂಡಿರುತ್ತದೆ. ಪತಿ, ಪತ್ನಿ ಎಂಬ ಎರಡು ರೂಪಗಳು ಬೇರೆ ಬೇರೆ ಎಂದಿವೆಯೇ ? ಆ ಎರಡೂ ಭಿನ್ನ ರೂಪಗಳಲ್ಲಿ ಕಾಯಾ, ವಾಚಾ, ಮನಸಾ ಬಂಧಿತವಾದ ಒಂದೇ ಒಂದು ಆತ್ಮವಿರುತ್ತದೆ. ಆದುದರಿಂದಲೇ ಪತ್ನಿಯನ್ನು 'ಅರ್ಧಾಂಗಿ' ಎಂದು ಕರೆದಿದ್ದಾರೆ. ಮೃತ್ಯುಭಯವನ್ನು ಲೆಕ್ಕಿಸದೆ ನಾನು ರಣಾಂಗಣಕ್ಕೆ ಹೊರಟಿರುವುದರಿಂದಲೇ ನಾನು ನಿನಗೆ ಹೆಚ್ಚು ಪ್ರಿಯನಾಗಿ ತೋರುತ್ತ ಲಿದ್ದೇನೆ. ಭಯವನ್ನು ಹೊಂದಿ ನಾನು ಮನೆಯಲ್ಲಿ ಕುಳಿತರೆ, ನೀನು ನನ್ನ ಕಡೆಗೆ ಕಣ್ಣೆತ್ತಿಯೂ ನೋಡಲಾರೆ. ಯಾವುದೋ ಅಸತ್ಯದ ಅಂಜಿಕೆ ಯಿಂದ ನೀನು ಭಯ ವ್ಯಾಕುಲಳಾಗಬೇಡ."

"ನಾಥ.........ಆದರೂ...."

"ವಸೂ, ಮಾತನಾಡಬೇಡ. ಈ ತರಹದ ವ್ಯಾಮೋಹವು ಬಹಳ ಕಾಲ ನಿಲ್ಲಲಾರದು. ಸಪ್ತವನಗಳಿಂದ ಆವರಿಸಲ್ಪಟ್ಟ ಈ ಕುರುಕ್ಷೇತ್ರವು ಪುಣ್ಯಭೂಮಿ ಎಂದೆನಿಸಿಕೊಂಡಿದೆ. ಈ ಪುಣ್ಯಭೂಮಿಯಲ್ಲಿಯೇ ಅನೇಕರ ತಪವು ಸಿದ್ಧಗೊಂಡಿವೆ. ಗುರುದೇವ ಪರಶುರಾಮರು ಇದೇ ನೆಲದಲ್ಲಿ ಸ್ಯಮಂತಪಂಚಕವೆಂಬ ಜಲಾಶಯವನ್ನು ನಿರ್ಮಿಸಿದ್ದಾರೆ. ವೃಷಾಲಿ, ಇದೇ ನೆಲದಲ್ಲಿ ವಿಯೋಗಿಯಾಗಿದ್ದ ಪುರು ರಾಜನು ಪುನಃ ಊರ್ವಶಿಯನ್ನು ಕಂಡು

ಹರ್ಷಭರಿತನಾಗಿದ್ದಾನೆ. ಎರಡು ಜೀವಿಗಳನ್ನು ದೂರ ಮಾಡುವ ಗುಣ ಈ ಕುರುಕ್ಷೇತ್ರದ ನೆಲಕ್ಕೆ ಬರಲಾರದು. ನಮ್ಮನ್ನು ದೂರೀಕರಿಸುವಂತಹ ಸಾಮರ್ಥ್ಯವು ವಿಧಾತನಿಗೂ ಲಭಿಸಲಾರದು. ವಸೂ, ನನ್ನನ್ನು ಕಳಿಸಲು ನೀನು ಕೆಳಗಿಳಿಯಬೇಡ. ಇಲ್ಲಯೇ ನಿಲ್ಲು, ನಾನು ನಿನಗೆ ಎಂದೂ ಆಜ್ಞೆ ಮಾಡಿದುದಿಲ್ಲ, ಇದು ನನ್ನ ಆಜ್ಞೆ ಎಂದು ತಿಳಿ."

ಕರ್ಣನು ತನ್ನ ಮಾತುಗಳನ್ನು ಯಾವಾಗ ನಿಲ್ಲಿಸಿದ. ಯಾವಾಗ ಹೊರಟುಹೋದ ಎಂಬುದೇ ವೃಷಾಲಿಗೆ ತಿಳಿಯಲಿಲ್ಲ. ಮತ್ತೆ ಅವನನ್ನು ಕೂಗಿ ನಿಲ್ಲುವಂತೆ ಮಾಡುವ ಬಲವೂ ಅವಳಲ್ಲಿರಲಿಲ್ಲ. ಕರ್ಣನು ಹೊರಟು ಹೋದುದರಿಂದ ಬರಿದಾಗಿ ಕಾಣಿಸುತ್ತಿದ್ದ ಆ ಬಾಗಿಲನ್ನೇ ಅವಳು ನೋಡುತ್ತ ನಿಂತುಕೊಂಡಿದ್ದಳು. ರಥದ ಗಾಲಿಯ ಸಪ್ಪಳವು ಅವಳನ್ನೆಚ್ಚರಿಸಿತು. ಹೊರಾಂಗಣಕ್ಕೆ ಬಂದು ನೋಡಿದಾಗ ಕರ್ಣನ ರಥವು ವಾಯುವೇಗದಿಂದ ರಣಾಂಗಣದತ್ತ ಓಡುತ್ತಿರುವುದು ಕಾಣಿಸಿತು. ಕರ್ಣನು ಹಿಂದಿರುಗಿ ನೋಡಿದಾಗ ನಿಸ್ತೇಜನಾದ ಚಂದ್ರನು ಕೆಳ ಧುಮುಕುವಂತೆ ಮೇಲುಪ್ಪರಿಗೆಯಲ್ಲಿ ನಿಂತಿದ್ದ ವೃಷಾಲಿ ಅವನಿಗೆ ಕಾಣದಾದಳು.

## 58

ಕೌರವ ಶಿಬಿರಕ್ಕೆ ಬಂದು ಕರ್ಣನು ತಲುಪಿದ. ಶಲ್ಯರಾಜನು ಕರ್ಣನ ಆಗಮನವನ್ನೇ ಎದುರು ನೋಡುತ್ತಲಿದ್ದ. ದುರ್ಯೋಧನನಿಗೆ ಕರ್ಣನು ಮಾತನಾಡಿಸುತ್ತಿದ್ದಾಗ ಶಲ್ಯನು ಹೊಸ ರಥವನ್ನು ನೋಡುತ್ತಲಿದ್ದ.

"ಕರ್ಣಾ, ಈ ರಥವನ್ನು ನೋಡು, ಹೇಗೆ ಮಾಡಿದ್ದಾರೆ. ಇದನ್ನು ಸಕಲ ರೀತಿಯಿಂದಲೂ ಶಾಸ್ತ್ರೋಕ್ತವಾಗಿ ರಚಿಸಲಾಗಿದೆ. ಅಲ್ಲದೆ ಈ ರಥಕ್ಕೆ ಅತ್ಯಂತ ಶ್ರೇಷ್ಠವಾದ ಕುದುರೆಗಳನ್ನು ಜೋಡಿಸಲಾಗಿದೆ. ಮಿಂಚಿನವೇಗದಿಂದ ಓಡುವುದರೊಂದಿಗೆ ಚಪಲತೆಯಲ್ಲಿಯೂ ಅವು ಶ್ರೇಷ್ಠವಾದವುಗಳೆಂದು ಕರೆಸಿಕೊಂಡಿವೆ. ಈ ರಥದ ದಂಡದ ಮೇಲೆ ಸುವರ್ಣ ಶೃಂಖಲೆಯಿಂದ ಕೂಡಿದ ಯಶೋಧ್ವಜವು ಮಧ್ಯಾಹ್ನದ ಸೂರ್ಯನಂತೆ ತೇಜಃಪುಂಜವಾಗಿ ಕಾಣುತ್ತಲಿದೆ. ಎಲೈ ಸೂತಪುತ್ರನೇ ! ರಥ ಪರೀಕ್ಷೆಯಲ್ಲಿ ನೀನು ತುಂಬ ಬುದ್ಧಿವಂತನೆಂದೂ ಕೇಳಿದ್ದೇನೆ. ಆದುದರಿಂದ ನಿನಗೂ ಈ ಸರ್ವಗುಣ

ಸಂಪನ್ನಯುಕ್ತವಾದ ರಥದಲ್ಲಿ ಯಾವ ದೋಷಗಳೂ ಕಾಣಿಸುವುದು ಕಠಿಣ ವೆಂದು ನಾನು ಭಾವಿಸಿದ್ದೇನೆ. ರಥವಂತೂ ಸಿದ್ಧವಾಗಿದೆ."

ಕರ್ಣನೂ ಆ ರಥವನ್ನು ಒಂದು ಸಲ ನೋಡಿದ. ಮುಖದಲ್ಲಿ ಮಂದಸ್ಮಿತವು ಕಾಣಿಸಿತು.

ರಥವು ನಿಜವಾಗಿಯೂ ಸರ್ವಾಂಗಸುಂದರವಾಗಿತ್ತು. ಶಾಸ್ತ್ರನಿಯಮ ದಂತೆ ಅದನ್ನು ಸಿದ್ಧಪಡಿಸಿದ್ದರು. ಗುರುಕೃಪೆಯಿಂದ ಪ್ರಾಪ್ತವಾದ ಎರಡು ಶಾಪದ ಅಶ್ವಗಳನ್ನೂ ಆ ರಥಕ್ಕೆ ಜೋಡಿಸಿದಂತಾಗಿತ್ತು. ದೈವವು ಯಾವಾ ಗಲೋ ಆ ಚಕ್ರದ ಕುಣಿಗಳನ್ನು ಕಿತ್ತುಕೊಂಡಿತ್ತು. ಯಾವನನ್ನು ಪರಮೇಶ್ವರನ ಅಂಶ ಎಂದು ಕರೆಯುತ್ತೇವೆಯೋ ಆತನೇ ಒಂದು ಚಕ್ರದ ಕುಣಿಯನ್ನು ಕಿತ್ತುಕೊಂಡಿದ್ದ. ಇನ್ನು ಎರಡನೆಯವಳು ಜನ್ಮ ಕೊಟ್ಟ ಮಾತೆ ಅವಳಿಗೆ ಕೊಟ್ಟ ಪ್ರತಿಜ್ಞೆಯೇ ಸೇಡಿನ ರೂಪವನ್ನು ತಾಳಿತ್ತು. ಹೀಗಿರುವಾಗ ಇನ್ನು ಯಾವ ಕ್ಷಣದಲ್ಲಿ ದೈವ ಚಕ್ರವು ಮರಳಿನಲ್ಲಿ ಸಿಲುಕು ವುದೋ ಅದನ್ನು ಯಾರು ಬಲ್ಲರು ?

"ಅಂಗರಾಜ" ಶಲ್ಯ ಕೂಗಿದ.

ಕರ್ಣನ ವಿಚಾರತಂದ್ರಿಗೆ ಭಂಗ ಉಂಟಾಯಿತು. ಆತನು ಶಲ್ಯನತ್ತ ಹೊರಳಿ "ನಿಜವಾಗಿಯೂ ಈ ರಥವು ತುಂಬಾ ಚೆನ್ನಾಗಿದೆ, ರಣಭೂಮಿಯ ವಾದ್ಯಗಳು ಮೊಳಗುತ್ತಲಿವೆ. ಇನ್ನು ಹೆಚ್ಚು ಕಾಲಾವಕಾಶವಿಲ್ಲ. ಈ ರಥದ ಚಾಪಲ್ಯವನ್ನು ಪರೀಕ್ಷಿಸಲು ನಿಮ್ಮಂತೆ ನಾನೂ ಉತ್ಸುಕನಾಗಿದ್ದೇನೆ. ಶಲ್ಯ ರಾಜಾ ರಥಾರೂಢರಾಗಿರಿ."

ಕರ್ಣ, ದುರ್ಯೋಧನರ ರಥಗಳು ಯುದ್ಧಭೂಮಿಯನ್ನು ತಲುಪಿದವು. ಒಂದು ಸಲ ಕರ್ಣನು ರಣಭೂಮಿಯನ್ನೆಲ್ಲ ನೋಡಿದ. ಅದನ್ನು ಗಮನಿಸಿದ ಶಲ್ಯರಾಜನು,

"ಸೂತಪುತ್ರನೇ, ನಿನಗೆ ವಿಜಯ ಪ್ರಾಪ್ತಿಯಾಗಲೆಂದೇ ನಾನು ಈ ರಥ ವನ್ನು ಸಿದ್ಧಗೊಳಿಸಿದ್ದೇನೆ. ಇನ್ನು ನನ್ನ ಸಾರಥ್ಯ ಕಾರ್ಯದಲ್ಲಿಯೂ ಸಹ ಯಾವ ಅಡೆತಡೆಗಳೂ ಬರಲಾರವು. ಆದರೂ ನಿನಗೆ ವಿಜಯ ಲಭಿಸೀತೆಂದು ನನಗನಿಸುವುದಿಲ್ಲ. ಯಾಕೆಂದರೆ, ಅರ್ಜುನನ ಮುಂದೆ ನಿನ್ನ ಪರಾಕ್ರಮಕ್ಕೆ ಸ್ಥಾನವೇ ಇಲ್ಲ, ಎಂದೆನಿಸತೊಡಗಿದೆ."

ಆ ಮಾತುಗಳಿಂದ ಕರ್ಣನು ಸಂತಪ್ತನಾದ. ಕೆಂಗಣ್ಣುಗಳಿಂದ ಶಲ್ಯರಾಜನನ್ನು ನೋಡುತ್ತ,

"ಶಲ್ಯರಾಜ, ಇಂಥ ಭೀತಿಯುಕ್ತ ಮಾತುಗಳನ್ನು ಹೇಳಲು ನಿಮ್ಮಂಥ ಜ್ಯೋತಿಷಿಗಳು ಬೇಕಾಗಿಲ್ಲ. ರಣಾಂಗಣದ ಕುಂಡಲಿಯನ್ನು ನಾನು ಚೆನ್ನಾಗಿ ಬಲ್ಲೆ. ಆ ಅರ್ಜುನನ ವಿಜಯವೇ ತನ್ನ ಮೂಲ ಗುರಿ ಎಂದು ಶಪಥ ಮಾಡಿರುವ ಸಾರಥಿ ಕೃಷ್ಣನ ಪ್ರಯತ್ನದ ಮುಂದೆ, ನೀವು ನನ್ನ ಸಾರಥಿಯಾಗಿದ್ದುಕೊಂಡು ಯಾವಾಗಲೂ ನನ್ನ ಪರಾಜಯದ ಚಿಂತೆಯನ್ನೇ ಮಾಡುತ್ತಿರುವಿರಿ. ಆ ಕೃಷ್ಣನೆಲ್ಲಿ ನೀವೆಲ್ಲಿ ?"

"ನಿನಗೆ ಅಪಜಯವಾದರೆ ನನಗೆ ಬರುವ ಲಾಭವೇನು ?" ಶಲ್ಯರಾಜನು ನಕ್ಕು ನುಡಿದ.

"ಶಲ್ಯರಾಜ, ಆ ಪಾಂಡವರ ಪ್ರಾರ್ಥನೆಯ ಮೇರೆಗೆ ನೀವು ನನ್ನ ಸಾರಥ್ಯ ಕರ್ಮವನ್ನು ವಹಿಸಿಕೊಂಡಿರುವಿರಿ. ನನ್ನ ತೇಜೋಭಂಗವನ್ನು ಮಾಡುವುದಕ್ಕಾಗಿಯೇ ನೀವು ಈ ಸಾರಥ್ಯ ಕೆಲಸವನ್ನು ಸ್ವೀಕರಿಸಿರುವಿರಿ. ಈ ಮಾತನ್ನು ನಾನು ತಿಳಿದುಕೊಂಡಿಲ್ಲವೆಂದು ಭಾವಿಸಿರುವಿರಾ ? ನಾನು ಸೇನಾಪತಿಯ ಪದವಿಯನ್ನು ವಹಿಸಿಕೊಂಡೊಡನೆಯೇ ಆ ಪಾಂಡವರು ನಿಮ್ಮನ್ನು ಭೇಟಿಯಾದರು. ಈ ಮಾತು ನನಗೆ ತಿಳಿಯದೆಂದು ಭಾವಿಸಿದಿರಾ ?"

ಕರ್ಣನ ಮರ್ಮಭೇದಕ ಮಾತುಗಳಿಂದ ಶಲ್ಯನಿಗೂ ಕೋಪವು ಇಮ್ಮಡಿಸಿತು. ಆತನು ಕುತ್ಸಿತ ನೋಟದಿಂದ ಕರ್ಣನನ್ನು ನೋಡಿ ನಗತೊಡಗಿದ.

"ಶಲ್ಯರಾಜ, ನಾನು ಕುರುಸೇನೆಯ ಸೇನಾಧಿಪತಿಯಾಗಿರುವೆ. ಅಂಥ ಕುಟಿಲತನದ ನೀತಿಯನ್ನರಿತುಕೊಳ್ಳಲು ನನಗೆ ಹೆಚ್ಚು ವೇಳೆಯ ಆವಶ್ಯಕತೆ ಬೇಕಾಗಿಲ್ಲ."

"ಇಷ್ಟಾದರೂ ನನ್ನ ಸಾರಥ್ಯವನ್ನು ಒಪ್ಪಿಕೊಂಡಿರುವೆಯಲ್ಲ !"

"ಹೌದು ! ನನ್ನ ದೃಷ್ಟಿಯಲ್ಲಿ ಆ ಪಾಂಡವರು ಹಾಗೂ ನಿಮ್ಮಲ್ಲಿ ಯಾವ ವ್ಯತ್ಯಾಸವೂ ಇದ್ದಂತೆ ತೋರಲಿಲ್ಲ. ಶಲ್ಯರಾಜ, ನೀವು ಕುಲದ ಅಹಂಕಾರವನ್ನು ಪಾಲಿಸಿಕೊಂಡು ಬಂದಿರುವಿರಿ. ವಿಶ್ವಾಸಘಾತ, ಅಸತ್ಯದ ಆಚರಣೆ ಹಾಗೂ ಪರನಿಂದೆ ಇವೇ ಮೊದಲಾದುವುಗಳು ನಿಮ್ಮ

ಕುಲದ ಶ್ರೇಷ್ಠತ್ವವನ್ನು ಕಾಯುತ್ತಿದ್ದರೆ, ಅಂಥ ಕುಟಿಲತನದಿಂದ ನೀವು ಸಾಕಷ್ಟು ಉದ್ಧಾರವನ್ನು ಹೊಂದಿರಿ. ಆದರೆ ನಿಮ್ಮ ಮನದಿಂಗಿತವು ಪೂರ್ಣವಾಗಲಾರದು, ಯಾಕೆಂದರೆ ಸೂರ್ಯಪುತ್ರನ ತೇಜಕ್ಕೆ ಎಂದೂ ಭಂಗ ಬರಲಾರದು."

ಕರ್ಣನು ಶಾಂತ ರೀತಿಯಿಂದ ತನ್ನ ಶಂಖವನ್ನು ಕೈಗೆತ್ತಿಕೊಂಡ, ಯುದ್ಧವು ಆರಂಭವಾಯಿತೆಂದು ಸಾರಲು ಅದನ್ನು ಧ್ವನಿಮಾಡಿದ. ಸೂರ್ಯಬಿಂಬಗಳು ಹೊರಹೊಮ್ಮಿದವು. ಯುದ್ಧವು ಪ್ರಾರಂಭವಾಯಿತು.

ಕುರುಕ್ಷೇತ್ರದಲ್ಲಿ ಭಯಂಕರವಾದ ರಣಸಂಗ್ರಾಮವು ಆರಂಭವಾಗಿತ್ತು. ಕೌರವರು ಹಾಗೂ ಪಾಂಡವರ ಕಡೆಯ ಸಾವಿರಾರು ಆನೆಗಳು, ಕುದುರೆಗಳು, ರಥಗಳು, ಪದಾತಿಗಳಿಂದ ತುಂಬಿಹೋಗಿದ್ದ ರಣಭೂಮಿಯಲ್ಲಿ ನಾಲ್ಕು ದಿಕ್ಕಿನಿಂದೂ ಕೋಲಾಹಲ ಧ್ವನಿಯು ಕೇಳಿಬರುತ್ತಿತ್ತು. ಇಡೀ ರಣರಂಗವೆಲ್ಲ ಹುಚ್ಚೆದ್ದ ಸಮುದ್ರ ರಾಜನಂತೆ ಕಾಣುತ್ತಿತ್ತು. ಮದೋನ್ಮತ್ತವಾದ ಆನೆಗಳು ಮೋಡಗಳಂತೆ ರಣಭೂಮಿಯಲ್ಲಿ ಸಂಚರಿಸುತ್ತಿದ್ದವು. ವೀರರು ಧರಿಸಿದ ಶಿರಸ್ತ್ರಾಣಗಳು ತೆರೆಗಳಂತೆ ರಣಭೂಮಿಯನ್ನಪ್ಪಳಿಸುತ್ತಿದ್ದವು. ಆ ಬಿಸಿಲಿನಲ್ಲಿ ಖಡ್ಗ, ತೋಮರ, ಗದೆ ಮೊದಲಾದ ಆಯುಧಗಳು ದೃಷ್ಟಿ ಹರಿಯುವವರೆಗೆ ಮಿಂಚಿನಂತೆ ಹೊಳೆಯುತ್ತಿರುವುದು ಕಾಣಿಸುತ್ತಿತ್ತು. ರಣವಾದ್ಯದ ಶಬ್ದವನ್ನು ಭೇದಿಸಿಕೊಂಡು ಕೂಗಿಕೊಳ್ಳುತ್ತಿದ್ದ ಆನೆಗಳ ಕೂಗು, ರಥಗಳು ಸಂಚರಿಸುತ್ತಿದ್ದಾಗ ಆಗುವ ಸಪ್ಪಳ, ಖಡ್ಗಗಳ ಆಘಾತ ಇದೇ ಮೊದಲಾದವುಗಳು ಆ ರಣ ಸಾಗರದ ಸ್ವಚ್ಛಂಧತೆಗೆ ನಿರ್ದರ್ಶನಗಳಾಗಿ ಕಾಣಬರುತ್ತಿದ್ದವು.

ಸೂರ್ಯೋದಯದೊಂದಿಗೆ ಯುದ್ಧದಲ್ಲಿ ನಿರತನಾದ ಕರ್ಣನು ತನ್ನ ರಥದಲ್ಲಿ ನಿಂತುಕೊಂಡು ವೀರಾವೇಶದಿಂದ ಶತ್ರುಗಳ ಮೇಲೆ ಬೀಳುತ್ತಿರುವ ತನ್ನ ಸೈನಿಕರ ವೀರಶ್ರೀಯನ್ನು ನೋಡುತ್ತಲಿದ್ದ. ಪಾಂಡವ ಪಕ್ಷದ ಅನೇಕ ವೀರರನ್ನು ಪರಾಭವಗೊಳಿಸಿದರೂ ಅವನ ಮನಸ್ಸು ಶಾಂತವಾಗಿರಲಿಲ್ಲ. ಅವನ ಗರುಡ ದೃಷ್ಟಿಯು ಅರ್ಜುನನನ್ನು ಹುಡುಕಲು ಯುದ್ಧಭೂಮಿಯನ್ನೆಲ್ಲ ಜಾಲಾಡಿಸುತ್ತಿತ್ತು. ಯುದ್ಧದಲ್ಲಿ ತನ್ನ ಮೈಮೇಲಾದ ಗಾಯಗಳ ಪರಿವೆಯೂ ಆತನಿಗಿರಲಿಲ್ಲ. ಮೇರು ಪರ್ವತದಂತೆ ರಣರಂಗದಲ್ಲಿ ನಿಂತು

ಕೊಂಡ ಕರ್ಣನ ಮುಖದ ಮೇಲೆ ವಿಲಕ್ಷಣ ಕಾಂತಿಯು ಎದ್ದು ತೋರು ತ್ತಿತ್ತು. ಆದನ್ನು ಗುರುತಿಸಿದ ಶಲ್ಯರಾಜನು,

"ಕರ್ಣಾ, ಪರಾಕ್ರಮದಲ್ಲಿ ಒಂದು ಹೊಸ ಅಧ್ಯಾಯವನ್ನೇ ನೀನು ತೋರಿಸಿದೆ. ನಿನ್ನ ಪರಾಕ್ರಮದಿಂದಾಗಿ ಪಾಂಡವ ಬಲವು ಕುಗ್ಗುತ್ತಲಿದೆ. ರಕ್ತದ ಈ ಕಾಲುವೆಗಳು ಗ್ರಾಮದ ಮಧ್ಯಭಾಗದಲ್ಲಿ ಹರಿದು ಹೋಗುವ ಹೆದ್ದಾರಿಗಳಂತೆ ಕಾಣುತ್ತಲಿವೆ. ಇಲ್ಲಿ ಸಂಚರಿಸುತ್ತಿರುವ ರಥದ ಚಕ್ರಾದಿಗಳು ನೀರಿನಲ್ಲಿ ಸಂಚರಿಸುವ ಹಂಸಗಳಂತೆ ತೋರಿಬರುತ್ತಿವೆ. ರಣರಂಗವನ್ನಪ್ಪಿದ ವೀರಾಧಿವೀರರ ದೇಹಗಳು ಪ್ರವಾಹದಲ್ಲಿ ಹರಿದು ಬರುವ ಮರದ ತುಂಡು ಗಳಂತೆ ತೋರತೊಡಗಿವೆ. ಕೈಕತ್ತರಿಸಿ ಬಿದ್ದುಹೋದ ಆ ಯೋಧನನ್ನು ನೋಡು; ಈ ಸಂಹಾರಕಾರಕವೆನ್ನಿಸಿದ ಪ್ರವಾಹದಲ್ಲಿ ಅಂಥ ಕೈಗಳು ಕಮಲ ದಂತೆ ತೋರುತ್ತಲಿವೆ. ಕೆಳಗುರುಳಿದ ಶಿರೋಭೂಷಣಗಳು ನೀರಮೇಲಿರುವ ಬುರುಗಿನಂತೆ ಕಾಣುತ್ತಲಿವೆ. ಈ ಭಯಂಕರ ಪ್ರವಾಹವನ್ನು ನಿರ್ಮಿಸುವ ಧೈರ್ಯವು ಕೇವಲ ನಿನಗೆ ಮಾತ್ರ ಮೀಸಲಾಗಿದೆ. ಇದು ನಿನ್ನ ಸಾಹಸಕ್ಕೆ ಸಾಕ್ಷಿಯಾಗಿದೆ."

ಶಲ್ಯರಾಜನ ಈ ಹೊಗಳಿಕೆಯ ಮಾತುಗಳನ್ನು ಕೇಳಿ ಕರ್ಣನಿಗೆ ಸಮಾಧಾನವೆನ್ನಿಸಿತು.

"ಶಲ್ಯರಾಜ ! ಈ ಪರಾಕ್ರಮದಿಂದ ನಾನು ಸಮಾಧಾನಗೊಂಡಿಲ್ಲ. ನಿನ್ನೆಯ ದಿನವೇ ನಾನು ಅರ್ಜುನನಿಗೆ ಅಂತಿಮ ಯುದ್ಧಕ್ಕಾಗಿ ಆಹ್ವಾನ ವನ್ನಿತ್ತಿದ್ದೆನೆ ಯುದ್ಧವು ಪ್ರಾರಂಭವಾದಾಗಿನಿಂದಲೂ ನಾನು ಅತನ ಕಪಿಧ್ವಜವನ್ನು ಹುಡುಕುತ್ತಲಿದ್ದೇನೆ. ಆದರೆ ಅದು ಈವರೆಗೂ ನನ್ನ ಕಣ್ಣಿಗೆ ಬೀಳದಂತಾಗಿದೆ. ಮಧ್ಯಾಹ್ನದ ಕಾಲವು ಸಮೀಪಿಸುತ್ತಿದ್ದರೂ ಅರ್ಜುನನನ್ನು ಸಂಧಿಸುವ ಯೋಗವು ದೊರೆಯದಂತಾಗಿದೆ. ಶಲ್ಯರಾಜಾ, ನೀವು ನಿಜವಾಗಿಯೂ ನನ್ನ ಪರಾಕ್ರಮದಿಂದ ಸಂತೋಷಪಟ್ಟಲ್ಲಿ ನನಗೆ ಅರ್ಜುನನ ರಥವು ಕಾಣಿಸುವಂತೆ ಮಾಡಿರಿ. ಆ ಅರ್ಜುನನನ್ನು ಸಂಹಾರ ಮಾಡಿ ಈ ಯಜ್ಞವನ್ನು ಪರಿಸಮಾಪ್ತಿಗೊಳಿಸುವೆ."

"ರಾಧೇಯ, ನಿನ್ನ ಮನದಿಂಗಿತವನ್ನು ನಾನು ಚೆನ್ನಾಗಿ ಬಲ್ಲೆ. ಧರ್ಮರಾಜನನ್ನು ನೀನು ರಥವಿಲ್ಲದಂತೆ ಮಾಡಿದೆ. ಅತನಿಗೆ ಸಾಕಷ್ಟು

ಗಾಯಗೊಳಿಸಿದೆ. ಶಿಖಂಡಿ, ಸಾತ್ಯಕಿ, ಅಭಿಮನ್ಯು, ನಕುಲ, ಅಷ್ಟೇ ಏಕೆ ಆ ಶಕ್ತಿಶಾಲಿಯಾದ ಭೀಮನೂ ಜರ್ಜರಿತನಾಗುವಂತೆ ಮಾಡಿರುವೆ. ನಿನ್ನ ಆ ಪರಾಕ್ರಮವನ್ನು ಚೆನ್ನಾಗಿ ಗಮನಿಸಿ ಅರ್ಜುನನ ಸಾರಥ್ಯ ಕರ್ಮವನ್ನು ವಹಿಸಿದ ಆ ಕೃಷ್ಣನು ನಿನ್ನಿಂದ ಯಾವಾಗಲೂ ಆತನ ರಥವನ್ನು ದೂರವಾಗಿಡಲು ಪ್ರಯತ್ನಿಸುತ್ತಿದ್ದಾನೆ. ನೀನು ಈಗ ಉತ್ತರದಲ್ಲಿ ಯುದ್ಧ ನಿರತನಾಗಿರುವುದನ್ನು ಗಮನಿಸಿದ ಕೃಷ್ಣನು ಅರ್ಜುನನ ರಥವನ್ನು ದಕ್ಷಿಣ ದತ್ತ ತೆಗೆದುಕೊಂಡು ಹೋಗಿದ್ದಾನೆ. ಅದನ್ನು ನಾನು ಗಮನಿಸಿದ್ದೇನೆ. ಕರ್ಣಾ, ಸಮುದ್ರವು ಅದರ ಸೀಮೆಯನ್ನು ವಿರೋಧಿಸುವಂತೆ ಕ್ರೋಧದಿಂದ ಯುಕ್ತನಾದ ಅರ್ಜುನನ್ನು ತಡೆಯುವಂತಹ ಶೂರರು ಈ ರಣರಂಗದಲ್ಲಿ ನಿನ್ನ ವಿನಃ ಬೇರಾರೂ ನನಗೆ ಕಾಣಬರುವುದಿಲ್ಲ."

"ಶಲ್ಯರಾಜ, ಇನ್ನು ವಿಲಂಬ ಮಾಡಬೇಡಿರಿ. ಎಷ್ಟು ಬೇಗನೇ ಅರ್ಜುನನ ರಥವನ್ನು ಎದುರಿಸಲು ಸಾಧ್ಯವೋ ಅಷ್ಟು ಬೇಗನೆ ನನ್ನ ರಥ ವನ್ನು ಆ ಭಾಗಕ್ಕೆ ಕೊಂಡೊಯ್ಯಿರಿ."

"ಕರ್ಣಾ, ನನ್ನ ಸಾರಥ್ಯ ಕಲೆಯಲ್ಲಿ ನಿನಗೆ ವಿಶ್ವಾಸವಿದ್ದುದರಿಂದಲೇ ಈ ಕಾರ್ಯಕ್ಕಾಗಿ ನನ್ನನ್ನು ಅಪೇಕ್ಷಿಸಿದೆಯಲ್ಲವೆ? ಅಂದಮೇಲೆ ನನ್ನ ಮಾತಿನಲ್ಲಿ ವಿಶ್ವಾಸವನ್ನಿಡು. ಘನ ಘೋರವಾಗಿ ನಡೆಯುತ್ತಿರುವ ಈ ಯುದ್ಧಭೂಮಿಯನ್ನು ದಾಟಿಕೊಂಡು ಇನ್ನೊಂದು ತುದಿಯಲ್ಲಿರುವ ಅರ್ಜು ನನ ರಥವನ್ನೆದರಿಸುವದು ಅಂಥ ಸುಲಭದ ಕೆಲಸವಲ್ಲ. ನಾವು ಈ ಪ್ರಯತ್ನದಲ್ಲಿರುವುದನ್ನು ಕಂಡೊಡನೆ ಯಾವಾಗಲೂ ಅರ್ಜುನನ ರಕ್ಷಣೆ ಗಾಗಿಯೇ ಕಾಯ್ದಿಟ್ಟ ಸೇನೆ ಹಾಗೂ ಪಾಂಡವ ವೀರರು ನಿನ್ನ ದಾರಿಗೆ ಅಡ್ಡವಾಗಿ ನಿಲ್ಲಬಹುದು. ಆ ಎಲ್ಲರನ್ನೂ ತುಂಡರಿಸಿ, ಸಂಹಾರ ಮಾಡಿ ನೀನು ಮುಂದಕ್ಕೆ ಹೆಜ್ಜೆಯನ್ನಿಡಬೇಕಾಗುತ್ತದೆ. ಅದಕ್ಕೆ ಎಷ್ಟು ಅವಕಾಶ ಬೇಕೆಂಬುದನ್ನು ನೀನು ಬಲ್ಲೆಯಾ?"

ಕರ್ಣ ಹಾಗೂ ಶಲ್ಯ ಇಬ್ಬರೂ ಯುದ್ಧಭೂಮಿಯ ಸ್ಥಿತಿಗತಿಗಳನ್ನು ವೀಕ್ಷಿಸುತ್ತಿದ್ದರು. ಕರ್ಣನ ದೃಷ್ಟಿಯು ಉತ್ತರ ಭಾಗದಲ್ಲಿರುವಾಗ ಆತನು ಹೇಳಿದ,

"ಶಲ್ಯರಾಜ, ಯುದ್ಧಭೂಮಿಯನ್ನು ಬದಿಗಿರಿಸಿ ಹೊರಭಾಗದಿಂದ ರಥವನ್ನು ಕೊಂಡೊಯ್ಯಲು ಬರುವುದಿಲ್ಲವೆ ?"

"ಅಂಗರಾಜ, ನೀವು ಸೇನಾಪತಿಗಳು, ನಿಮ್ಮ ಸುವರ್ಣ ಶೃಂಖಲೆಯು ಧ್ವಜದಿಂದ ಕೂಡಿದ ರಥವು ಕಾಣಿಸದಾದಾಗ ಕೌರವ ಸೇನಾಬಲವು ಉಡುಗಿದಂತಾಗಬಹುದು. ತಮಗೆ ಇದು ಸಮ್ಮತವೆ ?"

"ಶಲ್ಯರಾಜ. ನೀವು ಆ ಚಿಂತೆಯನ್ನು ಬಿಡಿರಿ. ಈ ಕರ್ಣನು ರಣರಂಗವನ್ನು ತೊರೆದು ಹೋಗುವನೆಂಬ ಕಲ್ಪನೆ ಶತ್ರುಗಳಿಗೂ ಬರಲಾರದು. ಕೌರವ ಸೇನೆಯ ಮುಂಭಾಗದಲ್ಲಿ ವೀರಶ್ರೇಷ್ಠ ದುರ್ಯೋಧನನ ಗಜ ಚಿಹ್ನಾಂಕಿತ ಧ್ವಜವು ಹಾರಾಡುತ್ತಲಿದೆ. ಅದನ್ನು ನೋಡುತ್ತಲಿರುವ ಕೌರವ ವೀರರಿಗೆ ಹತಾಶತನದ ಅರಿವು ಎಂದೂ ಬರಲಾರದು. ಈ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳದೆ ರಥವನ್ನು ಹೊರಳಿಸಿ ಅರ್ಜುನನನ್ನು ಎದುರಿಸಲು ಅಣಿಯಾಗಿರಿ."

ಶಲ್ಯರಾಜನು ರಥವನ್ನು ಹೊರಳಿಸಿದ. ಸಂಗಡ ರಕ್ಷಣಾವಳಿವನ್ನು ತೆಗೆದುಕೊಳ್ಳಲಾರದೆ ರಥವು ಯುದ್ಧಭೂಮಿಯ ಹೊರಭಾಗಕ್ಕೆ ಬಂದೊಡನೆ ಅದರ ವೇಗವು ಇಮ್ಮಡಿಗೊಂಡಿತು. ಕುರುಕ್ಷೇತ್ರದ ಮರಳು ಭೂಮಿಯಲ್ಲಿ ಅದು ಭರದಿಂದ ಓಡಲಾರಂಭಿಸಿತು. ಮಧ್ಯಭಾಗದಲ್ಲಿರುವ ರಥದ ಧ್ವಜಸ್ತಂಭವನ್ನು ಹಿಡಿದು ನಿಂತಿದ್ದ ಕರ್ಣನು ಯುದ್ಧಭೂಮಿಯನ್ನು ನೋಡುತ್ತಲಿದ್ದಾಗ ಉತ್ತರ ಭಾಗದಲ್ಲಿರುವ ಅರ್ಜುನನ ರಥವು ಆತನಿಗೆ ಕಾಣಿಸಿತು. ದೇಹವೆಲ್ಲ ರೋಮಾಂಚನಗೊಂಡಿತು. ಆವೇಶದಿಂದ ಧನುಸ್ಸನ್ನು ಅತ ಬಿಗಿಯಾಗಿ ಹಿಡಿದುಕೊಂಡು ಪಕ್ಕದಲ್ಲಿಟ್ಟಿದ್ದ ಬತ್ತಳಿಕೆಯನ್ನು ನೋಡಿದ. ಅನೇಕ ಬಾಣಗಳಿಂದ ತುಂಬಿಕೊಂಡಿತ್ತು. ಕ್ಷಣಕ್ಷಣಕ್ಕೂ ಅಂತರ ಕಡಿಮೆಯಾಗತೊಡಗಿತು. ಈಗ ಕಪಿಧ್ವಜಯುಕ್ತ ರಥ ಸಂಪೂರ್ಣವಾಗಿ ಕಾಣತೊಡಗಿತು.

ಕಪ್ಪು ಹೊಲದಲ್ಲಿ ನೇಗಿಲು ಹೊಡೆದಾಗ ಕೇಳಬರುವಂತಹ ಶಬ್ದವು ಕೇಳಬರತೊಡಗಿತು. ರಥದ ಓಟವು ನಿಧಾನಗೊಂಡಿತು. ಶಲ್ಯರಾಜನು ಚಾಬೂಕನ್ನೆತ್ತಿದ. ಚಾಟಿಯ ಸಪ್ಪಳದೊಂದಿಗೆ ಜಾತಿವಂತ ಕುದುರೆಗಳ

ಮೈಮೇಲೆ ಪ್ರಹಾರದ ಗುರುತುಗಳು ಕಾಣತೊಡಗಿದವು. ಇಷ್ಟಾದರೂ ಸಹ ರಥವು ಸ್ವಲ್ಪವೂ ಮುಂದೆ ಸರಿಯಲಿಲ್ಲ.

ಕರ್ಣನ ಅಂತರಂಗವು ಗಾಸಿಗೊಂಡಿತು. ಭಯಶಂಕಿತನಾಗಿ ಆತನು ಕೇಳಿದ.

"ಶಲ್ಯರಾಜ, ರಥವೇಕೆ ನಿಂತಿದೆ, ಏನಾಗಿದೆ ?"

"ಯಾವುದು ಆಗಬಾರದದೋ ಅದೇ ಆಗಿದೆ. ರಥದ ಎಡಭಾಗದ ಗಾಲಿಯ ಚಕ್ರವು ಭೂಮಿಯಲ್ಲಿ ಕುಸಿದು ಹೋಗಿದೆ."

ಆ ಪರಿಸ್ಥಿತಿಯಲ್ಲಿಯೂ ಕರ್ಣನ ಮುಖದ ಮೇಲೆ ಖಿನ್ನವಾದ ಹಾಸ್ಯವು ಕಾಣಿಸಿತು.

"ಜೀವನದ ಬಂಧನಗಳನ್ನು ಬಿಡಿಸಿಕೊಳ್ಳುವಂತೆ ಕಾಲನ ಬಂಧನದಿಂದ ಮುಕ್ತರಾಗಲು ಸಾಧ್ಯವೆ ? ಗುರುದೇವ ಪರಶುರಾಮರಲ್ಲಿ ಬ್ರಹ್ಮಾಸ್ತ್ರ ವಿದ್ಯೆಯನ್ನು ಕಲಿಯಲು ಹೋದಾಗ ಒಂದು ದಿನ ಒಬ್ಬ ಬ್ರಾಹ್ಮಣನ ಹಸುವನ್ನು ಹೊಡೆದೆ. ಆಗ ಆ ಮುನಿಯು ಒಳ್ಳೇ ಸಂದರ್ಭದಲ್ಲಿ ನನ್ನ ರಥದ ಚಕ್ರವು ಭೂಮಿಯಲ್ಲಿ ಹೂತುಹೋಗುವಂತಾಗಲಿ ಎಂದು ಶಾಪವನ್ನಿತ್ತಿದ್ದ. ಇಂದು ಆ ತಪಸ್ವಿಯ ಮಾತು ನಿಜವಾಗುವಂತಾಗಲಿದೆ. ರಕ್ಷಣಾ ದಳವು ಸಮೀಪದಲ್ಲಿದ್ದಿದರೆ ಗಾಲಿಯನ್ನು ಸುಲಭವಾಗಿ ತೆಗೆಯಲು ಬರುತ್ತಿತ್ತು. ಶಲ್ಯರಾಜ, ನೀವು ಸಹಾಯ ಮಾಡಿದಲ್ಲಿ ಹೂತುಹೋದ ಚಕ್ರವನ್ನು ನಾವು ತೆಗೆಯಬಹುದು."

ಕುಳಿತ ಸ್ಥಳದಲ್ಲಿಯೇ ಶಲ್ಯರಾಜನು ಉಸಿರುಗರೆದ. ಆತನು ರಥ ದಿಂದಿಳಿದುದನ್ನು ಕಂಡಾಗ ಕರ್ಣನಿಗೆ ಸಮಾಧಾನನೆನಿಸಿತು. ಕರ್ಣನೂ ರಥದಿಂದ ಕೆಳಗಿಳಿಯುವುದರಲ್ಲಿದ್ದ ಅಷ್ಟರಲ್ಲಿ ಶಲ್ಯನ ಕೂಗು ಕೇಳಿಸಿತು.

"ರಾಧೇಯಾ, ರಥದಿಂದಿಳಿಯುವ ಸಾಹಸವನ್ನು ಮಾಡಬೇಡ. ಯಾಕೆಂದರೆ ನಮ್ಮಿಬ್ಬರಿಂದಲೂ ಎತ್ತಲಾರದಷ್ಟು ರಥಚಕ್ರವು ಆಳವಾಗಿ ಹೂತು ಹೋಗಿದೆ. ಅದನ್ನೆತ್ತಲು ಸಾಧ್ಯವಿಲ್ಲ."

"ಆದರೂ ತಾವು ನನಗೆ ಸಹಾಯ ಮಾಡಿದಲ್ಲಿ !"

"ದುರ್ಯೋಧನನಿಗೆ ಅನೇಕ ಸಲ ನಾನು ಹೇಳಿದೆ. ಆತನ ಆಗ್ರಹ ದಿಂದಲೇ ನಿನ್ನ ಸಾರಥ್ಯಕರ್ಮವನ್ನು ಒಪ್ಪಿಕೊಂಡೆ. ಹಾಗಿಲ್ಲದೆ ಹೋಗಿದ್ದರೆ

ಶಲ್ಯರಾಜನೆಂಬ ಅರಿವನ್ನು ಮರೆತು ಹೀಗೆ ಎಂದೂ ನನಗೆ ಕೆಲಸ ಹೇಳುತ್ತಿರಲಿಲ್ಲ."

ಶಲ್ಯರಾಜನು ರಥದ ಕುದುರೆಗಳನ್ನು ಬಿಚ್ಚುತ್ತಲಿರುವದನ್ನು ಕರ್ಣನು ತೆರೆದ ಕಣ್ಣುಗಳಿಂದ ನೋಡುತ್ತಲಿದ್ದ.

"ಶಲ್ಯರಾಜ, ನೀವು ಇದೇನು ಮಾಡುತ್ತಿರುವಿರಿ ?"

ಕರ್ಣನನ್ನು ನೋಡುತ್ತ ಶಲ್ಯರಾಜನು ಹೇಳಿದ,

"ಯಾವುದು ಯೋಗ್ಯವೋ ಅದನ್ನೇ ಮಾಡುತ್ತಲಿದ್ದೇನೆ. ನಾನು ಸಾರಥಿ ಆದುದರಿಂದ ಕುದುರೆಗಳನ್ನು ತೆಗೆದುಕೊಂಡು ಹೊರಟಿರುವೆ. ರಥದ ಚಕ್ರವನ್ನೆತ್ತುವುದರಲ್ಲಿ ಯಶವು ಲಭಿಸಿದಲ್ಲಿ ತತ್‌ಕ್ಷಣ ಶಂಖನಾದವನ್ನು ಮಾಡು, ಆಗ ಈ ಕುದುರೆಗಳನ್ನು ಹೂಡಿ ನಿನ್ನ ಸಾರಥ್ಯ ಕಾರ್ಯವನ್ನು ಮುಂದುವರಿಸುವೆ. ದುರ್ದೈವಿಯಾದ ರಾಧೇಯನೇ, ನಿನ್ನ ಕೊನೆಯ ಗಳಿಗೆಯು ಸಮೀಪಿಸಿತೆಂದೆನ್ನಿಸುತ್ತಿದೆ. ರಥವನ್ನು ವೇಗದಿಂದ ಓಡಿಸುವುದ ರಲ್ಲಿಯೂ ಈಗ ಅರ್ಥವಿಲ್ಲ, ಅಗೋ ನೋಡು ಕಪಿಧ್ವಜದಿಂದ ಕೂಡಿದ ಅರ್ಜುನನ ರಥವು ನಿನ್ನನ್ನೇ ಹುಡುಕಿಕೊಂಡು ಬರುತ್ತಲಿದೆ."

ಕರ್ಣನತ್ತ ಹೊರಳಿಯೂ ನೋಡದೆ ಮಾದ್ರ ದೇಶಾಧಿಪತಿಯಾದ ಶಲ್ಯ ರಾಜನು ಕುದುರೆಗಳೊಂದಿಗೆ ಹೊರಟು ಹೊದ. ಕರ್ಣನು ಹತಾಶನಾಗಿ ಆ ದೃಶ್ಯವನ್ನೇ ನೋಡುತ್ತಲಿದ್ದ. ಅವನ ಕಿವಿಯ ಸಮೀಪದಲ್ಲಿ ಹಾದು ಹೋದ ಭಯಂಕರವಾದ ಶಬ್ದವು ಅವನನ್ನು ಎಚ್ಚರಿಸಿತು. ಮುನ್ನೋಡಿದಾಗ ಅರ್ಜು ನನ ರಥವು ಧಾವಿಸಿ ಬರುತ್ತಿರುವುದು ಕಾಣಿಸಿತು. ಮರುಕ್ಷಣದಲ್ಲಿಯೇ ಅವನು ತನ್ನನ್ನು ತಾನು ಸಾವರಿಸಿಕೊಂಡ. ಆತನು ರಥದಿಂದ ಕೆಳಗೆ ಧುಮುಕಿದ. ತನ್ನ ಸಂಪೂರ್ಣ ಶಕ್ತಿಯನ್ನು ಹಾಕಿ ಹೂತು ಹೋದ ಚಕ್ರ ವನ್ನು ಮೇಲೆತ್ತಲು ಪ್ರಯತ್ನಿಸಿದ. ಆ ಚಕ್ರವು ಸ್ವಲ್ಪವೂ ಅಲುಗಾಡಲಿಲ್ಲ.

ಕರ್ಣನ ಮನಸ್ಸು ವ್ಯಾಕುಲಗೊಂಡಿತು. ಆತನ ಪ್ರಯತ್ನಗಳೆಲ್ಲ ವಿಫಲಗೊಂಡವು. ಕಾದುಹೋದ ಮರಳಿನ ರಾಶಿಯಲ್ಲಿ ಚಕ್ರವು ಸ್ಥಿತ ಪ್ರಜ್ಞಾವಸ್ಥೆಯಲ್ಲಿಯೇ ಕುಳಿತುಕೊಂಡಿತ್ತು. ಸುವರ್ಣಯುಕ್ತವಾದ ಕೆಲಸ ದಿಂದ ಶೋಭಿಸುತ್ತಲಿದ್ದ ಆ ಚಕ್ರವನ್ನೇ ಅವನು ನೋಡುತ್ತಲಿದ್ದ.

ರಥಚಕ್ರ !

ಈ ಧರ್ಮ ಚಕ್ರಕ್ಕೆ ಯಾವದಾದರೂ ಅರ್ಥವೆಂಬುದಿದೆಯೇ? ಧಾರ್ಮಿಕ ಪುರುಷನಿಗೆ ಆತನ ಧರ್ಮವೇ ಅವನನ್ನು ರಕ್ಷಣೆ ಮಾಡುತ್ತದೆಂದು ಹೇಳುತ್ತಾರೆ. ಆಯುಷ್ಯದುದ್ದಕ್ಕೂ ಧರ್ಮಕಾರ್ಯವನ್ನೇ ಮಾಡುತ್ತ ಬಂದಿರುವೆ. ಆದರೂ ಅದರ ಫಲ! ದಾನ ಕೊಡುವಾಗಲಂತೂ ಎಂದೂ ನನ್ನ ಕೈ ಹಿಂದುಳಿಯಲಿಲ್ಲ, ಚಾರಿತ್ರ್ಯ ಸಂಪನ್ನತೆಯ ಜೀವನ ನಡೆಸಿದೆ. ಅವುಗಳೆಲ್ಲವೂ ಇಂಥ ಪರಿಸ್ಥಿತಿಯನ್ನು ಎದುರಿಸಬೇಕೆಂದು ಮಾಡಿದುದೇ? ನನ್ನ ರಕ್ಷಣೆಯ ಕಾರ್ಯವಂತೂ ದೂರವೇ ಉಳಿಯಿತು. ಯಾವ ಧರ್ಮವನ್ನು ರಕ್ಷಿಸಿಕೊಂಡು ಬಂದೆನೋ ಅದೇ ಧರ್ಮವು ಇಂದು ನನ್ನನ್ನು ನಾಶ ಮಾಡಲು ಹೊರಟಂತಿದೆ. ಆ ಧರ್ಮದ ಬಗ್ಗೆ ಯಾಕೋ ಇಂದು ನನಗೆ ಸಂಶಯ ಬರುತ್ತಲಿದೆ.

ಕರ್ ಕರ್ ಎಂಬ ಭಯಾನಕ ಶಬ್ದವು ಕೇಳಿಬರುತ್ತಿತ್ತು. ಸಂತಪ್ತನಾಗಿ ಮುಖವನ್ನು ಮೇಲೆತ್ತಿ ನೋಡಿದಾಗ ಅರ್ಜುನನ ರಥವು ಸಮೀಪಿಸುತ್ತಿರುವುದು ಕಾಣಿಸಿತು.

ಕರ್ಣನು ಸಾವರಿಸಿಕೊಂಡು ಎಚ್ಚತ್ತಾಗ ಅರ್ಜುನನ ರಥವು ಆತನ ಸಮ್ಮುಖದಲ್ಲಿ ಕಾಣಿಸಿಕೊಂಡಿತು. ಆತನ ರಥಕ್ಕೆ ಜೋಡಿಸಿದ ಶುಭ್ರವಾದ ಕುದುರೆಗಳ ಬಾಯಿಯಿಂದ ಬುರುಗು ಹೊರಬರುತ್ತಿತ್ತು. ಅಶ್ವಗಳ ವೇಗವನ್ನು ಕಡಿಮೆ ಮಾಡುವುದರಲ್ಲಿ ಕೃಷ್ಣನು ನಿರತನಾಗಿದ್ದ. ಅರ್ಜುನನು ತನ್ನ ಧನುಸ್ಸನ್ನು ಕೈಗೆತ್ತಿಕೊಂಡ. ಅದನ್ನು ಕಂಡ ಕರ್ಣನು,

"ಎಲೈ ಅರ್ಜುನಾ, ಸ್ವಲ್ಪ ನಿಲ್ಲು! ನನ್ನ ರಥದ ಗಾಲಿಯು ಭೂಮಿಯಲ್ಲಿ ಹೂತುಹೋಗಿದೆ. ಅದನ್ನು ಮೇಲೆತ್ತುವಷ್ಟು ಅವಕಾಶವನ್ನು ಕೊಡು. ರಥ ಚಕ್ರವು ಹೂತು ಹೋದಾಗ ಯುದ್ಧ ಮಾಡುವುದು ಧರ್ಮವಲ್ಲ! ನನ್ನ ರಥವೂ ಸಿದ್ಧವಾಗಲಿ, ನೀನು ಹೇಳಿದಂತೆಯೇ ಯುದ್ಧವು ನಡೆಯಲಿ, ಅದರಿಂದ ದೊರೆಯುವ ಜಯಾಪಜಯಗಳು ಕೀರ್ತಿದಾಯಕವೆಂದೆನ್ನಿಸುವವು."

ಕರ್ಣನ ಅವಸ್ಥೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡ ಅರ್ಜುನನಿಗೆ ನಿಶ್ಯಸ್ತ್ರನಾದ ಕರ್ಣನ ಮೇಲೆ ಬಾಣ ಪ್ರಯೋಗ ಮಾಡಲು ಮನಸ್ಸು ಒಪ್ಪದಾಯಿತು. ಅರ್ಜುನನ ಮನಸ್ಥಿತಿಯನ್ನು ಅರಿತ ಕೃಷ್ಣನು ಗಂಭೀರ ಭಾವದಿಂದ,

"ರಾಧೇಯಾ, ಇಷ್ಟು ಬೇಗನೇ ನಿನಗೆ ಧರ್ಮದ ಸ್ಮರಣೆಯು ಬಂದಿತೇ! ಏಕವಸ್ತ್ರಳಾದ ದ್ರೌಪದಿಯನ್ನು ರಾಜಸಭೆಗೆ ಎಳೆದು ತಂದಾಗ ಅವಳನ್ನು ವಿವಸ್ತ್ರಳನ್ನಾಗಿ ಮಾಡಿದೆಯಲ್ಲ ಆಗ ನಿನ್ನ ಧರ್ಮಬುದ್ಧಿಯು ಎಲ್ಲಿಹೋಗಿತ್ತು! ಕಪಟತನದಿಂದ ದ್ಯೂತದಲ್ಲಿ ಧರ್ಮರಾಯನನ್ನು ಸೋಲಿಸಿದಿರಲ್ಲ ಆಗ ನಿನ್ನ ಧರ್ಮಬುದ್ಧಿ ಎಲ್ಲಿ ಹೋಗಿತ್ತು! ದ್ರೌಪದಿಯನ್ನು ಕುಟಿಲೆ ಎಂದು ಸಂಬೋಧಿಸಿದ ನಾಲಿಗೆಗೆ ಧರ್ಮದ ಅರಿವೇಕಿರಲಿಲ್ಲ ? ಅಭಿಮನ್ಯುವಿನ ವಧೆ ಮಾಡಿದಾಗ ಧರ್ಮದ ಬಲವು ಕಡಿದು ಹೋಗಿತ್ತೇ ?"

ಕೃಷ್ಣನ ಮುಖದಿಂದ ಹೊರಹೊಮ್ಮುತ್ತಲಿದ್ದ ಸೇಡಿನ ರೂಪದಲ್ಲಿರುವ ಆ ಶಬ್ದಗಳನ್ನು ಕರ್ಣನು ಕೇಳುತ್ತಲಿದ್ದ. ಸಂತಾಪಗೊಂಡು ಒಂದು ಸಲ ಕೃಷ್ಣನನ್ನು ನೋಡಿದ. ಅವನ ಮನಸ್ಥಿತಿಯು ಅಲ್ಲಾಡತೊಡಗಿತು. ಮನದಲ್ಲಿ ಅನೇಕ ಭಾವನೆಗಳು ಪ್ರಕಟವಾಗತೊಡಗಿದವು. ಇಷ್ಟಾದರೂ ಆ ಭಾವನೆಗಳಿಗೆ ಶಬ್ದ ರೂಪವು ಮಾತ್ರ ದೊರೆಯಲಿಲ್ಲ.

ಈ ಎಲ್ಲ ವಾಕ್ತಾಡನಗಳು ಕೃಷ್ಣನಿಂದ! ಅದೂ ನೇರವಾಗಿ ಈ ಕರ್ಣನಿಗೆ !

"ಕೃಷ್ಣಾ, ಹೇಡಿಯಾದ ಈ ಅರ್ಜುನನ ಕೈಗಳಿಗೆ ಬಲ ದೊರಕಿಸಿಕೊಡಲು ಈ ಮಾತುಗಳ ಅರೋಪವೆ ?"

"ಸಿದ್ಧಹಸ್ತನೆಂದೂ, ಅತಿದೇವಿ ಎಂದೂ, ಕಪಟತನದಲ್ಲಿ ಕುಶಲನೆಂದೂ ಹೆಸರುವಾಸಿಯಾದ ಶಕುನಿಯೊಂದಿಗೆ ದ್ಯೂತವಾಡಲು ಹೊರಟಿರುವನೆಂಬುದು ಯುಧಿಷ್ಠಿರನಿಗೆ ತಿಳಿದಿರಲಿಲ್ಲವೆ ? ಆದರೂ ಸಹ ಅವನು ದ್ಯೂತದ ಆಹ್ವಾನ ವನ್ನು ಸ್ವೀಕರಿಸಿದ ಇದು ಮಾತ್ರ ಧರ್ಮ! ಅದೇ ಯುಧಿಷ್ಠಿರನು ದ್ಯೂತದಲ್ಲಿ ಎಲ್ಲವನ್ನೂ ಸೋತುಹೋದ ಅದು ಅಧರ್ಮ ! ಅದು ನಾವು ಮಾಡಿದ ಪಾಪ...............

"ರಜಸ್ವಲೆಯಾದ ದ್ರೌಪದಿಯನ್ನು ರಾಜಸಭೆಗೆ ಬರಲು ಹಟಹಿಡಿದವನು ಯುಧಿಷ್ಠಿರ. ಅದು ಅವನ ಧರ್ಮ ಭಾವನೆಯ ಪ್ರತೀಕ ! ಅದೇ ಐದು ಜನ ಪಾಂಡವರನ್ನು ವರಿಸಿದ ದ್ರೌಪದಿಯು ದಾಸಿಯಾದ ನಂತರ ಸಂತಾಪದ ಭರದಲ್ಲಿ ವಿವಸ್ತ್ರಳನ್ನಾಗಿ ಮಾಡಲು ಆಜ್ಞೆ ಮಾಡಿದುದು ಅಧರ್ಮ ಅಧಃಪಾತ !

"ಕೃಷ್ಣಾ. ನೀನು ಮಾಡಿದ ಪ್ರತಿಜ್ಞೆಯು ಅರಿವನ್ನೇ ಮರೆತು ಭೀಷ್ಮರ
ನ್ನೆದುರಿಸಲು ಸುದರ್ಶನ ಚಕ್ರವನ್ನು ಹಿಡಿದು ಮುನ್ನುಗ್ಗಿದೆ. ಇದೇನು ನಿನ್ನ
ಸಂಯಮದ ಪ್ರತೀಕವೇ ? ಯಾರ ಕುಲದಿಂದಾಗಿ ಯಾವಾಗಲೂ ಆಘಾತ
ವನ್ನೆದುರಿಸಬೇಕಾಯಿತೋ ಆ ನನ್ನ ಸ್ವಾಭಿಮಾನವು ಅಧರ್ಮವೆನಿಸಿತೆ ?

"ಅಭಿಮನ್ಯುವಿನ ಮರಣವು ನಮ್ಮ ಕೈಯಿಂದ ನಡೆದ ಅಸಾಧ್ಯವಾದ
ಕರ್ಮ ! ಸಂಪನ್ನ ಕುಲದಲ್ಲಿ ಹುಟ್ಟಿದರೂ ದೈವಗತಿಯಿಂದಾಗಿ ಅನಾಥನಂತೆ
ದಿನಗಳೆದ ಈ ಕರ್ಣನ ಮಕ್ಕಳು ಇದೇ ರಣರಂಗದಲ್ಲಿ ಮರಣವನ್ನಪ್ಪಿದಾಗ
ಆತನ ಬಗ್ಗೆ ಯಾರೂ ಒಂದು ಮಾತನ್ನೂ ಆಡಲಿಲ್ಲ. ಅಭಿಮನ್ಯುವಿನ ಬಾಲ
ವಯಸ್ಸು ಅನುಕಂಪನೀಯ ಸ್ಥಾನದಲ್ಲಿತ್ತು. ಹಾಗೆಯೇ ನನ್ನ ಮಕ್ಕಳ
ವಯಸ್ಸಾದರೂ ಅನುಕಂಪನೀಯವೆಂದೇಕೆ ತೋರಲಿಲ್ಲ ? ಇಲ್ಲ, ಕೃಷ್ಣಾ
ಇಂಥ ಸುಳ್ಳಿನ ಆರೋಪಗಳನ್ನು ಮಾಡುವುದು ನಿನ್ನಂಥವನಿಗೆ ಶೋಭಿಸು
ವುದಿಲ್ಲ.

"ವಿಜಯಪ್ರಾಪ್ತಿಯಾಗಬೇಕಲ್ಲವೆ ? ಅದು ಅರ್ಜುನನನ್ನು ಸುರಕ್ಷಿತ
ವಾಗಿಟ್ಟು ವಿಜಯವನ್ನು ಸಂಪಾದಿಸುವುದು. ರಾಜವೈಭವಗಳನ್ನು ಅನುಭವಿಸು
ವದು ಇವುಗಳೇ ಮಹತ್ವದ್ದಾಗಿದ್ದಲ್ಲಿ ನಿನ್ನ ಒಂದೇ ಒಂದು ಬೇಡಿಕೆಯನ್ನು
ಮನ್ನಿಸಿ ಅವೆಲ್ಲವುಗಳನ್ನು ನಾನು ಪಡೆಯುತ್ತಿರಲಿಲ್ಲವೆ ? ಜೇಷ್ಠ ಪಾಂಡವ
ನೆಂದು ಅಂಗೀಕರಿಸಿಕೊಳ್ಳಲು ಬರುತ್ತಿರಲಿಲ್ಲವೆ ? ಸಾಮ್ರಾಟ ಪದವಿಯ
ಅಭಿಷೇಕವು ನನಗೆ ಮಾಡಲ್ಪಡುತ್ತಿರಲಿಲ್ಲವೆ ? ದ್ರೌಪದಿಯ ಮೇಲೆ ನನ್ನ
ಪ್ರಥಮ ಅಧಿಕಾರವಿರುತ್ತಿರಲಿಲ್ಲವೆ ? ಈ ಎಲ್ಲ ಮಾತುಗಳನ್ನು ನೀನೇ
ಹೇಳಿದ್ದಿಯಲ್ಲವೆ ?

"ಜೀವನದ ಮೌಲ್ಯವೇನೆಂಬುದು ನನಗೆ ಅರ್ಥವಾಗದಿರಬಹುದು.
ಆದರೆ ಅದಕ್ಕೆ ಚಿತಾವಣೆಯನ್ನಿತ್ತವನು ಮಾತ್ರ ನೀನೇ. ಮುಂದೆ ಅದನ್ನಿಲ್ಲ
ದಂತಾಗಿ ಮಾಡಲು ಪ್ರಯತ್ನಿಸಿದವನೂ ನೀನೇ. ಸಾವಿನ ಹೆದರಿಕೆ ಎಂಬುದೇ
ನನಗಿಲ್ಲ. ಜೀವರಕ್ಷಣೆಯನ್ನು ಮಾಡಿಕೊಳ್ಳಬೇಕಾಗಿದ್ದಲ್ಲಿ ಅದನ್ನು ಈ ಕ್ಷಣ
ದಲ್ಲಿಯೂ ನಾನು ಮಾಡಿಕೊಳ್ಳಬಹುದು. ಈ ಅರ್ಜುನನಿಗೆ ಒಂದೇ ಒಂದು
ಮಾತನ್ನು ನಾನು ಹೇಳಿದರೂ ಸಾಕು. ಪಾರ್ಥಾ ನಿನ್ನ ಧನುಸ್ಸಿಗೆ ಹೆದೆ
ಏರಿಸುವದರ ಮೊದಲು ನಿನ್ನ ಹಾಗೂ ನನ್ನ ಸಂಬಂಧವೇನೆಂಬುದನ್ನು ಕೃಷ್ಣ

ನಿಂದ ತಿಳಿದುಕೊಂಡೇ ಮುಂದೆ ಹೆಜ್ಜೆಯನ್ನಿಡು ಎಂದು ಹೇಳಬಹುದು. ಈ ಒಂದು ಮಾತಿನಿಂದ ಈಗ ಸಾಗುತ್ತಿರುವ ಸಂಹಾರ ಕಾರ್ಯವನ್ನು ನಿಲ್ಲಿಸಬಹುದು. ಬೇಡ ಕೃಷ್ಣ, ನನಗೆ ಇದಾವುದೂ ಬೇಡ. ನಾನು ಸಂಪೂರ್ಣ ದಣಿದುಹೋಗಿದ್ದೇನೆ. ಇನ್ನು ನನಗೆ ಬದುಕುವ ಅಪೇಕ್ಷೆಯೇ ಇಲ್ಲವಾಗಿದೆ. ಆದರೂ ಒಂದೇ ಒಂದು ಅಪೇಕ್ಷೆ ಇದೆ. ಅದು ಬೇರಾವ ಅಪೇಕ್ಷೆಯು ಅಲ್ಲ, ಕೇವಲ ಮೃತ್ಯುವನ್ನು ಎದುರುಗೊಳ್ಳುವುದು. ವೀರನಿಗೊಪ್ಪುವಂತೆ ಹೋರಾಡುತ್ತಲೇ ಆ ದೇವತೆಯನ್ನಪ್ಪಿಕೊಳ್ಳುವುದು."

ಕರ್ಣನ ಕಿವಿಗಳಿಗೆ ಕೃಷ್ಣನ ಕೊನೆಯ ವಾಕ್ಯಗಳು ಕೇಳಿಸಿದವು.

"ಅರ್ಜುನಾ, ಏನು ನೋಡುತ್ತಿರುವೆ. ತುಂಬಿದ ರಾಜಸಭೆಯಲಿ ಯಾವನು ದ್ರೌಪದಿಯ ಲಜ್ಜೆಯನ್ನು ಹರಣ ಮಾಡಲು ಯತ್ನಿಸಿದನೋ ಆ ರಾಧೇಯನೇ ಈತ ! ಐವರು ವೀರರ ನೆರವಿನಿಂದ ನಿನ್ನ ಮಗನನ್ನು ಸಂಹರಿಸಿದವನೇ ಈ ಸೂತಪುತ್ರ ! ಕುರುಕ್ಷೇತ್ರದ ಈ ಯುದ್ಧಕ್ಕೆಲ್ಲ ಮೂಲ ಕಾರಣನೆಂದು ಕರೆಸಿಕೊಳ್ಳುವನೇ ಈ ಕರ್ಣ ? ಇಲ್ಲಿ ವಿಚಾರಕ್ಕೆ ವ್ಯವಧಾನವೇ ಇಲ್ಲ. ದಯೆ ತೋರಿಸಲು ದಾರಿಯೇ ಇಲ್ಲ. ಈಗ ನಿನ್ನ ಮುಂದಿರುವುದು ಕರ್ತವ್ಯ ಮಾತ್ರ. ಈ ಕರ್ಣನನ್ನು ಸಂಹಾರ ಮಾಡುವುದೇ ನಿನ್ನ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಮೊದಲು ಈ ಪಾಪಿಯನ್ನು ಸಂಹಾರ ಮಾಡು, ವಿಜಯವನ್ನು ಸಂಪಾದಿಸಿಕೋ."

"ಪಾಪಿ !" ಕರ್ಣನ ಮುಖವು ಉಗ್ರವಾಯಿತು.

ಅರ್ಜುನನ ಬಾಣವು ಶಬ್ದ ಮಾಡುತ್ತ ಕರ್ಣನ ಬದಿಯಲ್ಲಿ ಹಾದು ಹೋಯಿತು. ಕರ್ಣನು ಕೋಪಾಗ್ನಿ ರುದ್ರನಂತಾದ. ಕಪ್ಪಾದ ಮೋಡಗಳ ಮೇಲೆ ಸೂರ್ಯದೇವನು ಸೇಡನ್ನು ತೀರಿಸಿಕೊಳ್ಳುವಂತೆ ಕರ್ಣನ ತೇಜವು ಕಾಣಲಾರಂಭಿಸಿತು, ಹೂತು ಹೋಗಿದ್ದ ಆ ರಥವನ್ನೇ ಕರ್ಣನು ಹತ್ತಿ ನಿಂತು ಅತ್ಯಂತ ಆವೇಶಯುಕ್ತನಾಗಿ ಬಾಣಪ್ರಯೋಗಗಳನ್ನಾರಂಭಮಾಡಿದ. ಅರ್ಜುನನ ಬಾಣಗಳನ್ನೆಲ್ಲ ತುಂಡರಿಸತೊಡಗಿದ. ರತ್ನಖಚಿತವಾದ ತೋಳುಬಂದಿಗಳನ್ನು ಧರಿಸಿದ ಕರ್ಣನ ತೋಳುಗಳು ಬಾಣದ ಮಳೆಗರೆಯಲಾರಂಭಿಸಿದವು. ಅದನ್ನು ಕಂಡ ಅರ್ಜುನನು ಅತಿ ಭಯಾನಕವಾದ ಅಸ್ತ್ರಗಳನ್ನು ಬಳಸಲಾರಂಭಿಸಿದ. ಕರ್ಣನು ಬಳಸಿದ ಅಸ್ತ್ರಗಳಿಗೆ ಸಮಾನವಾದ ಅಸ್ತ್ರ

ಗಳನ್ನು ಆತನೂ ಬಿಡಲಾರಂಭಿಸಿದ, ಭಯಾನಕವಾದ ಆ ಯುದ್ಧದಲ್ಲಿ ಅರ್ಜುನನ ಕಿರೀಟವು ಕಳಚಿ ನೆಲಕ್ಕುರುಳಿತು. ಕರ್ಣನ ಕವಚವು ಛಿನ್ನಭಿನ್ನ ವಾಯಿತು. ಇಬ್ಬರೂ ಮಹಾವೀರರು. ಇಬ್ಬರಿಗೂ ಸಾಕಷ್ಟು ಗಾಯಗಳಾಗಿ ದ್ದವು. ತುಂಬಿದ ನಡು ಹಗಲಿನ ಸೂರ್ಯ ಕಿರಣಗಳೂ ರಕ್ತವರ್ಣಯುಕ್ತ ವಾಗಿ ಅರಳಿದ ಪಲಾಶ ವೃಕ್ಷದಂತೆ ಆ ಯೋಧರಿಬ್ಬರೂ ಕಾಣಿಸುತ್ತಿದ್ದರು. ಗಾಯಗಳ ಪರಿವೆಯಿಲ್ಲದೆ ತಮ್ಮ ಸರ್ವಸ್ವವನ್ನೆಲ್ಲ ಪಣಕ್ಕಿಟ್ಟು ಹೋರಾಡುತ್ತ ಲಿದ್ದರು. ಇಬ್ಬರ ತೋಳುಗಳಲ್ಲಿಯೂ ಈರ್ಷೆಯು ಹೆಚ್ಚುತ್ತಲಿತ್ತು. ಗಾಯಗಳು ಹೆಚ್ಚಾದಂತೆಲ್ಲ ಕರ್ಣನ ಸಿಟ್ಟು ಇಮ್ಮಡಿಗೊಳ್ಳುತ್ತಿತ್ತು. ಆತನು ಬಹು ತೀಕ್ಷ್ಣವಾದ ಬಾಣವನ್ನು ಧರಿಸಿದ. ಅದು ಸಾಕ್ಷಾತ್ ಅಗ್ನಿಯ ಪ್ರತಿ ರೂಪವಾಗಿತ್ತು. ಕರ್ಣನು ಅದನ್ನು ಧನುಸ್ಸಿಗೆ ಜೋಡಿಸಿ ಕಿವಿಯವರೆಗೂ ಹೆದೆಯೇರಿಸಿ ಸರಿಯಾಗಿ ಅರ್ಜುನನ ಎದೆಗೆ ಗುರಿಯನ್ನಿಟ್ಟ. ಗಾಳಿಯಲ್ಲಿ ನಾಗರಹಾವು ಹೊರಟಂತೆ ಅದು ಅರ್ಜುನನ ಎದೆಯನ್ನು ಪ್ರವೇಶಮಾಡಿತು. ಆದರ ಆಘಾತವನ್ನು ಸಹಿಸದ ಅರ್ಜುನನು ನಿಂತಲ್ಲಿಯೇ ಕಂಪಿಸತೊಡಗಿದ, ಅವನ ಕೈಯಲ್ಲಿದ್ದ ಗಾಂಢೀವ ಧನುಸ್ಸು ಕಳಚಿಬಿದ್ದಿತು. ರಥದಲ್ಲಿ ಅವನು ಕುಸಿದು ಬಿದ್ದ.

ಕರ್ಣನ ಪರಾಕ್ರಮದಿಂದ ಚಕಿತನಾದ ಕೃಷ್ಣನು ಒಂದು ಸಲ ಆತ ನನ್ನು ಕ್ರೂರದೃಷ್ಟಿಯಿಂದ ನೋಡಿದ. ಮೂರ್ಛಿತನಾದ ಅರ್ಜುನನ್ನು ಉಪ ಚರಿಸಲು ಹವಣಿಸಿದ, ಆಗ ಕರ್ಣನು ತನ್ನ ಬತ್ತಳಿಕೆಯಲ್ಲಿದ್ದ ಬೇರೊಂದು ಅಸ್ತ್ರವನ್ನು ಹೊರತೆಗೆದು ಧನುಸ್ಸಿಗೆ ಹೂಡಿದ. ಗುರಿಯನ್ನಿಡಲು ಆತನು ಅರ್ಜುನನತ್ತ ನೋಡಿದ. ಕೃಷ್ಣನು ಅರ್ಜುನನ ಸೊಂಟಕ್ಕೆ ಸುತ್ತಿದ್ದ ಶಾಲನ್ನು ತೆಗೆದು ಅತನಿಗೆ ಗಾಳಿ ಹಾಕುತ್ತಲಿದ್ದ. ಆ ನೀಲಮಯ ವರ್ಣ ದಿಂದ ಕೂಡಿದ ಶಾಲು ಕರ್ಣನಿಗೆ ಚಿರಪರಿತವಾಗಿತ್ತು, ಅದನ್ನು ಆತ ಕುಂತಿಗೆ ಕೊಟ್ಟಿದ್ದ. ಅದೇ ಶಾಲು, ಇಂದು ಅರ್ಜುನನ ಕಟಿಬಂಧವೆಂದು ಕಟ್ಟಲಾಗಿತ್ತು.

ಬ್ರಹ್ಮಾಸ್ತ್ರದ ನೆನಪು ಹಾರಿಹೋಗುವಂತಹ ಕಾಲವು ಸನ್ನಿಹಿತ ವಾಗಿತ್ತು.

ಆ ನೀಲಮಯ ಶಾಲಿನ ದರ್ಶನದಿಂದಾಗಿ ಕರ್ಣನ ಬಲವೆಲ್ಲ ಕುಗ್ಗಿ

ಹೋಯಿತು. ತಾನು ಕೊಟ್ಟ ವಚನಗಳೆಲ್ಲ ನೆನಪಿಗೆ ಬರಲಾರಂಭಿಸಿದವು. ಕೈಲಿದ್ದ ಧನುಸ್ಸು ಯಾವಾಗ ಕಳಚಿ ಬಿದ್ದಿತೆಂಬ ಅರಿವೂ ಅವನಿಗಿರಲಿಲ್ಲ.

ಅಹಂಕಾರ ಹಾಗೂ ದುರಭಿಮಾನದಿಂದಾಗಿ ಎಂಥ ಅಕೃತ್ಯವು ನಡೆದು ಹೋಗುತ್ತಿತ್ತಲ್ಲ !

ತಾಯೀ, ಒಳ್ಳೆಯ ಸಮಯದಲ್ಲಿ ನನ್ನನ್ನು ಎಚ್ಚರಿಸಿದೆ.

ನೀನು ಅರಿಸಿದ ಐದು ಜನ ಮಕ್ಕಳು ನಿನಗೆ ಸಿಗುವರು, ಆರನೆಯವನು ಐದನೇಯವನೆಂದು ಹೇಗಾದಾನು ? ಮೊದಲಿಗನಾದ ನಾನು ನಿನಗಾಗಿ ಆರನೆಯವನೆಂಬ ಪರಾಜಯವನ್ನು ಸಂತೋಷದಿಂದ ಅಂಗೀಕರಿಸುವೆ.

ಕರ್ಣನ ರಾಗದ್ವೇಷಾದಿಗಳೆಲ್ಲ ನಶಿಸಿ ಹೋದವು. ಅಸಂಖ್ಯಾತಗಾಯ ಗಳಿಂದಾಗಿ ಉಗ್ರವಾಗಿ ತೋರುತ್ತಿದ್ದ ರೂಪವು ಇದ್ದಕ್ಕಿದ್ದಂತೆ ಬದಲಾಯಿತು. ತುಂಬಿದ ರಣಾಂಗಣದಲ್ಲಿಯೂ ಶಾಂತವಾದ ಜಲರಾಶಿಯ ಮೇಲೆ ನಲಿಯುವ ಕಮಲದಂತೆ ಆತನ ದೇಹವು ಪ್ರಸನ್ನಗೊಂಡಿತು. ರಥದಿಂದ ಕೆಳಗಿಳಿದು ಪುನಃ ಹೂತುಹೋಗಿದ್ದ ಚಕ್ರವನ್ನು ಮೇಲೆತ್ತಲು ಪ್ರಯತ್ನವನ್ನಾರಂಭಿಸಿದ. ಗಾಯಗೊಂಡಿದ್ದ ತನ್ನೆರಡೂ ಕೈಗಳನ್ನು ಭೂಮಿಗೆ ಅಂಟಿಸಿ ಹೆಗಲಿನ ಮೇಲೆ ಆ ಚಕ್ರದ ತುದಿಭಾಗವನ್ನಂಟಿಸಿಕೊಂಡು ಎಲ್ಲ ಶಕ್ತಿಯನ್ನೂ ಪ್ರಯೋಗಿಸಿ ಅದನ್ನೆತ್ತಲು ಹವಣಿಸತೊಡಗಿದ. ಆಗ ಎಚ್ಚರಗೊಂಡ ಅರ್ಜುನನನ್ನು ತನ್ನ ಕೈಯಲ್ಲಿದ್ದ ಶಾಲನ್ನು ಚೆಲ್ಲಿ ಹಿಂದಿರುಗಿ ನೋಡದೆ ಕರ್ಣನತ್ತ ಕೈ ಮಾಡಿ ತೋರಿಸುತ್ತ ಕೃಷ್ಣನು ಹೇಳಿದ,

"ಅರ್ಜುನಾ, ಸಾವರಿಸಿಕೋ ! ರಾಧೇಯನನ್ನು ಸಂಹರಿಸಲು ಇದೇ ಸರಿಯಾದ ಸಮಯ. ಒಂದು ವೇಳೆ ಕರ್ಣನು ಆ ಚಕ್ರವನ್ನು ಹೊರತೆಗೆಯು ವಲ್ಲಿ ಯಶಸ್ವಿಯಾದರೆ ನಿನ್ನೊಂದಿಗೆ ನನ್ನ ಪರಿಸ್ಥಿತಿಯೂ ಸಹ ಹೀಗೇ ಎಂದು ಹೇಳಲು ಬರುವಂತಿಲ್ಲ, ಅರ್ಜುನಾ ಎಚ್ಚರಾಗು."

ಅನೇಕ ಗಾಯಗಳಿಂದಾಗಿ ಮೂರ್ಛಿತನಾಗಿ ಬಿದ್ದಿದ್ದು ಆಗ ತಾನೆ ಎಚ್ಚರಗೊಳ್ಳುತ್ತಿದ್ದ ಅರ್ಜುನನಿಗೆ ತನ್ನ ಸ್ಥಿತಿಯನ್ನು ಕಂಡು ಅಪಮಾನ ವಾದಂತಾಯಿತು. ಆತನು ಬಹು ಸಿಟ್ಟಿನಿಂದ ಗಾಸಿಗೊಂಡ ಹಾವಿನಂತೆ

ಘೊತ್ಕರಿಸುತ್ತ ತನ್ನ ಧನುಸ್ಸನ್ನು ಕೈಗೆತ್ತಿಗೊಂಡು ತೀಕ್ಷ್ಣವಾದ ಬಾಣವನ್ನು ಅದಕ್ಕೆ ಹೂಡಿದ.

ರಥದ ಚಕ್ರವನ್ನು ಹೊರತೆಗೆಯುವಲ್ಲಿ ನಿರತನಾದ ಕರ್ಣನನ್ನು ನೋಡಿದ. ಮಧ್ಯಾಹ್ನವು ಮೀರಿಹೋಗಿತ್ತು. ಇಂಥ ಬಿಸಿಲಿನಲ್ಲಿಯೇ ಹರಿವ ಪ್ರವಾಹದಲ್ಲಿ ನಿಂತುಕೊಂಡು ಕರ್ಣನು ದಾನವನ್ನೀಯುವ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದ್ದ. ದಾನಸ್ವೀಕರಿಸಲು ಬಂದವರನ್ನು ಆತ ಎಂದೂ ಶತ್ರುಗಳೆಂದಾಗಲಿ, ಮಿತ್ರರೆಂದಾಗಲಿ ವಿಚಾರಿಸಿದವನಲ್ಲ. ಆದರೆ ಇಂದು ಆ ಮಹಾದಾನಿ ತನ್ನ ಜೀವನದಲ್ಲಿಯೇ ಬೆಲೆ ಬಾಳುವ ಕೊನೆಯ ದಾನವನ್ನೀಯಲು ಸಿದ್ಧನಾಗಿದ್ದ. ಅರ್ಜುನನು ತನ್ನ ಗುರಿಯು ಸರಿಯಾಗಿ ಸಾಧಿಸುವಂತೆ ಬಾಣಪ್ರಯೋಗ ಮಾಡಿದ.

"ಸಫ್ss"

ವಿದ್ಯುಲ್ಲತೆಯು ಮಿಂಚುವಂತೆ ಆ ಬಾಣವು ಕಾಣಿಸಿಕೊಂಡಿತು. ಒಂದು ಭಯಂಕರವಾದ ವೇದನೆಯೊಂದಿಗೆ ಅದು ಆರುಪಾರಾಗಿ ಹೊಯಿತು, ರಥವನ್ನು ಮೇಲೆತ್ತಲು ಭೂಮಿಗಂಟಿದ ಕರ್ಣನ ಕೈಗಳು ಸಡಿಲುಗೊಂಡವು. ರಥದ ಬದಿಯಿಂದ ಓರೆಗಣ್ಣನ್ನು ಹಾಯಿಸಿ ನೋಡಿದ. ಅರ್ಜುನನ ರಥವು ವಾಯುವೇಗದಿಂದ ದೂರ ದೂರ ಹೋಗುತ್ತಲಿತ್ತು. ನೀಲಮಯವಾದ ಆ ಶಾಲು ಮಾತ್ರ ರಣಭೂಮಿಯಲ್ಲಿ ತೇಲಿ ತೇಲಿ ಬರುತ್ತಲಿದ್ದುದು ಕಾಣಿಸಿತು.

ಆ ಶಾಲನ್ನು ನೋಡನೊಡುತ್ತ ಕರ್ಣನ ಕಣ್ಣುಗಳು ಮುಚ್ಚಿಕೊಂಡವು.

## 59

ಮಧ್ಯಾಹ್ನದ ಸೂರ್ಯ ಆಕಾಶದಲ್ಲಿ ಉಗ್ರವಾಗಿ ಕಾಣಿಸುತ್ತಲಿದ್ದ. ರಣಭೂಮಿಯಲ್ಲಿ ಶಂಖನಾದವು ಕೇಳಿಬಂದಿತು. ಆನಂದದ ಪಾರವಾರವನ್ನು ತಲುಪಿದ ಪಾಂಡವರಿಂದ ಧ್ವನಿಮಾಡಲ್ಪಟ್ಟ ಆ ಶಂಖನಾದವು ಆಕಾಶವನ್ನೆಲ್ಲ ವ್ಯಾಪಿಸಿತು. ಕೌರವ ಸೇನೆಯು ಭಯಚಕಿತಗೊಂಡು ಪಾಂಡವರ ವಿಜಯೋತ್ಸಾಹವನ್ನು ನೋಡುತ್ತಲಿತ್ತು. ಯುದ್ಧದ ಅರಿವು ಯಾರಿಗೂ ಇರಲಿಲ್ಲ. ಪಾಂಡವರ ಭಾಗದಿಂದ ಆಕಸ್ಮಿಕವಾಗಿ ಕೇಳಿ ಬಂದ ಆ ಶಂಖ

ನಾದ ಹಾಗೂ ರಣ ದುಂದುಭಿಗಳನ್ನಾಲಿಸಿದ ದುರ್ಯೋಧನನ ರಥವು ನಿಂತಲ್ಲಿಯೇ ನಿಂತು ಬಿಟ್ಟಿತು. ದಕ್ಷಿಣ ಭಾಗದಿಂದ ಆ ವಿಜಯ ಧ್ವನಿಯು ಕೇಳಿಬರುತ್ತಿತ್ತು, ಭೀತಗ್ರಸ್ತವಾದ ಮನಸ್ಸಿನಿಂದ ಆತನು ತನ್ನ ರಥವನ್ನು ದಕ್ಷಿಣ ದಿಕ್ಕಿಗೆ ಕೊಂಡೊಯ್ಯುವಂತೆ ಸಾರಥಿಗೆ ಹೇಳಿದ.

ಅತಿ ವೇಗದಿಂದ ರಥವು ಧಾವಿಸಲಾರಂಭಿಸಿತು. ಅಪಜಯದ ಭೀತಿಯಿಂದ ಕೌರವ ಸೇನೆಯು ಕಾಲ್ತೆಗೆಯಲಾರಂಭಿಸಿತು. ಆ ಯುದ್ಧಭೂಮಿಯಲ್ಲಾದ ಪಲ್ಲಟವನ್ನು ದುರ್ಯೋಧನನು ಖಿನ್ನನಾಗಿ ನೋಡುತ್ತಲಿದ್ದ. ಕರ್ಣನ ರಥದ ಕುದುರೆಗಳು ಅವನ ಕಣ್ಣಿಗೆ ಬಿದ್ದೊಡನೆ ಆತನ ಎದೆಯೊಡೆದು ನೀರಾಗಿ ಹೋಯಿತು.

ರಥವನ್ನು ಸಮೀಪಿಸುತ್ತಿರುವಂತೆ ಅವನ ನಡಿಗೆಯೂ ನಿಧಾನವಾಗತೊಡಗಿತು. ಗೌರವರ್ಣಯುಕ್ತವಾದ ಕರ್ಣನ ದೇಹವನ್ನು ಆತನು ನೋಡಿದ. ಆತನ ಬೆನ್ನುಗಳಲ್ಲಿ ಯಾವ ಗಾಯದ ಚಿಹ್ನೆಗಳೂ ಕಾಣಿಸಲಿಲ್ಲ. ಗಾಢವಾದ ನಿದ್ರೆಯಲ್ಲಿರುವಂತೆ ಕರ್ಣನ ಶರೀರವು ಕಾಣಿಸುತ್ತಿತ್ತು. ತಲೆಯ ಮೇಲಿನ ಕಿರೀಟವು ಕಳಚಿಬಿದ್ದುದರಿಂದ ಅವನ ತಲೆಗೂದಲು ಹರಡಿಕೊಂಡಿದ್ದವು. ನಿಧಾನವಾಗಿ ಆತನ ಸಮೀಪಕ್ಕೆ ಬಂದ ದುರ್ಯೋಧನನು, ತನ್ನ ಶೋಕವನ್ನು ತಡೆದುಕೊಳ್ಳುತ್ತ ರಥದಡಿಯಲ್ಲಿ ಬಿದ್ದ ಕರ್ಣನ ಎರಡೂ ಕೈಗಳನ್ನು ಹಿಡಿದು ಅವುಗಳನ್ನು ಅಡಿ ಭಾಗದಿಂದ ಹೊರತೆಗೆದ. ಕರ್ಣನ ದೇಹದಲ್ಲಿ ನಟ್ಟ ಬಾಣವನ್ನು ಹೊರತೆಗೆದು ತನ್ನ ಉತ್ತರೀಯದಿಂದ ಆತನ ಮುಖವನ್ನೊರೆಸಿದ. ಆ ಅಸಮಾನ್ಯ ರೂಪವನ್ನು ಕಂಡು ದುರ್ಯೋಧನನ ಶೋಕವು ಹೊರಹೊಮ್ಮಿತು.

"ಕರ್ಣ ! ಹೊರಟು ಹೋದೆಯಾಃ ಈ ಗೆಳೆಯನನ್ನು ಬಿಟ್ಟು ಹೊರಟೆಯಾ ! ಎಂಥ ಕೆಲಸ ಮಾಡಿಬಿಟ್ಟೆ. ಮಿತ್ರಾ, ನೀನಿಲ್ಲದ ಈ ದುರ್ಯೋಧನನು ಪರಕೀಯ, ಅಂಗರಾಜಾ, ನಿನ್ನ ಬಲದ ಮೇಲೆಯೇ ನಾನು ಈ ಕುರುಕ್ಷೇತ್ರದ ಯುದ್ಧವನ್ನು ರಚಿಸಿದೆ. ನೀನೇ ನನಗೆ ವಿಜಯದ ವಚನವನ್ನು ಕೊಟ್ಟಿದ್ದೆಯಲ್ಲವೆ? ಮೃತ್ಯುಂಜಯನೇ ಕೊಟ್ಟ ವಚನವನ್ನು ಮರೆತು ಎಲ್ಲಿಗೆ ಹೋದೆ ? ನೀನಿಲ್ಲವಾದುದರಿಂದ ನಾನು ಪರಾಜಿತನಾದೆ ಶತ್ರುಗಳಿಗೂ ನಿನ್ನ

ನಾಮೋಚ್ಚಾರಣೆ ಮಾಡುವ ಧೈರ್ಯವಿರುತ್ತಿರಲಿಲ್ಲ. ಇಂದು ನಿನ್ನ ಪತನದ ವಿಜಯೋತ್ಸಾಹವನ್ನು ಆಚರಿಸುತ್ತಿರುವ ಪಾಂಡವರು ನಿನಗೆ ಕಾಣಬರುವು ದಿಲ್ಲವೆ ?"

ಮುಚ್ಚಿಕೊಂಡಿದ್ದ ಕರ್ಣನ ನೇತ್ರಗಳು ನಿಧಾನವಾಗಿ ಕಮಲವು ಅರಳುವಂತೆ ಸಾವಕಾಶವಾಗಿ ತೆರೆಯಲ್ಪಟ್ಟವು. ಅದನ್ನು ಕಂಡು ದುರ್ಯೋಧನನಿಗೆ ಪರಮಾಶ್ಚರ್ಯವಾಯಿತು. ಆತನು ಕರ್ಣನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡ,

"ಗೆಳೆಯಾ, ಇನ್ನೂ ನೀನು ಉಸಿರಾಡುತ್ತಿರುವೆ. ಜೀವದಿಂದಿರುವೆ ! ಇನ್ನೂ ನೀನಿರುವಿ."

ಜಲದುಂಬಿದ ನೇತ್ರಗಳಲ್ಲಿಯೂ ತೇಲಿಬರುತ್ತಿರುವ ತನ್ನ ಗೆಳೆಯನ ಆನಂದವನ್ನು ಕಂಡು ಕರ್ಣನು ವಿಸ್ಮಿತನಾಗಿ ಬಹು ಕಷ್ಟದಿಂದ ಮಾತ ನಾಡಿದ,

"ಮಿತ್ರಾ, ನೀನು ಬಂದೆಯಾ, ನಿನ್ನ ದಾರಿಯನ್ನೇ ಕಾಯುತ್ತಲಿದ್ದೆ. ನಿನ್ನನ್ನು ಭೇಟಿಯಾಗದೇ ನಾನು ಹೇಗೆ ಹೋಗಲಿ ?"

ದುರ್ಯೋಧನನ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿತ್ತು

"ಅಂಗರಾಜ ! ನಾನು ಸೋತೆ, ಪರಾಜಿತನಾದೆ. ನಿನ್ನ ಪತನವು ನನ ಸರ್ವಸ್ವವನ್ನೆಲ್ಲ ಹರಣ ಮಾಡಿತು."

ಕರ್ಣನಿಗೆ ಮಾತನಾಡಲು ಆಯಾಸವಾಗುತ್ತಿತ್ತು. ಅದನ್ನು ಕಂಡ ದುರ್ಯೋಧನನು, ಅವನ ಕಂಠದಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಬಾಣವನ್ನು ಮುಟ್ಟಿನೋಡಿದ. ಆಗ ತುಂಬ ವೇದನೆಗೊಂಡ ಕರ್ಣನು,

"ಬೇಡ ಯುವರಾಜ, ಆ ಬಾಣವು ಹಾಗೆಯೇ ಇರಲಿ. ನನಗೆ ಮಾತ ನಾಡಬೇಕಾಗಿದೆ."

ಕರ್ಣನು ನಿಧಾನವಾಗಿ ಶ್ವಾಸವನ್ನೆಳೆದುಕೊಂಡು ಹನಿದುಂಬಿದ ದುರ್ಯೋಧನನ ಮುಖವನ್ನು ನೋಡುತ್ತ ಹೇಳಿದ,

"ದುರ್ಯೋಧನಾ! ಈ ರಣಭೇರಿ ಹಾಗೂ ಈ ಶಂಖನಾದ ಇವು ಅವರ ವಿಜಯವನ್ನು ಸೂಚಿಸುವುದಿಲ್ಲ. ಅವು ನನ್ನ ಜಯದ ಕೀರ್ತಿಯನ್ನೇ ಸಾರುತ್ತಿವೆ."

"ಸರ್ವನಾಶವಾದ ಮೇಲೂ ವಿಜಯವೆಂಥದು ?"

"ಅದೇ ನಿಜವಾದ ವಿಜಯ ! ವೃದ್ಧಾಪ್ಯದಲ್ಲಿ ಅಸಹ್ಯವಾದ ರೋಗ ಖಜಿನಾದಿಗಳಿಂದ ನರಳುತ್ತ ಸಾಯುವುದು ಕೃತಾರ್ಥತೆಯ ಸಾವೆಂದೆನಿಸಲಾರದು. ರಣಭೂಮಿಯಲ್ಲಿ ಮಡಿಯುವುದೇ ನಿಜವಾದ ವೀರನ ಸಾವು. ಹಾಗೂ ವೀರತನದ ಲಕ್ಷಣ. ಅದನ್ನು ನಾನು ಗಳಿಸಿದೆ. ನಾವು ಗಳಿಸಿದ ನಮ್ಮ ಈ ವಿಜಯವನ್ನು ಯಾರೂ ಕಲಂಕಿತವೆಂದು ಕರೆಯಲಾರರು."

"ಅಂಗರಾಜ"

"ಗೆಳೆಯಾ, ನೀನು ವ್ಯಾಕುಲನಾಗಬೇಡ, ವ್ಯಥೆಪಡುವ ಕಾರಣವೂ ಇಲ್ಲ. ನಿನಗೆ ಲೌಕಿಕವಾದ ವಿಜಯವು ಬೇಕೆನಿಸಿದೆಯಲ್ಲವೆ ? ಹಾಗಾದರೆ ಅದು ಈಗಲೂ ಸಹ ಬಹು ದೂರವಿಲ್ಲ."

"ಕಳೆದ ಹದಿನೇಳು ದಿನಗಳಲ್ಲಿ ಭೀಷ್ಮಾಚಾರ್ಯ, ದ್ರೋಣಾಚಾರ್ಯರಂತಹ ಅನೇಕ ವೀರಾಧಿವೀರರನ್ನು ನಾನು ಕಳೆದುಕೊಂಡೆ. ಇನ್ನು ಅಳಿದುಳಿದ ನನ್ನ ಸೇನೆಗೆ ನಿನ್ನ ಮರಣವಾರ್ತೆಯು ತಿಳಿದು ಬಂದಲ್ಲಿ ಅವರು ಇನ್ನೂ ಹತಾಶಗೊಳ್ಳುವರು. ಈಗಾಗಲೇ ದಾರಿ ಕಂಡಂತೆಲ್ಲ ಅವರು ಪಲಾಯನಗೈಯ್ಯುತ್ತಿರಬಹುದು. ಇಂತಹ ಸಂದರ್ಭದಲ್ಲಿ ವಿಜಯದ ಮಾತು ಹೇಗೆ ಸಾಧ್ಯ ?"

"ದುರ್ಯೋಧನಾ, ಹೀಗೆ ಭಯಭೀತನಾಗಬೇಡ. ಕಾಲವು ಇನ್ನೂ ಮಿಂಚಿಹೋಗಿಲ್ಲ. ನಿನಗೆ ಈ ಲೌಕಿಕವಾದ ವಿಜಯವು ಬೇಕಾಗಿದ್ದರೆ........"

"ಹಾಗೆಂದರೆ ?"

"ನನ್ನ ಮರಣಾನಂತರ ಶಲ್ಯರಾಜನ ಬದಲಾಗಿ ಅಶ್ವತ್ಥಾಮನನ್ನು ಸೇನಾಪತಿಯಾಗಿ ಮಾಡಿಕೊಳ್ಳಿರಿ. ಆ ಮಹಾನುಭಾವನಿಂದ ನಿಮಗೆ ಖಂಡಿತ ವಿಜಯವು ಪ್ರಾಪ್ತವಾಗುವುದು."

"ಯಾವ ಕೆಲಸವು ಭೀಷ್ಮ, ದ್ರೋಣರಿಂದ ಸಾಧ್ಯವಾಗಲಿಲ್ಲವೋ ಅದನ್ನು ಈ ಅಶ್ವತ್ಥಾಮನು ಸಾಧಿಸಬಲ್ಲನೆ ?"

"ನನ್ನ ಮಾತನ್ನು ಗಮನಿಸು, ಸೇನಾಪತಿಯಾದವನಿಗೆ ತನ್ನ ಕಾರ್ಯದಲ್ಲಿಯ ನಿಷ್ಠೆಯನ್ನು ರಕ್ಷಿಸಿಕೊಂಡು ಬರಬೇಕಾದುದು ಅತ್ಯಾವಶ್ಯಕ. ತನ್ನ

ರಾಜನ ಕಲ್ಯಾಣವನ್ನೇ ಚಿಂತಿಸಬೇಕಾದುದು ಆತನ ಆದ್ಯ ಕರ್ತವ್ಯ. ನೀನು ಮಹಾದುರ್ದೈವಿ, ನಿನ್ನ ಮೇಲೆ ನಿಷ್ಠೆಯನ್ನಿಟ್ಟ ಸೇನಾಪತಿಗಳು ಈವರೆಗೆ ಯಾರೂ ನಿನಗೆ ಲಭಿಸಲಿಲ್ಲ. ಭೀಷ್ಮ, ದ್ರೋಣರ ಮನವು ಅಂತರಂಗದಲ್ಲಿ ಪಾಂಡವರನ್ನು ಪ್ರೀತಿಸುತ್ತಿತ್ತು. ಅವರ ಕಲ್ಯಾಣವನ್ನೇ ಆ ಹಿರಿಯರು ಚಿಂತಿಸುತ್ತಿದ್ದರು. ಆದುದರಿಂದ ಅವರ ಆಯುಧಗಳಿಗೆ ಶತ್ರುಗಳನ್ನು ಸಂಹರಿಸುವ ಧಾರಾಳ ತನವು ಎಂದೂ ಯಾವಾಗಲೂ ಬರಲಿಲ್ಲ."

"ಕರ್ಣ, ನೀನು ?"

"ಇಲ್ಲ, ನಾನೂ ಆ ಹಿರಿಯರಂತೆಯೇ ಇರುವೆ. ನನ್ನ ನಿಷ್ಠೆಯಲ್ಲಿಯೂ ಲೋಪದೋಷಗಳಿವೆ. ಆ ದೋಷಗಳಾವವು ಎಂಬ ಮಾತು ಎಂದಾದರೊಂದು ದಿನ ನಿನಗೆ ತಿಳಿದು ಬಂದೀತು. ಆ ಶಲ್ಯರಾಜನು ಪಾಂಡವರ ಆಪ್ತನಾಗಿದ್ದಾನೆ. ಅಂಥವನ ಕೈಯಲ್ಲಿ ಯುದ್ಧ ಸೂತ್ರಗಳನ್ನೊಪ್ಪಿಸುವುದು ಸರಿಯಾದ ಕಾರ್ಯವೆನಿಸಲಾರದು. ಆದುದರಿಂದ ನೀನು ಅಶ್ವತ್ಥಾಮನಿಗೆ ಸೇನಾಪತಿಯ ಪದವಿಯನ್ನಿತ್ತು ಪರೀಕ್ಷಿಸಿನೋಡು. ಖಂಡಿತವಾಗಿ ವಿಜಯ ನಿನ್ನದಾಗುವದು"

"ಇಲ್ಲ, ಅದು ಸಾಧ್ಯವಿಲ್ಲ. ಅಂಗರಾಜಾ, ನಾನು ಈ ಮೊದಲೇ ಶಲ್ಯರಾಜನಿಗೆ ವಚನವನ್ನಿತ್ತಿದ್ದೇನೆ. ಒಂದು ವೇಳೆ ನಾನು ಪರಾಜಿತನಾದರೂ ಚಿಂತೆಯಿಲ್ಲ, ಕೊಟ್ಟ ವಚನಕ್ಕೆ ಭಂಗ ತಂದುಕೊಳ್ಳಲಾರೆ. ಅಂಥ ಕಾರ್ಯ ನನ್ನಿಂದ ಎಂದೂ ಘಟಿಸಲಾರದು."

"ದುರ್ಯೋಧನಾ, ಈ ಮಾತು ನನಗೆ ಚೆನ್ನಾಗಿ ಗೊತ್ತಿದೆ. ಧರ್ಮದ ಭಾವನೆಯನ್ನು ನಾವು ಎಂದೂ ತೊರೆಯಲಿಲ್ಲ. ಆದರೆ ಶತ್ರುಗಳಾದವರು ಎಂದೂ ಆ ಧರ್ಮವನ್ನು ಪಾಲಿಸಿಕೊಂಡು ಬರಲಿಲ್ಲ."

ಕರ್ಣನು ತನ್ನ ಕೈಗಳನ್ನು ಮುಚ್ಚಿಕೊಂಡ. ಅತಿ ಪ್ರಯಾಸದಿಂದ ದುರ್ಯೋಧನನನ್ನು ನೋಡುತ್ತ,

"ಯುವರಾಜ, ನಿನ್ನ ಕಣ್ಣೀರನ್ನು ನೋಡುತ್ತ ಮರಣವನ್ನಪ್ಪುವ ಭಾಗ್ಯದ ಮುಂದೆ ಬೇರಿನ್ನಾವ ಭಾಗ್ಯವಿದೆ. ನನ್ನ ಕುಲದಿಂದಾಗಿ ಜೀವನ ದುದ್ದಕ್ಕೂ ಅನೇಕ ತರಹದ ಅವಹೇಳನವನ್ನು ಸಹಿಸಿಕೊಂಡು ಬಂದಿದ್ದೇನೆ. ನನ್ನ ಪರಾಕ್ರಮ, ದಾತೃತ್ವ ಹಾಗೂ ನನ್ನ ಚಾರಿತ್ರ್ಯ ಇವಾವವೂ ನನಗೆ